
ಜನಪದ ರಾಮಾಯಣದ ಕಥೆಗಳು

ಸಂಪಾದಕರು

ಡಾ. ಪಿ. ಕೆ. ರಾಜಶೇಖರ



ಜನಪದ ರಾಮಾಯಣದ ಕಥೆಗಳು

ಸಂಪಾದಕರು

ಡಾ. ಪಿ.ಕೆ. ರಾಜಶೇಖರ

ಪ್ರಕಾಶಕರು

ಹೊನ್ನಾರು ಜನಪದ ಗಾಯಕರು

ಮೈಸೂರು

JANAPADA RAAMAAYANADA KATHEGALU : Collected and Edited by Dr. P.K. Rajasekhara, Published by Honnaaru Janapada Gaayakaru, #42, 8th Main, 23rd Cross, 3rd Stage, 'E' Block, Vijayanagar, Mysore - 570 030. Mobile : 94489 38563. First Edition: 2021. Pages : 272

ಪ್ರಥಮ ಮುದ್ರಣ : 2021

ಪುಟಗಳು : 272

ಬೆಲೆ : ₹ 300/–

ಪ್ರತಿಗಳು : 1000

ಬಳಕೆಯಾದ ಕಾಗದ : 70 ಜಿಎಸ್‌ಎಂ ಎನ್.ಎಸ್.ಮ್ಯಾಪ್ಲಿಥೊ


ಪುಸ್ತಕ ಅಳತೆ : 1/8 Demmy

ಮುಖಪುಟ ಕೃಪೆ : ರಾಜಾ ರವಿವರ್ಮ

ಮುದ್ರಕರು

ಲಾವಣ್ಯ ಮುದ್ರಣ

ನಂ.19, 15ನೇ ಕ್ರಾಸ್, ಬಿ.ಎಸ್.ಕೆ. 1ನೇ ಹಂತ,
ವಿದ್ಯಾಪೀಠ ವೃತ್ತ, ಬೆಂಗಳೂರು – 560 050
ಮೊಬೈಲ್ : 98450 63381



ಪ್ರೊ. ಜಿ. ಹೇಮಂತ್‌ಕುಮಾರ್

ಕುಲಪತಿಗಳು

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

ಅರ್ಪಣೆ

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ

ಪ್ರೊ. ಜಿ. ಹೇಮಂತಕುಮಾರ್

ಅವರಿಗೆ ಗೌರವಪೂರ್ವಕವಾಗಿ

* * *

ವಿಜ್ಞಾನ – ಕಲೆಗಳನು ಸುಜ್ಞಾನ ಬೆಳಕಿನಲಿ
ಲೋಕಹಿತಕಾಗಿ ನಡೆದು ಸಚ್ಚಾರಿತ್ರ್ಯದಲಿ
ಸಜ್ಜನಿಕೆ ಸಾಕಾರ ದಕ್ಷತೆಯ ಹರಿಕಾರ
ಪ್ರಗತಿಪರ ದ್ರಷ್ಟಾರ ಸದಾಕಾರ್ಯ ತತ್ಪರ !
ಜೀವನ್ಮುಖೀ ಜ್ಞಾನ–ವಿಜ್ಞಾನಗಳ ಶರಧಿ
ಮಾನಸಗಂಗೋತ್ರಿ ತಿಳಿವಿನ ವಾಹಿನಿ ಪರಿಧಿ
ವಿಸ್ತರಿಸಿ ಅಧ್ಯಾತ್ಮದರಿವಿನಾಳಕ್ಕಿಳಿದು
ಯಂತ್ರ ಜಗದೊಡನೆ ತತ್ತ್ವಾದರ್ಶಗಳ ಬೆಸೆದು
ಜ್ಞಾನಾಮೃತದ ಹೇಮ ಸರೋವರದ ನಿರ್ಮಲ
ಸಲಿಲ ಸಂತೃಪ್ತಿಯಲಿ ಮೈ.ವಿ.ವಿ.ಯ ಸದಮಲ
ಸರ್ವರೇಳ್ಗೆಯ ಮಹತ್ವಾಕಾಂಕ್ಷೆಯಲಿ ಬೆಳೆದು
ಸತ್ಪಥವ ಸೃಷ್ಟಿಸುತ ಗುರುತನದ ಛಲವಿಡಿದು
ಅವಲೋಹಗಳ ಸ್ವರ್ಣವಾಗಿಸಬಲ್ಲ ಪರುಷ
ಕುಲಪತಿಯ ಸ್ಥಾನದಲಿ ಧೀಮಂತ ಶಕಪುರುಷ !

ಮೊದಲು ನೆನೆದೇನು

ಜಾನಪದ ಮತ್ತು ಗ್ರಂಥಪದಗಳು ಒಂದನ್ನೊಂದು ಸ್ಪರ್ಶಿಸುತ್ತಿರುವಂತೆಯೇ ಒಂದನ್ನೊಂದು ಘರ್ಷಿಸುತ್ತಲೂ ಇರುತ್ತವೆ. ರಾಮಾಯಣ ಮತ್ತು ಮಹಾಭಾರತಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು. ಈ ಸ್ಪರ್ಶ–ಘರ್ಷಗಳ ಕಾರಣದಿಂದ ರಾಷ್ಟ್ರೀಯ ಮಹಾಕಾವ್ಯಗಳೆನಿಸಿರುವ ರಾಮಾಯಣ ಮಹಾಭಾರತಗಳು ಲಿಖಿತ ಪಠ್ಯಗಳ ಜೊತೆಜೊತೆಯಲ್ಲೇ ಅಪಾರ ಸಂಖ್ಯೆಯ ಅಲಿಖಿತ ಪಠ್ಯಗಳು ಮೌಖಿಕ ಪರಂಪರೆಯಲ್ಲಿ ಜೀವಂತವಾಗಿ ಉಳಿದಿವೆ. ಈ ಸಂಕಲನದ ಬಹಳಷ್ಟು ಕಥೆಗಳು ವಾಲ್ಮೀಕಿ ರಾಮಾಯಣದಲ್ಲಿ ಇಲ್ಲವೇ ಇಲ್ಲ ; ಮತ್ತೆ ಕೆಲವು ಕಥೆಗಳು ವಾಲ್ಮೀಕಿ ರಾಮಾಯಣದ ಕಥೆಯನ್ನೇ ಹೋಲುತ್ತ ಇದ್ದಕ್ಕಿದ್ದಂತೆ ಜಾನಪದದ ಕಡೆಗೆ ತಿರುವು ತೆಗೆದುಕೊಂಡು 'ಅದೂ ಸರಿ, ಇದೂ ಸರಿ' ಎನ್ನುವಂತೆ ನಮ್ಮನ್ನು ಒಪ್ಪಿಸಿಬಿಡುತ್ತವೆ. ಈ ಪವಾಡಶಕ್ತಿ ನಮ್ಮ ಮೌಖಿಕ ಪರಂಪರೆಗಿದೆ.

ನಾನು ಸಂಶೋಧನಾ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಲ್ಲೆಲ್ಲ ಜಾನಪದದ ಯಾವುದೇ ಪ್ರಕಾರವನ್ನು ಕೇಳಿದರೂ ಹೇಳುವ ವಕ್ತೃಗಳು ದಂಡಿಯಾಗಿದ್ದರು. ಕ್ಷೇತ್ರಕಾರ್ಯ ಸುಗಮವಾಗಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸಂಗ್ರಹಿಸಿದ ಸಾವಿರಾರು ಜನಪದ ಪುರಾಣ ಕಥೆಗಳಲ್ಲಿ ಆಕಸ್ಮಿಕವಾಗಿ ರಾಮಾಯಣಕ್ಕೆ ಸಂಬಂಧಿಸಿದ ಕಥೆಗಳನ್ನು ಮಾತ್ರ ಒಗ್ಗೂಡಿಸಿ ಪ್ರಕಟಿಸುವ ಅವಕಾಶ ಒದಗಿಬಂತು.

ಆದರೆ ನಮ್ಮ ಜನಪದ ಗಾಯಕರತ್ನ ಬೆಟ್ಟದಬೀಡು ಸಿದ್ದಶೆಟ್ಟರು ಸಮಗ್ರ ರಾಮಾಯಣವನ್ನು ಹಾಡುತ್ತಿದ್ದರು. ನತದೃಷ್ಟ–ಹತಭಾಗ್ಯನಾದ

ನಾನು ಅದನ್ನು ಸಕಾಲದಲ್ಲಿ ಸಂಗ್ರಹಿಸಿಕೊಳ್ಳದೆ ಕೈತಪ್ಪಿಹೋಯಿತು. ಈ ಒಂದು ಕೊರಗು ನನ್ನನ್ನು ಜೀವನಪರ್ಯಂತ ಬಾಧಿಸುವಂತದೇ ಆಗಿದೆ. ಇಂಥ ಸಂದರ್ಭದಲ್ಲಿ ನನ್ನ ಗೆಳೆಯ ಈ. ರವಿಕುಮಾರ್ ಕಾರಣದಿಂದ ಇಂಥದೊಂದು ಸಂಕಲನ ಪ್ರಕಟವಾಗುವ ಅನಿವಾರ್ಯತೆ ಉಂಟಾಯಿತು.

ನಾನು ಉದ್ದೇಶಪೂರ್ವಕವಾಗಿ ಜನಪದ ರಾಮಾಯಣಕ್ಕೆ ಸಂಬಂಧಿಸಿದ ಪುರಾಣಕಥೆಗಳನ್ನು ಸಂಗ್ರಹಿಸಬೇಕೆಂದು ಹೋದವನಲ್ಲ. ನನ್ನ ಪಿಎಚ್.ಡಿ. ಮಹಾಪ್ರಬಂಧಕ್ಕೆ ಬೇಕಾಗಿದ್ದ ಮಾಹಿತಿಗಳನ್ನು ಕಲೆಹಾಕುತ್ತಿರುವಾಗ ಅಯಾಚಿತವಾಗಿ ಕೇಳಿಬರುತ್ತಿದ್ದ ಇವುಗಳನ್ನೆಲ್ಲ ಸಂಗ್ರಹಿಸಿಕೊಂಡೆ. ರಾಮಾಯಣದ ಕಥೆಗಳನ್ನೇ ಸಂಗ್ರಹಿಸಲು ಪ್ರಯತ್ನಿಸಿದ್ದರೆ ಅವೆಷ್ಟು ಸಿಗುತ್ತಿದ್ದವೊ! ಭಾರತದಲ್ಲಿ ಸುಮಾರು ೧೬೧೮ಲಕ್ಕೂ ಹೆಚ್ಚು ಭಾಷೆಗಳಿವೆ ಎನ್ನುತ್ತಾರೆ. ಈ ಎಲ್ಲ ಭಾಷೆಗಳಲ್ಲೂ ಮೌಖಿಕ ರಾಮಾಯಣದ ಇಂಥ ಕಥೆಗಳಿರಬಹುದಾದರೆ ಅವೆಷ್ಟಿವೆಯೋ!

ಅದಿರಲಿ ಈ ಎಲ್ಲ ಕಥೆಗಳೂ ಬೇರೆ ಬೇರೆ ವಕ್ತೃಗಳು ಹೇಳಿದ ಬೇರೆ ಬೇರೆ ಕಥೆಗಳಾಗಿದ್ದು ಆದಿಯಿಂದ ಅಂತ್ಯದವರೆಗೆ ಕಥೆಯಲ್ಲಿ ಏಕಸೂತ್ರತೆ ಇಲ್ಲ. ಆದರೂ ಅವುಗಳನ್ನು ಒಂದು ಅನುಕ್ರಮಣಿಕೆಗೆ ತರಲು 'ವಿಫಲ ಪ್ರಯತ್ನ' ಮಾಡಿದ್ದೇನೆ. ಓದುಗರು ಉದಾರ ಮನಸ್ಸಿನಿಂದ ಇದನ್ನು ಪರಿಗಣಿಸಲಿ.

'ಜನಪದ ರಾಮಾಯಣದ ಕಥೆಗಳು' ಕೃತಿಯ ಪ್ರಕಟಣೆಗೆ ಹರ್ಷಾತಿಶಯ ಒತ್ತಾಸೆಯನ್ನು ತಂದವರು ಸನ್ಮಿತ್ರರಾದ ಹೆಬ್ಬಾಳಿನ ವಿಷಕಂಠೇಗೌಡರು, ಕಂಪಲಾಪುರ ಗೋಪಾಲ, ಚಿಕ್ಕಮಳಲಿ ಆರ್. ಮಹದೇವ, ಪೂನಾಡಹಳ್ಳಿ ರಘು (ಪುನ್ನಾಟ ಪ್ರಭು), ಕಣಗಾಲು ವಿಶ್ವನಾಥ, ಪ್ರೊ.ಮೈಸೂರು ಕೃಷ್ಣಮೂರ್ತಿ, ಡಾ. ಮೈಸೂರು ಉಮೇಶ, ಕೇಶವ ಹೊಳೆನರಸೀಪುರ, ಪ್ರೊ.ಆರ್.ಗುರುಸ್ವಾಮಿ, ದಡದಹಳ್ಳಿ ಬ್ರಹ್ಮದೇವ, ದಡದಕಲ್ಲಹಳ್ಳಿ ಶಂಭುಲಿಂಗಶೆಟ್ಟರು, ಟಿ.ನರಸೀಪುರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ.ಆರ್. ಷಣ್ಮುಖಸ್ವಾಮಿ, ಪಿ. ವೀರಭದ್ರಸ್ವಾಮಿ ಬಿಳಿಗಿರಿರಂಗನ ಬೆಟ್ಟ ಅವರು –

ಮಹಾರಾಜ ಕಾಲೇಜಿನಲ್ಲಿ ನನ್ನ ಸಹೋದ್ಯೋಗಿಯಾಗಿದ್ದಾಗಿನಿಂದಲೂ ಅತ್ಯಂತ ಪ್ರೀತ್ಯಾದರ ಅಭಿಮಾನಗಳಿಂದ ಕಾಣುವ ನಾಡಿನ ಪ್ರಸಿದ್ಧ ವಿದ್ವಾಂಸರೂ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆಗಿರುವ ಪ್ರೊ.ಬಿ.ವಿ.ವಸಂತಕುಮಾರ್ ಅವರು ಈ ಕೃತಿಯನ್ನು ಮುನ್ನುಡಿ ಎಂಬ ಹೊನ್ನುಡಿಯಿಂದ ಅಲಂಕರಿಸಿದ್ದಾರೆ–

ಈ ಕೃತಿಯಲ್ಲಿರುವ ಪ್ರಸ್ತಾವನೆಯು ಹಂಪಿ ವಿಶ್ವವಿದ್ಯಾನಿಲಯದ ವಾಲ್ಮೀಕಿ ಪೀಠದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ ಇದಕ್ಕೆ ಕಾರಣರಾದ ಪ್ರೊ. ಅಮರೇಶ್ ಯತಗಲ್ ಅವರಿಗೆ –

ಈ ಪುಸ್ತಕದ ಪ್ರಕಟಣೆಯ ಸುದ್ದಿ ಕೇಳಿ ಸಂತೋಷ ವ್ಯಕ್ತಪಡಿಸಿ ಜನಪದ ರಾಮಾಯಣಕ್ಕೆ ಸಂಬಂಧಿಸಿದ ಎರಡು ಕಥೆಗಳನ್ನು ಹೇಳಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಆತ್ಮೀಯರೂ ಆದ ಪ್ರೊ. ಎಂ.ಜಿ. ಮಂಜುನಾಥ್ ಅವರು –

ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ನೀಲಗಿರಿ ತಳವಾರ್ ಅವರು ಸಖರಾಯಪಟ್ಟಣದ ಪ್ರಾಂಶುಪಾಲ ಸನ್ಮಾನ್ಯ ಪ್ರೊ.ಬಿ.ವಿ.ಚಂದ್ರಮೌಳಿಯವರು –

ರಾಮಾಯಣಕ್ಕೆ ಸಂಬಂಧಿಸಿದ ರೇಖಾಚಿತ್ರಗಳನ್ನು ಮಿತ್ರರಾದ ಕ್ಯಾತಮಾರನಹಳ್ಳಿ ಜಗದೀಶ್, ಲೋಹಿತ್ ಚ. ಕೋಣನೂರು, ಹೊಸೂರು ಕಲ್ಲಹಳ್ಳಿಯ ಕೆ.ಆರ್. ಚರಣರಾಜ್, ರಾವಳೇಶ್ವರನ ಚಿತ್ರ ಒದಗಿಸಿದ ಗೆಳೆಯ ಎಚ್.ಬಿ.ಶ್ರೀಧರ್ ಹಂಗರಾಪುರ, ಪೂರಿಗಾಲಿ ರಾಜಣ್ಣ, ಮುಖಪುಟದ ಚೆಲುವಿಗೆ ಕಾರಣರಾದ ಶ್ರೀಮತಿ ಸುಮಾ ಅವರು –

ಈ ಪುಸ್ತಕವನ್ನು ಮುದ್ದಾಗಿ ಅಚ್ಚಿಸಿಕೊಟ್ಟ ಲಾವಣ್ಯ ಮುದ್ರಣದ ಶ್ರೀ ಗೋಪಾಲಕೃಷ್ಣ ಅವರು –

ಈ ಎಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು.

– ಡಾ. ಪಿ. ಕೆ. ರಾಜಶೇಖರ

ಪರಿವಿಡಿ

ಅರಣ್ಯಕಾಂಡ

ಸೀತಾಪಹರಣ

ರಾವಣ : ರಾಮಾಯಣ ಕಥನ ಕಾರಣ

ಆಂಜನೇಯನೆಂದರೆ ಅಸಾಧಾರಣ

ಮುನ್ನುಡಿ

– ಡಾ. ಬಿ. ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದಿಂದ ಹಿಡಿದು 'ಜನಪದ ಮಹಾಭಾರತ', 'ಧರೆಗೆ ದೊಡ್ಡೋರು ಮಂಟೇಸ್ವಾಮಿ'ವರೆಗೆ ಅನೇಕ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿ, ಸಂಪಾದಿಸಿ ವಿಸ್ತೃತವಾದ ಪ್ರಸ್ತಾವನೆಗಳೊಂದಿಗೆ ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿ–ಪರಂಪರೆಗೆ ಮಹತ್ವಪೂರ್ಣವಾದ ಕೊಡುಗೆಗಳನ್ನು ನೀಡಿದವರು ಡಾ.ಪಿ.ಕೆ. ರಾಜಶೇಖರ. ಇವರನ್ನು ಕುರಿತು ಡಾ.ರಾಗೌ ಅವರು "ಜಾನಪದ ಕ್ಷೇತ್ರಕಾರ್ಯ ಕೇವಲ ಸಂಗ್ರಹ ಕಾರ್ಯವಲ್ಲ. ಅದೊಂದು ಸಂಶೋಧನೆ ಎಂಬುದು ನನ್ನ ಭಾವನೆ. ಈ ತತ್ತ್ವದ ಆಧಾರದ ಮೇಲೆ ಡಾ.ಪಿ.ಕೆ. ರಾಜಶೇಖರ್ ಅವರು ತಮ್ಮ ಸಮಸ್ತ ಜಾನಪದ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಜಾನಪದ ಅಧ್ಯಯನಕ್ಕಾಗಿ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟವರು ರಾಜಶೇಖರ್ ಅವರು. ಜಾನಪದ ಅಧ್ಯಯನ ಚರಿತ್ರೆಗೆ ಅವರು ಹಲವಾರು ಹೊಸ ಅಧ್ಯಾಯಗಳನ್ನು ಜೋಡಿಸಿದ್ದಾರೆ. ಸಹಸ್ರಾರು ಪುಟಗಳ ಮಹಾಕಾವ್ಯಗಳ ಪ್ರಕಟಣೆಗಳಂತೂ ದಾಖಲೆಯ ಇತಿಹಾಸವನ್ನೇ ಬರೆದಿವೆ. ಒಂದು ರಾಷ್ಟ್ರೀಯ ವಸ್ತುವಿನ ಮಹಾಕಾವ್ಯವನ್ನೂ ಎರಡು ಸ್ಥಳೀಯ ಸಂಸ್ಕೃತಿಯ ಮಹಾಕಾವ್ಯಗಳನ್ನು ನೀಡಿರುವುದು ನನಗೆ ಅದ್ಭುತವೆನಿಸಿದೆ" ಎಂದಿರುವುದು ಪಿ.ಕೆ.ಆರ್. ಅವರ ಒಟ್ಟಾರೆಯ ಬದುಕು ಬರಹದ ಮಹತ್ವವನ್ನು ಸಾರುತ್ತವೆ. ಅಂಥ ಅದ್ಭುತ ಸಾಧನೆಯ ಪಿ.ಕೆ.ಆರ್. ಅವರು ನನ್ನಂಥ ಶಿಷ್ಯನಿಂದ ಮುನ್ನುಡಿ ಬರೆಸುತ್ತಿರುವುದೂ ಒಂದು ಅದ್ಭುತವೇ ಸರಿ. ಅದು ಅವರ ಪ್ರೀತಿಯ ಮಮತೆಯ ಪ್ರತೀಕವೆಂದೇ ಭಾವಿಸಿದ್ದೇನೆ.

ಪಿ.ಕೆ.ಆರ್. ಎಂದೇ ಪ್ರಸಿದ್ಧರಾಗಿರುವ ಪಿ.ಕೆ. ರಾಜಶೇಖರ್ ಅವರ ಒಡನಾಟ ನನಗೆ ೧೯೭೧ರಿಂದಲೂ ಇದೆ. ನಾನು ೧೯೭೧–೭೨ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕನಾಗಿದ್ದಂದಿನಿಂದಲೂ ಅವರು ತೋರಿದ ಪ್ರೀತಿ ವಾತ್ಸಲ್ಯಗಳು ನಾನೆಂದೂ ಮರೆಯಲಾಗದ್ದು. ನಾನು ಬರಹಗಾರನಾಗಿ ರೂಪುಗೊಳ್ಳುವಲ್ಲಿ ಪಿ.ಕೆ.ಆರ್. ಅವರದ್ದೇ ಪ್ರಾರಂಭದ ಒತ್ತಾಸೆ. ಅವರು ಮತ್ತು

ನಾನು ಸೇರಿ ಬರೆದ "ಪದ ವಿವರಣ ಕೋಶ"ವನ್ನು ಅವರೇ ಪ್ರಕಟಿಸಿದರು. ಅದೇ ನನ್ನ ಮೊಟ್ಟಮೊದಲ ಕೃತಿ. ಅದೇ ವಾತ್ಸಲ್ಯವೇ ಈ ಮುನ್ನುಡಿಗೂ ಕಾರಣ. ಅದಕ್ಕಾಗಿ ನನ್ನ ಆತ್ಮವಿಶ್ವಾಸದ ಗುರುಗಳಾದ ಪಿಕೆಆರ್ ಅವರಿಗೆ ಮೊದಲಿಗೆ ಪ್ರೀತಿಯಿಂದ ವಂದಿಸುತ್ತೇನೆ.

"ಜನಪದ ರಾಮಾಯಣದ ಕಥೆಗಳು" ಎಂಬ ಈ ಕೃತಿಯು ಜಾನಪದ ಅಧ್ಯಯನದ ಚರಿತ್ರೆಗೆ ಅವರು ಜೋಡಿಸುತ್ತಿರುವ ಮತ್ತೊಂದು ಹೊಸ ಅಧ್ಯಾಯವಾಗಿದೆ. ರಾಷ್ಟ್ರೀಯ ವಸ್ತುವನ್ನು ಒಳಗೊಂಡಿರುವ ಭಾರತದ ಮಹಾಕಾವ್ಯ ರಾಮಾಯಣದ ಕತೆಯು ಸ್ಥಳೀಯ ವಸ್ತುವಾಗಿ ಮೈದಾಳಿ ನಿಂತಿರುವ, ಸ್ಥಳೀಯವನ್ನು ರಾಷ್ಟ್ರೀಯವಾಗಿಸುವ, ರಾಷ್ಟ್ರೀಯವನ್ನು ಸ್ಥಳೀಯವಾಗಿಸುವ ಆ ಮೂಲಕ ಸಾಂಸ್ಕೃತಿಕ ಬೆಸುಗೆಯನ್ನು ನಮ್ಮ ಜನಪದರು ಸಾಹಿತ್ಯದ ಮೂಲಕ ಸಾಧಿಸಿರುವ ಬೆರಗನ್ನು ಈ ಕೃತಿಯು ಉಂಟುಮಾಡುತ್ತದೆ. ನಮ್ಮ ಜನಪದರ ಬೆರಗು ಹುಟ್ಟಿಸುವ ಸೃಜನಶೀಲ ಪ್ರತಿಭೆ ಇಲ್ಲಿ ಹತ್ತುಹಲವು ನೆಲೆಯಲ್ಲಿ ಕವಲೊಡೆದು ಒಂದು ಭಾರತೀಯ ಸಂಸ್ಕೃತಿಯ ಅಶ್ವತ್ಥ ವೃಕ್ಷವಾಗಿ, ಆಲದ ಮರವಾಗಿ, ಬೇವಿನ ಮರವಾಗಿ ಊರ ಮುಂದಿನ ಅರಳಿಕಟ್ಟೆಯಾಗಿ ರೂಪುಗೊಂಡು ಕೂರಿಸಿಕೊಂಡು ಕಥೆ ಹೇಳುತ್ತದೆ.

ಈ ಕೃತಿಯ ಪ್ರಸ್ತಾವನೆಯಲ್ಲಿ ಪಿಕೆಆರ್ ಅವರು ಬರೆದಿರುವ "ಜನಪದರ ತಮ್ಮ ಸುತ್ತಮುತ್ತಲ ಪ್ರಕೃತಿ ವಿಶೇಷಗಳಿಗೆಲ್ಲ ರಾಮನಾಮದ ಲೇಪವಿದೆ. ಅಳಿಲಿನ ಮೈಮೇಲಿರುವ ಗುರುತುಗಳು ರಾಮ ಇಟ್ಟ ನಾಮವಾಗುತ್ತದೆ. ಸೀತಾಫಲ, ರಾಮಾಫಲ, ಲಕ್ಷ್ಮಣಫಲ, ಹನುಮಾನ್ ಫಲಗಳು ಈ ಮಹನೀಯರ ಸೃಷ್ಟಿಯೆನಿಸಿ ಅವರವರ ಹೆಸರುಗಳಲ್ಲೇ ಉಳಿದಿವೆ. ಅವರು ಕುಡಿಯುವ ಪಾನೀಯ ರಾಮರಸವಾಗುತ್ತದೆ. ಸೀತೆಯಿಂದ ಜಲತಾಣಗಳು ಸೀತೆ ಕೊಳವೋ, ಸೀತೆ ಸೊಣೆಯೋ, ಸೀತೆ ಕಲ್ಯಾಣಿಯೋ, ಸೀತೆ ಮಡುವೋ ಆಗಿವೆ. ರಾಮಬಾಣ ಪ್ರಯೋಗಿಸಿದಾಗ ಉದ್ಭವವಾದ ನದಿ ಶರಾವತಿಯಾಗುತ್ತದೆ. ಅಂಬುತೀರ್ಥವಾಗುತ್ತದೆ. ಲಕ್ಷ್ಮಣ ಯಾವುದೋ ತಪ್ಪಿಗಾಗಿ ಅಗ್ನಿಪ್ರವೇಶ ಮಾಡಲು ಸಿದ್ಧನಾಗಿರುವಾಗ ಆ ಬೆಂಕಿಯನ್ನು ಆರಿಸಲು ರಾಮನು ಬಂಡೆಗೆ ಹೊಡೆದ ಬಾಣದಿಂದ ಚಿಮ್ಮಿದ ನೀರು ಲಕ್ಷ್ಮಣತೀರ್ಥವಾಗಿ ಹರಿಯುತ್ತದೆ. ಊರವರ ಮೇಲೆಲ್ಲ ದರ್ಪದೌರ್ಜನ್ಯಗಳನ್ನು ನಡೆಸುವವನು 'ರಾವಳ' ಆಗುತ್ತಾನೆ. ನಿಷ್ಠಾವಂತ ಆಂಜನೇಯ ವ್ಯಕ್ತಿನಾಮಕ್ಕೆ ಅರ್ಹನಾಗುತ್ತಾನೆ. ಮನೆಮುರುಕ ಬೆಡಗಿಯರು ಶೂರ್ಪನಖಿಯೋ ಲಂಕಿಣಿಯೋ ಆಗಿಬಿಡುತ್ತಾರೆ" ಎಂಬ ಮಾತುಗಳಿಗೆ ಈ ಕೃತಿ ತನ್ನೊಳಗಿನ ಕಥೆಗಳ ಮೂಲಕ ಸಾಕ್ಷಿಯಾಗುತ್ತದೆ. ರಾಮ ಉತ್ತರ ಭಾರತದ ಆರ್ಯ, ಆಂಜನೇಯ ದಕ್ಷಿಣ ಭಾರತದ ದ್ರಾವಿಡ ಎಂಬ ಪೆರಿಯಾರ್ ಮೊದಲಾದ ಅಬ್ರಾಹ್ಮಣ ವಾದಿಗಳ ವಾದದಿಂದ ಹಿಡಿದು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ಆಂಜನೇಯ ಗುಲಾಮ.

ಅದಕ್ಕಾಗಿ ಜನ ಹನುಮಂತನ ಜಯಂತಿಯನ್ನು ಆಚರಿಸುತ್ತಾರೆ ಎಂಬುದರವರೆಗಿನ ನಮ್ಮ ವಿಚಾರವಾದಿಗಳೆಂದುಕೊಂಡವರಿಗಿಂತ ನಮ್ಮ ಜನಪದರು ಎಷ್ಟು ಶ್ರೇಷ್ಠರು ಎಂಬುದು ಈ ಕೃತಿಯಿಂದ ಮನವರಿಕೆಯಾಗುತ್ತದೆ. ಅದಕ್ಕೆ ಕಾರಣ ಇಲ್ಲಿನ ಕತೆಗಳು, ಸಂಸ್ಕೃತಿ ನಿಷ್ಠವಾದವುಗಳೇ ವಿನಃ ರಾಜಕೀಯ ಪಕ್ಷ ಅಥವಾ ಸಿದ್ಧಾಂತಗಳಿಗೆ ನಿಷ್ಠವಾದವುಗಳಲ್ಲ. ನಮ್ಮ ಶಿಷ್ಟ ಸಾಹಿತ್ಯ ಲೋಕವು ನಮ್ಮ ಜನಪದ ವಿಶಿಷ್ಟ ಸಾಹಿತ್ಯದಿಂದ ಪಾಠ ಕಲಿಯದಿದ್ದರೆ ದಿವಾಳಿಯಾಗಿಹೋಗುತ್ತದೆ ಎಂದೆನಿಸುತ್ತದೆ. ಆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಾಕಾವ್ಯವಾದ ರಾಮಾಯಣವನ್ನು ಕನ್ನಡದ ಜನಪದರು ಚಾಮರಾಜನಗರದಿಂದ ಹಿಡಿದು ಹಂಪಿಯಾದಿಯಾಗಿ ಬೀದರ್‌ವರೆಗೆ ಇಡೀ ಕನ್ನಡ ನಾಡು ಅಲ್ಲಿನ ಜನ ಹೇಗೆ ತಮ್ಮದನ್ನಾಗಿಸಿಕೊಂಡಿದ್ದಾರೆ ಹಾಗೂ ತಮ್ಮ ಜೀವನಾನುಭವ ಸಂಸ್ಕೃತಿಯನ್ನು ಅದರಲ್ಲಿ ಎರಕ ಹೊಯ್ದಿದ್ದಾರೆ ಎಂಬುದನ್ನು ತಿಳಿಯಬೇಕಾದರೆ ಡಾ.ಪಿ.ಕೆ. ರಾಜಶೇಖರರ "ಜನಪದ ರಾಮಾಯಣದ ಕತೆಗಳು" ಕೃತಿಯನ್ನು ಓದಬೇಕು.

ಈ ಕೃತಿಯಲ್ಲಿ ಆದಿಕವಿಗೆ ನಮನ, ಸೀತಾರಾಮ ಅವತರಣ, ಸೀತಾರಾಮ ಕಲ್ಯಾಣ, ರಾಮ ಸೀತೆ ಲಕ್ಷ್ಮಣರ ಅರಣ್ಯಕಾಂಡ, ಸೀತಾಪಹರಣ, ರಾವಣ: ರಾಮಾಯಣ ಕಥನಕಾರಣ, ಆಂಜನೇಯನೆಂದರೆ ಅಸಾಧಾರಣ, ಸಫಲ ಸಮಾಗಮ, ಎಂದೂ ಮುಗಿಯದ ರಾಮಾಯಣ ಎಂಬ ಅಧ್ಯಾಯಗಳಿವೆ. ಅವುಗಳಲ್ಲಿ ಹಲವು ಕಥೆಗಳಿವೆ. ಆ ಕಥೆಗಳಲ್ಲಿ ಪುರಾಣ, ಐತಿಹ್ಯ, ಭಾಷಾ ವಿಜ್ಞಾನಕ್ಕೆ ಪೂರಕವಾದ ಭಾಷಾ ಪದಗಳ ವಿವೇಚನೆ, ಸ್ಥಳನಾಮ, ಪ್ರಕೃತಿ ವರ್ಣನೆ, ಜೀವನ ಮೌಲ್ಯಗಳು, ತಾತ್ತ್ವಿಕ ಮಾರ್ಗದರ್ಶನ, ಸಾಹಿತ್ಯದ ರಸಾನುಭೂತಿ ಹೀಗೆ ಹತ್ತಾರು ಅಂಶಗಳಿವೆ. ಆದ್ದರಿಂದ ಈ ಕತೆಗಳು ಸಾಂಸ್ಕೃತಿಕ ದಾಖಲೆಗಳು. ಅವುಗಳನ್ನು ನಮಗೆ ಕಟ್ಟಿಕೊಟ್ಟಿರುವ ಜನಪದರು ಹಾಗೂ ಪಿ.ಕೆ.ಆರ್. ಅಭಿನಂದನೀಯರು. ಪ್ರತಿ ವಿಭಾಗದ ಅಡಿಯಲ್ಲಿ "ಅಮರ ಕಥಾಮೃತ ರಾಮಾಯಣ" "ಎಂದೂ ಮುಗಿಯದ ರಾಮಾಯಣ" ಎಂದಿರುವುದು ಅರ್ಥಪೂರ್ಣವೂ ಧ್ವನಿಪೂರ್ಣವೂ ಆಗಿದೆ.

"ದುರ್ವಾಸ ಋಷಿಗಳ ಕಾರಣದಿಂದ ವಿಷ್ಣು ಶ್ರೀರಾಮಚಂದ್ರನಾಗಿ, ಲಕ್ಷ್ಮೀ ಸೀತಾದೇವಿಯಾಗಿ, ಗರುಡನು ಲಕ್ಷ್ಮಣನಾಗಿ, ಜಯ-ವಿಜಯರು ಭರತ-ಶತ್ರುಘ್ನರಾಗಿ, ದುರ್ವಾಸರು ಕಾಗೆಯಾಗಿ ಭೂಮಿಯಲ್ಲಿ ಅವತರಿಸಬೇಕಾಯಿತು" ಎಂಬ "ರಾಮನ ಅವತಾರ" ಎಂಬ ಕಥೆಯಿಂದ ಹಿಡಿದು ಸೀತೆಯು "ಕೋತಿಗಳೇ ನಿಮ್ಮ ಮರಿಗಳು ನಿಮ್ಮ ಹೊಟ್ಟೆಯನ್ನು ತಬ್ಬಿ ಹಿಡಿದುಕೊಂಡಿವೆ. ನೀವು ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ ಹಾರುವಾಗ ಅವು ಕೈಬಿಟ್ರೆ ಕೆಳೀಕೆ ಬಿದ್ದು ಸತ್ತೋಗದಿಲ್ವ?" ಎಂದು ಪ್ರಶ್ನಿಸಿದಾಗ ಕೋತಿಯು "ಸೀತಮ್ಮ ನಮ್ಮ ಜೀವುಮಾನದಲ್ಲೇ ನಾವು ಅಂತೆ ಘಟನೆ ಕಂಡಿಲ್ಲ. ನಮ್ಮ ಮರಿಗಳು ಕೈಬಿಡೂದೂ ಇಲ್ಲ. ಸಾಯದೂ ಇಲ್ಲ. ಅಕಸ್ಮಾತ್ ಬಿದ್ದು ಸತ್ರೆ ಅದು ಅವುಗಳ ಹಣೇ ಬರಾ!

ನಿಮ್ಮ ಮಕ್ಳು ಹಿಂಗೆ ಹೊಟ್ಟೆ ತಬ್ಕೋತಾವಾ ಸೀತೆ?" ಎಂದು ಪ್ರಶ್ನಿಸುತ್ತದೆ. ಅದಕ್ಕೆ ಸೀತೆಯು "ಇಲ್ಲ. ನಾವೇ ಅವುಗಳ್ನ ಎದೆಗೆ ಅವುಚ್ಕೋಬೇಕು!" ಎಂದದ್ದಕ್ಕೆ ಕೋತಿಯು "ಮತ್ತೆ ಒಬ್ಳೇ ಬಂದಿದ್ದಿ. ನಿನ್ನ ಮಗನ ಎದೆಗೆ ಅವುಚ್ಕೋಬೇಕು ತಾನೆ?" ಎಂದು ಪ್ರಶ್ನಿಸಿದಾಗ ಸೀತಾಮಾತೆಯು "ಹೌದಲ್ವ, ಈಗ್ಲೇ ಹೊಗಿ ಎತ್ಕೊಂಡ್ಬರ್ತೀನಿ" ಎಂದು ಉತ್ತರಿಸುವುದು ನಮ್ಮ ಎಲ್ಲ ಕಾಲಕ್ಕೂ ತಾಯಿ ಮಕ್ಕಳ ಸಂಬಂಧ ಅದರಿಂದ ಹುಟ್ಟಿ ಬೆಳೆದು ವಿಕಾಸ ಆಗಬೇಕಾದ 'ಪ್ರೀತಿ'ಯ ಬೆಳಸು ಮತ್ತು ಬೆಳಕು ಎಂಥದ್ದು ಎಂಬುದನ್ನು ಧ್ವನಿಸುವ "ಕುಶದ ಎಸಳಿಂದ ಸೃಷ್ಟಿಯಾದ ಮಗು ಕುಶ" ಎಂಬ ಕಥೆಯ ಪಾಠವೂ ಸೇರಿದಂತೆ 'ಅರಿಸಿನ ಮತ್ತು ದರ್ಬೆ' ಎಂಬ ಕೊನೆಯ ಕತೆಯು "ಹರಿದ್ರಾ-ಕುಂಕುಮಗಳು ಹಿಂದೂಗಳು ಬಳಸುವ ಪವಿತ್ರವಸ್ತುಗಳು. ಹರಿದ್ರಾ ಎಂದರೆ ಅರಿಸಿನ. ಅರಿಸಿನವು ಹಿಂದೂಗಳ ಧಾರ್ಮಿಕ ಕಾರ್ಯಗಳಲ್ಲಿ ಕಡ್ಡಾಯವೇನೋ ಎಂಬಂತೆ ಉಪಯೋಗಿಸಲ್ಪಡುತ್ತದೆ. ಮದುವೆ ಮುಂತಾದ ಮಂಗಳ ಕಾರ್ಯಗಳಲ್ಲೂ ಅರಿಸಿನಕ್ಕೆ ಮಹತ್ವದ ಸ್ಥಾನವಿದೆ. ಪವಿತ್ರ ಪೂಜಾ ದ್ರವ್ಯವಾದ ಇದು ದೇವಾಲಯಗಳಲ್ಲಿ ಪೂಜಾವಿಧಿಗಳಿಗೆ ಅಗತ್ಯವಾದುದಾಗಿದೆ. ಮುತ್ತೈದೆಯರು ಹಣೆಗೆ ಧರಿಸುವ ಕುಂಕುಮದ ಬೊಟ್ಟಿನೊಡನೆ ಅರಿಸಿನದ ಬೊಟ್ಟನ್ನು ಧರಿಸುತ್ತಾರೆ. ಅಲ್ಲದೆ ಕೆನ್ನೆಗಳಿಗೂ ಪೂಸಿಕೊಳ್ಳುತ್ತಾರೆ. ಗ್ರಾಮಗಳಲ್ಲಿ ಮಾರಕಾದಿ ರೋಗಗಳು ಕಾಣಿಸಿಕೊಂಡಾಗ ಅರಿಸಿನದ ಪುಡಿಯನ್ನು ಕೀಟಾಣುಗಳ ನಾಶಕ್ಕಾಗಿ ಊರಿನ ಕೇರಿಕೇರಿಗಳಲ್ಲೆಲ್ಲ ಚೆಲ್ಲುತ್ತಾರೆ" ಎಂದು ವಿವರಿಸುತ್ತಾ ಅರಿಸಿನ ಮತ್ತು ದರ್ಬೆಯ ಉತ್ಪತ್ತಿಯ ಬಗೆಗೂ ರಾಮಾಯಣ ಸಂಬಂಧ ಜನಪದ ಪುರಾಣ ಕಥೆಯನ್ನು ಹೇಳುವ ಈ ಕತೆಯಲ್ಲಿ ಸೀತೆಗಾದ ಅವಮಾನ, ಆಕೆ ಭೂದೇವಿಯ ಒಡಲೊಳಗೆ ಹೋಗುವುದು, ತಪ್ಪಿನ ಅರಿವಾಗಿ ವಿವೇಕೋದಯಕ್ಕೆ ಒಳಗಾದ ರಾಮ "ನನ್ನ ಸೀತೆಯನ್ನು ನನಗೇ ಉಳಿಸು! ಉಳಿಸು!" ಎಂದು ಸೀತೆಯ ಬೆರಳು, ಮುಡಿ ಹಿಡಿದು ಮೇಲೆತ್ತಲು ಪ್ರಯತ್ನಿಸಿದಾಗ ಸೀತೆಯ ಬೆರಳು ಅರಿಸಿನದ ಕೊನೆಯಾಗಿ ಮುಡಿಯ ಕೂದಲು ದರ್ಬೆಯಾಗಿ "ರಾಮನ ಕೈಯಲ್ಲಿ ಉಳಿಯಿತು" ಎಂಬ ಮುಕ್ತಾಯ ಆರ್ದ್ರವಾಗಿದೆ.

ತಾಯಿಯನ್ನು ಕಳೆದುಕೊಂಡ ತಲ್ಲಣಕ್ಕೆ ಈಡುಮಾಡುತ್ತದೆ. "ಮುಟ್ಟಬೇಡ" ಎಂಬ ಮಾತಿಗೆ ರಾಮ ಹಾಗೂ ಭಾರತ ದೇಶ ತೆತ್ತ ಬೆಲೆ ಅರ್ಥವಾಗಬೇಕು. ಆ ರೀತಿಯ ಚಿಂತನೆಗೆ ಕತೆ ದೂಡುತ್ತದೆ. ಅರಿಶಿನ ಹಚ್ಚುವಾಗ ಆ ಕೈಬೆರಳಿಗೆ ದರ್ಬೆಯನ್ನು ಕಟ್ಟಿಕೊಳ್ಳುವಾಗ ನಾವು ಕಳೆದುಕೊಂಡಿರುವ ವಿವೇಕ ಮತ್ತು ಸಂಪತ್ತು ಪ್ರೀತಿ ಅರ್ಥವಾಗಬೇಕು. ಅವುಗಳನ್ನು ಮತ್ತೆ ಪಡೆದು, ಉಳಿಸಿ ಬೆಳೆಸಿಕೊಳ್ಳಬೇಕಾದ ಸಾಂಸ್ಕೃತಿಕ ಜವಾಬ್ದಾರಿಯನ್ನೂ ಈ ಕೃತಿ ನೆನಪಿಸುತ್ತದೆ. ಇದು ಶ್ರೀಸಾಮಾನ್ಯರು ಕಟ್ಟಿದ ಅಸಾಮಾನ್ಯ ರಾಮಾಯಣ "ಅಮರ ಕಥಾಮೃತ ರಾಮಾಯಣ".

ಇಲ್ಲಿನ ಕತೆಗಳಲ್ಲಿ ಬರುವ ಮಿರ್ಲೆ, ಬಾಣಾವರ, ಆರತಿಉಕ್ಕಡ, ಜಪದಕಟ್ಟೆ, ಚುಂಚನಕಟ್ಟೆ, ಅತ್ತಿಗೋಡು, ಸುಣ್ಣುಮಾರನ ಬೆಟ್ಟೆ, ಗೋಗಲ್ಲು, ರಾಮನಾಥಪುರ, ನಾಮದ ಚಿಲುಮೆ ಮೊದಲಾದ ಪದಗಳ ಭಾಷಿಕವಾದ ಹಾಗೂ ಸ್ಥಳಪುರಾಣಗಳ ಐತಿಹ್ಯಗಳ ಹಿನ್ನೆಲೆಯ ಸ್ಥಳನಾಮ ವಿಶ್ಲೇಷಣೆಯ ಕತೆಗಳು ಗಮನಸೆಳೆಯುತ್ತವೆ. ಮಿಥಿಲೆ ಮಿರ್ಲೆಯಾಗುವ, ಅಹಲ್ಯ ಆರತಿಉಕ್ಕಡವಾಗುವ ಬಾಣಾವರದ ಮಣ್ಣು ಲಕ್ಷ್ಮಣನ ಮನಸ್ಸನ್ನು ಕೆಡಿಸುವ, ರಾಮನ ಕಜ್ಜಿಯ ನಾತವನ್ನು ಹೋಗಲಾಡಿಸುವ ರಾಮನಾಥಪುರ ಇವೆಲ್ಲ ನಮ್ಮ ಜನಪದರ ಕುತೂಹಲಕರವಾದ ಸೃಜನಶೀಲ ಪ್ರತಿಭೆಗೆ ಕನ್ನಡಿಯಾಗಿವೆ.

"ರಾವಣನ ನಾಭಿಯ ತಳದಲ್ಲಿದ್ದ ಅಮೃತಬಿಂದು" "ತ್ರಿಶೂಲಧಾರಿ ಶ್ರೀರಾಮನ ಚುಂಚನಕಟ್ಟೆ" "ಶ್ರೀರಾಮನಾಮ ಮಹಿಮೆ" "ಹನುಮಜ್ಜಯಂತಿ" "ಕಿಳ್ಳೇಕ್ಯಾತರು" "ಒಕ್ಕಲಿಗರನ್ನು ವಂಚಿಸಿದ ಬೂದುಗುಂಬಳ" ಮೊದಲಾದ ಕತೆಗಳು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತವೆ. ಸಮಕಾಲೀನವೂ ಸಾರ್ವಕಾಲೀನವೂ ಆದ ಅನೇಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತ ವಿಮರ್ಶೆಗೆ ಆಹ್ವಾನಿಸುತ್ತವೆ. ಒಕ್ಕಲಿಗರ ಅಹಂಕಾರ ಬ್ರಾಹ್ಮಣನ ವಂಚನೆ, ಶ್ರೀರಾಮನ ನ್ಯಾಯದಾನ "ಒಕ್ಕಲಿಗರನ್ನು ವಂಚಿಸಿದ ಬೂದುಗುಂಬಳ"ದಲ್ಲಿ ವಿಶೇಷವಾಗಿದೆ. ರಾಜರು ಹಾಗೂ ರೈತರ ನಡುವಿನ ತೆರಿಗೆ ವಸೂಲಿ ಕ್ರೌರ್ಯವನ್ನೂ ಕತೆ ಧ್ವನಿಸುತ್ತದೆ. ವಿದ್ಯಾವಂತ ಬುದ್ಧಿಜೀವಿಗಳ ಹುರಿದ ಬೀಜ ನೀಡುವ ವಂಚನೆ ಮಾರ್ಮಿಕವಾಗಿದೆ.

"ಜಗದ್ರಕ್ಷಕ ನೀನೇ" ಎಂಬ ಕತೆಯಲ್ಲಿ "ಶ್ರೀರಾಮ ಒಮ್ಮೆ ಕಾವೇರಿ ನದಿಗಿಳಿಯುವಾಗ ದಡದ ಮಣ್ಣೇರಿಗೆ ತನ್ನ ಬಾಣವನ್ನು ಬಿರುಸಾಗಿ ಚುಚ್ಚಿದ". ಆ ಬಾಣದ ತುದಿಗೆ ಕಪ್ಪೆಯು ಸಿಲುಕಿ ಒದ್ದಾಡತೊಡಗಿತು. ರಾಮ ಕರುಣೆಯಿಂದ ಬಾಣವನ್ನು ಮೇಲಕ್ಕೆ ಎತ್ತಿ ಕಪ್ಪೆಗೆ ಹೇಳಿದ "ಅಲ್ಲಾ ಕಪ್ಪೆಯೆ, ನಿನಗೆ ಬಾಣದ ಮೊನೆ ಚುಚ್ಚಿಕೊಂಡಾಗ ಆ ಕೂಡಲೆ ನೀನು ರಕ್ಷಣೆಗಾಗಿ ನನ್ನನ್ನು ಕರೆಯಬಾರದಿತ್ತಾ" ಎಂದು ಪ್ರಶ್ನಿಸುತ್ತಾನೆ. ಆ ಪ್ರಶ್ನೆಗೆ ಕಪ್ಪೆಯು "ಪ್ರಭೂ ಜಗದ್ರಕ್ಷಕನಾದ ನೀವೇ ನಿಮ್ಮ ಬಾಣದಿಂದ ನನ್ನನ್ನು ಚುಚ್ಚಿರುವಾಗ ಇನ್ನು "ರಕ್ಷಿಸು!" ಎಂದು ಯಾರಲ್ಲಿ ಮೊರೆಯಿಡಲಿ" ಎಂದಿತು. ಈ ಮಾತು ಕಲ್ಲನ್ನೂ ಕರಗಿಸಬಹುದಾದಷ್ಟು ಶಕ್ತಿಯುತವಾಗಿದೆ. ಎಲ್ಲ ಕಾಲಕ್ಕೂ ಸಲ್ಲಬಹುದಾದ ಪ್ರಶ್ನೆ ಒಂದು ಎಚ್ಚರವನ್ನು ದೇವರಾದಂತಹ ರಾಮನಲ್ಲಿಯೂ ಉಂಟುಮಾಡುತ್ತಿರುತ್ತದೆ. ದುರಹಂಕಾರದಿಂದ ಕಬ್ಬಿಣದ ಕಾಗೆಯಾಗುವ ದುರ್ವಾಸನದು ಒಂದು ಬಗೆಯಾದರೆ ತನ್ನ ಹೆಸರನ್ನು ತಾನೇ ಬರೆದು ಕಡಲಿಗೆ ಬಿಟ್ಟ ಕಲ್ಲು ಸೇತುಬಂಧ ಕಾರ್ಯದಲ್ಲಿ ಮುಳುಗಿದ್ದನ್ನು ಕಂಡು ಸದ್ಯ ಯಾರೂ ನೋಡಲಿಲ್ಲವೆಂದು ನಾಚಿ ಸಮಾಧಾನಪಟ್ಟುಕೊಳ್ಳುವ ಶ್ರೀರಾಮನದು ಮತ್ತೊಂದು ಬಗೆಯಾಗಿದೆ. ಅದನ್ನು ನಮ್ಮ ಜನಪದರು ರಾಮ-ಆಂಜನೇಯರ ಸಂವಾದದಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಯಾರೂ ನೋಡಲಿಲ್ಲ.

ಮಾನಮರ್ಯಾದೆ ಉಳಿಯಿತು ಎಂದು ರಾಮನಿದ್ದರೆ ಅದನ್ನು ನೋಡಿ ನಕ್ಕು ಕೇಕೆ ಹಾಕಿದ ಹನುಮನನ್ನು ಕಂಡು ರಾಮ ಕಂಗಾಲಾಗುತ್ತಾನೆ. ಆಗ ಶ್ರೀರಾಮ "ಆಂಜನೇಯ ಈ ಚೇಷ್ಟೆ ಸಾಕು. ಇದನ್ನು ಯಾರಿಗೂ ಹೇಳಬೇಡ!" ಎನ್ನುತ್ತಾನೆ. ಆದರೂ ಆಂಜನೇಯ ಹೇಳುವವನೇ ಸೈ ಎಂದಾಗ ರಾಮ "ಹೇಳಿಕೋ, ಏನಾದರೂ ಹೇಳಿಕೋ!" ಎನ್ನುತ್ತಾನೆ. ಅದಕ್ಕೆ ಆಂಜನೇಯನು "ಏನಾದರೂ ಹೇಳುವುದಿಲ್ಲ. ಹೀಗೆ ಹೇಳುತ್ತೇನೆ. ಶ್ರೀರಾಮ ಕೈಹಿಡಿದದ್ದು ಉದ್ಧಾರವಾಗುತ್ತದೆ. ಕೈಬಿಟ್ಟದ್ದು ಮುಳುಗಿಹೋಗುತ್ತದೆ" ಎನ್ನುತ್ತಾನೆ. ಈ ಮಾತು ಎಷ್ಟು ಧ್ವನಿಪೂರ್ಣವಾಗಿದೆ ಎಂದರೆ ಅದನ್ನು ವ್ಯಕ್ತಿಗಳಿಗೂ ಪಕ್ಷಗಳಿಗೂ ಅನ್ವಯಿಸಿದಾಗಲೂ ರಾಮನಾಮದ ಶಕ್ತಿ ಅರ್ಥವಾಗುತ್ತದೆ.

ಈ ಕತೆಗಳಲ್ಲಿ ಕಂಡುಬರುವ ಮತ್ತೊಂದು ಮಹತ್ವದ ಸಂಗತಿ ಎಂದರೆ ಶ್ರೀಸಾಮಾನ್ಯ ಬೆಸ್ತರು, ಬೇಡರಾದಿಯಾಗಿ ಪ್ರಾಣಿ, ಪಶು, ಪಕ್ಷಿಗಳು, ಗಿಡಮರಗಳು ಒಟ್ಟಾರೆ ಪ್ರಕೃತಿ ರಾಮ, ಸೀತೆ, ಲಕ್ಷ್ಮಣಾದಿಯರಿಗೆ ತೋರುವ ಅನುಕಂಪ, ಮಾಡುವ ಸಹಾಯ ನಮ್ಮ ಗಮನವನ್ನು ಸೆಳೆಯುತ್ತದೆ. ನಮ್ಮ ಅಂತಃಕರಣವನ್ನು ಅರಳಿಸಿ ಮಾನವರನ್ನಾಗಿಸುತ್ತದೆ. ಉದಾಹರಣೆಗೆ ನೋಡುವುದಾದರೆ "ರಾಮನ ಮಾತಿನಂತೆ ಸೀತಾಮಾತೆಯನ್ನು ತಮ್ಮ ಊರಿಗೆ ಕರೆದುಕೊಂಡು ಹೋದ ತರಗೆಲೆ ಗ್ರಾಮದ ಜನರು ಸೀತಮ್ಮನಿಗೆ ಬಗೆಬಗೆಯ ಅಲಂಕಾರ ಮಾಡಿ ಹೊಸ ಹೊಸ ಸೀರೆ ರವಿಕೆಗಳನ್ನು ಕೊಟ್ಟು ಭಾರಿ ಔತಣವೇರ್ಪಡಿಸಿ ಬೀಳ್ಕೊಟ್ಟರಂತೆ". ಆ ಪ್ರೀತಿಯಿಂದ ಇದು ತನ್ನ ತೌರೂರು ಎಂದು ಭಾವಿಸಿದ ಸೀತೆ "ಇದೂ ನನಗೆ ಮಿಥಿಲೆಯೇ!" ಎಂದಳಂತೆ. ಅದೇ ಇಂದು ಮಿರ್ಲೆ ಎಂದಾಗಿದೆ. ಊಟಕ್ಕಾಗಿ ಮುತ್ತುಗದ ಎಲೆ, ಸೀತಾಫಲಾದಿ ಸೃಷ್ಟಿಯಾಗುತ್ತವೆ. 'ಆರತಿ ಉಕ್ಕಡದ ಅಹಲ್ಯಾದೇವಿ' ಕತೆಯಲ್ಲಿ ಮೂರ್ಛೆಯಿಂದ ಬಿದ್ದಿದ್ದ ಅಹಲ್ಯೆಗೆ "ಬೆಸ್ತರು ತೋರಿದ ಮಾನವೀಯತೆ ಮರೆಯಲಾರದ್ದು. ಮೊಸರಿನ ಗಡಿಗೆ ಹೊತ್ತುಕೊಂಡು ಬೆಟ್ಟ ಹತ್ತುತ್ತ ಎಡವುವ ಸೀತೆ, ನದಿಯಲ್ಲಿ ಸೀರೆಯನ್ನು ತೊಳೆಯುವ ಸೀತೆ ಇಲ್ಲಿ ಕಂಡುಬರುತ್ತಾಳೆ. ಆ ಜಾಗಗಳಿಗೆ ಸೀತೆ ಸೆರಗು, ಮೊಸರಕಲ್ಲು ಎಂದು ನಮ್ಮ ಜನ ನಾಮಕರಣ ಮಾಡಿ ಆ ಹೆಸರುಗಳೊಂದಿಗೆ ಸೀತೆಯ ನೆನಪನ್ನೂ ಶಾಶ್ವತಗೊಳಿಸಿದ್ದಾರೆ. ರಾಮನ ಕಣ್ಣೀರು ನದಿಯಾಗುವ, ಮೂಗಿನಿಂದ ಉದುರಿದ ಗೊಣ್ಣೆ ಎರಡು ಮೀನಾಗುವ, ಸೀತೆಯನ್ನು ಕಾಪಾಡುವ ಅವುಗಳು ಮುಂದೆ ಲವಕುಶರ ಹೆಸರಿಗೆ ಕಾರಣರಾಗುವ ನಮ್ಮ ಜನಪದರ ಕಲ್ಪನೆ ಅಸಾಧಾರಣವಾದುದು. "ರಾವಣ ಸೀತಾಗ ಸೀತೆ ಹುಟ್ಟಿದಳು" ಎಂಬ ಕತೆಯೂ ಅಷ್ಟೇ ರೋಚಕವಾಗಿದೆ. ಕೈಕೆಯು ದಶರಥನ ಹೋರಾಟದಲ್ಲಿ ಹೆಗಲೆಣೆಯಾಗಿ ನಿಲ್ಲುವುದು, ಅವನ ರಥದ ಕೀಲು ಕಳಚಿಕೊಂಡಾಗ ತನ್ನ ಬೆರಳನ್ನೇ ಕೀಲನ್ನಾಗಿ ಮಾಡಿ ಕಾಪಾಡುವುದು, ಆ ಸಾಹಸದಿಂದ ವರ ಪಡೆಯುವುದು ನಮ್ಮ ಜನಪದರ ಪ್ರತಿಭಾ ಶಕ್ತಿಯನ್ನು ಪರಿಚಯಿಸುತ್ತವೆ. ತಾನೆ ತಾನಾಗಿಯೂ ಈ ಕೃತಿ 'ಅಮರ ಕಥಾಮೃತ

ರಾಮಾಯಣ' ಇಂಥ 'ಜನಪದ ರಾಮಾಯಣದ ಕಥೆಗಳು' ಕೃತಿಯನ್ನು ನೀಡುವ ಮೂಲಕ ಅಕ್ಷರ ಲೋಕದಲ್ಲಿ ಅಕ್ಷಯಗೊಳಿಸಿದ ಪ್ರೀತಿಯ ಪಿಕೆಆರ್ ಅವರನ್ನು ಗೌರವದಿಂದ ವಂದಿಸುತ್ತೇನೆ, ಅಭಿನಂದಿಸುತ್ತೇನೆ. ಅವರ ಸಂಶೋಧನೆಯ ಸಾಹಸ ಯಾತ್ರೆಯಲ್ಲಿ ಸಿಕ್ಕಿರುವ ಇಂಥ ಅದೆಷ್ಟೊ ಮುತ್ತುರತ್ನಗಳಿರಬಹುದು. ಅವುಗಳನ್ನೂ ಸಂಪೂರ್ಣವಾಗಿ ಕನ್ನಡ ನಾಡಿನ ರತ್ನಗರ್ಭಕ್ಕೆ ಅರ್ಪಿಸಲಿ ಎಂದು ಪ್ರಾರ್ಥಿಸುತ್ತೇನೆ. ರಾಮ ಮತ್ತು ರಾಮಾಯಣ ಕನ್ನಡದ್ದು ಹೌದು, ಭಾರತದ್ದೂ ಹೌದು, ವಿಶ್ವದ್ದೂ ಹೌದು. "ರಾಮಾಯಣಂ ಸರ್ವಮಯಂ ಜಗತ್" ಎಂದಿದ್ದಾರೆ ಪಿಕೆಆರ್. ಅವರು ನಮಗೆ ರಾಮರ ಕಥೆಯ ರತ್ನಗಳನ್ನು ನೀಡಿದ್ದಾರೆ. ಇಂಥ ಅಮೂಲ್ಯವಾದ ರತ್ನಗಳನ್ನು ಕಾಪಾಡಿಕೊಂಡು ಬಂದವರು ಕಿಳ್ಳೇಕ್ಯಾತರಂಥವರು. "ಕಿಳ್ಳೇಕ್ಯಾತರು ಭಾರತದ ಬಹಳಷ್ಟು ಕಡೆ ಕಂಡುಬರುವ ತೊಗಲುಗೊಂಬೆಯಾಟದ ಕಲಾವಿದರು. ರಾಮಾಯಣದ ಗುಹ ಎಂಬ ನಾವಿಕ ಈ ಜನಾಂಗದ ಮೂಲದವನೆಂದು ಹೇಳುವುದರಿಂದ ರಾಮಾಯಣದ ಕಾಲದಲ್ಲೇ ಈ ಜನಾಂಗದ ಇರುವಿಕೆಯನ್ನೂ ಗುರುತಿಸಬಹುದಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಇವರು ಉಳಿಸಿಕೊಂಡು ಬಂದಿರುವ ತೊಗಲುಗೊಂಬೆಯಾಟವನ್ನು ವಿಶೇಷವಾಗಿ ಹೇಳಬೇಕಾಗಿದೆ. ಏಕೆಂದರೆ ಅದಕ್ಕೆ "ಸೀತಾರಾಮರ ಹಿನ್ನೆಲೆ ಇದೆ" ಎಂಬ ಪಿಕೆಆರ್ ಅವರ ಮಾತುಗಳು ಗಮನಾರ್ಹ. ಇಂಥ ಕಿಳ್ಳೇಕ್ಯಾತರೇ ಭಾರತದ ಸಾಂಸ್ಕೃತಿಕ ವಾರಸುದಾರರು. ಇದನ್ನು ಭಾರತದ ಎಲ್ಲ ಪಂಥಗಳ ವಿಚಾರವಾದಿಗಳು ಅರಿಯಬೇಕು.

ನಾವೆಲ್ಲರೂ ನೆನಪಿಡಬೇಕಾದ ಮಾತೆಂದರೆ ಆಂಜನೇಯ ರಾಮನಿಗೆ ಹೇಳಿದ ಮಾತು. ಅದು "ಶ್ರೀರಾಮ ಕೈಹಿಡಿದದ್ದು ಉದ್ಧಾರವಾಗುತ್ತದೆ ಕೈಬಿಟ್ಟದ್ದು ಮುಳುಗಿಹೋಗುತ್ತದೆ!" ಎಂಬುದಾಗಿದೆ. ಭಾರತೀಯ ಭಕ್ತಿಪರಂಪರೆಯಲ್ಲಿ ಭಕ್ತಿಯಿಂದ ನಂಬಿದರೆ ಮಾತ್ರ ಭಗವಂತನೂ ಕೈಹಿಡಿಯುತ್ತಾನೆ ಎನ್ನಲಾಗಿದೆ. ಹಾಗಾಗಿ ಶ್ರೀರಾಮನನ್ನು ಕೈಬಿಟ್ಟವರನ್ನು ಶ್ರೀರಾಮನೂ ಕೈಬಿಟ್ಟಿದ್ದಾನೆ. ಶ್ರೀರಾಮನ ಕೈಹಿಡಿದವರನ್ನು ಶ್ರೀರಾಮನೂ ಕೈಹಿಡಿದಿದ್ದಾನೆ. ಈ ಮಾತನ್ನು ಎಲ್ಲ ದೇವರಿಗೂ, ವ್ಯಕ್ತಿಗಳಿಗೂ, ವಿಷಯಗಳಿಗೂ ಅನ್ವಯಿಸಬಹುದು. ನಮ್ಮ ಜನಪದರ ಬಾಳಿನ ಶಕ್ತಿ ಎಂದರೆ ಪ್ರಬಲವಾದ ನಂಬಿಕೆಯೇ ಆಗಿದೆ. ಹಾಗಾಗಿ ಇಂಥ ಕತೆಗಳು ಸೃಷ್ಟಿಯಾಗಿವೆ.

ಜನಪದ ರಾಮಾಯಣದ ಕಥೆಗಳು

ಆದಿಗೆ – ಇದು – ಹಾದಿ

ಉತ್ತರ ಕರ್ನಾಟಕದಲ್ಲಿ ಡಾ. ಬಿ.ಎಸ್.ಗದ್ದಗೀಮಠ ಅವರು, ದಕ್ಷಿಣ ಕರ್ನಾಟಕದಲ್ಲಿ ಕರಾಕೃ ಅವರು ದಟ್ಟವಾದ ಕ್ಷೇತ್ರಕಾರ್ಯವನ್ನು ಮಾಡಿದುದರ ಪರಿಣಾಮವಾಗಿ ಕನ್ನಡ ಜಾನಪದದ ಉದ್ದ–ಅಗಲಗಳು, ಆಳ–ಎತ್ತರಗಳು ವಿದ್ವಾಂಸರ ಗಮನವನ್ನು ಈ ಕಡೆಗೆ ಸೆಳೆಯಲು ಕಾರಣವಾದವು ಎಂಬುದನ್ನು ಮರೆಯುವಂತಿಲ್ಲ. ಹೀಗಾಗಿ ತ್ರಿಪದಿಯ ರೂಪದಲ್ಲೇ ಕಾಣಿಸಿಕೊಳ್ಳುತ್ತಿದ್ದ ಗರತಿಯ ಹಾಡಿನ ಜಾಡಿನಿಂದ ಜಾನಪದ ತ್ರಿವಿಕ್ರಮನಾಗಿ ಕಾಣಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಕಲ್ಪಿಸಿಕೊಟ್ಟ ಅವಕಾಶದಿಂದ ಕಾಲಡಿಯಲ್ಲಿ ಹೊರಳುತ್ತಿದ್ದ ಕನ್ನಡ ಜಾನಪದ ಕನಕಸಿಂಹಾಸನವನ್ನೇರುವಂತಾಯಿತು. ಪ್ರೊ. ದೇಜಗೌ ಅವರ ಮಹತ್ವಾಕಾಂಕ್ಷೆಯು ಪ್ರೊ.ಹಾಮಾನಾ ಅವರ ಸಮರ್ಥ ಮಾರ್ಗದರ್ಶನದಲ್ಲಿ ಪ್ರೊ.ಜೀಶಂಪ ಹಾಗೂ ಪಿ.ಆರ್.ತಿಪ್ಪೇಸ್ವಾಮಿಯವರ ಕೈಂಕರ್ಯದಿಂದ ಕನ್ನಡ ಜಾನಪದವನ್ನು ಪೂರ್ಣದೃಷ್ಟಿಯಿಂದ ನೋಡುವ ಸದವಕಾಶ ಉಂಟಾಯಿತು. ಈ ಪರ್ವಕಾಲದಲ್ಲೇ ವೃತ್ತಿಗಾಯಕರ ಶೋಧನೆಯು ಕನ್ನಡ ಜನಪದ ಕಾವ್ಯಗಳ ಅಕ್ಷಯಭಂಡಾರವನ್ನೇ ಸೂರೆ ಮಾಡಿದ ಮಹತ್ಸಾಧನೆಯೂ ಆಯಿತು.

ವೃತ್ತಿಗಾಯಕರ ಕಂಠಶ್ರೀ 'ಹೊತ್ತು ತಂದ ಜನಪದ ಮಹಾಕಾವ್ಯಗಳಲ್ಲಿ ದೇವರಗುಡ್ಡರ 'ಮಲೆಯ ಮಾದೇಶ್ವರ' ನೀಲಗಾರರ 'ಧರೆಗೆ ದೊಡ್ಡೋರು ಮಂಟೇಸ್ವಾಮಿ' ಚೌಡಿಕೆಯವರು ಹಾಡುವ 'ಎಲ್ಲಮ್ಮ ದೇವಿ' ತಂಬೂರಿಯವರು ಹಾಡುವ 'ಸಂಪೂರ್ಣ ರಾಮಾಯಣ', ಕರಪಾಲದವರು ಹಾಡುವ 'ಜನಪದ ಶರಣ ಕಾವ್ಯಗಳು', ದಕ್ಷಿಣ ಕನ್ನಡದ 'ಸಿರಿ' ಕೊಡಗು ಭಾಷೆಯ 'ಬಾಯಿನ' ಇನ್ನಿತರ 'ಜನಪದ ಮಹಾಭಾರತ' 'ಹಾಲುಮತ ಪುರಾಣ' ಮುಂತಾದ ಹಲವಾರು ಮೌಖಿಕ ಮಹಾಕಾವ್ಯಗಳು ನಮ್ಮಲ್ಲ ಪ್ರಕಟವಾಗಿವೆ. ಆದರೆ ವ್ಯಾಪಕವಾದ ಕ್ಷೇತ್ರಕಾರ್ಯದ ಕೊರತೆಯಿಂದ ಮಹಾಕಾವ್ಯಗಳ ಸಂಗ್ರಹಕಾರ್ಯ ಹಾಗೂ ಅಧ್ಯಯನ ಕಾರ್ಯ ಇನ್ನೂ ಅಪೂರ್ಣವಾಗಿಯೇ ಉಳಿದಿದೆ ಎನ್ನದೆ ವಿಧಿಯಿಲ್ಲ.

ರಾಮಾಯಣ-ಮಹಾಭಾರತಗಳು ಅವುಗಳ ಕರ್ತೃಗಳನ್ನು ಮರೆಸುವಷ್ಟರ ಮಟ್ಟಿಗೆ ಬೆಳೆದಿವೆಯೆಂದೂ ಸಾಮಾನ್ಯರಿಗೆ ವಾಲ್ಮೀಕಿ-ವ್ಯಾಸರು ಗೊತ್ತಿಲ್ಲದಿದ್ದರೂ ಅವರ ಕಥೆಗಳು ತಿಳಿದಿವೆಯೆಂದು ಒಂದು ವಾದ. ಆದರೆ ಜನಪದ ಮೂಲದಿಂದಲೇ ಶಿಷ್ಟಕವಿಗಳು ಕಥಾವಸ್ತುವನ್ನು ತೆಗೆದುಕೊಂಡು ತಮ್ಮ ಬುದ್ಧಿ ಸಾಮರ್ಥ್ಯ, ಪ್ರತಿಭಾಶಕ್ತಿ, ಯುಗಮನೋಧರ್ಮಗಳಿಗೆ ತಕ್ಕಂತೆ ಒಂದು ಸ್ಪಷ್ಟರೂಪವನ್ನು ಕೊಟ್ಟಿರುವರೆಂಬುದು ಇನ್ನೊಂದು ವಾದ. ಈ ಎರಡೂ ವಾದಗಳೂ ಪರಸ್ಪರ ಪೂರಕವಾಗಿದ್ದು ಈ ಎರಡನ್ನೂ ತಳ್ಳಿಹಾಕುವಂತಿಲ್ಲ. ಅದೂ ಅಲ್ಲದೆ ಜಾನಪದ ಮತ್ತು ಗ್ರಂಥಪದಗಳು ಪರಸ್ಪರ ಸ್ಪರ್ಶಿಸುತ್ತಿರುತ್ತವೆ. ಅಂತೆಯೇ ಘರ್ಷಿಸುತ್ತಲೂ ಇರುತ್ತವೆ. ಈ ಸ್ಪರ್ಶ ಘರ್ಷಗಳಿಂದ ಪರಸ್ಪರ ಕೊಳುಕೊಡುಗೆಗಳುಂಟಾಗಿ ಎರಡೂ ಪ್ರಕಾರಗಳೂ ನಿರಂತರವಾಗಿ ಬೆಳೆಯುತ್ತಾ ಹೋಗುತ್ತವೆ. ಈ ಕಾರಣದಿಂದಲೆ ಲಿಖಿತ ರೂಪಕ್ಕಿಳಿದ ಮೇಲೂ ರಾಮಾಯಣ-ಮಹಾಭಾರತಗಳು ಪ್ರಕ್ಷೇಪಗಳಿಂದ ಬೆಳೆಯುತ್ತ ವಿಕಾಸಶೀಲ ಮಹಾಕಾವ್ಯಗಳು ಎಂಬ ಪ್ರಕಾರಕ್ಕೆ ಸೇರ್ಪಡೆಯಾಗಿವೆ. ಅದೇನಾದರೂ ಆಗಲಿ ಇದಕ್ಕೆ ಆದಿಯಾದ ಜಾನಪದ ತೋರಿದ ಹಾದಿಯಲ್ಲಿ ಬಂದದ್ದು ಶಿಷ್ಟಪದ.

ಜನಪದ ಮಹಾಕಾವ್ಯಗಳು ಎಲ್ಲೆಲ್ಲಿಯೋ ಹೇಗೆಹೇಗೋ ಚಲ್ಲಾಪಿಲ್ಲಿಯಾಗಿರುವುದನ್ನು ಗುರುತಿಸಿ ಇಂಥವುಗಳನ್ನು ಒಂದು ಸುಬದ್ಧ ರೂಪಕ್ಕೆ ತರಬೇಕೆಂದು ಶ್ರಮಿಸಿದ ಒಂದು ಪರಂಪರೆಯನ್ನು ಸಂಸ್ಕೃತದಲ್ಲಿ 'ವ್ಯಾಸಪರಂಪರೆ' ಎಂದು ಕರೆಯುವುದನ್ನು ಗಮನಿಸಿದರೆ ಕಂಠಸ್ಥ ಸಂಪ್ರದಾಯದಲ್ಲಿ ಹಾರಾಡುತ್ತಿದ್ದ ಮಹಾಭಾರತದ ಕಥೆ, ಅಷ್ಟಾದಶ ಮಹಾಪುರಾಣಗಳು, ಅಷ್ಟಾದಶ ಉಪಪುರಾಣಗಳು, ನೂರಾರು ಔಪಪುರಾಣಗಳನ್ನೆಲ್ಲ ಸಂಗ್ರಹಿಸಿ ಸಂಪಾದಿಸಿದ ವ್ಯಾಸರು ಸಂಸ್ಕೃತ ಜಾನಪದದ ಮೊದಲ ಕ್ಷೇತ್ರಕಾರ್ಯ ಕರ್ತೃವಾಗುತ್ತಾರೆ. ಇಂಥ ಸಂಗ್ರಹಕಾರರಿಂದ ಅಕ್ಷರದ ಹಿಡಿತಕ್ಕೊಳಗಾದದ್ದು ಎಷ್ಟೋ? ಸ್ವೇಚ್ಛೆಯಿಂದ ಓಡಾಡಿಕೊಂಡು ತಪ್ಪಿಸಿಕೊಂಡದ್ದು ಎಷ್ಟೋ? ಅಲ್ಲಲ್ಲಿ ಅವಿತು ಕಳ್ಳಾಟವಾಡುತ್ತ ಕಿವಿಗೂ ಬೀಳದೆ ಕಣ್ಣಿಗೂ ಕಾಣದೆ ಇದ್ದರೂ ಇಲ್ಲವೆಂಬಂತೆ, ಇಲ್ಲವೆಂದರೂ ಇದ್ದೇನೆಂಬಂತೆ ಸತಾಯಿಸುತ್ತಿರುವುದು ಇನ್ನೆಷ್ಟೋ. ಆದರೆ ಅದನ್ನೆಲ್ಲ ಹೇಳಲು ನಮಗೆ ಯಾವ ಆಧಾರಗಳೂ ಇಲ್ಲದಿದ್ದರೂ ಅಂದಿನಿಂದ ತಲೆಮೊರೆಯಿಂದ ತಲೆಮೊರಗೆ ಸಾಗಿ ಬರುತ್ತಿರುವ ಈ ಕಥಾಸಾಮಗ್ರಿ ಆಗಾಗ ಹಿಗ್ಗುತ್ತ ಆಗಾಗ ಕುಗ್ಗುತ್ತ, ಕೆಲವೊಮ್ಮೆ ಸ್ಮೃತಿಯಿಂದ ಜಾರಿ ಹೋದ ಭಾಗಗಳಿಗೆ ಬದಲಾಗಿ ಪುನರ್‌ಸೃಷ್ಟಿಗೊಳ್ಳುತ್ತ, ಅಂತೆಯೇ ವ್ಯಕ್ತಿಯಿಂದ ವ್ಯಕ್ತಿಗೆ, ಊರಿನಿಂದ ಊರಿಗೆ, ಭಾಷೆಯಿಂದ ಭಾಷೆಗೆ ಅನೇಕ ಪಠ್ಯಗಳನ್ನು ಸೃಷ್ಟಿಸುತ್ತ ಅದೊಂದು ಕಥಾಸಾಗರವಾಗಿರುತ್ತದೆ.

ಶಿಷ್ಟಕವಿಗಳ ವೈದಿಕ, ಬೌದ್ಧ, ಜೈನ ಸಂಪ್ರದಾಯಗಳಲ್ಲೇ ಅನೇಕ ಕಥಾಭೇದಗಳನ್ನು ಹೇಳುವ ರಾಮಾಯಣ ಮಹಾಭಾರತಗಳಿವೆ. ಅದರಲ್ಲೂ

ಬಹುಭಾಷೆಗಳ ದೇಶವಾದ ನಮ್ಮ ಭಾರತದಲ್ಲಿ ಲಿಪಿಯನ್ನೇ ಕಾಣದ ಅನೇಕ ಭಾಷೆಗಳಿದ್ದು ಅವುಗಳಲ್ಲೆಲ್ಲ ರಾಮಾಯಣ ಮತ್ತು ಮಹಾಭಾರತಗಳಿದ್ದು, ಅವುಗಳು ಶಿಷ್ಟಪರಂಪರೆಯಿಂದ ಬಂದ ಕಥಾವಸ್ತುಗಳಿಗಿಂತ ಭಿನ್ನಸ್ವರೂಪದವುಗಳಾಗಿವೆ. ಇಂಥ ಸ್ವತಂತ್ರ ಕಾವ್ಯಗಳು ಅನಾಮಧೇಯ ಅನಕ್ಷರಸ್ಥ ಅಮರಕವಿಗಳ ಮೆದುಳಿನ ಮಾಳಿಗೆಯಲ್ಲಿ, ಹೃದಯದ ನಾಲಗೆಯಲ್ಲಿ, ಸ್ಮೃತಿ ಸಂಪುಟದಲ್ಲಿ, ಗಾಯಕರ ಜೋಳಿಗೆಯಲ್ಲಿ ತುಂಬಿಕೊಂಡಿವೆ. ಈ ಹೆಸರಿಲ್ಲದ ಹಸಿರುಕವಿಗಳ ಬೃಹದ್ಧಾರೆಯ ಮಹತ್ವಪೂರ್ಣ ಹಾಡ್ಗತೆಗಳೇ ನಮ್ಮ ಜನಪದ ಮಹಾಕಾವ್ಯಗಳು.

ವ್ಯಾಸ-ವಾಲ್ಮೀಕಿಗಳ ಕಥಾಚೌಕಟ್ಟಿಗೆ ಬದ್ಧರಾದ ಅಕ್ಷರಸ್ಥರನ್ನು ಅನುಲಕ್ಷಿಸದೆ ಬೆಳೆದ ಜನಪದ ಮಹಾಭಾರತ ಹಾಗೂ ರಾಮಾಯಣಗಳು ಭಾರತದಾದ್ಯಂತ ಇರುವ ಎಲ್ಲ ಭಾಷೆಗಳಲ್ಲೂ ಸಹಸ್ರ ಸಹಸ್ರ ಪಠ್ಯಗಳಿಂದ ಹಾಗೂ ಪಾಠಾಂತರಗಳಿಂದ ಲಭ್ಯವಾಗುತ್ತಿವೆ. ಕರ್ನಾಟಕದ ಪರಿಮಿತಿಯಲ್ಲಿ ಇವುಗಳು ಇನ್ನುಳಿದ ಮಲೆಯ ಮಾದೇಶ್ವರ, ಧರೆಗೆ ದೊಡ್ಡೋರು ಮಂಟೇಸ್ವಾಮಿ, ಮೈಲಾರಲಿಂಗ, ಎಲ್ಲಮ್ಮದೇವಿ, ಜುಂಜಪ್ಪರಂತೆ ಒಂದು ಧಾರ್ಮಿಕ ವೃತ್ತಿಗಾಯಕರ ಹಿಡಿತಕ್ಕೆ ಸಿಕ್ಕಿಲ್ಲದಿರುವುದೇ ಇವು ಎಲ್ಲೆಲ್ಲೂ ಕಾಣಿಸಿಕೊಳ್ಳಲು ಕಾರಣವಾಗಿದೆ. ಅಂದರೆ ಇವು ಯಾವುದೇ ಚೌಕಟ್ಟಿಗೆ ಸಿಕ್ಕಿಕೊಳ್ಳದೆ ವ್ಯಾಪಕವಾಗಿ ಹರಡಿಕೊಂಡಿವೆ. ಹೀಗಾಗಿ ಇವುಗಳ ಕಥಾರೇಖೆಗಳು, ಘಟನಾವಳಿಗಳು, ಭಾಷೆ, ಛಂದಸ್ಸು ಮುಂತಾದವುಗಳಲ್ಲಿ ವೈವಿಧ್ಯಮಯವಾಗಿರುವುದನ್ನು ಕಾಣುತ್ತೇವೆ.

ರಾಮಾಯಣ-ಮಹಾಭಾರತಗಳು ಈಗಿನ ಸ್ಥಿತಿಯಲ್ಲಿ ಪುರಾಣ ಮಹಾಕಾವ್ಯಗಳೆನಿಸಿವೆ. ಜಾನಪದದಲ್ಲಿ ಈ ಬಗೆಯ ಕಥೆಗಳಿಗೆ ವಿಕಾಸದ ಮೂರು ಮಜಲುಗಳಿವೆ ಎನಿಸುತ್ತದೆ. ಇಂದಿತ ಪ್ರತಿಯೊಂದು ಪುರಾಣಕಥೆಗೂ ಚರಿತ್ರಾಧಾರವೊಂದು ಇರುವಂತೆ ಭಾಸವಾಗುತ್ತದೆ. ಆದರೆ ಅದು ಯಾವ ರೂಪದ್ದೆಂದು ಹೇಳಲು ಬರುವುದಿಲ್ಲ. ಒಂದು ಘಟನೆ ಅಥವಾ ವ್ಯಕ್ತಿಯನ್ನು ಅತಿಶಯಗೊಳಿಸಲು ಅಥವಾ ಉತ್ಕರ್ಷಗೊಳಿಸಲು ಆ ವ್ಯಕ್ತಿಯ ಸುತ್ತ ಅನೇಕ ಕಥೆಗಳು, ಆಚರಣೆಗಳು, ನಂಬಿಕೆಗಳು ಬೆಳೆದುಕೊಂಡು ಅತಿಮಾನುಷ ಅದ್ಭುತ ವಾತಾವರಣವನ್ನು ಸೃಷ್ಟಿಸಿಕೊಂಡು ವಿಕಾಸಗೊಂಡಾಗ ಐತಿಹ್ಯಗಳೆನಿಸುತ್ತವೆ. ಇದರಲ್ಲಿ ಅಸಂಭಾವ್ಯ ವಿಷಯಗಳು ಇರುವಂತೆ ಸಂಭಾವ್ಯ ಸಂಗತಿಗಳೂ ಕಂಡು ಬರುವುದರಿಂದ ಈ ಸ್ಥಿತಿಯನ್ನು 'ಅರ್ಧಚಾರಿತ್ರಿಕ' ಎಂದು ಕರೆಯಬಹುದಾಗಿದೆ. ಇದನ್ನು ಮತ್ತೂ ಅತಿಶಯಗೊಳಿಸುವ ಸಲುವಾಗಿ ಜನಪದ ಇದಕ್ಕೆ ದೈವಿಕ ಆವರಣವನ್ನು ದೈವಿಕ ಪಾತ್ರಗಳನ್ನೂ ಜೋಡಿಸಿದಾಗ ಮಾರ್ಪಟ್ಟ ಇತಿಹಾಸವು ಎರಡನೇ ಹಂತದಲ್ಲಿ ಐತಿಹ್ಯವಾಗಿ ಮೂರನೇ ಹಂತದಲ್ಲಿ ಪುರಾಣವಾಗುತ್ತದೆ. ಇದು ಪ್ರತಿಭಾ ಸಂಪನ್ನ ಹೃದಯವಂತಿಕೆಯ ಕವಿಯೊಬ್ಬನಿಗೆ ಸಿಕ್ಕಾಗ ಅದು ಕಾವ್ಯವಾಗುತ್ತದೆ. ಇದರಲ್ಲಿ ಈ ಹಿಂದೆ ಇದ್ದ ಅಲ್ಪಸ್ವಲ್ಪ ಇತಿಹಾಸದ ವಾಸನೆಯೂ

ಕಳೆದುಹೋಗುತ್ತದೆ. ಆದರೆ ಇತಿಹಾಸದ ತಿಳಿವನ್ನು ಕೆಲಮಟ್ಟಿಗೆ ಸಂಗ್ರಹವಾಗಿ ಇದು ಸಂರಕ್ಷಿಸಿಕೊಂಡಿರಬಹುದಾದರೂ ಇದರಿಂದ ನೇರ ಚಾರಿತ್ರಿಕ ಘಟನೆ ಅಥವಾ ವಿಷಯದ ಸೂಚನೆಯನ್ನು ಹೊರಡಿಸುವುದಕ್ಕೆ ಸಾಧ್ಯವಿಲ್ಲ ಎಂದು ಅರ್ಥವಾಗುತ್ತದೆ. ಈ ಎಲ್ಲ ವಿಷಯಗಳಿಗೆ ರಾಮಾಯಣ–ಮಹಾಭಾರತಗಳು ಹೊರತಾಗಿಲ್ಲ. ಇವು ಈ ಮೂರು ಮಜಲುಗಳನ್ನು ದಾಟಿಯೇ ಅಂತಿಮ ಹಂತದಲ್ಲಿ ಪುರಾಣ ಮಹಾಕಾವ್ಯಗಳಾಗಿ ರೂಪುಗೊಂಡಿರಬೇಕು. ಆದ್ದರಿಂದಲೋ ಏನೋ ನಮ್ಮ ಪ್ರಾಚೀನರು ರಾಮಾಯಣ–ಮಹಾಭಾರತಗಳನ್ನು ಪುರಾಣ ಮಹಾಕಾವ್ಯಗಳೆನ್ನದೆ 'ಇತಿಹಾಸಗಳು' ಎಂದು ಕರೆದಿರುವುದರಲ್ಲಿ ಅರ್ಥೌಚಿತ್ಯವಿದೆ ಎಂದು ಹೇಳಬಹುದು.

ನಮಗೆ ದೊರೆಯುವ ಈ ಮಹಾಕಾವ್ಯಗಳ ಕ್ಷೇತ್ರಕಾರ್ಯದಲ್ಲೂ ನಾವು ಕೆಲವು ತಂತ್ರಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಭಾರತದ ಉದ್ದಗಲಕ್ಕೂ ಇರುವ ಎಲ್ಲ ಭಾಷೆಗಳಲ್ಲೂ ಪ್ರಚಲಿತವಿರುವ ಈ ಮಹಾಕಾವ್ಯಗಳನ್ನು ಒಂದೆಡೆ ಕಲೆಹಾಕಿಕೊಂಡು ಒಂದು ಉತ್ತಮ ಪಾಠವನ್ನು ಸಿದ್ಧಪಡಿಸುವುದು ಸಾಧ್ಯವೂ ಇಲ್ಲ; ಸಾಧುವೂ ಅಲ್ಲ. ಆದ್ದರಿಂದ ಒಂದೊಂದು ಗಾಯನ ಸಂಪ್ರದಾಯದ ನೂರಾರು ಗಾಯಕರಲ್ಲಿ ಕೊನೇಪಕ್ಷ ಶ್ರೇಷ್ಠ ಗಾಯಕರೆನಿಸಿಕೊಂಡ ಹತ್ತು ಗಾಯಕರ ಪಾಠಗಳನ್ನು ಸಂಗ್ರಹಿಸಿಕೊಂಡು ಆಯಾ ಸಂಪ್ರದಾಯಗಳ ಒಂದು ಶುದ್ಧ ಪಾಠವನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಇದು ಮುದ್ರಣದಲ್ಲಿದ್ದು ಓದು ಪಠ್ಯವಾಗಿ ಸಾಮಾನ್ಯರ ಆಸಕ್ತಿಗೆ ಲಭ್ಯವಾಗಿರುವಂಥದ್ದಾಗುತ್ತದೆ. ಜಗತ್ಪ್ರಸಿದ್ಧ ಫಿನ್ಲೆಂಡಿನ 'ಕಲೇವಾಲ' ಈ ಬಗೆಯದು. ತರುವಾಯದಲ್ಲಿ ಅಧ್ಯಯನಕಾರರ ಸೌಲಭ್ಯಕ್ಕಾಗಿ ಅವರಿಗೆ ಬೇಕೆನಿಸಿದ ಪಠ್ಯವನ್ನು ಗಾಯಕರಿಂದ ಧ್ವನಿ ಮುದ್ರಿಸಿಕೊಂಡು ರಕ್ಷಿಸಿಕೊಳ್ಳಲಿ. ಹತ್ತಾರು ಪಾಠಗಳನ್ನಿಟ್ಟುಕೊಂಡು ಒಂದು ಪಠ್ಯವನ್ನು ಸಿದ್ಧಪಡಿಸುವವರು ಸ್ವೀಕೃತ ಪಾಠವನ್ನು ಪ್ರಧಾನವಾಗಿಟ್ಟುಕೊಂಡು ಉಳಿದ ಪಠ್ಯಗಳಲ್ಲಿ ಬರುವ ವ್ಯತ್ಯಾಸಗಳನ್ನು ಅನುಬಂಧದಲ್ಲಿ ಕೊಡಬಹುದಾಗಿದೆ ಅಥವಾ ಧ್ವನಿಮುದ್ರಣದಲ್ಲಿ ಪಡೆಯಬಹುದಾಗಿದೆ.

ಹೀಗೆ ಬೇರೆ ಬೇರೆ ಪ್ರದೇಶಗಳ, ಬೇರೆ ಬೇರೆ ಸಂಪ್ರದಾಯಗಳ ಬೇರೆ ಬೇರೆ ಭಾಷೆಗಳ ರಾಮಾಯಣ–ಮಹಾಭಾರತಗಳೆರಡನ್ನೂ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಬೇಕಾದ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ. ಹೀಗೆ ಸಮಗ್ರ ಸರ್ವೇಕ್ಷಣ ಕಾರ್ಯದಿಂದ ಭಿನ್ನಭಿನ್ನ ಸಂಪ್ರದಾಯದ ಕಥಾವಸ್ತುಗಳನ್ನು ಉಳಿದ ಸಾಂಸ್ಕೃತಿಕ ವಿಚಾರಗಳನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡಲು ಸಹಾಯಕವಾಗುತ್ತದೆ. ಆದ್ದರಿಂದ ಪ್ರದರ್ಶಕ ಸಿದ್ಧಾಂತವೊಂದೇ ಪರಮಗಂತವ್ಯವಲ್ಲದಿರುವುದರಿಂದ ಕ್ಷೇತ್ರಕಾರ್ಯವನ್ನು ತೀವ್ರಗತಿಯಲ್ಲಿ ನಡೆಸಿ ಎಷ್ಟೆಲ್ಲ ಸಾಧ್ಯವೋ ಅಷ್ಟೆಲ್ಲವನ್ನು ದಕ್ಕಿಸಿಕೊಳ್ಳಬೇಕಾಗಿದೆ.

ರಾಮಾಯಣ-ಮಹಾಭಾರತಗಳ ಕಥೆಯೋ ಪಾತ್ರವೋ ನಮ್ಮ ಬದುಕಿಗೆ ಆದರ್ಶವನ್ನೋ ನೀತಿಯನ್ನೋ ಇನ್ನಿತರ ತಿಳಿವಳಿಕೆಗಳನ್ನೋ ಹೇಳುತ್ತಿರುವುದರ ದ್ಯೋತಕವಾಗಿ ವ್ಯಕ್ತಿನಾಮಗಳು, ಸ್ಥಳನಾಮಗಳು, ನಂಬಿಕೆಗಳು, ಆಚರಣೆಗಳು, ಬೈಗುಳಗಳು, ಗಾದೆಗಳು, ಒಗಟುಗಳು, ನುಡಿಕಟ್ಟುಗಳು, ವಿವರಣಾತ್ಮಕ ಕಥೆಗಳು, ಜನಪದ ನಿರುಕ್ತಿಗಳು, ಹರಿಕಥೆ, ಯಕ್ಷಗಾನ, ಬಯಲಾಟಗಳಲ್ಲೆಲ್ಲ ಅವುಗಳು ಹಾಸುಹೊಕ್ಕಾಗಿ ಬೆಸೆದುಹೋಗಿವೆ. ಹೀಗೆ ಭಾರತೀಯ ಜನಜೀವನದ ಮೇಲೆ ಈ ಎರಡು ಮಹಾಕಾವ್ಯಗಳು ಬೀರಿರುವಷ್ಟು ಗಾಢವಾದ ಪರಿಣಾಮಗಳು ಬಹುಶಃ ಬೇರೆ ಯಾವ ಕಾವ್ಯಗಳೂ ಬೀರಿಲ್ಲವೆಂದೇ ಹೇಳಬಹುದು. ಹೀಗೆ ಜಾನಪದದ ವಿವಿಧ ಪ್ರಕಾರಗಳಲ್ಲೆಲ್ಲ ಲಭ್ಯವಾಗುವ ಮಾಹಿತಿಗಳನ್ನೆಲ್ಲ ಕಲೆಹಾಕಿಕೊಂಡು ಈ ಮಹಾಕಾವ್ಯಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯವೂ ಇದೆ.

ಕರ್ನಾಟಕದಲ್ಲಿ ನಡೆದಿರುವ ಜನಪದ ರಾಮಾಯಣ ಮತ್ತು ಮಹಾಭಾರತಗಳ ಸಂಗ್ರಹಕಾರ್ಯವನ್ನು ನೋಡಿದರೆ ಏನೂ ಆಗಿಲ್ಲ ಎನ್ನುವುದಕ್ಕಿಂತ ಇಷ್ಟಾದರೂ ನಡೆದಿದೆಯಲ್ಲ ಎಂದು ಸಮಾಧಾನಪಟ್ಟುಕೊಳ್ಳಬೇಕಾಗಿದೆ. ಹಾಗೆ ಹೇಳುವುದಾದರೆ ರಾಮಾಯಣಕ್ಕಿಂತ ಮಹಾಭಾರತದ ಸಂಗ್ರಹಕಾರ್ಯ ಸಾಕಷ್ಟು ನಡೆದಿರುವುದು ಕಂಡುಬರುತ್ತದೆ.

ಜನಪದರ ಸ್ಮೃತಿಯಲ್ಲಿ ಮಹಾಕವಿ ವಾಲ್ಮೀಕಿ

ಶ್ರೀಮದ್ರಾಮಾಯಣ ಮಹಾಕಾವ್ಯದ ಕರ್ತೃ ವಾಲ್ಮೀಕಿಯನ್ನು ಕರ್ನಾಟಕದ ಮಹಾಕವಿಯೆಂದು ಕನ್ನಡಿಗರು ಹೆಮ್ಮೆಪಡಬಹುದೆ? ಎಂದು ಕೇಳಿದರೆ ವಾಲ್ಮೀಕಿ ಮಹಾಕವಿಯು ಜೀವಿಸಿದ್ದ ಸ್ಥಳಗಳನ್ನು ಜನಪದರು ಕರ್ನಾಟಕದ ಕೋಲಾರ ಜಿಲ್ಲೆಯ ಆವನಿ ಗ್ರಾಮವನ್ನು ಹೆಸರಿಸುತ್ತಾರೆ. ಆವನಿ ಎಂಬ ಗ್ರಾಮವು ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನಲ್ಲಿದೆ. ಇದು ಮುಳುಬಾಗಿಲಿನಿಂದ ಸುಮಾರು ೧೧ ಕಿ.ಮೀ. ದೂರದಲ್ಲಿ ನೈರುತ್ಯಕ್ಕಿರುವ ಒಂದು ಪುಣ್ಯಕ್ಷೇತ್ರ. ಈ ಗ್ರಾಮಕ್ಕೆ ರಾಮಾಯಣ ಕಾಲದ ಸ್ಪರ್ಶವಿದೆ. ಶಾಸನಗಳು ಈ ಊರನ್ನು ಆಹವನೀಯ, ಆವನ್ಯ, ಆವಣೆ ಎಂದೆಲ್ಲ ಕರೆದಿವೆ. 'ಆಹವನೀಯ' ಎಂದರೆ ಹೋಮಾಗ್ನಿ ಎಂದರ್ಥ. ಅಲ್ಲದೆ 'ಆಹವ' ಎಂದರೆ ಯುದ್ಧ ಎಂದರ್ಥ. ಈ ಸ್ಥಳದಲ್ಲಿ ಲವಕುಶರು ತಮ್ಮ ತಂದೆ ರಾಮನೊಡನೆ 'ಆಹವ' ಮಾಡಿದ ಕಾರಣದಿಂದ ಇದು 'ಆವನಿ' ಆಯಿತಂತೆ.

ರಾಮಾಯಣದ ಕಥಾವಸ್ತುವಿನ ಅನೇಕ ಘಟನಾವಳಿಗಳನ್ನು ಗರ್ಭೀಕರಿಸಿಕೊಂಡಿರುವ ಅನೇಕ ಸ್ಥಳಪುರಾಣಗಳು ಇಲ್ಲಿ ಜೀವಂತವಾಗಿವೆ. ಇಲ್ಲಿ ಅತ್ಯದ್ಭುತ ಶೈಲಿಯ ಶ್ರೀರಾಮಲಿಂಗೇಶ್ವರಸ್ವಾಮಿಯ ದೇವಾಲಯವಿದೆ. ಈ

ದೇವಾಲಯದ ಪಕ್ಕದಲ್ಲಿಯೇ ಒಂದಾದ ಮೇಲೊಂದರಂತೆ ಗಣಪತಿ ದೇವಾಲಯ, ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಲಕ್ಷ್ಮಣೇಶ್ವರ ದೇವಾಲಯ, ಭರತೇಶ್ವರ ದೇವಾಲಯ, ಶತ್ರುಘ್ನೇಶ್ವರ ದೇವಾಲಯ, ಹನುಮಂತೇಶ್ವರ ದೇವಾಲಯ, ಸುಗ್ರೀವೇಶ್ವರ ದೇವಾಲಯ, ಅಂಗದೇಶ್ವರ ದೇವಾಲಯ, ಕಾಮಾಕ್ಷಿ ದೇವಾಲಯ, ಸೀತಾಮಾತೆಯ ದೇವಾಲಯ ಮತ್ತು ಪಾರ್ವತೀದೇವಿಯ ದೇವಾಲಯಗಳಿರುವುದು ಇಲ್ಲಿನ ವೈಶಿಷ್ಟ್ಯ.

ಆವನಿ ಹನ್ನೆರಡು ದೇವಾಲಯಗಳಿರುವ ಒಂದು ವಿಶಿಷ್ಟ ತೀರ್ಥಕ್ಷೇತ್ರ. ಇಲ್ಲಿ ಪ್ರತಿವರ್ಷ ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ಶ್ರೀರಾಮಲಿಂಗೇಶ್ವರಸ್ವಾಮಿಯ ಜಾತ್ರೆ ಅದ್ದೂರಿಯಾಗಿ ನಡೆಯುತ್ತದೆ.

ಆವನಿಯ ಸೌಂದರ್ಯಕ್ಕೆ ಮತ್ತೊಂದು ಮೆರುಗೆಂದರೆ ಇಲ್ಲಿನ ಬಹು ಎತ್ತರದ ಬೆಟ್ಟ. ಇದನ್ನು ವಾಲ್ಮೀಕಿ ಪರ್ವತ ಎಂದು ಕರೆಯುತ್ತಾರೆ. ಪವಿತ್ರ ಗ್ರಂಥ ಶ್ರೀಮದ್ರಾಮಾಯಣ ಮಹಾಕಾವ್ಯವನ್ನು ಬರೆದ ವಾಲ್ಮೀಕಿ ಮಹರ್ಷಿಗಳು ಈ ಸ್ಥಳದಲ್ಲಿ ವಾಸವಾಗಿದ್ದು ಬಹಳಷ್ಟು ಕಾಲ ತಪಸ್ಸು ಮಾಡಿ ಮುಕ್ತಿಯನ್ನು ಪಡೆದರೆಂದು ಹೇಳುತ್ತಾರೆ. ಅಲ್ಲದೆ ವಾಲ್ಮೀಕಿ ಮಹರ್ಷಿಗಳು ತಪಸ್ಸು ಮಾಡಿದ ಸ್ಥಳವೆಂದು ಒಂದು ಗುಹೆಯನ್ನು ಇಲ್ಲಿನ ಜನರು ತೋರಿಸುತ್ತಾರೆ.

ವಾಲ್ಮೀಕಿ ಋಷಿಗಳು ಇಲ್ಲಿರುವಾಗ ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾಮಾತೆಗೆ ಆಶ್ರಯ ನೀಡಿದ ಸ್ಥಳ ; ಸೀತಾಮಾತೆ ಲವಕುಶರಿಗೆ ಜನ್ಮ ನೀಡಿದ ಸ್ಥಳ ; ಲವಕುಶರು ಆಟವಾಡಿದ ಸ್ಥಳ ; ಅವರು ಇಲ್ಲಿ ಉಳಿದುಕೊಂಡಿದ್ದ ಸ್ಥಳ ಎಂದು ಹೇಳುವ ಗುಹೆ – ಈ ಎಲ್ಲವುಗಳನ್ನು ಇಲ್ಲಿನ ಜನರು ತೋರಿಸುತ್ತಾರೆ.

ಲವಕುಶರು ಹುಟ್ಟಿ ಬೆಳೆದು ವಾಲ್ಮೀಕಿ ಮಹರ್ಷಿಗಳಿಂದ ಸಕಲ ವಿದ್ಯಾಪಾರಂಗತರಾದದ್ದು ಇಲ್ಲಿಯೇ. ಅಲ್ಲದೆ ಅವರು ಶ್ರೀರಾಮನ ಯಜ್ಞಾಶ್ವವನ್ನು ಕಟ್ಟಿಹಾಕಿದ್ದು ಇಲ್ಲಿಯೇ. ಅಶ್ವವನ್ನು ಕಟ್ಟಿದ್ದ ಒಂದು ಬಂಡೆಯೂ ಇಲ್ಲಿದೆ. ಲವಕುಶರು ರಾಮನೊಡನೆ ಆಹವ (=ಯುದ್ಧ) ಮಾಡಿದ ಸ್ಥಳವೂ ಇದಂತೆ. ಇವಲ್ಲದೆ ಲವಕುಶರ ತೊಟ್ಟಿಲು, ಸೀತೆಯ ಅಡುಗೆ ಪಾತ್ರೆಗಳು, ಅವಳು ಬಟ್ಟೆ ಒಗೆಯುತ್ತಿದ್ದ ಕೊಳ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆ – ಈ ಎಲ್ಲವುಗಳ ಶಿಲಾಸಾಧನಗಳೂ ಇಲ್ಲಿವೆ.

ಈ ಪರ್ವತದಲ್ಲಿ ವಾಲ್ಮೀಕಿಗಳ ಆಶ್ರಮವಲ್ಲದೆ ಏಕಾಂತ ರಾಮಸ್ವಾಮಿ ದೇವಾಲಯ, ತೊಟ್ಟಿಲಗುಂಡು, ಧನುಷ್ಕೋಟಿ ಎಂದು ಹೇಳುವ ಒಂದು ಕೊಳ ಮುಂತಾದ ಕುರುಹುಗಳು ಇಲ್ಲಿವೆ. ಧನುಷ್ಕೋಟಿಯಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ನೀರಿರುತ್ತದೆಯಂತೆ. ಇದು ಎಂದೂ ಬತ್ತಿಹೋಗಿಲ್ಲ ; ಬತ್ತಿಹೋದುದನ್ನು ಕಂಡವರೇ ಇಲ್ಲ ಎಂದು ಹೇಳುತ್ತಾರೆ. ಇವುಗಳ ಜೊತೆಗೆ ಸೀತಾಮಾತೆಯ ದೇವಾಲಯ ಹಾಗೂ ಪಾರ್ವತಾದೇವಿಯ ದೇವಾಲಯಗಳು ಇಲ್ಲಿವೆ.

ಕೆಲವರು 'ಆವನಿ' ಎಂದರೆ ಭೂಮಿ. ಸೀತೆಯ ತಾಯಿ ಭೂಮಿಯಾದ್ದರಿಂದ ಈ ಊರಿಗೆ 'ಅವನಿ' ಎಂಬ ನಾಮವಿದ್ದು ಕ್ರಮೇಣ ಆವನಿಯಾಗಿರಬಹುದು ಎಂದೂ ಹೇಳುತ್ತಾರೆ. ಮತ್ತೆ ಕೆಲವರು ಇದು ಸಂಸ್ಕೃತದ ಆಹವನೀಯದಿಂದಲೆ ಬಂದುದಾಗಿದೆಯೆನ್ನಲು ಅಡ್ಡಿಯಿಲ್ಲ ಎಂದು ಹೇಳುತ್ತಾರೆ.

ರಾಮಾಯಣಂ ಸರ್ವಮಯಂ ಜಗತ್

ನಮ್ಮ ಬಹಳಷ್ಟು ಗ್ರಾಮಗಳಲ್ಲಿ ರಾಮಮಂದಿರಗಳಿವೆ. ಈ ರಾಮಮಂದಿರಗಳು ಮದುವೆ ದಿನಗಳಲ್ಲಿ ಗಂಡಿನ ಕಡೆಯವರಿಗೆ ಬಿಡದಿ. ಉಳಿದ ದಿನಗಳಲ್ಲಿ ವ್ಯವಸಾಯಾದಿ ಕೆಲಸ ಮಾಡಿ ದುಡಿದು ಬಂದ ಜನಗಳು ರಾತ್ರಿ ಊಟ ಮುಗಿಸಿ ಈ ರಾಮಮಂದಿರಕ್ಕೆ ಬಂದು ನಾಟಕ ಕಲಿಯುವುದು, ಭಜನೆ ಮಾಡುವುದು, ಹಾಡಿ ಕುಣಿಯುವುದು – ಮುಂತಾದ ಸಾಂಸ್ಕೃತಿಕ ಕಾರ್ಯಗಳ ಕೇಂದ್ರ ಸ್ಥಾನ. ರಾಮನ ಪಿತೃವಾಕ್ಯ ಪರಿಪಾಲನೆ, ಏಕಪತ್ನೀವ್ರತ, ಆದರ್ಶ ಭ್ರಾತೃತ್ವ, ಧೀರ ವ್ಯಕ್ತಿತ್ವಗಳು ಗ್ರಾಮೀಣ ಜನರ ಹೃದಯವನ್ನು ಸೂರೆಗೊಂಡಿವೆ. ಈ ಕಾರಣದಿಂದ ಅವರು ಆಡುವ ನಾಟಕಗಳು ಯಕ್ಷಗಾನಗಳು, ಹರಿಕಥಾ ಪ್ರಸಂಗಗಳು ಹೆಚ್ಚಾಗಿ ರಾಮಾಯಣದ ಕಥೆಯನ್ನೇ ಅವಲಂಬಿಸಿವೆ.

ಹೀಗೆ ರಾಮಾಯಣವು ಜನಪದರ ಜೀವನದ ತುಂಬೆಲ್ಲ ಸೇರಿಕೊಂಡು ನಮ್ಮ ಜನಪದ ಗಾಯಕರು ರಾಮಾಯಣದ ಕಥೆಯನ್ನು ಸುದೀರ್ಘ ಕಾವ್ಯಗಳನ್ನಾಗಿ ಹಾಡಿದ್ದಾರೆ. ನಮ್ಮ ನಾಡಿನ ಘನವಿದ್ವಾಂಸರಾದ ಪ್ರೊ.ಎ.ಕೆ. ರಾಮಾನುಜನ್ ಅವರು ಲಿಖಿತರೂಪದ ೩೫೦ಕ್ಕೂ ಹೆಚ್ಚು ರಾಮಾಯಣಗಳನ್ನು ಗುರುತಿಸಿದ್ದಾರೆ. ಆದರೆ ಅಲಿಖಿತ – ಅಂದರೆ – ಮೌಖಿಕ ರಾಮಾಯಣಗಳು ನಮ್ಮ ನಾಡವರ ನಾಲಗೆಯ ಮೇಲೆ ಎಷ್ಟೊಂದು ಹರಿದಾಡುತ್ತಿವೆಯೋ! ಅದಿರಲಿ, ನಾಡಿನ ಎಲ್ಲೆಂದರಲ್ಲಿ ಹೋದ ಹೋದ ಕಡೆಗಳಲ್ಲೆಲ್ಲ ಲಭ್ಯವಾಗುವ ರಾಮಾಯಣವನ್ನು ಕುರಿತ ಐತಿಹ್ಯಗಳು ಮತ್ತು ಪುರಾಣಕಥೆಗಳು ಅವೆಷ್ಟಿವೆಯೋ! ಬಲ್ಲವರ್‍ಯಾರು!

ನಮ್ಮಲ್ಲಿ ರಾಮಾಯಣದ ಕಥೆಯನ್ನು ಹಾಡುವ ಜನಪದ ಗಾಯಕರಿದ್ದಾರೆ. ರಾಮಾಯಣದ ರಸಭರಿತ ಸನ್ನಿವೇಶಗಳನ್ನು ರಮಣೀಯವಾಗಿ ನಿರೂಪಿಸಬಲ್ಲ ವಕ್ತೃಗಳಿದ್ದಾರೆ. ನಾಡಿನ ಊರೂರುಗಳಲ್ಲೆಲ್ಲ ರಾಮಾಯಣದ ಪುಣ್ಯಪುರುಷರ ಗುಡಿಗೋಪುರಗಳಿವೆ. ಅಲ್ಲದೆ ರಾಮಾಯಣದ ಮಹಾನುಭಾವರ ಹೆಸರಿನ ಪುರ ಪಟ್ಟಣಗಳು, ನಗರ ಹಳ್ಳಿಗಳು, ಊರುಕೇರಿ ಕುಪ್ಪೆಕೊಪ್ಪಲುಗಳು ದಂಡಿಯಾಗಿವೆ. ರಾಮಾಯಣದ ಘನವಂತರ ಹೆಸರುಗಳು, ಕೆರೆಕಟ್ಟೆಬಾವಿಗಳು, ನದಿನದ ಕಲ್ಯಾಣಿ ಚಿಲುಮೆ ಜಲಪಾತಗಳು, ಬೆಟ್ಟಗುಡ್ಡ ಕಲ್ಲು ಬಂಡೆಗಳು, ಮರ ಗಿಡ ಫಲಪುಷ್ಪಗಳು

ಪಶುಪಕ್ಷಿ ಪ್ರಾಣಿಗಳು – ಹೀಗೆ ಹೇಳುತ್ತ ಹೋದರೆ – ರಾಮಾಯಣಾವಲಂಬಿತವಾದ ಯಾವ ವಿಷಯ ತಾನೆ ಇಲ್ಲ! ಇಂತೆಲ್ಲ ವಿಷಯಗಳನ್ನೂ ಕುರಿತ ಕಾವ್ಯಗಳು, ಕಥೆಗಳು, ಪುರಾಣ ಕಥೆಗಳು, ಐತಿಹ್ಯಗಳು, ನಂಬಿಕೆಗಳು, ಆಚರಣೆಗಳು, ಆರಾಧನೆಗಳು – ಈ ಎಲ್ಲವುಗಳಲ್ಲೂ ಹರಡಿಕೊಂಡಿರುವ ರಾಮಾಯಣ ಸಂಬಂಧಿ ಮಾಹಿತಿಗಳನ್ನೆಲ್ಲ ವ್ಯಾಪಕವಾದ ಕ್ಷೇತ್ರಕಾರ್ಯದಿಂದ ಸಂಗ್ರಹಿಸಬೇಕಿದೆ. ಅವುಗಳನ್ನೆಲ್ಲ ಶಾಸ್ತ್ರೀಯವಾಗಿ ಸಂಪಾದಿಸಿ ತಲಸ್ಪರ್ಶಿ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಭಾರತದ ಎಲ್ಲಾ ಭಾಷೆಗಳಲ್ಲೂ ಇಂಥ ಮೌಖಿಕ ಪುರಾಣಕಥೆಗಳು ಅಪಾರವಾಗಿವೆ. ಅವುಗಳೆಲ್ಲವನ್ನೂ ಸಂಗ್ರಹಿಸುವ ಸಂಪಾದಿಸುವ ಪ್ರಕಟಿಸುವ ಸಾಹಸ ಏಕವ್ಯಕ್ತಿಯಿಂದಾಗುವಂಥದ್ದಲ್ಲ. ಬಹುವ್ಯಕ್ತಿಗಳು ಈ ಕಾರ್ಯವನ್ನು ಕೈಗೆತ್ತಿಕೊಂಡು ಮಹತ್ಸಾಧನೆಯನ್ನು ಮಾಡಲು ಈ ನನ್ನ ಕಿರುಪ್ರಯತ್ನ ಪ್ರೇರಕವಾದೀತೆಂಬ ಸದಾಶಯ ನನ್ನದು.

ತಂಬೂರಿ ರಾಮಾಯಣ

ಜನಪದ ರಾಮಾಯಣದ ಸಂಗ್ರಹ ಮತ್ತು ಪ್ರಕಟಣೆಗಳ ವಿಚಾರದಲ್ಲಿ ಹೆಮ್ಮೆಪಡುವಷ್ಟು ಕೆಲಸವೇನೂ ಆಗಿಲ್ಲ. ಪ್ರೊ.ರಾಗೌ, ಡಾ.ಪಿ.ಕೆ. ರಾಜಶೇಖರ ಮತ್ತು ಡಾ. ಬಿ.ಎಸ್.ತಲ್ವಾಡಿಯವರು ಈ ಹಿಂದೆ ೧೯೭೩ರಲ್ಲಿ ಪ್ರಕಟಿಸಿದ್ದ 'ಜನಪದ ರಾಮಾಯಣ'ವೇ ಮೊದಲ ಪ್ರಯತ್ನವೆಂದು ಕಾಣುತ್ತದೆ. ತರುವಾಯದಲ್ಲಿ ಹಿ.ಚಿ. ಬೋರಲಿಂಗಯ್ಯನವರ 'ಗೊಂಡರ ರಾಮಾಯಣ', ಮೇಟಿಕೆರೆ ಹಿರಿಯಣ್ಣನವರ 'ಭಾಗವಂತಿಕೆ ಪದಗಳು', ಯಕ್ಷಗಾನ 'ಚಿತ್ರಪಟರಾಮಾಯಣ' ಹಾಗೂ ವಾಗೀಶ್ವರಿ ಶಾಸ್ತ್ರೀಯವರ ಸಂಪ್ರದಾಯದ ಹಾಡುಗಳ ಸಂಪುಟದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಕಥಾನಕಗಳು ಪ್ರಕಟವಾಗಿವೆ. ಇವುಗಳಲ್ಲೆಲ್ಲ ಡಾ.ಬಿ.ಎಸ್. ತಲ್ವಾಡಿಯವರು ಸಂಗ್ರಹಿಸಿರುವ 'ಸಂಪೂರ್ಣ ರಾಮಾಯಣ' ಇದ್ದುದರಲ್ಲಿ ಸ್ವಲ್ಪ ವಿಸ್ತಾರವೆನಿಸುವ ಕಾವ್ಯವಾಗಿದೆ.

ತಂಬೂರಿಯವರ ಸಂಪೂರ್ಣ ರಾಮಾಯಣದಲ್ಲಿ 'ಮಕ್ಕಳ ಫಲಾಪೇಕ್ಷಿಯಾದ ಮಂಡೋದರಿಗಾಗಿ ರಾವಣ ಶಿವನನ್ನು ಕುರಿತು ತಪಸ್ಸು ಮಾಡುವುದು, ಸಂತಾನ ಪ್ರಾಪ್ತಿಗಾಗಿ ಶಿವನು ರಾವಣನ ಕೈಯಲ್ಲಿ ಕೊಟ್ಟ ಮಾವಿನಹಣ್ಣನ್ನು ಮಂಡೋದರಿಗೆ ಕೊಡಲಾಗದೆ ಮಾರ್ಗಾಯಾಸ ತಾಳಲಾರದೆ ರಾವಣನೇ ತಿನ್ನುವುದು, ಇದರಿಂದ ಪುರುಷನಾದ ರಾವಣನೇ ಬಸುರಾಗುವುದು, ಒಂಬತ್ತು ದಿನಕ್ಕೆ ಒಂಬತ್ತು ತಿಂಗಳಾಗಿ ರಾವಣ ಸೀತುದರಿಂದ ಮೂಗಿನಲ್ಲಿ ಹುಟ್ಟಿದ ಮಗಳು ಸೀತೆಯಾಗುವುದು ಇಲ್ಲಿನ ವಿಚಿತ್ರ.

ಈ ಶಿಶುವಿನ ಹುಟ್ಟು ಅಮಂಗಳಕಾರಿ ಎಂದು ಅದನ್ನು ಪೆಟ್ಟಿಗೆಯಲ್ಲಿಟ್ಟು ಮಂಡೋದರಿ ನದಿಯಲ್ಲಿ ತೇಲಿಬಿಡುತ್ತಾಳೆ. ಈ ಪೆಟ್ಟಿಗೆ ಮಿಥಿಲೆಯ ಅರಸ ಜನಕ ಮಹಾರಾಜನಿಗೆ ಸಿಗುತ್ತದೆ. ಹೀಗಾಗಿ ರಾವಣನ ಮಗಳು ಸೀತೆ ಜನಕನ ಮಗಳು ಎನಿಸಿಕೊಂಡು ಜಾನಕಿಯಾಗುತ್ತಾಳೆ.

ವನವಾಸಕ್ಕೆ ಬಂದ ರಾಮಲಕ್ಷ್ಮಣರಲ್ಲಿ ಸ್ವಯಂವರದ ಸವಾಲಾಗಿದ್ದ ಕಬ್ಬಿಣದ ಕಾಗೆಯನ್ನು ಕೊಲ್ಲುವ ಪ್ರಸಂಗ ಜನಪದ ಮಹಾಭಾರತದಲ್ಲೂ ಬಂದಿದೆ. ಈ ಎರಡೂ ಪರಸ್ಪರ ಪ್ರಭಾವಗೊಂಡು ಬಂದವುಗಳಾಗಿರಬಹುದು. ಶನಿಕಥಾ ವಿದ್ವಾಂಸ ಪಿರಿಯಾಪಟ್ಟಣದ ಶ್ರೀನಿವಾಸಯ್ಯ(ರಾಮಣ್ಣ)ನ ಪ್ರಕಾರ ಶಿವಧನುಸ್ಸಿನ ಪ್ರಸಂಗವೇ ಇಲ್ಲಿಲ್ಲ. ಜನಪದ ಮಹಾಭಾರತದಲ್ಲೂ ಮತ್ಸ್ಯಯಂತ್ರ ಭೇದನ ಪ್ರಸಂಗವೂ ಇರದೆ ಅರ್ಜುನ ಶಬ್ದವೇದಿ ಸಹಾಯದಿಂದ ಕಬ್ಬಿಣದ ಕಾಗೆಯನ್ನು ಹೊಡೆದು ಕೊಲ್ಲುತ್ತಾನೆ.

ಸಂಪೂರ್ಣ ರಾಮಾಯಣದಲ್ಲಿ ರಾವಣನು ರಾಮನವೇಷದಲ್ಲಿ ಬಂದು ಸೀತೆಯನ್ನು ವಂಚಿಸುವುದು, ದೇವೇಂದ್ರನು ಗೌತಮನ ವೇಷದಲ್ಲಿ ಬಂದು ಅಹಲ್ಯೆಯನ್ನು ವಂಚಿಸಿದ ಪ್ರಸಂಗವನ್ನು ನೆನಪಿಸುತ್ತದೆ.

ಈ ರಾಮಾಯಣದಲ್ಲಿ ಮಂಡೋದರಿ ಪಾತ್ರವೂ ಭಗ್ನವಾಗಿದೆ. ಅವಳು ರಾಮನನ್ನು ಕಂಡು,

> 'ಪ್ರೀತೀಲಿ ನೀವು ನಾವು ಕೂತ್ಕೊಂಡು ಈಳ್ಯಾವ
> ಮೆದ್ದಾರೆ ನಮ್ಮಕ್ಕರೆ ಪ್ರೀತಿ ಕಳೀತಾದೆ"

ಎಂದು ಹೇಳುವುದು ಹೃದಯ ತಲ್ಲಣಿಸುವಂತೆ ಮಾಡುತ್ತದೆ. ಇದು ಪಂಪರಾಮಾಯಣದ ಉಪರಂಭೆ ಪ್ರಸಂಗವನ್ನು ನೆನಪಿಸುತ್ತದೆ. ಮಂಡೋದರಿಯಿಂದಲೇ ರಾವಣನ ಪ್ರಾಣ ಹುದುಗಿರುವ ಸ್ಥಳ ತಿಳಿಯುವುದು. ಮಂಡೋದರಿಯ ದಾಂಪತ್ಯ ದ್ರೋಹಕ್ಕೆ ದೊಡ್ಡ ಸಾಕ್ಷಿಯಾಗಿ ನಿಲ್ಲುತ್ತದೆ. ಇಂಥ ಕಲ್ಪನೆಗಳು ನಮ್ಮ ಹರಿಕಥೆ ದಾಸರುಗಳಲ್ಲೂ ಸಾಕಷ್ಟಿದೆ.

ಹನುಮಂತನ ಬಾಲಕ್ಕೆ ಹಚ್ಚಿದ ಬೆಂಕಿಯಿಂದ ಲಂಕಾನಗರವು ಹತ್ತಿಕೊಂಡು ಉರಿಯುತ್ತಿರುವಾಗ ರಾವಣ ಅದನ್ನು ಆರಿಸುವ ಕೆಲಸದಲ್ಲಿ ತೊಡಗಿರುತ್ತಾನೆ. ಅಂಥ ಸಂದಿಗ್ಧದಲ್ಲಿಯೂ ರಾವಣನು ಬಿಲ್ಲುಬಾಣಗಳೊಡನೆ ಅಲ್ಲಿಗೆ ಬಂದ ರಾಮನನ್ನು ಕಂಡು ವಿನೀತನಾಗಿ ತನ್ನದು ತಪ್ಪಾಯಿತೆಂದು ಬೇಡಿಕೊಂಡರೂ ಕ್ಷಮಿಸುವ ಔದಾರ್ಯವನ್ನು ತೋರದ ರಾಮ ಪರಸತೀ ವ್ಯಾಮೋಹಿಯನ್ನು ಕೊಲ್ಲುವ ಕ್ರೌರ್ಯವನ್ನು ತೋರಿ ನಿಶಿತಬಾಣವನ್ನು ಪ್ರಯೋಗಿಸಿ ರಾವಣನನ್ನು ಕೊಲ್ಲುತ್ತಾನೆ. ದುರಂತ ಪಾತ್ರಗಳನ್ನು ಮಹಾನುಭಾವರನ್ನಾಗಿ ಚಿತ್ರಿಸಿರುವ ನಮ್ಮ

ಕವಿಗಳ ಸುಮಾರ್ಗದಿಂದಾಗಿ ನಾವು ಸ್ವಲ್ಪಮಟ್ಟಿಗೆ ವಿಚಲಿತರಾಗುವುದರಲ್ಲಿ ಆಶ್ಚರ್ಯಪಡಬೇಕಾದ ಅಗತ್ಯವಿಲ್ಲ. ಆದರೆ ರಾಮನ ಪಾತ್ರ ಕುಸಿಯುತ್ತದೆ.

ತಂಬೂರಿ ರಾಮಾಯಣದಲ್ಲಿಯೂ ಲವಕುಶರ ಕಥೆ ಇದ್ದು ಅಸ್ಪಷ್ಟವಾಗಿ ನಿರೂಪಿತವಾಗಿದೆ. ಅಲ್ಲದೆ ಲವಕುಶರ ಪಾತ್ರವನ್ನು ಉಜ್ವಲಗೊಳಿಸುವ ಉದ್ದೇಶದಿಂದ ಅವರ ಬಾಣಹತಿಗೆ ರಾಮಲಕ್ಷ್ಮಣ ಭರತಶತ್ರುಘ್ನರೆಲ್ಲರೂ ಸಾಯುತ್ತಾರೆ. ಆದರೆ ಈ ಎಲ್ಲರನ್ನು ಈಶ್ವರ ಪ್ರತ್ಯಕ್ಷನಾಗಿ ಬದುಕಿಸುತ್ತಾನೆ. ಸೀತಾರಾಮರ ಪಟ್ಟಾಭಿಷೇಕದಿಂದ ಕತೆ ಸುಖಾಂತವಾಗುತ್ತದೆ.

ಗೊಂಡರ ರಾಮಾಯಣ

ಹಿ.ಚಿ. ಬೋರಲಿಂಗಯ್ಯನವರು ಪ್ರಕಟಿಸಿರುವ ಗೊಂಡರ ರಾಮಾಯಣ ಒಂದು ಅಪೂರ್ವ ಸಂಕಲನವಾಗಿದೆ. ನಮ್ಮಲ್ಲಿ ಜನಪದ ರಾಮಾಯಣದ ಬಗೆಗೆ ಆಗಬೇಕಿರುವ ಕೆಲಸಕ್ಕೆ ಈ ಸಂಕಲನ ಅನನ್ಯವೂ ಅಪೂರ್ವವೂ ಆದ ಕೊಡುಗೆಯಾಗಿದೆ. ಹಲವಾರು ವೈಶಿಷ್ಟ್ಯಗಳಿರುವ ಗೊಂಡರ ರಾಮಾಯಣವು ಜನಪದ ಮೂಲದ ರಾಮಾಯಣವನ್ನು ಅಧ್ಯಯನ ಮಾಡುವವರಿಗೆ ಒಂದು ಅಮೂಲ್ಯ ನಿಧಿಯಂತಿದೆ.

ಅಯೋಧ್ಯೆಯನ್ನಾಳುವ ದಶರಥನಿಗೆ ಮೂವರು ಪತ್ನಿಯರಿದ್ದರೂ ಸಂತಾನ ಫಲವಿಲ್ಲ. ಅವನೊಮ್ಮೆ ಬೇಟೆಗೆ ಹೋಗಿದ್ದಾಗ ಆನೆಯನ್ನು ಹೊಡೆಯುತ್ತಾನೆ. ಆ ಆನೆಯಾದರೋ 'ನಿನ್ನ ಮಗನಿಂದಲೇ ನೀನು ಸಾಯಿ!' ಎಂದು ಶಪಿಸುತ್ತದೆ. ಅದಕ್ಕೆ ದಶರಥನು 'ನನಗೆ ಮಕ್ಕಳೇ ಇಲ್ಲ. ಇನ್ನು ಸಾಯುವುದೆಲ್ಲಿ ಬಂತು!' ಎಂದು ನಿರುಮ್ಮಳದಿಂದ ಉಸಿರಾಡುತ್ತಾನೆ.

ಹೀಗಿರುವಾಗ ಒಮ್ಮೆ ದಶರಥನು ಕೈಕೆಯೊಡನೆ ಚಂದ್ರಲೋಕವನ್ನು ನೋಡಲು ಮಾಯಾರಥದಲ್ಲಿ ಹೋಗುತ್ತಿರುವಾಗ ರಥದ ಚಕ್ರ ದೋಷಕ್ಕೆ ಒಳಗಾಗುತ್ತಾನೆ. ಕೈಕೆ ಅದನ್ನು ಉಪಾಯದಿಂದ ತಪ್ಪಿಸಿ ದಶರಥನ ಕೃಪೆಗೆ ಪಾತ್ರಳಾಗುತ್ತಾಳೆ. ಅನಂತರದಲ್ಲಿ ಕೌಸಲ್ಯೆಗೆ – ರಾಮ, ಕೈಕೆಗೆ – ಭರತ, ಸುಮಿತ್ರೆಗೆ – ಭರತ ಶತ್ರುಘ್ನರು ಹುಟ್ಟುತ್ತಾರೆ.

ಶ್ರೀರಾಮನಿಗೆ ಮದುವೆಗೆ ಮುನ್ನವೇ ವನವಾಸ ಪ್ರಾಪ್ತಿಯಾಗುತ್ತದೆ. ಆಗ ರಾಮಲಕ್ಷ್ಮಣರು ಮಿಥಿಲೆಗೆ ಬರುತ್ತಾರೆ. ಅಲ್ಲಿ ಬಿಲ್ಲಿನ ಹಬ್ಬ ನಡೆಯುತ್ತಿರುತ್ತದೆ. ಈ ಹಬ್ಬದಲ್ಲಿ ಆಕಾಶ ಕಾಗೆಯನ್ನು ಕೊಂದ ಲಕ್ಷ್ಮಣನು ಸೀತೆಯನ್ನು ಗೆಲ್ಲುತ್ತಾನೆ. ಗೆದ್ದು ತಂದ ಸೀತೆಯನ್ನು ಅಣ್ಣ ರಾಮನಿಗೆ ಮದುವೆ ಮಾಡಿಸುತ್ತಾನೆ. ಸೀತೆಯನ್ನು

ದಕ್ಕಿಸಿಕೊಳ್ಳಲಾಗದ ರಾವಣನು 'ಸೀತೆಯನ್ನು ಮೂರು ದಿನವಾದರೂ ನಾನು ಆಳದಿದ್ದರೆ ನಾನು ಲಂಕಾಪಟ್ಟಣದ ರಾವಣನೇ ಅಲ್ಲ!' ಎಂದು ಪ್ರತಿಜ್ಞೆ ಮಾಡುತ್ತಾನೆ.

ರಾಮಲಕ್ಷ್ಮಣರಿಬ್ಬರೂ ವನವಾಸಕ್ಕೆ ಹೊರಟುನಿಂತಾಗ ಸೀತೆ ತಾನೂ ಬರುವುದಾಗಿ ಹಟ ಮಾಡಿ ಅವರೊಡನೆ ಹೊರಟು ನಿಲ್ಲುತ್ತಾಳೆ. ಇತ್ತ ರಾವಣನು ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳಲು ಶೂರ್ಪನಖಿಯ ಸಹಾಯ ಕೋರುತ್ತಾನೆ. ಬೆಡಗುಗಾತಿಯಾಗಿ ಶೂರ್ಪನಖಿಯು ರಾಮನ ಬಳಿಗೆ ಬಂದಾಗ ರಾಮ ಅವಳನ್ನು ತಿರಸ್ಕರಿಸಿ ಲಕ್ಷ್ಮಣನ ಬಳಿಗೆ ಕಳಿಸುತ್ತಾನೆ. ಲಕ್ಷ್ಮಣ ಅವಳ ಮೂಗು ಮತ್ತು ಮೊಲೆ ತೊಟ್ಟುಗಳನ್ನು ಕೂದು ಅವಮಾನ ಮಾಡುತ್ತಾನೆ. ಇದರಿಂದ ಮತ್ತೂ ಕ್ರುದ್ಧನಾದ ರಾವಣ ಸೀತೆಗಾಗಿ ಮಾರೀಚ ಮೃಗವನ್ನು ಅಟ್ಟುತ್ತಾನೆ. ಸ್ವರ್ಣಮೃಗದ ಚರ್ಮದಿಂದ ಕುಪ್ಪಸ ಹೊಲೆದುಕೊಳ್ಳುವಂತೆ ಸೀತೆಯನ್ನು ಪ್ರೇರೇಪಿಸುತ್ತದೆ. ಈ ಸನ್ನಿವೇಶ ಸೀತಾಪಹರಣಕ್ಕೆ ಕಾರಣವಾಗುತ್ತದೆ.

ಅನಂತರ ವಾನರ ಪ್ರಪಂಚ – ಸೀತಾನ್ವೇಷಣೆ – ಯುದ್ಧ – ವಿಭೀಷಣನ ಬೋಧೆ ರಾವಣನಿಗೆ ಅಪಥ್ಯ – ಇದರಿಂದ ವಿಭೀಷಣನು ರಾಮನ ಪಕ್ಷಕ್ಕೆ ಸೇರ್ಪಡೆ, ಅಲ್ಲದೆ ಅವನೇ ರಾವಣನ ಎದೆಯ ಭಾಗದಲ್ಲಿರುವ ಅಮೃತಗಿಂಡಿ ರಹಸ್ಯ ತಿಳಿಸಿ, ಆ ಗಿಂಡಿಗೆ ರಾಮ ಬಾಣ ಬಿಡುವಂತೆ ಮಾಡಿ ರಾವಣನನ್ನು ಕೊಲ್ಲಿಸುತ್ತಾನೆ. ರಾವಣನನ್ನು ಕೊಂದು ಸೀತೆಯನ್ನು ತಂದುದ್ದೇನೋ ಆಯಿತು. ಆದರೆ ಸೀತೆ ಅಯೋಧ್ಯೆಗೆ ಹಿಂದಿರುಗಲು ಒಪ್ಪುವುದಿಲ್ಲ. "ಭೂಮಿ ನನ್ನ ತಾಯಾಗಿದ್ದರೆ ಅವಳು ನನ್ನನ್ನು ತನ್ನಲ್ಲಿ ಸೇರಿಸಿಕೊಳ್ಳಲಿ!" ಎನ್ನುತ್ತಾಳೆ. ಸೀತೆ ಭೂಮಿಯ ಮಗಳಾಗಿ ಭೂಮಿಯಲ್ಲಿ ಐಕ್ಯಳಾಗುತ್ತಾಳೆ.

ಸುಣ್ಣುಮಾರ

ಕೊಡಗು ಜಿಲ್ಲೆಯ ಸೋಮವಾರಪೇಟೆಯ ಕುಶಾಲನಗರಕ್ಕೆ ಸಮೀಪದಲ್ಲಿ ಕೂಡಿಗೆ ಎಂಬ ಗ್ರಾಮವಿದೆ. ಈ ಗ್ರಾಮದ ಹತ್ತಿರದಲ್ಲೆ ಒಂದು ಬೆಟ್ಟವಿದೆ. ಆ ಬೆಟ್ಟವನ್ನು ಸುಣ್ಣುಮಾರನ ಬೆಟ್ಟ ಎಂದು ಕರೆಯುತ್ತಾರೆ. ಇಲ್ಲಿ ಸುಣ್ಣುಮಾರನ ದೇವಾಲಯ ಇರುವುದಲ್ಲದೆ ವರ್ಷಕ್ಕೊಂದಾವರ್ತಿ ಜಾತ್ರೆಯೂ ನಡೆಯುತ್ತದೆ. ಈಗ ದೇವರಾಗಿ ಆರಾಧನೆಗೊಳ್ಳುತ್ತಿರುವ ಸುಣ್ಣುಮಾರ ಯಾರು ಎಂದು ಪ್ರಶ್ನಿಸಿದರೆ ನಂಬಲೂ ಆಗದಂತಹ ಮಹದಾಶ್ಚರ್ಯವೊಂದು ಕಾದಿದೆ. ಆಶ್ಚರ್ಯ ಇನ್ನೇನೂ ಅಲ್ಲ ; ಆ ಸುಣ್ಣುಮಾರ ಶೂರ್ಪನಖಿಯ ಮಗ ಶಂಬೂಕ ಎಂಬುದು.

ಶೂರ್ಪನಖಿಯಾದರೋ ರಾವಣನ ತಂಗಿ. ಅವಳನ್ನು ಪಾತಾಳಲೋಕದ ಭೇತಾಳಪುರದ ರಾಜ ಹಲ್ಲೂರನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ರಾವಣನು

ಜಗತ್ತಿನ ರಾಜಮಹಾರಾಜರನ್ನೆಲ್ಲ ಸೋಲಿಸಿ ತನಗೆ ತಲೆಬಾಗುವಂತೆ ಮಾಡಿಕೊಂಡು ಬರುತ್ತಿದ್ದ. ಅದೇ ರೀತಿ ಪಾತಾಳಲೋಕಕ್ಕೆ ಹೋಗಿ ತನ್ನ ಭಾವ ಹಲ್ಲೂರ ತನಗೆ ತಲೆಬಾಗಿ ಶರಣಾಗತನಾಗಬೇಕೆಂದು ಬಯಸಿದ. ಆದರೆ ಹಲ್ಲೂರ ರಾವಣನಿಗೆ ತಲೆಬಾಗಲು ಧಿಕ್ಕರಿಸಿ ಸೆಟೆದು ನಿಂತ. ಇದರಿಂದ ಕೋಪಿಷ್ಠನಾದ ರಾವಣನು ಬುಸುಗುಡುತ್ತ ಹಲ್ಲೂರನ ಮೇಲೆ ಕೈಮಾಡಲು ಹೋದ. ಮಹಾಕ್ರೂರಿಯಾದ ರಾವಣನು ತಂಗಿಯ ಗಂಡನೆಂದಾಗಲಿ ಬಾಂಧವ್ಯದಲ್ಲಿ ತನ್ನ ಭಾವನೆಂದಾಗಲಿ ಲೆಕ್ಕಿಸದೆ ಅಮಾನುಷ ರೀತಿಯಲ್ಲಿ ಅವನನ್ನು ಕೊಂದ. ತನ್ನ ತಂಗಿಯನ್ನೇ ವಿಧವೆಯನ್ನಾಗಿಸಿದ.

ರಾಕ್ಷಸಕುಲ ಚಕ್ರವರ್ತಿಯಾದ ರಾವಣನನ್ನು ಎದುರಿಸುವ ಧೈರ್ಯವಿಲ್ಲದ ಶೂರ್ಪನಖಿ ಮಡುಗಟ್ಟಿದ್ದ ದುಃಖವನ್ನು ತನ್ನ ಒಡಲೊಳಗೆ ಅಡಗಿಸಿಕೊಂಡು ಕೊರಗಿದಳು. ಆದರೆ ಅವಳು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತನ್ನ ಮಗ ಸುಣ್ಣುಮಾರನನ್ನು ಕಂಡು ತನ್ನ ಅಳಲನ್ನು ತೋಡಿಕೊಂಡಳು. ರಾವಣನ ಮೇಲೆ ಸೇಡು ತೀರಿಸಿಕೊಳ್ಳಲು ನಿನ್ನಿಂದ ಮಾತ್ರ ಸಾಧ್ಯ ಎಂದು ಹುರಿದುಂಬಿಸಿದಳು. ರಾವಣನನ್ನು ಕೊಲ್ಲಬಲ್ಲ ಚಂದ್ರಾಯುಧವನ್ನು ಪಡೆಯಲು ದೇವೇಂದ್ರನನ್ನು ಕುರಿತು ತಪಸ್ಸು ಮಾಡು ಎಂದು ಪ್ರಚೋದಿಸಿದಳು. ತಂದೆಯನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದರೆ ತಾಯಿ ಶೂರ್ಪನಖಿ ಹೇಳಿದಂತೆ ಕೇಳುವುದು ಅನಿವಾರ್ಯವಾಗಿತ್ತು.

ಸುಣ್ಣುಮಾರನು ತಪಸ್ಸಿಗೆ ನಿಂತಾಗ ಅವನ ಮೇಲ್ಲೆಲ್ಲ ಹುತ್ತ ಬೆಳೆಯಿತು. ಅವನ ಉಗ್ರ ತಪಸ್ಸಿಗೆ ಮೆಚ್ಚಿದ ದೇವೇಂದ್ರ ಚಂದ್ರಾಯುಧವನ್ನು ಸುಣ್ಣುಮಾರನ ಕೈಸೇರುವಂತೆ ಸ್ವರ್ಗದಿಂದ ಭೂಲೋಕದ ಕಡೆಗೆ ಬಿಟ್ಟ. ಚಂದ್ರಾಯುಧವು ಆಕಾಶಮಾರ್ಗದಲ್ಲಿ ಭೂಮಿಗಿಳಿದು ಬರುತ್ತಿರುವ ಸಮಯಕ್ಕೆ ಸರಿಯಾಗಿ ಲಕ್ಷ್ಮಣನು ಕಂದಮೂಲ ಫಲಗಳನ್ನು ಹುಡುಕುತ್ತ ಉದ್ದವಾಗಿ ಬೆಳೆದಿದ್ದ ಮೂಗು ಹುತ್ತದ ಬಳಿಗೆ ಬಂದ. ಮೇಲಿನಿಂದ ಇಳಿಯುತ್ತಿರುವ ಚಂದ್ರಾಯುಧವನ್ನು ನೋಡಿ ಲಕ್ಷ್ಮಣನು ಕೈಚಾಚಿದ. ಹುತ್ತದೊಳಗಿರುವ ಸುಣ್ಣುಮಾರನೂ ಕೈಚಾಚಿದ್ದ. ಆ ಚಂದ್ರಾಯುಧಕ್ಕೆ ಯಾರ ಕೈ ಸೇರಬೇಕೆಂದು ತಿಳಿಯದೆ ಗೊಂದಲಗೊಂಡು ಹಿಂದಿರುಗಿ ದೇವೇಂದ್ರನ ಬಳಿ ಹೋಗಿ 'ನಾನು ಯಾರ ಕೈಗೆ ಸೇರಲಿ?' ಎಂದು ಕೇಳಿತು.

ಅದಕ್ಕೆ ದೇವೇಂದ್ರನು 'ಯಾರು ಮುಂದೆ ಕರಿತಾರೋ ಅವ್ರ ಕೈಗೆ ಹೋಗು' ಅಂದ.

ಚಂದ್ರಾಯುಧ ಲಕ್ಷ್ಮಣನ ಕೈಸೇರಿತು. ಅದರ ಹರಿತವನ್ನು ಪರೀಕ್ಷಿಸಲು ಬಯಸಿದ ಲಕ್ಷ್ಮಣನು ಅರಿವಿಲ್ಲದೆ ಮೂಗುಹುತ್ತವನ್ನು ಕೊಚ್ಚಿದ. ಪಾಪ,

ಹುತ್ತದೊಳಗಿದ್ದ ಸುಣ್ಣುಮಾರನ ಕತ್ತು ಕತ್ತರಿಸಿ ಕೆಳಕ್ಕೆ ಬಿತ್ತು! ಈ ವಿಚಿತ್ರ ಸಂಗತಿಯನ್ನು ಲಕ್ಷ್ಮಣ ರಾಮನಿಗೆ ತಿಳಿಸಿದ. ರಾಮನು ಇದೆಲ್ಲ ರಾಕ್ಷಸರ ಮಾಯವಿರಬಹುದೆಂದು ಹೇಳಿ ಸುಮ್ಮನಾದ.

ತನ್ನ ಮಗನ ತಪಸ್ಸಿನ ಸಿದ್ಧಿ ಇದೆಂದು ತಿಳಿದ ಶೂರ್ಪನಖಿ ಸಂಭ್ರಮದಿಂದ ಓಡೋಡಿ ಬಂದಳು. ಅವಳು ಅಂದುಕೊಂಡಿದ್ದೇ ಒಂದು ; ಆದರೆ ಅಲ್ಲಿ ಕಂಡದ್ದೇ ಬೇರೊಂದು. ಗಂಡನ ಸಾವಿನಿಂದಲೇ ಚೇತರಿಸಿಕೊಂಡಿರದಿದ್ದ ಶೂರ್ಪನಖಿಯು ಮಗನ ಸಾವನ್ನು ಕಂಡು ಎದೆ ಒಡೆದುಹೋದಂತಾದಳು. ಅವಳ ಆಸೆ-ಆಕಾಂಕ್ಷೆಗಳೆಲ್ಲವೂ ನುಚ್ಚುನುರಿಯಾಗಿ ಹೋಗಿದ್ದವು. ಲೋಹಿತಾಶ್ವನನ್ನು ಕಳೆದುಕೊಂಡಿದ್ದ ಚಂದ್ರಮತಿಯ ದುಃಖಕ್ಕಿಂತ ಅವಳ ದುಃಖವೇನೂ ಕಡಿಮೆಯಲ್ಲ. ಇಬ್ಬರೂ ತಾಯಂದಿರೇ ತಾನೆ?

"ನನ್ನೆದೆ ಹಾಲು ಕುಡ್ದು ಬೆಳೆದಲ್ಲೊ ಸುವ್ವಿಲಾಲಿ
ನನ್ನ ಅಗಲುಂಡು ಬೆಳೆದಲ್ಲೊ"

ಎಂದು ನೆನೆನೆನೆದುಕೊಂಡು ಅತ್ತಳು. ಅವನ ಸಾವಿಗೆ ತಾನೇ ಪರೋಕ್ಷ ಕಾರಣವೇನೋ ಎಂದು

ನಿನ್ನವ್ವನ ತಿನ್ನ ಹಾಳುಮುಂಡೆ ಸುವ್ವಿಲಾಲಿ
ನಿನ್ನ ಬಾಳುಗೆಡ್ಸಿದ್ಮುಂಡೆಯಲ್ಲೊ"

ಎಂದು ತನ್ನನ್ನು ತಾನೆ ನಿಂದಿಸಿಕೊಳ್ಳುತ್ತ ತನ್ನ ಕಂದನ ಅಂದ ಚಂದವನ್ನೆಲ್ಲ ನೆನೆದಳು.

ಹೆಚ್ಚಾಳಕಾರ ಮಗನೆ ಸುವ್ವಿಲಾಲಿ
ನಿನ್ನ – ಹುಚ್ಚುಮುಂಡೆ ಅವ್ವನ್ನೋಡೊ
ನಿನ್ಗೆ – ಸಾವುರಾನೆ ಸಕ್ತಿಯಲ್ಲೊ
ನಿನ್ನ – ತೋಳುದ್ದ ತೊಡೆಯುದ್ದ

ಹೀಗೆ ವರ್ಣಿಸುತ್ತ ದ್ವೇಷದ ದಳ್ಳುರಿಯಾಗಿ

ನಿನ್ನ – ಕೊಂದೋನು ಯಾರೊ ಕಾಣೆ ಸುವ್ವಿಲಾಲಿ
ಅವನ – ರಕ್ತಾವ ಕುಡಿತೀನಿ
ಅವನ – ಕಳ್ಳಾನೆ ಬಗೀತೀನಿ
ಅವನ – ಖಂಡಾವ ಕಡಿತೀನಿ
ಅವನ – ಕಣ್ಣುಗುಡ್ಡೆ ನುಂಗುತೀನಿ
ಅವನ – ನಲ್ಲೀಯ ಊಪುತೀನಿ
ಅವನ – ಓಂಸಾವ ತೊಡಿತೀನಿ

ಎಂದು ಶಪಥ ಮಾಡುತ್ತಿರುವಾಗ ನೇರಿಳೆ ಕೊಂಬೆಯ ಮೇಲಿದ್ದ ಕಾಗೆಯೊಂದು ಸುಣ್ಣುಮಾರನನ್ನು ಕೊಂದವನು ಬೇರೆ ಯಾರೂ ಅಲ್ಲ ; ರಾಮನ ತಮ್ಮ ಲಕ್ಷ್ಮಣ ಎಂದು ತಿಳಿಸುತ್ತದೆ. ಆ ರಾಕ್ಷಕಾಗೆಯನ್ನು ಕುರಿತು ಶೂರ್ಪನಖಿ

"ಆಗೋ ನಮ್ಮ ಕಷ್ಟಾಕೆ ಸುವ್ವಿಲಾಲಿ
ಹೋಗೋ ರಾಕ್ಷಕಾಗೆ
ಲಕ್ಷ್ಮಣನನ್ನು ಕೊಕ್ಕಿನಲ್ಲಿ ಕುಕ್ಕಿ ಸಾಯಿಸು"

ಎಂದು ಕೇಳಿಕೊಳ್ಳುತ್ತಾಳೆ. ಆ ರಾಕ್ಷಕಾಗೆ ಶೂರ್ಪನಖಿಗೆ ಸಹಾಯ ಮಾಡಲು ಲಕ್ಷ್ಮಣನನ್ನು ಹುಡುಕಿಕೊಂಡು ಬಂದು ಅರಣ್ಯದ ನಡುವೆ ಸೀತೆಯನ್ನು ಕಂಡು ಅವಳನ್ನು ಕುಕ್ಕಲು ಬಂತು. ರಾಮಲಕ್ಷ್ಮಣರು ಅದನ್ನು ಓಡಿಸಲು ಬಂದಾಗ ಅವರನ್ನು ಕುಕ್ಕಲು ಮೊದಲಾಯಿತು. ರಾಮನಿಗೆ ಕೋಪ ಬಂದು ಬಾಣದಿಂದ ಅದನ್ನು ಹೊಡೆದಾಗ ಅದು ರಾಮನಿಗೆ ಶರಣಾಗಿ ತಪ್ಪನ್ನೊಪ್ಪಿಕೊಂಡು ಹಿಂದಕ್ಕೆ ಹೊರಟಿತು.

ಹೀಗೆ ಹಿಂದಕ್ಕೆ ಬಂದ ಕಾಗೆ ರಾಮಲಕ್ಷ್ಮಣ ಸೀತೆಯರ ವಿಚಾರವನ್ನು ಶೂರ್ಪನಖಿಗೆ ತಿಳಿಸಿತು.

"ಅವ್ರ – ಸೈವಾಸ ಬ್ಯೇಡವವ್ವ ಸುವ್ವಲಾಲಿ
ನೀನಲ್ಲೀಗೆ ಹೋಗಬೇಡ"

ಎಂದು ಬುದ್ಧಿ ಹೇಳಿತು. ಆದರೆ ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಕ್ಕಿತು ಎನ್ನುವಂತೆ ಕಾಗೆಯ ಮಾತನ್ನು ಮೀರಿ ಶೂರ್ಪನಖಿಯು ಹೋದುದರಿಂದ ಮುಂದಿನ ಅನಾಹುತ ಪರಂಪರೆಗೆ ಕಾರಣವಾಯಿತು.

ಶಿಷ್ಟರಾಮಾಯಣಗಳಲ್ಲಿ ಕಂಡುಬರುವ ಶಂಬೂಕನೇ ಈ ಸುಣ್ಣುಮಾರನೆಂದು ಹೇಳಬಹುದಾದರೂ ಅಂಥಾ ಹೊಂದಾಣಿಕೆ ಕಂಡುಬರುವುದಿಲ್ಲ. ಅಲ್ಲದೆ ಕೆಲ ವಿಚಾರಗಳ ಸಾಮ್ಯತೆಯನ್ನು ನಿರಾಕರಿಸುವಂತೆಯೂ ಇಲ್ಲ. ಜೈನ ರಾಮಾಯಣದಲ್ಲಿ ಸುಣ್ಣುಮಾರನ ಕತೆಯನ್ನು ಹೋಲುವ ಪ್ರಸಂಗವೊಂದನ್ನು ಗುರುತಿಸುವ ಸಾಧ್ಯತೆಯಿದೆ. ಪಂಪರಾಮಾಯಣದಲ್ಲಿ ಲಕ್ಷ್ಮಣನು ಕೊಂದ ಚಂದ್ರನಖಿಯ ಮಗನ ಪ್ರಸಂಗವನ್ನೇ ಸುಣ್ಣುಮಾರನ ಕತೆ ಹೋಲುತ್ತದೆ.

ಸುಣ್ಣುಮಾರನ ಕತೆಯ ಉಳಿದೆಲ್ಲ ಘಟನೆಗಳು ತನ್ನ ಮಗನನ್ನು ಕೊಂದವರ ಮೇಲೆ ಹಗೆಯನ್ನು ಸಾಧಿಸುವ ಶೂರ್ಪನಖಿಯ ವಕ್ರಬುದ್ಧಿಯ ವಿವರಗಳಾಗಿವೆ. ಈ ಕಾವ್ಯವನ್ನು ಹೇಳಿದ ಸಾವಿತ್ರಮ್ಮ ಕುಶಾಲನಗರದ ಸಮೀಪದ ಕೂಡಿಗೆಯವರು. ಕೂಡಿಗೆಯ ಸಮೀಪದಲ್ಲಿ ಸುಣ್ಣುಮಾರನ ಬೆಟ್ಟವಿದೆ. ಅಲ್ಲಿ ಪೂಜೆ ಪುರಸ್ಕಾರಗಳಿರುವುದಲ್ಲದೆ ವರ್ಷಂಪ್ರತಿ ಜಾತ್ರೆಯೂ ನಡೆಯುತ್ತದೆ. ಸುಣ್ಣುಮಾರ ತಪಸ್ಸು ಮಾಡುತ್ತಿದ್ದ ಸ್ಥಳ ಅದೆಂಬುದು ಅಲ್ಲಿನ ಜನರ ನಂಬಿಕೆ. ಸುಣ್ಣುಮಾರನ ಕಥೆ

ಇತಿಹಾಸದಂತಾಗಲಿ ಐತಿಹ್ಯದಂತಾಗಲಿ ಕಾಣದೆ ಈಗಾಗಲೆ ಅದು ಪುರಾಣವಾಗಿ ದೈವಿಕ ಆವರಣವನ್ನು ಸೃಷ್ಟಿಸಿಕೊಂಡಿದೆ. ಶೂರ್ಪನಖಿಯ ಮಗ ಸುಣ್ಣುಮಾರ ದೇವರಾಗಿದ್ದಾನೆ ಎನ್ನುತ್ತಿರುವಾಗ ಥಟ್ಟನೆ ಮಂಡ್ಯಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ರಾವಣೇಶ್ವರ ದೇವಾಲಯದ ನೆನಪಾಗುತ್ತದೆ! ಕೋಲಾರ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ರಾವಣನ ಗುಡಿಗಳಿದ್ದು ಪೂಜೆ ಜಾತ್ರೆ ಉತ್ಸವಗಳು ನಡೆಯುತ್ತವೆ. ಮಳವಳ್ಳಿ ತಾಲ್ಲೂಕಿನಲ್ಲಿ ಶೂರ್ಪನಖಿ ರಾಕಾಸಮ್ಮ ಎಂಬ ಹೆಸರಿನಿಂದ ಆರಾಧನೆಗೊಳ್ಳುತ್ತಿದ್ದಾಳೆ.

ಲವಕುಶರ ಕಾಳಗ

ಕಿಳ್ಳೇಕ್ಯಾತರು ರಾಮನ ಕಾಲದ ಅಂಬಿಗ ಗುಹನ ಸಂತತಿಯವರೆಂದು ಹೇಳುತ್ತಾರೆ. ಗೊಂಬೆರಾಮರೆಂಬ ಹೆಸರಿನ ಕಿಳ್ಳೇಕ್ಯಾತರು ಆಡುವ ಗೊಂಬೆಯಾಟವೇ ಸೀತಾಪರಿತ್ಯಾಗದ ಅಥವಾ ಲವಕುಶರ ಕಾಳಗದ ಮೂಲ ಎಂದು ಕಾಣುತ್ತದೆ. ಇಂಥದೇ ಕಥೆಯನ್ನು ಆಧರಿಸಿರುವ ಪದ್ಮಶಾಲೆ ತಿಮ್ಮಣ್ಣನ "ಕುಮಾರ ಕಾಳಗ" ಇದೆ. ಹೆಳವನಕಟ್ಟೆ ಗಿರಿಯಮ್ಮನ "ಲವಕುಶರಕಾಳಗ" ಇದೆ. ಎಲ್ಲಕ್ಕೂ ಹೆಚ್ಚಾಗಿ ಯಕ್ಷಗಾನದಲ್ಲಿರುವ "ಚಿತ್ರಪಟ ರಾಮಾಯಣ" ಸೀತಾಮಾತೆಯ ಬಗೆಗಿರುವ ನಮ್ಮ ಕಲ್ಪನೆಯನ್ನು ಛಿದ್ರಗೊಳಿಸುತ್ತದೆ.

ಸೀತೆ ಶುದ್ಧಶೀಲೆಯೆಂದು ಸಾಬೀತುಪಡಿಸಲು ಶ್ರೀರಾಮ ಅಯೋಧ್ಯೆಯಲ್ಲಿ ಸೀತೆ ಅಗ್ನಿಪ್ರವೇಶ ಮಾಡುವ ಅಗ್ನಿದಿವ್ಯಕ್ಕೆ ಸಿದ್ಧತೆ ನಡೆಸುತ್ತಾನೆ. ಸೀತೆಯು ಅಗ್ನಿಪ್ರವೇಶ ಮಾಡಿದ ಕೂಡಲೆ ಅಯೋಧ್ಯೆಯೇ ಹತ್ತಿಕೊಂಡು ಉರಿಯಲಾರಂಭಿಸುತ್ತದೆ. ಆಗ ಶ್ರೀರಾಮ ಆ ಕೂಡಲೆ ಅಗ್ನಿಪ್ರವೇಶ ಮಾಡಿ ಸೀತೆಯನ್ನು ಅಗ್ನಿಕುಂಡದಿಂದ ಮೇಲೆತ್ತಿ ತಂದ ಕೂಡಲೆ ಅಯೋಧ್ಯೆ ತಣ್ಣಗಾಗುತ್ತದೆ. ಆದರೆ ಅಗಸನೊಬ್ಬನ ವ್ಯಂಗದ ಮಾತುಗಳು ಸೀತಾಪರಿತ್ಯಾಗಕ್ಕೆ ಕಾರಣವಾಗುತ್ತವೆ. ಮುಂದೆ ಲವಕುಶರ ಕಾಳಗದ ಕಥೆಯಾಗಿ ಹಬ್ಬಲು ಕಾರಣವಾಗುತ್ತದೆ. ವೃತ್ತಿಗಾಯಕರಾದ ದೇವರಗುಡ್ಡರು ಹಾಗೂ ನೀಲಗಾರರು ಈ ಕಥೆಯನ್ನು ಸೊಗಸಾಗಿ ಹಾಡುತ್ತಾರೆ. ಶೇಷರಾಮಾಯಣವು ಗ್ರಾಮೀಣ ಸೊಗಡಿನ ರಾಮಾಯಣವಾಗುವುದು ಇಲ್ಲಿನ ವಿಶೇಷ.

ಗರ್ಭಿಣಿ ಸೀತೆ ಬಯಸಿದ ಹುಣಸೇಹಣ್ಣು ತರಲು ಹೋದ ಶ್ರೀರಾಮನು ಮರವನ್ನು ಹತ್ತಿ ಹುಣಸೇಕಾಯಿ ಕೀಳುತ್ತಿರುವಾಗ ಅಗಸನ ಅಪನಿಂದನೆಯನ್ನು ಕೇಳಿ ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋಗಿ ಶಿರಃಛೇದ ಮಾಡಿ ಬರಲು ಲಕ್ಷ್ಮಣನಿಗೆ ಹೇಳಿ ಕಳಿಸುತ್ತಾನೆ. ಆದರೆ ರಾಮನಿಗೆ ಸೀತೆ ನಿರಪರಾಧಿಯೆಂಬುದು ಗೊತ್ತಿತ್ತು. ಲೋಕಾಪವಾದದ ಬೆಂಕಿ ಅವನನ್ನು ಧಗಧಗನೆ ಸುಡುತ್ತಿತ್ತು. ವಿಧಿಯ ಕೈಗೊಂಬೆಯಾಗಿ ಸೀತಾಮಾತೆಯನ್ನು ಅರಣ್ಯಕ್ಕೆ ಅಟ್ಟಿ ತನ್ನ ಅಪರಾಧಕ್ಕೆ ತಾನೇ ತೀವ್ರವಾದ ಯಾತನೆಯನ್ನು ಅನುಭವಿಸುತ್ತ ಗೊಳೋ ಎಂದು ಅಳತೊಡಗಿದನು.

ಅವನ ಕಣ್ಣೀರು ನದಿಯಾಗಿ ಹರಿಯತೊಡಗಿತು. ಕಣ್ಣೀರು ಸುರಿಯುತ್ತಿರುವಾಗ ಅವನ ಮೂಗಿನ ಎರಡು ಹೊಳ್ಳೆಗಳಿಂದ ಹೊರಬಂದು ನದಿಯೊಳಕ್ಕೆ ಬಿದ್ದ ಎರಡು ಸಿಂಬಳದ ಲೋಳಿಗಳು ಎರಡು ಮೀನುಗಳಾಗಿ ಮುಂದುವರಿದವು.

ಇತ್ತ ಲಕ್ಷ್ಮಣನು ಸೀತೆಯನ್ನು ಕೊಲ್ಲಲಾರದೆ ಅರಣ್ಯದಲ್ಲೆ ಬಿಟ್ಟು ಹೋಗುತ್ತಾನೆ. ಸತ್ಯಸಂಗತಿ ತಿಳಿದ ಸೀತೆ 'ಗಂಡನಿಗೆ ಬೇಡವಾದ ಹೆಂಡತಿ ಬದುಕಿದ್ದು ಫಲವೇನು' ಎಂದು ತೀರ್ಮಾನಿಸಿ ಹರಿಯುತ್ತಿರುವ ರಾಮನ ಕಣ್ಣೀರ ನದಿಗೇ ಬೀಳುತ್ತಾಳೆ. ಆ ನದಿಯೊಳಗಿದ್ದ ಸಿಂಬಳದ ಲೋಳಿಯಿಂದ ಉತ್ಪತ್ತಿಯಾಗಿದ್ದ ಮೀನುಗಳು ಸೀತೆಯನ್ನು ರಕ್ಷಿಸಿ ಈಚೆ ದಡದಿಂದ ಆಚೆ ದಡಕ್ಕೆ ತೆಗೆದುಕೊಂಡು ಹೋಗಿ ಬಿಡುತ್ತವೆ. ಪ್ರಜ್ಞಾವಸ್ಥೆಗೆ ಬಂದ ಸೀತೆಯು ತನ್ನನ್ನು ಬದುಕಿಸಿದವರು ಯಾರು ಎಂದು ನೋಯುತ್ತಾಳೆ. ಆಗ ಅವಳನ್ನು ರಕ್ಷಿಸಿದ ಮೀನುಗಳು "ಅಮ್ಮ ತುಂಬು ಗರ್ಭಿಣಿಯಾದ ನೀನು ಸಾಯುವುದು ಸರಿಯೆ? ಸತ್ತು ಸಾಧಿಸುವುದಾದರೂ ಏನು? ಈ ದಿನ ಬದುಕಿದ್ದರೆ ನಾಳೆ ಶುಭವನ್ನು ಕಾಣಬಹುದು" ಎಂದು ನೀತಿ ಮಾತುಗಳನ್ನಾಡುತ್ತವೆ. ಈ ಮುದ್ದು ಮುದ್ದಾದ ಮಾತುಗಳನ್ನು ಕೇಳಿದ ಸೀತೆ ಅದಕ್ಕೆ ತನ್ನ ಕುತ್ತಿಗೆಯಲ್ಲಿರುವ ಕಂಠೀಹಾರವನ್ನು ಕೊಡಲು ಹೋಗುತ್ತಾಳೆ. ಅದಕ್ಕೆ ಆ ಮೀನುಗಳು "ಅಮ್ಮಾ ಈ ಹಾರ ಹಾಕಿಕೊಳ್ಳಲು ನಮಗೇನು ಕುತ್ತಿಗೆ ಇದೆಯೆ? ಈ ಹಾರ ಬೇಡ ತಾಯಿ. ನಿನ್ನಂಥ ಸಾಧ್ವೀಮಣಿಯನ್ನು ಬದುಕಿಸಿದ ಪುಣ್ಯವೇ ಸಾಕು!" ಎನ್ನುತ್ತವೆ. ಆ ಮಾತಿಗೆ ಸೀತೆಯು "ಮಕ್ಕಳೇ ಇಷ್ಟು ಮುದ್ದಾಗಿ ಮಾತಾಡುವ ನಿಮ್ಮ ಹೆಸರೇನು?" ಎಂದು ಕೇಳುತ್ತಾಳೆ. ಅದಕ್ಕೆ ಒಂದು ಮೀನು "ನನ್ನ ಹೆಸರು ಕುಚ್ಚಲು!" ಎಂದರೆ, ಇನ್ನೊಂದು ಮೀನು "ನನ್ನ ಹೆಸರು ಅವುಲು!" ಎನ್ನುತ್ತದೆ. ಅವುಗಳ ಮಾತನ್ನು ಕೇಳಿದ ಸೀತೆ "ಅಪ್ಪಾ ಮಕ್ಕಳೆ, ನನಗೆ ಗಂಡು ಮಗುವೇನಾದರೂ ಹುಟ್ಟಿದರೆ ನಿಮ್ಮಿಬ್ಬರ ಹೆಸರನ್ನು ಸೇರಿಸಿ ಕುಚ್ಚಲವುಲು" ಎಂದು ಕರೆಯುತ್ತೇನೆ" ಎನ್ನುತ್ತಾಳೆ.

ಕುಚ್ಚಲು ಅವುಲು ಮೀನುಗಳ ಹೆಸರಿನಿಂದ ಸೀತೆಯ ಮಕ್ಕಳ ಹೆಸರು ಕುಶಲವರು ಎಂದಾಗುತ್ತದೆ. ಕುಶಲವರ ಹೆಸರಿಗೆ ಕುಚ್ಚಲು ಅವುಲು ಮೀನುಗಳ ಹೆಸರನ್ನು ಲಗತ್ತಾಗಿ ಹೊಂದುವಂತೆ ನಿಯೋಜಿಸಿರುವ ಜಾನಪದ ಪ್ರತಿಭೆ ಅದ್ಭುತ ಎನಿಸುತ್ತದೆ.

ಅನಂತರದಲ್ಲಿ ರಾಮಾಶ್ವಮೇಧದ ಕಥೆಯನ್ನು ಎಲ್ಲರೂ ಬಲ್ಲಂತೆ ಹೇಳಲಾಗಿದೆ. ಆದರೆ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬಂದ ಶ್ರೀರಾಮನು ಸೀತಾಮಾತೆಯು ತನ್ನ ಪಾದಗಳನ್ನು ಸ್ಪರ್ಶಿಸದಂತೆ ಹಿಂದಕ್ಕೆ ಸರಿದದ್ದು ಅಮಾನವೀಯ ಎನಿಸುತ್ತದೆ. ಸೀತೆಯು ಭೂಮಾತೆಯಲ್ಲಿ ಐಕ್ಯವಾಗುತ್ತಿರುವಾಗ ಶ್ರೀರಾಮನು ಅವಳ ಬೆರಳುಗಳನ್ನು ಹಿಡಿದು ಎಳೆದಾಗ ಅವು ಅರಿಸಿನದ ಕೊಂಬುಗಳಾಗುತ್ತವೆ. ತಲೆಗೂದಲು ದರ್ಭೆಯಾಗುತ್ತದೆ ಎಂಬಲ್ಲಿಗೆ ಈ ಕಾವ್ಯ ಕೊನೆಗೊಳ್ಳುತ್ತದೆ.

ಯಕ್ಷಗಾನ - ಬಯಲಾಟ, ಹರಿಕಥೆ ಇತ್ಯಾದಿ

ರಾಮಾಯಣದ ಅನೇಕ ಪ್ರಸಂಗಗಳು ಯಕ್ಷಗಾನ-ಬಯಲಾಟಗಳಲ್ಲಿವೆ. ಚಕ್ರವರ್ತಿ ದಶರಥ, ಆದಿಕವಿ ವಾಲ್ಮೀಕಿ, ಮಾರುತಿ ವಿಜಯ, ಲವಕುಶರ ಕಾಳಗ, ಶ್ರೀರಾಮಮಹಿಮೆ, ಶ್ರೀರಾಮಾಂಜನೇಯಯುದ್ಧ, ಶ್ರೀಮದ್‌ರಾಮಾಯಣ, ಸಂಪೂರ್ಣ ರಾಮಾಯಣ, ಸೀತಾಸ್ವಯಂವರ, ಇಂದ್ರಜಿತು ಕಾಳಗ, ಲಂಕಾದಹನ, ಹನುಮದ್ವಿಲಾಸ, ವಾಲಿಸುಗ್ರೀವ, ರಾಮಕೊರವಂಜಿ, ಐರಾವಣ-ಮೈರಾವಣ, ಶತಮುಖರಾವಣ, ಹನುಮಂತಲಿಂಗಧಾರಣ ಮುಂತಾದ ಪ್ರಸಂಗಗಳು ಜನಮನವನ್ನು ಸೂರೆಗೊಂಡಿವೆ. ಈ ಯಕ್ಷಗಾನ ಬಯಲಾಟಗಳಲ್ಲಿ ಒಂದು ವಿಚಿತ್ರವಾದ ಪ್ರಸಂಗವೆಂದರೆ "ಚಿತ್ರಪಟ ರಾಮಾಯಣ". ಕಿಳ್ಳೇಕ್ಯಾತರಿಂದ ಈ ಕಥೆ ಪ್ರಸಾರವಾಯಿತೆಂಬ ಒಂದು ವಾದವಿದ್ದರೂ ಶೀಲಭಂಗದ ಶೂಲದಂತಿರುವ ಈ ಕಥೆ ಕೆಲವರಿಂದ ಅತಿರಂಜನೀಯವಾಗಿರುವುದೂ ಉಂಟು. ಚದುರಂಗ ಅವರು ಈ ವಸ್ತುವನ್ನೇ ಆಧರಿಸಿ "ಬಿಂಬ" ಎಂಬ ನಾಟಕವನ್ನೂ ಬರೆದಿದ್ದಾರೆ. ಆಸ್ತಿಕರಿಗೆ ಅಸಹನೀಯವಾಗುವ ಈ "ಚಿತ್ರಪಟ ರಾಮಾಯಣ" ಜೀವಂತವಾಗಿದ್ದರೂ ಜನಪ್ರಿಯತೆಯ ದೃಷ್ಟಿಯಿಂದ ಇದು ಹಿಂದೆ ಬಿದ್ದಿದೆ ಎಂದೇ ಹೇಳಬೇಕು.

"ಚಿತ್ರಪಟ ರಾಮಾಯಣ"ದ ಹೊರತಾಗಿ ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಪ್ರಸಂಗಗಳು ಹರಿಕಥೆಯಾಗಿ ಜನರಂಜನೆಯ ಜೊತೆಗೆ ಜೀವನ ವಿಮರ್ಶೆಯನ್ನು ತಿಳಿಸಿವೆ.

ಕಿಳ್ಳೇಕ್ಯಾತರು ರಾಮಾಯಣದ ಅನೇಕ ಪ್ರಸಂಗಗಳನ್ನು ತೊಗಲು ಗೊಂಬೆಯಾಟವಾಗಿ ಪ್ರದರ್ಶಿಸುತ್ತಾರೆ. ಈ ಕಿಳ್ಳೇಕ್ಯಾತರು ಗುಹನ ಸಂಬಂಧಿಗಳೆಂದೂ ಅವರು ಅರಣ್ಯದಲ್ಲಿ ಶ್ರೀರಾಮನ ಸೇವೆ ಮಾಡಿಕೊಂಡಿದ್ದರೆಂದೂ ಹೇಳುತ್ತಾರೆ.

ಹಗಲುವೇಷದವರು ಶರಣರ ಕಾಲದಿಂದಲೂ 'ಬಹುರೂಪಿಗಳು' ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಬಹುರೂಪಿ ಚೌಡಯ್ಯನ ಕಲೆಯ ರಾಯಭಾರಿಗಳಂತಿರುವ ಇವರು ಶ್ರೀರಾಮ, ಲಕ್ಷ್ಮಣ, ಸೀತೆ, ಆಂಜನೇಯ ಜಾಂಬವನ ವೇಷಗಳನ್ನು ಹಾಕಿಕೊಂಡು ಊರೂರ ಮೇಲೆ ನರ್ತಿಸುತ್ತ ಕಥೆ ಹೇಳುತ್ತ ಹಾಡು ಹಾಡುತ್ತ ರಂಜನೆ ನೀಡುತ್ತ ತಮ್ಮ ಜೀವನೋಪಾಯಕ್ಕೆ ಒಂದು ದಾರಿ ಮಾಡಿಕೊಂಡಿದ್ದಾರೆ.

ಕನ್ನಡ ಚಲನಚಿತ್ರಗಳಲ್ಲೂ ರಾಮಾಯಣದ ಕಥೆ ವಿಜೃಂಭಿಸಿದೆ. ಭೂಕೈಲಾಸ, ಶ್ರೀ ರಾಮಾಂಜನೇಯ ಯುದ್ಧ, ಪ್ರಚಂಡ ರಾವಣಗಳು ಕನ್ನಡದಲ್ಲಿನ ಚಿತ್ರಗಳು. ತೆಲುಗಿನಿಂದ ಸಂಪೂರ್ಣ ರಾಮಾಯಣ, ಲವಕುಶ ಮುಂತಾದ ಚಿತ್ರಗಳು ಡಬ್ಬಾಗಿ ಬಂದಿವೆ.

ಸ್ಥಳಪುರಾಣಗಳು

ನಾಡಿನ ತುಂಬೆಲ್ಲ ರಾಮಾಯಣವನ್ನು ಹೇಳುವ ಅನೇಕ ಊರ ಹೆಸರಿನ ಕಥೆಗಳು ಪ್ರಚಲಿತವಾಗಿವೆ. ಇಂಥ ಸ್ಥಳಪುರಾಣಗಳಲ್ಲಿ ರಾಮಲಕ್ಷ್ಮಣ ಸೀತೆಯರು ಕೂತಿದ್ದ ಸ್ಥಳ ರಾಮನಗರ ಜಿಲ್ಲೆಯ ಕೂಟಗಲ್ಲು ಗ್ರಾಮವಾಗಿದೆ. ಸೀತೆಯನ್ನು ಅಭಿಮಾನದಿಂದ ಆದರಿಸಿದ ಊರು ಮಿಥಿಲೆ (ಕೆ.ಆರ್. ನಗರ ತಾಲ್ಲೂಕಿನ ಮಿರ್ಲೆ)ಯಾಗಿದೆ – ಲಕ್ಷ್ಮಣ ಬಾಣ ಹೊರದೆ ಕೆಳಕ್ಕೆಸೆದ ಸ್ಥಳ ಬಾಣಾವರವಾಗಿದೆ. ಲಕ್ಷ್ಮಣ ನೇರಿಳೆ ಮರ ಹತ್ತಿ ಹಣ್ಣುಗಳನ್ನು ಉದುರಿಸುತ್ತ ಜೇನಿನ ಗೂಡಿದೆಯೆಂದು ತಿಳಿಯದೆ ಅಲುಗಾಡಿಸಿದಾಗ ಜೇನುಹುಳುಗಳು ಮೇಲೆದ್ದವು. ಆಗ ಲಕ್ಷ್ಮಣನು ಅತ್ತಿಗೆ ಸೀತೆಗೆ ಈ ಹುಳುಗಳು ಕಚ್ಚಬಹುದೆಂದು ಬೆದರಿ 'ಅತ್ತಿಗೆ ಓಡು' ಎಂದು ಕೂಗಿದ ಸ್ಥಳವೇ ಅತ್ತಿಗೋಡಾಯಿತಂತೆ. ದಶರಥ ತೀರಿಕೊಂಡ ಸುದ್ದಿ ರಾಮರು ಕೊಡಗಿನಲ್ಲಿದ್ದಾಗ ತಿಳಿಯಿತಂತೆ. ಆಗ ದಶರಥನ ತಿಥಿ ಮಾಡಲು ಮಾತು ನಡೆಯುತ್ತಿರುವಾಗ ಆ ಕೊಡವರಲ್ಲಿ ಕೆಲವರು 'ತಿಥಿ' ಎಂದರೇನು ಎಂದು ಕೇಳಿದಾಗ 'ಅಮ್ಮ' (=ಕೊಡಗಿನಲ್ಲಿ ಗೊತ್ತಿಲ್ಲ) ಎಂದ ಸ್ಥಳ 'ಅಮ್ಮತ್ತಿ'ಯಾಯಿತಂತೆ. ತಿಥಿ ಮಾಡುವ ಬಗೆಗೆ ಸೂಕ್ತ ಮಾರ್ಗದರ್ಶನ ಮಾಡಿ ಮತಿ ತೋರಿದ ಸ್ಥಳ 'ತಿಥಿಮತಿ' ಎಂಬ ಊರಾಯಿತಂತೆ. ರಾಮಲಕ್ಷ್ಮಣರ ಅರಣ್ಯ ವಾಸದ ಸಮಯದಲ್ಲಿ ಅವರಿಗೆ ಸರಿಯಾದ ಆಹಾರ ವಿಹಾರಗಳಿಲ್ಲದ ಕಾರಣ ಅವರ ಮೈತುಂಬ ಕಜ್ಜಿ ಕುರ ಎದ್ದು ನಾತ (ವಾಸನೆ) ಬರುತ್ತಿತ್ತಂತೆ. ಇದನ್ನು ಜನರು 'ರಾಮರು ನಾತ ಹೊಡೀಶಾರೆ' ಎಂದ ಸ್ಥಳವೇ ರಾಮನಾಥಪುರವಾಯಿತಂತೆ. ಹೀಗೆ ನಾಡಿನಾದ್ಯಂತ ಅನೇಕ ಊರುಗಳ ಹೆಸರಿಗೆ ರಾಮಾಯಣದ ಕಥೆಯ ಲೇಪವಿದೆ. ಮತ್ತೊಂದು ವಿಶೇಷ ಸ್ಥಳನಾಮದ ಕಥೆಯೆಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿರುವ 'ಸೂಪ'ವು ಅತ್ತಿಗೆ ಮಂಡೋದರಿ ಮತ್ತು ನಾದಿನಿ ಶೂರ್ಪನಖಿಯರಿಗೆ ಹೊಂದಾಣಿಕೆ ಬರದಿದ್ದಾಗ ರಾವಣನು ಸಂಪದ್ಯುಕ್ತವಾದ ಒಂದು ಪ್ರದೇಶದಲ್ಲಿ ಸುಂದರವಾದ ನಗರವೊಂದನ್ನು ಕಟ್ಟಿಸಿ ಅದನ್ನು ತಂಗಿಗೆ ಬಳುವಳಿಯಾಗಿ ಕೊಟ್ಟನಂತೆ. ಹಾಗೆ ಕೊಟ್ಟ ಶೂರ್ಪನಖಿಯ ಊರೇ 'ಸೂಪ' ಆಯಿತಂತೆ. ಆದರೆ ಈ 'ಸೂಪ' ಬೌದ್ಧ 'ಸ್ತೂಪ'ದಿಂದ ಬಂದದ್ದು ಎನ್ನುವವರೂ ಇದ್ದಾರೆ.

ವಿಗ್ರಹಗಳನ್ನು ಕುರಿತ ಪುರಾಣಕಥೆಗಳೂ ಇವೆ. ದಶರಥನು ತೀರಿಕೊಂಡಾಗ ಅವನ ಹೆಸರಿನಲ್ಲಿ ಸ್ಥಾಪಿಸಿದ ದಶರಥೇಶ್ವರನ ವಿಗ್ರಹ ಕೈಕೆಯದೆಂದು ಹೇಳುವ ವಿಗ್ರಹದೊಡನೆ ಮೈಸೂರು ಜಿಲ್ಲೆಯಲ್ಲಿಯ ಪಿರಿಯಾಪಟ್ಟಣದ ತಾಲ್ಲೂಕಿನ ಕೋಗಿಲವಾಡಿಯ ಸಮೀಪದಲ್ಲಿರುವ ಮಾಕಲ್ಲಯ್ಯನ ಬೆಟ್ಟದಲ್ಲಿದೆ. ಅಹಲ್ಯೆಯು ಉಕ್ಕುಡಮ್ಮ ಆಗಿ ಆರಾಧನೆಗೊಳ್ಳುತ್ತಿರುವ ವಿಗ್ರಹ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿದೆ.

ಹಾಸನ ಜಿಲ್ಲೆಯ ರಾಮನಾಥಪುರದಲ್ಲಿನ ಕಾವೇರಿ ನದಿಯಲ್ಲಿ ಗೋಗಲ್ಲು ಎಂಬ ಹೆಸರಿನ ಗವಿಗಳಿವೆ. ಇದನ್ನು ಗೋಗರ್ಭಗಳೆಂದು ಹೇಳುತ್ತಾರೆ. ಇಲ್ಲಿನ ಎರಡು ಗೋಗಲ್ಲುಗಳಲ್ಲಿ ದೊಡ್ಡದು ಶ್ರೀರಾಮ ನುಗ್ಗಿದ ಗೋಗಲ್ಲು, ಚಿಕ್ಕದು ಲಕ್ಷ್ಮಣ ನುಗ್ಗಿದ ಗೋಗಲ್ಲು ಎಂಬ ನಂಬಿಕೆಯಿದೆ. ಈಗಲೂ ನದಿಗೆ ಸ್ನಾನಕ್ಕಿಳಿದ ಭಕ್ತರು ಈ ಗೋಗಲ್ಲುಗಳ ಮೂಲಕ ಹಾದು ಬರುತ್ತಾರೆ.

ನಾಡಿನಲ್ಲಿರುವ ಅನೇಕ ಕೆರೆಕಟ್ಟೆಗಳು, ಶರಾವತಿ, ಲಕ್ಷ್ಮಣತೀರ್ಥ, ರಾಮದೇವರ ಚಿಲುಮೆ, ಸೀತೆಕೊಳ, ಸೀತೆಮಡು, ರಾಮದೇವರಹಳ್ಳ ಬೇಲೂರಿನ ಅಡುಗೂರು ಗ್ರಾಮದ ಬಳಿ ರಾಮ ಹೂವು ಚೆಲ್ಲಿಕೊಂಡು ಹೋದ ಕಡೆಯೆಲ್ಲ ಹರಿದು ಬಂದ ಕಾಲುವೆ ಮತ್ತು ಚುಂಚನಕಟ್ಟೆ ಹತ್ತಿರುವಿರುವ ರಾಮದೇವರ ಕಾಲುವೆಗಳು ಸಾಕ್ಷಿಯಾಗುತ್ತವೆ.

ಬೆಟ್ಟಗುಡ್ಡಗಳಿಗೂ ರಾಮಾಯಣದ ಐತಿಹ್ಯಗಳಿವೆ. ಮಾಕಲ್ಲಯ್ಯನ ಬೆಟ್ಟ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿದೆ. ಇಲ್ಲಿರುವ ದಶರಥೇಶ್ವರ ಲಿಂಗ ಸಮಯ ಬಂದಾಗ ಮಾತಾಡಿ ಸಲಹೆ ನೀಡುತ್ತಿತ್ತು. ಆದರೆ ರಾವಣನಿಗೆ ಭಿಕ್ಷೆ ಕೊಡಲು ಮುಂದಕ್ಕೆ ಹೋಗಬೇಡ ಎಂದಾಗಲೂ ನಿರಾಕರಿಸಿ ಮುಂದೆ ಹೋದ ಸೀತೆಯನ್ನು ರಾವಣ ಅಪಹರಿಸುತ್ತಿರುವಾಗ ಸೀತೆ ಎಷ್ಟೇ ಕೂಗಿದರೂ ದಶರಥೇಶ್ವರ ಮಾತಾಡಲಿಲ್ಲ. ಆದ್ದರಿಂದ ಇದು ಮಾವಕಲ್ಲಾದ ಅಯ್ಯನ ಬೆಟ್ಟವಾಯಿತು.

ಸಸ್ಯಪುರಾಣಗಳು ಮತ್ತು ಪ್ರಾಣಿಪುರಾಣಗಳು

ಜನಪದ ರಾಮಾಯಣದಲ್ಲಿ ಅನೇಕ ಸಸ್ಯಗಳಿಗೆ ಹಾಗೂ ಪಶುಪಕ್ಷಿಗಳಿಗೆ ಸಂಬಂಧಿಸಿದ ಪುರಾಣಕಥೆಗಳಿವೆ. ಸಸ್ಯಪುರಾಣಗಳಲ್ಲಿ ರಾಮ ಮತ್ತು ವಿಭೀಷಣರು ರಾವಣನ ನಂತರ ಪರಸ್ಪರ ಬೀಳ್ಕೊಳ್ಳುವಾಗ ಇನ್ನು ಮುಂದೆ ದಕ್ಷಿಣದವರು ಮತ್ತು ಉತ್ತರದವರೆಂಬ ಭೇದಭಾವವಿಲ್ಲದ ಸಹಬಾಳ್ವೆ ನಡೆಸಬೇಕೆಂಬುದಕ್ಕೆ ಸಾಕ್ಷಿಯಾಗಿ ದಕ್ಷಿಣದವರ ಪರವಾಗಿ ವಿಭೀಷಣನು ಬೇವಿನಗಿಡವನ್ನು ಉತ್ತರದವರ ಪರವಾಗಿ ಶ್ರೀರಾಮನು ಅರಳೀಗಿಡವನ್ನು ನೆಟ್ಟನೆಂದೂ, ಆ ಕಾರಣದಿಂದ ಈಗಲೂ ಈ ಸಾಮರಸ್ಯದ ಪ್ರತೀಕವಾಗಿ ಊರಿನ ಪ್ರವೇಶದ್ವಾರದ ಬಳಿ ಅರಳೀಕಟ್ಟೆ ಇರುತ್ತದೆ. ಈ ಕಟ್ಟೆಯಲ್ಲಿ ಅರಳಿ ಮತ್ತು ಬೇವಿನಮರವಿರುತ್ತವೆ. ಇದು ಆರ್ಯ-ದ್ರಾವಿಡ ಸಾಮರಸ್ಯದ ಹಾಗೂ ಸಮ್ಮಿಶ್ರದ ಸಂಕೇತವೂ ಇರಬಹುದು!

ಒಕ್ಕಲಿಗರು ರಾಮನಿಲ್ಲದ ಅಯೋಧ್ಯೆಯಲ್ಲಿ ಭರತನಿಗೆ ಕೊಟ್ಟ ಕಿರುಕುಳದ ಸೇಡಿಗಾಗಿ ಸುಮಂತ್ರನ ತಂತ್ರದಿಂದ ಅವನು ಕೊಟ್ಟ ಕಾದ ಹೆಂಚಿನ ಮೇಲೆ ಬಿಸಿ

ಮಾಡಿದ್ದ ಬೂದುಗುಂಬಳ ಬೀಜವನ್ನು ನೆಟ್ಟು, ಅವು ಮೊಳೆಯದೆ ಬೆಳೆಯದೆ ಮೋಸ ಹೋಗುತ್ತಾರೆ. ಅರಮನೆ ಮುಂದೆ ಸುಮಂತ್ರ ನೆಟ್ಟಿದ್ದ ಗಿಡದ ಒಂದು ಕಾಯಿಯ ತೂಕಕ್ಕೆ ಸಮವಾಗುವ ಏನನ್ನೂ ಕೊಡಲಾಗದೆ ಅವಮಾನಿತರಾಗುತ್ತಾರೆ. ಅಂದಿನಿಂದ ಒಕ್ಕಲಿಗರು ಬೂದುಗುಂಬಳಕಾಯನ್ನು ತಿನ್ನದೆ, ಬೆಳೆದರೂ ಬ್ರಾಹ್ಮಣರಿಗೆ ಕೊಟ್ಟು ಬಿಡುತ್ತಾರೆ ಎಂಬ ಸಸ್ಯಪುರಾಣ ಇಂದಿಗೂ ಒಕ್ಕಲಿಗರ ಮನದಾಳದಲ್ಲಿ ಸ್ಥಿರವಾಗಿ ನಿಂತುಬಿಟ್ಟಿದೆ.

ರಾವಣನು ಸೀತೆಯನ್ನು ಅಪಹರಿಸಿದಾಗ ಅವನು ಅವಳನ್ನು ಯಾವ ಕಡೆಗೆ ಹೊತ್ತೊಯ್ಯುತ್ತಿದ್ದಾನೆಂದು ತಿಳಿಯಲು ತಾನು ಮುಡಿದಿದ್ದ ಹೂವಿನ ದಂಡೆಯನ್ನು ತೆಗೆದು ಕೆಳಕ್ಕೆಸೆದಳಂತೆ. ಅದು ಮರದ ಮೇಲೆ ಬಿದ್ದು ಅಂದಿನಿಂದಲೂ 'ಸೀತೆ ಹೂವು' ಎಂಬ ಹೆಸರಿನ ಪರಾವಲಂಬಿ ಗಿಡವಾಗಿ ಉಳಿದುಬಂದಿದೆ.

ಲಂಕೆಯಿಂದ ಅಯೋಧ್ಯಾಭಿಮುಖವಾಗಿ ಹೊರಟ ರಾಮ ಲಕ್ಷ್ಮಣ ಸೀತೆ ವಿಭೀಷಣ ಆಂಜನೇಯಾದಿಗಳು ಕಿಷ್ಕಿಂಧೆಗೆ ಬಂದಾಗ ರಾತ್ರಿಯಾಗಿತ್ತು. ಆ ರಾತ್ರಿ ಅವರಿಗೆಲ್ಲ ಭೋಜನಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗಲಿಲ್ಲ. ಇದರಿಂದ ನೊಂದ ಸೀತೆಯು ಈ ಬಿರುಬೇಸಿಗೆಯ ಬೆಂಗಾಡಿನಲ್ಲಿ ಯಾವ ಫಲಗಳೂ ಸಿಗುವುದಿಲ್ಲ ಎಂದು ಯೋಚಿಸಿ ತನ್ನ ತಾಯಿ ಭೂಮಿಯನ್ನು ನೆನೆದಳು. ಭೂದೇವಿಯು ಸೀತೆಗೆ ಎಂಥಾ ಬೇಸಿಗೆಯಲ್ಲೂ ಒಣಗದ ಫಲಕೊಡುವ ಹಣ್ಣಿನ ಗಿಡವೊಂದನ್ನು ಕೊಟ್ಟಳು. ಅದೇ ಸೀತಾಫಲ. ಅನಂತರದಲ್ಲಿ ರಾಮಫಲ, ಲಕ್ಷ್ಮಣ ಫಲ ಮತ್ತು ಆಂಜನೇಯ ಫಲಗಳೆಲ್ಲವೂ ಉತ್ಪತ್ತಿಯಾದವು.

ಅರಿಸಿನ ಮತ್ತು ದರ್ಭೆ(ಗರಿಕೆ)ಗಳ ಉತ್ಪತ್ತಿಗೂ ಸೀತೆಯ ಸಂಬಂಧವನ್ನು ಹೇಳುತ್ತಾರೆ. ಲವಕುಶರ ಕಾಳಗದ ಅನಂತರ ಸೀತೆ ಬದುಕಿರುವ ಸಂಗತಿ ಹಾಗೂ ಲವಕುಶರು ತನ್ನ ಮಕ್ಕಳೆಂದು ರಾಮನಿಗೆ ತಿಳಿಯುತ್ತದೆ. ಆ ಸಮಯದಲ್ಲಿ ಸೀತೆಯು ಶ್ರೀರಾಮನ ಪಾದಗಳಿಗೆ ನಮಸ್ಕರಿಸಲು ಹೋದಾಗ ರಾಮ ಅಯಾಚಿತವಾಗಿ ತನ್ನ ಪಾದಗಳನ್ನು ಹಿಂದಕ್ಕೆಳೆದುಕೊಳ್ಳುತ್ತಾನೆ. ಇದರಿಂದ ಭಂಗಿತಳಾದ ಸೀತೆ 'ನನ್ನನ್ನು ನಿನ್ನ ಮಡಲಿಗೆ ಸೇರಿಸಿಕೋ ಅಮ್ಮಾ' ಎಂದು ಭೂದೇವಿಯನ್ನು ಪ್ರಾರ್ಥಿಸುತ್ತಾಳೆ. ಸೀತೆಯ ಆರ್ತಧ್ವನಿ ಕೇಳಿ ಭೂಮಿ ಬಿರಿದು ಅವಳನ್ನು ತನ್ನಲ್ಲಿ ಅಡಗಿಸಿಕೊಳ್ಳಲು ಪ್ರಯತ್ನಿಸಿದಾಗ ಭೂಮಿಯ ಸೀಳಿನೊಳಕ್ಕಿಳಿಯುತ್ತಿದ್ದ ಸೀತೆಯ ಕೈ ಹಿಡಿದಕೊಂಡು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹಿಡಿದುಕೊಂಡ ಕೈಬೆರಳುಗಳು ಅರಸಿನದ ಕೊಂಬುಗಳಾಗಿ ಬರುತ್ತವೆ. ಹಿಡಿದುಕೊಂಡ ತಲೆಗೂದಲು ದರ್ಭೆ(ಗರಿಕೆ)ಯಾಗಿ ಬರುತ್ತದೆ. ಹೀಗೆ ಅರಿಸಿನದ ಹಾಗೂ ದರ್ಭೆಯ ಬಗೆಗಿರುವ ಸಸ್ಯಪುರಾಣ ಈ ಎರಡರ ಪಾವಿತ್ರ್ಯವನ್ನು ಹೇಳುವುದಾಗಿದೆ.

ಕನಕದಾಸರ ರಾಮಧಾನ್ಯ ಚರಿತ್ರೆ ಎಲ್ಲರಿಗೂ ತಿಳಿದ ವಿಷಯವೇ. ಬಹುಶಃ ಜನಪದರಲ್ಲಿ ಪ್ರಚಲಿತವಿದ್ದ ಒಂದು ಸಸ್ಯಪುರಾಣವನ್ನು ಅರ್ಥಪೂರ್ಣವಾದ ಹಾಗೂ ಬಡತನ–ಸಿರಿತನಗಳನ್ನು ರಾಗಿ ಮತ್ತು ಭತ್ತದ ಮೂಲಕ ಸಾಂಕೇತಿಕವಾಗಿ ವಿಡಂಬಿಸಿರುವ ರೀತಿ ಅನನ್ಯ ಪ್ರತಿಭೆಯ ದ್ಯೋತಕವಾಗಿದೆ. ಉದ್ದೇಶಪೂರ್ವಕವಾಗಿ ಕನಕದಾಸರ ರಾಮಧಾನ್ಯದ ಕಥೆಯನ್ನು ಇಲ್ಲಿ ಉಳಿಸಿಕೊಂಡಿದ್ದೇನೆ.

ಪ್ರಾಣಿಪುರಾಣ ಕಥೆಗಳಲ್ಲಿ ಶ್ರೀರಾಮ ಅಳಿಲಿನ ಬೆನ್ನಿನ ಮೇಲೆ ಸವರಿದ ಮೂರು ಬೆರಳುಗಳ ಗುರುತೇ ಈಗ ಅಳಿಲಿನ ಬೆನ್ನಿನ ಮೇಲಿರುವ ಗುರುತು ಎಂದು ಹೇಳುತ್ತಾರೆ. ರಾವಣನ ಹೊಡೆತದಿಂದ ರೆಕ್ಕೆ ಮುರಿದುಕೊಂಡು ಬಿದ್ದಿದ್ದ ಜಟಾಯುವನ್ನು ಶ್ರೀರಾಮ 'ಲೇ ಪಕ್ಷಿ' ಎಂದು ಮಾತಾಡಿಸಿದ್ದೇ ಆ ಸ್ಥಳಕ್ಕೆ 'ಲೇಪಾಕ್ಷಿ' ಹೆಸರಾಯಿತೆಂಬ ಪಕ್ಷಿಪುರಾಣವಿದೆ. ಅವುಲು ಮತ್ತು ಕುಚ್ಚಲು ಮೀನುಗಳ ಹೆಸರು ಸೀತೆಯ ಮಕ್ಕಳಾದ ಲವಕುಶರ ಹೆಸರಿಗೆ ಕಾರಣವಾಯಿತೆಂದು ಹೇಳುವ ಮತ್ಸ್ಯ ಪುರಾಣ ಕಥೆಯು ಜನಪದ ನಿರುಕ್ತಿಗೆ ಒಂದು ಅನನ್ಯ ಉದಾಹರಣೆಯಾಗುತ್ತದೆ.

ರಾಮಾಯಣಕ್ಕೆ ಸಂಬಂಧಿಸಿದ ಗಾದೆಗಳು

ಸಾಮಾನ್ಯವಾಗಿ ಅಂಗೀಕೃತವಾದ ಸತ್ಯವನ್ನು ಅಥವಾ ಉಪಯುಕ್ತ ಅಭಿಪ್ರಾಯವನ್ನು ಪ್ರಾಸಬದ್ಧವಾಗಿ ಲಯಬದ್ಧವಾಗಿ ಫಲಕಾರಿಯಾಗಿ ಸಂಕ್ಷಿಪ್ತವಾಗಿ ಅಭಿವ್ಯಕ್ತಿಗೊಳಿಸಿದ ಜನಪ್ರಿಯ ಹೇಳಿಕೆಯೇ ಗಾದೆ. ನಮ್ಮ ಜನಪದರ ಮೇಲೆ ಗಾಢವಾದ ಪ್ರಭಾವ ಬೀರಿರುವ ರಾಮಾಯಣದ ಕಥೆ ಮತ್ತು ಪಾತ್ರಗಳು ಅನೇಕ ಗಾದೆಗಳ ಒಗಟುಗಳ ಮತ್ತು ನುಡಿಕಟ್ಟುಗಳ ಸೃಷ್ಟಿಗೆ ಕಾರಣವಾಗಿದೆ. ಸಂದರ್ಭಕ್ಕೆ ತಕ್ಕಂತೆ ಅರ್ಥವತ್ತಾಗಿ ಸಂಭಾಷಣೆಯ ಬನಿಯನ್ನು ಹೆಚ್ಚಿಸುವಲ್ಲಿ ಈ ಗಾದೆಗಳು ಬಳಕೆಯಾಗುತ್ತವೆ. ಇಲ್ಲಿ ಎಲ್ಲ ಗಾದೆಗಳಿಗೂ ಅರ್ಥ ವಿವರಣೆ ಕೊಡದೆ ರಾಮಾಯಣಕ್ಕೆ ಸಂಬಂಧಿಸಿದ ಗಾದೆಗಳನ್ನು ಮಾತ್ರ ಪಟ್ಟಿ ಮಾಡಿರುತ್ತೇನೆ.

1. ಅಳಿಲು ಭಕ್ತಿ ; ಮಳಲ ಸೇವೆ
2. ಅಂಕೆ ಇಲ್ಲದ ಕಪಿ ಲಂಕೆ ಸುಡ್ತಂತೆ.
3. ಬಲದಲ್ಲಿ ವಾಲಿ ಮೇಲು
ಛಲದಲ್ಲಿ ರಾಮ ಮೇಲು
4. ವಾಲಿಯಂಗಕ್ಕೆ ಕಲೆಯಿಲ್ಲ
ರಾಮನ ಬಾಣಕ್ಕೆ ಹುಸಿಯಿಲ್ಲ
5. ಬೆಳಗಾನ ರಾಮಾಯಣ ಕೇಳಿ
ಬೆಳಕ್ಹರೀತ್ಲೆ

ರಾಮ ರಾಕ್ಷಸನೋ ರಾವಣ ರಾಕ್ಷಸನೋ ಅಂತ ಕೇಳುದ್ರಂತೆ

6. ಬೆಳಗಾನ ರಾಮಾಯಣ ಕೇಳಿ
ರಾಮುಂಗೂ ಸೀತೆಗೂ ಏನಾಗ್ಬೇಕು ಅಂತ ಕೇಳುದ್ನಂತೆ.

7. ರಾಮನಂಥಾ ರಾಜನಿಲ್ಲ
ಕಾಮನಂಥಾ ಪುರುಷನಿಲ್ಲ

8. ರಾಮ ರಾಜ್ಯ ಆಳಿದರೂ
ರಾಗಿ ಬೀಸೋದು ತಪ್ಪಿಲ್ಲ

9. ರಾವಣಾಸುರನ ಹೊಟ್ಟೆಗೆ ಮೂರ್ಕಾಸಿನ ಮಜ್ಜಿಗೆ

10. ಭರತನ ಸೊಂಟಕ್ಕೆ ಗಂಟೆ ಕಟ್ಟುದಂಗೆ

11. ಮಣ್ಣಿನಿಂದ ಕೌರವ ಕೆಟ್ಟ
ಹೆಣ್ಣಿನಿಂದ ರಾವಣ ಕೆಟ್ಟ

12. ಹನುಮನ ಮುಂದೆ ಹಾರೋ ಗುಬ್ಬಿಯೇ?

13. ಹನುಮಂತನೇ ಹಗ್ಗ ಕಡಿತಿರೋಗ
ಪೂಜಾರಿ ಕೇಳುದ್ನಂತೆ ಶ್ಯಾವ್ಗೆಯ

14. ಹಾರಾಡೋ ಹನುಮಂತನಿಗೆ
ಊರಾಚೆ ಗುಡಿಯಂತೆ.

15. ಹೇಳಿಕೆ ಮಾತು ಕೇಳಿ
ಹೆಂಡ್ತಿ ಬಿಟ್ನಂತೆ.

ಹೀಗೆ ಅನೇಕ ಪೌರಾಣಿಕ ಘಟನೆಗಳಿಗೆ ಹಾಗೂ ವ್ಯಕ್ತಿಗಳಿಗೆ ಸಂಬಂಧಿಸಿದ ಗಾದೆಗಳು ನಮ್ಮ ಜನಪದರ ಅನುಭವ ಕೋಶದಲ್ಲಿವೆ.

ಗ್ರಾಮನಾಮ, ವ್ಯಕ್ತಿನಾಮ, ನುಡಿಕಟ್ಟುಗಳು, ಒಗಟು ಇತ್ಯಾದಿ

ಗ್ರಾಮನಾಮಗಳಲ್ಲಿ ರಾಮಾಯಣದ ವ್ಯಕ್ತಿಗಳ ಘಟನೆಗಳ ಕೆರೆಕಟ್ಟೆ ಬಾವಿ ಕೊಳ್ಳ ಹೊಳೆಗಳ ವ್ಯಕ್ತಿನಾಮಗಳಲ್ಲೆಲ್ಲ ರಾಮಾಯಣ ಅವಿರಳವಾದ ಪ್ರಭಾವವನ್ನು ಬೀರಿದೆ.

ಸೀತೆ ಕಾವೇರಿ ನದಿಯಲ್ಲಿ ಮೀಯುವಾಗ ಅವಳ ಮೂಗಿನ ಮುತ್ತು ನದಿಯೊಳಗೆ ಬಿದ್ದುಹೋಯಿತು. ಮುತ್ತೈದೆಯ ಮೂಗಿನ ಮುತ್ತನ್ನು ಆಂಜನೇಯ

ತನ್ನ ಬಾಲವನ್ನು ನೀರಿನ ತಳಕ್ಕಿಳಿಸಿ ಮುತ್ತನ್ನು ಎತ್ತಿದ ಸ್ಥಳ ಮುತ್ತೆತ್ತಿ. ರಾಮನು ಮಾರೀಚನನ್ನು ಕೊಂದ ಸ್ಥಳ ಮೃಗವಧ, ಲಕ್ಷ್ಮಣ ಬಾಣಗಳನ್ನು ಹೊರಲಾರದೆ ಬೀಸಾಡಿದ ಸ್ಥಳ ಬಾಣಾವರ, ಶ್ರೀರಾಮನು ರಾವಣನ ಹತ್ಯಾ ದೋಷವನ್ನು ಶಿವಲಿಂಗ ಪ್ರತಿಷ್ಠಾಪನ ಮಾಡಿ ಕಳೆದುಕೊಂಡು 'ನರಾವಣ' ಎಂದು ಕೂಗಿದ ಸ್ಥಳವೇ ನರೋಣ ಆಯಿತು. ರಾವಣನಿಂದ ರೆಕ್ಕೆಗಳು ಕತ್ತರಿಸಲ್ಪಟ್ಟು ಬಿದ್ದು ನರಳುತ್ತಿದ್ದ ಜಟಾಯುವನ್ನು ಶ್ರೀರಾಮ 'ಲೇ ಪಕ್ಷಿ' ಎಂದು ಕರೆದ ಸ್ಥಳವೇ ಲೇಪಾಕ್ಷಿ ಆಯಿತು. ಹೀಗೆ ಲಕ್ಷ್ಮಣ ತನ್ನ ಅತ್ತಿಗೆ ಜೇನುಹುಳುಗಳಿಗೆ ಸಿಕ್ಕಿಕೊಳ್ಳದಿರಲೆಂದು 'ಅತ್ತಿಗೆ ಓಡು' ಎಂದ ಸ್ಥಳವೇ ಅತ್ತಿಗೋಡಾಯಿತು. ರಾಮರು ವನವಾಸ ಸಮಯದಲ್ಲಿ ಹೊತ್ತು ಹೊತ್ತಿಗೆ ಸರಿಯಾದ ಆಹಾರ ಸ್ನಾನ ಮಡಿಗಳಿಲ್ಲದೆ ಮೈಯೆಲ್ಲ ಕಜ್ಜಿ ಕುರಗಳು ಬಂದು ನಾತ (ವಾಸನೆ) ಹೊಡೆದ ಸ್ಥಳವೇ ರಾಮನಾಥ (ಒಡೆಯ) ಪುರವಾಯಿತಂತೆ. ಹೀಗೆ ತಿತ್ತಿಮತ್ತಿ ಅಮ್ಮತ್ತಿ ಮರೂರು, ರಾಮೇನಹಳ್ಳಿ, ರಾಮನಗರ, ರಾಮಾಪುರಗಳಿಗೆಲ್ಲ ರಾಮಾಯಣದ ಕಥೆಯ ಹಿನ್ನೆಲೆಯಿದೆ.

ವ್ಯಕ್ತಿನಾಮಗಳಲ್ಲೂ ರಾಮಲಕ್ಷ್ಮಣ ಸೀತೆ ಆಂಜನೇಯರ ಹೆಸರು ಅಮರವಾಗಿದೆ. ರಾಮಯ್ಯ, ರಾಮಣ್ಣ, ರಾಮಪ್ಪ, ರಾಮು, ರಾಮಶೆಟ್ಟಿ, ರಾಮಾಶಾಸ್ತ್ರಿ, ರಾಮಚಂದ್ರ, ರಾಮಸ್ವಾಮಿ, ರಾಮಾಚಾರಿ, ರಾಮಸ್ವಾಮಯ್ಯಂಗಾರ್, ರಾಮಾನುಜಯ್ಯಂಗಾರ್, ರಾಮೇಗೌಡ, ರಾಮಣ್ಣಗೌಡ, ರಾಮಪ್ಪಗೌಡ, ರಾಮಾನುಜ, ರಾಮಾಜಟ್ಟಿ, ರಾಮಮೂರ್ತಿ, ರಾಮೇಶ್ವರಪ್ಪ ಹೀಗೆ ಶ್ರೀರಾಮನ ಹೆಸರು ಎಲ್ಲರ ಮೆಚ್ಚಿನ ಹೆಸರಾಗಿದೆ. ಪಕ್ಷಿಗೂ ಗಿಣಿರಾಮ ಎಂದು ಕರೆದ ತೃಪ್ತಿಯಿದೆ.

ಸೀತಾಮಾತೆಯ ಹೆಸರೂ ನಮ್ಮ ಜನರಿಗೆ ಇಷ್ಟಾತಿಇಷ್ಟವೇ ಹೌದು. ಅವರು ತಮ್ಮ ಹೆಣ್ಣುಮಕ್ಕಳಿಗೆ ಸೀತಾ, ಸೀತೆ, ಸೀತಾಲಕ್ಷ್ಮಿ, ಸೀತಾದೇವಿ, ವೈದೇಹಿ, ಜಾನಕಿ, ಸೀತಮ್ಮ ಮುಂತಾಗಿ ಕರೆದು ಗೌರವಿಸಿದ್ದಾರೆ.

ಲಕ್ಷ್ಮಣನಿಗೂ ಸಾಕಷ್ಟು ಜನಪ್ರಿಯತೆ ಇದೆ. ಲಕ್ಷ್ಮಣ, ಲಕ್ಷ್ಮಣೇಗೌಡ, ಲಕ್ಷ್ಮಣಾಚಾರಿ, ಲಕ್ಷ್ಮಣಯ್ಯಂಗಾರ್ ಸೌಮಿತ್ರಿ ಮುಂತಾದವುಗಳಿವೆ. ಶತ್ರುಘ್ನ ಹೆಸರು ಕೇಳಿಸದಿದ್ದರೂ ಭರತನ ಹೆಸರು ಸಾಕಷ್ಟು ಜನಪ್ರಿಯವಾಗಿದೆ. ಇನ್ನು ರಾಮನ ಮೆಚ್ಚಿನ ಬಂಟ ಆಂಜನೇಯನ ಹೆಸರು ಅತ್ಯಂತ ಜನಪ್ರಿಯ ಹೆಸರಾಗಿದೆ. ಇನ್ನೂ ಚೆನ್ನಾಗಿ ಹೇಳಬೇಕೆಂದರೆ ನಾಡಿನುದ್ದಗಲಕ್ಕೂ ರಾಮನ ದೇವಾಲಯಗಳಿಗಿಂತಲೂ ಆಂಜನೇಯನ ಗುಡಿಗಳೇ ಹೆಚ್ಚಾಗಿವೆ. ಆಂಜನೇಯನ ಹೆಸರೂ ನಮ್ಮ ಜನರಿಗೆ ಪ್ರಿಯವಾದುದೇ ಆಗಿದೆ. ಆಂಜನೇಯ, ಅಂಜನೇಗೌಡ, ಆಂಜನೇಯಸ್ವಾಮಿ, ಆಂಜನೀಶೆಟ್ಟಿ, ಆಂಜನಪ್ಪ, ಹನುಮಪ್ಪ, ಹನುಮೇಗೌಡ, ಹನುಮಂತೇಗೌಡ, ಹನುಮಂತಯ್ಯ, ಹನುಮಶೆಟ್ಟಿ, ಹನುಮಂತಾಚಾರ್, ಹನುಮಂತಯ್ಯಂಗಾರ್ ಮುಂತಾದ ಹೆಸರುಗಳು ಪ್ರಚಲಿತವಾಗಿವೆ.

ಅನೇಕ ನುಡಿಕಟ್ಟುಗಳ ಹುಟ್ಟಿಗೂ ರಾಮಾಯಣದ ಕಥೆ ಕಾರಣವಾಗಿದೆ. ಅತಿಯಾಗಿ ನಿದ್ರೆ ಮಾಡುವವನು ಕುಂಭಕರ್ಣ, ಒನಪು-ಒಯ್ಯಾರದ ಬೆಡಗಿ ಶೂಪುರ್‌ಲಕ್ಕಿ, ಅತಿರೇಕದ ಹೆಣ್ಣು ಲಂಕಿಣಿ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಜಗಳ ತಂದು ಹಾಕುವವಳು ತಾಟ್ಗಿತ್ತಿ, ಎಲ್ಲವನ್ನೂ ಆಕ್ರಮಿಸಿಕೊಳ್ಳುವ ಪ್ರವೃತ್ತಿಗೆ ಕಬಂಧಬಾಹು, ಮನೆಮುರುಕ ಬುದ್ಧಿಯವಳಿಗೆ ಕೈಕೆ, ಅಣ್ಣನ ವಿರುದ್ಧ ಪಿತೂರಿ ಮಾಡಿದವನನ್ನು ವಿಭೀಷಣ, ಒಡಕುಬುದ್ದೀಯವಳಿಗೆ ಮಂಥರೆ - ಮುಂತಾದ ನುಡಿಕಟ್ಟುಗಳು ಮಾತಿನ ಮಧ್ಯೆ ಸಂದರ್ಭಾನುಸಾರ ನುಸುಳುತ್ತವೆ.

ವಿರಳವಾಗಿಯಾದರೂ ಕೆಲವು ಒಗಟುಗಳಿವೆ. ಅಂಥ ಒಗಟುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು.

ರಾಮ ಅಂದರೆ ಕೂಡ್ತವೆ
ಸೀತೆ ಅಂದರೆ ಕೂಡೊಲ್ಲ
ಉತ್ತರ : ತುಟಿಗಳು

ಕೊಟ್ಟು ಕೆಟ್ಟ
ಕೊಡದೆ ಕೆಟ್ಟ
ಮುಟ್ಟಿಕೆಟ್ಟ
ಮುಟ್ಟದೆ ಕೆಟ್ಟ
ಉತ್ತರ : ಬಲಿ, ದುರ್ಯೋಧನ,
ಭಸ್ಮಾಸುರ, ರಾವಣ

ಹತ್ತುತಲೆ ನಾನು ರಾವಣನಲ್ಲ
ಆರುತಲೆ ನಾನು ಷಣ್ಮುಖನಲ್ಲ
ನಾನು ಗೀರುದಾಗ ಜೋರುಮಾಡಿ
ಮೆತ್ತಗಾಗೋ ಹಾರುವಯ್ಯ
ಉತ್ತರ : ಬೆಂಕಿಕಡ್ಡಿ

ಹನುಮಪ್ಪನ ಮುಂದೆ
ಹಲ್ ಹಲ್ ಕಿಸೀತದೆ
ಉತ್ತರ : ತೆಂಗಿನಕಾಯಿ

ಅಮರಕಥಾಮೃತ ರಾಮಾಯಣ

ರಾಮಾಯಣವನ್ನು ಸಂಕ್ಷಿಪ್ತವಾಗಿ ಹೇಳಬಲ್ಲ ಕಲೆಯೂ ನಮ್ಮ ಜನಪದರಿಗೆ ಕರತಲಾಮಲಕವೆನಿಸಿದೆ. ಮೂರೇ ಮೂರು ಮಾತುಗಳಲ್ಲಿ ರಾಮಾಯಣ ಹೇಳಿ ಮುಗಿಸಬಹುದು. ಅದು ಹೀಗಿದೆ.

ರಾಮ ಹುಟ್ಟಿದ
ರಾವಣನ ಕೊಂದ
ಸೀತೆಯನು ತಂದ.

ಮರೆಯದೆ ಹೇಳಬೇಕಾದ್ದದೆಂದರೆ ರಾಮನ ಹೆಸರಿನಲ್ಲಿ ಒಂದು ಪಾನೀಯವೂ ಇದೆ. ಅದರ ಹೆಸರು ರಾಮರಸ. ರಾಮನವಮಿ ಮತ್ತು ಹನುಮಜ್ಜಯಂತಿಗಳಲ್ಲಿ ಗ್ರಾಮೀಣ ಗರುಡಿಗಳ ಪೈಲ್ವಾನ್‌ಗಳು ರಾಮರಸವನ್ನು ಕುಡಿದು ಆಕಾಶದಲ್ಲಿ ವಿಹರಿಸಿದ ಸುಖಾನುಭವವನ್ನು ಪಡೆಯುತ್ತಾರೆ. ರಾ(ನಾ) ಮದಲಗೆ ಎಂಬ ಸಿಹಿತಿಂಡಿಯೂ ನಮ್ಮ ಜನಪದರಲ್ಲಿದೆ.

ಚೈತ್ರಶುದ್ಧ ನವಮಿಯನ್ನು ರಾಮನ ಜನ್ಮದಿನ ಎಂದು ಆಚರಿಸಿಕೊಂಡು ಬರಲಾಗುತ್ತಿದೆ. ಹನುಮಜ್ಜಯಂತಿಯನ್ನು ಮಾರ್ಗಶಿರ ಶುಕ್ಲ ತ್ರಯೋದಶಿಯಂದು ಆಚರಿಸುವ ಪದ್ಧತಿಯಿದೆ. ಆದರೆ ಉತ್ಸವಸಿಂಧು ಎಂಬ ಪೂಜಾಕಲ್ಪ ಮೀಮಾಂಸೆ ಗ್ರಂಥದಲ್ಲಿ "ಕಾರ್ತೀಕ ಮಾಸದ ಕೃಷ್ಣಪಕ್ಷದಲ್ಲಿ ಸ್ವಾತೀನಕ್ಷತ್ರವು ಕೂಡಿದ ಮಂಗಳವಾರದಲ್ಲಿ ಸ್ವಯಂ ಶಿವನು ಕಪಿನಾಯಕನಾಗಿ ಅಂಜನಾದೇವಿಯ ಗರ್ಭದಲ್ಲಿ ಜನಿಸಿದನು" ಎಂದು ಹೇಳಲಾಗಿದೆ.

ರಾಮನವಮಿಯಂದು ಶ್ರೀರಾಮನನ್ನು ಮರ್ಯಾದಾಪುರುಷ, ಪಿತೃವಾಕ್ಯಪರಿಪಾಲಕ, ಭ್ರಾತೃಪ್ರೇಮಿ, ಏಕಪತ್ನೀ ವ್ರತಸ್ಥ, ದುಷ್ಟಶಿಕ್ಷಕ – ಶಿಷ್ಟರಕ್ಷಕ ಎಂದೆಲ್ಲ ಕೊಂಡಾಡಿ ರಾಮನ ಮೂರ್ತಿಯನ್ನು ಊರ ಬೀದಿಗಳಲ್ಲೆಲ್ಲ ಮೆರವಣಿಗೆ ಮಾಡಿ ಬೀದಿಬೀದಿಗಳಲ್ಲೆಲ್ಲ ಓಕುಳಿ ಆಡುತ್ತಾರೆ. ಎಲ್ಲರಿಗೂ ಕೋಸಂಬರಿ ಮತ್ತು ಪಾನಕಗಳನ್ನು ಕೊಟ್ಟು ಸಂತೃಪ್ತರಾಗುತ್ತಾರೆ. ಆ ದಿನ ರಾಮಾಯಣದ ಕಥೆಯ ನಾಟಕ, ಹರಿಕಥೆ, ಯಕ್ಷಗಾನ ಕಲೆಗಳು ಪ್ರದರ್ಶಿಸಲ್ಪಡುತ್ತವೆ.

ಈ ಸಂದರ್ಭದಲ್ಲಿ ಜನಪದ ಗಾಯಕಿಯರು ತುಂಬುಭಕ್ತಿಯಿಂದ ಸೀತಾರಾಮರ ಮದುವೆ ಪದಗಳನ್ನು ಹಾಡುತ್ತಾರೆ. ಪಿರಿಯಾಪಟ್ಟಣದ ಸಣ್ಣಯ್ಯನವರ ಬೀದಿಯ ಕೆಂಪೇಗೌಡಯ್ಯನ ಸೊಸೆ ಪುಟ್ಟಮ್ಮಣ್ಣಿ ತನ್ನ ಜೊತೆಗಾರ್ತಿಯರೊಡನೆ ಸೋಬಾನೆ ಪದದ ಸೊರವೆತ್ತಿ ಕೋಗಿಲೆಯ ದನಿಯಲ್ಲಿ ಹಾಡತೊಡಗಿದ್ದಾಳೆ.

ಒಂದು ಸೋಬಾನೆ ಪದ

ಕಲ್ಯಾಣವೆನ್ನಿರೆ ಕಾರುಣ್ಯಮೂರ್ತಿಗೆ
ಕಲ್ಯಾಣವೆನ್ನಿ ಜನವೆಲ್ಲ
    ಕಲ್ಯಾಣವೇ ರಾಮರ ಕಲ್ಯಾಣವೇ
    ಕಲ್ಯಾಣವೇ ಸೀತೆ ಕಲ್ಯಾಣವೇ । ಸೊಲ್ಲು ।

ಜೋತಿ ಹುಟ್ಟೋದು ಎಲ್ಲಿ ಜೋತಿ ಬೆಳಗೋದು ಎಲ್ಲಿ
ಸೀತಮ್ಮ ತಾಯ ಗುಡಿಯ ಮುಂದೆ । ಕಲ್ಯಾಣವೇ ।

ಸೀತಮ್ಮ ತಾಯ ಗುಡಿಯ ಬಾಕಲ ಮುಂದೆ
ಸೀತಾಳ ಚಪ್ರ ಹೂಡಿ ಹಸೆನಿಂದೋ । ಕಲ್ಯಾಣವೇ ।

ರತುನ ಹುಟ್ಟೋದು ಎಲ್ಲಿ ರತುನ ಬೆಳೆಯೋದು ಎಲ್ಲಿ
ರತುನ ರಾಮಸ್ವಾಮಿ ಗುಡಿಯ ಮುಂದೆ । ಕಲ್ಯಾಣವೇ ।

ರತುನ ರಾಮಸ್ವಾಮಿ ಗುಡಿಯ ಬಾಕಲ ಮುಂದೆ
ರತುನದ ಮಣೆಹೂಡಿ ಹಸೆನಿಂದೋ । ಕಲ್ಯಾಣವೇ ।

ಚಿನ್ನ ಹುಟ್ಟೋದು ಎಲ್ಲಿ ಚಿನ್ನ ಬೆಳೆಯೋದು ಎಲ್ಲಿ
ಚನ್ನರಾಮಸ್ವಾಮಿ ಗುಡಿಯ ಮುಂದೆ । ಕಲ್ಯಾಣವೇ ।

ಚನ್ನರಾಮಸ್ವಾಮಿ ಗುಡಿಯ ಬಾಕಲ ಮುಂದೆ
ಚಿನ್ನದ ಮಣೆಹೂಡಿ ಹಸೆನಿಂದೊ । ಕಲ್ಯಾಣವೆ ।

ಮುತ್ತು ಹುಟ್ಟೋದು ಎಲ್ಲಿ ಮುತ್ತು ಬೆಳಿಯೋದು ಎಲ್ಲಿ
ಮುತ್ತೆತ್ತಿರಾಯನ ಗುಡಿಯ ಮುಂದೆ । ಕಲ್ಯಾಣವೇ ।

ಮುತ್ತೆತ್ತಿರಾಯನ ಗುಡಿಯ ಬಾಕಲ ಮುಂದೆ
ಮುತ್ತಿನ ಮಣೆ ಹೂಡಿ ಹಸೆನಿಂದೋ । ಕಲ್ಯಾಣವೇ ।

ಗಾಯಕಿ ಪುಟ್ಟಮ್ಮಣ್ಣಿಯವರ ಒಂದು ಸಂಪ್ರದಾಯದ ಹಾಡಿನಿಂದ ಈ ಬರವಣಿಗೆ ಅಂತಿಮಘಟ್ಟ ಮುಟ್ಟುತ್ತಿದೆ.

ಒಂದು ಸಂಪ್ರದಾಯದ ಹಾಡು

ಹಸೆಗೆದ್ದು ಬಾ
ನೀಲಮೇಘ ಶ್ಯಾಮ । ಸೊಲ್ಲು ।

ದಶರಥ ಕಂದ
ರಾವಣನ ಕೊಂದ
ಸೀತೆಯನು ತಂದ
ಲೋಕಕೆ ಆನಂದ ।

ವನವಾಸವಾಂತ
ಭೂಜಾತೆಕಾಂತ

ಲಕ್ಷ್ಮಣನ ಸಮೇತ
ವೀರಾಂಜನೇಯ ಪ್ರೀತ ।

ಈ ಬಿಲ್ಲುಬಾಣ
ಹುಸಿಯದಂಥ ಜಾಣ
ಜಾನಕೀರಮಣ
ನೀನೇ ಜಗದ ಪ್ರಾಣ ।

'ರಾಮಾಯಣಂ ಅದು ವಿರಾಮಾಯಣಂ ಕಣಾ!' ಮಹಾಕವಿ ಕುವೆಂಪು ಅವರ ಈ ದಿವ್ಯವಾಣಿ ನಿತ್ಯಸತ್ಯ!

ಜನಪದ ರಾಮಾಯಣಕ್ಕೆ ಸಂಬಂಧಿಸಿದ ಈ ಹನಿಗತೆಗಳ ಸಂಕಲನ ನನ್ನ ಕ್ಷೇತ್ರಕಾರ್ಯದ ಒಂದು ಪುಟ್ಟ ಸಂಪುಟ, ಇಂಥ ಹನಿಗತೆಗಳನ್ನು ಕರ್ನಾಟಕದಾದ್ಯಂತ, ಭಾರತದಾದ್ಯಂತ ಸಂಗ್ರಹಿಸಿದರೆ ಅವೆಷ್ಟಿಯೋ ಏನೋ!



ಜನಪದ ರಾಮಾಯಣದ ಕಥೆಗಳು

ಆದಿಕವಿಗೆ ನಮನ



ಅಮರಕಥಾಮೃತ ರಾಮಾಯಣ



ಆದಿಕವಿ ವಾಲ್ಮೀಕಿ ಮಹರ್ಷಿಯ ಆಶ್ರಮ

ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನಲ್ಲಿ 'ಆವನಿ' ಎಂಬ ಗ್ರಾಮವಿದೆ. ಇದು ಮುಳುಬಾಗಿಲಿನಿಂದ ಸುಮಾರು ೧೧ ಕಿ.ಮೀ. ದೂರದಲ್ಲಿ ನೈಋತ್ಯಕ್ಕಿರುವ ಒಂದು ಪುಣ್ಯಕ್ಷೇತ್ರ. ಈ ಗ್ರಾಮಕ್ಕೆ ರಾಮಾಯಣ ಕಾಲದ ಸ್ಪರ್ಶವಿದೆ. ಶಾಸನಗಳು ಈ ಊರನ್ನು ಆಹವನೀಯ, ಆವನ್ಯ, ಆವಣಿ ಎಂದೆಲ್ಲ ಕರೆದಿವೆ. 'ಆಹವನೀಯ' ಎಂದರೆ ಹೋಮಾಗ್ನಿ ಎಂದರ್ಥ. ಅಲ್ಲದೆ 'ಆಹವ' ಎಂದರೆ ಯುದ್ಧ ಎಂದರ್ಥ. ಇದು ಲವಕುಶರು ತಮ್ಮ ತಂದೆ ರಾಮನೊಡನೆ 'ಆಹವ' (=ಯುದ್ಧ) ಮಾಡಿದ ಕಾರಣದಿಂದ ಇದು 'ಆವನಿ' ಆಯಿತಂತೆ

ರಾಮಾಯಣದ ಕಥಾವಸ್ತುವಿನ ಅನೇಕ ಘಟನಾವಳಿಗಳನ್ನು ಗರ್ಭೀಕರಿಸಿಕೊಂಡಿರುವ ಅನೇಕ ಸ್ಥಳಪುರಾಣಗಳು ಇಲ್ಲಿ ಜೀವಂತವಾಗಿವೆ. ಇಲ್ಲಿ ಅತ್ಯದ್ಭುತ ಶೈಲಿಯ ಶ್ರೀರಾಮಲಿಂಗೇಶ್ವರಸ್ವಾಮಿಯ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿಯೇ ಒಂದಾದ ಮೇಲೊಂದರಂತೆ ಗಣಪತಿ ದೇವಾಲಯ, ಸುಬ್ರಹ್ಮಣ್ಯಸ್ವಾಮಿದೇವಾಲಯ, ಲಕ್ಷ್ಮಣೇಶ್ವರದೇವಾಲಯ, ಭರತೇಶ್ವರ ದೇವಾಲಯ, ಶತ್ರುಘ್ನೇಶ್ವರದೇವಾಲಯ,ಹನುಮಂತೇಶ್ವರದೇವಾಲಯ,ಸುಗ್ರೀವೇಶ್ವರದೇವಾಲಯ, ಅಂಗದೇಶ್ವರದೇವಾಲಯ ಮತ್ತು ಕಾಮಾಕ್ಷಿದೇವಾಲಯಗಳಿರುವುದು ಇಲ್ಲಿನ ವೈಶಿಷ್ಟ್ಯ.

ವಾಲ್ಮೀಕಿ ಮಹರ್ಷಿಗಳು ಇಲ್ಲಿರುವಾಗ ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾಮಾತೆಗೆ ಆಶ್ರಯ ನೀಡಿದ ಸ್ಥಳ ; ಸೀತಾಮಾತೆ ಲವಕುಶರಿಗೆ ಜನ್ಮ ನೀಡಿದ ಸ್ಥಳ ; ಲವಕುಶರು ಆಟವಾಡಿದ ಸ್ಥಳ ; ಅವರು ಇಲ್ಲಿ ಉಳಿದುಕೊಂಡಿದ್ದ ಸ್ಥಳ ಎಂದು ಹೇಳುವ ಗುಹೆಗಳನ್ನು ಇಲ್ಲಿನ ಜನರು ತೋರಿಸುತ್ತಾರೆ.

ಲವಕುಶರು ಹುಟ್ಟಿ ಬೆಳೆದು ವಾಲ್ಮೀಕಿ ಮಹರ್ಷಿಗಳಿಂದ ಸಕಲ ವಿದ್ಯಾಪಾರಂಗತರಾದದ್ದು ಇಲ್ಲಿಯೇ. ಅಲ್ಲದೆ ಅವರು ಶ್ರೀರಾಮನ ಯಜ್ಞಾಶ್ವವನ್ನು ಕಟ್ಟಿಹಾಕಿದ್ದು ಎಂದು ಹೇಳುವ ಬಂಡೆ ಇಲ್ಲಿದೆ. ಲವಕುಶರು ರಾಮನೊಡನೆ ಆಹವ (=ಯುದ್ಧ) ಮಾಡಿದ ಸ್ಥಳವೂ ಇದಂತೆ. ಇವಲ್ಲದೆ ಲವಕುಶರ ತೊಟ್ಟಿಲು, ಸೀತೆಯ ಅಡುಗೆ ಪಾತ್ರೆಗಳು, ಅವಳು ಬಟ್ಟೆ ಒಗೆಯುತ್ತಿದ್ದ ಕೊಳ, ರಾಮಲಕ್ಷ್ಮಣರು ಕುಳಿತಿದ್ದ ಬಂಡೆ – ಈ ಎಲ್ಲ ಶಿಲಾಸಾಧನಗಳೂ ಇಲ್ಲಿವೆ.

ಈ ಪರ್ವತದಲ್ಲಿ ವಾಲ್ಮೀಕಿಗಳ ಆಶ್ರಮವಲ್ಲದೆ ಏಕಾಂತರಾಮಸ್ವಾಮಿ ದೇವಾಲಯ, ತೊಟ್ಟಿಲಗುಂಡು, ಧನುಷ್ಕೋಟಿ ಎಂದು ಹೇಳುವ ಒಂದು ಕೊಳ ಮುಂತಾದ ಕುರುಹುಗಳು ಇಲ್ಲಿವೆ. ಧನುಷ್ಕೋಟಿಯಲ್ಲಿ ವರ್ಷದ ಎಲ್ಲಾ ಕಾಲದಲ್ಲೂ ನೀರಿರುತ್ತದೆಯಂತೆ. ಇದು ಎಂದೂ ಬತ್ತಿಹೋಗಿಲ್ಲ ಎಂದು ಹೇಳುತ್ತಾರೆ. ಇವುಗಳ ಜೊತೆಗೆ ಸೀತಾಮಾತೆಯ ದೇವಾಲಯ ಹಾಗೂ ಪಾರ್ವತಾದೇವಿಯ ದೇವಾಲಯಗಳೂ ಇಲ್ಲಿವೆ.

ಕೆಲವರು 'ಆವನಿ' ಎಂದರೆ ಭೂಮಿ. ಸೀತೆಯ ತಾಯಿ ಭೂಮಿಯಾದ್ದರಿಂದ ಈ ಊರಿಗೆ 'ಅವನಿ' ಎಂಬ ನಾಮವಿದ್ದು ಕ್ರಮೇಣ 'ಆವನಿ'ಯಾಗಿರಬಹುದು ಎಂದೂ ಹೇಳುತ್ತಾರೆ. ಮತ್ತೆ ಕೆಲವರು ಇದು ಸಂಸ್ಕೃತದ ಆಹವನೀಯದಿಂದಲೆ ಬಂದುದಾಗಿದೆಯೆನ್ನಲು ಅಡ್ಡಿಯಿಲ್ಲ ಎಂದು ಹೇಳುತ್ತಾರೆ. ಏನಾದರೂ ಆಗಲಿ ನಮ್ಮ ಆದಿಕವಿ ವಾಲ್ಮೀಕಿ ಕರ್ನಾಟಕದ ಕವಿಯೆ? ಹಾಗಿದ್ದರೆ ಅದು ಕನ್ನಡಿಗರ ಸೌಭಾಗ್ಯ ! ಕನ್ನಡಿಗರ ಹೆಮ್ಮೆ !

ಜನಪದ ರಾಮಾಯಣದ ಕಥೆಗಳು

ಸೀತಾರಾಮರ ಅವತರಣ



ಅಮರಕಥಾಮೃತ ರಾಮಾಯಣ



ರಾಮನ ಅವತಾರ

ವೈಕುಂಠದಲ್ಲಿ ವಿಷ್ಣು ಲಕ್ಷ್ಮಿಯೊಡನೆ ಏಕಾಂತದಲ್ಲಿರುವ ಸಮಯದಲ್ಲಿ ದುರ್ವಾಸಮುನಿಯು ವಿಷ್ಣುವನ್ನು ಕಾಣುವ ತವಕದಿಂದ ಬಂದನು. ವೈಕುಂಠದ ದ್ವಾರದಲ್ಲಿ ಕಾವಲಿದ್ದ ಜಯ–ವಿಜಯರು ದುರ್ವಾಸಮುನಿಯನ್ನು ತಡೆದು ನಿಲ್ಲಿಸಿದರು. ಮುಂಗೋಪಿಯಾದ ದುರ್ವಾಸನು ತನ್ನನ್ನು ತಡೆದು ನಿಲ್ಲಿಸಲು ಕಾರಣವೇನು ಎಂದು ಪ್ರಶ್ನಿಸಿದನು. ಅದಕ್ಕೆ ಜಯವಿಜಯರು "ಸ್ವಾಮಿಯು ಏಕಾಂತದಲ್ಲಿರುವಾಗ ಯಾರನ್ನೂ ಒಳಕ್ಕೆ ಬಿಡುವಂತಿಲ್ಲ. ತಾವು ತಪ್ಪು ತಿಳಿಯಬಾರದು!" ಎಂದರು. ಇದರಿಂದ ಕ್ರುದ್ಧನಾದ ದುರ್ವಾಸನು

"ಪಾಪಿಗಳೇ, ಕೇವಲ ದ್ವಾರಪಾಲಕರಾದ ನಿಮಗೆ ಇಷ್ಟೊಂದು ಗರ್ವವೆ? ವೈಕುಂಠ ದ್ವಾರದಲ್ಲಿ ಕಾವಲುಗಾರರಾಗಿರುವ ನಿಮ್ಮ ಕೊಬ್ಬು ಕರಗಬೇಕೆಂದರೆ ನೀವು ಭೂಮಿಯಲ್ಲಿ ಮಾನವರಾಗಿ ಹುಟ್ಟುವಂತಾಗಲಿ!" ಎಂದು ಶಪಿಸಿ ಜಯ–ವಿಜಯರನ್ನು ಲೆಕ್ಕಿಸದೆ ಮುನ್ನುಗ್ಗಿದನು.

ದುರ್ವಾಸನು ಮುನ್ನುಗ್ಗಿ ಹೋಗುತ್ತಿರುವಾಗ ಆ ಮುಂದಿನ ದ್ವಾರದಲ್ಲಿ ವಿಷ್ಣುವಿನ ವಾಹನ ಗರುಡನು ಮುನಿಯನ್ನು ತಡೆದು ನಿಲ್ಲಿಸಿದನು.

"ಪರಮಾತ್ಮನು ಏಕಾಂತದಲ್ಲಿರುವಾಗ ಅವರ ಏಕಾಂತಕ್ಕೆ ಭಂಗ ಬರದಂತೆ ನೋಡಿಕೊಳ್ಳುವುದು ದಾಸರಾದ ನಮ್ಮ ಕರ್ತವ್ಯ. ತಾವು ದಯಮಾಡಿ ಮತ್ತೊಮ್ಮೆ ಬನ್ನಿ. ಇದು ಪರಮಾತ್ಮನ ದರ್ಶನಕ್ಕೆ ತಕ್ಕ ಸಮಯವಲ್ಲ" ಎಂದನು. ಗರುಡನ ಮಾತನ್ನು ಕೇಳಿ ಕೆರಳಿದ ದುರ್ವಾಸನು,

"ಎಲಾ ನೀಚ ಪಕ್ಷಿಯೇ, ನನ್ನನ್ನೂ ನಿಗ್ರಹಿಸುವಷ್ಟು ಅಹಂಕಾರವೆ? ನೀನು ವಿಷ್ಣುವಿನ ವಾಹನ ಎಂಬ ಕಾರಣಕ್ಕೆ ನಿನ್ನ ಉದ್ಧಟತನ ಇತಿಮಿತಿಯಿಲ್ಲದಂತಾಗಿದೆ. ಪಾಪಿ, ನಿನ್ನ ಪೊಗರು ಹೇಳಹೆಸರಿಲ್ಲದಂತಾಗಬೇಕಾದರೆ ನೀನು ಮಾನವನಾಗಿ ಭೂಮಿಯಲ್ಲಿ ಹುಟ್ಟು. ಆಗಲಾದರೂ ನಿನ್ನ ಸೊಕ್ಕು ಅಡಗೀತು!" ಎಂದು ಶಪಿಸಿ ಗರುಡನನ್ನು ಪಕ್ಕಕ್ಕೆ ತಳ್ಳಿ ಮುನ್ನಡೆದನು.

ವಾಸ್ತವವಾಗಿ ಆ ಸಮಯದಲ್ಲಿ ಲಕ್ಷ್ಮೀನಾರಾಯಣರು ಏಕಾಂತದಲ್ಲಿ ಇದ್ದುದರಿಂದ ದುರ್ವಾಸನ ಪ್ರವೇಶ ಅವರ ಅರಿವಿಗೆ ಬರಲೇ ಇಲ್ಲ. ಅವರು ಮೈಮರೆತಿರುವುದನ್ನು ಕಂಡು "ಈ ವಿಷ್ಣು ಹಾಗೂ ಈ ಲಕ್ಷ್ಮಿ ಬೇಕೆಂದೇ ನನ್ನನ್ನು

ಅಲಕ್ಷಿಸಿ ಸುಖಸಲ್ಲಾಪದಲ್ಲಿ ತಲ್ಲೀನರಾಗಿದ್ದಾರೆ. ಈ ಅಹಂಕಾರಕ್ಕೆ ಪ್ರತಿಫಲವಾಗಿ ಇವರು ಭೂಮಿಯಲ್ಲಿ ನರಜನ್ಮವೆತ್ತುವಂತಾಗಲಿ. ಭೂಮಿಯಲ್ಲಿ ಇಂಥ ಸುರತ ಸುಖ-ಸಲ್ಲಾಪಗಳು ಇವರಿಗೆ ಸಿಗದಂತಾಗಲಿ!" ಎಂದು ಶಪಿಸಿದನು.

ದುರ್ವಾಸನ ಈ ಶಾಪದಿಂದ ವಿಷ್ಣು ಉದ್ವಿಗ್ನನಾಗಿ "ಮಹರ್ಷಿ ಸ್ಥಾನ-ಮಾನಗಳ ವಿವೇಕವಿಲ್ಲದೆ ಹೊತ್ತು-ಗೊತ್ತುಗಳ ಪರಿವೆಯಿಲ್ಲದೆ ಘನತೆ-ಗೌರವಗಳ ಅರಿವಿಲ್ಲದೆ ಏಕಾಂತದಲ್ಲಿರುವ ಸಮಯದಲ್ಲಿ ಅಜ್ಞಾನದ ಅತಿರೇಕದಿಂದ ಕಾಗೆಯಂತೆ ಅರುಚಲು ನಿಮಗೆ ನಾಚಿಕೆಯಾಗುವುದಿಲ್ಲವೆ? ಏಕಾಂತದಲ್ಲಿರುವುದನ್ನೂ ಲೆಕ್ಕಿಸದೆ 'ಕಾಕಾಕಾ' ಎಂದು ಕಿರುಚಿಕೊಂಡ ನೀವು ಕಾಗೆಯಾಗಿ ಹುಟ್ಟುವಂತಾಗಲಿ!"

ದುರ್ವಾಸನಿಗೆ ತನ್ನಿಂದಾದ ಅಚಾತುರ್ಯ ಈಗ ಅರಿವಾಯಿತು. ಶಾಪಕ್ಕೆ ತುತ್ತಾಗಿ ತತ್ತರಿಸಿಹೋದನು. ಪಶ್ಚಾತ್ತಾಪದ ಕುಲುಮೆಯಲ್ಲಿ ಕುದಿಯುತ್ತ,

"ಪ್ರಭೂ, ಶತಾಪರಾಧವಾಯ್ತು. ನಾನು ಪಾಪಿ. ತಪ್ಪು ಮಾಡಿಬಿಟ್ಟೆ. ನನ್ನನ್ನು ಕ್ಷಮಿಸಿ ಉದ್ಧಾರ ಮಾಡಿ ಸ್ವಾಮಿ" ಎಂದು ಪಾದಕ್ಕೆ ಬಿದ್ದು ಕಂಬನಿ ಸುರಿಸುತ್ತ ಬೇಡಿಕೊಂಡನು. ಆಗ ವಿಷ್ಣು,

"ಮಹರ್ಷಿ, ನಾನು ಭೂಮಿಯಲ್ಲಿ ಕ್ಷತ್ರಿಯ ಕುಮಾರನಾಗಿ ಹುಟ್ಟುತ್ತೇನೆ. ಆಗ ಕಾಗೆಯಾಗಿ ಹುಟ್ಟಿರುವ ನಿಮ್ಮನ್ನು ನನ್ನ ಬಾಣದಿಂದ ಕೊಂದು ನಿಮಗೆ ಮುಕ್ತಿ ಕೊಡುತ್ತೇನೆ" ಎಂದನು.

ವಿಷ್ಣುವಿನ ಮಾತನ್ನು ಕೇಳಿ ದುರ್ವಾಸ ಋಷಿಯು ವಿನೀತ ಭಾವದಿಂದ ಚರಣಗಳಿಗೆ ನಮಸ್ಕರಿಸಿದನು.

ಹೀಗೆ ದುರ್ವಾಸ ಋಷಿಗಳ ಕಾರಣದಿಂದ ವಿಷ್ಣು ಶ್ರೀರಾಮಚಂದ್ರನಾಗಿ, ಲಕ್ಷ್ಮೀ ಸೀತಾದೇವಿಯಾಗಿ, ಗರುಡನು ಲಕ್ಷ್ಮಣನಾಗಿ, ಜಯ-ವಿಜಯರು ಭರತ-ಶತ್ರುಘ್ನರಾಗಿ, ದುರ್ವಾಸರು ಕಾಗೆಯಾಗಿ ಭೂಮಿಯಲ್ಲಿ ಅವತರಿಸಬೇಕಾಯ್ತು.

ಇವನು ದಶರಥ – ಅವನು ದಶಶಿರ

ದೇವೇಂದ್ರನಿಗೆ ರಾಕ್ಷಸರ ಕಾಟ ಅತಿಯಾಯಿತು. ಅವರಿಂದ ಪಾರಾಗುವ ದಾರಿಯನ್ನೇ ಕಾಣದೆ ಪರಿತಪಿಸಬೇಕಾಯಿತು. ಆ ಸಮಯಕ್ಕೆ ಅಲ್ಲಿಗೆ ಬಂದ ನಾರದಮಹರ್ಷಿಯು ದೇವೇಂದ್ರನ ಸಂಕಟವನ್ನು ಕೇಳಿ,

"ಇದಕ್ಕೆ ಅಯೋಧ್ಯೆಯ ಅರಸನಾದ ಸಹಸ್ರಗಜಬಲ(ದಶರಥ)ನಲ್ಲದೆ ಬೇರೆ ಯಾರಿಂದಲೂ ಸಮಸ್ಯೆ ಬಗೆಹರಿಯದು" ಎಂದನು. ಅದಕ್ಕೆ ದೇವೇಂದ್ರನು ನಾರದರ ಸಹಾಯದಿಂದ ಸಹಸ್ರಗಜಬಲನನ್ನು ಕರೆಸಿಕೊಂಡು,

"ರಘುಕುಲೋತ್ತಮ ರಘುಕುಲ ಸಾರ್ವಭೌಮ ಶೌರ್ಯ ಸಾಹಸಗಳ ಅಪ್ರತಿಮ ಮಹಾವೀರ ಸಹಸ್ರಗಜಬಲ ದೇವಾದಿದೇವತೆಗಳನ್ನು ಕಾಡುತ್ತಿರುವ ಆ ದುಷ್ಟರಾಕ್ಷಸರನ್ನು ಸಂಹರಿಸಿ ನಮ್ಮೆಲ್ಲರನ್ನು ರಕ್ಷಿಸು ಚಕ್ರವರ್ತಿ" ಎಂದು ಪ್ರಾರ್ಥಿಸಿದನು.

"ದೇವತೆಗಳ ಒಡೆಯನೇ ನನ್ನನ್ನು ದೀನನಾಗಿ ಪ್ರಾರ್ಥಿಸುತ್ತಿರುವಾಗ ನನ್ನ ಹಿರಿಮೆಯು ಹಿಗ್ಗಿತು" ಎಂದು ಭಾವಿಸಿದ ಸಹಸ್ರಗಜಬಲನು ಕೂಡಲೆ ಕಾರ್ಯಶೀಲನಾಗಲು ಒಪ್ಪಿದನು. ಅದಕ್ಕೆ ದೇವೇಂದ್ರನು –

"ಆ ರಕ್ಕಸರಾಜರು ಹತ್ತು ದಿಕ್ಕುಗಳಿಂದ ಬಂದು ನಿಮ್ಮನ್ನು ಮುತ್ತುತ್ತಾರೆ" ಎಂದನು. ಅದಕ್ಕೆ ಸಹಸ್ರಗಜಬಲ ಚಕ್ರವರ್ತಿಯೂ –

"ನಾನೂ ಹತ್ತು ದಿಕ್ಕುಗಳಿಂದ ಏಕಕಾಲದಲ್ಲಿ ಎದುರಿಸಿ ಅವರ ರುಂಡಗಳನ್ನು ಚಂಡಾಡುತ್ತೇನೆ!" ಎಂದನು. ಸಹಸ್ರಗಜಬಲನ ಮಾತನ್ನು ಕೇಳಿ ದೇವೇಂದ್ರನ ಧೈರ್ಯ ದಾಂಗುಡಿಯಿಟ್ಟಿತು.

ಸಹಸ್ರಗಜಬಲ ಚಕ್ರವರ್ತಿಯು ರಾಕ್ಷಸರಾಜರನ್ನು ಎದುರಿಸಲು ಹೊರಟು ನಿಂತನು. ಹತ್ತು ರಥಗಳೂ ಸಿದ್ಧವಾಗಿದ್ದವು. ಹೊರಡುವ ಸಮಯಕ್ಕೆ ಸರಿಯಾಗಿ ಅವನ ಕಿರಿಯ ರಾಣಿ ಕೈಕೆಯು ಚಕ್ರವರ್ತಿಯ ಬಳಿಗೆ ಬಂದು ದೀರ್ಘದಂಡ ನಮಸ್ಕಾರ ಮಾಡಿ ರಥವನ್ನೇರಿ ವಾಘೆಯನ್ನು ಕೈಗೆತ್ತಿಕೊಂಡಳು. ಆಗ ಚಕ್ರವರ್ತಿಯು,

"ಕೈಕೆ ಇದೇನು ಹುಡುಗಾಟ?" ಎಂದು ಕೇಳಿದನು. ಅದಕ್ಕವಳು

"ಇದು ಹುಡುಗಾಟವಲ್ಲ ; ನಿಜದಾಟ. ನಾನು ರಥಗಳನ್ನು ನಡೆಸುತ್ತೇನೆ ನೀವು ನಿರಾತಂಕವಾಗಿ ಯುದ್ಧ ಮಾಡಿ ಆ ರಕ್ಕಸರನ್ನು ಸಂಹಾರ ಮಾಡಿ!" ಎಂದಳು.

ಕೈಕೆಯು ಗಜಾಶ್ವಗಳ ವಿದ್ಯೆಯನ್ನೆಲ್ಲ ಬಲ್ಲವಳಾಗಿದ್ದರಿಂದ ಚಕ್ರವರ್ತಿಯು ಒಪ್ಪಿ ರಥವನ್ನೇರಿದನು. ಸಹಸ್ರಗಜಬಲನು ಹತ್ತು ರಥಗಳನ್ನು ಏಕಕಾಲದಲ್ಲಿ ಓಡಿಸುತ್ತಾ ಮುನ್ನುಗ್ಗಿದನು. ಹತ್ತೂ ದಿಕ್ಕುಗಳಿಂದ ಹತ್ತು ಜನ ರಾಕ್ಷಸ ರಾಜರು ಸಹಸ್ರಗಜಬಲನನ್ನು ಸುತ್ತುವರೆದು ಯುದ್ಧಕ್ಕೆ ನಿಂತರು. ವೀರಾಧಿವೀರನೂ ಶೂರಾದಿಶೂರನೂ ಅಪ್ರತಿಮ ಸಾಹಸಿಯೂ ಪರಾಕ್ರಮ ಪುರುಷಸಿಂಹನೂ ಆದ ಸಹಸ್ರಗಜಬಲ ಚಕ್ರವರ್ತಿಯು ಹತ್ತೂ ಜನ ರಾಕ್ಷಸರಾಜರನ್ನು ಅಟ್ಟಾಡಿಕೊಂಡು 'ಕಚಕ್' 'ಕಚಕ್' ಎಂದು ಅವರ ಕುತ್ತಿಗೆಗಳನ್ನು ಕತ್ತರಿಸಿ ಎಸೆಯುತ್ತಿದ್ದನು. ಹೀಗೆ ಎಸೆಯುತ್ತಿದ್ದ ತಲೆಗಳೆಲ್ಲ "ಹರಹರ ಮಹಾದೇವ!" ಎಂದು ಹೇಳುತ್ತ ಹೋಗಿ ಶಿವನ ಪಾದದ ಮೇಲೆ ಬೀಳುತ್ತಿದ್ದವು. ಹತ್ತನೆಯವನ ತಲೆ ಕತ್ತರಿಸಬೇಕು ಎನ್ನುವಾಗ ರಥದ ಕೀಲು ಕಳಚಿಕೊಂಡಿತು. ಆ ಸಮಯದಲ್ಲಿ ಕೈಕೆಯು ತನ್ನ ಬೆರಳನ್ನು ಕೊಟ್ಟು

ಚಕ್ರ ಕಳಚಿಕೊಳ್ಳದಂತೆ ರಕ್ಷಿಸಿದಳು. ಆ ಕ್ಷಣದಲ್ಲೆ ಹತ್ತನೆಯ ರಕ್ಕಸನ ತಲೆಯು ಕತ್ತರಿಸಿ ಬಿತ್ತು.

ಹೀಗೆ ಸಹಸ್ರಗಜಬಲನು ಕತ್ತರಿಸಿದ ಹತ್ತು ರಕ್ಕಸರ ತಲೆಗಳು ಶಿವನ ಪದತಲದಲ್ಲಿ ಬಿದ್ದವು. ಶಿವನು ಅವುಗಳನ್ನು ನೋಡುತ್ತ,

"ಈ ತಲೆಗಳೆಲ್ಲವೂ ನನ್ನ ಪರಮಭಕ್ತರವು. ಆದ್ದರಿಂದ ಇವು ವ್ಯರ್ಥವಾಗಬಾರದು. ಈ ಹತ್ತೂ ತಲೆಗಳು ನನ್ನ ಪರಮಭಕ್ತನಾದ ಲಂಕೆಯ ಚಕ್ರೇಶ್ವರನ ಹೊಟ್ಟೆಯಲ್ಲಿ ಹುಟ್ಟಿ "ದಶಶಿರ" ಎಂಬ ಹೆಸರಿನಿಂದ ಕೀರ್ತಿಯನ್ನು ಹೊಂದಲಿ. ಇಂಥಾ ವೀರರನ್ನೆಲ್ಲ ಹತ್ತೂ ದಿಕ್ಕುಗಳಲ್ಲೂ ಏಕಕಾಲದಲ್ಲಿ ರಥ ಓಡಿಸುತ್ತ ಹೋರಾಡಿದ ಅಯೋಧ್ಯೆಯ ಚಕ್ರವರ್ತಿ ಶ್ರೇಷ್ಠನಿಗೆ ಇಂದಿನಿಂದ ಸಹಸ್ರ ಗಜಬಲ ಎಂಬ ಹೆಸರಿಗೆ ಬದಲಾಗಿ 'ದಶರಥ' ಎಂದು ಹೆಸರಾಗಲಿ ಎಂದು ಆಶೀರ್ವದಿಸಿದನು.

ಈಶ್ವರನ ಆಶೀರ್ವಚನವನ್ನು ಕೇಳಿದ ಸಹಸ್ರಗಜಬಲನು "ಕೃತಾರ್ಥನಾದೆ" ಎಂದು ಹಿಗ್ಗಿದನು.

ಇದೇ ಸಮಯದಲ್ಲಿ ರಥದ ಕೀಲು ಕಳಚಿಕೊಂಡಾಗ ತನ್ನ ಬೆರಳನ್ನು ಕೊಟ್ಟು ರಕ್ಷಿಸಿದ ಪತ್ನಿ ಕೈಕೆಯನ್ನು ಕೊಂಡಾಡುತ್ತ "ಏನಾದರೂ ನಿನ್ನ ಬಯಕೆಗಳಿದ್ದರೆ ಕೋರಿಕೊ. ನಾನು ನೀನು ಆಡಿದ ಮಾತನ್ನು ತಪ್ಪದೆ ಈಡೇರಿಸುತ್ತೇನೆ" ಎಂದನು. ಅದಕ್ಕೆ ಕೈಕೆಯು "ನೀವು ಆಡಿದ ಮಾತಿಗೆ ತಪ್ಪುವವರಲ್ಲ ಎಂಬುದನ್ನು ನಾನು ಬಲ್ಲೆ. ಈಗ ಬೇಡ ಸಮಯ ಬಂದಾಗ ಖಂಡಿತ ಕೇಳಿ ಪಡೆಯುತ್ತೇನೆ" ಎಂದು ಮುಖದಲ್ಲಿ ಮಂದಹಾಸ ಮಿನುಗಿಸಿದಳು.

ಹೀಗೆ ಸಹಸ್ರಗಜಬಲ ರಾಜನು "ದಶರಥ"ನಾದ ಲಂಕೆಯ ಚಕ್ರೇಶ್ವರನಿಗೆ ಹುಟ್ಟಿದ ಮಗ "ದಶಶಿರ"ನಾದ.

ರಾವಣ ಸೀತಾಗ ಸೀತೆ ಹುಟ್ಟಿದಳು

ಸೀತೆ ಜನಕಮಹಾರಾಜನ ಮಗಳೆಂದು ಹೇಳುವುದು ರೂಢಿಯಲ್ಲಿದೆ. ಆದರೆ ಅವಳು ಜನಕ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿದ ಮಗಳಲ್ಲ. ಒಮ್ಮೆ ಜನಕ ಮಹಾರಾಜನು ಹೊನ್ನಾರು ಕಟ್ಟಿಕೊಂಡು ಉಳುತ್ತಿರುವಾಗ ಉಕ್ಕೆತೆರೆಯೊಳಗೆ ಒಂದು ಚಿನ್ನದ ಪೆಟ್ಟಿಗೆ ಸಿಕ್ಕಿತು. ಆ ಪೆಟ್ಟಿಗೆಯನ್ನು ಕಂಡು ಆಶ್ಚರ್ಯಗೊಂಡು ಬಾಗಿಲು ತೆರೆದು ನೋಡಿದನು. ಅದರೊಳಗೆ ಆಗ ತಾನೆ ಹುಟ್ಟಿದ ಮುದ್ದಾದ ಹೆಣ್ಣು ಮಗುವೊಂದಿತ್ತು. ಇದರಿಂದ ಮಕ್ಕಳಿಲ್ಲದ ಜನಕ ಮಹಾರಾಜನಿಗೆ ಮಹದಾನಂದವಾಯಿತು. ಅವನು ಆ ಮಗುವನ್ನು ಎತ್ತಿಕೊಂಡು ಅರಮನೆಗೆ ಓಡೋಡಿ ಬಂದನು. ಆ ಮಗುವನ್ನು

ಹೆಂಡತಿಯ ಕೈಗಿತ್ತನು. ಆಗ ಆ ದಂಪತಿಗಳಿಗೆ ಆದ ಆನಂದ ಅಷ್ಟಿಷ್ಟಲ್ಲ. ಆ ಮಗುವಿಗೆ ವಿಜೃಂಭಣೆಯಿಂದ ನಾಮಕರಣ ಮಾಡಿದರು. ಅವಳು ಉಕ್ಕೆತೆರೆ(ಸೀತೆ) ಯೊಳಗೆ ಸಿಕ್ಕಿದ್ದರಿಂದ ಅವಳಿಗೆ ಸೀತೆ ಎಂದೇ ಹೆಸರಿಟ್ಟರು. ಅತ್ಯಂತ ಪ್ರೀತಿಯಿಂದ ಸಾಕಿ ಸಲಹಿದರು.

ಈ ಕಥೆಯಲ್ಲಿ ಸೀತೆ ಯಾರ ಮಗಳೆಂದು ತಿಳಿಯುವುದಿಲ್ಲ. ಹಾಗಾದರೆ ಸೀತೆ ಯಾರ ಮಗಳು ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದರೆ ಜನಪದ ನಿರುಕ್ತಿ ಕಥೆಯಲ್ಲಿ ಸೀತೆ ರಾವಣನ ಮಗಳೆಂದುದಲ್ಲದೆ ಅವಳಿಗೆ ಸೀತೆ ಎಂದು ಹೆಸರು ಬಂದ ಬಗೆಗೂ ವಿವರಣೆ ಇದೆ. ಆ ಕಥೆ ಹೀಗಿದೆ –

ಒಂದು ದಿನ ರಾವಣನ ಮಡದಿ ಮಂಡೋದರಿ ಅಂತಃಪುರದಲ್ಲಿ ಇರುವಾಗ ಗಿಳಿಯೊಂದು ತನ್ನ ಮರಿಗೆ ಗುಟುಕು ಕೊಡುತ್ತಿತ್ತು. ಇದನ್ನು ಕಂಡ ಮಂಡೋದರಿ–

'ಹಾ! ಹಾ! ದೇವರಿಗೆ ಕರುಣೆಯೆಂಬುದಿಲ್ಲ. ಈ ಗಿಳಿಗಿರುವ ಸಂತಾನ ಸೌಭಾಗ್ಯ ಸುಖ ನನಗಿಲ್ಲವಲ್ಲ. ಆ ಭಗವಂತ ನನಗೂ ಮಕ್ಕಳ ಭಾಗ್ಯ ಕರುಣಿಸಲಿಲ್ಲವಲ್ಲ!' ಎಂದು ನೊಂದು ಕಣ್ಣೀರು ತಂದುಕೊಂಡಳು. ಅದೇ ಸಮಯಕ್ಕೆ ಅಲ್ಲಿಗೆ ಬಂದ ರಾವಣನು ಮಂಡೋದರಿಯ ಕಣ್ಣಿನಲ್ಲಿ ನೀರಾಡುವುದನ್ನು ಕಂಡು ಕಾರಣವನ್ನು ಕೇಳಿದನು. ಮಂಡೋದರಿಯು ಗದ್ಗದ ಸ್ವರದಲ್ಲಿ,

'ಸ್ವಾಮಿ, ಆ ಭಗವಂತ ನಮಗೆ ಸಕಲೆಂಟು ಭಾಗ್ಯಗಳನ್ನು ಕೊಟ್ಟಿದ್ದಾನೆ. ಆದರೆ ಕಂದನ ಭಾಗ್ಯವನ್ನು ಕರುಣಿಸಲಿಲ್ಲವಲ್ಲ ಎಂದು ಕಣ್ಣೀರು ಬಂತು!' ಎಂದಳು. ಅದಕ್ಕೆ ರಾವಣನು ಸ್ವಲ್ಪ ಹೊತ್ತು ಚಿಂತಿಸಿ

'ಮಂಡೋದರಿ, ನೀನು ಚಿಂತಿಸಬೇಡ. ನಾನು ಪರಶಿವನನ್ನು ಕುರಿತು ತಪಸ್ಸು ಮಾಡಿ ಮಕ್ಕಳಾಗುವ ವರವನ್ನು ಪಡೆದುಕೊಂಡು ಬರುತ್ತೇನೆ. ಮೂರು ಲೋಕಗಳಿಗೂ ಮಹಾವೀರನೆನಿಸಿದ ರಾವಣನ ಮಡದಿಯಾದ ನೀನು ಕಣ್ಣೀರು ಸುರಿಸುವುದೇ? ಛೇ! ತರವಲ್ಲವಿದು. ಸುಮ್ಮನಿರು. ಶಿವನನ್ನು ಕಂಡುಬರುತ್ತೇನೆ' ಎಂದು ಹೇಳಿ ಶಿವನನ್ನು ಒಲಿಸಿಕೊಳ್ಳಲು ನಿಂತ ನಿಲುವಿನಲ್ಲಿಯೇ ಹೊರಟುಬಿಟ್ಟ.

ಘೋರಾರಣ್ಯದ ನಡುವೆ ನಿಂತು ರಾವಣ ಶಿವನನ್ನು ಕುರಿತು ಉಗ್ರವಾದ ತಪಸ್ಸು ಮಾಡಿದ. ರಾವಣನ ತಪಸ್ಸಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗಿ–

'ಭಕ್ತಾಗ್ರೇಸರ, ನಿನ್ನ ತಪಸ್ಸಿಗೆ ಮೆಚ್ಚಿದೆನು. ನಿನ್ನ ಅಪೇಕ್ಷೆ ಏನು ಹೇಳು'

'ದಯಾನಿಧಿ, ನನ್ನ ಧರ್ಮಪತ್ನಿ ಕಂದನ ಭಾಗ್ಯವನ್ನು ಕರುಣಿಸಿರೆಂದು ಕೇಳಲು ಹೇಳಿ ಕಳಿಸಿದ್ದಾಳೆ'

"ಹಾಗಾದರೆ ತೆಗೆದುಕೋ, ಈ ಇನಿಮಾವಿನ ಹಣ್ಣನ್ನು. ಇದನ್ನು ನಿನ್ನ ಹೆಂಡತಿಗೆ ತಿನ್ನಿಸು. ನಿಮ್ಮಿಬ್ಬರ ಅಭೀಷ್ಟವೂ ಸಿದ್ಧಿಸುತ್ತದೆ."

"ಧನ್ಯನಾದೆ ಪ್ರಭೂ ಧನ್ಯನಾದೆ!" ಎಂದು ಹೇಳುತ್ತ ರಾವಣನು ಪರಮೇಶ್ವರನ ಎದುರು ಕೈನೀಡಿ ಮಾವಿನಹಣ್ಣನ್ನು ಪಡೆದುಕೊಂಡು ಕೃತಜ್ಞತಾಭಾವದಿಂದ ಬೀಗಿದನು. ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ಶಿವನ ಪಾದಗಳಿಗೆ ಶಿರವಿಟ್ಟು ನಮಸ್ಕರಿಸಿದನು. ಆ ಕೂಡಲೆ ಶಿವನು ಅಂತರ್ಧಾನನಾದನು.

ಹರ್ಷಪುಲಕಿತನಾದ ರಾವಣನು ಮಾವಿನ ಹಣ್ಣನ್ನು ತೆಗೆದುಕೊಂಡು ತನ್ನ ಪಟ್ಟಣವಾದ ಲಂಕೆಯ ಕಡೆಗೆ ಮುಖ ಮಾಡಿದನು.

ಅದು ಬೇಸಿಗೆಯ ಕಾಲ. ಭಯಂಕರ ಬಿಸಿಲಿನಿಂದ ಭೂಮಿ ಬಾಯಾರಿ ಬಯಲಾಗಿ ಬಿದ್ದಿತ್ತು. ಕಾದ ನೆಲದ ಮೇಲಿಟ್ಟ ಕಾಲು ಕೆಂಡದ ಮೇಲಿರಿಸಿದ ಹಪ್ಪಳದಂತೆ ಹುರಿದುಹೋಗುತ್ತಿತ್ತು. ಧಗೆಯಿಂದಾಗಿ ರಾವಣನ ನಾಲಗೆ ಒಣಗಿತು. ತುಟಿಗಳು ಕರಿಕಾದವು. ಗಂಟಲು ಶುಷ್ಕವಾಯಿತು. ಬಾಯಿ ಒಣಗಿತು. ದಾಹದಿಂದ ಕುಡಿಯಲು ನೀರಿಗಾಗಿ ಸುತ್ತಮುತ್ತ ನೋಡಿದ. ಎಲ್ಲೆಲ್ಲಿ ನೋಡಿದರೂ ನೀರಿಲ್ಲ. ಹಳ್ಳಕೊಳ್ಳಗಳೆಲ್ಲ ಬತ್ತಿಹೋಗಿವೆ. ಎತ್ತೆತ್ತಲೂ ಒಂದು ತೊಟ್ಟು ನೀರೂ ಕಣ್ಣಿಗೆ ಬೀಳುತ್ತಿಲ್ಲ. ಈಗ ರಾವಣನಿಗೆ ಬಾಯಾರಿಕೆ ಜೊತೆಗೆ ಹಸಿವೆಯೂ ಪ್ರಾರಂಭವಾಯಿತು. ಹಸಿವು ಬಾಯಾರಿಕೆಗಳು ರಾವಣನನ್ನು ಒಂದೇ ಸಮನೆ ಬಾಧಿಸಿದವು. ಅತಿಯಾಗಿ ಆಯಾಸಗೊಂಡು ಹೆಜ್ಜೆ ಕಿತ್ತಿಡಲೂ ಅವನಿಗೆ ಸಾಧ್ಯವಾಗದೆ ಹೋಯಿತು. ತಲೆಸುತ್ತಿ ಬವಳಿ ಬಂದಂತಾಯಿತು. ಜೀವ ಈಗಲೋ ಇನ್ನೊಂದು ಘಳಿಗೆಗೋ ಎನ್ನುವಷ್ಟು ಘೋರಸ್ಥಿತಿ ಉಂಟಾಯಿತು. ಪ್ರಾಣ ಉಳಿದರೆ ಸಾಕು ಎಂಬ ಸ್ಥಿತಿಗೆ ಬಂದ ರಾವಣ ಥಟ್ಟನೆ ಕೈಯಲ್ಲಿದ್ದ ಮಾವಿನ ಹಣ್ಣನ್ನು ಹಿಂದು ಮುಂದು ಯೋಚಿಸದೆ ತಿಂದುಬಿಟ್ಟ. ತಿಂದು ಜೀವ ಉಳಿಸಿಕೊಂಡ.

ಹಾಗೂ ಹೀಗೂ ಹೇಗೋ ಲಂಕೆಯನ್ನು ಮುಟ್ಟಿದ. ನಡೆದ ಸಂಗತಿಯನ್ನೆಲ್ಲ ಮಂಡೋದರಿಗೆ ವಿವರಿಸಿ ಹೇಳಿದ. ಉಳಿದಿದ್ದ ಓಟೆಯನ್ನು ಅವಳ ಕೈಗಿತ್ತ. ಗಂಡ ಬದುಕಿ ಬಂದುದೇ ನನ್ನ ಪುಣ್ಯ ಎಂದುಕೊಂಡ ಮಂಡೋದರಿ ಓಟೆಯನ್ನು ಒಯ್ದು ಒಂದು ಗೂಡಿನಲ್ಲಿ ಮಡಗಿದಳು.

ಆಯಾಸಗೊಂಡಿದ್ದ ರಾವಣ ಅಂದು ಅಂತಃಪುರದಲ್ಲಿ ವಿಶ್ರಾಂತಿ ತೆಗೆದುಕೊಂಡ. ಹಣ್ಣು ತಿಂದಿದ್ದ ಒಂದು ದಿನಕ್ಕೇ ಅವನಿಗೆ ಒಂದು ತಿಂಗಳಾಯಿತು. ಎರಡನೇ ದಿನಕ್ಕೆ ಎರಡು ತಿಂಗಳಾಗಿ ರಾವಣ ಹೊಟ್ಟೆ ತೊಳಸಿದಂತಾಗಿ ವಾಂತಿ ಮಾಡಿಕೊಂಡ. ಹೊಟ್ಟೆ ಉಬ್ಬುತ್ತಿರುವುದನ್ನು ಕಂಡು ಗಡಗಡ ನಡುಗಿದ. ಮಂಡೋದರಿಗೆ ಗಂಡನ ಅವಸ್ಥೆ ಅರ್ಥವಾಗಲೇ ಇಲ್ಲ.

‘ಏನಾಯ್ತು ಸ್ವಾಮಿ? ಏನಾಯ್ತು ಸ್ವಾಮಿ?’ ಎಂದು ಪರದಾಡಿದಳು.

‘ಏನಾಯಿತು ಎಂದರೆ ಏನು ಹೇಳಲಿ? ಗಂಡಸರಿಗೆ ಆಗಬಾರದ್ದು ಆಗಿ ಹೋಗಿದೆ!’ ಎಂದು ಹೇಳಿ ರಾವಣ ಕಂಬಳಿಯಿಂದ ಹೊಟ್ಟೆಯನ್ನು ಮುಚ್ಚಿಕೊಂಡು ಮೈತುಂಬ ಹೊದ್ದುಕೊಂಡು ಅಂತಃಪುರದಲ್ಲೆ ಮಲಗಿಬಿಟ್ಟ. ಮೂರನೇ ದಿನಕ್ಕೆ ಮೂರು ತಿಂಗಳು. ನಾಲ್ಕನೇ ದಿನಕ್ಕೆ ನಾಲ್ಕು ತಿಂಗಳು – ಹೀಗೆ ಒಂಬತ್ತು ತಿಂಗಳು ತುಂಬಿತು.

ಈಗ ರಾವಣನಿಗೆ ಹೆರಿಗೆ ಬೇನೆ ಪ್ರಾರಂಭವಾಯಿತು. ಸಹಿಸಲು ಅಸಾಧ್ಯವಾದ ವೇದನೆಯನ್ನು ತಾಳಿಕೊಳ್ಳಲಾರದೆ ಬಾಯಿಬಾಯಿ ಬಡಿದುಕೊಂಡ.

‘ಈ ಹಾಳು ಹೆಂಗಸರು ಈ ಹೆರಿಗೆ ಬೇನೆಯನ್ನು ಹ್ಯಾಗೆ ತಾಳಿಕೊಳ್ಳುತ್ತಾರಪ್ಪ’ ಎನ್ನುತ್ತ ವಿಲಿವಿಲಿ ಒದ್ದಾಡಿದ.

ಮಂಡೋದರಿಗೆ ಏನು ಮಾಡಲೂ ತೋಚದಂತಾಯ್ತು. ಅವಳು ಅಸಹಾಯಕಳಾಗಿ ನೋಡುತ್ತ ನಿಂತಿದ್ದಳು. ಗಂಡನ ಕಷ್ಟವನ್ನು ನೋಡಿ ಅವಳ ಕಣ್ಣುಗಳಿಂದ ಘಳಘಳನೆ ನೀರ ಹನಿಗಳು ಉದುರಿದವು.

ಇಷ್ಟು ಹೊತ್ತು ಮಲಗಿ ಒದ್ದಾಡುತ್ತಿದ್ದ ರಾವಣ ಇದ್ದಕ್ಕಿದ್ದಂತೆ ಧಡಕ್ಕನೆ ಮೇಲೆದ್ದು ಕುಳಿತು ಕತ್ತನ್ನು ಮೇಲಕ್ಕೆ ಆನಿಸಿದ. ಹುಬ್ಬುಗಳು ಕಿರಿದಾದವು ; ಕಣ್ಣುಗಳು ಮುಚ್ಚಿಕೊಂಡವು. ಮೂಗಿನ ಹೊಳ್ಳೆಗಳು ಕುಣಿದಾಡಿದವು. ದೇಹದ ನರನಾಡಿಗಳೆಲ್ಲ ಸೆಟೆದಂತಾಗಿ ಎದೆಯುಬ್ಬಿಸಿದ ರಾವಣ ಕಷ್ಟದಿಂದ ಒಂದು ಸಲ ‘ಆsssಕ್ಷೀ!’ ಎಂದು ಸೀತನು.

ರಾವಣ ಸೀತ ಕೂಡಲೆ ಅವನ ಅಗಲವಾದ ಮೂಗಿನ ಹೊಳ್ಳೆ ಮತ್ತೂ ದೊಡ್ಡದಾಗಿ ಮತ್ತೊಮ್ಮೆ ‘ಆಕ್ಷಿ’ ಅನ್ನುವಷ್ಟರಲ್ಲಿ ಹೊಳ್ಳೆಯಿಂದ ಒಂದು ಹೆಣ್ಣು ಮಗು ಹೊರಕ್ಕೆ ಬಿದ್ದಿತು.

ಈಗ ರಾವಣ ನೆಮ್ಮದಿಯಿಂದ ಉಸಿರಾಡಿದ. ಅವನ ವೇದನೆಯೆಲ್ಲ ಪರಿಹಾರವಾಯಿತು. ಹೀಗೆ ರಾವಣ ‘ಸೀತು’ದರಿಂದ ಹುಟ್ಟಿದ ಮಗುವೇ ಸೀತೆ.

ಪುರುಷನು ಗರ್ಭಧರಿಸಿ ಹುಟ್ಟಿದ ಮಗುವಿನ ಗ್ರಹಗತಿಗಳನ್ನು ತಿಳಿಸಲು ಜೋಯಿಸರನ್ನು ಕರೆಸಿದರು. ಜೋಯಿಸರು “ಈ ಮಗು ನಿಮ್ಮ ಸರ್ವನಾಶಕ್ಕೆ ಹುಟ್ಟಿದೆ. ಕ್ಷಣಕಾಲವೂ ಇದನ್ನು ಇಟ್ಟುಕೊಳ್ಳಬೇಡಿ, ಇದನ್ನು ಕಾಡಿಗೆ ತೆಗೆದುಕೊಂಡು ಹೋಗಿ ಕೊಂದುಬಿಡಿ” ಎಂದರು.

ರಾವಣನು ಈ ಕೆಲಸವನ್ನು ವಿಭೀಷಣನಿಗೆ ವಹಿಸಿದನು. ಕರುಣಾಮಯಿಯಾದ ವಿಭೀಷಣನು ಅದನ್ನೊಂದು ಚಿನ್ನದ ಪೆಟ್ಟಿಗೆಯಲ್ಲಿ ಮಡಗಿ ಮಿಥಿಲೆಯ ಹೊರಭಾಗದ ನೆಲದಲ್ಲಿ ಹುದುಗಿಸಿಟ್ಟು ಹೊರಟು ಹೋದನು.

ಮಿಥಿಲೆಯ ಒಕ್ಕಲಿಗರು ಸೂರ್ಯೋದಯ ಕಾಲಕ್ಕೆದ್ದು ಕೈಕಾಲು ಮುಖ ತೊಳೆದುಕೊಂಡು ಹಣೆಗೆ ವಿಭೂತಿ ಧರಿಸಿ ಭೂಮಿ ತಾಯಿಗೆ ನಮಸ್ಕರಿಸಿ ಹೊಲ ಉಳಲು ಹೋದರು. ಹಾಗೆ ಉಳುತ್ತಿರುವಾಗ ಉಕ್ಕೆ ತೆರೆಯಲ್ಲಿ ಚಿನ್ನದ ಪೆಟ್ಟಿಗೆಯನ್ನು ಕಂಡರು. ಈ ವಿಷಯವನ್ನು ರಾಜನಿಗೆ ತಿಳಿಸಿದರು.

ಜನಕ ಮಹಾರಾಜನು ಹೊಲಕ್ಕೆ ಬಂದು ಉಕ್ಕೆತೆರೆಯಲ್ಲಿದ್ದ ಚಿನ್ನದ ಪೆಟ್ಟಿಗೆಯ ಬಾಗಿಲು ತೆರೆದನು. ಅದರಲ್ಲಿದ್ದ ಮುದ್ದಾದ ಹೆಣ್ಣುಮಗುವನ್ನು ಕಂಡು ಮಕ್ಕಳಿಲ್ಲದಿದ್ದ ಅವನು ಹರ್ಷಾತಿಶಯದಿಂದ ಆ ಮಗುವನ್ನು ಅರಮನೆಗೆ ಎತ್ತಿಕೊಂಡು ಹೋದನು. ಹೀಗೆ ಉಕ್ಕೆತೆರೆಯಲ್ಲಿ ಸಿಕ್ಕಿದ ಮಗುವಿಗೆ ಸೀತೆ ಎಂದು ನಾಮಕರಣ ಮಾಡಿ ಪ್ರೀತಿಯಿಂದ ಸಾಕಿಕೊಂಡರು.

ಸೀತೆ : ಜನಕನ ಮಗಳು : ಜಾನಕಿ

ಶಿವನ ವರದಿಂದ ಉನ್ಮತ್ತನಾದ ರಾವಣನು ದೇವಾಧಿದೇವತೆಗಳನ್ನೆಲ್ಲ ಕೊಲ್ಲುವುದು ಅಥವಾ ಗೆಲ್ಲುವುದು ಎಂದು ನಿರ್ಧರಿಸಿದ. ಆಗ ಅವನ ವಿವೇಕ ಎಚ್ಚೆತ್ತು–

"ನಾನು ನರಸುರಕಿನ್ನರಕಿಂಪುರುಷ ದೇವಾಧಿದೇವತೆಗಳನ್ನು ಕೊಂದರೆ ನನ್ನ ಆಡಳಿತದ ವೈಭವವನ್ನು ನೋಡಲು ಯಾರಿರುತ್ತಾರೆ? ಆದ್ದರಿಂದ ದೇವಾಧಿ ದೇವತೆಗಳನ್ನು ಕೊಲ್ಲದೆ ಗೆಲ್ಲುವುದೇ ಸರಿಯಾದ ಕ್ರಮ!' ಎಂದು ನಿರ್ಧರಿಸಿ ಲೋಕಲೋಕಗಳಿಗೆಲ್ಲ ಪ್ರವೇಶಿಸಿ ಅಲ್ಲಿರುವ ದೇವಾಧಿದೇವತೆಗಳನ್ನು ಗೆದ್ದನು. ಅವರನ್ನು ಗೆದ್ದಿದ್ದೇನೆ ಎಂದು ತಿಳಿಯಬೇಕಾದರೆ ಅದಕ್ಕೊಂದು ತಕ್ಕ ಗುರುತು ಬೇಕು. ಅದಕ್ಕಾಗಿ ಸೋತವರ ಹಣೆಯಲ್ಲಿ ಒಂದು ರಂಧ್ರ ಮಾಡಿ ಅದರಿಂದ ಒಂದು ತೊಟ್ಟು ರಕ್ತವನ್ನು ತೆಗೆದುಕೊಂಡು ಒಂದು ಜಾಡಿಯಲ್ಲಿ ಅದನ್ನು ಸಂಗ್ರಹಿಸಿಟ್ಟುಕೊಳ್ಳತೊಡಗಿದ.

ಹೀಗೆ ಲೋಕ ಲೋಕಗಳ ರಾಜಾಧಿರಾಜರನ್ನು ವೀರಾಧಿವೀರರನ್ನು ಸೋಲಿಸಿ ಅವರೆಲ್ಲರ ಒಂದೊಂದು ತೊಟ್ಟು ರಕ್ತವನ್ನು ಜಾಡಿಯಲ್ಲಿ ಸಂಗ್ರಹಿಸಿ ಅರಮನೆಗೆ ತಂದನು. ಮಂಡೋದರಿಯು ಕುತೂಹಲದಿಂದ ಇದೇನೆಂದು ಕೇಳಿದಳು – "ಇದು ಸೋತವರ ರಕ್ತವೆಂದರೆ ಅದು ಮಂಡೋದರಿಗೆ ಪ್ರಿಯವಾಗುವುದಿಲ್ಲ" ಎಂದುಕೊಂಡು "ಇದು ವಿಷ! ಭಯಂಕರ ವಿಷ! ಇದು ಕಾರ್ಕೋಟಕ ವಿಷ! ಇದನ್ನು ಮುಟ್ಟುಗಿಟ್ಟೀಯೆ ಜೋಕೆ!" ಎಂದು ಎಚ್ಚರಿಸಿ ಅದನ್ನು ಗೂಡೊಂದರಲ್ಲಿ ಭದ್ರಪಡಿಸಿದ.

ಆದರೆ ರಾವಣನು ಸೋಲನೊಪ್ಪದವರನ್ನು ಎಳೆದುಕೊಂಡು ಬಂದು ಕ್ರೂರವಾಗಿ ದಂಡಿಸುತ್ತಿದ್ದನು. ಆ ವೀರರ ಪತ್ನಿಯರು ಗೋಳಾಡುವುದನ್ನು ಕಂಡ ಮಂಡೋದರಿಗೆ ಜೀವನವೇ ಬೇಸರ ಎನಿಸಿತು. ಅವಳು ತನ್ನ ಪ್ರಾಣ ಕಳೆದುಕೊಳ್ಳಬೇಕು ಎಂದು ನಿಶ್ಚಯಿಸಿ ರಾವಣನು ವಿಷವೆಂದು ಹೇಳಿ ಗೂಡಿನಲ್ಲಿ ತಂದಿಟ್ಟಿದ್ದ ಶತ್ರುಗಳ ರಕ್ತವನ್ನು ಕುಡಿದುಬಿಟ್ಟಳು!

ವಿಚಿತ್ರವೆಂದರೆ ಆ ರಕ್ತದ ಕಾರಣದಿಂದ ಅವಳು ಗರ್ಭಿಣಿಯಾದಳು. ಒಂದು ಹೆಣ್ಣುಮಗುವನ್ನೂ ಹಡೆದಳು. ಹೆಂಡತಿಯು ಹೆಣ್ಣು ಮಗುವಿಗೆ ಜನ್ಮ ನೀಡಿದಳೆಂದು ತಿಳಿದ ರಾವಣನು ಆ ಕೂಡಲೆ ಜೋಯಿಸರನ್ನು ಕರೆದು ಆ ಮಗುವಿನ ಗ್ರಹನಕ್ಷತ್ರಗಳನ್ನು ತಿಳಿದು ಜಾತಕ ಬರೆಯಲು ಹೇಳಿದನು. ಆ ಜೋಯಿಸರುಗಳು ಮಗುವಿನ ಜನ್ಮನಕ್ಷತ್ರವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ,

"ಪ್ರಭೂ, ಈ ಮಗು ಹುಟ್ಟಿದ ಘಳಿಗೆ ಸುತರಾಂ ಚನ್ನಾಗಿಲ್ಲ. ಇದರಿಂದ ತಂದೆಗೇ ಕಂಟಕವೆಂದು ಬರುತ್ತಿದೆ. ಆದ್ದರಿಂದ ಈ ಮಗುವನ್ನು ಸಮುದ್ರಕ್ಕೆ ಬಿಸಾಡುವುದೇ ಶ್ರೇಯಸ್ಕರವೆನಿಸುತ್ತದೆ!" ಎಂದರು. ಚಿಂತಾಕ್ರಾಂತನಾದ ರಾವಣನು ಶಿಶುಹತ್ಯೆಗೆ ಒಡಂಬಡದೆ ಚಿನ್ನದ ಪೆಟ್ಟಿಗೆಯಲ್ಲಿ ಮಲಗಿಸಿ ಕಡಲಿಗೆ ಬಿಡಿಸಿದನು.

ಮೀನು ಬೇಟೆಗೆ ಹೋಗಿದ್ದ ಬೆಸ್ತರು ಚಿನ್ನದ ಪೆಟ್ಟಿಗೆಯನ್ನು ಎತ್ತಿಕೊಂಡರೂ ಅದನ್ನು ಊರೊಳಕ್ಕೆ ತೆಗೆದುಕೊಂಡು, ಹೋಗಲು ಹೆದರಿ "ಯಾರೂ ಕಾಣದ ಸಮಯದಲ್ಲಿ ಬಂದು ತೆಗೆದುಕೊಂಡು ಹೋಗೋಣ" ಎಂದು ನೆಲದಲ್ಲಿ ಮರೆಮಾಡಿ ಹೊರಟುಹೋದರು.

ಅಂದು ಯುಗಾದಿಹಬ್ಬ. ಮಿಥಿಲೆಯ ಅರಸ ಜನಕ ಮಹಾರಾಜನು ಚಿನ್ನದ ನೇಗಿಲಿನಿಂದ ಹೊನ್ನಾರು ಕಟ್ಟಿ ಹೊಲ ಉಳಲು ಬಂದನು. ಆಗ ಅವನ ನೇಗಿಲಿನ ಗುಳಕ್ಕೆ ಬೆಸ್ತರು ಮುಚ್ಚಿಟ್ಟಿದ್ದ ಚಿನ್ನದ ಪೆಟ್ಟಿಗೆ ಸಿಕ್ಕಿತು. ಆ ಪೆಟ್ಟಿಗೆಯ ಬಾಗಿಲನ್ನು ತೆಗೆದು ನೋಡಿದಾಗ ಮುದ್ದಾದ ಹೆಣ್ಣುಮಗು ನಗು ನಗುತ್ತ ಜನಕನ ಹೃದಯವನ್ನು ಸೂರೆಗೊಂಡಿತು. ಆ ಕಂದನನ್ನು ಕಂಡ ಜನಕರಾಜನು ಭಾಗ್ಯದ ಲಕ್ಷ್ಮಿಯಂತಿದ್ದ ಆ ಮಗುವನ್ನು ಬಾಚಿ ಎತ್ತಿಕೊಂಡು ಸಂಭ್ರಮದಿಂದ ಅರಮನೆಗೆ ಹೋಗಿ ಮಡದಿಯ ಕೈಗಿತ್ತನು.

ಇದರಿಂದಾಗಿ ಜನಕನ ಮಗಳಾದ ಜಾನಕಿಯು ಹೊಲದ ಉಕ್ಕೆತೆರೆಯಲ್ಲಿ – ಅಂದರೆ – ನೇಗಿಲಸಾಲಿ(ಸೀತೆ)ನಲ್ಲಿ ಸಿಕ್ಕಿದ್ದರಿಂದ ಅವಳಿಗೆ 'ಸೀತೆ' ಎಂದು ಹೆಸರಾಯಿತು.

ಸೀತೆ : ಒಕ್ಕಲಿಗರು ಕಳಕೊಂಡ ಭಾಗ್ಯಲಕ್ಷ್ಮಿ

ತ್ರೇತಾಯುಗದಲ್ಲಿ ಭಾಗ್ಯಲಕ್ಷ್ಮಿಯು ಸದಾಕಾಲ ದುಡಿಯುವ ಎಂದೂ ವಿಶ್ರಾಂತಿ ಬಯಸದ, ವ್ಯವಸಾಯದಲ್ಲೇ ಜೀವನಪರ್ಯಂತ ನಿರತರಾಗಿರುವ ಒಕ್ಕಲಿಗರ ವಿಚಾರದಲ್ಲಿ ಪ್ರಸನ್ನಳಾದಳು. ಈ ಒಕ್ಕಲಿಗರಿಗೆ ನಾನು ಮಗಳಾಗಿ ಹೋದರೆ ದುಡಿಯುವ ಅವರ ಕಷ್ಟಗಳೂ ತೀರುತ್ತವೆ. ಅವರು ಪಶುಪಕ್ಷಿಗಳಾದಿಯಾಗಿ ಎಲ್ಲ ಜೀವಿಗಳಿಗೂ ಅನ್ನವನ್ನು ಕೊಟ್ಟು ಧನ್ಯರಾಗುತ್ತಾರೆ ಎಂದು ಯೋಚಿಸಿದಳು. "ಆದರೆ ನಾನು ಮಾನವರ ಗರ್ಭದಲ್ಲಿ ಹುಟ್ಟಿ ಮಲಿನವಾಗುವಂತಿಲ್ಲ. ಆದ್ದರಿಂದ ಏನು ಮಾಡಲಿ?" ಎಂದು ಯೋಚಿಸಿ ಅಯೋನಿಜೆಯಾಗಿಯೇ ಒಕ್ಕಲಿಗರಿಗೆ ಸಿಗಬೇಕೆಂದು ನಿರ್ಧರಿಸಿದಳು.

ಒಬ್ಬ ಒಕ್ಕಲಿಗ ಸೂರ್ಯೋದಯಕ್ಕೆ ಮುಂಚೆಯೇ ಎದ್ದು ಕೈಕಾಲು ಮುಖಗಳನ್ನು ತೊಳೆದುಕೊಂಡು, ಮೂಡಲಲ್ಲಿ ಮುಖವೆತ್ತಿದ ಸೂರ್ಯದೇವನಿಗೆ ನಮಸ್ಕರಿಗೆ ಆರು ಕಟ್ಟಿಕೊಂಡು ಉಳಲು ಹೊಲದ ಕಡೆಗೆ ನಡೆದನು. ಅವನು ಅಲ್ಲಿ ಭೂಮಿ ತಾಯಿಗೆ ನಮಸ್ಕರಿಸಿ ಉಳುವುದಕ್ಕೆ ಪ್ರಾರಂಭಿಸಿದನು.

ಒಕ್ಕಲಿಗನ ಬಗೆಗೆ ಪ್ರಸನ್ನಳಾಗಿದ್ದ ಭಾಗ್ಯಲಕ್ಷ್ಮಿಯು ಒಂದು ಹೆಣ್ಣುಮಗುವಾಗಿ ಉಕ್ಕೆತೆರೆಯೊಳಗೆ ಕಾಣಿಸಿಕೊಂಡಳು. ಇದನ್ನು ಕಂಡ ಒಕ್ಕಲಿಗನು 'ಯಾರೋ ಒಂದು ಹೆಣ್ಣುಮಗುವನ್ನು ಹೊಲದ ಉಕ್ಕೆತೆರೆಯೊಳಗೆ ಮಲಗಿಸಿ ಹೋಗಿದ್ದಾರೆ. ಈ ಮಗುವನ್ನು ಏನು ಮಾಡಲಿ? ನನಗೋ ಮನೆತುಂಬ ಮಕ್ಕಳಿವೆ. ಅವುಗಳನ್ನು ಸಾಕುವುದೇ 'ಹರುಂಸಂಕ್ಟ' ಆಗಿರುವಾಗ ಇದು ಬ್ಯಾರೆ ನನಗೆ ಯಾಕೆ ಬೇಕು?' ಎಂದು ಯೋಚಿಸುತ್ತಿದ್ದ ಅವನಿಗೆ ಥಟ್ಟನೆ ತನ್ನ ದೊರೆ ಜನಕ ಮಹಾರಾಜನ ನೆನಪಾಯಿತು. 'ಪಾಪ! ನಮ್ಮ ಮಾರಾಜ್ರುಗೆ ಮಕ್ಳೆ ಇಲ್ಲ! ಅವರಿಗಾದ್ರೂ ಈ ಮಗೂನ ಕೊಡನ' ಎಂದು ಹೇಳುತ್ತ ರಾಜನ ಬಳಿಗೆ ಹೋಗಿ ಸುದ್ದಿ ಮುಟ್ಟಿಸಿದ. ಜನಕ ಮಹಾರಾಜನು ಓಡೋಡಿ ಬಂದು ಉಕ್ಕೆತೆರೆಯಲ್ಲಿ ಮಂದಹಾಸ ಬೀರುತ್ತ ಕೈಕಾಲುಗಳನ್ನು ಆಡಿಸುತ್ತ ಇದ್ದ ಮುದ್ದುಮಗುವನ್ನು ಎತ್ತಿಕೊಂಡು 'ಇದು ನನ್ನ ಸೌಭಾಗ್ಯಲಕ್ಷ್ಮಿ!' ಎನ್ನುತ್ತ ಒಕ್ಕಲಿಗನಿಗೆ ವಂದಿಸುತ್ತ ಹೊರಟನು.

ಆಗ ಭಾಗ್ಯಲಕ್ಷ್ಮಿಯು 'ಅಯ್ಯಾ ಒಕ್ಕಲಿಗ ನಾನು ನಿನಗೆ ಸಹಾಯ ಮಾಡಲು ಬಂದರೆ ನೀನು ವ್ಯವಸಾಯಕ್ಕೆ ಜೋತುಬಿದ್ದು ನನ್ನನ್ನು ಕಳೆದುಕೊಂಡೆಯಲ್ಲ. ನೀನು ವ್ಯವಸಾಯ ನಾ ಸಾಯ ನೀ ಸಾಯ ಅವನು ಸಾಯ ಇವ್ನು ಸಾಯ, ಮನೆಮಂದಿಯೆಲ್ಲ ಸಾಯ ಎಂದು ವರ್ಷವಿಡೀ ದುಡಿಯುತ್ತಲೇ ಸಾಯಿ!' ಎಂದು ಶಪಿಸಿದಳು. ಅಂದಿನಿಂದ ಒಕ್ಕಲಿಗ ಎಷ್ಟು ದುಡಿದರೂ ಎಷ್ಟು ಸಂಪಾದಿಸಿದರೂ ಲಕ್ಷ್ಮಿ ಸ್ಥಿರವಾಗಿ ನಿಲ್ಲದೆ ಅವನು ಯಾವಾಲೂ ಸಾಲಗಾರನೇ !

ರಾವಣ ಮಾಯಾಗನ್ನಡಿಯಲ್ಲಿ ಸೀತೆಯನ್ನು ಕಂಡ

ಅಯೋಧ್ಯೆಯ ಆಯುಧಾಗಾರದ ಬಯಲಲ್ಲಿ ದಶರಥನ ಕುಮಾರರಾದ ಶ್ರೀರಾಮಚಂದ್ರ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರು ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದರು. ಆ ಬಾಲಕರೆಲ್ಲರೂ ಬೇರೆ ಬೇರೆ ಕಡೆಗೆ ಬಾಣಗಳನ್ನು ಬಿಟ್ಟು ತಮ್ಮ ಗುರಿಯನ್ನು ಪರೀಕ್ಷೆ ಮಾಡಿಕೊಳ್ಳುತ್ತಿದ್ದರು.

ಈ ಸಮಯದಲ್ಲಿ ಶ್ರೀರಾಮಚಂದ್ರನು ತನ್ನ ಬತ್ತಳಿಕೆಯಿಂದ ಒಂದು ಬಾಣವನ್ನು ತೆಗೆದು ಮಂತ್ರಿಸಿ ದಕ್ಷಿಣ ದಿಕ್ಕಿನ ಕಡೆಗೆ ಬಿಟ್ಟನು. ಅತ್ಯಂತ ರಭಸದಿಂದ ನುಗ್ಗಿದ ಆ ಬಾಣವು ಲಂಕೆಯನ್ನು ಪ್ರವೇಶಿಸಿ ಅಲ್ಲಿರುವ ರಾವಣನ ಅರಮನೆಯ ತುಟ್ಟತುದಿಯಲ್ಲಿದ್ದ ದುಂರಾಕ್ಷಿ ಎಂಬ ದೃಷ್ಟಿಗೊಂಬೆಗೆ ಬಿದ್ದಿತು. ತೀವ್ರ ಘಾತದಿಂದ ಆ ದೃಷ್ಟಿಗೊಂಬೆಯು ಆ ತುದಿಯಿಂದ ಕೆಳಕ್ಕೆ ಬಿದ್ದು ಚೂರುಚೂರಾಯಿತು. ಈ ವಿಷಯ ರಾವಣನ ಕಿವಿಗೆ ಬಿತ್ತು. ಆ ಕೂಡಲೆ ರಾವಣ ಅಲ್ಲಿಗೆ ಬಂದು ತನ್ನ ಆಪ್ತ ಕಿಂಕರ ಟೊಂಬೆರಾಕ್ಷನನ್ನು ಕರೆದು

"ಟೊಂಬ, ಈ ಬಾಣ ಯಾರದು? ಯಾವ ಕಡೆಯಿಂದ ಬಂದಿತು? ಬಾಣ ಹೊಡೆದವರು ಎಂಥವರು? ಎಂಬುದನ್ನೆಲ್ಲ ಆದಷ್ಟು ಬೇಗ ತಿಳಿದುಕೊಂಡು ಬರತಕ್ಕದ್ದು!" ಎಂದು ಆಜ್ಞಾಪಿಸಿದ.

ಟೊಂಬ ರಾಕ್ಷಸನು ಬಾಣ ಬಂದ ದಾರಿಯ ಕುರುಹು ಹಿಡಿದು ಅಯೋಧ್ಯೆಯ ಆಯುಧಾಗಾರದ ಬಯಲ ಬಳಿಗೆ ಬಂದು ದೂರದಲ್ಲೆ ನಿಂತು ರಾಜಕುಮಾರರು ವಿದ್ಯಾಭ್ಯಾಸ ಮಾಡುತ್ತಿರುವುದನ್ನು ಗಮನಿಸಿದನು. ಅವನು ಈ ನಾಲ್ವರನ್ನು ಹೇಗೆ ವಧಿಸಬಹುದು ಎಂದು ಯೋಚಿಸುತ್ತ ಒಬ್ಬ ಸಂನ್ಯಾಸಿಯ ರೂಪವನ್ನು ತಾಳಿಕೊಂಡು ಅವರ ಬಳಿಗೆ ಬಂದನು.

ಅಲ್ಲಿಗೆ ಬಂದ ಸಂನ್ಯಾಸಿಯನ್ನು ಕಂಡ ರಾಜಕುಮಾರರು ಭಕ್ತಿಯಿಂದ ವಂದಿಸಿ ಆಶೀರ್ವಾದವನ್ನು ಪಡೆದರು. ಆಗ ಆ ಸಂನ್ಯಾಸಿಯು–

"ಮಕ್ಕಳೇ, ನೀವು ನನ್ನ ಕಷ್ಟವನ್ನು ಪರಿಹರಿಸುತ್ತೀರೆಂದು ನಾನು ಇಲ್ಲಿಗೆ ಬಂದಿದ್ದೇನೆ. ನೀವು ಕೂಡಲೆ ಸಹಾಯ ಮಾಡಲು ಒಪ್ಪಿಗೆ ಕೊಡಿ."

"ಪೂಜ್ಯರೇ, ನಿಮ್ಮ ಕಷ್ಟ ಅದೇನೆಂದು ತಿಳಿಸಿರಿ. ನಮ್ಮಿಂದ ಸಹಾಯ ಮಾಡಲಾಗದಿದ್ದರೆ ನಮ್ಮ ಪೂಜ್ಯ ತಂದೆಯವರಿದ್ದಾರೆ; ನಿಮಗೆ ಸಹಾಯ ಮಾಡಬಲ್ಲರು."

"ಇಲ್ಲ, ಅದಕ್ಕೆ ನಿಮ್ಮ ತಂದೆಯವರ ಅಗತ್ಯವಿಲ್ಲ. ಹೇಳುತ್ತೇನೆ ಕೇಳಿ. ಈ ಸಮೀಪದಲ್ಲೆ ನನ್ನ ಕುಮಾರನ ಜೊತೆಯಲ್ಲೇ ಬರುತ್ತಿದ್ದೆ. ಕುಮಾರನು ಅಲ್ಲಿದ್ದ ಕೊಳವನ್ನು ಕಂಡು ಮುಖ ತೊಳೆದುಕೊಂಡು ನೀರು ಕುಡಿದು ಬರುತ್ತೇನೆಂದು ಹೋದ. ಅವನು ಹೋಗುತ್ತಿರುವ ದಾರಿಯಲ್ಲಿದ್ದ ಹೆಬ್ಬಾವೊಂದು ಅವನ ಮೈಗೆಲ್ಲ ಸುತ್ತಿಕೊಂಡು ನುಂಗಲು ಪ್ರಯತ್ನಿಸುತ್ತಿದೆ. ದಯಮಾಡಿ ನೀವು ನನ್ನ ಕುಮಾರನನ್ನು ಕಾಪಾಡಿ" ಎಂದನು.

ಆ ಮಾತನ್ನು ಕೇಳಿದ ಕೂಡಲೆ ಶ್ರೀರಾಮಚಂದ್ರನು ತನ್ನ ತಮ್ಮಂದಿರೊಡಗೂಡಿ ಸಂನ್ಯಾಸಿಯನ್ನು ಹಿಂಬಾಲಿಸಿದನು. ಸಂನ್ಯಾಸಿಯು ಆ ಬಾಲಕನನ್ನು ಅರಣ್ಯದ ಮಧ್ಯಭಾಗಕ್ಕೆ ಕರೆದುಕೊಂಡು ಹೋಗಿ ರೌದ್ರಾಕಾರವನ್ನು ತಾಳಿ ನಾಲ್ವರನ್ನೂ ತನ್ನೆಡೆಗೆ ಸೆಳೆದುಕೊಂಡು ಕೊಲ್ಲಲು ಪ್ರಯತ್ನಿಸಿದನು. ಆ ಕೂಡಲೆ ರಾಮಚಂದ್ರನು–

"ಸೋದರರೇ ಹೆದರಬೇಡಿ, ನಾನಿದ್ದೇನೆ" ಎಂದು ಹೇಳಿ ಉಗ್ರವಾದ ಬಾಣವನ್ನು ಪ್ರಯೋಗಿಸಿ ಟೊಂಬೆರಾಕ್ಷನನ್ನು ಕೊಂದನು. ಕಪಟ ಸಂನ್ಯಾಸಿಯ ಮೋಸದಿಂದ ಪಾರಾದ ಸೋದರರು ಮತ್ತೆ ಅಯೋಧ್ಯೆಯ ಆಯುಧಾಗಾರದ ಮೈದಾನದಲ್ಲಿ ತಮ್ಮ ಬಿಲ್ವಿದ್ಯಾಸಾಧನೆಯನ್ನು ಮುಂದುವರೆಸಿದರು.

ಇತ್ತ ಟೊಂಬೆರಾಕ್ಷನ ನಿರೀಕ್ಷೆಯಲ್ಲಿದ್ದ ರಾವಣನು ತನ್ನ ಸೋದರರಾದ ಅಹಿರಾವಣ, ಮಹಿರಾವಣರನ್ನು ಕರೆದು "ಸೋದರರೆ ಹೋಗಿ ಟೊಂಬೆರಾಕ್ಷ ಇನ್ನೂ ಬರಲಿಲ್ಲವೇಕೆ ನೋಡಿಕೊಂಡು ಬೇಗ ಬನ್ನಿ" ಎಂದು ಕಳಿಸಿದನು.

ರಾವಣನ ಆಜ್ಞೆಯಂತೆ ಮಹಿರಾವಣ ಅಹಿರಾವಣರು ಬರುತ್ತಿದ್ದಾಗ ದಾರಿಯಲ್ಲಿ ಬಿದ್ದಿದ್ದ ಟೊಂಬೆರಾಕ್ಷನ ಹೆಣವನ್ನು ಕಂಡು ನಡುಗಿಹೋದರು. ಆದರೂ ಭಂಡಧೈರ್ಯ ಮಾಡಿಕೊಂಡು ಅಯೋಧ್ಯೆಯ ಆಯುಧಾಗಾರದ ಮೈದಾನಕ್ಕೆ ಬಂದರು. ಅಲ್ಲಿ ಆ ಯುವಕರ ಬಿಲ್ವಿದ್ಯಾಸಾಮರ್ಥ್ಯವನ್ನು ಕಂಡು ಹೆದರಿ ಹಿಂದಿರುಗಲು ನಿರ್ಧರಿಸಿದರು. ರಾವಣೇಶ್ವರನಿಗೆ ಏನು ಹೇಳಬೇಕೆಂದು ಈ ರಾಕ್ಷಸರು ಚಿಂತಿಸುತ್ತಾ ಬರುತ್ತಿರುವ ದಾರಿಯಲ್ಲಿ ವಿಶ್ವಾಮಿತ್ರರ ಆಶ್ರಮವಿತ್ತು. ಅಲ್ಲಿ ಯಜ್ಞಕಾರ್ಯ ನಡೆಯುತ್ತಿತ್ತು. ಇದನ್ನು ಕಂಡ ಈ ರಾಕ್ಷಸರು ಯಜ್ಞಕಾರ್ಯವನ್ನು ಕೆಡಿಸಿ ಕೇಕೆ ಹಾಕಿ ಕುಣಿದರು. ಮತ್ತೆ ಮತ್ತೆ ಯಜ್ಞಕಾರ್ಯಕ್ಕೆ ವಿಘ್ನವನ್ನುಂಟುಮಾಡುತ್ತಿರುವ ಈ ರಕ್ಕಸರ ಕಾಟವನ್ನು ತಡೆಯಲಾರದೆ "ಇದಕ್ಕೆ ದಶರಥನ ಮಕ್ಕಳೆ ಸಮರ್ಥರು!" ಎಂದು ನಿರ್ಧರಿಸಿ ವಿಶ್ವಾಮಿತ್ರರು ಅಯೋಧ್ಯೆಯ ಕಡೆಗೆ ನಡೆದರು,

ಆ ಸಮಯದಲ್ಲಿ ಈ ಅಹಿರಾವಣ ಮಹಿರಾವಣರನ್ನೂ ಜನಕನನ್ನು ಕಾಡುತ್ತಿದ್ದ ಕಬ್ಬಿಣದ ಕಾಗೆ ಇವರನ್ನು ಕುಕ್ಕುವುದಕ್ಕೆ ಬಂದಿತು. "ಈ ಕ್ಷುದ್ರ ಕಾಗೆಗೆ

ನಾವು ಹೆದರಬೇಕೆ?" ಎಂದು ಹೇಳುತ್ತ ಅದನ್ನು ಹೊಡೆಯಲು ಪ್ರಯತ್ನಿಸಿದರು. ಆದರೆ ಕಬ್ಬಿಣದ ಕಾಗೆಯ ಪರಾಕ್ರಮದ ಮುಂದೆ ಈ ಇಬ್ಬರು ಸೋದರರೂ ಸೋತರು. ಅದರಿಂದ ತಪ್ಪಿಸಿಕೊಳ್ಳಲು ಎದ್ದೆವೋ ಬಿದ್ದೆವೋ ಎಂಬುದನ್ನೂ ಕಾಣದೆ ಬಿದ್ದಾಂಬೀಳ ಓಡಿ ಲಂಕೆಯನ್ನು ಸೇರಿದರು. ರಾವಣನಿಗೆ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ವಿಸ್ಮಯಚಿತ್ತನಾದ ರಾವಣನು ಲಂಕಾದೇವಿಯನ್ನು ಪ್ರಾರ್ಥಿಸಿ ಪ್ರತ್ಯಕ್ಷ ಮಾಡಿಕೊಂಡು,

"ಅಮ್ಮಾ, ಆ ಕಬ್ಬಿಣದ ಕಾಗೆ ಎಂದರೇನು? ನನ್ನ ಸೋದರರು ಅದಕ್ಕೆ ಹೆದರಿ ಓಡಿ ಬರುವುದೆಂದರೇನು? ದಯಮಾಡಿ ಇದರ ವಿಷಯವನ್ನೆಲ್ಲ ಕೂಲಂಕಷವಾಗಿ ತಿಳಿಸು ತಾಯಿ" ಎಂದು ಪ್ರಾರ್ಥಿಸಿದನು.

"ರಾವಣ, ನಿನ್ನ ಸೋದರರು ಹೇಳುತ್ತಿರುವುದೆಲ್ಲವೂ ಸತ್ಯ. ಮಿಥಿಲೆಯ ಜನಕ ಮಹಾರಾಜನಿಗೆ ಅಪ್ರತಿಮ ಸುಂದರಿಯಾದ ಮಗಳಿದ್ದಾಳೆ. ಅವಳಿಗೆ ಯೋಗ್ಯನಾದ ಗಂಡನಾರೆಂದು ತಿಳಿಯಲು ಶಿವನನ್ನು ಕುರಿತು ತಪಸ್ಸು ಮಾಡುತ್ತಿರುವಾಗ ಅವನ ತಲೆಯ ಮೇಲೆ ಪಿಕ್ಕೆಯನ್ನು ಹಾಕಿ ತಪೋಭಂಗ ಮಾಡುತ್ತಿದ್ದುದೇ ಈ ಕಬ್ಬಿಣದ ಕಾಗೆ. ಆ ಕಾಗೆಯನ್ನು ಯಾರು ಕೊಲ್ಲುತ್ತಾರೋ ಅವರಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿಕೊಡುವುದಾಗಿ ಜನಕ ಮಹಾರಾಜನು ಡಂಗೂರ ಸಾರಿಸಿದ್ದಾನೆ."

"ತಾಯಿ, ಆ ಜನಕನ ಮಗಳು ಆ ಮಟ್ಟದ ಅಪ್ರತಿಮ ಸುಂದರಿಯೆ? ಅವಳನ್ನು ನಾನು ಒಮ್ಮೆ ನೋಡಬೇಕಲ್ಲ!"

"ರಾವಣ, ಅವಳ ಆಸೆಯನ್ನು ಬಿಡುವುದೇ ನಿನಗೆ ಕ್ಷೇಮ. ಅವಳ ವಿಷಯ ನಿನಗೆ ಬೇಡ!"

"ಇಲ್ಲ ತಾಯಿ. ಅವಳನ್ನೊಮ್ಮೆ ನೋಡಬೇಕೆಂಬುದಷ್ಟೇ ನನ್ನ ಆಸೆ. ಅವಳನ್ನು ಮಾಯಾಗನ್ನಡಿಯಲ್ಲೊಮ್ಮೆ ತೋರಿಸು ತಾಯೆ... ಕೇವಲ ಕುತೂಹಲಕ್ಕಾಗಿ ಕೇಳುತ್ತಿದ್ದೇನೆ."

"ಆಗಲಿ!" ಎಂದ ಲಂಕಾದೇವಿಯು ಮಾಯಾಗನ್ನಡಿಯಲ್ಲಿ ಸೀತೆಯನ್ನು ತೋರಿಸಿದಳು. ಅನಂತರ,

"ರಾವಣ, ನಾನಿನ್ನು ಬರುತ್ತೇನೆ!" ಎಂದು ಹೇಳಿ ಅದೃಶ್ಯಳಾದಳು.

ಸೀತೆಯನ್ನು ಕಂಡ ರಾವಣನ ಮನದಾಳದವರೆಗೂ ಅವಳ ಸೌಂದರ್ಯ ತುಂಬಿಕೊಂಡು ಅವನು ದಿಕ್ಕೇ ತೋಚದಂತಾದನು. ಆ ಕ್ಷಣವೆ ಸೀತೆಗಾಗಿ ಮಿಥಿಲೆಗೆ ಹೋಗಲು ನಿರ್ಧರಿಸಿದನು.



ಕಲ್ಯಾಣವೆನ್ನಿರಿ ಕಾರುಣ್ಯಮೂರ್ತಿಗೆ ಕಲ್ಯಾಣವೆನ್ನಿ ಜಯ ಜಯ

ಜನಪದ ರಾಮಾಯಣದ ಕಥೆಗಳು

ಸೀತಾರಾಮ ಕಲ್ಯಾಣ



ಅಮರಕಥಾಮೃತ ರಾಮಾಯಣ



ಹನುಮನ ಪ್ರಾಣ ಪ್ರಭೋ ರಘುರಾಮ
ಇನಕುಲ ಸೋಮ ಕೋದಂಡರಾಮ

ತಾಟಕಿ ಸಂಹಾರ

ವಿಶ್ವಾಮಿತ್ರ ಮಹರ್ಷಿಯು ಮಾಡುತ್ತಿದ್ದ ಯಜ್ಞಕ್ಕೆ ರಾಕ್ಷಸರಿಂದ ಮತ್ತೆ ಮತ್ತೆ ವಿಘ್ನ ಸಂಭವಿಸುತ್ತಿತ್ತು. ಆಗ ಯಜ್ಞಕಾರ್ಯ ಕೆಲಸವನ್ನು ಮುಂದುವರಿಸಲಾಗದೆ ಚಿಂತಾಕ್ರಾಂತರಾದರು. ಅವರಿಗೆ ಥಟ್ಟನೆ ದಶರಥ ಮಹಾರಾಜನಿಗಿರುವ ಮಹಾಪರಾಕ್ರಮಿಗಳಾದ ಪುತ್ರರ ನೆನಪಾಯಿತು. ಆ ಕೂಡಲೆ ವಿಶ್ವಾಮಿತ್ರರು ಅಯೋಧ್ಯೆಗೆ ಬಂದು ತಮ್ಮ ಉದ್ದೇಶವನ್ನು ವಿವರಿಸಿ ಹೇಳಿದರು. ತನ್ನ ಮಕ್ಕಳನ್ನು ಕ್ರೂರ ರಾಕ್ಷಸರನ್ನು ತಡೆಯುವ ಕಾವಲುಗಾರರನ್ನಾಗಿ ಕಳಿಸಲು ದಶರಥನಿಗೆ ಇಷ್ಟವಿರಲಿಲ್ಲ. ಆದರೆ ವಿಶ್ವಾಮಿತ್ರ ಋಷಿಯ ಕೋಪಕ್ಕೆ ತುತ್ತಾಗುವ ಮನಸ್ಸೂ ಇರಲಿಲ್ಲ. ಆದ್ದರಿಂದ ಒಲ್ಲದ ಮನಸ್ಸಿನಿಂದ ರಾಮಲಕ್ಷ್ಮಣರನ್ನು ವಿಶ್ವಾಮಿತ್ರರ ಜೊತೆಯಲ್ಲಿ ಕಳಿಸಿಕೊಟ್ಟನು.

ಇತ್ತ ಕಡೆ ತಾಟಕಿಯೆಂಬ ರಾಕ್ಷಸಿಯು ಅರಣ್ಯಮಾರ್ಗದಲ್ಲಿ ಬರುತ್ತಿರುವಾಗ ಭಾರಿ ಬೆಟ್ಟದಂತೆ ಬಿದ್ದಿದ್ದ ಟೊಂಬೆರಾಕ್ಷಸನ ಹೆಣವನ್ನು ಕಂಡು

"ಟೊಂಬೆರಾಕ್ಷ, ರಾವಣೇಶ್ವರನ ಬಲಗೈ ಬಂಟ. ಅಂಥ ಮಹಾಪರಾಕ್ರಮಿಯನ್ನು ಯಾರು ವಧಿಸಿದರೋ ಕಾಣೆ. ಅವರು ನನ್ನ ಕಣ್ಣಿಗೆ ಬಿದ್ದರೆ ಅವರನ್ನು ಯಮಲೋಕಕ್ಕೆ ಅಟ್ಟುತ್ತೇನೆ!" ಎಂದು ಹೇಳುತ್ತ "ಯಾರ್ರೋ ಈ ಟೊಂಬೆ ರಾಕ್ಷನನ್ನು ಕೊಂದೋನು? ತಾಕತ್ತಿದ್ದರೆ ನನ್ನ ಮುಂದೆ ಬಂದು ನಿಲ್ರೋ. ನಿಮ್ಮ ಹುಟ್ಟಿದ ದಿನ ಕಾಣುಸ್ತೀನಿ. ಅಂಥಾ ಗಂಡುಸಾದ್ರೆ ಬನ್ರೋ. ಯಾವ ನನ್ನ ಮಗನೋ ಟೊಂಬೆ ರಾಕ್ಷನ ಕೊಂದೋನೋ! ಬಾರೋ ನನ್ನ ಮುಂದುಕ್ಕೆ ನಿನ್ನ ಗತಿ ಕಾಣುಸ್ತೀನಿ" ಎಂದು ಕೂಗತೊಡಗಿದಳು. ಅವಳ ಆರ್ಭಟಕ್ಕೆ ಅರಣ್ಯವೇ ನಡುಗುತ್ತಿತ್ತು. ಈ ಅಬ್ಬರ ಅಲ್ಲಿಗೆ ಬರುತ್ತಿದ್ದ ವಿಶ್ವಾಮಿತ್ರ ಮತ್ತು ರಾಮಲಕ್ಷ್ಮಣರ ಕಿವಿಗೂ ಬಿತ್ತು.

ಆರ್ಭಟದ ಧ್ವನಿ ಬರುತ್ತಿದ್ದ ದಿಕ್ಕನ್ನು ದಿಟ್ಟಿಸುತ್ತಿರುವಾಗ ತಾಟಕಿಯು ವಿಶ್ವಾಮಿತ್ರನ ಕಣ್ಣಿಗೆ ಬಿದ್ದಳು. ಮಹರ್ಷಿಯ ರಾಮಲಕ್ಷ್ಮಣರನ್ನು ಎಚ್ಚರಿಸಿ ಬಿಲ್ಲು ಬಾಣಗಳೊಡನೆ ಸಿದ್ಧರಾಗಲು ಹೇಳಿದರು. ರಾಕ್ಷಸಿಯೂ ಘೋರವಾಗಿ ಆರ್ಭಟಿಸುತ್ತ ನುಗ್ಗಿ ಬರುತ್ತಿದ್ದಳು – ಆಗ ವಿಶ್ವಾಮಿತ್ರರು

"ರಾಮಭದ್ರ ಹೂಡು ಬಾಣವನ್ನು!" ಎಂದರು. ರಾಮ ಒಂದು ನಿಶಿತಾಸ್ತ್ರವನ್ನು ತೆಗೆದು ತಾಟಕಿಯ ಕುತ್ತಿಗೆಗೆ ಹೊಡೆದನು. ಆಗ ಅವಳ ಕುತ್ತಿಗೆ ಕತ್ತರಿಸಿ ನೆಲಕ್ಕೆ ಬಿದ್ದಿತು. ಆಗ ಅವಳು ಆಕಾಶಕ್ಕೆ ಹಾರಿ ನೆಲಕ್ಕೆ ಬಿದ್ದು ಸತ್ತಳು.

ಆರತಿ ಉಕ್ಕಡದ ಅಹಲ್ಯಾದೇವಿ

ಆರತಿ ಉಕ್ಕಡ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಮತ್ತು ಪಾಂಡವಪುರ ತಾಲ್ಲೂಕುಗಳ ಗಡಿಭಾಗದಲ್ಲಿದೆ. ಆರತಿ ಉಕ್ಕಡವಲ್ಲದೆ ಈ ಸುತ್ತಿನಲ್ಲೆ ಗರುಡನ ಉಕ್ಕಡ ಎಂಬ ಹೆಸರಿನ ಉಕ್ಕಡ ಮತ್ತೊಂದಿದ್ದರೂ ಜನಮನದಲ್ಲಿ ಆರತಿ ಉಕ್ಕಡ ಸ್ಥಿರವಾಗಿ ನಿಂತಿರುವಂತೆ ಅದು ನಿಂತಿಲ್ಲ. ಇದಕ್ಕೆ ಕಾರಣ ಆರತಿ ಉಕ್ಕಡಕ್ಕಿರುವ ದೈವಿಕ ಆವರಣ ಆ ಉಕ್ಕಡಕ್ಕಿಲ್ಲ. ಇದಕ್ಕೆ ದೈವಿಕ ಆವರಣ ಕಲ್ಪಿತವಾಗಲು ಗೌತಮ ಮಹರ್ಷಿಯ ಸಹಧರ್ಮಿಣಿ ಅಹಲ್ಯಾದೇವಿ ಕಾರಣಳಾಗಿರುವುದು ಒಂದು ವಿಶೇಷ. ರಾಮಾಯಣದಲ್ಲಿ ಅಹಲ್ಯಾ ಪ್ರಸಂಗವು ಬರುತ್ತದೆಯಾದರೂ ಆಕೆ ದೈವವಾಗಿ ಪರಿವರ್ತನೆ ಹೊಂದಿ ನಾಯಕರೆಂಬ ಶೂದ್ರರಿಂದ ಆರಾಧಿಸಿಕೊಳ್ಳುತ್ತಿದ್ದು, ಬ್ರಹ್ಮಮಾನಸ ಪುತ್ರಿಯಾದ – ಸಾಕ್ಷಾತ್ ಬ್ರಾಹ್ಮಣತಿಯಾದ ಆಕೆಗೆ ಪ್ರಾಣಿಬಲಿಯೂ ಸಲ್ಲುತ್ತಿರುವುದು ವಿಚಿತ್ರವೆನಿಸುತ್ತದೆ. ಈ ಎಲ್ಲ ವಿಷಯಗಳಿಗೂ ಹಿನ್ನೆಲೆಯಾದ ಸ್ಥಳ ಪುರಾಣ ಹೀಗಿದೆ :

ಕಾವೇರಿನದಿ ತೀರದಲ್ಲಿರುವ ಶ್ರೀರಂಗಪಟ್ಟಣವು ಪುರಾಣಕಾಲದಲ್ಲಿ ಗೌತಮಕ್ಷೇತ್ರವೆಂದು ಪ್ರಸಿದ್ಧವಾಗಿತ್ತು. ಈ ಪ್ರದೇಶದಲ್ಲಿ ನೆಲಸಿದ್ದ ಗೌತಮಮಹರ್ಷಿಗೆ ಸುಂದರಿಯಾದ ಬ್ರಹ್ಮಮಾನಸಪುತ್ರಿ ಅಹಲ್ಯೆಯನ್ನು ಕೊಟ್ಟು ಮದುವೆಯಾಗಿತ್ತು. ಈ ಋಷಿದಂಪತಿಗಳು ಸಂಸಾರ ಸುಖಸಾಗರದಲ್ಲಿ ಸಂತೃಪ್ತರಾಗಿದ್ದರು.

ಹೀಗಿರುವಾಗ 'ಶಚೀದೇವಿಗೂ ಮಿಗಿಲಾದ ರೂಪಲಾವಣ್ಯಗಳಿರುವ ಅಹಲ್ಯೆಗೆ ನಾನು ದೇವೇಂದ್ರನಾದರೆ ಚೆಂದ' ಎಂದು ಗೌತಮಋಷಿಯು ಚಿಂತಿಸಿದನು. ಆ ಕೂಡಲೆ ಅವನ ಮನದಲ್ಲಿ ಇಂದ್ರಪದವಿಯನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಮೊಳೆತು ಹೆಮ್ಮರವಾಯಿತು. ತನ್ನ ಇಚ್ಛಾಪೂರ್ತಿಗಾಗಿ ಅವನು ತಪಸ್ಸಿಗೆ ತೊಡಗಲು ನಿರ್ಧರಿಸಿದನು.

ಚಿರಯೌವನವು ಚಿಮ್ಮುತ್ತಿದ್ದ ಚೆಲುವೆ ಅಹಲ್ಯೆಗೆ ಈ ಹಾಳು ತಪಸ್ಸುಗಿಪಸ್ಸು ಪದವಿಗಿದವಿಗಳು ಯಾಕಾದರೂ ಬೇಕೋ ಎನಿಸುತ್ತಿತ್ತು. 'ಸ್ವರ್ಗದ ಸುಖಸಾಗರವೆಲ್ಲ ಈ ಸಂಸಾರದಲ್ಲೆ ಇರುವಾಗ ಇಂದ್ರಪದವಿಯ ಆಸೆಯನ್ನು ಬಿಟ್ಟು ಸುಮ್ಮನಿರಬಾರದೆ' ಎಂದುಕೊಂಡರೂ ಗೌತಮನು ತನ್ನ ನಿರ್ಧಾರವನ್ನು ಬಿಡುವವನಲ್ಲ ಎಂದು ತಿಳಿದು ಮನಸ್ಸಿನಲ್ಲೆ ನರಳಿದಳು.

ಗೌತಮ ತಪಸ್ಸಿಗೆ ಕುಳಿತೇಬಿಟ್ಟನು. ಯೌವನವು ತುಂಬಿ ತುಳುಕುತ್ತಿದ್ದ ಅಹಲ್ಯೆ ಏಕಾಂಗಿಯಾದಳು. ಯೌವನದ ಬಯಕೆಗಳನ್ನು ಈಡೇರಿಸಿಕೊಳ್ಳಲಾಗದೆ ವಿರಹತಪ್ತಳಾಗಿ ಕೊರಗಿದಳು. ಬಹಿರಂಗವಾಗಿ ಪತಿಸೇವೆಯಲ್ಲಿ ನಿರತಳಾಗಿದ್ದರೂ ಅವಳ ಅಂತರಂಗ ಕಾಮಪಿಪಾಸೆಯಿಂದ ಕುದಿಯುತ್ತಲೇ ಇತ್ತು.

ಅಹಲ್ಯೆಯ ರೂಪಲಾವಣ್ಯಗಳ ಬಗೆಗೆ ಕೇಳಿದ್ದ ದೇವೇಂದ್ರ ಅವಳನ್ನು ನೋಡುವ ಕಾರಣಕ್ಕಾಗಿಯೇ ಭೂಮಿಗೆ ಬಂದ. ಅಪ್ಸರ ಕನ್ಯೆಯರ ಚೆಲುವಿಗೂ ನೂರ್ಮಡಿ ಚೆಲುವಿನಿಂದ ಕಂಗೊಳಿಸುತ್ತಿದ್ದ ಅಹಲ್ಯೆಯನ್ನು ಕಂಡು ಕಾಮನ ಕೂರ್ಗಣೆಗಳ ಹೊಡೆತಕ್ಕೆ ತುತ್ತಾಗಿ ತತ್ತರಿಸಿಹೋದನು. ಅವಳನ್ನು ಹೇಗಾದರೂ ಮಾಡಿ ಹೊಂದಲೇಬೇಕೆಂಬ ಅತ್ಯಾಶೆಯಾಗಿ ಗೌತಮನ ವೇಷದಲ್ಲಿ ಬಂದು ಅಹಲ್ಯೆಯನ್ನು ಕೂಡಿದನು.

ಕಾರಣಾಂತರದಿಂದ ವಿಚಲಿತನಾದ ಗೌತಮಋಷಿಯು ನಟ್ಟಿರುಳಿನಲ್ಲಿ ತನ್ನ ಆಶ್ರಮಕ್ಕೆ ಬಂದ. ಅಲ್ಲಿ ಸಮಾಗಮದಲ್ಲಿದ್ದ ಇಂದ್ರ-ಅಹಲ್ಯೆಯರನ್ನು ಕಂಡು ಕುದಿದುಹೋದ. ಇಂದ್ರನನ್ನು ಕೆಂಗಣ್ಣುಗಳಿಂದ ಕೆಕ್ಕರಿಸಿಕೊಂಡು ನೋಡುತ್ತ,

'ಪಾಪಿ! ಪರಸ್ತ್ರೀಯಲ್ಲಿ ಆಸಕ್ತನಾದ ನಿನ್ನ ದೇಹವೆಲ್ಲ ಸಹಸ್ರಯೋನಿಗಳಾಗಲಿ!' ಎಂದು ಶಪಿಸಿದ. ಅಹಲ್ಯೆಯನ್ನು ನೋಡುತ್ತ

'ಪಾಪಿಷ್ಠೆ! ದುಷ್ಟೆ! ಅನಿಷ್ಟೆ! ದುರ್ನಡತೆಯಿಂದ ಸತೀಕುಲಕ್ಕೇ ಕಳಂಕ ತಂದ ಕುಲಟೆ. ಇಂದಿನಿಂದ ನಿನ್ನ ಮುಖವನ್ನು ನನಗೆ ತೋರಿಸಬೇಡ. ಹೊರಡು – ಆಶ್ರಮದಿಂದ – ಆಚೆ ಹೊರಡು. ಒಂದು ಕ್ಷಣವೂ ನೀನು ಇಲ್ಲಿ ನಿಲ್ಲಕೂಡದು. ತೊಲಗು ಪರಮಪಾತಕಿ ! ಪತೀದ್ರೋಹಿ! ತೊಲಗಾಚೆ!' ಎಂದು ಗುಡುಗಿದನು. ಅದಕ್ಕೆ ಅಹಲ್ಯೆ,

'ಸ್ವಾಮಿ, ಇದು ನನ್ನಿಂದಾದ ತಪ್ಪಲ್ಲ. ರಕ್ಷಿಸಿ ರಕ್ಷಿಸಿ' ಎಂದು ಅಂಗಲಾಚಿದಳು.

'ಛೀ! ಧೂರ್ತೆ, ನೀನು ಪತಿವ್ರತೆಯಾಗಿದ್ದರೆ ನಿನಗೆ ನಿನ್ನ ಗಂಡ ಯಾರು? ಪರಪುರುಷ ಯಾರು? ಎಂಬುದು ತಿಳಿಯುತ್ತಿತ್ತಲ್ಲವೆ? ನಡತೆಗೆಟ್ಟವಳೆ, ಹೆಚ್ಚು ಹರಟದೆ ತೊಲಗಾಚೆ!' ಎಂದು ಘರ್ಜಿಸುತ್ತ ಆಶ್ರಮದಿಂದ ಹೊರಹಾಕಿದ.

ಆದರೆ ಅಹಲ್ಯೆ ಸುಮ್ಮನಾಗಲಿಲ್ಲ. ಹೊರಗಟ್ಟುತ್ತಿದ್ದ ಗೌತಮನ ಪಾದಗಳನ್ನು ಬಿಗಿಯಾಗಿ ತಬ್ಬಿಕೊಂಡು ಗೋಳಾಡಿದಳು. ಋಷಿಗೆ ಕರುಣೆ ಬರಲಿಲ್ಲ. ಅವನು ಅವಳನ್ನು ಒದ್ದು ಹೊರನೂಕಿದನು. ಆಗಲೂ ನಿವಾರಿಸಿಕೊಂಡು ಅವಳು ಒಳಬರಲು ಪ್ರಯತ್ನಿಸಿದಾಗ :

'ನೀಚ ಹೆಣ್ಣೆ, ನೀನು ನಾಯಿಮುಟ್ಟಿದ ಮಡಕೆ. ನೀನು ಆಶ್ರಮವನ್ನು ಪ್ರವೇಶಿಸಿ ಇಲ್ಲಿನ ಪಾವಿತ್ರ್ಯವನ್ನು ಹಾಳುಗೆಡವಬೇಡ. ಇದೋ ಆಜ್ಞೆ ಮಾಡುತ್ತಿದ್ದೇನೆ. ಈ ಆಶ್ರಮದ ಹೊರಸುತ್ತು ಗೆರೆಯನ್ನು ಹಾಕುತ್ತಿದ್ದೇನೆ. ಈ ಗೆರೆಯನ್ನು ದಾಟಿ ನೀನು ಬಂದದ್ದೇ ಆದರೆ ಕಲ್ಲಾಗಿ ಹೋಗು!' ಎಂದು ಶಪಿಸಿಬಿಟ್ಟನು.

ಅಹಲ್ಯೆ ಪತಿಗಾಗಿ ದಿನವೆಲ್ಲ ಗೋಗರೆದು ಅತ್ತು ಕರೆದಳು. ಮತ್ತೆ ಕರೆದಳು. ಹೃದಯವಿದ್ರಾವಕ ರೀತಿಯಲ್ಲಿ ಮೊರೆಯಿಟ್ಟಳು. ಕರುಣೆ ತೋರಿಸಿರೆಂದು ಬಗೆಬಗೆಯಾಗಿ ಬೇಡಿಕೊಂಡಳು. ಏನು ಮಾಡಿದರೂ ಗೌತಮ ಅವಳತ್ತ ತಿರುಗಿಯೂ ನೋಡಲಿಲ್ಲ. ದಿನವೆಲ್ಲ ಅತ್ತು ಅತ್ತು, ಕೂಗಿ ಕೂಗಿ, ಒರಲಿ ಒರಲಿ, ಕೊರಗಿ ಕೊರಗಿ, ನರಳಿ ನರಳಿ, ನೊಂದುಬೆಂದು ಬಸವಳಿದು ಮೂರ್ಛೆ ಹೋದಳು.

ಮೂರ್ಛೆಗೆ ಸಂದಿದ್ದ ಅಹಲ್ಯೆ ಅದು ಎಷ್ಟು ಹೊತ್ತು ಹಾಗೆ ಬಿದ್ದಿದ್ದಳೊ ಏನೋ! ಅವಳಿಗೆ ಎಚ್ಚರವಾದಾಗ ಅವಳ ಸುತ್ತಮುತ್ತ ಬೆಸ್ತರು ನಿಂತಿದ್ದರು. ಒಬ್ಬ ಹೆಂಗಸು ಅಹಲ್ಯೆಯ ಮುಖಕ್ಕೆ ನೀರು ಸಿಂಪಡಿಸಿ ಎಚ್ಚರಿಸಿದ್ದಳು. ಅವಳೇ ಬೆಸ್ತರನ್ನೆಲ್ಲ ಕೂಗಿ ಕರೆದಿದ್ದಳು. ಎಚ್ಚರಗೊಂಡ ಅಹಲ್ಯೆ ಕುಡಿಯಲು ನೀರು ಬೇಕೆಂದು ಸನ್ನೆಮಾಡಿ ತೋರಿಸಿದಳು. ಕೂಡಲೆ ಅವರು ತಮ್ಮಲ್ಲಿದ್ದ ಚರ್ಮದ ತ್ರಿತ್ತಿಯ ನೀರನ್ನು ಅವಳಿಗೆ ಕುಡಿಸಿದರು. ಕೊಂಚ ಹೊತ್ತಿನಲ್ಲಿ ಚೇತರಿಸಿಕೊಂಡ ಅಹಲ್ಯೆ ಮೆಲ್ಲಗೆ ಮೇಲೆದ್ದು ಕುಳಿತಳು. ಅವಳು ತುಂಬ ಹಸಿದಿರಬಹುದೆಂದು ಭಾವಿಸಿದ ಬೆಸ್ತರ ಹೆಂಗಸೊಬ್ಬಳು ತನ್ನ ಗುಡಿಸಲಿಗೆ ಓಡಿಹೋಗಿ ಒಂದು ಗಂಗಳದಲ್ಲಿ ರಾಗಿಮುದ್ದೆ, ಮೀನಿನ ಹುಳಿಯನ್ನು ತಂದು ತಿನ್ನಿಸಿದಳು. ತಿಂದಾದ ಮೇಲೆ ಅಹಲ್ಯೆ ಉಸಿರು ಹುಯ್ದುಕೊಂಡು

'ಕರುಣಾಮಯಿ ಅಣ್ಣಗಳಿರಾ ನೀವು ಯಾರು? ಈ ಪಾಪಿಯನ್ನು ಏಕೆ ಬದುಕಿಸಿದಿರಿ?' ಎಂದು ಕೇಳಿದಳು. ಅದಕ್ಕೆ ಆ ಬೆಸ್ತರು,

'ತಾಯಿ, ನಾವು ಈ ಕಾವೇರಿ ತೀರದಲ್ಲಿ ಮೀನಿಗಾಗಿ ಬಲೆ ಒಡ್ಡಿದ್ದೊ. ಅದನ್ನ ತರನ ಅಂತ ಬಂದ್ರೆ ದಾರೀಲಿ ನೀವು ಬಿದ್ದುಬಿಟ್ಟಿದ್ರಿ. ರಾತ್ರಿಯೆಲ್ಲ ಇಲ್ಲೆ ಬಿದ್ದಿದ್ರಿ ಅಂತ ಕಾಣ್ತದೆ. ಅದಿರಲಿ ನೀವು ಯಾರಮ್ಮ ತಾಯಿ?' ಎಂದು ಕೇಳಿದರು. ಬೆಸ್ತರ ಮಾತನ್ನು ಕೇಳಿ ಅಹಲ್ಯೆಗೆ ದುಃಖ ಉಕ್ಕಳಿಸಿ ಬಂತು. ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದ ಅವಳನ್ನು ಬೆಸ್ತರ ಹೆಂಗಸರು ತಮ್ಮ ಗುಡಿಸಿಲಿಗೆ ಕರೆದುಕೊಂಡು ಹೋದರು.

ಅನಾಥಳಂತೆ ಬಿದ್ದಿದ್ದ ಅಹಲ್ಯೆಗೆ ಬೆಸ್ತರ ಆಶ್ರಯ ದೊರೆಯಿತು. ಅವಳು ಅನಿವಾರ್ಯವಾಗಿ ಅವರೊಡನಿದ್ದು ಅವರ ಆಹಾರ-ವಿಹಾರಗಳಿಗೆಲ್ಲ ಹೊಂದಿಕೊಂಡಳು. ಹೀಗಾಗಿ ಅವರು ತಿನ್ನುವ ಮೀನು ಮಿಡಚೆ ಮಾಂಸಮಡ್ಡಿಗಳನ್ನೆಲ್ಲ ತಿಂದಳು. ತರುವಾಯದಲ್ಲಿ ಆ ಬೆಸ್ತರಿಗೆ ಅಹಲ್ಯೆ ಹಾರೂತಮ್ಮ ಎಂದು ತಿಳಿಯಿತು. ಆಗ ಅವರೆಲ್ಲ ಅವಳನ್ನು 'ಹಾರೂತಮ್ಮ!' ಎಂದೇ ಕರೆಯುತ್ತ ಭಯಭಕ್ತಿಯಿಂದ ನಡೆದುಕೊಳ್ಳತೊಡಗಿದರು.

ಹೀಗೆ ಬಹಳ ದಿನಗಳು ಕಳೆದುಹೋದವು. ಒಂದು ದಿನ ಗುಡಿಸಿಲಿನಲ್ಲಿ ಒಂಟಿಯಾಗಿ ಕುಳಿತಿದ್ದ ಅಹಲ್ಯೆಗೆ ಪತಿದೇವನ ನೆನಪಾಯಿತು. ಆಗ ಅವಳು

ತನ್ನ ಪತಿಯನ್ನು ಕಂಡು ನಿಜಸಂಗತಿಯನ್ನು ಅರಿಕೆ ಮಾಡಿಕೊಂಡು, ಕ್ಷಮೆ ಯಾಚಿಸಬೇಕೆಂದು ನಿರ್ಧರಿಸಿದಳು. ಹಾಗೆನಿಸಿದ ಕೂಡಲೆ ಥಟ್ಟನೆ ಮೇಲೆದ್ದು ಹೊರಟುನಿಂತಳು. ಆತುರಾತುರವಾಗಿ ಸರಸರನೆ ಆಶ್ರಮದ ಕಡೆಗೆ ನಡೆದಳು. ಪತಿಯನ್ನು ಕಾಣುವ ತವಕದಲ್ಲಿ ಗೌತಮನು ಹಾಕಿದ್ದ ಗೆರೆಯನ್ನು ಅರಿವಿಲ್ಲದೆ ದಾಟಿದಳು. ಒಂದು ಹೆಜ್ಜೆ ಮುಂದಿಟ್ಟ ತತ್‌ಕ್ಷಣವೆ ಅವಳನ್ನು ಎತ್ತಿಕುಕ್ಕರಿಸಿದಂತಾಯ್ತು. ಹಾಗೇ ಕುಸಿದು ಕುಳಿತ ಅಹಲ್ಯೆ ಅಲ್ಲೇ ಕಲ್ಲಾಗಿಹೋದಳು!

ಮೀನು ಹಿಡಿದುಕೊಂಡು ಬರಲು ಹೋಗಿದ್ದ ಬೆಸ್ತರು ಹಾಗೂ ಮೀನು ಮಾರಲು ಹೋಗಿದ್ದ ಬೆಸ್ತರ ಹೆಂಡತಿಯರು ಹಿಂದಿರುಗಿ ಗುಡಿಸಿಲಿಗೆ ಬಂದಾಗ ಗುಡಿಸಿಲಿನಲ್ಲಿ ಹಾರೂತಮ್ಮ ಇರಲಿಲ್ಲ. ಹಾರೂತಮ್ಮ ಇಲ್ಲ ಎಂದು ತಿಳಿಯುತ್ತಿದ್ದಂತೆ ಎಲ್ಲರೂ ದಿಕ್ಕೆಟ್ಟವರಂತಾಗಿ ದಿಕ್ಕು ದಿಕ್ಕುಗಳಿಗೆಲ್ಲ ಧಾವಿಸಿ ಹುಡುಕಿದರು. ಆದರೆ ಎಲ್ಲೂ ಹಾರೂತಮ್ಮನ ಸುಳಿವಿರಲಿಲ್ಲ. ಆ ಬೆಸ್ತರೆಲ್ಲರೂ ಹಾರೂತಮ್ಮನ ಗುಣಗಾನ ಮಾಡುತ್ತ

"ಹಾರೂತಮ್ಮ ಬಂದ್ಮೇಲೆ ನಮಗೆ ಹೆಚ್ಚು ಹೆಚ್ಚು ಮೀನುಗಳು
ಸಿಕ್ತ ಇದ್ವಲ್ಲ ಶಿವನೇ
ಬೆಳಗುನ ಹೊತ್ತು ಎದ್ದಾಗ ಹಾರೂತಮ್ಮನ ಮೊಕ ನೋಡುದ್ರೆ
ಆ ದಿನವೆಲ್ಲ ಒಳ್ಳೆದಾಯ್ತಿತ್ತಲ್ಲ ಶಿವನೇ
ಹಾರೂತಮ್ಮ ನಮ್ಮ ಕೇರಿಗೆ ಬಂದ್ಮೇಲೆ ಯಾವ ಸಂತೆಗೆ ಮೀನು
ಕೊಂಡ್ಹೋದ್ರೂ ಒಳ್ಳೆ ಯಾಪಾರ ಆಯ್ತಿತ್ತಲ್ಲ ಶಿವನೇ
ಆ ಮಾತಾಯಿ ಬರೋದ್ಕಿಂತ ಮಂಚೆ ಅರಗಳ್ಳಾಗಿ ಉಂಡು
ಮನುಗ್ತಿದ್ದೊ
ಆ ಮಾತಾಯಿ ಬಂದಮೇಲೆ ಹೊಟ್ಟೆ ತುಂಬ ಅನ್ನ ಮೈತುಂಬ
ಬಟ್ಟೆ ಮನೆಮಠ ಎಲ್ಲ ಮಾಡ್ಕೊಂಡವಲ್ಲ ಶಿವನೇ"

ಎಂದು ರಾಗ ಪಾಡುತ್ತ ತಮ್ಮ ದುಃಖವನ್ನು ತೋಡಿಕೊಂಡರು. ಆ ದಿನವೆಲ್ಲ ಹಾರೂತಮ್ಮನ ವಿಚಾರವಲ್ಲದೆ ಬೇರೇನೂ ಅವರಿಗೆ ಹೊಳೆಯಲೇ ಇಲ್ಲ. ಆ ದಿನ ಯಾರೂ ನೆಮ್ಮದಿಯಿಂದ ಉಣ್ಣಲಿಲ್ಲ ; ಯಾರ ಕಣ್ಣಿಗೂ ನಿದ್ದೆ ಹತ್ತಲಿಲ್ಲ.

ಆ ರಾತ್ರಿ ಬೆಸ್ತರ ನಾಯಕ ನಿದ್ದೆ ಬರದೆ ಹೊರಳುತ್ತಿದ್ದ. ಆಗ ಇದ್ದಕ್ಕಿದ್ದಂತೆ ಜೊಂಪು ಹತ್ತಿದಂತಾಗಿ ಆಕಾಶದಿಂದ ಉದುರುತ್ತಿವೆಯೇನೋ ಎಂಬಂತೆ ಅಮೃತವಾಣಿ ಹೊರಹೊಮ್ಮುತ್ತಿತ್ತು. ನಾಯಕನ ಸ್ವಪ್ನದಲ್ಲಿ ಕಾಣಿಸಿಕೊಂಡ ಅಹಲ್ಯಾದೇವಿ,

"ನನ್ನ ಪ್ರೀತಿಯ ಮಕ್ಕಳೆ, ನೀವು ನನಗೆ ಅನ್ನ ನೀರು ಕೊಟ್ಟು ಕಾಪಾಡಿದವರು. ನಾನು ನಿಮ್ಮನ್ನು ಬಿಟ್ಟು ಎಲ್ಲೂ ಹೋಗಿಲ್ಲ. ಇಲ್ಲೆ ಉಕ್ಕಡದಲ್ಲಿ ಮೂರ್ತಿಯಾಗಿ ಮೂಡಿದ್ದೇನೆ. ನನ್ನನ್ನು ನಂಬಿದ ನಿಮಗೆ ಒಳ್ಳೆಯದಾಗಲಿ!" ಎಂದ ಆಶೀರ್ವದಿಸಿ ಮರೆಯಾದಳು.

ಕನಸನ್ನು ಕಂಡ ನಾಯಕ ತನ್ನ ಜನರಿಗೆಲ್ಲ ತಾನು ಕಂಡ ಕನಸಿನ ಸಮಾಚಾರವನ್ನು ತಿಳಿಸಿದ. ಅವರೆಲ್ಲ ಉಕ್ಕಡದ ಹತ್ತಿರ ಬಂದು ನೋಡಿದಾಗ ಹಾರೂತಮ್ಮ ಉಕ್ಕಡದಲ್ಲಿ ಮೂರ್ತಿಯಾಗಿ ಮೂಡಿದ್ದಳು. ನಾಯಕರೆಲ್ಲ ಆ ಮೂರ್ತಿಯನ್ನು ಭಯಭಕ್ತಿಯಿಂದ ಪೂಜಿಸಿ 'ಉಕ್ಕಡದಮ್ಮ' ಎಂದು ಕರೆದರು. ಹಾರೂತಮ್ಮನ ಉಕ್ಕಡ ಕಾಲಕ್ರಮದಲ್ಲಿ 'ಆರತಿ ಉಕ್ಕಡ' ಎಂದು ಹೆಸರಾಯಿತು. ಈಗ ಇದು ಹೆಚ್ಚು ಹೆಚ್ಚು ಭಕ್ತರನ್ನು ಆಕರ್ಷಿಸಿ ಸುಪ್ರಸಿದ್ಧ ಪವಿತ್ರ ಕ್ಷೇತ್ರವೆನಿಸಿದೆ.

ಇದೆಲ್ಲ ಸರಿ. ಆದರೆ ರಾಮಾಯಣದ ಪ್ರಕಾರ ಅಹಲ್ಯೋದ್ಧರಣ ಕಾರ್ಯ ನಡೆಯಲಿಲ್ಲವೆ? ನಡೆದಿದ್ದರೆ ರಾಮ ಇಲ್ಲಿಗೆ ಬಂದಿದ್ದ ಕುರುಹುಗಳೊಂದೂ ಜನಪದರಲ್ಲಿ ಪ್ರಚಲಿತವಿಲ್ಲವಲ್ಲ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಆದರೆ ಪಂಚಪತಿವ್ರತೆಯರಲ್ಲಿ ಒಬ್ಬಳೆನಿಸಿದ ಅಹಲ್ಯಾದೇವಿ ಇಲ್ಲಿ ದೇವತೆಯಾಗಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುತ್ತಿರುವುದು ವಿಶೇಷವೆನಿಸಿದೆ.

ಕಬ್ಬಿಣದ ಕಾಗೆ

ದುರ್ವಾಸಮುನಿಯು ವೈಕುಂಠದಲ್ಲಿ ಏಕಾಂತದಲ್ಲಿದ್ದ ಲಕ್ಷ್ಮೀನಾರಾಯಣರ ಏಕಾಂತಕ್ಕೆ ಭಂಗ ಉಂಟು ಮಾಡಿದ ಕಾರಣದಿಂದ ಭೂಲೋಕದಲ್ಲಿ ಕಾಗೆಯಾಗಿ ಹುಟ್ಟುವ ಶಾಪಕ್ಕೀಡಾದರು. ಹಾಗೆಯೇ ಭೂಲೋಕದಲ್ಲಿ ಕಬ್ಬಿಣದ ಕಾಗೆಯಾಗಿ ಹುಟ್ಟಿದ್ದೂ ಆಯಿತು. ಕಾಗೆಯಾಗಿ ಹುಟ್ಟಿದ್ದ ದುರ್ವಾಸರು ವಿಶಾಪಕ್ಕಾಗಿ ಹಂಬಲಿಸಿ ಕಾಯುತ್ತಿದ್ದರು.

ಇತ್ತ ಜನಕ ಮಹಾರಾಜನು ವಯಸ್ಸಿಗೆ ಬಂದ ಮಗಳು ಸೀತೆಗೆ ಮದುವೆ ಮಾಡಬೇಕೆಂದು ತವಕಿಸುತ್ತಿದ್ದನು. ಆದರೆ ಅವಳ ರೂಪ ಯೌವನ ಗುಣಗಳಿಗೆ ತಕ್ಕ ಗಂಡುಗಳು ಯಾರೂ ಬಂದಿರಲಿಲ್ಲ. ಆದ್ದರಿಂದ ತನ್ನ ಮಗಳಿಗೆ ಯೋಗ್ಯನಾದ ವರ ಯಾರೆಂಬುದನ್ನು ಶಿವನಲ್ಲಿಯೇ ಕೇಳಿ ತಿಳಿಯಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ತಪಸ್ಸು ಮಾಡಲು ಕುಳಿತನು.

ಜನಕನು ತಪಸ್ಸಿಗೆ ಕುಳಿತ ಕೊಂಚ ಕಾಲದಲ್ಲಿಯೇ ಕಬ್ಬಿಣದ ಕಾಗೆಯೊಂದು ಬಂದು ಅವನ ತಲೆಯ ಮೇಲೆ ಪಿಸಿಗೆಯನ್ನು ಹಾಕಿ ಅತ್ಯಂತ ವೇಗದಲ್ಲಿ ಹಾರಿಹೋಗಿ ಮರೆಯಾಗುತ್ತಿತ್ತು. ಪ್ರತಿನಿತ್ಯವೂ ಹೀಗೇ ಮಾಡುತ್ತಿತ್ತು. ಇದರಿಂದ ಜನಕ ಮಹಾರಾಜ ಬೇಸತ್ತು ಹೋಗಿದ್ದ.

ಹೀಗಿರುವಾಗ ಒಮ್ಮೆ ನಾರದರು ಜನಕ ಮಹಾರಾಜನ ಆಸ್ಥಾನಕ್ಕೆ ಬಂದರು. ಉಭಯ ಕುಶಲೋಪರಿಗಳಾದ ಮೇಲೆ ಜನಕನು ಕಬ್ಬಿಣದ ಕಾಗೆಯಿಂದ ತನಗಾಗುತ್ತಿರುವ ತೊಂದರೆಯನ್ನು ಹೇಳಿಕೊಂಡನು. ಅದಕ್ಕೆ ನಾರದರು–

"ಮಹಾರಾಜ, ಅದಕ್ಕೇಕೆ ಇಷ್ಟು ಚಿಂತೆ? ಅದಕ್ಕೊಂದು ಉಪಾಯ ಹೇಳುತ್ತೇನೆ ಕೇಳು. ಯಾವ ಕಬ್ಬಿಣದ ಕಾಗೆ ನಿನಗೆ ತೊಂದರೆ ಕೊಡುತ್ತಿದೆಯೋ ಆ ಕಾಗೆಯನ್ನು ಕೊಂದವರಿಗೆ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡು."

"ಪೂಜ್ಯರೇ ಅದು ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲ ; ಅಲ್ಲದೆ ಅದರ ಧ್ವನಿ ಎಲ್ಲರ ಕಿವಿಗೂ ಕೇಳಿಸುವುದಿಲ್ಲ. ಅದನ್ನು ಕೊಲ್ಲುವುದಾದರೂ ಹೇಗೆ ಸಾಧ್ಯ? ಆ ಕಾಗೆ ಕಾಣಿಸಿಕೊಂಡ ಕಡೆಯಲ್ಲಿ ದನಿಯಿರುವುದಿಲ್ಲ. ದನಿ ಬಂದ ಕಡೆಯಲ್ಲಿ ಅದು ಕಾಣಿಸುವುದಿಲ್ಲ. ಈ ವಿಚಿತ್ರ ಕಾಗೆಯನ್ನು ಕೊಲ್ಲುವುದಾದರೂ ಹೇಗೆ?"

"ಮಹಾರಾಜ, ಇದೇ ನಿನ್ನ ಮಗಳ ವಿವಾಹಕ್ಕಾಗಿ ರೂಪಿತವಾಗಿರುವ ರಹಸ್ಯ. ಆ ಕಾಗೆ ಯಾರ ಕಣ್ಣಿಗೆ ಕಾಣಬೇಕೋ ಅವರಿಗೆ ಕಾಣುತ್ತದೆ. ಅದರ ಧ್ವನಿ ಯಾರ ಕಿವಿಗೆ ಕೇಳಬೇಕೋ ಅವರಿಗೆ ಕೇಳುತ್ತದೆ. ಆದ್ದರಿಂದ ಏನೇನೂ ಯೋಚಿಸದೆ 'ಯಾರು ಈ ಕಬ್ಬಿಣದ ಕಾಗೆಯನ್ನು ಹೊಡೆಯುತ್ತಾರೋ ಅವರಿಗೆ ನಿನ್ನ ಮಗಳು ಸೀತೆಯನ್ನು ಕೊಟ್ಟು ಮದುವೆ ಮಾಡುತ್ತೇನೆ' ಎಂದು ಡಂಗೂರ ಸಾರಿಸು!" ಎಂದರು.

ನಾರದರ ಮಾತು ಜನಕಮಹಾರಾಜನಿಗೆ ಒಪ್ಪಿಗೆಯಾಯಿತು. ಅವನು ದೇಶದೇಶದ ಮೇಲೆಲ್ಲ ಕಬ್ಬಿಣದ ಕಾಗೆಯನ್ನು ಕೊಂದು ಸೀತೆಯನ್ನು ಮದುವೆಯಾಗಬಹುದೆಂಬ ಸುದ್ದಿಯನ್ನು ಸಾರಿಕೆ ಮಾಡಿಸಿದನು.

ಈ ಸುದ್ದಿ ದೇಶದ ಎಲ್ಲ ಕಡೆಗೂ ಪಸರಿಸಿತು. ಅಲ್ಲದೆ ಲಂಕೆಗೂ ವಿಷಯ ಮುಟ್ಟಿತು. ಈಗಾಗಲೆ ಮಾಯಾಗನ್ನಡಿಯಲ್ಲಿ ಸೀತೆಯನ್ನು ಕಂಡು ಮರುಳಾಗಿದ್ದ ರಾವಣನ ಬಯಕೆ ತೀವ್ರಗೊಂಡಿತು. ಅವನೂ ಕಬ್ಬಿಣದ ಕಾಗೆಯನ್ನು ಕೊಂದು ಸೀತೆಯನ್ನು ಮದುವೆಯಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಮಿಥಿಲಾನಗರದ ಪಥವಿಡಿದು ಬಂದನು.

ಸೀತಾರಾಮ ಕಲ್ಯಾಣ

ರಾಮಲಕ್ಷ್ಮಣರ ಸರ್ಪಗಾವಲಿನಲ್ಲಿ ವಿಶ್ವಾಮಿತ್ರರ ಯಜ್ಞಕಾರ್ಯ ನಿರ್ವಿಘ್ನವಾಗಿ ನೆರವೇರಿತು. ದೇವ ದೇವಮಾನವರೆಲ್ಲ ಯಜ್ಞಶಾಲೆಯಲ್ಲಿ ಕಿಕ್ಕಿರಿದಿದ್ದು ಉಜ್ವಲತೇಜದ ರಾಮಲಕ್ಷ್ಮಣರನ್ನು ಕಂಡು ಸಂತೋಷಪಟ್ಟರು. ಅಷ್ಟು ಹೊತ್ತಿಗೆ ನಾರದರು ವಿಶ್ವಾಮಿತ್ರರ ಬಳಿಗೆ ಬಂದು,

"ಮಹರ್ಷಿಗಳೇ ಮಿಥಿಲೆ ಕಡೆಗೆ ಹೋಗುವುದಿಲ್ಲವೆ?"

"ನಾರದರೇ ಕಾರಣ?"

"ಮಹರ್ಷಿಗಳೇ, ಸೀತಾ ಸ್ವಯಂವರದ ವಿಷಯ ನಿಮಗೆ ತಿಳಿದೇ ಇಲ್ಲವೆ?"

"ತಿಳಿದಿದೆ. ನನ್ನ ಯಜ್ಞಕಾರ್ಯದ ಗಡಿಬಿಡಿಯಲ್ಲಿ ಮರೆತಿದ್ದೆ ಅಷ್ಟೆ. ಅಲ್ಲದೆ ಕಬ್ಬಿಣದ ಕಾಗೆಯ ವಿಷಯ?"

"ಹೌದು ಮಹರ್ಷಿಗಳೇ, ವಿಧಿಯಾಟದಂತೆ ಅದು ನಡೆಯುತ್ತದೆ ಬಿಡಿ. ಅಲ್ಲಿಗೆ ರಾವಣನೂ ಬರುತ್ತಾನೆ. ಆದಷ್ಟು ಬೇಗ ನೀವು ಶ್ರೀರಾಮಚಂದ್ರನನ್ನು ಕರೆದುಕೊಂಡು ಹೋಗುವುದು ಒಳ್ಳೆಯದು."

"ಈಗಲೇ ಹೊರಡುತ್ತೇನೆ ನಾರದರೆ!"

ವಿಶ್ವಾಮಿತ್ರ ಮಹರ್ಷಿಗಳು ಕಾಲಹರಣ ಮಾಡದೆ ರಾಮಲಕ್ಷ್ಮಣರೊಡನೆ ಮಿಥಿಲೆಗೆ ಹೊರಟರು.

ಮಿಥಿಲೆಗೆ ದೇಶವಿದೇಶಗಳಿಂದ ಅನೇಕ ಭಾರಿ ಭಾರಿ ರಾಜಮಹಾರಾಜರುಗಳು ಆಗಮಿಸಿದ್ದರು. ಅವರೆಲ್ಲರ ಮುಂದೆ ಕಬ್ಬಿಣದ ಕಾಗೆಯನ್ನು ಹೊಡೆದುರುಳಿಸುವ ಸವಾಲಿತ್ತು. ಯಾರು ಕಬ್ಬಿಣದ ಕಾಗೆಯನ್ನು ಹೊಡೆದುರುಳಿಸುತ್ತಾರೋ ಅವರನ್ನು ಜನಕ ಮಹಾರಾಜನ ಮಗಳು ಸೀತಾದೇವಿ ವರಿಸುತ್ತಾಳೆ ಎಂಬ ಡಂಗೂರದ ಸಾರಿಕೆಯನ್ನು ಕೇಳಿದ್ದ ಎಲ್ಲರೂ ಕುತೂಹಲದಿಂದ ಸೇರಿದ್ದರು.

ಬಂದಿದ್ದ ರಾಜಮಹಾರಾಜರುಗಳಲ್ಲಿ ಕೆಲವರು ಬಿಲ್ಲು ಬಾಣಗಳನ್ನು ಹಿಡಿದು ವೇದಿಕೆಗೆ ಬಂದರು. ಆದರೆ ಅವರುಗಳ ಕಣ್ಣಿಗೆ ಕಬ್ಬಿಣದ ಕಾಗೆ ಕಾಣಿಸಲೂ ಇಲ್ಲ; ಅದರ ದನಿ ಕೇಳಿಸಲೂ ಇಲ್ಲ. ಅವರೆಲ್ಲ ನಿರಾಶರಾಗಿ ಹಿಂದಕ್ಕೆ ಬಂದು ತಮ್ಮ ತಮ್ಮ ಆಸನಗಳಲ್ಲಿ ಕುಳಿತರು.

ಈಗ ರಾವಣನ ಸರದಿ. ರಾವಣನು ಹೂಂಕರಿಸುತ್ತ ವೇದಿಕೆಗೆ ಬಂದನು. ಪೂರ್ವ ದಿಕ್ಕಿನ ಆಕಾಶದಲ್ಲಿ ಕಬ್ಬಿಣದ ಕಾಗೆಯ ಧ್ವನಿ ಕೇಳುತ್ತಿತ್ತು. ರಾವಣನು ಪೂರ್ವದಿಕ್ಕಿಗೆ ಗುರಿಯಿಟ್ಟು ಬಾಣ ಹೊಡೆದನು. ಆದರೆ ಆ ಕಾಗೆ ಪಶ್ಚಿಮದಿಕ್ಕಿನಲ್ಲಿ ಹಾರಾಡುತ್ತಿತ್ತು. ರಾವಣ ಸಿಡಿಮಿಡಿಗೊಂಡು ಪಶ್ಚಿಮಕ್ಕೆ ಬಾಣ ಬಿಟ್ಟನು. ಆದರೆ ಕಬ್ಬಿಣದ ಕಾಗೆಯ ದನಿ ದಕ್ಷಿಣದಿಂದ ಬರುತ್ತಿತ್ತು. ಕಾಗೆ ಉತ್ತರ ದಿಕ್ಕಿನ ಆಕಾಶದಲ್ಲಿ ಹಾರಾಡುತ್ತಿತ್ತು. ರಾವಣನಿಗೆ ಇದು ವಿಚಿತ್ರ ಎನಿಸಿ ಗಿರಿಗಿರಿ ತಿರುಗುತ್ತ ಎಲ್ಲ ದಿಕ್ಕಿಗೂ ಏಕಕಾಲದಲ್ಲಿ ಬಾಣಗಳನ್ನು ಬಿಟ್ಟ. ಕಾಗೆಯ ಧ್ವನಿಯೂ ಕೇಳಿಸಲಿಲ್ಲ. ಕಾಗೆ ಕಣ್ಣಿಗೂ ಕಾಣಿಸಲಿಲ್ಲ. ಇದರಿಂದ ರಾವಣನಿಗೆ ಮುಖಭಂಗವಾದಂತಾಗಿ ಮತ್ತೊಮ್ಮೆ ಗಿರಗಿರನೆ ತಿರುಗುತ್ತ ಬಾಣಗಳನ್ನು ಬಿಟ್ಟನು. ಆದರೆ ಕಬ್ಬಿಣದ ಕಾಗೆ ರಾವಣನ ಬಾಣಗಳಿಗೆ ಸಿಗಲೇ ಇಲ್ಲ. ರಾವಣನು ದಿಕ್ಕು ತೋಚದಂತಾಗಿ ಕುಪಿತನಾದನು ; ಕುಸಿದು ಕುಳಿತನು.

ಯಾರೊಬ್ಬರೂ ಧೈರ್ಯವಾಗಿ ನಗಲಾರದೆ ಒಳಗೊಳಗೆ ಮುಖ ಮುಚ್ಚಿಕೊಂಡು ಮುಸಿಮುಸಿ ನಕ್ಕರು. ರಾವಣನು ಅಲ್ಲಿರಲೂ ಆಗದೆ ಕುಳಿತುಕೊಳ್ಳಲೂ ಆಗದೆ ಕಟಕಟನೆ ಹಲ್ಲುಕಡಿಯುತ್ತ ನಿಂತನು.

ಈಗ ವಿಶ್ವಾಮಿತ್ರರು ರಾಮನ ಕಡೆ ತಿರುಗಿ ಸನ್ನೆ ಮಾಡಿದರು. ಶ್ರೀರಾಮಚಂದ್ರನು ಗುರುಹಿರಿಯರಿಗೆಲ್ಲ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸಿ ಕಬ್ಬಿಣದ ಕಾಗೆಗೆ ಗುರಿಯಿಟ್ಟು ಹೊಡೆದನು. ತತ್‌ಕ್ಷಣವೆ ಆ ಕಾಗೆ ಬಾಣದ ಹತಿಗೊಳಗಾಗಿ ಆಕಾಶದ ಮೇಲಿಂದ ನೇರವಾಗಿ ಶ್ರೀರಾಮನ ಪಾದದ ಮೇಲೆ ಬಿದ್ದು ಕಾಗೆ ಆಕಾರವನ್ನು ಕಳೆದುಕೊಂಡು ದುರ್ವಾಸಮುನಿಯಾಗಿ ಮೇಲೆದ್ದಿತು.

ಶ್ರೀರಾಮಚಂದ್ರನು ಕಬ್ಬಿಣದ ಕಾಗೆಯನ್ನು ಹೊಡೆದುರುಳಿಸಿದ ಕೂಡಲೆ ಸೀತಾದೇವಿಯು ಬಂದು ಅವನ ಕೊರಳಿಗೆ ಪುಷ್ಪಮಾಲಿಕೆಯನ್ನು ಹಾಕಿದಳು. ಶ್ರೀರಾಮನು ಪ್ರೀತಿಯಿಂದ ಅವಳ ಕೈಹಿಡಿದನು.

ಶಾಪದಿಂದ ಪರಿತಪಿಸುತ್ತಿದ್ದ ದುರ್ವಾಸರು ಶ್ರೀರಾಮನ ಪಾದಗಳಿಗೆ ನಮಿಸಿ ಅವರೆಲ್ಲರ ಅಪ್ಪಣೆ ಪಡೆದು ತನ್ನ ಆಶ್ರಮದತ್ತ ತೆರಳಿದರು.



ವನವಾಸವಾಂತ ಭೂಜಾತೆ ಕಾಂತ
(ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕೆ ತಾ ನಡೆದ)

ಜನಪದ ರಾಮಾಯಣದ ಕಥೆಗಳು

ಅರಣ್ಯಕಾಂಡ



ಅಮರಕಥಾಮೃತ ರಾಮಾಯಣ



ಗುಹ ನಡೆಸಿದ ದೋಣಿಯಲ್ಲಿ ನದಿ ದಾಟಿದ ಶ್ರೀರಾಮ

ಕಾಕಾಸುರನಿಂದಾಗಿ ಕಾಗೆಗೆ ಒಕ್ಕಣ್ಣು

ಬೆಂಗಳೂರಿನಿಂದ ಹೊರಟು ರಾಮನಗರ ಸಮೀಪಿಸುತ್ತಿರುವಾಗ ಬಲಗಡೆಗೆ ತಿರುಗುವ ಒಂದು ಸಣ್ಣ ರಸ್ತೆಯಲ್ಲಿ ಕ್ರಮಿಸಿದರೆ ಸು.೫ ಕಿ.ಮೀ. ದೂರ ಹೋದಾಗ ರಾಮಗಿರಿಬೆಟ್ಟದ ತಪ್ಪಲನ್ನು ತಲುಪುತ್ತೇವೆ.

ರಾಮನಗರ ಸಮೀಪದ ಈ ರಾಮಗಿರಿ ರಾಮಾಯಣದ ಕಥೆಯ ಕೆಲವು ಘಟನೆಗಳನ್ನು ಹೊತ್ತುಕೊಂಡು ನಿಂತಿದೆ. ಅದರಲ್ಲಿ ಪ್ರಮುಖವಾದುದು ಕಾಕಾಸುರನ ಕಥೆ. ಕಾಕಾಸುರನ ಕಥೆ ನಡೆದದ್ದು ಈ ಬೆಟ್ಟದಲ್ಲಿ ಎಂದು ನಮ್ಮ ಜನಪದರು ಹೇಳುತ್ತಾರೆ.

ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗಾಗಿ ಸೋದರ ಲಕ್ಷ್ಮಣ ಹಾಗೂ ಪತ್ನಿ ಸೀತಾಸಮೇತನಾಗಿ ಅರಣ್ಯವಾಸಿಯಾಗಿರುವಾಗ ಕೆಲಸಮಯ ಈ ಬೆಟ್ಟದ ಮೇಲೆ ಇದ್ದನೆಂದು ಹೇಳುತ್ತಾರೆ.

ಒಂದು ದಿನ ಶ್ರೀರಾಮನು ಸೀತಾದೇವಿಯ ತೊಡೆಯನ್ನು ತಲೆದಿಂಬಾಗಿ ಮಾಡಿಕೊಂಡು ಮಲಗಿದ್ದನು. ಹೀಗೆ ರಾಮನು ಸುಖನಿದ್ರೆಯಲ್ಲಿರುವಾಗ ಇದನ್ನು ಕಂಡ ಕಾಕಾಸುರನೆಂಬ ರಾಕ್ಷಸನು ಸೀತೆಯನ್ನು ಕಾಡತೊಡಗಿದನು. ಈ ಕಾಗೆಯನ್ನು ಹೊಡೆಯಲು ಪ್ರಯತ್ನಿಸಿದರೆ ರಾಮನಿಗೆ ನಿದ್ರಾಭಂಗವಾಗುತ್ತದೆ ಎಂಬುದು ಸೀತೆಯ ಕಳವಳ. ಆದರೆ ಕಾಕಾಸುರನ ಕಾಟ ತಪ್ಪಲಿಲ್ಲ. ಅವನು ಅವಳ ತೋಳನ್ನು ಕ್ರೂರವಾಗಿ ಕುಕ್ಕಿದನು. ಸೀತೆಯ ತೋಳಿನಿಂದ ರಕ್ತ ಸುರಿಯತೊಡಗಿತು. ಆದರೂ ಅವಳು ಪತಿಯ ನಿದ್ರಾಭಂಗವಾಗದಿರಲೆಂದು ಸಹಿಸಿಕೊಂಡಳು. ಆದರೆ ತೋಳಿನ ಆ ರಕ್ತ ರಾಮನ ಹಣೆಯ ಮೇಲೆ ತೊಟ್ಟಿಕ್ಕಿತು. ಇದರಿಂದ ರಾಮನಿಗೆ ಎಚ್ಚರವಾಯಿತು. ಕಣ್ಣು ಬಿಟ್ಟು ನೋಡಿದರೆ ಕಾಕಾಸುರ ಸೀತೆಯನ್ನು ಕಾಡುತ್ತಿದ್ದಾನೆ! ತತ್‌ಕ್ಷಣವೇ ರಾಮನು ಮಲಗಿದ್ದಲ್ಲಿಂದಲೆ ಒಂದು ಹುಲ್ಲುಕಡ್ಡಿಯನ್ನು ಮಂತ್ರಿಸಿ ಕಾಕಾಸುರನ ಮೇಲೆ ಪ್ರಯೋಗಿಸಿದನು.

ರಾಮನು ಮಂತ್ರಿಸಿ ಬಿಟ್ಟ ಹುಲ್ಲುಕಡ್ಡಿಯೇ ನಿಶಿತಾಸ್ತ್ರವಾಗಿ ಕಾಕಾಸುರನನ್ನು ಬೆನ್ನಟ್ಟಿತು. ಆತನೂ ಈ ಬಾಣದಿಂದ ಪಾರಾಗಲು ವಾಯುವೇಗದಲ್ಲಿ ನುಗ್ಗುತ್ತ ಬಹುವಾಗಿ ಪ್ರಯತ್ನಿಸಿದನು. ಆದರೆ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎನಿಸಿದಾಗ ತೀವ್ರ ವೇಗದಲ್ಲಿ ಬಂದು ಶ್ರೀರಾಮನ ಪಾದಗಳಿಗೆ ಬಿದ್ದು ಕ್ಷಮೆ ಯಾಚಿಸಿದನು.

ಆಗ ರಾಮನು ಕಾಕಾಸುರನ ಮೇಲೆ ಕರುಣೆ ತೋರಿಸಿದರೂ ತಾನು ಬಿಟ್ಟ ಬಾಣ ಹುಸಿಯುವಂತಿಲ್ಲ ; ಆದ್ದರಿಂದ ಕಾಕಾಸುರನ ದೇಹದ ಯಾವುದಾದರೂ

ಒಂದು ಅಂಗ ಬಲಿಯಾಗಲೇಬೇಕು ಎಂದಾಗ ಕಾಕಾಸುರನು ತನ್ನ ಒಂದು ಕಣ್ಣನ್ನು ಬಲಿಯಾಗಿ ಒಪ್ಪಿಸಿದನು. ಈ ಕಾರಣದಿಂದ ಕಾಗೆಗಳಿಗೆ ಒಂದು ಕಣ್ಣು ಇಲ್ಲವಂತೆ. ಅಲ್ಲದೆ ರಾಮನ ಶಾಪದ ಕಾರಣದಿಂದ ರಾಮಗಿರಿ ಬೆಟ್ಟಕ್ಕೆ ಈಗಲೂ ಒಂದು ಕಾಗೆಯೂ ಬರುವುದಿಲ್ಲವಂತೆ.

ಈ ಬೆಟ್ಟದಲ್ಲಿರುವ ಶ್ರೀರಾಮನ ದೇವಸ್ಥಾನದ ಪಕ್ಕದಲ್ಲಿರುವ ಬಂಡೆಗಳ ಮಧ್ಯದಲ್ಲಿ ಒಂದು ನಿಸರ್ಗ ನಿರ್ಮಿತ ಕೊಳವಿದೆ. ಇದನ್ನು ಸೀತಮ್ಮನ ಕೊಳ ಎಂದು ಕರೆಯುತ್ತಾರೆ. ಈ ಕೊಳ ಯಾವಾಗಲೂ ಬತ್ತಿಲ್ಲವಂತೆ! ಭಕ್ತರು ಸೀತಮ್ಮನ ಕೊಳದ ತಣ್ಣನೆಯ ನೀರನ್ನು ತಲೆಗೆ ಪ್ರೋಕ್ಷಿಸಿಕೊಳ್ಳುತ್ತಾರೆ. ಈ ಕೊಳದಲ್ಲಿರುವ ರಾಶಿ ರಾಶಿ ಮೀನುಗಳ ಹಿಂಡು ಒಂದು ಆಕರ್ಷಣೆಯ ಕೇಂದ್ರವೇ ಸರಿ.

ರಾಂಪುರ

ಮಂಡ್ಯ ಜಿಲ್ಲೆಯ ಮದ್ದೂರಿನಿಂದ ವಳಗೆರೆಹಳ್ಳಿ ಮಾರ್ಗದಲ್ಲಿ ೧೦ ಕಿ.ಮೀ. ಕ್ರಮಿಸಿದರೆ ರಾಂಪುರ ಗ್ರಾಮ ಸಿಗುತ್ತದೆ.

ತ್ರೇತಾಯುಗದಲ್ಲಿ ಈ ಪರಿಸರವೆಲ್ಲ ದಟ್ಟರಣ್ಯವಾಗಿತ್ತು. ವನವಾಸಕ್ಕೆ ಬಂದಿದ್ದ ಶ್ರೀರಾಮಚಂದ್ರನು ಇಲ್ಲಿರುವ ಲಿಂಗವನ್ನು ಸ್ಥಾಪಿಸಿ ಪೂಜೆ ಮಾಡಿದನಂತೆ. ಆದ್ದರಿಂದ ಈ ಲಿಂಗವನ್ನು ರಾಮಲಿಂಗೇಶ್ವರ ಎಂದು ಕರೆಯುತ್ತಾರೆ.

ಶ್ರೀರಾಮ ಪೂಜಿಸಿದ ಲಿಂಗ ಕಾಲಕ್ರಮದಲ್ಲಿ ಹುತ್ತ ಬೆಳೆದು ಮರೆಯಾಗಿತ್ತು. ಆದರೆ ದಣ್ಣಾಯಕನಪುರದ ಪಾಳೇಗಾರನ ಹಸುಗಳಲ್ಲಿ ಒಂದು ತನ್ನ ಹಿಂಡಿನಿಂದ ಅಲಾಯದವಾಗಿ ಬಂದು ಹುತ್ತದ ಒಳಗಿದ್ದ ಲಿಂಗದ ಮೇಲೆ ಹಾಲು ಕರೆದು ಹೋಗುತ್ತಿತ್ತಂತೆ. ಈ ಹಸು ಪ್ರತಿನಿತ್ಯ ಮನೆಗೆ ಬಂದ ರಕ್ತ ಕರೆಯುತ್ತಿತ್ತಂತೆ. ಇದನ್ನು ಗಮನಿಸಿದ ದನ ಕಾಯುವ ಹುಡುಗರು ಪಾಳೇಗಾರನಿಗೆ ಹಸುವಿನ ನಡತೆಯನ್ನು ತಿಳಿಸಿದರಂತೆ, ಜ್ಯೋತಿಷಿಗಳು ಇಲ್ಲಿ ಶ್ರೀರಾಮ ಪ್ರತಿಷ್ಠಾಪಿಸಿದ ಶಿವಲಿಂಗವಿದೆ ಎಂದು ತಿಳಿಸಿದರು.

ಆಗ ದಣ್ಣಾಯಕನಪುರದ ಪಾಳೇಗಾರ ಇಲ್ಲಿಗೆ ಬಂದು ಈ ಹುತ್ತದಿಂದ ಶಿವಲಿಂಗವನ್ನು ಮುಕ್ತಗೊಳಿಸಿದನಂತೆ. ಅಲ್ಲದೆ ಅವನೇ ಈ ಲಿಂಗವನ್ನು ರಾಮಲಿಂಗೇಶ್ವರ ಎಂದು ಕರೆದು ದೇವಾಲಯವನ್ನು ಕಟ್ಟಿಸಿದನು.

ಶ್ರೀರಾಮನು ಪ್ರತಿಷ್ಠಾಪಿಸಿದ್ದ ಶಿವಲಿಂಗವಿದ್ದು ಇದನ್ನು ಶ್ರೀರಾಮಲಿಂಗೇಶ್ವರ ಸ್ವಾಮಿ ಎಂದು ಕರೆದು ಆ ದೇವಾಲಯವಿರುವ ಊರನ್ನು ರಾಂಪುರ ಎಂದು ಕರೆದರಂತೆ.

ಬರಡುಭೂಮಿಯಾಗಿದ್ದ ಮಂಡ್ಯ ಸಮೃದ್ಧ ಭೂಮಿಯಾಯಿತು

ಮಾಂಡವ್ಯ ಎಂಬ ಋಷಿಯ ಆಶ್ರಮವಿದ್ದ ಸ್ಥಳವೇ ಇಂದಿನ ಮಂಡ್ಯಾವಂತೆ. ಮಾಂಡವ್ಯಮುನಿ ಇಲ್ಲಿನ ಅರಣ್ಯದಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಆ ಋಷಿಯ ಹೆಸರೇ ಈ ಪ್ರದೇಶಕ್ಕೆ ಮಾಂಡವ್ಯಪುರ ಎಂದಾಯಿತು. ಕಾಲಕ್ರಮದಲ್ಲಿ ಈ ದೀರ್ಘನಾಮ ಜನಪದರ ಬಾಯಲ್ಲಿ ಮಂಡ್ಯ ಆಯಿತು ಎಂದು ಹೇಳುತ್ತಾರೆ.

ದ್ವಾಪರಯುಗದಲ್ಲಿ ಇಂದ್ರವರ್ಮ ಎಂಬ ರಾಜನು ಈ ಸ್ಥಳಕ್ಕೆ ಬಂದಮೇಲೆ ಅವನಿಗೊಬ್ಬ ಮಗ ಹುಟ್ಟಿದ. ಆ ಮಗ ಅಲ್ಲೇ ಕೋಟೆ ಮತ್ತು ಅಗ್ರಹಾರಗಳನ್ನು ನಿರ್ಮಿಸಿ ಈ ಸ್ಥಳಕ್ಕೆ 'ಮಂಡೇವೇಮು' ಎಂದು ಹೆಸರಿಟ್ಟನು. ಅದೇ ತರುವಾಯದಲ್ಲಿ ಮಂಡ್ಯ ಆಯಿತೆಂದೂ ರಾಮಾನುಜಾಚಾರ್ಯರ ಶಿಷ್ಯ ಗೋವಿಂದರಾಜನೆಂಬುವವನಿಗೆ ವಿಜಯನಗರದ ಅರಸನಾದ ಶ್ರೀಕೃಷ್ಣದೇವರಾಯನು ಈ ಸ್ಥಳವನ್ನು ಮಾನ್ಯವಾಗಿ ಕೊಟ್ಟನೆಂದೂ ಆ ಮಾನ್ಯ ಎಂಬುದೇ ಮಂಡ್ಯ ಆಯಿತೆಂದು ಮತ್ತೊಂದು ಧಾರ್ಮಿಕ ಹಿನ್ನೆಲೆಯ ಕಥೆ ಇದೆ (ಜೀರಿಗೆ ಕಟ್ಟೆ ಬಸವಪ್ಪ 'ಕರ್ನಾಟಕ ಯಾತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1973. ಪು.36).

ನಮ್ಮ ಜನಪದರು ಕೆಲವು ಭೂಭಾಗಗಳನ್ನು 'ಇದು ಗಂಡಭೂಮಿ', 'ಇದು ಬರಡುಭೂಮಿ' 'ಇದು ಮೊಂಡಭೂಮಿ', 'ಇದು ಪುಣ್ಯಭೂಮಿ' ಎಂದೆಲ್ಲ ಕರೆಯುತ್ತಾರೆ. ಇದರಿಂದ ಆ ನೆಲದ ಗುಣಸ್ವಭಾವಗಳ ಸಮರ್ಥನೆಗಾಗಿ ಅನೇಕ ಪುರಾಣಕಥೆಗಳನ್ನೂ ಹೇಳುತ್ತಾರೆ.

ಮಂಡ್ಯ ಪ್ರದೇಶವೂ ಈವರೆವಿಗೂ ಬರಡುಭೂಮಿಯಾಗಿದ್ದು ಈಗ ಬೇಸಾಯಕ್ಕೆಯೋಗ್ಯವಾದ ಫಲವತ್ತಾದ ಭೂಮಿಯಾಗಿರುವುದಲ್ಲದೆ ಸಂಪದಭಿವೃದ್ಧಿಗೆ ಶ್ರೇಷ್ಠ ಸ್ಥಳವೆನಿಸಿದೆ. ಹೀಗಾದುದರ ಬಗೆಗೆ ನನ್ನ ಮಿತ್ರ ಬಿ.ಕೆ.ನಾಗರಾಜು ಅವರ ತಂದೆ ದೊಡ್ಡಬಾಣಸವಾಡಿಯ ಕಾಳೇಗೌಡರು ರಾಮಾಯಣದ ಹಿನ್ನೆಲೆಯ ಒಂದು ಪುರಾಣಕಥೆಯನ್ನು ಹೇಳಿದ್ದಾರೆ. ಆ ಪವಾಡದ ಕಥೆ ಹೀಗಿದೆ –

ವನವಾಸ ಕಾಲದಲ್ಲಿ ರಾಮ ಸೀತೆ ಲಕ್ಷ್ಮಣರು ಈ ಮಂಡ್ಯ ಪ್ರದೇಶಕ್ಕೆ ಬಂದಾಗ ಸಂಜೆಯ ಹೊತ್ತಾಗಿತ್ತು. ಈ ಸ್ಥಳಕ್ಕೆ ಬಂದಾಗ ಲಕ್ಷ್ಮಣನ ಮೈಮೇಲೆ ಮಾರಿ ಹೊಕ್ಕಂತಾಗಿ ಒದರಾಡುತ್ತ

"ಅಣ್ಣಾ ಈ ಬಿಲ್ಲುಬಾಣಗಳನ್ನು ನಾನು ಹೊರುವುದಿಲ್ಲ. ಬೇಕಾದರೆ ನೀನೇ ಹೊತ್ತುಕೋ. ಬೇಡವಾದರೆ ಅತ್ತ ಕಡೆ ಬಿಸಾಕು!" ಎಂದ. ಅದಕ್ಕೆ ರಾಮ ತಾಳ್ಮೆಗೆಡದೆ

"ಲಕ್ಷ್ಮಣ, ಬಹಳ ಆಯಾಸವಾಯಿತೆ?" ಎಂದು ಕೇಳಿದ.

"ಆಯಾಸವೂ ಇಲ್ಲ, ಈಯಾಸವೂ ಇಲ್ಲ!"

"ಹಾಗಾದರೆ ಹೊರಲಾರದಷ್ಟು ಶಕ್ತಿ ಕುಂದಿತೆ?"

"ಶಕ್ತಿ ಕುಂದಿದೆ ಎನ್ನುತ್ತಿರುವೆಯಾ? ನನ್ನ ತಾಕತ್ ಪರೀಕ್ಷೆ ಮಾಡಲೇಬೇಕೆನಿಸಿದರೆ ಬಾ ನನ್ನ ಜೊತೆ ಕುಸ್ತಿ ಮಾಡು. ಆಗ ನಿನಗೆ ನನ್ನ ಶಕ್ತಿ ಎಷ್ಟೆಂದು ತಿಳಿಯುತ್ತದೆ!" ಎಂದನು.

ಲಕ್ಷ್ಮಣನ ಈ ಅವಿಧೇಯ ವರ್ತನೆಯನ್ನು ಕಂಡು ರಾಮ ಬೆರಗಾದ. ಕ್ಷಣ ಕಾಲ ಯೋಚಿಸಿದ ಶ್ರೀರಾಮ,

"ಲಕ್ಷ್ಮಣನ ಈ ಗುಣಕ್ಕೆ, ಇವನ ಅಹಂಕಾರಕ್ಕೆ ಈ ನೆಲದ ಗುಣವೇ ಕಾರಣವಿರಬೇಕು" ಎಂದುಕೊಂಡು,

"ಲಕ್ಷ್ಮಣ, ಇಷ್ಟು ಹೊತ್ತಿನಲ್ಲಿ ಕಾಳಗ ಮಾಡುವುದುಚಿತವೆ? ಬೆಳಗಾದ ಮೇಲೆ ಮಾಡಿದರಾಯಿತು" ಎಂದು ಲಕ್ಷ್ಮಣನನ್ನು ಕಷ್ಟದಿಂದ ಸಂತೈಸಿದನು.

ಆ ಸ್ಥಳದಿಂದ ಅವರು ಮುಂದಕ್ಕೆ ಪ್ರಯಾಣ ಬೆಳೆಸುವಾಗ ಶ್ರೀರಾಮನು ಹಿಡಿ ಮಣ್ಣನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡನು. ಮುನ್ನಡೆದು ಈ ಭೂಮಿಯ ಗಡಿಯನ್ನು ದಾಟಿದ್ದಾಯಿತು. ಸೂಕ್ತವಾದ ಸ್ಥಳದಲ್ಲಿ ಸ್ವಲ್ಪ ಕಾಲ ನಿದ್ರೆ ಮಾಡಿದರು.

ಬೆಳಗಾಯಿತು. ಸೀತಾ ರಾಮ ಲಕ್ಷ್ಮಣ ಮೂವರೂ ಮೇಲೆದ್ದು ಹರಿಯುತ್ತಿದ್ದ ಕಾವೇರಿ ನದಿಯಲ್ಲಿ ಪ್ರಾತಃ ಕ್ರಿಯೆಗಳನ್ನೆಲ್ಲ ಮುಗಿಸಿಕೊಂಡರು. ಅನಂತರ ಶ್ರೀರಾಮನು ಲಕ್ಷ್ಮಣನನ್ನು ಹತ್ತಿರಕ್ಕೆ ಕರೆದು

"ಸೋದರ, ನಿನ್ನೆ ರಾತ್ರಿ ಕುಸ್ತಿ ಮಾಡಲು ತೊಡೆತಟ್ಟಿ ನಿಂತೆಯಲ್ಲ. ಈಗಾಗಬಹುದೆ?" ಎಂದು ಕೇಳಿದ.

ಶ್ರೀರಾಮನ ಮಾತನ್ನು ಕೇಳಿ ಲಕ್ಷ್ಮಣನಿಗೆ ಹೃದಯದ ಬಡಿತವೇ ನಿಂತಂತಾಯಿತು. ಅವನು ಬೆದರಿ ಬೆವತು ಹೋದನು. ಇದನ್ನೆಲ್ಲ ಗಮನಿಸುತ್ತಿದ್ದ ಶ್ರೀರಾಮನು ತಮ್ಮನ ಉಗ್ರನಡತೆಗೆ ನೆಲದ ಗುಣವೇ ಕಾರಣವೆಂದು ಸುಮ್ಮನಾದ.

ಆ ದಿನ ರಾತ್ರಿಯಾಯಿತು. ಊಟ ಉಪಚಾರಗಳಾದ ಮೇಲೆ ರಾಮ ಲಕ್ಷ್ಮಣ ಸೀತೆಯರು ಮಲಗಿದರು. ರಾಮನಿಗೆ ನಿದ್ರೆ ಬಂದಿರಲಿಲ್ಲ. ಅವರು ಮೆಲ್ಲಗೆ ಎದ್ದು ತನ್ನ ಸೆರಗಿನಲ್ಲಿ ತಂದಿದ್ದ ಮಣ್ಣನ್ನು ಮೆಲ್ಲಗೆ ಲಕ್ಷ್ಮಣನ ತಲೆಯ ಮೇಲೆ ಉದುರಿಸಿದನು. ಲಕ್ಷ್ಮಣನಿಗೆ ಎಚ್ಚರವಾಯಿತು. ಧಡಕ್ಕನೆ ಮೇಲೆದ್ದು ತೊಡೆ ತಟ್ಟುತ್ತ,

"ಅಣ್ಣಾ, ಬಾ ಕುಸ್ತಿ ಮಾಡೋಣ. ನಾನೂ ಒಂದು ಕೈ ನೋಡೇಬಿಡುತ್ತೇನೆ!" ಎಂದು ಗುಡುಗಿದ. ಲಕ್ಷ್ಮಣನ ಇಂಥ ಗುಣವಿಕಾರಕ್ಕೆ ಆ ನೆಲದ ಮಣ್ಣಿನ ಗುಣವೇ ಕಾರಣವೆಂದು ತಿಳಿದು ಲಕ್ಷ್ಮಣನ ತಲೆಯ ಮೇಲಿದ್ದ ಮಣ್ಣನ್ನು ಒದರಿ ತೆಗೆದನು. ಲಕ್ಷ್ಮಣ ಮೊದಲಿನಂತೆ ತಣ್ಣಗಾದ. ಸೀತೆಯೂ ಎಚ್ಚರವಾಗಿ ಇದನ್ನೆಲ್ಲ ಗಮನಿಸುತ್ತಿದ್ದಳು. ಶ್ರೀರಾಮನು ಯೋಚಿಸುತ್ತಿದ್ದ ವಿಕಾರಗುಣೋತ್ಪತ್ತಿಗೆ ಕಾರಣವಾದ ನೆಲವನ್ನು ನೋಡುತ್ತ ವಿನೀತನಾಗಿ

"ಮೊಂಡುಭೂಮಿಯಿದು ಬರಡಾಗಲಿ!" ಎಂದು ಶಪಿಸಿದನು. ಆಗ ಸೀತಾಮಾತೆಯೂ ತಲ್ಲಣಗೊಂಡು,

"ಸ್ವಾಮಿ, ರೈತಾಪಿ ಜನಗಳಿರುವ ಈ ನೆಲವನ್ನು ಕುರಿತು ನೀವು ಹೀಗೆ ಶಪಿಸಬಹುದೆ? ನೀವು ಶಪಿಸಿದರೆ ಜಗತ್ತಿಗೆ ಅನ್ನ ಕೊಡುವ ರೈತರ ಗತಿಯೇನು? ಆಹಾರಕ್ಕಾಗಿ ಅವರನ್ನೇ ಅವಲಂಬಿಸಿರುವ ಜಗತ್ತಿನ ಗತಿಯೇನು? ನಿಮ್ಮ ಶಾಪವನ್ನು ಹಿಂದಕ್ಕೆ ತೆಗೆದುಕೊಳ್ಳಿ ಸ್ವಾಮಿ" ಎಂದು ನೆಲದ ಮಗಳಾದ ಸೀತಾಮಾತೆ ದೈನ್ಯದಿಂದ ಯಾಚಿಸಿದಳು. ಆಗ ಶ್ರೀರಾಮನು ಸೀತೆಯನ್ನು ಕೃಪಾದೃಷ್ಟಿಯಿಂದ ನೋಡುತ್ತ

"ಆತಂಕ ಬೇಡ ದೇವಿ. ಪವಿತ್ರ ತೀರ್ಥವೊಂದು ಈ ನೆಲದ ಮೇಲೆ ಹರಿಯುತ್ತದೆ. ಫಲವತ್ತಾಗಿ ಈ ನೆಲವನ್ನು ತಣಿಸುತ್ತದೆ. ಇಲ್ಲಿನ ಜನರ ಸುಖ ಸಂತೋಷ ಸಮೃದ್ಧಿಗೆ ಕಾರಣವಾಗುತ್ತದೆ. ಜಗತ್ತಿಗೇ ಅನ್ನದಾತರು ಇಲ್ಲಿನ ಜನರಾಗುತ್ತಾರೆ. ಈಗ ಸಮಾಧಾನವಾಯಿತೆ?" ಎಂದು ಕೇಳಿದನು. ಸೀತಾಮಾತೆಯು ಸಂತೃಪ್ತಿಯ ನಗೆ ಬೀರಿದಳು.

ನೆಲದ ಮಹಿಮೆಯನ್ನು ಇಂಥ ಪುರಾಣಕಥೆಗಳ ಮೂಲಕ ಗುರುತಿಸಿಕೊಳ್ಳುವುದು ನಮ್ಮ ಜನಪದರಿಗೆ ಹೆಮ್ಮೆಯ ವಿಷಯವಾಗಿದೆ.

ಮೇಲುಕೋಟೆಯ ಧನುಷ್ಕೋಟಿ

ಮೇಲುಕೋಟೆಯಲ್ಲಿರುವ ಸಂಸ್ಕೃತ ಸಂಶೋಧನಾ ಅಕಾಡೆಮಿಯಿಂದ ಬೆಟ್ಟದ ದಕ್ಷಿಣದ ತುತ್ತ ತುದಿಗೆ ಸುಮಾರು ಎರಡು ಕಿ.ಮೀ. ನಷ್ಟು ಕಾಲ್ನಡಿಗೆಯಲ್ಲಿ ಸಾಗಿದರೆ ಧನುಷ್ಕೋಟಿ ತಾಣವನ್ನು ಕಾಣಬಹುದು.

ಪುರಾಣ ಪ್ರಸಿದ್ಧವಾದ ಈ ಧನುಷ್ಕೋಟಿಗೆ ಅಗಸ್ತ್ಯ ಮಹರ್ಷಿಗಳ ಆದೇಶದಂತೆ ತ್ರೇತಾಯುಗದಲ್ಲಿ ರಾಮ-ಲಕ್ಷ್ಮಣ-ಸೀತೆಯರು ತಮ್ಮ ವನವಾಸ ಕಾಲದಲ್ಲಿ ಬಂದಿದ್ದರಂತೆ. ಒಮ್ಮೆ ಸೀತೆಗೆ ಅತಿಯಾದ ಬಾಯಾರಿಕೆಯಾಗಿ

ಬಳಲುತ್ತಿರುವಾಗ ಶ್ರೀರಾಮನು ಬೆಟ್ಟದ ಶಿಖರಕ್ಕೆ ಬಾಣವೊಂದನ್ನು ಬಿಟ್ಟನಂತೆ. ಬಿಟ್ಟ ಬಾಣದಿಂದ ದೊಗರೊಂದು ಉಂಟಾಗಿ ಅಲ್ಲಿಂದ ನೀರಿನ ಬುಗ್ಗೆ ಚಿಮ್ಮಿತಂತೆ. ಈ ನೀರಿನ ಬುಗ್ಗೆ ಚಿಮ್ಮುವ ಸ್ಥಳವನ್ನು ಧನುಷ್ಕೋಟಿ ಎಂದು ಹೇಳುತ್ತಾರೆ. ಈ ಧನುಷ್ಕೋಟಿಯಲ್ಲಿ ಸದಾಕಾಲ ನೀರು ಒಸರುತ್ತಲೇ ಇರುತ್ತದೆ.

ಈ ಕೊಳದ ಪಕ್ಕದ ದೊಡ್ಡಹಾಸುಗಲ್ಲಿನ ಮೇಲೆ ದೊಡ್ಡಗಾತ್ರದ ಎರಡು ಪಾದದ ಅಚ್ಚುಗಳಿವೆ. ಇವುಗಳನ್ನು ಶೀರಾಮನ ಪಾದದ ಗುರುತುಗಳೆಂದು ಹೇಳುತ್ತಾರೆ.

ಕಂಬದ ರಾಮದೇವರ ಬೆಟ್ಟದಲ್ಲಿರುವ ಮೊಸರುಕಲ್ಲು

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಬನ್ನೂರು-ರಂಗಸಮುದ್ರದ ಸಮೀಪದಲ್ಲಿ ಕಂಬದ ರಾಮದೇವರ ಬೆಟ್ಟವಿದೆ. ಹಸಿರು ವನಸಿರಿಯ ನಡುವೆ ವಿವಿಧ ಆಕಾರದ ಬಂಡೆಗಳು ಸುತ್ತುವರಿದಿವೆ. ಅಲ್ಲಿನ ಕಂದು ಗ್ರ್ಯಾನೈಟ್ ಶಿಲೆಗಳ ಮಧ್ಯೆ ಒಂದಿಷ್ಟು ಅಚ್ಚಬಿಳಿಯ ಶಿಲೆಯೂ ಇದೆ.

ಈ ಬೆಟ್ಟಕ್ಕಿರುವ ಸುಮಾರು ಮುನ್ನೂರು ಮೆಟ್ಟಿಲುಗಳನ್ನು ಹತ್ತಿ ಹೋದರೆ ಅಲ್ಲಿರುವ ಕಂಬಾಕೃತಿಯ ಕಲ್ಲಿನಲ್ಲಿ ಶ್ರೀರಾಮ ಮತ್ತು ಸೀತೆಯರ ವಿಗ್ರಹಗಳನ್ನು ಕೆತ್ತಲಾಗಿದೆ. ವಿಶೇಷವೆಂದರೆ ಇಲ್ಲಿ ಲಕ್ಷ್ಮಣನ ವಿಗ್ರಹವೇ ಇಲ್ಲ. ಗುಡಿಯ ಹೊರಗೆ ರಾಮಭಕ್ತ ಆಂಜನೇಯನ ಮೂರ್ತಿ ಇದೆ. ಕಂಬಾಕೃತಿಯ ಕಲ್ಲಿನ್ನಲಿ ಸೀತಾರಾಮರ ವಿಗ್ರಹವಿರುವುದರಿಂದ ಈ ಬೆಟ್ಟವನ್ನು ಕಂಬದ ರಾಮದೇವರ ಬೆಟ್ಟ ಎಂದು ಕರೆಯುತ್ತಾರೆ.

ಈ ಬೆಟ್ಟದ ಮತ್ತೊಂದು ವಿಶೇಷವೆಂದರೆ ಬೆಟ್ಟದ ಒಂದು ಪಾರ್ಶ್ವದ ಇಳಿಜಾರಿನಲ್ಲಿ ಬಸವನ ಗುಡಿಯಿದೆ. ಆ ಗುಡಿಯ ಸಮೀಪದಲ್ಲಿ ಮೊಸರು ಚೆಲ್ಲಿದಂತೆ ಬೆಣಚುಕಲ್ಲಿನ ಶಿಲಾಪದರವಿದೆ. ಇದರ ಹೊರತಾಗಿ ಸುತ್ತಮುತ್ತ ಎಲ್ಲಿ ನೋಡಿದರೂ ಕಂದುಬಣ್ಣದ ಶಿಲೆಗಳಿವೆ. ಈ ಒಂದು ಭಾಗ ಮಾತ್ರ ಬಿಳಿಯ ಬೆಣಚು ಕಲ್ಲಿದೆಯೆಂದ ಮೇಲೆ ನಮ್ಮ ಜನಪದರ ಕಲ್ಪನಾಲಹರಿ ಕುಡಿವರಿಯದೆ ಇರಲು ಸಾಧ್ಯವೇ? ಇಲ್ಲ. ಅವರ ಕಲ್ಪನೆಯಲ್ಲಿ ಇದು ಚೆಲ್ಲಿದ ಮೊಸರಿನಿಂದಾದ ಬಿಳಿಯಕಲ್ಲು. ಅದಕ್ಕೆ ರಾಮಾಯಣದ ಕಥಾಸ್ಪರ್ಶವಿದೆ –

ಒಮ್ಮೆ ಸೀತಾಮಾತೆಯು ಮೊಸರಿನ ಗಡಿಗೆಯನ್ನು ಹೊತ್ತುಕೊಂಡು ಬೆಟ್ಟವನ್ನು ಹತ್ತುತ್ತಿದ್ದಳಂತೆ. ಆಗ ಅವಳು ಆಕಸ್ಮಿಕವಾಗಿ ಎಡವಿ ಮೊಸರಿನ ಗಡಿಗೆ ಆ ಬಂಡೆಯ ಮೇಲೆ ಬಿದ್ದು ಒಡೆಯಿತು. ಆ ಗಡಿಗೆಯಲ್ಲಿದ್ದ ಮೊಸರು ಆ ಬಂಡೆಯ ಮೇಲೆಲ್ಲ ಚೆಲ್ಲಿಹೋಯಿತು. ಆ ಮೊಸರು ಚೆಲ್ಲಿಹೋದ ಭಾಗದ ಬಂಡೆಯೆಲ್ಲ

ಮೊಸರಿನ ಬಣ್ಣದಲ್ಲೇ ಉಳಿಯಿತು. ಈ ಕಾರಣದಿಂದ ಈ ಶಿಲಾಪದರವನ್ನು 'ಮೊಸರುಕಲ್ಲು' ಎಂದು ಕರೆಯುತ್ತಾರೆ.

ಮೋದೂರು ರಾಮಲಿಂಗೇಶ್ವರ

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಮೋದೂರು ಗ್ರಾಮದಲ್ಲಿ ಶ್ರೀರಾಮಲಿಂಗೇಶ್ವರ ದೇವಾಲಯವಿದೆ. ಇಲ್ಲಿರುವ ರಾಮಲಿಂಗೇಶ್ವರ ಲಿಂಗವನ್ನು ಶ್ರೀರಾಮನೇ ಪ್ರತಿಷ್ಠಾಪಿಸಿದನಂತೆ. ವನವಾಸಾರ್ಥವಾಗಿ ಪಶ್ಚಿಮದಿಕ್ಕಿನಿಂದ ಬರುತ್ತಿರುವಾಗ ಇಲ್ಲಿ ಸ್ವಲ್ಪ ಕಾಲ ತಂಗಿದ್ದನಂತೆ. ಆ ಸಮಯದಲ್ಲಿ ಶಿವನನ್ನು ಪೂಜಿಸಲು ಈ ಲಿಂಗವನ್ನು ಇಲ್ಲಿ ಪ್ರತಿಷ್ಠಾಪಿಸಿದನಂತೆ.

ಮೋದೂರು ರಾಮಲಿಂಗೇಶ್ವರ ದೇವಾಲಯದ ಸುತ್ತ ನೆಲವನ್ನು ಅಗೆದರೆ ಎಲ್ಲೆಂದರಲ್ಲಿ ವಿಭೂತೀಮಣ್ಣು ಕಾಣಸಿಗುತ್ತದೆ. ಈ ಕಾರಣದಿಂದ ಕೆಲವರು ಈ ಭೂಮಿ ಶ್ರೀರಾಮನು ಯಾಗ ಮಾಡಿದ ಸ್ಥಳವೆಂದು ಹೇಳುತ್ತಾರೆ.

ರಾಮನಾಥಗಿರಿ

ಉತ್ತನಹಳ್ಳಿ ಮೈಸೂರಿನ ಚಾಮುಂಡಿಬೆಟ್ಟದ ಸಮೀಪದ ಒಂದು ಚಿಕ್ಕ ಬೆಟ್ಟವಿರುವ ಊರು. ಇಲ್ಲಿರುವ ಉತ್ತನಹಳ್ಳಿ ಮಾರಮ್ಮನನ್ನು ಶ್ರೀಜ್ವಾಲಾಮುಖಿ ತ್ರಿಪುರಸುಂದರಿ ಎಂಬುದಾಗಿ ಕರೆಯುತ್ತಾರೆ. ಈ ಹೆಸರಿನಿಂದ ಜೈನಯಕ್ಷಿಣಿ ಜ್ವಾಲಾಮಾಲಿನಿ ಆಗಿರಬಹುದೇನೋ ಎಂಬ ಸಂಶಯ ಬರುತ್ತದೆ.

ಮತ್ತೊಂದು ವಿಶೇಷವೆಂದರೆ ಉತ್ತನಹಳ್ಳಿಯನ್ನು ಕೆಲವರು ಏಳಿಗೆಹುಂಡಿ ಎಂದೂ ಕರೆಯುತ್ತಾರೆ. ಈ ಊರಿನಲ್ಲಿರುವ ಚಿಕ್ಕಬೆಟ್ಟಕ್ಕೆ ರಾಮನಾಥಗಿರಿ ಎಂದೂ ಕರೆಯುತ್ತಾರೆ. ಇಲ್ಲಿ ಸಿದ್ದೇಶ್ವರಸ್ವಾಮಿ ದೇವಾಲಯವಿದೆ. ಇಲ್ಲಿರುವ ಸಿದ್ದೇಶ್ವರಸ್ವಾಮಿಗೆ ಶ್ರೀರಾಮ ಬಂದು ಪೂಜೆ ಮಾಡಿದನೆಂದು ಹೇಳಲಾಗಿದೆ. ಶ್ರೀರಾಮ ಬಂದು ಸಿದ್ಧೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದ್ದರಿಂದಲೇ ಈ ಬೆಟ್ಟಕ್ಕೆ ರಾಮನಾಥಗಿರಿ ಎಂದು ಹೆಸರಾಯಿತಂತೆ.

ಈ ರಾಮನಾಥಗಿರಿಯಲ್ಲಿ ಭೈರವೇಶ್ವರ ಸ್ವಾಮಿಯ ದೇವಾಲಯವೂ ಇದೆ. ಇದು ಹೈದರಾಲಿ ಆಡಳಿತದ ಕಾಲದಲ್ಲಿ ಭಿನ್ನವಾಗಿತ್ತಂತೆ. ಆದರೆ ಇತ್ತೀಚೆಗೆ ಇದರ ಜೀರ್ಣೋದ್ಧಾರ ನಡೆದು ಪೂಜಾಕಾರ್ಯಗಳು ಸಾಂಗವಾಗಿ ನೆರವೇರುತ್ತಿವೆ.

ರವಿರಾಮೇಶ್ವರ

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಕೇರಳದ ಗಡಿಭಾಗದಲ್ಲಿ ಕಿತ್ತೂರು ಎಂಬ ಊರಿದೆ.ಇಲ್ಲಿ ಕಪಿಲಾನದಿಯ ಸುತ್ತುವಿಕೆಯಿಂದ ಒಂದು ಪರ್ಯಾಯ ದ್ವೀಪ ಏರ್ಪಟ್ಟಿದೆ.ದಕ್ಷಿಣದಿಂದ ಉತ್ತರಕ್ಕೆ ಉತ್ತರದಿಂದ ಪೂರ್ವಕ್ಕೆ ಪೂರ್ವದಿಂದ ದಕ್ಷಿಣಕ್ಕೆ ಕಪಿಲೆಯು ಹರಿಯುವುದರಿಂದ ಇಲ್ಲಿ ಪರ್ಯಾಯ ದ್ವೀಪ ರಚನೆಯಾಗಿದೆ.

ಕಿತ್ತೂರು, ಹೆಗ್ಗಡದೇವನಕೋಟೆಯಿಂದ ಕಬಿನಿ ಜಲಾಶಯದತ್ತ ಸಾಗಿದರೆ ಇದು ಹಿನ್ನೀರಿನ ಭಾಗದಲ್ಲಿದೆ. ಇದು ವೈಷ್ಣವರಿಗೂ ಶೈವರಿಗೂ ಬೇಕಾದ ರವಿರಾಮೇಶ್ವರ ದೇವಾಲಯವಾಗಿದೆ.

ಈಗಿನ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ಎಡತೊರೆ (ಈಗಿನ ಕೃಷ್ಣರಾಜನಗರ–ಕೆ.ಆರ್.ನಗರ) ತಾಲ್ಲೂಕುಗಳ ಅಂದರೆ –ಕಪಿನೀ–ಕಾವೇರಿಗಳು ಹರಿಯುವ ಪ್ರದೇಶವನ್ನು ಪುನ್ನಾಟ (ಪುಂರಾಷ್ಟ್ರ) ಎಂಬುದಾಗಿ ಎಳಂದೂರು ತಾಲ್ಲೂಕಿನ ಮಾಂಬಳ್ಳಿ ಶಾಸನವು ಹೇಳುತ್ತದೆ. ಪುನ್ನಾಟವನ್ನು ಕುರಿತು ಪ್ರೊ. ದೇಜಗೌ ಅವರು ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿರುವ ಪೂನಾಡಹಳ್ಳಿಯೇ ಪುನ್ನಾಟದ ಅವಶೇಷವಾಗಿರಬಹುದು ಎನ್ನುತ್ತಾರೆ. ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನ ಗ್ರಾಮನಾಮಗಳು ಈ ತಾಲ್ಲೂಕಿನಲ್ಲಿರುವಂತೆ ಆ ತಾಲ್ಲೂಕಿನಲ್ಲೂ ಇವೆ ; ಆ ತಾಲ್ಲೂಕಿನಲ್ಲಿರುವಂತೆ ಈ ತಾಲ್ಲೂಕಿನಲ್ಲೂ ಇವೆ. ಕೀರ್ತಿಪುರ ಎಂದು ಕರೆಯುವ 'ಕಿತ್ತೂರು' ಹೆಸರಿನ ಊರುಗಳು ಈ ಎರಡು ತಾಲ್ಲೂಕಿನಲ್ಲೂ ಇವೆ.

ಈ ಕಿತ್ತೂರಿನಲ್ಲಿರುವ ರವಿರಾಮೇಶ್ವರ ದೇವಾಲಯದಲ್ಲಿರುವ ಶಿವಲಿಂಗವನ್ನು ಶೀರಾಮನು ಪ್ರತಿಷ್ಠಾಪಿಸಿದ್ದರಿಂದ ರಾಮಲಿಂಗೇಶ್ವರ ಎಂಬ ಹೆಸರಿನಲ್ಲಿದೆ. ರಾಮಾಯಣದ ದಂಡಕಾರಣ್ಯಕ್ಕೆ ಸೇರಿದ ಪ್ರದೇಶ ಇದೆಂದು ಹೇಳುತ್ತಾರೆ. ಶ್ರೀರಾಮನು ಇಲ್ಲಿ – ಅಂದರೆ – ಕಪಿಲಾನದಿ ದಡದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿದನೆಂದು ಹೇಳುತ್ತಾರೆ.ಶ್ರೀರಾಮನು ರವಿವಂಶದವನಾದ್ದರಿಂದ ಈ ಶಿವಲಿಂಗಕ್ಕೆ ರವಿರಾಮೇಶ್ವರ ಎಂದು ಕರೆಯುತ್ತಾರೆ ಎಂಬುದು ಒಂದು ವಾದವಾದರೆ ಪುನ್ನಾಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ರವಿವರ್ಮ ಎಂಬ ರಾಜನು ಈ ಶಿವಲಿಂಗವನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿಸಿದನಂತೆ.ಈ ಕಾರಣದಿಂದಲೂ ಈ ಲಿಂಗಕ್ಕೆ ರವಿರಾಮೇಶ್ವರ ಎಂಬ ಹೆಸರಾಯಿತು ಎಂಬುದು ಮತ್ತೊಂದು ವಾದ.

ವಾದ ಅಂತಿರಲಿ ರವಿರಾಮೇಶ್ವರ ಲಿಂಗದ ಗರ್ಭಗುಡಿಯ ಮುಂಭಾಗದಲ್ಲಿರುವ ನಂದಿಯು ಈಶಾನ್ಯದ ಕಡೆಗೆ ತಿರುಗಿರುವುದು ಯಶಸ್ಸಿನ ಸಂಕೇತವೆಂದು ನಂಬಲಾಗಿದೆ.

ಜಪ್ಯೇಶ್ವರ

ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಹೆಬ್ಸೂರು – ಸೀಗೋಳು ಬಳಿ ಜಪ್ಯೇಶ್ವರ ಕ್ಷೇತ್ರವಿದೆ. ಜಪದಕಟ್ಟೆ ಎಂದು ಹೇಳುವ ಈ ತಾಣ ನಿಸರ್ಗದ ನಡುವೆ ಕಾವೇರಿ ನದೀ ದಡದಲ್ಲಿದೆ.

ಪುರಾಣ ಕಾಲದಲ್ಲಿ ಇದು ಜಾಬಾಲಿಮುನಿಗಳ ತಪೋವನವಾಗಿತ್ತೆಂದು ತಿಳಿದುಬರುತ್ತದೆ. ಇದು ಜಾಬಾಲಿ ಮುನಿಗಳ ಆಶ್ರಮವಾಗಿತ್ತೆಂಬುದಕ್ಕಿಂತಲೂ ಮಿಗಿಲಾಗಿ ಶ್ರೀರಾಮಲಕ್ಷ್ಮಣರು ಸೀತೆಯರು ಇಲ್ಲಿಗೆ ಬಂದಿದ್ದರಂತೆ. ಜಾಬಾಲಿ ಮುನಿಗಳು ಶ್ರೀರಾಮನಿಗೆ ತನ್ನ ಕಾರ್ಯಸಿದ್ಧಿಗಾಗಿ ಜಪ್ಯೇಶ್ವರನನ್ನು ಜಪಿಸಲು ಉಪದೇಶ ಮಾಡಿದರೆಂದು ಹೇಳುತ್ತಾರೆ. ಶ್ರೀರಾಮನ ಜಪ್ಯೇಶ್ವರನನ್ನು ಜಪಿಸಿ ಚುಂಚನಕಟ್ಟೆ ಕಡೆಗೆ ಪಾದ ಬೆಳೆಸಿದನಂತೆ.

ಶ್ರೀರಾಮಚಂದ್ರ ಸೀತಾ ಲಕ್ಷ್ಮಣರ ಸಮೇತ ಇಲ್ಲಿಗೆ ಆಗಮಿಸಿದ್ದರಿಂದ ಜನರ ದೃಷ್ಟಿಯಲ್ಲಿ ಇದು ಪವಿತ್ರ ಸ್ಥಳವೆನಿಸಿದೆ. ಇಲ್ಲಿ ಸಾಕ್ಷಾತ್ ಪರಮೇಶ್ವರನೇ ಜಪ್ಯೇಶ್ವರನಾಗಿ ನೆಲಸಿದ್ದಾನೆಂದು ಸ್ಥಳೀಯರು ಹೇಳುತ್ತಾರೆ.

ಇಲ್ಲಿ ಹರಿಯುವ ಕಾವೇರಿ ನದಿಯೊಳಗೆ ಹೂತುಹೋಗಿದ್ದ ಸೂರ್ಯನ ವಿಗ್ರಹ, ಷಣ್ಮುಖನ ವಿಗ್ರಹ, ವಿಷ್ಣುವಿನ ವಿಗ್ರಹಗಳು ನಯನಮನೋಹರವಾಗಿವೆ. ಇತ್ತೀಚೆಗೆ ಈ ದೇವಾಲಯಗಳನ್ನು ಕೆ.ಆರ್. ನಗರದ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಶ್ರೀಗಳಾದ ಶ್ರೀ ಶಂಕರಭಾರತೀ ಸ್ವಾಮಿಗಳು ತಮ್ಮ ಅಧೀನಕ್ಕೆ ತೆಗೆದುಕೊಂಡು ಜಪದಕಟ್ಟೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೆರುಗನ್ನು ಕೊಟ್ಟು ಇದನ್ನು ಪ್ರವಾಸಿತಾಣವನ್ನಾಗಿ ಕರುನಾಡ ಮತ್ತೊಂದು ಶೃಂಗೇರಿಯನ್ನಾಗಿ ಪರಿವರ್ತಿಸುತ್ತಿದ್ದಾರೆ.

ತ್ರಿಶೂಲಧಾರಿ ಶ್ರೀರಾಮನ ಚುಂಚನಕಟ್ಟೆ

೧. ಪಿಂಚಾಸುರನ ಮಕ್ಕಳು

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿದ್ದ ನವಿಲುಗಿರಿ ರಾಜ್ಯವನ್ನು ಪಿಂಚಾಸುರ ಎಂಬ ರಾಕ್ಷಸನು ವೈಭವದಿಂದ ಆಳುತ್ತಿದ್ದನು. ಅವನಿಗೆ ಇಬ್ಬರು ಗಂಡುಮಕ್ಕಳಿದ್ದರು. ಹಿರಿಯ ಮಗನ ಹೆಸರು ಕಂಚಾಸುರ. ಕಿರಿಯ ಮಗನ ಹೆಸರು ಚುಂಚಾಸುರ. ಅಪ್ರತಿಮ ಶೂರರಾದ ತನ್ನ ಮಕ್ಕಳ ಬಗೆಗೆ ಪಿಂಚಾಸುರನಿಗೆ ಹೆಮ್ಮೆಯೆನಿಸಿತ್ತು. ಆದರೆ ದೇವತೆಗಳ ಅಸೂಯೆಯಿಂದ ರಾಕ್ಷಸರು ನೆಮ್ಮದಿಯಿಂದ

ಬದುಕಿರಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಕೊರಗು ಪಿಂಚಾಸುರನನ್ನು ಕಾಡುತ್ತಿತ್ತು. ಹೀಗಿರುವಾಗ ತನ್ನ ಅಂತ್ಯಕಾಲ ಸಮೀಪಿಸುತ್ತಿದೆ ಎಂದು ಅರಿತ ಆತ ತನ್ನ ಮಕ್ಕಳಾದ ಕಂಚ, ಚುಂಚರನ್ನು ಬರಮಾಡಿಕೊಂಡು

'ಮಕ್ಕಳೇ, ನನ್ನ ಅಂತ್ಯಕಾಲ ಸಮೀಪಿಸುತ್ತಿದೆ. ನೀವು ನನಗೆ ಹೇಗೆ ಆದರ್ಶ ಪುತ್ರರೋ ಹಾಗೆಯೇ ಅನ್ಯೋನ್ಯ ಪ್ರೀತಿಯ ಅಣ್ಣತಮ್ಮರೆಂದು ಹೆಸರಾಗಿದ್ದೀರಿ, ನಿಮ್ಮ ಅಭ್ಯುದಯವನ್ನು ಕಣ್ತುಂಬ ನೋಡುವ ಸುಯೋಗವು ನನ್ನ ಪಾಲಿಗೆ ಇಲ್ಲವಾಯಿತು. ನಿಮ್ಮ ಭ್ರಾತೃತ್ವದ ಬಗೆಗೆ ನನಗೆ ಅನುಮಾನವೇನೂ ಇಲ್ಲ. ಆದರೂ ನಿಮ್ಮಿಬ್ಬರಿಗೂ ನನ್ನ ರಾಜ್ಯವನ್ನು ಒಪ್ಪಿಸುತ್ತಿದ್ದೇನೆ. ನವಿಲುಗಿರಿಯ ರಾಜಧಾನಿಯಾದ ಕಂಚನಹಳ್ಳಿಯನ್ನು ಕಂಚನಕೋಟೆಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುವ ಕೆಲಸ ನನ್ನ ಜ್ಯೇಷ್ಠಪುತ್ರ ಕಂಚನಿಗೆ ಸೇರಿದ್ದು. ಚುಂಚನಿಗೆ ಕಾವೇರಿ ತೀರದಲ್ಲಿರುವ ಕೋಟೆಯನ್ನು ಕೊಡುತ್ತಿದ್ದೇನೆ. ಅದನ್ನು ಚುಂಚನಕೋಟೆ ಎಂಬ ಹೆಸರಿನಿಂದ ಅದ್ದೂರಿಯಾಗಿ ರಾಜ್ಯಭಾರ ಮಾಡಿಕೊಂಡಿರಲಿ.

'ಮಕ್ಕಳೇ, ನೀವು ಬಹಳ ಬಹಳ ಎಚ್ಚರಿಕೆಯಿಂದ ಬದುಕಬೇಕು. ಜೋಪಾನವಾಗಿದ್ದುಕೊಂಡು ರಾಜ್ಯಭಾರ ಮಾಡಿಕೊಂಡು ಬಾಳಬೇಕು. ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ ನಮ್ಮ ಪರಮವೈರಿಗಳಾದ ದೇವತೆಗಳು ನೀವು ಚನ್ನಾಗಿ ಬದುಕುವುದನ್ನು ಕಂಡರೆ ಅಸೂಯೆ ಪಡುತ್ತಾರೆ. ಯಾವ ರೀತಿಯಿಂದಲಾದರೂ ನಿಮ್ಮನ್ನು ನಾಶ ಮಾಡಲು ಕುತಂತ್ರ ಹೂಡುತ್ತಾರೆ. ಅವರನ್ನು ಮರೆತು ಅಲಕ್ಷ್ಯದಿಂದಿರಬೇಡಿ. ಅವರು ಯಾವ ಸಂದರ್ಭದಲ್ಲಿ ಏನು ಮಾಡುತ್ತಾರೆಂದು ಹೇಳಲಾಗುವುದಿಲ್ಲ. ನಿಮ್ಮ ಅರಿವಿಗೆ ಬರದಂತೆ ಅವರು ನಿಮ್ಮನ್ನು ಇರಿಯಬಲ್ಲರು. ಎಚ್ಚರಿಕೆಯಿಂದಿರಿ ಮಕ್ಕಳೆ ಎಚ್ಚರ.

'ಪರಮೇಶ್ವರನು ನಮ್ಮ ಕುಲದೈವ ; ಅವನನ್ನು ಎಂದೂ ಮರೆಯಬೇಡಿರಿ. ನಿಮಗೆ ಏನೇ ಕಷ್ಟ ಸಂಭವಿಸಿದರೂ ಕೂಡಲೆ ಈಶ್ವರನ ಮೊರೆಹೋಗಿ. ಅವನನ್ನು ಕುರಿತು ತಪಸ್ಸು ಮಾಡಿ. ನಿಮ್ಮ ಅಭೀಷ್ಟವನ್ನು ಈಡೇರಿಸಿಕೊಳ್ಳಿ. ಆದರೆ ತ್ರಿಮೂರ್ತಿಗಳಲ್ಲಿ ಆ ವಿಷ್ಣು ಇದ್ದಾನಲ್ಲ, ಅವನ ವಿಚಾರದಲ್ಲಿ ಬಹಳ ಬಹಳ ಎಚ್ಚರಿಕೆಯಿಂದಿರಿ. ವಿಷ್ಣು ದೈತ್ಯಕುಲಕ್ಕೆ ಕಂಟಕಪ್ರಾಯನಾದವನು. ನಮ್ಮ ವಂಶ ನಾಶ ಮಾಡುವುದೊಂದೇ ಅವನ ಉದ್ದೇಶ.

'ಮಕ್ಕಳೇ ನಾನು ಹೇಳಿದ್ದೆಲ್ಲವನ್ನು ಮರೆಯದೆ ನಮ್ಮ ವಂಶವನ್ನು ಉಳಿಸಿ. ನಮ್ಮ ವಂಶವನ್ನು ಬೆಳೆಸಿ. ನಾನಿನ್ನು ಬರುತ್ತೇನೆ. ನಿಮಗೆ ಒಳ್ಳೆಯದಾಗಲಿ' ಎಂದು ಹೇಳುತ್ತಾ ಪಿಂಚಾಸುರ ಪ್ರಾಣವನ್ನು ಬಿಟ್ಟನು.

ತಂದೆ ಪಿಂಚಾಸುರನ ಸಾವಿನಿಂದ ಕಂಚ-ಚುಂಚರು ಅಪಾರವಾಗಿ ದುಃಖಿಸಿದರು. ಆದರೆ ತಂದೆಯು ಹೇಳಿದ್ದ ಮಾತುಗಳು ಅವರ ಹೃದಯದಲ್ಲಿ ಶಿಲಾಶಾಸನದಂತೆ ಅಚ್ಚೊತ್ತಿದ್ದವು. ತಂದೆಯ ಉಪದೇಶದ ಮಾರ್ಗದಲ್ಲಿ ನಡೆಯಬೇಕೆಂದು ತೀರ್ಮಾನಿಸಿಕೊಂಡರು. ಅವರಿಗೆ ದೇವತೆಗಳನ್ನು ದ್ವೇಷಿಸುವುದಲ್ಲದೆ ಬೇರೇನೂ ಹೊಳೆಯಲಿಲ್ಲ.

೨. ಕಂಚಾಸುರ ಭಸ್ಮಾಸುರನಾದ

ಪಿಂಚಾಸುರನ ತರುವಾಯ ಕಂಚಾಸುರನು ಕಂಚಿನಕೋಟೆಯನ್ನು (ಈ ಊರು ನಾಗಮಂಗಲ ತಾಲ್ಲೂಕಿನ ಬೆಳ್ಳಾಳೆ ಸಮೀಪದಲ್ಲಿದೆ). ಚುಂಚಾಸುರನು ಚುಂಚನಕೋಟೆಯನ್ನೂ (ಈ ಊರು ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನಲ್ಲಿದೆ) ರಾಜಧಾನಿಗಳನ್ನಾಗಿ ಮಾಡಿಕೊಂಡು ಅಖಂಡ ಭೂಮಂಡಲಕ್ಕೆ ಒಡೆಯರಾಗಿ ರಾಜ್ಯಭಾರ ಮಾಡುತ್ತಿದ್ದರು.

ಕಂಚಾಸುರನ ಕಂಚಿನಕೋಟೆಯು ಅಷ್ಟೈಶ್ವರ್ಯಗಳಿಂದ ತುಂಬಿ ತುಳುಕುತ್ತಿದ್ದು ಅಲಕಾವತಿಯನ್ನೂ ಅಣಕಿಸುವಂತಿತ್ತು. ಅದು ನಿಸರ್ಗ ರಮಣೀಯ ವಾತಾವರಣದಲ್ಲಿದ್ದು ನಂದನವನ್ನೂ ನಾಚಿಸುವಂತಿತ್ತು. ಕೋಟೆಯ ಒಳಗಡೆಯಾದರೋ ಭವ್ಯವಾದ ಗಂಧದ ಅರಮನೆ, ಅರಮನೆಗೆ ಬೆಳ್ಳಿಯ ಗೋಡೆಗಳು, ಚಿನ್ನದ ಬಾಗಿಲುಗಳು, ರನ್ನದ ಜಾಲಂಧ್ರಗಳು, ನೀಲದ ನೆಲಗಟ್ಟು, ಕೆಂಪಿನ ಹೊಸ್ತಿಲು, ಪಚ್ಚೆಯ ಸೋಪಾನಗಳು, ಹವಳದ ದಾರಂದಗಳು, ಎಲ್ಲೆಂದರಲ್ಲಿ ಉಜ್ವಲ ಕಾಂತಿಯನ್ನು ಚಿಮ್ಮುವ ಮಾಣಿಕ್ಯ ದೀಪಗಳು, ಮುತ್ತಿನ ತೋರಣಗಳು, ಗೋಮೇದಿಕ ಸ್ತಂಭಗಳು, ಮರಕತದ ತೊಲೆಗಳು, ವೈಡೂರ್ಯದ ಮೇಲುಚಾವಣೆ, ಗೋಡೆಗಳ ಮೇಲೆಲ್ಲ ಕಲಾತ್ಮಕವಾಗಿ ಬಿಡಿಸಿದ ನವರತ್ನದ ಚಿತ್ತಾರಗಳು, ಅರಮನೆಯ ತುದಿಗೆ ವಜ್ರದ ಹರಳುಗಳನ್ನು ಬೆಸೆದ ಪಂಚೈದು ಅಪರಂಜಿ ಕಳಸಗಳು – ಇಂಥ ಭೋಗಸೌಭಾಗ್ಯಗಳಿಂದ ಕೂಡಿದ ಕಂಚಿನ ಕೋಟೆಯು ಭೀಷಣ ಅಸ್ತ್ರಶಸ್ತ್ರಗಳಿರುವ ಆಯುಧಾಗಾರದಿಂದ ಭೋಗವತಿಯನ್ನೂ ಮೀರಿಸುವಂತಿತ್ತು.

ಇಷ್ಟೆಲ್ಲ ವೈಭವದಿಂದ ರಾಜ್ಯಭಾರ ಮಾಡುತ್ತಿರುವ ಕಂಚಾಸುರನಿಗೆ ಎಲ್ಲ ಇದ್ದೂ ಏನೂ ಇಲ್ಲ ಎನ್ನುವಂತಹ ಅತೃಪ್ತಿ. ಅದೇನೆಂದರೆ ದೇವೇಂದ್ರನಿಗಿರುವ ಸ್ವರ್ಗ ಮತ್ತು ಪದವಿ ತನ್ನ ಪಾಲಿಗಿಲ್ಲವಲ್ಲ ಎನ್ನುವ ಯಮಯಾತನೆ ಅವನನ್ನು ಬಾಧಿಸುತ್ತಿತ್ತು. ಆದ್ದರಿಂದ ದೇವೇಂದ್ರನನ್ನು ಮಾತ್ರವಲ್ಲ ದೇವಾದಿದೇವತೆಗಳನ್ನೆಲ್ಲ ಹೇಳಹೆಸರಿಲ್ಲದಂತೆ ನಾಶ ಮಾಡಿ ದೇವಲೋಕಕ್ಕೆ ತಾನೇ ಒಡೆಯನಾಗಬೇಕೆಂದು ನಿರ್ಧರಿಸಿದನು. ಇದನ್ನು ಸಾಧಿಸುವ ಬಗೆ ಹೇಗೆಂದು ಯೋಚಿಸುತ್ತಿರುವಾಗ ಅವನಿಗೊಂದು ತಂತ್ರವೂ ಸ್ಫುರಿಸಿತು. ಆ ತಂತ್ರದಿಂದ ತಾನು

ಲೋಕನಾಯಕನಾಗಬಹುದೆಂದು ಹಂಬಲಿಸಿದ. ಆ ಕೂಡಲೆ ನಿರ್ಜರಾರಣ್ಯದಲ್ಲಿರುವ ನದೀತಟದಲ್ಲಿ ಹೆಬ್ಬಂಡೆಯೊಂದರ ಮೇಲೆ ಪದ್ಮಾಸನ ಹಾಕಿ ಕುಳಿತು ಶಿವನನ್ನು ಕುರಿತು ಕಠಿಣತಮ ತಪಸ್ಸಿಗೆ ತೊಡಗಿದ.

ಈಶ್ವರನು ಕಂಚಾಸುರನ ಉಗ್ರ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದನು. ಪರಮೇಶ್ವರನ ದರ್ಶನದಿಂದ ಕಂಚಾಸುರನು ತನ್ನ ಅಭೀಪ್ಸೆ ಈಡೇರಿತೆಂದು ಹಿರಿಹಿರಿ ಹಿಗ್ಗಿದನು. ಭಯಭಕ್ತಿಗಳಿಂದ ಎದ್ದು ಬಂದು ಶಿರಸಾ ಸಾಷ್ಟಾಂಗ ನಮಸ್ಕಾರ ಮಾಡಿ ವಿನೀತನಾಗಿ ಶಿವನ ಪಾದಗಳನ್ನು ಬಿಗಿದಪ್ಪಿಕೊಂಡನು. ಕಂಚಾಸುರನ ಭಯಭಕ್ತಿ ವಿನಯವಿಧೇಯತೆಗಳಿಂದ ಸುಪ್ರೀತನಾದ ಶಂಕರನು,

'ವತ್ಸ ಕಂಚ, ನಿನ್ನ ಬಯಕೆ ಏನು?' ಎಂದು ಕೇಳಿದನು. ಅದಕ್ಕೆ ಕಂಚನು,

'ಪರಮೇಶ್ವರ, ಪರಮ ಕರುಣಾಮೂರ್ತಿ, ಭಕ್ತವತ್ಸಲ, ದೈತ್ಯಕುಲಾರ್ಣವ ಚಂದ್ರ, ದೀನಬಂಧು ನನ್ನ ಬಯಕೆ ಏನೆಂಬುದನ್ನು ಹೇಳುತ್ತೇನೆ. ಅದನ್ನು ಖಂಡಿತವಾಗಿಯೂ ಈಡೇರಿಸಿಕೊಡುವೆಯಾ?'

'ವತ್ಸ, ಭಕ್ತವತ್ಸಲನಾದ ನಾನು ನನ್ನ ಭಕ್ತರ ಅಪೇಕ್ಷೆ ಏನಿದ್ದರೂ ಅದನ್ನು ಈಡೇರಿಸುವುದು ನನ್ನ ಕರ್ತವ್ಯವಲ್ಲವೆ? ಅನುಮಾನ ಬೇಡ. ಕೇಳಿಕೋ ನಿನಗೇನು ಬೇಕು? ಸಂದೇಹವಾಗಲಿ ಸಂಕೋಚವಾಗಲಿ ಖಂಡಿತ ಬೇಡ.'

'ಸ್ವಾಮಿ, ಭಕ್ತಪರಾಧೀನ, ಮಹಾದೇವ, ನೀನು ನನ್ನ ಕೋರಿಕೆಯನ್ನು ಖಂಡಿತವಾಗಿಯೂ ಈಡೇರಿಸಿಕೊಡುತ್ತೇನೆ ಎನ್ನುವುದಾದರೆ ಇದು ನನ್ನ ಬೇಡಿಕೆ; ನಾನು ಯಾರ ತಲೆಯ ಮೇಲೆ ನನ್ನ ಬಲಗೈ ಹಸ್ತವನ್ನಿಡುತ್ತೀನೋ ಅವರು ಸುಟ್ಟು ಬೂದಿಯಾಗಬೇಕು. ಅಂಥ ಉರಿಹಸ್ತ ನನ್ನದಾಗಲೆಂದು ಬೇಡುತ್ತಿದ್ದೇನೆ ಸ್ವಾಮಿ.'

'ತಥಾಸ್ತು!'

'ಜಗದೀಶ್ವರ, ನೀನು ಖಂಡಿತವಾಗಿಯೂ ನನಗೆ ಉರಿಹಸ್ತವನ್ನು ಕೊಟ್ಟಿದ್ದೀಯೆ ಎನ್ನುವುದನ್ನು ನಂಬುವುದಾದರೂ ಹೇಗೆ?'

'ಭಕ್ತ, ನಿನ್ನ ಉರಿಹಸ್ತವನ್ನು ನಿನ್ನ ತಲೆಯ ಮೇಲಿಟ್ಟುಕೊಂಡು ಪರೀಕ್ಷೆ ಮಾಡಿ ನೋಡಿಕೊ.'

'ಸರ್ವೇಶ್ವರ, ನಿನ್ನ ಕುತಂತ್ರದ ನುಡಿ ಸಾಕು. ವರವನ್ನು ಪಡೆದ ಕ್ಷಣದಲ್ಲೆ ನಾನು ಉರಿದು ಬೂದಿಯಾಗಲೆಂಬ ಹಂಚಿಕೆಯೇ ನಿನ್ನದು? ನಿನ್ನ ಈ ಹವಣಿಕೆ ನಿನ್ನನ್ನೇ ಸುಟ್ಟು ಬೂದಿ ಮಾಡಲಿ' ಎಂದು ಹೇಳುತ್ತ ಶಿವನ ತಲೆಯ ಮೇಲೆ ತನ್ನ ಉರಿಹಸ್ತವನ್ನು ಇಡಲು ಮುಂದಾದ. ಇದನ್ನು ಕಂಡ ಶಿವನು ಬೆದರಿ ಬೆಚ್ಚಿಹೋದ.

ಭಕ್ತಿಯನ್ನು ತೋರಿ ಯುಕ್ತಿಯಿಂದ ವರ ಪಡೆದು ಈಗ ತನ್ನ ಶಕ್ತಿಗೇ ಸವಾಲಾಗಿ ನುಗ್ಗಿ ಬರುತ್ತಿರುವ ಕಂಚಾಸುರನಿಂದ ಮುಕ್ತನಾಗುವ ಬಗೆಯನ್ನು ಕಾಣದ ಪರಶಿವನು 'ಶ್ರೀಹರಿ, ನಾರಾಯಣ, ಮಾಧವ, ಕೇಶವ, ರಾಜೀವಲೋಚನ ಲೋಕ ಸಂರಕ್ಷಕ ವೈಕುಂಠಾಧಿಪತಿ ಕಾಪಾಡು ಕಾಪಾಡು. ಈ ದೈತ್ಯನ ಧೂರ್ತತನದಿಂದ ನನ್ನನ್ನು ಪಾರು ಮಾಡು' ಎಂದು ಮೊರೆಯಿಟ್ಟನು.

ಶಿವನ ಸಂಕಟವನ್ನು ಕೇಳಿದ ಗೋವಿಂದನು ಲೋಕಕಂಟಕ ಕಂಚದೈತ್ಯನನ್ನು ಸಂಹರಿಸಲೆಂದೇ ಆ ಕೂಡಲೆ ಮೂರು ಲೋಕಗಳನ್ನೂ ಸಮ್ಮೋಹಗೊಳಿಸಬಲ್ಲ ಮೋಹಿನೀ ರೂಪವನ್ನು ತಾಳಿ ಒನಪು ಒಯ್ಯಾರಗಳಿಂದಲೂ, ವಿಭವ ವಿಭ್ರಮಗಳಿಂದಲೂ, ಹಾವಭಾವಗಳಿಂದಲೂ, ಕೊಂಕುಬಿಂಕಗಳಿಂದಲೂ, ಬಳಕು ಕುಲುಕುಗಳಿಂದಲೂ, ರೂಪಲಾವಣ್ಯಗಳಿಂದಲೂ, ಗೆಜ್ಜೆಪಾದಗಳನ್ನು ಮೆಲ್ಲಮೆಲ್ಲಗೆ ಇಡುತ್ತ ಬಾಗುತ್ತ ಬಳುಕುತ್ತ ಸುಮಧುರ ಕಂಠದಿಂದ ಹಾಡುತ್ತ ಓರೆನೋಟ ಬೀರುತ್ತ ಕಾಣಿಸಿಕೊಂಡಳು. ಬರುತ್ತಿರುವ ಮಾದಕ ಮೈಮಾಟದ ಮೋಹಿನಿಯನ್ನು ನೋಡಿದ ಕಂಚಾಸುರನು ಕೋಟಿ ಸೂರ್ಯಪ್ರಕಾಶದ ಪ್ರವಾಹದಲ್ಲಿ ದಿಙ್ಮೂಢನಾಗಿ ನಿಂತುಬಿಟ್ಟನು. ಬಿಟ್ಟಕಣ್ಣು ಬಿಟ್ಟಂತೆ ನೆಟ್ಟ ನೋಟ ನೆಟ್ಟಂತೆ ದಿಟ್ಟಿಸಿ ನೋಡುತ್ತಿರುವ ಕಟ್ಟಾಳು ಕಂಚಾಸುರನ ಹೃದಯ ಹುಚ್ಚೆದ್ದು ಬಡಿದುಕೊಳ್ಳತೊಡಗಿತು. ಆ ಚಂಚಲಾಕ್ಷಿಯ ಮಿಂಚಿನ ನೋಟ ಕಂಚನ ಮನಸ್ಸನ್ನು ಸೂರೆಗೊಂಡಿತ್ತು. ಮೈಮರೆತ ಕಂಚನಿಗೆ ತಾನೆಲ್ಲಿರುವೆನೆಂಬ ಪರಿಜ್ಞಾನವೂ ಇಲ್ಲದೆ ತಾನು ಈಶ್ವರನನ್ನು ಅಟ್ಟಿಸಿಕೊಂಡು ಬಂದೆನೆಂಬುದೂ ಮರೆತುಹೋಗಿ ಮೋಹಿನಿಯ ಮೋಹಪಾಶಕ್ಕೆ ಸಿಕ್ಕಿ ವಿಲಿವಿಲಿ ಒದ್ದಾಡತೊಡಗಿದ. ಈಗ ಈ ಬ್ರಹ್ಮಾಂಡದಲ್ಲಿ ಅವನ ಕಣ್ಣಿಗೆ ಮೋಹಿನಿಯಲ್ಲದೆ ಬೇರೇನೂ ಕಾಣದಂತಾಯಿತು. ಕಾಮೋನ್ಮತ್ತನಾದ ಕಂಚನು ಮೋಹಿನಿಯ ಸಮೀಪಕ್ಕೆ ಬಂದು ದೀನನಾಗಿ,

'ತ್ರಿಲೋಕ ಸುಂದರಿ, ನಿನ್ನನ್ನು ನೋಡಿದ ನನ್ನ ಕಣ್ಣುಗಳು ಧನ್ಯತೆಯಿಂದ ನಿನ್ನ ರೂಪವನ್ನು ತುಂಬಿಕೊಂಡಿವೆ. ನನ್ನ ಕಣ್ಣುಗಳ ಮೂಲಕ ನನ್ನ ಹೃದಯದಾಳದಲ್ಲಿ ನೆಲೆಯಾಗಿರುವ ಜಗನ್ಮೋಹಿನಿ ಈ ನಿನ್ನ ರೂಪಾತಿಶಯವು ನನ್ನಲ್ಲಿ ಹುಚ್ಚೆಬ್ಬಿಸಿದೆ. ಸ್ಫುರದ್ರೂಪಿಯಾದ ನೀನೇ ನನಗೆ ಸಮನಾದ ಜೋಡಿ. ಬಾ ದೇವಿ ನಿನ್ನ ಅಧರಾಮೃತದಿಂದ ನನ್ನ ಪ್ರೇಮಪಿಪಾಸೆಯನ್ನು ಪರಿಹರಿಸು. ನಿನ್ನ ಮಧುರಾಲಿಂಗನದಿಂದ ನನ್ನ ತನುಮನಗಳ ತವಕವನ್ನು ತಣಿಸು. ನಿನ್ನ ಕಡೆಗಣ್ಣೋಟದ ಕಾಂತಿಯಿಂದ ನನ್ನೆದೆಯನ್ನು ಕವಿದಿರುವ ಕತ್ತಲನ್ನು ಹೊಡೆದೋಡಿಸು. ನಿನ್ನ ಸ್ಪರ್ಶಣ ಸಂಪದಕ್ಕಾಗಿ ಹಾತೊರೆಯುತ್ತಿದ್ದೇನೆ. ನಿನ್ನ ಸಮಾಗಮದ ಸ್ವರ್ಗ ಸುಖಕ್ಕಾಗಿ ನನ್ನ ಸಾಮ್ರಾಜ್ಯವನ್ನೇ ನಿನಗರ್ಪಿಸುವುದಕ್ಕೂ ಸಿದ್ಧನಾಗಿದ್ದೇನೆ. ಆಶಾಪಾಶದಲ್ಲಿ ಸಿಕ್ಕಿ ನಿನಗೆ ದಾಸನಾಗಿರುವ ಈ ದೀನನನ್ನು

ಅನುಗ್ರಹಿಸಿ ಬದುಕಿಸಿಕೋ. ದೇವಿ ನನ್ನನ್ನು ಸಾಮಾನ್ಯನೆಂದು ಭಾವಿಸಬೇಡ. ಸಾಕ್ಷಾತ್ ಮಹಾದೇವನೇ ನನಗೆ ಹೆದರಿ ಓಡುವಂಥ ಮಹಾಶಕ್ತಿಯನ್ನು ಪಡೆದಿರುವ ನಾನು ನಿನ್ನ ಈ ಕಾಯಶ್ರೀಮಂತಿಕೆಯನ್ನು ಪಡೆಯದಿದ್ದರೆ ಕಡುಬಡವನೆನಿಸಿಕೊಂಡುಬಿಡುತ್ತೇನೆ. ನನ್ನ ಈ ಉರಿಹಸ್ತ ತ್ರಿಮೂರ್ತಿಗಳನ್ನೇ ಭಸ್ಮ ಮಾಡಿ ಈ ಬ್ರಹ್ಮಾಂಡಕ್ಕೆ ಅಧಿಪತಿಯಾಗುತ್ತಿರುವ ಈ ನನ್ನ ಕೋರಿಕೆಯನ್ನು ನೀನು ಈಡೇರಿಸಲಾರೆಯ? ಈ ಬ್ರಹ್ಮಾಂಡ ಪಾಲಕನಾಗುವ ನನ್ನನ್ನು ಕೈಹಿಡಿದು ಲೋಕೇಶ್ವರಿಯಾಗಿ ಮೆರೆಯುವ ಬಯಕೆ ನಿನಗಿಲ್ಲವೆ? ಲೋಕಪಾಲಕನಾಗುವ ನಾನು ನಿನ್ನ ಪಾದಸೇವಕನಾಗಿ ನಿನ್ನಲ್ಲಿ ಅಂಗಲಾಚಿ ಬೇಡುತ್ತಿದ್ದೇನೆ. ದೇವಿ ನನ್ನನ್ನು ಒಪ್ಪಿಕೊ. ನನ್ನನ್ನು ಪ್ರೀತಿಯಿಂದ ಅಪ್ಪಿಕೋ ದೇವಿ ಅಪ್ಪಿಕೋ' ಎಂದು ಬಗೆಬಗೆಯ ಉನ್ಮಾದದ ಮಾತುಗಳಿಂದ ಗೋಗರೆದ. ಆಗ ಮೋಹಿನಿಯು

'ಧೀರ ಪ್ರವೀರ, ಧುರಧುರಂಧರ ರಣಧೀರ, ಶೂರ ಸುಮನೋಹರ ವಿಲೋಲ ವಿಲಾಸ ವಿಷಯಾತುರ, ವೀರ ವಿಸ್ಮಯ ವಿಪ್ಲವಕಾರ, ಗಂಡರಗಂಡ ಚಂಡ ಪ್ರಚಂಡ, ದಂಡ ದೋರ್ದಂಡ ಉದ್ದಂಡ, ರಾಜಾಧಿರಾಜ ರವಿಕೋಟಿ ತೇಜ, ಆಜಾನುಬಾಹು ನಿನ್ನ ಈ ವಿಶಾಲ ವಕ್ಷ ಮಂದಿರದಲ್ಲಿ ನನಗೆ ಆಶ್ರಯ ಸಿಗಬಹುದೆ?'

'ಸುಂದರಿ ನನ್ನ ಹೃದಯೇಶ್ವರಿಯಾಗುತ್ತಿರುವ ನಿನಗೆ ಇಂಥ ಲಘು ಅಪೇಕ್ಷೆಯೆ? ನೀನು ನನ್ನ ಹೃದಯಮಂದಿರದಲ್ಲಿ ಆರಾಧ್ಯದೇವತೆಯಾಗಿರುತ್ತೀಯೆ. ಇದಕ್ಕೆ ನನ್ನ ತಂದೆ ಪಿಂಚಾಸುರನ ಮೇಲಾಣೆ. ಇನ್ನೂ ಸಂದೇಹವೆ?'

'ಹಾಗಲ್ಲ ಸಮರ್ಥ, ನನಗೆ ಬ್ರಹ್ಮದೇವನ ವರವೊಂದುಂಟು. ಅದೇನೆಂದರೆ ಶೂರನೂ ಸುಂದರನೂ ಸುಗುಣಬಂಧುರನೂ ಸಕಲಕಲಾವಲ್ಲಭನೂ ಆದ ಮಹನೀಯ ನಿನ್ನ ಕೈಹಿಡಿದು ನಿನ್ನ ಸೌಂದರ್ಯಕ್ಕೊಂದು ಸಾರ್ಥಕ್ಯವನ್ನುಂಟುಮಾಡುತ್ತಾನೆಂಬುದು. ನಿನ್ನ ಧೈರ್ಯ ಶೌರ್ಯ ಸ್ಥೈರ್ಯಗಳ ಬಗೆಗೆ ನನಗೆ ಸಂದೇಹವಿಲ್ಲ. ಲಲಿತಕಲಾಕೋವಿದನೂ ಹೌದೋ ಅಲ್ಲವೋ ಎಂಬುದು ನನ್ನ ಅನುಮಾನ'

'ರೂಪಸಿ, ದೈತ್ಯಕುಲ ಸಂಜಾತರು ಹುಟ್ಟಿನಿಂದಲೇ ಧೈರ್ಯ ಸ್ಥೈರ್ಯ ಶೌರ್ಯಗಳಲ್ಲಲ್ಲದೆ ಅರವತ್ತುನಾಲ್ಕು ವಿದ್ಯೆಗಳಲ್ಲೂ ಅನುಪಮ ಕಲಾವಿದರೆಂಬುದನ್ನು ನೀನರಿಯೆಯ? ಅನುಮಾನವಿದ್ದಲ್ಲಿ ಪರೀಕ್ಷಿಸಬಹುದಲ್ಲವೆ?'

'ಹಾಗಾದರೆ ಸಂಗೀತನೃತ್ಯಗಳ ಸಿದ್ಧಿಯನ್ನು ಗಮನಿಸಬಹುದಲ್ಲವೆ?'

'ಅಗತ್ಯವಾಗಿ! ಅಗತ್ಯವಾಗಿ!'

'ದೈತ್ಯಕುಲಾರ್ಣವ ಚಂದ್ರ, ಸಿದ್ಧವಾಗು. ನನಗೆ ಸರಿಸಾಟಿಯಾದ ರೀತಿಯಲ್ಲಿ ಗೀತನೃತ್ಯಗಳಿಂದ ನನ್ನನ್ನು ತಣಿಸು. ಇದೋ ನಾನು ನಿನ್ನೊಡನೆ ಹಾಡುತ್ತ ನರ್ತಿಸಲು ಸಿದ್ಧಳಾಗಿದ್ದೇನೆ.'

'ಹಾಗಾದರಿದು ಸ್ಪರ್ಧೆ?'

'ಸ್ಪರ್ಧೆ ಎನಲಾಗದಿದ್ದರೂ ಪರಸ್ಪರರಲ್ಲಿ ಪರಿಣತಿಯ ಪರೀಕ್ಷೆ!'

'ಹಾಗಾದರಿದು ಈರ್ವರು ಕಲಾಕೋವಿದರ ಮಧುರಸಂಗಮ?'

'ಸಾಕಿನ್ನು ಮಾತು ಚತುರ. ನಿನ್ನ ನಾಟ್ಯ ನೈಪುಣ್ಯತೆಯಿಂದ ನನ್ನ ಸಮಸ್ಯೆಗೆ ಸಿಗಬಹುದೇ ಉತ್ತರ?'

'ಸಂದೇಹವೇ ಬೇಡ!' ಎಂದು ಹೇಳುತ್ತ ನಾಟ್ಯಕ್ಕೆ ಸಿದ್ಧನಾದನು.

ಮಾಯಾವಿಯಾದ ಕಂಚಾಸುರನು ತನ್ನ ರೂಕ್ಷರೂಪವನ್ನು ತೊರೆದು ವಿಕುರ್ವಾಣ ಶಕ್ತಿಯಿಂದ ತಾನೂ ಸೇರಿದಂತೆ ಸಪ್ತಶರೀರಿಯಾಗಿ ನರ್ತನಕ್ಕೆ ನಿಂತನು. ಭರತನಾಟ್ಯಕ್ಕೆ ಬೇಕಾದ ವೇಷಭೂಷಣಗಳಲ್ಲಿ ಕಂಚನ ಮೂಲ ದೇಹವಿದ್ದರೆ ಉಳಿದ ಆಕೃತಿಗಳಲ್ಲಿ ತಂಬೂರ, ವೀಣೆ, ಮೃದಂಗ, ಕೊಳಲು, ಘಟ ಮತ್ತು ತಾಳಗಳನ್ನು ನುಡಿಸತೊಡಗಿದನು. ಮೊದಮೊದಲು ವಿಲಂಬಿತ ಲಯದಿಂದ ಪ್ರಾರಂಭವಾದ ನೃತ್ಯ ಮಧ್ಯ ಮತ್ತು ದ್ರುತಲಯಗಳತ್ತ ಹೊರಳಿತು. ಕಂಚಾಸುರನ ನಾಟ್ಯವನ್ನು ನೋಡಿ ನಾಟ್ಯಶಾಸ್ತ್ರವನ್ನು ಪರಿಷ್ಕರಿಸಬೇಕೇನೋ ಎಂಬಂತೆ ಆಂಗಿಕಾಭಿನಯಗಳು ಮತ್ತು ವಾಚಕಾಭಿನಯಗಳಲ್ಲಿ ಅದ್ಭುತವಾಗಿ ನಟಿಸಿದನು.

ಕಂಚಾಸುರನೊಡನೆ ಮೋಹಿನಿಯೂ ಆ ರಕ್ಕಸನ ನಾಟ್ಯಕಲಾ ಪರಿಣತಿಯನ್ನು ಮೆಟ್ಟಿಕ್ಕುವಂತೆ ನರ್ತಿಸಿದಳು. ಲಾಸ್ಯ–ತಾಂಡವಗಳೆರಡರಲ್ಲೂ ಒಬ್ಬರನ್ನೊಬ್ಬರು ಮೀರಿಸುವಂತೆ ಅಭಿನಯಿಸಿದರು. ಆ ನೃತ್ಯದ ವಿಭವ ವಿಭ್ರವ ವಿಲಾಸಗಳು ವರ್ಣರಂಜಿತ ನವರಸಾಭಿನಯ ಕೌಶಲಗಳು ಮಾತಿಗೆ ನಿಲುಕದ ಮೋಡಿಯಾಗಿ ಅತ್ಯದ್ಭುತವೆನಿಸಿದವು. ಸ್ಪರ್ಧೆಗಿಳಿದ ಕಂಚಾಸುರ ನೃತ್ಯದಲ್ಲಿ ಲೀನವಾಗಿ ಹೋದನು. ಅಪೂರ್ವ ಭಾವಭಂಗಿಗಳು ಮನಮೋಹಕ ಮುದ್ರೆಗಳು ಲೀಲಾವಿಲಾಸ ವಿನ್ಯಾಸಗಳು ಕಂಚಾಸುರನ ಕಲಾಪ್ರೌಢಿಮೆಯನ್ನು ಸಾರಿ ಹೇಳುತ್ತಿದ್ದವು. ಮೋಹಿನಿಯ ಸೌಕುಮಾರ್ಯ ಸುಮನಸ ನೃತ್ಯಕ್ಕೆ ಇಮ್ಮಡಿ ಮುಮ್ಮಡಿ ನೂರ್ಮಡಿ ಅತಿಶಯವಾಗಿ ಕಂಚಾಸುರ ನರ್ತಿಸಿದನು. ಹೀಗೆ ಅವನು ಮೈಮರೆತು ನರ್ತಿಸುತ್ತಿರುವಾಗ ಮೋಹಿನಿಯು ವೈವಿಧ್ಯಮಯ ಭಂಗಿಗಳನ್ನು ನಟಿಸುತ್ತ ದೈತ್ಯನ ಸ್ಪರ್ಧಾತ್ಮಕ ಮನೋಭಾವ ಉಕ್ಕುವಂತೆ ಮಾಡಿದಳು. ಮೋಹಿನಿಯ ಲಾಸ್ಯದ ಬೆಡಗಿಗೆ ಮರುಳಾದ ಕಂಚಾಸುರ ತಾಂಡವಕ್ಕೆ ಹೆಜ್ಜೆಹಾಕಲು ಪ್ರಾರಂಭಿಸಿದ. ಭರತವಿದ್ಯೆಯಲ್ಲಿ ನುರಿತ ನವತರುಣಿ ವಿದ್ಯುತ್ಕಾಂತ ವಿದ್ಯುಲ್ಲತಾಕಾರೆಯ

ಮೈಕಾಂತಿಯು ಕಣ್‌ಕುಕ್ಕುತ್ತಿರಲು ವಿಜಗೀಷುವೃತ್ತಿಯ ಕಂಚಾಸುರನು ವಿಚಲಿತ ವಿಲೋಚನಬದ್ಧ ಭ್ರುಕುಟಿಯಾಗಿ ವಿಲಯಕಾರಿ ವಿರಾಟ್ ವಿಲಂಘನಗಳಿಂದ ಗಗನಕ್ಕೆ ಹಾರಿ ಥಟ್ಟನಿಳಿದು ನೆಲವನ್ನು ಮೆಟ್ಟಿದನು. ಆ ರಭಸಕ್ಕೆ ಭೂಮಿ ನಡುಗಿತು, ಬೆಟ್ಟಗುಡ್ಡಗಳು ಅದುರಿದವು, ಅಗ್ನಿಪರ್ವತಗಳು ಸ್ಫೋಟಗೊಂಡವು. ಕಡಲುಕ್ಕಿ ನೆಲವನ್ನಪ್ಪಳಿಸಿತು, ಗುಡುಗು ಸಿಡಿಲುಗಳು ಆರ್ಭಟಿಸಿದವು. ಲೆಕ್ಕಕ್ಕೆ ಸಿಕ್ಕದಷ್ಟು ಗಜಪಡೆ ಗಗನವನ್ನೆಲ್ಲ ತುಂಬಿಕೊಂಡಿರುವಂತೆ ಕಪ್ಪುಮೋಡಗಳು ದಟ್ಟೈಸಿದವು. ಬ್ರಹ್ಮಾಂಡವೇ ಬೆವತುಹೋಯಿತು!

ಸಮಯವನ್ನರಿತ ಮೋಹಿನಿಯು ನಾಟ್ಯೋನ್ಮತ್ತಳಾದಂತೆ ತನ್ನ ಬಲಗೈಯ ಹಸ್ತವನ್ನು ಅನಾಮತ್ತಾಗಿ ಶಿರೋಗ್ರದಲ್ಲಿಟ್ಟುಕೊಂಡು ಶಿರೋಭಂಗಿಯಲ್ಲೆ ಥಟ್ಟನೆ ಪುಟಿದೆದ್ದಳು. ದ್ರುತಗತಿಯಲ್ಲಿ ಹೆಜ್ಜೆಯಿಡುತ್ತಿದ್ದ ಆ ಕೋಮಲೆಗೆ ತಾನೇನು ಕಡಿಮೆ ಎನ್ನುವಂತೆ ನೃತ್ಯೋತ್ಕರ್ಷ ಸ್ಥಿತಿಯಲ್ಲಿ ಮೈಮರೆತು ಅವಳನ್ನೇ ಅನುಕರಿಸುತ್ತ ತನಗಿರುವ ವರದ ಶಕ್ತಿಯನ್ನು ಮರೆತು ತನ್ನ ಬಲಹಸ್ತವನ್ನು ತನ್ನ ಶಿರೋಗ್ರದಲ್ಲಿರಿಸಿಕೊಂಡುಬಿಟ್ಟನು. ಆ ಕೂಡಲೆ ಕಂಚಾಸುರನು ಚಟಚಟ ಚಟಿಲ್ ಚಟಿಲ್ ಎಂದು ಸಿಡಿಯುತ್ತ, ಪಟಪಟಪಟನೆ ಒಡೆಯುತ್ತ, ಧಗಧಗ ಧಗನೆ ಹೊತ್ತಿಕೊಂಡು, ಧಿಗ ಧಿಗ ಧಿಗ ಉರಿದು ಕ್ಷಣ ಮಾತ್ರದಲ್ಲಿ ಸುಟ್ಟು ಬೂದಿಯಾದನು. ಹೀಗೆ ತನ್ನ ಉರಿಗೈಯೇ ತನಗೆ ಮಿತ್ತುವಾಗುತ್ತದೆ ಎಂದು ಅವನು ಕನಸು ಮನಸ್ಸಿನಲ್ಲೂ ನೆನೆಸಿರಲಿಲ್ಲ. ಅವನು ಬಯಸಿ ಬಯಸಿ ಶಿವನಿಂದ ಪಡೆದ ಉರಿಹಸ್ತವೇ ಅವನ ದಹನಶಾಸನವಾಯಿತು. ಕೆಟ್ಟ ಬಯಕೆಯಿಂದ ಕಷ್ಟಪಟ್ಟು ತಪಸ್ಸು ಮಾಡಿ, ಆ ದುಷ್ಟ ಪಡೆದ ಉರಿಹಸ್ತ ಅವನನ್ನೇ ಸುಟ್ಟು ಅವನಿಗೆ ಭಸ್ಮಾಸುರ ಎಂಬ ಅಭಿಧಾನವನ್ನು ಕೊಟ್ಟು ಎಲ್ಲರ ಮನದಾಳದಲ್ಲೂ ಆ ಹೆಸರನ್ನೇ ನೆಟ್ಟು ಅವನೊಡನೆ ಅದೂ ಸುಟ್ಟು ಬೂದಿಯಾಗಿಹೋಯಿತು.

೩. ಚುಂಚಾಸುರನ ಕೈಸೇರಿತು ಶಿವನ ತ್ರಿಶೂಲ

ಕಂಚಾಸುರನ ದುರಂತವನ್ನು ಕಂಡ ಬಂಧು-ಬಳಗ ಪ್ರಜಾಪರಿವಾರದವರೆಲ್ಲ ದುಃಖಾನಲ ತಪ್ತರಾಗಿ ಪರಿತಪಿಸಿದರು. ತನ್ನ ಅಗ್ರಜ ಸುಟ್ಟು ಭಸ್ಮವಾದ ಸಂಗತಿಯು ಸಹೋದರ ಚುಂಚಾಸುರನಿಗೆ ಅತೀವ ದುಃಖವನ್ನುಂಟುಮಾಡಿತ್ತು. ದಿನದಿನಗಳುರುಳಿದರೂ ಅಣ್ಣನನ್ನು ಕಳೆದುಕೊಂಡ ದುಃಖವನ್ನು ಮರೆಯಲು ಚುಂಚಾಸುರನಿಂದಾಗಲಿಲ್ಲ. ಅವನು ಅಣ್ಣನ ಮರಣವನ್ನು ನೆನೆನೆನೆದಾಗಲೆಲ್ಲ ಕೋಪೋದ್ರೇಕದಿಂದ ಕಟಕಟನೆ ಹಲ್ಲುಹಲ್ಲು ಕಡಿಯುತ್ತಿದ್ದನು. ತನ್ನಣ್ಣನ ಸಾವಿಗೆ ದೇವತೆಗಳ ಕುತಂತ್ರವೇ ಕಾರಣವೆಂದು ಕುದಿಯುತ್ತಿದ್ದನು. ಈ ಕುತಂತ್ರಕ್ಕೆ ತ್ರಿಮೂರ್ತಿಗಳ ಪ್ರೇರಣೆಯೂ ಇರುವುದಾದರೆ ಅವರು ವರಗಳನ್ನು

ಕೊಡುವುದಾದರೂ ಏತಕ್ಕೆ? ಹೀಗೆ ಮೋಸದಿಂದ ನಾಶ ಮಡುವುದಾದರೂ ಏತಕ್ಕೆ? ಎಂದು ತಲೆ ತಲೆ ಚಚ್ಚಿಕೊಳ್ಳುತ್ತಿದ್ದನು.

ದೈತ್ಯರ ಪಾಲನೆ ಪೋಷಣೆ ರಕ್ಷಣೆಗಳು ತಮ್ಮ ಪಾಲಿನ ಕರ್ತವ್ಯವೆಂದು ಹೇಳುವ ತ್ರಿಮೂರ್ತಿಗಳು ಅಂತರಂಗದಲ್ಲಿ ದೈತ್ಯರ ನಾಶಕ್ಕೆ ಹುನ್ನಾರ ಮಾಡುತ್ತಿದ್ದಾರೆಂದುಕೊಂಡು ತ್ರಿಮೂರ್ತಿಗಳ ವಿಚಾರದಲ್ಲಿ ಕಿಡಿಕಿಡಿಯಾದನು. ತ್ರಿಮೂರ್ತಿಗಳು ದೇವತೆಗಳ ಪಕ್ಷಪಾತಿಗಳೇ ಹೊರತು ದೈತ್ಯರ ಪರವಾದವರಲ್ಲ. ಆದ್ದರಿಂದ ಆ ತ್ರಿಮೂರ್ತಿಗಳನ್ನೇ ತನ್ನ ಅಧೀನಕ್ಕೆ ತಂದುಕೊಂಡು ಮುಳ್ಳಿನಿಂದಲೇ ಮುಳ್ಳು ತೆಗೆಯಬೇಕೆನ್ನುವಂತೆ ಅವರು ಕೊಡುವ ವರದಿಂದಲೇ ಅವರನ್ನು ನಾಶ ಮಾಡಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ತನ್ನ ಕೋಟೆಯ ಸಮೀಪದಲ್ಲಿರುವ ಕಾವೇರಿ ನದೀತೀರದಲ್ಲಿ ಉಗ್ರವಾದ ತಪಸ್ಸಿಗೆ ತೊಡಗಿದನು. ಹಗಲಿರುಳೆನ್ನದೆ ಚಳಿಮಳೆ ಬಿಸಿಲುಗಳನ್ನು ಲೆಕ್ಕಿಸದೆ ಮಾಡಿದ ಘೋರತಪಸ್ಸಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾದನು. ಪ್ರತ್ಯಕ್ಷನಾಗಿ–

'ವತ್ಸ, ಚುಂಚಾಸುರ ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ನಿನ್ನ ಕೋರಿಕೆ ಏನು ಕಂದ?'

'ಸ್ವಾಮಿ, ಭಕ್ತಪರಾಧೀನ ನೀನು ಖಂಡಿತವಾಗಿಯೂ ನನ್ನ ಬಯಕೆಯನ್ನು ಈಡೇರಿಸುವೆಯಾ?'

'ನೀನೇ ನನ್ನನ್ನು ಭಕ್ತಪರಾಧೀನ ಎಂದಿರುವೆಯಲ್ಲ ; ಮತ್ತಿನ್ನೇನು?'

'ಆದರೂ ನನಗೆ ನಂಬಿಕೆಯಿಲ್ಲ. ನನ್ನ ಬೇಡಿಕೆಯನ್ನು ಈಡೇರಿಸುತ್ತೇನೆ ಎಂಬ ಭಾಷೆ ಕೊಟ್ಟರೆ ಮಾತ್ರ ನಾನು ನನ್ನ ಅಭೀಷ್ಟವನ್ನು ನಿನ್ನಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ'

'ಭಕ್ತಾಗ್ರಣೀ, ನಿನ್ನ ಶಿವನಲ್ಲಿ ನಿನಗೆ ಅಪನಂಬಿಕೆಯೆ?'

'ಅಪನಂಬಿಕೆಯ ಮಾತಲ್ಲ. ನನ್ನ ಮನಸ್ಸಮಾಧಾನಕ್ಕಾಗಿ ಹಾಗೆ ಕೇಳಿದೆ'

'ಆಯ್ತು, ಅದೇನು ಬೇಕೋ ಕೇಳಿಕೋ'

'ಪರಮೇಶ್ವರ ನನ್ನ ಬಯಕೆ ಏನೆಂದರೆ ಸೃಷ್ಟಿ–ಸ್ಥಿತಿ–ಲಯಕರ್ತರಾದ ತ್ರಿಮೂರ್ತಿಗಳು ನನ್ನ ಅಧೀನದಲ್ಲಿರುವಂತೆ ಅನುಗ್ರಹಿಸು ಪ್ರಭು'

'ಚುಂಚಾಸುರ ಈ ಕೋರಿಕೆ ಕೂಡದು. ಇದು ಅವಿವೇಕದ ಕೋರಿಕೆ. ಈ ಅಧಿಕ ಪ್ರಸಂಗವನ್ನು ಬಿಡು. ತ್ರಿಮೂರ್ತಿಗಳು ನಿನ್ನ ಅಧೀನರಾದರೆ ಸೃಷ್ಟಿ–ಸ್ಥಿತಿ–ಲಯಗಳು ಸ್ಥಗಿತಗೊಳ್ಳುತ್ತವೆ. ಅಷ್ಟು ಮಾತ್ರವಲ್ಲ ಬ್ರಹ್ಮಾಂಡವೇ ಶೂನ್ಯವಾಗಿ ಹೋಗುತ್ತದೆ. ಆಗ ನೀನಾದರೂ ಎಲ್ಲಿರುತ್ತೀಯೆ?' ಶಿವನ ಮಾತನ್ನು ಕೇಳಿದ ಚುಂಚನು ಸ್ವಲ್ಪ ಹೊತ್ತು ಯೋಚಿಸಿ,

'ಹಾಗೆಲ್ಲ ಆಗುವುದಾದರೆ ನನಗೆ ತ್ರಿಮೂರ್ತಿಗಳು ಬೇಡ. ಆ ಕಪಟ ವಿಷ್ಣುವನ್ನಾದರೂ ಸೆರೆ ಮಾಡಿಕೊಳ್ಳುವಂತೆ, ನನ್ನ ಅಧೀನದಲ್ಲಿ ಇಟ್ಟುಕೊಂಡಿರುವಂತೆ ಕೃಪೆ ಮಾಡು.'

'ವತ್ಸ, ಇದೂ ಕೂಡ ನಿನ್ನ ಅವಿವೇಕದ ಬೇಡಿಕೆಯೇ ಸರಿ. ಇದೋ ನೋಡು ಈ ತ್ರಿಶೂಲ ನನ್ನ ಕೈಯಲ್ಲಿರುವವರೆಗೆ ತ್ರಿಮೂರ್ತಿಗಳಲ್ಲಿ ಯಾರನ್ನೂ ನೀನು ನಿನ್ನ ಅಧೀನಕ್ಕೆ ತಂದುಕೊಳ್ಳಲಾಗುವುದಿಲ್ಲ.'

ಶಿವನ ಮಾತಿನಿಂದ ಚುಂಚಾಸುರನಿಗೆ ಏನೋ ಹೊಳೆದಂತಾಗಿ ಪರಮೇಶ್ವರನ ಪಾದಗಳಿಗೆ ಮುಹುರ್ ಮುಹುರ್ ನಮಿಸುತ್ತ

'ಪ್ರಭೂ, ತ್ರಿಮೂರ್ತಿಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ವರ ಬೇಡ. ಬೇರೆ ಯಾವುದಾದರೂ ವರವನ್ನು ಕೇಳಿದರೆ ತಪ್ಪದೆ ನೀಡುವೆಯಲ್ಲವೆ?'

'ವತ್ಸ, ನಿರ್ವಿವಾದವಾಗಿ!'

'ಹಾಗಾದರೆ ನನಗೆ ನಿನ್ನ ಕೈಯಲ್ಲಿರುವ ತ್ರಿಶೂಲವನ್ನೇ ದಯಪಾಲಿಸು!'

'ವತ್ಸ, ಈ ಕೋರಿಕೆಯೂ ಸಾಧುವಲ್ಲ!'

'ಸ್ವಾಮಿ, ಬೇಡುವ ಭಕ್ತನಿಗೆ ನೀಡುವ ದೈವ ಬೇಡವೆಂದಾಗ ಬೇರೆ ದಾರಿಯೇನಿದೆ ಸ್ವಾಮಿ? ಇಕ್ಕಲಾರದ ಕೈ ಎಂಜಲು ಅಂದುಕೊಳ್ಳುತ್ತೇನೆ. ಇನ್ನು ನಾನು ತಮ್ಮಿಂದ ಕೇಳುವಂತದೇನೂ ಇಲ್ಲ ಸ್ವಾಮಿ. ನಮಸ್ಕಾರ ನಾನಿನ್ನು ಬಂದ ದಾರಿಗೆ ಸುಂಕವಿಲ್ಲ ಎಂದುಕೊಂಡು ಹೊರಡುತ್ತಿದ್ದೇನೆ.'

'ದಾನವೇಂದ್ರ, ನೀನು ತಪ್ಪಾಗಿ ತಿಳಿಯಬೇಡ. ನಿರಾಶೆ ಖಂಡಿತ ಬೇಡ. ನಿನ್ನ ಅಭೀಷ್ಟ ಸಿದ್ಧಿಸಿದೆ. ಇಗೋ ಈ ತ್ರಿಶೂಲವನ್ನು ನಿನ್ನ ಕೈಗೆ ಕೊಡುತ್ತಿದ್ದೇನೆ. ಆದರೊಂದು ಮಾತು ನಿನ್ನ ನೆನಪಿನಲ್ಲಿರಲಿ. ಈ ತ್ರಿಶೂಲವನ್ನು ನೀನು ಮಾನವ ದಾನವ ಯಕ್ಷ ಕಿನ್ನರ ಕಿಂಪುರುಷ ಗಂಧರ್ವರಾದಿಯಾಗಿ ಯಾರ ಮೇಲೆ ಬೇಕಾದರೂ ಪ್ರಯೋಗಿಸಬಹುದು. ಆದರೆ ಅಪ್ಪಿತಪ್ಪಿಯಾದರೂ ನೀನು ಇದನ್ನು ತ್ರಿಮೂರ್ತಿಗಳಲ್ಲಿ ಯಾರ ಮೇಲೆ ಪ್ರಯೋಗಿಸಿದರೂ ಅದು ಅವರ ಕೈ ಸೇರುತ್ತದೆ. ಆಗ ತ್ರಿಶೂಲ ನಿನ್ನ ಕೈತಪ್ಪುತ್ತದೆ. ಎಚ್ಚರವಿರಲಿ.'

'ಆಗಲಿ ಪ್ರಭೂ ಆಗಲಿ. ತ್ರಿಮೂರ್ತಿಗಳ ಮೇಲೆ ಎಂದೂ ಈ ಆಯುಧವನ್ನು ನಾನು ಪ್ರಯೋಗಿಸದೆ ನನ್ನಲ್ಲೇ ರಕ್ಷಿಸಿಕೊಳ್ಳುತ್ತೇನೆ. ಆಗಲಿ ಪ್ರಭು. ಕೃತಾರ್ಥನಾದೆ ಕೃತಾರ್ಥನಾದೆ' ಎಂದು ಶಿವನ ಪಾದಗಳಿಗೆರಗುತ್ತಿರುವಾಗ ಶಿವನು ಅಂತರ್ಧಾನನಾದನು. ಹೀಗೆ ಚುಂಚಾಸುರನ ಕೈಸೇರಿತು ಶಿವನ ತ್ರಿಶೂಲ !

೪. ತ್ರಿಶೂಲಧಾರಿ ಶ್ರೀರಾಮಚಂದ್ರ

ಶಿವನ ತ್ರಿಶೂಲ ತನ್ನ ಕೈಗೆ ಬಂದುದರಿಂದ ಚುಂಚಾಸುರನು ಉಬ್ಬಿಹೋದನು. ತ್ರಿಶೂಲ ಬಲ ತನಗಿದೆಯೆಂಬ ಕೊಬ್ಬಿನಿಂದ ಸುರಾಸುರ ಯಕ್ಷ ಗಂಧರ್ವ ಕಿನ್ನರ ಕಿಂಪುರುಷರಾದಿಗಳೆಲ್ಲರನ್ನು ಹೆದರಿಸಿ ಬೆದರಿಸಿ ದಂಡಿಸಿ ಅವರನ್ನೆಲ್ಲ ತನ್ನ ಕೋಟೆಯಲ್ಲಿ ಭೃತ್ಯರನ್ನಾಗಿಸಿಕೊಂಡು ಸೇವೆ ಮಾಡಿಸಿಕೊಳ್ಳತೊಡಗಿದನು. ಲೋಕ ಕಂಟಕನಾಗಿದ್ದ ಚುಂಚಾಸುರನ ಕಿರುಕುಳದಿಂದ ಇಡೀ ಜಗತ್ತೇ ತಲ್ಲಣಿಸಿಹೋಗಿತ್ತು.

ಹಿರಿಯ ಪತ್ನಿ ಕೌಸಲ್ಯೆಗೆ ರಾಮನೆಂಬ ಸುಪುತ್ರನೂ, ಸುಮಿತ್ರೆಗೆ ಲಕ್ಷ್ಮಣ ಶತ್ರುಘ್ನರೂ, ಕೈಕೆಗೆ ಭರತನೆಂಬ ಮಗನೂ ಹುಟ್ಟಿದನು.

ಈ ನಾಲ್ವರು ಮಕ್ಕಳೂ ಬೆಳೆದು ತರುಣ ತೇಜಸ್ವಿಗಳಾಗಿರುವಾಗ ವಸಿಷ್ಟ ವಿಶ್ವಾಮಿತ್ರರ ಮಾರ್ಗದರ್ಶನದಲ್ಲಿ ಕಲಿತು ಸಕಲವಿದ್ಯಾಪಾರಂಗತರಾದರು. ಪ್ರಾಪ್ತ ವಯಸ್ಸಿಗೆ ಬಂದ ಮಕ್ಕಳಲ್ಲಿ ಶ್ರೇಷ್ಠಪುತ್ರ ರಾಮನಿಗೆ ಮಿಥಿಲಾನಗರಿಯ ಜನಕರಾಜನ ಮಗಳಾದ ಸೀತೆಯನ್ನೂ, ಲಕ್ಷ್ಮಣನಿಗೆ ಜನಕರಾಜನ ಔರಸಪುತ್ರಿಯಾದ ಊರ್ಮಿಳೆಯನ್ನೂ, ಭರತನಿಗೆ ಜನಕನ ತಮ್ಮನಾದ ಕುಶಧ್ವಜನ ಹಿರಿಯ ಮಗಳಾದ ಮಾಂಡವಿಯನ್ನೂ, ಶತ್ರುಘ್ನನಿಗೆ ಮಾಂಡವಿಯ ಸಹೋದರಿ ಶ್ರುತಕೀರ್ತಿಯನ್ನೂ ಕೊಟ್ಟು ವೈಭವದಿಂದ ಮದುವೆ ಮಾಡಿದರು. ಇದರಿಂದ ಅಯೋಧ್ಯೆಯು ಆನಂದಶರಧಿಯ ಅಲೆಗಳಲ್ಲಿ ತೇಲಿ ತೇಲಿ ಸಂಭ್ರಮಿಸಿತು. ಈ ಸಮಯದಲ್ಲಿ ಭರತನ ಸೋದರಮಾವ ಯುಧಾಜಿತು ಬಂದು ಸೋದರಳಿಯಂದಿರು ಕೆಲಕಾಲ ತಮ್ಮಲ್ಲಿರಲೆಂದು ಪ್ರೀತಿ ಕಾರಣವಾಗಿ ಭರತ-ಶತ್ರುಘ್ನರನ್ನು ಕೇಕಯ ರಾಜ್ಯಕ್ಕೆ ಕರೆದುಕೊಂಡು ಹೋದನು.

ಹೀಗಿರುವಾಗ ಒಂದು ರಾತ್ರಿ ದಶರಥ ಮಹಾರಾಜನು ಆಕಾಶದ ಕಡೆಗೆ ತಲೆಯೆತ್ತಿದಾಗ ಅವನ ಕಣ್ಣಿಗೆ ಅಶುಭಕಾರಕವಾದ ಧೂಮಕೇತು ಕಾಣಿಸಿಕೊಂಡಿತು. ಅದನ್ನು ಕಂಡ ರಾಜನು ತನ್ನ ಅಂತ್ಯ ಸಮೀಪಿಸುತ್ತಿದೆಯೆಂದು ದುಗುಡದಿಂದ ಧೃತಿಗೆಟ್ಟನು. ಇದರಿಂದ ತನ್ನ ಅನಂತರ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಶ್ರೀರಾಮನಿಗೆ ಯುವರಾಜ ಪದವಿಯ ಪಟ್ಟಗಟ್ಟಲು ಸಂಕಲ್ಪಿಸಿದನು. ಯೌವರಾಜ್ಯಾಭಿಷೇಕಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಲು ಮಂತ್ರಿಮಾನ್ಯರಿಗೆ ತಿಳಿಸಿ ತನ್ನ ಪ್ರಿಯರಾಣಿ ಕೈಕೆಯನ್ನು ಕಾಣಲು ಅಂತಃಪುರಕ್ಕೆ ಹೋದನು.

ಆ ವೇಳೆಗಾಗಲೆ ಕೈಕೆಯು ತನ್ನ ದಾಸಿ ಮಂಥರೆಯ ದುರ್ಬೋಧೆಗೊಳಗಾಗಿ ಕ್ರೋಧಾಗಾರವನ್ನು ಸೇರಿದ್ದಳು. ದಶರಥನು ಅವಳನ್ನು ಬಗೆಬಗೆಯಾಗಿ ಸಂತೈಸಲು ಪ್ರಯತ್ನಿಸಿ ಕಡೆಗೆ 'ನಿನಗೆ ನನ್ನಿಂದೇನಾಗಬೇಕು ಕೇಳಿಕೋ' ಎಂದು ಪ್ರಾರ್ಥಿಸಿದರು. ಆ ಸಂದರ್ಭಕ್ಕಾಗಿಯೆ ಕಾದಿದ್ದ ಕೈಕೆ ಈ ಹಿಂದೆ ಸಮರಾಂಗಣದಲ್ಲಿ ಕೊಡಲು

ನಿರ್ಧರಿಸಿದ್ದ ಎರಡು ವರಗಳನ್ನು ಈಗ ಕೊಡೆಂದು ಕೋರಿದಳು. ದಶರಥನು ಅದಕ್ಕೊಪ್ಪಿ 'ಸಂತೋಷದಿಂದ ಕೇಳಿಕೋ' ಎನ್ನಲು ಕೈಕೆಯು,

'ನನಗೆ ನೀನು ನೀಡಬೇಕಾದ ವರಗಳಲ್ಲಿ ಮೊದಲನೆಯದು ರಾಮನು ಹದಿನಾಲ್ಕು ವರ್ಷಗಳ ಕಾಲ ವನವಾಸಕ್ಕೆ ಹೋಗಬೇಕು. ಎರಡನೇ ವರವೆಂದರೆ ನನ್ನ ಪುತ್ರನಾದ ಭರತನಿಗೆ ಯೌವರಾಜ್ಯಾಭಿಷೇಕ ಮಾಡಬೇಕು!' ಎಂದು ಕೇಳಿಕೊಂಡಳು.

ಪಿತೃವಾಕ್ಯ ಪರಿಪಾಲನಾರ್ಥವಾಗಿ ಶ್ರೀರಾಮನು ತನ್ನ ಸಹೋದರ ಲಕ್ಷ್ಮಣ ಹಾಗೂ ತನ್ನ ಸಹಧರ್ಮಿಣಿ ಸೀತೆಯೊಡನೆ ಅರಣ್ಯವಾಸಕ್ಕೆ ನಡೆದನು. ಹೀಗೆ ಹೊರಟ ರಾಮನು ಋಷಿಮುನಿಗಳಿಗೆ ಕಿರುಕುಳ ಕೊಡುತ್ತಿದ್ದ ರಕ್ಕಸರನ್ನು ಸಂಹಾರ ಮಾಡುತ್ತ ದಂಡಕಾರಣ್ಯಕ್ಕೆ ಬಂದನು. ದಾರಿಯಲ್ಲಿ ಮಂಜುಳರವ ಮಾಡುತ್ತ ಹರಿಯುತ್ತಿದ್ದ ಪವಿತ್ರತೀರ್ಥ ಕಾವೇರಿಯನ್ನು ಕಂಡು ಆ ರಮಣೀಯ ವಾತಾವರಣಕ್ಕೆ ಮನಸೋತು ಈ ಪ್ರದೇಶದಲ್ಲಿ ಸ್ವಲ್ಪಕಾಲ ನೆಲೆಸಲು ಮನಸ್ಸು ಮಾಡಿದನು.

ತನ್ನ ನೆಲೆಯನ್ನು ಯಾರೋ ಪರಕೀಯರು ಆಕ್ರಮಿಸಿಕೊಳ್ಳುತ್ತಿದ್ದಾರೆಂದು ಭಾವಿಸಿದ ಚುಂಚಾಸುರನು ಆತುರಾತುರವಾಗಿ ನುಗ್ಗಿಬಂದು ಶ್ರೀರಾಮನಿಗೆ ಎದುರಾದನು. ರಾಮನನ್ನು ನೋಡಿದ ಅವನು ವ್ಯಗ್ರನಾಗಿ ಉಗ್ರಕೋಪದಿಂದ ಈ ಮಾನವನನ್ನು ಬಲಿಹಾಕಬೇಕೆಂದು ಬಂದಾಗ ಈರ್ವರಿಗೂ ಸಮರ ತೊಡಗಿತು. ಅಸ್ತ್ರ-ಪ್ರತ್ಯಾಸ್ತ್ರಗಳ ಪ್ರಯೋಗ ನಿರಂತರವಾಗಿ ನಡೆದು ಸಣ್ಣಪುಟ್ಟ ಅಸ್ತ್ರಗಳಿಂದ ಇವನನ್ನು ಗೆಲ್ಲಲು ಸಾಧ್ಯವಿಲ್ಲವೆಂದು ಅರಿತ ಚುಂಚ ರಾಮನ ಮೇಲೆ ಶಿವನಿಂದ ಪಡೆದಿದ್ದ ತ್ರಿಶೂಲವನ್ನು ಪ್ರಯೋಗಿಸಿದನು. ಆ ಕೂಡಲೆ ತ್ರಿಶೂಲವು ಶ್ರೀರಾಮನ ಕೈಸೇರಿತು.

ತ್ರಿಶೂಲವನ್ನು ಕಳೆದುಕೊಂಡ ಚುಂಚಾಸುರನು ಸಖೇದಾಶ್ಚರ್ಯಗಳಿಂದ ಶ್ರೀರಾಮನನ್ನು ದಿಟ್ಟಿಸಿದನು. ಆಗ ಶ್ರೀರಾಮ ಸಾಕ್ಷಾತ್ ವಿಷ್ಣುವಿನ ರೂಪದಲ್ಲಿ ಅವನ ಕಣ್ಣಿಗೆ ಕಾಣಿಸಿದ್ದರಿಂದ ಭಯಚಕಿತನಾದ ಚುಂಚಾಸುರನು ಶ್ರದ್ಧಾಭಕ್ತಿಗಳಿಂದ ಶ್ರೀರಾಮನಿಗೆ ಶರಣಾಗತನಾದನು. ಚುಂಚನ ನಯವಿನಯ ಭಯಭಕ್ತಿಗಳಿಗೆ ಪ್ರಸನ್ನನಾದ ಶ್ರೀರಾಮನು

'ಚುಂಚಾಸುರ, ಶಿವನ ಪರಮಭಕ್ತನಾದ ನಿನಗೆ ಈ ರೋಷ ದ್ವೇಷ ಆವೇಶ ಅಸೂಯೆಗಳಾದರೂ ಏಕೆ? ಪ್ರೀತಿ ವಿಶ್ವಾಸಗಳಿಂದ ಶಾಂತಿಸಮಾಧಾನಗಳಿಂದ ನಿನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳಬಾರದೆ?'

'ಸ್ವಾಮಿ, ಈವರೆವಿಗೆ ನನ್ನಿಂದಾಗಿರುವ ಅನ್ಯಾಯ ಅತ್ಯಾಚಾರಗಳಿಗೆ ಕ್ಷಮೆ ಯಾಚಿಸುತ್ತೇನೆ. ಕ್ಷಮಿಸಿ ನನ್ನನ್ನು ಉದ್ಧರಿಸು ಪ್ರಭು.'

'ವತ್ಸ, ನಿನ್ನ ಸದ್ಗುಣವೇ ನಿನ್ನ ಉದ್ಧಾರಕ್ಕೆ ಕಾರಣವಾಗುತ್ತದೆ. ನಿನ್ನ ಶಿವಭಕ್ತಿಯ ಪರಾಕಾಷ್ಠೆಯಿಂದ ನಿನ್ನ ಹೆಸರು ಆ ಚಂದ್ರತಾರಾರ್ಕಂಬರ ಶಾಶ್ವತವಾಗಿ ಉಳಿಯುತ್ತದೆ.'

'ನಿಮ್ಮ ಕೃಪಾಕಟಾಕ್ಷದಿಂದ ಧನ್ಯವಾದೆ ಪ್ರಭು.'

'ವತ್ಸ, ನಿನ್ನ ಅಣ್ಣನಾದ ಕಂಚನು ತನಗೆ ವರವಿತ್ತ ಈಶ್ವರನನ್ನೇ ತನ್ನ ಉರಿಗೈಯಿಂದ ಸುಡಲು ಹೋಗಿ ತಾನೇ ಸುಟ್ಟು ಬೂದಿಯಾಗಿ ಭಸ್ಮಾಸುರನಾದ. ಇಂಥ ದುಷ್ಪ್ರವೃತ್ತಿಗಳನ್ನು ತೊರೆದು ಶಿವನನ್ನು ಆರಾಧಿಸುತ್ತ ನಿನ್ನ ಉದ್ಧಾರದ ಪಥವನ್ನು ಸುಗಮಗೊಳಿಸಿಕೋ.'

'ಸ್ವಾಮಿ, ನಿಮ್ಮ ಅಪ್ಪಣೆಯಂತೆ ನಡೆದುಕೊಳ್ಳುತ್ತೇನೆ. ನಿಮ್ಮ ಪಾದಧೂಳಿ ನನ್ನ ಶಿರಸ್ಸಿನ ಮೇಲಿರಲಿ' ಎಂದು ಹೇಳುತ್ತ ಶ್ರೀರಾಮನ ಪಾದಗಳನ್ನು ತಬ್ಬಿಕೊಂಡು,

'ಸ್ವಾಮಿ, ಬನ್ನಿ ಈ ಚುಂಚನಕೋಟೆಗೆ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಿ ಸ್ವಾಮಿ.'

'ಚುಂಚಾಸುರ, ನಿನ್ನ ಒಂದು ದಿನದ ಆತಿಥ್ಯ ನಮಗೆ ಸಂತೃಪ್ತಿಕರವಾದುದೆ. ಆದರೆ ಈ ಕಾವೇರಿ ತೀರದಲ್ಲಿ ನಾವು ಕೆಲಕಾಲ ತಂಗಿದ್ದು ಮುಂದಕ್ಕೆ ಪ್ರಯಾಣ ಮಾಡಬೇಕೆನಿಸುತ್ತಿದೆ. ನಮ್ಮಿಂದ ನಿನಗೆ ತೊಂದರೆಯಾಗುವುದಿಲ್ಲ ತಾನೆ?'

'ಪ್ರಭೂ, ನೀವು ಎಷ್ಟು ದಿನಗಳವರೆಗಾದರೂ ಈ ಪ್ರದೇಶದಲ್ಲಿರಿ. ಈ ಪ್ರದೇಶವನ್ನು ನಿಮಗೆ ಬಿಟ್ಟುಕೊಟ್ಟ ಪುಣ್ಯ ನನ್ನದಾಗಲಿ.'

'ವತ್ಸ ಹಾಗಾದರೆ ನೀನು?'

'ಸ್ವಾಮಿ, ನನ್ನ ಅಣ್ಣನಿಲ್ಲದ ಕಂಚನಕೋಟೆ ಇದೆ. ನನ್ನ ತಂದೆ ಪಿಂಚಾಸುರರು ವಾಸವಿದ್ದ ಬೆಟ್ಟವೊಂದು ಆ ಪ್ರದೇಶದಲ್ಲಿದೆ. ಕಂಚನಕೋಟೆಯಲ್ಲಾಗಲಿ ಅಥವಾ ಆ ಶೈವಕ್ಷೇತ್ರವಾಗಿರುವ ಗಿರಿಯಲ್ಲಾಗಲಿ ನಾನು ನೆಲಸುತ್ತೇನೆ. ನೀವು ಮೂವರು ನಿರಾತಂಕವಾಗಿ ಈ ಕಾವೇರಿ ತೀರದಲ್ಲಿ ನೆಲಸಬಹುದು ಪ್ರಭು.'

'ಚುಂಚಾಸುರ, ನಿನ್ನ ಔದಾರ್ಯದ ಔನ್ನತ್ಯಕ್ಕೆ ನಾನು ಮಾರುಹೋಗಿದ್ದೇನೆ. ನನಗೆ ತುಂಬ ಸಂತೋಷವಾಗಿದೆ. ನೀನು ನೆಲಸುವ ಆ ಗಿರಿಯು ಈ ಭೂಮಿ ಇರುವವರೆಗೂ ಚುಂಚನಗಿರಿ ಎಂದೇ ಪ್ರಖ್ಯಾತವಾಗಲಿ. ಆ ಶೈವಕ್ಷೇತ್ರವು ನಿನ್ನ ಹೆಸರಿನಿಂದ ಪವಿತ್ರ ಕ್ಷೇತ್ರವೆಂದು ಪ್ರಸಿದ್ಧವಾಗಲಿ.'

'ಧನ್ಯನಾದೆ ಸ್ವಾಮಿ ಧನ್ಯನಾದೆ!' ಎಂದು ಹೇಳಿ ಚುಂಚನಕೋಟೆಯ ಆ ಪ್ರದೇಶವನ್ನು ರಾಮನಿಗೆ ಬಿಟ್ಟುಕೊಟ್ಟು ತಾನು ಕಂಚನಕೋಟೆಯ ಕಡೆಗೆ ಪ್ರಯಾಣ ಬೆಳಸಿದನು.

೫. ನವಿಲುಗಿರಿ ಚುಂಚನಗಿರಿ ಆಯಿತು

ಚುಂಚಾಸುರನ ಕೈಯಲ್ಲಿದ್ದ ತ್ರಿಶೂಲ ಶ್ರೀರಾಮನ ಕೈಗೆ ಬಂದುದರಿಂದ ಚುಂಚನಕಟ್ಟೆ ಶ್ರೀರಾಮ ಮಂದಿರದಲ್ಲಿರುವ ಶ್ರೀರಾಮನ ಕೈಯಲ್ಲಿ ಧನುಸ್ಸಿಗೆ ಬದಲಾಗಿ ತ್ರಿಶೂಲವಿದ್ದು ಇಲ್ಲಿಯ ರಾಮ ಕೋದಂಡರಾಮನಾಗಿರದೆ ತ್ರಿಶೂಲ ರಾಮನಾಗಿದ್ದಾನೆ. ಅಂದಿನ ಚುಂಚನಕೋಟೆಯೇ ಇಂದಿನ ಚುಂಚನಕಟ್ಟೆ. (ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನಲ್ಲಿದೆ). ಈ ಸಂಗತಿಯನ್ನು ಇಲ್ಲಿನ ಅರ್ಚಕರು ಒಪ್ಪುವುದಿಲ್ಲ. ಬಹುಶಃ ಹಿಂದೆ ಇದ್ದಿರಬಹುದಾದ ವಿಗ್ರಹದಲ್ಲಿ ಬಿಲ್ಲಿಗೆ ಬದಲಾಗಿ ತ್ರಿಶೂಲ ಇತ್ತೇನೋ ಎಂದು ಹೇಳುತ್ತಾರೆ.

ಚುಂಚಾಸುರನು ಕಂಚನಕೋಟೆಯ ಕಡೆಗೆ ನಡೆದನು. ಅವನಿಗೆ ತಂದೆ ಪಿಂಚಾಸುರನ ರಾಜಧಾನಿ ನವಿಲುಗಿರಿ ಸುಂದರವಾದ ಬೆಟ್ಟವಾಗಿ ಕಂಡಿತು. ಅವನು ನವಿಲುಗಿರಿಯಲ್ಲಿ ನೆಲಸಿ ಆ ಗಿರಿಯನ್ನು ತನ್ನ ಹೆಸರಿನಿಂದ ಚುಂಚನಗಿರಿ ಎಂದು ಕರೆದ.

ಸೀತೆಮಡು

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಚುಂಚನಕಟ್ಟೆಯಲ್ಲಿ ರುದ್ರರಮಣೀಯವಾಗಿ ಹರಿಯುವ ಕಾವೇರಿ ನದಿಯು ಹೃನ್ಮನಗಳನ್ನು ಸೂರೆಗೊಳ್ಳುತ್ತದೆ.

ಧನುಷ್‌ಕೋಟಿಯಲ್ಲಿ ಧುಮುಕುವ ಕಾವೇರಿ ನದಿಯು ತ್ರೇತಾಯುಗದ ಶ್ರೀರಾಮನ ಇತಿಹಾಸವನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಶ್ರೀರಾಮಚಂದ್ರ ತನ್ನ ಪತ್ನಿ ಸೀತೆ ಹಾಗೂ ಸಹೋದರ ಲಕ್ಷ್ಮಣರ ಜೊತೆಯಲ್ಲಿ ವನವಾಸಕ್ಕಾಗಿ ಬಂದಿದ್ದಾಗ ಕೆಲಕಾಲ ಇಲ್ಲಿ ತಂಗಿದ್ದನಂತೆ. ಆ ಸಮಯದಲ್ಲಿನ್ನೂ ಆಂಜನೇಯನ ಸಖ್ಯವಾಗಿರಲಿಲ್ಲವಾದ್ದರಿಂದ ಇಲ್ಲಿ ಆಂಜನೇಯನ ವಿಗ್ರಹ ಇಲ್ಲ. ಅದಲ್ಲದೆ ಶ್ರೀರಾಮನ ಕೈಯಲ್ಲಿ ಬಿಲ್ಲುಬಾಣಗಳ ಬದಲಾಗಿ ತ್ರಿಶೂಲವಿರುವುದು ವಿಚಿತ್ರವೆನಿಸುತ್ತದೆ.

ಶ್ರೀರಾಮ ದೇವಾಲಯದ ಬಳಿ ಹರಿಯುತ್ತಿರುವ ಕಾವೇರಿ ಮಡುವನ್ನು ಸೀತೆಯಮಡು ಎಂದು ಕರೆಯುತ್ತಾರೆ. ಈ ಮಡುವಿನಿಂದ ನದಿನೀರು ಕೆಳಕ್ಕೆ ಧುಮುಕುವ ಅಣೆಯ ಭಾಗದಲ್ಲಿ ಹರಿಯುವಾಗ ಅರಿಸಿನ ಹಾಗೂ ಸೀಗೆಬಣ್ಣಗಳಿಂದ ಕೂಡಿರುವಂತೆ ಕಾಣುತ್ತದೆ. ಇದು ಸೀತೆ ಸ್ನಾನ ಮಾಡುತ್ತಿದ್ದಾಗಿನ ಸೀಗೆ ಮತ್ತು ಅರಿಸಿನದ ಬಣ್ಣವಂತೆ.

ಈ ಮಡುವಿನ ಅಣೆಯ ಬಂಡೆಯ ಮೇಲೆ ಜಾರಿದ ಪಾದದ ಗುರುತುಗಳಿವೆ. ಅಲ್ಲದೆ ಒಂದು ದೊಡ್ಡಬಂಡೆ ಒಡೆದು ಎರಡು ಹೋಳಾಗಿರುವಂತಿದೆ. ಲಕ್ಷ್ಮಣನು

ಬೇಟೆಗೆಂದು ಹೋಗಿದ್ದನು. ಆ ಸಮಯದಲ್ಲಿ ಸೀತೆ ಸ್ನಾನಕ್ಕಾಗಿ ಕಾವೇರಿ ನದಿಯ ಈ ಮಡುವಿಗೆ ಇಳಿದಳು.

ಅತ್ತಿಗೆ ಸ್ನಾನ ಮಾಡುತ್ತಿರುವಳೆಂಬುದನ್ನು ಅರಿಯದ ಲಕ್ಷ್ಮಣನು ಬಾಯಾರಿಕೆಯಿಂದ ಬಳಲುತ್ತ ನೀರು ಕುಡಿಯಲೆಂದು ಇತ್ತ ಕಡೆಗೆ ಬರುತ್ತಿದ್ದ. ಸ್ವೇಚ್ಛೆಯಿಂದ ನೀರಾಟವಾಡುತ್ತಿದ್ದ ಸೀತೆ, ಲಕ್ಷ್ಮಣನು ಬರುತ್ತಿರುವುದನ್ನು ಕಂಡು ಮರೆಯಾಗಲು ಬಿರುಗಾಳಿಯಂತೆ ಬಂಡೆಯತ್ತ ನುಗ್ಗಿದಳು. ಸೀತಾಮಾತೆಯ ರಭಸಕ್ಕೆ ಬಂಡೆಯೊಡೆದು ಹೋಳಾಗಿ ಅವಳಿಗೆ ಆಶ್ರಯ ನೀಡಿತು. ಸೀತೆ ಆತುರದಿಂದ ಓಡುವಾಗ ಜಾರಿದ ಹೆಜ್ಜೆಯ ಗುರುತುಗಳು ಅಲ್ಲಿನ ಬಂಡೆಯ ಮೇಲೆ ಅಚ್ಚಳಿದವು.

ಕಾವೇರಿ ಸದ್ದು

ಕೆಲವು ಸಂದರ್ಭಗಳಲ್ಲಿ ಗಿರಿಗಹ್ವರಗಳ ಪ್ರತಿಧ್ವನಿಗಳಿಗೂ ನದಿಗಳ ಪ್ರವಾಹದ ಅಥವಾ ಜಲಪಾತದ ಮೊರೆತಕ್ಕೂ ಸಂಬಂಧಿಸಿದಂತೆ ಚಿತ್ರವಿಚಿತ್ರವಾದ ಪುರಾಣ ಕಥೆಗಳು ಹುಟ್ಟಿಕೊಳ್ಳುತ್ತವೆ. ಬೆಟ್ಟದಪುರದ ಕೂಗುಬಂಡೆಯ ಮೇಲೆ ನಿಂತು 'ಮಲ್ಲಯ್ಯೋ!' ಎಂದು ಕೂಗಿದರೆ 'ಓ' ಎಂಬ ಪ್ರತಿಧ್ವನಿ ಕೇಳಿಬರುತ್ತದೆ. ಪಿರಿಯಾಪಟ್ಟಣದ ತಾಲ್ಲೂಕಿನ ದೊಡ್ಡಕಮರವಳ್ಳಿಯ ಅರಣ್ಯಭಾಗದಲ್ಲಿ ಚನ್ನಕಲ್ಲು ಎಂಬ ಎತ್ತರವಾದ ಬಂಡೆ ಇದೆ. ಅದನ್ನು ಹತ್ತುವುದಾಗಲಿ ಇಳಿಯುವುದಾಗಲಿ ಸುಲಭವಲ್ಲ, ಆ ಬಂಡೆಯನ್ನು ಹತ್ತಿದ ಚೆನ್ನ ಎಂಬ ಹುಡುಗ ಇಳಿಯಲಾರದೆ ಪರದಾಡಿದ. ದನಕಾಯಲು ಬಂದಿದ್ದ ಮಿತ್ರರು ಬೇರೆ ದಾರಿ ಇಲ್ಲದೆ ಊರಿಗೆ ಹೋಗಿ ದೊಡ್ಡವರನ್ನು ಕಳಿಸುತ್ತೇವೆ, ಅವರಾದರೂ ನಿನ್ನನ್ನು ಕೆಳಕ್ಕೆ ಇಳಿಸಿಕೊಳ್ಳಬಲ್ಲರು ಎಂದು ಹೇಳಿ ಹೋದರು. ದೊಡ್ಡವರು ಮಧ್ಯರಾತ್ರಿಯ ವೇಳೆಗೆ ಬಂದರು. ಬಂಡೆಯ ಹತ್ತಿರ ಬಂದು ಚೆನ್ನನನ್ನು ಕೂಗಿದರು. 'ಚೆನ್ನೋ' ಎಂದು ಕೂಗಿದರೆ 'ಓ' ಎಂಬ ಪ್ರತಿಧ್ವನಿ ಮಾತ್ರ ಬಂತು. ಚೆನ್ನ ಏನಾದನೆಂದು ಯಾರಿಗೂ ತಿಳಿಯಲಿಲ್ಲ. ಕೊನೆಗೂ ಅವನು ಸಿಗಲಿಲ್ಲ, ಆದರೆ ಅವನ ಹೆಸರಿನ 'ಚೆನ್ನಕಲ್ಲುಕಾವಲು' ಅರಣ್ಯ ಹಾಗೂ ಚೆನ್ನನ ಹೆಸರಿನ ಕಲ್ಲು ಈಗಲೂ ಉಳಿದಿದೆ. ಇದೇ ರೀತಿ ಮೊರೆಯುವ ಹರಿಯುವ ನದಿಗಳ ಶಬ್ದಗಳ ಬಗೆಗೂ ಜನಪದರು ತಮ್ಮದೇ ಆದ ಪುರಾಣಕಥೆಗಳನ್ನು ಹೇಳುತ್ತಾರೆ.

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕು ಚುಂಚನಕಟ್ಟೆಯಲ್ಲಿರುವ ಶ್ರೀರಾಮದೇವರ ಗುಡಿಯ ಪೌಳಿಯ ಹೊರಭಾಗದಲ್ಲಿ ನಿಂತರೆ ಕಾವೇರಿ ನದಿ ಮೊರೆಯುವ ಶಬ್ದ ಕೇಳಿಸುತ್ತದೆ. ಆದರೆ ದೇವಾಲಯದೊಳಕ್ಕೆ ಕಾಲಿಟ್ಟ ಕೂಡಲೆ ಕೇಳದಂತಾಗುತ್ತದೆ. ಬಹುಶಃ ಇದು ದೇವಾಲಯದ ರಚನೆಯಲ್ಲಿನ

ತಂತ್ರವಿರಬೇಕು. ಆದರೆ ಈ ವಿವರಣೆಗಳಿಂದ ಜನಪದ ತೃಪ್ತಿಗೊಳ್ಳುವುದಿಲ್ಲ. ಧ್ವನಿ ವ್ಯತ್ಯಾಸವನ್ನು ಗಮನಿಸಿದ ಕೂಡಲೆ ಅವರಿಂದ ಅದಕ್ಕೊಂದು ಪೌರಾಣಿಕ ವಿವರಣೆ ಸಿದ್ಧವಾಗುತ್ತದೆ.

ಒಂದು ದಿನ ಶ್ರೀರಾಮನು ದೇವಾಲಯದೊಳಗೆ ಕುಳಿತು ಓಲೆಗರಿಯ ಪುಟಗಳನ್ನು ತಿರುವಿ ಹಾಕುತ್ತಿದ್ದ. ಆ ತಾಳೆಯ ಗರಿಯೊಳಗಿರುವ ಗಹನವಾದ ತತ್ತ್ವವೊಂದನ್ನು ಚಿಂತಿಸುತ್ತಿದ್ದ. ಅಂದು ಮಳೆಗಾಲವಾದ್ದರಿಂದ ಕಾವೇರಿಯಲ್ಲಿ ಪ್ರವಾಹ ಹೆಚ್ಚಿ ನದಿ ಒಂದೇ ಸಮನೆ ಭೋರ್ಗರೆಯತೊಡಗಿತು. ಇದರಿಂದ ಶ್ರೀರಾಮನ ಅಧ್ಯಯನಕ್ಕೆ ಭಂಗವುಂಟಾಗುತ್ತಿತ್ತು. ಈ ಮೊರೆಯುವ ಶಬ್ದವನ್ನು ತಾಳಲಾರದ ಶ್ರೀರಾಮ ಸಿಡುಕಿನಿಂದ 'ಈ ಹೆಣ್ಣಿನ ನಾಲಿಗೆ ಎಷ್ಟೊಂದು ಜೋರಪ್ಪ!' ಎಂದು ಹೇಳಿ ಮುಖವನ್ನು ಸಿಂಡರಿಸಿಕೊಂಡ. ಹಾಗೆಂದ ಕೂಡಲೆ ಕಾವೇರಿ ತನ್ನ ಮೊರೆತವು ಗುಡಿಯೊಳಕ್ಕೆ ಕೇಳಿಸದಂತೆ ತಡೆದಳು.

ಅಂದಿನಿಂದ ಎಷ್ಟೇ ಪ್ರವಾಹ ಬಂದು ಮೊರೆಯುವ ಗುಂಡಿ ಭೋರ್ಗರೆಯುತ್ತಿದ್ದರೂ ಗುಡಿಯೊಳಕ್ಕೆ ಶಬ್ದ ಕೇಳಿಬರದಂತಾಯಿತು. ಇದನ್ನು ಪರೀಕ್ಷಿಸಬೇಕೆಂದು ಕೆಲವರು ಒಂದು ಹೆಜ್ಜೆಯನ್ನು ಹೊರಗಿಟ್ಟು ಒಂದು ಹೆಜ್ಜೆಯನ್ನು ಗುಂಡಿಯೊಳಗಿಟ್ಟು ಈಗಲೂ ಪರೀಕ್ಷಿಸಿ ನೋಡುತ್ತಾರಂತೆ.

ಇಂದಿನ ಮಿರ್ಲೆ ಅಂದಿನ ಮಿಥಿಲೆ

ಶ್ರೀರಾಮಲಕ್ಷ್ಮಣ ಸೀತೆಯರು ವನವಾಸಕ್ಕೆಂದು ಬಂದಿದ್ದಾಗ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನಲ್ಲಿ ಹರಿಯುವ ಕಾವೇರಿ ನದಿ ದಡದ ಸೊಬಗಿಗೆ ಮನಸೋತು ಕೆಲಕಾಲ ಅಲ್ಲಿ ವಾಸವಾಗಿದ್ದರು.

ರಾಮರು ತಮ್ಮ ಪತ್ನಿ ಸೀತೆಯ ಜೊತೆಯಲ್ಲಿ ಬಂದಿರುವ ವಿಚಾರ ಅಕ್ಕಪಕ್ಕದ ಹಳ್ಳಿಗಳ ಜನರಿಗೆ ತಿಳಿಯಿತು. ಆಗ ಆ ಜನರೆಲ್ಲ ಅವರ ದರ್ಶನ ಭಾಗ್ಯಕ್ಕಾಗಿ ಚುಂಚನಕಟ್ಟೆಗೆ ಬರುತ್ತಿದ್ದರಂತೆ. ಅಲ್ಲಿಯೇ ಅತ್ಯಂತ ಸಮೀಪದಲ್ಲಿದ್ದ ತರಗೆಲೆ ಗ್ರಾಮದ ಜನರು ಚುಂಚನಕಟ್ಟೆಗೆ ಬಂದು ರಾಮಲಕ್ಷ್ಮಣ ಸೀತೆಯರನ್ನು ತಮ್ಮೂರಿಗೆ ಬರಲು ಪ್ರಾರ್ಥಿಸಿದರಂತೆ. ಆಗ ಶ್ರೀರಾಮರು–

"ವನವಾಸದಲ್ಲಿರುವ ನಾನು ಯಾವುದೇ ಊರಿಗೆ ಬಂದು ಆತಿಥ್ಯ ಸ್ವೀಕರಿಸುವಂತಿಲ್ಲ. ಬೇಕಾದರೆ ಸೀತೆಯನ್ನು ಕರೆದುಕೊಂಡು ಹೋಗಿ ಸಾಯಂಕಾಲದ ಹೊತ್ತಿಗೆ ಇಲ್ಲಿಗೇ ಕಳಿಸಿಕೊಡಿ" ಎಂದನಂತೆ.

ರಾಮನ ಮಾತಿನಂತೆ ಸೀತಾಮಾತೆಯನ್ನು ತಮ್ಮ ಊರಿಗೆ ಕರೆದುಕೊಂಡು ಹೋದ, ತರಗೆಲೆ ಗ್ರಾಮದ ಜನರು ಸೀತಮ್ಮನಿಗೆ ಬಗೆಬಗೆಯಾಗಿ ಅಲಂಕಾರ

ಮಾಡಿ, ಹೊಸ ಹೊಸ ಸೀರೆ ರವಿಕೆಗಳನ್ನು ಕೊಟ್ಟು, ಭಾರಿ ಔತಣವೇರ್ಪಡಿಸಿ ಬೀಳ್ಕೊಟ್ಟರಂತೆ. ಅವರ ಔದಾರ್ಯಪೂರ್ಣ ಪ್ರೀತಿಗೆ ಮರುಳಾದ ಸೀತೆಯು

"ನಿಮ್ಮ ಪ್ರೀತ್ಯಭಿಮಾನಗಳನ್ನು ನೋಡುತ್ತಿದ್ದರೆ ನನಗೆ ನನ್ನ ತವರು ಮಿಥಿಲೆಯ ನೆನಪು ಬರುತ್ತಿದೆ. ಇದೂ ನನಗೆ ಮಿಥಿಲೆಗೆ ಸಮ. ಇದೂ ನನಗೆ ಮಿಥಿಲೆಯೇ!" ಎಂದು ಹರ್ಷದಿಂದ ತರಗೆಲೆ ಗ್ರಾಮವನ್ನು 'ಮಿಥಿಲೆ' ಎಂದು ಕರೆದಳಂತೆ.

ಅಂದು ಸೀತೆ ತರಗೆಲೆ ಗ್ರಾಮವನ್ನು 'ಮಿಥಿಲೆ' ಎಂದು ಪುನರ್‌ನಾಮಕರಣ ಮಾಡಿದಳು. ಅವಳು ಅಂದು ಕರೆದ 'ಮಿಥಿಲೆ' ನಮ್ಮ ಗ್ರಾಮೀಣರ ಬಾಯಲ್ಲಿ ಮಿರ್ಲೆ ಆಗಿದೆ.

ಜಗದ್ರಕ್ಷಕ ನೀನೇ ಆಗಿರುವಾಗ !

ಶ್ರೀರಾಮ ಒಮ್ಮೆ ಕಾವೇರಿ ನದಿಗಿಳಿಯುವಾಗ ದಡದ ಮಣ್ಣಿಗೆ ತನ್ನ ಬಾಣವನ್ನು ಬಿರುಸಾಗಿ ಚುಚ್ಚಿದ. ಮಣ್ಣಿನ ಒಳಗಿದ್ದ ಕಪ್ಪೆಯೊಂದಕ್ಕೆ ಬಾಣದ ಮೊನೆಯು ಚುಚ್ಚಿಕೊಂಡಿತು. ರಾಮನು ನದಿಯಿಂದ ದಡಕ್ಕೆ ಬಂದು ತನ್ನ ಬಾಣವನ್ನು ಮಣ್ಣಿನಿಂದ ಮೇಲಕ್ಕೆಳೆದ. ಆಗ ಬಾಣವು ಮೊನೆಗೆ ಚುಚಿಕೊಂಡಿದ್ದ ಕಪ್ಪೆ ಸಮೇತ ಮೇಲಕ್ಕೆ ಬಂತು. ಇದನ್ನು ಕಂಡು ರಾಮನಿಗೆ ತೀರಾ ನೋವಾಗಿ ಕನಿಕರದಿಂದ

"ಅಲ್ಲಾ ಕಪ್ಪೆಯೆ, ನಿನಗೆ ಬಾಣದ ಮೊನೆ ಚುಚ್ಚಿಕೊಂಡಾಗ ಆ ಕೂಡಲೆ ನೀನು ರಕ್ಷಣೆಗಾಗಿ ನನ್ನನ್ನು ಕರೆಯಬಾರದಿತ್ತೆ?" ಎಂದು ಕೇಳಿದನು. ಅದಕ್ಕೆ ಕಪ್ಪೆಯು

"ಪ್ರಭೂ ಜಗದ್ರಕ್ಷಕನಾದ ನೀನೇ ನಿನ್ನ ಬಾಣದಿಂದ ನನ್ನನ್ನು ಚುಚ್ಚಿರುವಾಗ ಇನ್ನು 'ರಕ್ಷಿಸು!' ಎಂದು ಯಾರಲ್ಲಿ ಮೊರೆಯಿಡಲಿ" ಎಂದಿತು.

ಆಗ ಕೃಪಾಳುವಾದ ರಾಮನು ಕಪ್ಪೆಯ ದೇಹಕ್ಕೆ ಬಾಣದ ತುದಿ ಚುಚ್ಚೇ ಇಲ್ಲ ಎಂಬಂತೆ ಅದನ್ನು ಮೊದಲಿದ್ದ ರೂಪದ ದೇಹ ಕೊಟ್ಟು ರಕ್ಷಿಸಿದನು.

ಶ್ರೀರಾಮದೇವರ ಕಾಲುವೆ

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚುಂಚನಕಟ್ಟೆಯಲ್ಲಿ ಹರಿಯುವ ಕಾವೇರಿ ನದಿಯ ಒಂದು ಕಾಲುವೆಯನ್ನು ಶ್ರೀರಾಮದೇವರ ಕಾಲುವೆಯೆಂದೂ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಅಡಗೂರು ಗ್ರಾಮದ

ಬಳಿ ಹರಿಯುವ ಹಳ್ಳವೊಂದನ್ನು ರಾಮದೇವರ ಹಳ್ಳವೆಂದೂ ಕರೆಯುತ್ತಾರೆ. ಇವೆರಡಕ್ಕೂ ಅಂಬುತೀರ್ಥ ಮತ್ತು ಲಕ್ಷ್ಮಣತೀರ್ಥಗಳಿಗಿರುವಂತೆ ರಾಮಾಯಣದ ಸಂಬಂಧವನ್ನು ಹೇಳಲಾಗಿದೆ.

ಶ್ರೀರಾಮಚಂದ್ರನು ಚುಂಚನಕೋಟೆ(ಕಟ್ಟೆ)ಯನ್ನು ಆಳುತ್ತಿದ್ದ ಚುಂಚನೆಂಬ ರಾಕ್ಷಸನನ್ನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿರುವ ಚುಂಚನಗಿರಿಗೆ ಕಳಿಸುವಾಗ ಆ ರಾಕ್ಷಸನ ಬಯಕೆಯಂತೆ ಚುಂಚನಕಟ್ಟೆಯ ಸುತ್ತಮುತ್ತಲಿನ ಭೂಮಿಯೆಲ್ಲ ನೀರಾವರಿಯಿಂದ ಸಮೃದ್ಧವಾಗಿರಲು ಕಕ್ಕೆ ಹೂವುಗಳನ್ನು ತರಿಸಿ ಉದ್ದಕ್ಕೂ ಸಾಲು ಬಿಟ್ಟುಕೊಂಡು ಹೋದನು. ಶ್ರೀರಾಮನು ಹೂವು ಚೆಲ್ಲಿಕೊಂಡು ಹೋದೆಡೆಯಲ್ಲೆಲ್ಲ ಕಾವೇರಿ ಹಿಂಬಾಲಿಸಿ ಬಂದುದರಿಂದ ಆ ಕಾಲುವೆಗೆ ಶ್ರೀರಾಮದೇವರ ಕಾಲುವೆ ಎಂಬ ಹೆಸರಾಯಿತು.

ಶ್ರೀರಾಮದೇವರ ಹಳ್ಳ

ಹಾಸನ ಜಿಲ್ಲೆಯ ಶ್ರೀರಾಮದೇವರಹಳ್ಳ ಸೀತಾರಾಮಲಕ್ಷ್ಮಣರು ಬಾಯಾರಿಕೆಯನ್ನು ಪರಿಹರಿಸಿಕೊಂಡ ಹಳ್ಳವಾದ್ದರಿಂದ ಆ ಹೆಸರು ಅದಕ್ಕೆ ಬಂದಿದೆ. ಈ ಹಳ್ಳದ ಉಗಮಸ್ಥಾನದಲ್ಲಿ ದೆವ್ವಹಿಡಿದವರನ್ನು ಮುಳುಗಿಸಿ ಮೇಲೆತ್ತುತ್ತಾರೆ. ಹಾಗೆ ಮಾಡಿದರೆ ಹಿಡಿದಿರುವ ದೆವ್ವ ಹೆದರಿ ಓಡುತ್ತದೆ ಎಂದು ನಂಬುತ್ತಾರೆ. ವಿಶೇಷವೆಂದರೆ ಎಂಥಾ ಬರಬೇಸಿಗೆಯಲ್ಲೂ ಈ ಹಳ್ಳದ ನೀರು ಬತ್ತುವುದಿಲ್ಲವೆಂದು ಇಲ್ಲಿಯ ಜನ ಹೇಳುತ್ತಾರೆ.

ಹೀಗೆ ಬಾಯಾರಿಕೆಯ ಪರಿಹಾರಕ್ಕಾಗಿ ಕಾಡಿನಲ್ಲಿ ಸಂಚರಿಸಿದ ಶ್ರೀರಾಮಲಕ್ಷ್ಮಣ ಸೀತೆಯರು ಹಾಗೂ ಪಾಂಡವರು ಸೃಷ್ಟಿಸಿದ ಹಳ್ಳಗಳು, ನದಿಗಳು, ಕೊಳಗಳು, ಕಾಲುವೆಗಳು ನಾಡಿನ ತುಂಬೆಲ್ಲ ಕಾಣಸಿಗುತ್ತವೆ.

ಮುತ್ತುಗದ ಎಲೆ ಮುತ್ತೈದೆ ಎಲೆ

ರಾಮಲಕ್ಷ್ಮಣ ಸೀತೆಯರು ವನವಾಸ ಮಾಡುತ್ತಿರುವಾಗ ಲಕ್ಷ್ಮಣನು ಬಿದಿರಕ್ಕಿಯನ್ನು ತಂದನಂತೆ. ಸೀತೆ ಬಿದಿರಕ್ಕಿಯಿಂದ ಅನ್ನ ಮಾಡಿದಳು. ಈಗ ಊಟದ ಸಮಯ. ಊಟ ಮಾಡಲು ಅನ್ನವೇನೋ ಸಿದ್ಧವಾಗಿದೆ. ಆದರೆ ಅನ್ನವನ್ನು ಬಡಿಸಿಕೊಂಡು ಊಟ ಮಾಡಲು ಎಲೆ ಇರಲಿಲ್ಲ. ಆಗ ಸೀತೆ ರಾಮನನ್ನು ನೋಡುತ್ತ ತನ್ನ ಅಸಹಯಾಕತೆಯನ್ನು ತೋಡಿಕೊಂಡಳು. ಆ ಕೂಡಲೆ ರಾಮ

'ಈ ಮುತ್ತೈದೆ ಇಚ್ಛೆಯಂತೆ ಮೂರು ಜನರ ಊಟಕ್ಕೆ ಬೇಕಾದ ಎಲೆ ಸೃಷ್ಟಿಯಾಗಲಿ' ಎಂದ.

ರಾಮ ಹಾಗೆ ಹೇಳಿದ ತತ್‌ಕ್ಷಣವೆ ಒಂದು ಟಿಸಲಿಗೆ ಮೂರು ಎಲೆಗಳಿರುವ ಮುತ್ತೈದೆ ಹೆಸರಿನ ಎಲೆ ಸೃಷ್ಟಿಯಾಯಿತು. ಆಗ ಸೃಷ್ಟಿಯಾದ ಮುತ್ತೈದೆ ಎಲೆ ಮುತ್ತುಗದ ಎಲೆ ಎಂಬ ಹೆಸರಿನಲ್ಲಿ ಈಗಲೂ ಊಟದ ಎಲೆಯಾಗಿದೆ.

ಜನರು ಮುತ್ತೈದೆಯೆಲೆಯ ಮೂರು ಎಲೆಗಳೆಂದರೆ ರಾಮಲಕ್ಷ್ಮಣ ಸೀತೆಯರೆಂದು ಭಾವಿಸುತ್ತಾರೆ.

ಶ್ರೀರಾಮನ ಅವಲಕ್ಕಿ

ಕೊಡಗಿನ ನೀರು ನಿಂತಿರುವ ಕೊಳ ಅಥವಾ ಸರೋವರದಂಥ ಸ್ಥಳಗಳಲ್ಲಿ ಅವಲಕ್ಕಿ ಆಕಾರದ ಚಿಕ್ಕ ಹೂಗಳು ತೇಲುತ್ತಿರುತ್ತವೆ. ಇದನ್ನು ಶ್ರೀರಾಮನ ಅವಲಕ್ಕಿ ಎನ್ನುತ್ತಾರೆ.

ಕೊಡಗಿನಲ್ಲಿ ಹುತ್ತರಿ ಕಾಲದಲ್ಲಿ ಹೊಸಬತ್ತವನ್ನು ಕುಟ್ಟಿ ಅವಲಕ್ಕಿ ಮಾಡಿ ರಾಮಲಕ್ಷ್ಮಣ ಸೀತೆಯರಿಗೆ ತಿನ್ನಲು ಕೊಟ್ಟರಂತೆ. ರಾಮ ಮತ್ತು ಸೀತೆಯರು ಕೊಳದ ದಡದಲ್ಲಿ ಕುಳಿತು ನೀರಿಗೆ ಕಾಲುಗಳನ್ನು ಇಳಿಬಿಟ್ಟು ಆಡಿಸುತ್ತ ಮಾತಾಡುತ್ತ ಅವಲಕ್ಕಿ ತಿನ್ನುತ್ತ ಕುಳಿತಿದ್ದರಂತೆ. ಆ ಸಮಯದಲ್ಲಿ ಶ್ರೀರಾಮನ ಕೈಯಲ್ಲಿದ್ದ ಅವಲಕ್ಕಿ ಕೈತಪ್ಪಿ ಕೊಳದೊಳಕ್ಕೆ ಚಲ್ಲಿಹೋಯಿತಂತೆ. ಹಾಗೆ ಚೆಲ್ಲಿಹೋದ ಅವಲಕ್ಕಿ ನೀರ ಮೇಲೆ ತೇಲಾಡುತ್ತ ಉಳಿಯಿತಂತೆ. ಈ ಅವಲಕ್ಕಿ ಆಕಾರದ ಹೂವುಗಳನ್ನು ಶ್ರೀರಾಮನ ಅವಲಕ್ಕಿ ಎಂದೇ ಕೊಡವರು ಕರೆಯುತ್ತಾರೆ.

ಅತ್ತಿಗೋಡು

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಹೋಬಳಿಯಲ್ಲಿರುವ ಅತ್ತಿಗೋಡು ಗ್ರಾಮದ ಹೆಸರು ಪೌರಾಣಿಕ ಛಾಯೆಯನ್ನು ಹೊಂದಿದ್ದು ರಾಮಾಯಣದ ಕಾಲಕ್ಕೆ ಕರೆದುಕೊಂಡು ಹೋಗುತ್ತದೆ.

ತ್ರೇತಾಯುಗದಲ್ಲಿ ಪಿತೃವಾಕ್ಯ ಪರಿಪಾಲನೆಗಾಗಿ ವನವಾಸವನ್ನು ಕೈಗೊಂಡ ಶ್ರೀರಾಮರು ತನ್ನ ಸಹಧರ್ಮಿಣಿ ಸೀತೆ ಮತ್ತು ಸಹೋದರ ಲಕ್ಷ್ಮಣರೊಡನೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತ ಕಾವೇರಿ ದಡದಲ್ಲಿರುವ ಈಗಿನ ರಾಮನಾಥಪುರದಲ್ಲಿ ಕೆಲವು ದಿನಗಳಿದ್ದರು. ಅಲ್ಲಿಂದ ಚುಂಚನಕಟ್ಟೆಗೆ ಹೋಗುವ ಉದ್ದೇಶವಿದ್ದ ಅವರು

ಆಗ್ನೇಯ ದಿಕ್ಕಿನತ್ತ ಬರುಬರುತ್ತ ಒಂದು ಎತ್ತರವಾದ ಹಾಗೂ ಹಚ್ಚಹಸುರಿನಿಂದ ಕಣ್ಮನಗಳನ್ನು ಸೆಳೆಯುತ್ತಿದ್ದ ಸುಂದರ ತಾಣವೊಂದನ್ನು ಕಂಡರು. ಆ ಸ್ಥಳದಲ್ಲಿ ಸ್ವಲ್ಪ ಕಾಲ ತಂಗಿರಲು ನಿರ್ಧರಿಸಿ ಅಲ್ಲೊಂದು ಪರ್ಣಕುಟಿಯನ್ನು ನಿರ್ಮಿಸಿಕೊಂಡು ಆ ರಮಣೀಯ ವಾತಾವರಣದಲ್ಲಿ ಸುಖಸಂಕಥಾ ವಿನೋದಗಳಿಂದ ಕೆಲವು ದಿನಗಳನ್ನು ಕಳೆದರು.

ಪರ್ಣಕುಟಿಗೆ ಸಮೀಪದಲ್ಲೆ ಒಂದು ನೇರಳೆ ಹಣ್ಣಿನ ಮರವಿತ್ತು. ಆ ಮರದ ಮೈತುಂಬ ಹಣ್ಣುಗಳು ಜೋತುಬಿದ್ದಿದ್ದವು. ಅವುಗಳನ್ನು ಉದುರಿಸಿ ಫಲಾಹಾರಕ್ಕೆ ಸಿದ್ಧಪಡಿಸಲು ಲಕ್ಷ್ಮಣ ಮರವನ್ನು ಹತ್ತಿದನು. ಲಕ್ಷ್ಮಣ ಉದುರಿಸಿದ ಹಣ್ಣುಗಳನ್ನು ಆರಿಸಿಕೊಳ್ಳಲು ಸೀತಾಮಾತೆಯು ಮರದ ತಳಕ್ಕೆ ಬಂದಳು.

ಹಣ್ಣುಗಳನ್ನು ಉದುರಿಸುತ್ತಿದ್ದ ಲಕ್ಷ್ಮಣನು ಹೆಚ್ಚು ಹಣ್ಣುಗಳಿರುವ ಒಂದು ಕೊಂಬೆಯನ್ನು ಕಂಡು ಮೇಲಕ್ಕೆ ಹತ್ತಿ ಆ ಕೊಂಬೆಯನ್ನು ಜೋರಾಗಿ ಅಲುಗಾಡಿಸಿದನು. ಆ ಕೊಂಬೆಯಲ್ಲಿ ಹೆಜ್ಜೇನು ಗೂಡು ಕಟ್ಟಿತ್ತು. ಇದನ್ನು ಅರಿಯದ ಲಕ್ಷ್ಮಣನು ಕೊಂಬೆಯನ್ನು ಅಲ್ಲಾಡಿಸಿದ ಕೂಡಲೆ ಜೇನುನೊಣಗಳು ಗೂಡಿನಿಂದ ಝೇಂಕರಿಸುತ್ತ ಮೇಲೆದ್ದವು. ಅವು ಲಕ್ಷ್ಮಣನನ್ನು ಮುತ್ತಿಕೊಂಡು ಚುಚ್ಚಿದವು.

ಇದರಿಂದ ಬೆದರಿದ ಲಕ್ಷ್ಮಣನು ತನ್ನ ಅತ್ತಿಗೆಗೆ ಎಲ್ಲಿ ಈ ಜೇನುನೊಣಗಳು ಕಚ್ಚಿಬಿಡುತ್ತಾವೋ ಎಂದು–

"ಅತ್ತಿಗೆ ಓಡು! ಅತ್ತಿಗೆ ಓಡು! ಅತ್ತಿಗೆ ಓಡು!" ಎಂದು ಒಂದೇ ಸಮನೆ ಕೂಗಿಕೊಳ್ಳತೊಡಗಿದನು. ಸೀತೆ ಬೇಗನೆ ಓಡಿ ಜೇನುಹುಳುಗಳಿಂದ ಪಾರಾದಳು. ಆದರೆ ಲಕ್ಷ್ಮಣನು "ಅತ್ತಿಗೆ ಓಡು!" ಎಂದು ಕೂಗಿದ ಸ್ಥಳದಲ್ಲಿ "ಅತ್ತಿಗೋಡು" ಎಂಬ ಹೆಸರಿನ ಊರಾಯಿತು.

ಲಕ್ಷ್ಮಣತೀರ್ಥ–೧

ಲಕ್ಷ್ಮಣತೀರ್ಥವು ಲಕ್ಷ್ಮಣನ ಬಾಣದಿಂದ ಬಂಡೆಯೊಂದು ಸೀಳಾಗಿ ಅದರ ಆಂತರ್ಯದಿಂದ ಉಕ್ಕಿಹರಿದ ನದಿಯೆಂದು ಹೇಳುವುದು ಸಾಮಾನ್ಯವಾಗಿ ರೂಢಿಯಲ್ಲಿರುವ ಮಾತು. ಆದರೆ ಹುಣಸೂರಿನ ಸುತ್ತಮುತ್ತಲ ಜನರು ಹೇಳುವ ಕಥೆಯೇ ಬೇರೆ. ಆ ಪುರಾಣಕಥೆಯ ಪ್ರಕಾರ:

ಒಂದು ದಿನ ಲಕ್ಷ್ಮಣನು ಕಂದಮೂಲ ಫಲಗಳನ್ನು ತರಲು ಹೋಗಿದ್ದನು. ಫಲಗಳನ್ನು ಹುಡುಕುತ್ತ ಹೋದ್ದರಿಂದ ಬೇಗೆ ಬರಲು ಸಾಧ್ಯವಾಗಲಿಲ್ಲ. ಅಣ್ಣ–ಅತ್ತಿಗೆಯವರು ಹಸಿದಿರುವರೆಂದು ಆತುರದಿಂದ ಅವರಿದ್ದೆಡೆಗೆ ನುಗ್ಗಿದ. ಆ

ಸಮಯದಲ್ಲಿ ಸೀತಾರಾಮರು ತಳಿರ ಸೆಜ್ಜೆಯಲ್ಲಿ ಮಧುಚುಂಬನ ಸವಿಬಂಧನಗಳ ಆನಂದದಲ್ಲಿ ಮೈಮರೆತಿದ್ದರು. ಲಕ್ಷ್ಮಣನು ಅಣ್ಣ-ಅತ್ತಿಗೆಯ ಈ ಏಕಾಂತ ದೃಶ್ಯವನ್ನು ಕಂಡು ತಾನು ಮಹಾಪಾಪವನ್ನೆಸಗಿದೆನಲ್ಲ ಎಂಬ ಚಿಂತೆಯಲ್ಲಿ ದಂಡನೆಯಾಗಬೇಕೆಂದು ಅಗ್ನಿಪ್ರವೇಶ ಮಾಡಲು ಅಣಿ ಮಾಡಿಕೊಂಡ.

ಸೀತಾರಾಮರು ಸರಸವಾಡುತ್ತಿದ್ದು ದೇವಾಸಿಬೆಟ್ಟದ ಮೇಲೆ ನಿಂತು ಇತ್ತ ತಿರುಗಿ ನೋಡಿದಾಗ ಲಕ್ಷ್ಮಣನು ಕೆನ್ನಾಲಿಗೆಯನ್ನು ಮುಗಿಲಿಗೆ ಚಾಚಿರುವ ಅಗ್ನಿಕೊಂಡವನ್ನು ಪ್ರದಕ್ಷಿಣೆ ಬರುತ್ತಿರುವುದನ್ನು ಕಂಡರು. ರಾಮನಿಗೆ ಲಕ್ಷ್ಮಣನ ಮನಃಸ್ಥಿತಿ ಅರ್ಥವಾಯಿತು. ಆಗ ಅವನು ತಾನು ನಿಂತಿದ್ದ ಬಂಡೆಯನ್ನು ಬಾಣದಿಂದ ತಿವಿದನು. ಅವನು ತಿವಿದ ಸ್ಥಳದಿಂದ ನೀರು ಹೊರಚಿಮ್ಮಿ ಪ್ರವಾಹವಾಗಿ ಭೋರ್ಗರೆಯುತ್ತ ರಭಸದಿಂದ ಹರಿದು ಬಂದು ಲಕ್ಷ್ಮಣನ ಮುಂದಿದ್ದ ಅಗ್ನಿಕೊಂಡವನ್ನು ಆರಿಸಿತು. ಈ ಜಲದ ಸ್ಪರ್ಶ ಮಾತ್ರದಿಂದಲೆ ಲಕ್ಷ್ಮಣ ಪಾಪಮುಕ್ತನಾದ. ಲಕ್ಷ್ಮಣನಿಗಾಗಿ ಉದ್ಭವಿಸಿದ ಈ ತೀರ್ಥಕ್ಕೆ ಲಕ್ಷ್ಮಣತೀರ್ಥ ಎಂದು ಹೆಸರಾಯಿತು. ಇಲ್ಲಿ ಶ್ರೀರಾಮೇಶ್ವರದೇವಾಲಯವಿದ್ದು ಇದು ಕೇರಳ ಶೈಲಿಯ ದೇವಾಲಯವಾಗಿದೆ.

ಲಕ್ಷ್ಮಣತೀರ್ಥ-೨

ವೀರರಾಜಪೇಟೆ ತಾಲ್ಲೂಕಿನಲ್ಲಿರುವ ಇರ್ಪು ಎಂಬ ತೀರ್ಥಕ್ಷೇತ್ರದಲ್ಲಿ ಶ್ರೀರಾಮೇಶ್ವರ ದೇವಾಲಯವಿದೆ. ಮಡಿಕೇರಿಯಿಂದ ೮೫ ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರಕ್ಕೆ ಮಡಿಕೇರಿಯಿಂದ ಬರುವವರು ಮೂರ್ನಾಡು, ವೀರಾಜಪೇಟೆ, ಗೋಣಿಕೊಪ್ಪ, ಶ್ರೀಮಂಗಲದ ಮೂಲಕ ಬರಬಹುದು. ಮೈಸೂರಿನಿಂದ ಬರುವವರು ಹುಣಸೂರು, ಪಂಚವಳ್ಳಿ, ಗೋಣಿಕೊಪ್ಪದ ಮೂಲಕ ಬರಬಹುದು. ಇಲ್ಲಿರುವ ರಾಮೇಶ್ವರ ದೇವಾಲಯ ಕೇರಳೀಯರ ವಾಸ್ತುಶಿಲ್ಪದೊಂದಿಗೆ ವೃತ್ತಾಕಾರದ ಗರ್ಭಗುಡಿಯನ್ನು ಹೊಂದಿ ಬಲು ಸೊಗಸಾಗಿ ನಿರ್ಮಿಸಲ್ಪಟ್ಟಿದೆ.

ಈ ಸ್ಥಳಕ್ಕೆ 'ಇರ್ಪು' ಎಂಬ ಹೆಸರು ಹೇಗೆ ಬಂತೆಂಬುದನ್ನು ಬಿ.ಎಂ.ಲವಕುಮಾರ್ ಅವರು ವಿವೇಚಿಸಿದ್ದಾರೆ (ಪ್ರಜಾ ಸಾಪ್ತಾಹಿಕ. ಕನ್ನಡಿಗರ ಪ್ರಜಾನುಡಿ ೨೮ ಅಕ್ಟೋಬರ್ ೨೦೧೨. ಪು.೦೪) ಅವರು ಕಂಡುಕೊಂಡ ನಿಷ್ಪತ್ತಿಗೆ ಒಂದು ಕಥೆಯನ್ನೂ ಹೇಳಿದ್ದಾರೆ.

ಸೀತಾನ್ವೇಷಣ ಕಾರ್ಯದಲ್ಲಿದ್ದ ರಾಮಲಕ್ಷ್ಮಣರು ಬ್ರಹ್ಮಗಿರಿ ತಪ್ಪಲಿಗೆ ಬಂದರು. ಬ್ರಹ್ಮಗಿರಿ ದಾಟಿದರೆ ಕೇರಳಸೀಮೆ. ಎಲ್ಲರೂ ಬೆಟ್ಟಗುಡ್ಡಗಳನ್ನು ಹತ್ತಿ ಮುನ್ನಡೆಯುತ್ತಿರುವಾಗ ಲಕ್ಷ್ಮಣನು ಇದ್ದಕ್ಕಿದ್ದಂತೆ ಸಿಡುಕಿನಿಂದ ಮುಂದಕ್ಕೆ

ಹೆಜ್ಜೆಯಿಡದೆ 'ಇರಿಕ್ಕನ್' ಎಂದು ಹೇಳಿ ಕುಳಿತುಕೊಂಡುಬಿಟ್ಟನಂತೆ. ('ಇರಿಕ್ಕನ್' ಎಂದರೆ ಮಲೆಯಾಳಂ ಭಾಷೆಯಲ್ಲಿ ಕುಳಿತುಕೊಳ್ಳುವುದು ಎಂದರ್ಥ). ಸ್ವಲ್ಪ ಕಾಲ ಕಳೆದ ಮೇಲೆ ಸಮಾಧಾನಚಿತ್ತದಿಂದ ತನ್ನ ವರ್ತನೆಗೆ ತಾನೇ ನಾಚಿ ಅಣ್ಣ ಶ್ರೀರಾಮನ ಮನಸ್ಸನ್ನು ನೋಯಿಸಿದ್ದಕ್ಕಾಗಿ ಅಗ್ನಿಕುಂಡ ನಿರ್ಮಿಸಿ ಅದರಲ್ಲಿ ಆತ್ಮಾಹುತಿ ಮಾಡಿಕೊಳ್ಳಲು ನಿರ್ಧರಿಸಿದನಂತೆ.

ತಮ್ಮನ ಸನ್ನಡತೆಯನ್ನು ಕಂಡ ಶ್ರೀರಾಮನು ಅವನ ತಪ್ಪನ್ನು ಕ್ಷಮಿಸಿ ಸಮಾಧಾನಪಡಿಸಿದನು. ಅಣ್ಣನ ಕ್ಷಮಾಗುಣದಿಂದ ಸಂತೃಪ್ತನಾದ ಲಕ್ಷ್ಮಣನು ತಾನು ಸೃಷ್ಟಿಸಿದ್ದ ಅಗ್ನಿಕುಂಡವನ್ನು ಆರಿಸಲು ಬಂಡೆಯೊಂದಕ್ಕೆ ಬಾಣವನ್ನು ಹೊಡೆದನಂತೆ. ಆ ಬಾಣದ ಏಟಿಗೆ ಬಂಡೆ ಸೀಳಿ ಅದರ ಗರ್ಭದಿಂದ ಜಲಧಾರೆ ಹೊರಹೊಮ್ಮಿ ಅಗ್ನಿಕುಂಡವನ್ನು ಆರಿಸಿತಂತೆ.

ಲಕ್ಷ್ಮಣನ ಬಾಣದಿಂದ ಈ ರೀತಿಯಾಗಿ ಹೊಮ್ಮಿದ ಜಲಧಾರೆಯನ್ನು ಲಕ್ಷ್ಮಣನ ಹೆಸರಿನಲ್ಲಿ ಲಕ್ಷ್ಮಣತೀರ್ಥ ಎಂದು ಕರೆದರಂತೆ. ಆ ಜಲವನ್ನು ಎಲ್ಲರೂ ಕುಡಿದು ಸಂತುಷ್ಟರಾದರಂತೆ. ಹೀಗೆ ಎಲ್ಲರ ಸಂತೃಪ್ತಿಗೆ ಕಾರಣವಾದ ಲಕ್ಷ್ಮಣತೀರ್ಥ ಪವಿತ್ರ ನದಿಯಾಗಿ ಉಳಿದಿದೆ.

ಲಕ್ಷ್ಮಣತೀರ್ಥ–೩

ದಕ್ಷಿಣ ಕೊಡಗಿನ ಶ್ರೀಮಂಗಲದಲ್ಲಿ ಇರ್ಪು ಎಂಬ ಗ್ರಾಮವಿದೆ. ಇಲ್ಲಿರುವ ಖ್ಯಾತ ಶ್ರೀರಾಮೇಶ್ವರದೇವಾಲಯವೇ ಇರುಪು ದೇವಾಲಯ.

ಕೊಡಗಿನ ದಟ್ಟಡವಿಯಲ್ಲಿ ಸೀತಾರಾಮಲಕ್ಷ್ಮಣರು ಬರುವಾಗ ರಾಮನಿಗೆ ಅತೀವ ಬಾಯಾರಿಕೆಯಾಯಿತು. ಆ ಕೂಡಲೆ ಅವನು ಸೋದರ ಲಕ್ಷ್ಮಣನಿಗೆ ನೀರು ತರಲು ಹೇಳಿದನು. ಆದರೆ ಆ ದಟ್ಟಡವಿಯಲ್ಲೆಲ್ಲೂ ನೀರಿರುವ ಲಕ್ಷಣ ಲಕ್ಷ್ಮಣನಿಗೆ ಕಾಣಲಿಲ್ಲ. ಆಗ ಲಕ್ಷ್ಮಣನು ತನ್ನ ಬಿಲ್ಲಿಗೆ ಬಾಣ ಏರಿಸಿ ದಕ್ಷಿಣ ಬ್ರಹ್ಮಗಿರಿಯ ದೇವಾಸಿಬೆಟ್ಟದ ಮುನಿಕಾಡು ಎಂಬ ಸ್ಥಳಕ್ಕೆ ಸರಿಯಾಗಿ ಹೊಡೆದನು. ಬಾಣ ಬಿದ್ದ ಸ್ಥಳದಲ್ಲಿ ಬೆಟ್ಟ ಬಗೆದಂತಾಗಿ ಜಲ ಪ್ರವಹಿಸಿತು. ಆ ಜಲದಿಂದ ಅಣ್ಣನ ಬಾಯಾರಿಕೆಯನ್ನು ತಣಿಸಿದನು. ಈ ರೀತಿ ಲಕ್ಷ್ಮಣನಿಂದ ಸೃಷ್ಟಿಯಾದ ಪ್ರವಾಹಕ್ಕೆ 'ಲಕ್ಷ್ಮಣತೀರ್ಥ' ಎಂಬ ಹೆಸರು ಪ್ರಸಿದ್ಧಿಯಾಯಿತು. ೧೭೦ ಅಡಿ ಎತ್ತರದಿಂದ ಧುಮ್ಮಿಕ್ಕುವ ಜಲಧಾರೆಯ ಸೊಬಗು ಸವಿಯ ಬಂದವರಿಗೆ ಇರುಪು ಕ್ಷೇತ್ರ ಪೂಜ್ಯಭಾವನೆಯನ್ನು ಮೂಡಿಸುತ್ತದೆ.

ಅಮ್ಮತಿ

ಅಮ್ಮತ್ತಿ ದಕ್ಷಿಣ ಕೊಡಗು ವೀರಾಜಪೇಟೆ ತಾಲ್ಲೂಕಿನ ಒಂದು ಗ್ರಾಮ. ಈ ಗ್ರಾಮದ ಹೆಸರು ಕೊಡಗು ಮತ್ತು ಸಂಸ್ಕೃತ ಪದಗಳ ಸಮ್ಮಿಶ್ರದಿಂದ ಕೂಡಿರುವಂತಿದೆ. ಕೊಡಗು ಭಾಷೆಯಲ್ಲಿ 'ಅಮ್ಮ' ಎಂದರೆ ಗೊತ್ತಿಲ್ಲ ಎಂದರ್ಥವಂತೆ; ಮತಿ ಎಂದರೆ ಸಂಸ್ಕೃತ ಭಾಷೆಯಲ್ಲಿ ತಿಳಿವಳಿಕೆ ಅಥವಾ ಬುದ್ಧಿ ಎಂದು ಅರ್ಥವಂತೆ. ಹೀಗಾಗಿ 'ಅಮ್ಮತ್ತಿ' ಎಂದರೆ 'ಮತಿ' ಎಂದರೆ ಏನೆಂಬುದು 'ಅಮ್ಮ' 'ಗೊತ್ತಿಲ್ಲ' ಎಂದರ್ಥವಂತೆ. ಈ ಅರ್ಥದಲ್ಲಿ ಅಮ್ಮತ್ತಿಗೆ ರಾಮಾಯಣದ ಕತೆಯ ಸಂಬಂಧವಿರುವ ಒಂದು ಸನ್ನಿವೇಶ ಹೀಗಿದೆ –

ಅರಣ್ಯವಾಸದಲ್ಲಿದ್ದ ಶ್ರೀರಾಮನಿಗೆ ಅಯೋಧ್ಯೆಯಲ್ಲಿ ತಂದೆ ದಶರಥನು ತೀರಿಕೊಂಡನೆಂಬ ವಿಷಯ ತಿಳಿಯಿತು. ತಂದೆಯ ನಿಧನದ ವಾರ್ತೆ ಶ್ರೀರಾಮನಿಗೆ ಆಘಾತವನ್ನುಂಟುಮಾಡಿತು. ಅವನು ಅತೀವ ದುಃಖದಿಂದ ಪ್ರಲಾಪಿಸುತ್ತಿರುವಾಗ ಸುತ್ತಮುತ್ತಲ ಊರುಗಳ ಜನರೆಲ್ಲ ಬಂದು ರಾಮ ಲಕ್ಷ್ಮಣ ಸೀತೆಯರನ್ನು ಸಮಾಧಾನಪಡಿಸಿ ದಶರಥನ ತಿಥಿ ವಿಧಿಗಳ ವಿಚಾರದಲ್ಲಿ ಮತಿ ತೋರಿದರಂತೆ.

ಕೆಲವು ಕೊಡವರಿಗೆ 'ಮತಿ' ಎಂದರೇನೆಂಬುದು ತಿಳಿದಿರಲಿಲ್ಲ. ಅದಕ್ಕವರು ಅಲ್ಲಿ ಕಂಡಕಂಡವರನ್ನೆಲ್ಲ 'ಮತಿ ಎಂದರೇನು?' 'ಮತಿ ಎಂದರೇನು?' ಎಂದು ಮತ್ತೆ ಮತ್ತೆ ಕೇಳುತ್ತಿದ್ದರು. ಅದು ಬಹಳಷ್ಟು ಜನರಿಗೆ ತಿಳಿದಿಲ್ಲದೆ ಇದ್ದುದರಿಂದ ಗೊತ್ತಿಲ್ಲ ಎಂಬರ್ಥದ 'ಅಮ್ಮ!' 'ಅಮ್ಮ!' ಎನ್ನುತ್ತಿದ್ದರಂತೆ.

ಹೀಗಾಗಿ ಈ ಸುತ್ತಿನ ಜನರಿಗೆಲ್ಲ 'ಮತಿ' ಎಂಬ ಪದವೇ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಆದ್ದರಿಂದ ಅವರೆಲ್ಲ ಅಲ್ಲಿಗೆ ಬಂದ ಶ್ರೀರಾಮನನ್ನೇ ಆ ಬಗ್ಗೆ ಕೇಳಿದಾಗ ರಾಮನಿಗೆ ಆಶ್ಚರ್ಯವಾಯಿತು. ಅವನು ಹಾಸ್ಯಕ್ಕಾಗಿ 'ಅಮ್ಮ ಮತಿ' ಎಂದನು. ಅಂದರೆ ಈ ಜನರಿಗೆ ತಿಳುವಳಿಕೆ ಇಲ್ಲ ಎಂದು. ಆದರೆ ಹಾಗೆಂದ ಮಾತೆ ಆ ಸ್ಥಳಕ್ಕೂ ಹೆಸರಾಗಿ ಉಳಿದುಬಿಟ್ಟಿತಂತೆ.

ತಿತ್ತಿಮತ್ತಿ

ಕೊಡಗು ಜಿಲ್ಲೆಯ ವೀರರಾಜಪೇಟೆ ತಾಲ್ಲೂಕಿನಲ್ಲಿರುವ ತಿತ್ತಿಮತ್ತಿಯು ರಾಮಾಯಣದ ಕಥಾರೇಖೆಯಿಂದ ಅಲಂಕೃತವಾಗಿದೆ.

ಸೀತಾರಾಮ ಲಕ್ಷ್ಮಣರು ಈ ಪ್ರದೇಶಕ್ಕೆ ಬಂದಾಗ ದಶರಥ ಮಹಾರಾಜನು ಕಾಲವಶನಾದನೆಂಬ ಸುದ್ದಿ ಬಂತು. ಆಗ ರಾಮಲಕ್ಷ್ಮಣ ಸೀತೆಯರು ಬಹುವಾಗಿ

ದುಃಖಿಸುತ್ತಿದ್ದರು. ಅವರ ದುಃಖವನ್ನು ಕಂಡ ಕೊಡವರು, ಅವರನ್ನು ಸಮಾಧಾನ ಪಡಿಸಿ ದಶರಥ ಮಹಾರಾಜನಿಗೆ ತಿಥಿ ಮಾಡಿ ಸ್ವರ್ಗ ಸೇರಿಸಲು ಸೂಚಿಸಿದರು.

ಆದರೆ ತಿಥಿ ಮಾಡುವ ಕ್ರಮ ಶ್ರೀರಾಮನಿಗೆ ತಿಳಿದಿರಲಿಲ್ಲ. ಆಗ ಕೊಡವರು ತಿಥಿ ಮಾಡುವ ಮತಿ(ತಿಳಿವಳಿಕೆ)ಯನ್ನು ಹೇಳಿದರು. ಆದ್ದರಿಂದ ಆ ಸ್ಥಳಕ್ಕೆ 'ತಿಥಿಮತಿ' ಎಂದು ಹೆಸರಾಯಿತು. ಈಗ ಅದು ತಿತ್ತಿಮತ್ತಿಯೆಂದು ಹೇಳಲಾಗುತ್ತದೆ.

ಮರೂರು

ಕೊಡಗು ಜಿಲ್ಲೆಯ ಅನೇಕ ಗ್ರಾಮಗಳಿಗೆ ರಾಮಾಯಣದ ಸಂಬಂಧವನ್ನು ಹೇಳಲಾಗಿದೆ. ವೀರಾಜಪೇಟೆ ತಾಲ್ಲೂಕಿನ ಮರೂರಿಗೆ ಇಂಥದೊಂದು ಪುರಾಣ ಕಥೆಯಿದೆ.

ಶ್ರೀರಾಮರು ವನವಾಸವಿದ್ದ ಸಂದರ್ಭದಲ್ಲಿ ದಶರಥ ಮಹಾರಾಜನು ತೀರಿಕೊಂಡ ಸುದ್ದಿ ಬಂತು. ಇದರಿಂದ ಶ್ರೀರಾಮಸೀತಾ ಲಕ್ಷ್ಮಣರು ಅತಿಯಾಗಿ ದುಃಖಿಸಿದರು. ಕೊಡವರು ಅವರನ್ನು ಸಮಾಧಾನಪಡಿಸಿ ತಿಥಿ ಮಾಡಲು ಮತಿ ತೋರಿಸಿವರು. ಆಗ ತಿಥಿ ಮಾಡಲು ಬೇಕಾದ ವಸ್ತುಗಳನ್ನು ಸಂಗ್ರಹಿಸುತ್ತಿದ್ದ ಲಕ್ಷ್ಮಣನು ಬಿದಿರು ಮೆಳೆಗಳಿಂದ ಸಂಗ್ರಹಿಸಿದ ಬಿದಿರಕ್ಕಿ ಮೂಟೆಯನ್ನು ಕಾಡಿನಲ್ಲೇ ಮರೆತು ಬಂದ. ಅವನಿಗೆ ಅಕ್ಕಿ ಮೂಟೆಯ ನೆನಪಾಗಿ ಅದನ್ನು ತರಲು ಹಿಂದಕ್ಕೆ ಹೋದರೆ ಕಾಲ ಮೀರುತ್ತದೆ ಎಂದು ಭಾವಿಸಿದ. ಇದರಿಂದಾಗಿ ಇದ್ದಷ್ಟು ಅಕ್ಕಿಯಲ್ಲೇ ಅಡಿಗೆ ಮಾಡಿ ತಿಥಿ ಕಾರ್ಯ ಮುಗಿಸಿದರು.

ಅನಂತರ ಸ್ವಲ್ಪ ದಿನಗಳು ಕಳೆದ ಮೇಲೆ ಬಿದಿರಕ್ಕಿಯನ್ನು ಮರೆತು ಬಂದಿದ್ದ ಸ್ಥಳಕ್ಕೆ ಹಿಂದಿರುಗಿ ಆ ಅಕ್ಕಿ ಮುಗಿಯುವವರೆಗೂ ಅಲ್ಲೇ ಕೆಲವು ಕಾಲ ವಾಸವಾಗಿದ್ದರು. ಅವರು ತಂಗಿದ್ದ ಸ್ಥಳ ಲಕ್ಷ್ಮಣ ಬಿದಿರಕ್ಕಿಯನ್ನು ಮರೆತು ಬಂದಿದ್ದ ಸ್ಥಳವಾದ್ದರಿಂದ ಶ್ರೀರಾಮರು ಹಾಸ್ಯಕ್ಕಾಗಿ ಈ ಸ್ಥಳ ಮರೆತು ಬಂದಿದ್ದ ಊರು 'ಮರೂರು' ಎಂದು ಕರೆದ. ಹೀಗೆ ಹೇಳಿದ ಹೆಸರೇ ಆ ಸ್ಥಳಕ್ಕೆ ಮರೂರು ಎಂಬ ಗ್ರಾಮನಾಮವಾಯಿತು.

ಕೂಡಿಗೆ – ಕೂಡುಮಂಗಳೂರು

ಕೊಡಗು ಜಿಲ್ಲೆಯ ಅನೇಕ ಗ್ರಾಮಗಳಿಗೆ ರಾಮಾಯಣದ ಘಟನಾವಳಿಗಳು ಸೇರಿಕೊಂಡಿವೆ. ಸೋಮವಾರಪೇಟೆ ತಾಲ್ಲೂಕಿನ ಕೂಡಿಗೆ ಗ್ರಾಮ ಮತ್ತು

ಕೂಡುಮಂಗಳೂರುಗಳಿಗೆ ಈ ಹೆಸರುಗಳು ಬಂದುದನ್ನು ಕುರಿತು ಕೂಡಿಗೆ ರಾಚಪ್ಪಣ್ಣ ಹೀಗೆ ಹೇಳುತ್ತಾರೆ.

ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ಬಂದಿದ್ದ ಶ್ರೀರಾಮರು ಒಂದು ದಿನ ಸೀತೆಯೊಡನೆ ಜಲಕ್ರೀಡೆಯಾಡಲು ಬಯಸಿದರು. ಅದು ಬೇಸಿಗೆ ಕಾಲವಾಗಿದ್ದರಿಂದ ಕಾವೇರಿ ನದಿಯು ತೆಳ್ಳಗೆ ಹರಿಯುತ್ತಿತ್ತು. ಈ ನೀರು ತಮ್ಮ ಜಲಕ್ರೀಡೆಗೆ ಸಾಲದು ಎಂದು ಭಾವಿಸಿದ ಶ್ರೀರಾಮರು ಪಕ್ಕದಲ್ಲೇ ಹರಿಯುತ್ತಿದ್ದ ಹಾರಂಗಿ ನದಿಯನ್ನು "ಹಾರಂಗಿ ಕಾವೇರಿಯೊಡನೆ ಕೂಡುಗೆ!" ಎಂದು ಹೇಳಿ ಕಲ್ಲುಮಣ್ಣುಗಳನ್ನೆಲ್ಲ ಗೋರಿ ದಡಕ್ಕೆಸೆದು ಎರಡೂ ನದಿಗಳು ಕೂಡಿಕೊಳ್ಳುವಂತೆ ಮಾಡಿದನಂತೆ. ಎರಡೂ ನದಿಗಳು ಸೇರಿ ಸರಾಗವಾಗಿ ಹರಿದು ಸೀತಾರಾಮರ ಸ್ನಾನಕ್ಕೆ ಅನುಕೂಲವಾಯಿತಂತೆ. ಈ ಎರಡು ನದಿಗಳು ಕೂಡುವ ಸ್ಥಳವನ್ನು ಮಂಗಳಕರ ಸ್ಥಳವೆಂದು ಪರಿಗಣಿಸಿ ಆ ಊರಿಗೆ 'ಕೂಡು ಮಂಗಳೂರು' ಎಂದು ನದಿಗಳು ಕೂಡಿರುವ ಈ ಪುಣ್ಯಸ್ಥಳದ ಸಮೀಪದಲ್ಲಿರುವ ಊರಿಗೆ 'ಕೂಡಿಗೆ' ಎಂದು ಕರೆದರು. ಶ್ರೀರಾಮರು ಕೆಲವು ದಿನಗಳ ಕಾಲ ತಂಗಿದ್ದ ಕಣಿವೆ 'ರಾಮಸ್ವಾಮಿ ಕಣಿವೆ' ಎಂಬ ಹೆಸರಿನಲ್ಲಿ ಈ ಸಮೀಪದಲ್ಲೇ ಇದೆ.

ಸುಣ್ಕುಮಾರನ ಬೆಟ್ಟ

ಕೊಡಗಿನ ಕುಶಾಲನಗರದ ಪಕ್ಕದಲ್ಲಿರುವ ಕೂಡಿಗೆಯ ಹತ್ತಿರ ಒಂದು ಬೆಟ್ಟವಿದೆ. ಇದನ್ನು ಸುಣ್ಕುಮಾರನಬೆಟ್ಟ ಎಂದು ಕರೆಯುತ್ತಾರೆ. ಈ ಬೆಟ್ಟದಲ್ಲಿ ವರ್ಷಂಪ್ರತಿ ಸುಣ್ಕುಮಾರನ ಜಾತ್ರೆ ನಡೆಯುತ್ತದೆ. ಈ ಬೆಟ್ಟ ಸುಣ್ಕುಮಾರನು (ಶಂಬೂಕ) ತಪಸ್ಸು ಮಾಡಿದ ಸ್ಥಳವೆಂದು ಹೇಳುತ್ತಾರೆ. ಸುಣ್ಕುಮಾರನು ಶೂರ್ಪನಖಿಯ ಮಗನಾದ ಶಂಬೂಕನೇ ಹೌದೆಂದು ತಿಳಿಯಲಾಗಿದೆ.

ಪಾತಾಳಲೋಕದ ಭೇತಾಳಪುರವನ್ನು ಆಳುತ್ತಿದ್ದ ಅರಸ ಹಲ್ಲೂರ. ಹಲ್ಲೂರನಿಗೆ ರಾವಣನ ತಂಗಿಯಾದ ಶೂರ್ಪನಖಿಯನ್ನು ಕೊಟ್ಟು ಮದುವೆಯಾಗಿತ್ತು. ಅವರಿಗೆ ಸುಣ್ಕುಮಾರನೆಂಬ ಮಗನಿದ್ದ.

ರಾವಣನಾದರೋ ಲೋಕಲೋಕಗಳನ್ನೆಲ್ಲ ಜಯಿಸಿ ದೇವಾಧಿ ದೇವತೆಗಳಿಂದಲೂ ಆರಾಧಿಸಿಕೊಳ್ಳುತ್ತಿದ್ದ. ಸುರಾಸುರರೆಲ್ಲರೂ ರಾವಣನ ಪಾದಗಳಿಗೆ ಪೂಜೆ ಸಲ್ಲಿಸುತ್ತಿರುವಾಗ ಪಾತಾಳಲೋಕದ ಹಲ್ಲೂರ ರಾವಣನ ಪಾದಪೂಜೆಯನ್ನು ಧಿಕ್ಕರಿಸಿದ. ಇದರಿಂದ ರಾವಣನಿಗೆ ಭಯಂಕರ ಕೋಪವೇ ಬಂತು. ಅವನು ಬುಸುಗುಡುತ್ತ ತನ್ನ ಪಾದಕ್ಕೆ ಬೀಳುವಂತೆ ಹಲ್ಲೂರನಿರುವೆಡೆಗೆ ಬಂದು ಘರ್ಜಿಸಿದ. ತನ್ನ ಪಾದವನ್ನು ಹಲ್ಲೂರನ ಶಿರದ ಮೇಲಿಡಲು ಬಂದ. ಆಗ

ಹಲ್ಲೂರನಿಗೂ ರಾವಣನಿಗೂ ಘೋರ ಕಾಳಗ ನಡೆಯಿತು. ಕಾಳಗದಲ್ಲಿ ರಾವಣ ಹಲ್ಲೂರನನ್ನು ನಿರ್ದಯಿಯಾಗಿ ಕೊಂದ. ತನ್ನ ತಂಗಿಯನ್ನೇ ವಿಧವೆಯಾಗುವಂತೆ ಮಾಡಿದ.

ಶೂರ್ಪನಖಿ ಶೋಕಭರಿತಳಾಗಿ ತಲೆತಲೆ ಚಚ್ಚಿಕೊಂಡಳು. ದುಃಖಾತಿರೇಕದಿಂದ–

"ಅಣ್ಣ ಅಣ್ಣಾ ಅಂದೆನಲ್ಲ. ನನ್ನ ಬಾಯಿಗೆ ಮಣ್ಣು ಹಾಕಿದೆಯಲ್ಲ. ನನ್ನ ಗಂಡನ ಕೊಂದು ನನ್ನ ಮುಂಡೆ ಮಾಡಿದೆಯಲ್ಲೊ" ಎಂದು ಬಗೆಬಗೆಯಾಗಿ ಶಪಿಸಿದಳು. ಮಗ ಸುಣ್ಣುಮಾರನನ್ನು ತಬ್ಬಿಕೊಂಡು ಗೋಳಾಡಿದಳು. ಅವಳು ಪ್ರತೀಕಾರದ ಪ್ರೇತವಾಗಿ ನಿಂತಳು. ತಬ್ಬಲಿಯಾದ ಸುಣ್ಣುಮಾರನೇ ತನ್ನ ತಂದೆಯನ್ನು ಕೊಂದವನ ಮೇಲೆ ಸೇಡನ್ನು ತೀರಿಸಿಕೊಳ್ಳುವಂತೆ ಅವನೆದೆಯಲ್ಲಿ ದ್ವೇಷದ ಬೆಂಕಿಯನ್ನು ಊದಿದಳು. ದೇವೇಂದ್ರನನ್ನು ಕುರಿತು ತಪಸ್ಸು ಮಾಡಿ ಚಂದ್ರಾಯುಧವನ್ನು ಪಡೆದು ರಾವಣನನ್ನು ಸಿಗಿದುಹಾಕುವಂತೆ ಪ್ರೇರೇಪಿಸಿದಳು. ತಂದೆಯ ಸಾವಿನಿಂದ ನೊಂದಿದ್ದ ತಾಯಿಯ ದುಃಖದಿಂದ ಬೆಂದಿದ್ದ ಸುಣ್ಣುಮಾರ–

'ಅವ್ವಾ, ನೀನಳಬ್ಯಾಡ, ಸಮಾಧಾನ ಮಾಡಿಕೋ. ನಿನಗೆ ಭಾಷೆ ಕೊಡ್ತಾ ಇವ್ನಿ. ನಿನ್ನಾಸೆ ಈಡೇರಿಸುವ ಭಾರ ನನ್ನದು. ಹಾಗೆ ಮಾಡದಿದ್ದಲ್ಲಿ ನಾನು ನಿನ್ನ ಮಗ ಹೇಗಾದೇನು ತಾಯಿ' ಎಂದು ಭರವಸೆಯ ಮಾತುಗಳನ್ನಾಡಿದನು.

ಸುಣ್ಣುಮಾರನು ತನ್ನ ತಾಯಿಯ ಅಪೇಕ್ಷೆಯನ್ನು ಈಡೇರಿಸಲು ಜೇನುಕಲ್ಲು ಬೆಟ್ಟದ ಆನೆಕಲ್ಲಿನ ಒತ್ತಿನಲ್ಲಿ ಘೋರ ತಪಸ್ಸಿಗೆ ನಿಂತ. ಮಳೆ ಬಿಸಿಲು ಚಳಿಗಾಳಿ ಒಂದನ್ನೂ ಲೆಕ್ಕಿಸದೆ ನಿಂತ ಸುಣ್ಣುಮಾರನನ್ನು ಮೂಗುಹುತ್ತ ಸುತ್ತ ಬೆಳೆದು ರಕ್ಷಣೆ ಕೊಟ್ಟಿತು.

ಇತ್ತ ಪಿತೃವಾಕ್ಯ ಪರಿಪಾಲನೆಗಾಗಿ ವನವಾಸವನ್ನು ಕೈಗೊಂಡಿದ್ದ ರಾಮಲಕ್ಷ್ಮಣ ಸೀತೆಯರು ದಂಡಕಾರಣ್ಯ ಮಾರ್ಗದಲ್ಲಿ ಜೇನುಕಲ್ಲು ಬೆಟ್ಟದ ಬಳಿ ನೆಲೆಗೊಂಡಿದ್ದರು. ಲಕ್ಷ್ಮಣನು ಕಂದಮೂಲ ಫಲಗಳನ್ನು ಹುಡುಕುತ್ತ ಸುಣ್ಣುಮಾರ ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದನು. ಅಲ್ಲಿರುವ ಮೂಗುಹುತ್ತವನ್ನು ನೋಡಿದ ಆ ಹುತ್ತ ನೇರಿಳೆಮರದ ಕೆಳಗಿತ್ತು. ಆ ನೇರಿಳೆ ಮರವೋ ಎಲೆಗೊಂದು ಎನ್ನುವಂತೆ ಫಲ ಕಚ್ಚಿತ್ತು. ಲಕ್ಷ್ಮಣನು ಆ ನೇರಿಳೆ ಹಣ್ಣುಗಳನ್ನು ಕಂಡು ಕೀಳಲೆಂದು ಮರವೇರಿದ. ಮೂಗುಹುತ್ತದ ನೇರಕ್ಕಿದ್ದ ಕೊಂಬೆಯಂತೂ ಫಲಫಲಾ ಎನ್ನುತ್ತಿತ್ತು. ಅವನು ಆ ಕೊಂಬೆಗೆ ಹೋದ.

ಹೀಗಿರುವಾಗ ಸುಣ್ಣುಮಾರನು ತಪಸ್ಸಿಗೆ ನಿಂತು ಹನ್ನೆರಡು ವರ್ಷಗಳಾಗಿದ್ದವು. ದೇವೇಂದ್ರ ಅವನ ತಪಸ್ಸಿಗೆ ಮೆಚ್ಚಿ ಮೇಲೋಕದಿಂದ

ಭೂಲೋಕಕ್ಕೆ ಚಂದ್ರಾಯುಧವನ್ನು ಕಳಿಸಿಕೊಟ್ಟ. ಚಂದ್ರಾಯುಧ ನೆಲಕ್ಕಿಳಿಯುವ ಹೊತ್ತಿನಲ್ಲಿ ಲಕ್ಷ್ಮಣ ಮೂಗುಹುತ್ತದ ನೇರಿನ ಕೊಂಬೆಯಲ್ಲಿದ್ದ. ಚಂದ್ರಾಯುಧ ಇಳಿದು ಬರುತ್ತಿರುವುದನ್ನು ಕಂಡು ಲಕ್ಷ್ಮಣನೂ ಕೈಒಡ್ಡಿದ; ಸುಣ್ಣುಮಾರನೂ ಕೈಯೊಡ್ಡಿ ನಿಂತು ತಪಸ್ಸು ಮಾಡುತ್ತಿದ್ದ. ಚಂದ್ರಾಯುಧಕ್ಕೆ ದಿಕ್ಕೇ ತೋಚದಂತಾಗಿ ತಾನು ಯಾರ ಕೈಸೇರಬೇಕೆಂದು ದೇವೇಂದ್ರನಲ್ಲಿಗೆ ಹೋಗಿ ಕೇಳಿತು. ದೇವೇಂದ್ರನೋ

'ಯಾರು ಮೊದಲು ಕೈಚಾಚುತ್ತಾರೋ ಅವರ ಕೈಗೆ ಹೋಗು!' ಎಂದನು. ಇದರಿಂದಾಗಿ ಚಂದ್ರಾಯುಧ ಲಕ್ಷ್ಮಣನ ಕೈಸೇರಿತು. ಅದರ ಹರಿತವನ್ನು ಪರೀಕ್ಷಿಸಲು ಬಯಸಿದ ಲಕ್ಷ್ಮಣ ಅರಿವಿಲ್ಲದೆ ಮೂಗುಹುತ್ತವನ್ನು ಕೊಚ್ಚಿದ. ಪಾಪ! ಹುತ್ತದೊಳಗಿದ್ದ ಸುಣ್ಣುಮಾರನ ಕತ್ತು ಕತ್ತರಿಸಿ ಕೆಳಗೆ ಬಿತ್ತು! ಈ ವಿಚಿತ್ರ ಸಂಗತಿಯನ್ನು ಕೇಳಿದ ರಾಮನೂ ಇದೆಲ್ಲ ರಾಕ್ಷಸರ ಮಾಯವಿರಬಹುದೆಂದು ಹೇಳಿ ಸುಮ್ಮನಾದ.

ತನ್ನ ಮಗನ ತಪಸ್ಸಿದ್ಧಿ ಈ ದಿನವೆಂದು ತಿಳಿದ ಶೂರ್ಪನಖಿಯು ಸಂಭ್ರಮದಿಂದ ಓಡೋಡಿ ಬಂದಳು. ತಾನು ಅಂದುಕೊಂಡಿದ್ದೇ ಒಂದು ; ಆದರೆ ಅಲ್ಲಿ ಕಂಡುದ್ದೆ ಬೇರೊಂದು. ಗಂಡನ ಸಾವಿನಿಂದಲೇ ಚೇತರಿಸಿಕೊಂಡಿರದಿದ್ದ ಅವಳನ್ನು ಮಗನ ಸಾವು ಅಪ್ಪಳಿಸಿತು. ಅವಳ ಆಸೆ–ಆಕಾಂಕ್ಷೆಗಳೆಲ್ಲವೂ ನುಚ್ಚುನುರಿಯಾಗಿ ಹೋಗಿದ್ದವು. ಲೋಹಿತಾಶ್ವನನ್ನು ಕಳೆದುಕೊಂಡ ಚಂದ್ರಮತಿಯ ದುಃಖಕ್ಕಿಂತ ಇವಳ ದುಃಖವೇನೂ ಕಡಿಮೆಯಲ್ಲ. ಇಬ್ಬರೂ ತಾಯಿಗಳೇ ತಾನೆ?

'ನನ್ನೆದೆ ಹಾಲು ಕುಡಿದು ಬೆಳೆದ್ಯಲೊ, ನನ್ನ ಅಗಲುಂಡು ಬೆಳೆದ್ಯಲ್ಲೊ' ಎಂದು ನೆನೆನೆನೆದುಕೊಳ್ಳುತ್ತಲೆ ಅವನ ಸಾವಿಗೆ ತಾನೇ ಪರೋಕ್ಷ ಕಾರಣವೇನೋ ಎಂದು–

'ನಿನ್ನಪ್ಪನ ತಿನ್ನ ಹಾಲು ಮುಂಡೆ ನಿನ್ನ ಬಾಳುಗೆಡ್ಸಿದ್ಮುಂಡೆಯಲ್ಲೊ' ಎಂದು ತನ್ನನ್ನು ಬೈದುಕೊಳ್ಳುತ್ತ ಮಗನ ಗುಣಗಾನ ಮಾಡುತ್ತ ಶೋಕಿಸುತ್ತಿರುವಾಗ ನೇರಿಳೆ ಕೊಂಬೆಯ ಮೇಲಿದ್ದ ಕಾಗೆಯೊಂದು 'ಸುಣ್ಣುಮಾರನನ್ನು ಕೊಂದವನು ಬೇರೆ ಯಾರೂ ಅಲ್ಲ. ಅವನು ರಾಮನ ತಮ್ಮ ಲಕ್ಷ್ಮಣ' ಎಂದು ತಿಳಿಸಿತು. ಆ ರಾಕ್ಷಕಾಗೆಯನ್ನು ಕುರಿತು ಶೂರ್ಪನಖಿ–

'ಎಲೋ ರಾಕ್ಷಕಾಗೆ ಆ ಲಕ್ಷ್ಮಣನನ್ನು ಕೊಕ್ಕಿನಲ್ಲಿ ಕುಕ್ಕಿ ಕುಕ್ಕಿ ಸಾಯಿಸು!' ಎಂದು ಕೇಳಿಕೊಂಡಳು. ಆ ರಾಕ್ಷಕಾಗೆ ಲಕ್ಷ್ಮಣನನ್ನು ಹುಡುಕುತ್ತ ಬಂದು ಸೀತೆಯನ್ನು ಕಂಡಿತು. ಅವಳನ್ನು ಕುಕ್ಕಲು ಬಂತು. ಇದನ್ನು ಕಂಡ ರಾಮಲಕ್ಷ್ಮಣರು ಅದನ್ನು ಓಡಿಸಲು ಬಂದರೆ ಅವರನ್ನೂ ಕುಕ್ಕಲು ಹೋಗಿ ಅವರ ಬಾಣಪ್ರಯೋಗಕ್ಕೆ ಹೆದರಿ ಶರಣಾಗಿ ಕ್ಷಮೆ ಕೇಳಿತು. ಆದರೆ ಸೀತೆಯ ವಿಚಾರವನ್ನು ಶೂರ್ಪನಖಿಗೆ ಈ ಕಾಗೆ ತಿಳಿಸಿತು. ಆಗ ಶೂರ್ಪನಖಿಯು

'ನನ್ನ ಮಗನಂತೂ ಸತ್ತನು. ನನ್ನ ಗಂಡನನ್ನು ಕೊಂದ ನನ್ನ ಅಣ್ಣನನ್ನು ನಾಶ ಮಾಡಲು ಇಂಥ ವೀರರೇ ಸಮರ್ಥರು' ಎಂದು ನಿರ್ಧರಿಸಿ ಸೀತೆಯ ಸೌಂದರ್ಯವನ್ನು ರಾವಣನ ಮುಂದೆ

'ಅಣ್ಣಯ್ಯ ಅಣ್ಯ ಕೇಳೊ
ನಿನ್ನ – ಪುಣ್ಯಕ್ಕೊಂದ್ಹೊಸ ಸುದ್ದಿ'

ಎಂದು ಸೀತೆಯ ರೂಪಲಾವಣ್ಯಗಳನ್ನೆಲ್ಲ ಹೊಗಳಿ 'ನಿನ್ನ ಷೋಕಿಗೆ ಅವ್ಳೆ ಸರಿ' ಎಂದು ಆಸೆ ಹುಟ್ಟಿಸಿದಳು. ರಾವಣ ಸೀತೆಗೆ ಆಸೆಪಟ್ಟ ; ಆಗಲೆ ಅವನು ಕೆಟ್ಟ. ಶೂರ್ಪನಖಿಯ ಪಾಲಿಗೆ ಸುಖವೆಂಬುದು ಸ್ವಪ್ನವಾಗಿಯೇ ಉಳಿಯಿತು. ಅವಳು ತನ್ನ ಅಂತ್ಯಕಾಲದವರೆಗೂ ಸುಣ್ಕುಮಾರನ ಬೆಟ್ಟದಲ್ಲೆ ಉಳಿದಿದ್ದಳೆಂದು ಹೇಳುತ್ತಾರೆ. ಸುಣ್ಕುಮಾರನ ಬೆಟ್ಟದಲ್ಲಿ ವರ್ಷಕ್ಕೊಂದಾವರ್ತಿ ಜಾತ್ರೆ ಉತ್ಸವಗಳು ನಡೆಯುತ್ತವೆ.

ಸೀತೆಕೊಳ

ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ತಾಲ್ಲೂಕಿನ ಕೋಗಿಲವಾಡಿಯಿಂದ ಮುಂದೆ ಹೋದರೆ ಕೊಡಗು ಜಿಲ್ಲೆಯ ಸೆರಗಿನಲ್ಲಿ ಮಾಕಲ್ಲಯ್ಯನ ಬೆಟ್ಟವಿದೆ. ಈ ಬೆಟ್ಟದಲ್ಲಿ ದಶರಥೇಶ್ವರನ ದೇವಾಲಯವಿದೆ. ದೇವಾಲಯದ ತುಸುದೂರದಲ್ಲಿ ಸೀತೆಯ ಕೊಳವಿದೆ. ಕೊಳದ ಸುತ್ತೆಲ್ಲ ನಮ್ಮ ಜನಪದರು ಹೇಳುವಂತೆ ಹೆಸರಿಲ್ಲದ ಮರಗಳು ಆವರಿಸಿಕೊಂಡಿವೆ. ಅಲ್ಲೇ ಸಮೀಪದಲ್ಲಿರುವ ಬಂಡೆಯ ಮೇಲೆ ಸೀತೆಯ ಸೆರಗಿನ ಗುರುತಿದೆ.

ಶ್ರೀರಾಮನು ಪತ್ನಿ ಸೀತೆ ಹಾಗೂ ಸೋದರ ಲಕ್ಷ್ಮಣನೊಡನೆ ವನವಾಸಕ್ಕೆಂದು ಬಂದಿದ್ದಾಗ ಈ ಬೆಟ್ಟದ ಮೇಲೆ ಸ್ವಲ್ಪ ಕಾಲ ತಂಗಿದ್ದನು. ಆ ಸಮಯದಲ್ಲಿ ದಶರಥನು ತೀರಿಕೊಂಡ ಸುದ್ದಿ ಬಂದಿತು. ಸಾವಿನ ಸುದ್ದಿಯಿಂದ ದುಃಖತಪ್ತರಾಗಿದ್ದ ಶ್ರೀರಾಮಸೀತಾಲಕ್ಷ್ಮಣರನ್ನು ಕೊಡವರು ಸಂತೈಸಿ ದಶರಥನ ತಿಥಿಗತಿಗಳಿಗೆ ಮಾರ್ಗದರ್ಶನ ಮಾಡಿ ಅಪರ ಕ್ರಿಯೆಗಳನ್ನು ನೆರವೇರಿಸಿದರು. ಜೊತೆಗೆ ದಶರಥನ ಸ್ಮರಣೆಗಾಗಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಒಂದು ಚಿಕ್ಕದೇವಾಲಯವನ್ನೂ ಕಟ್ಟಿದರು. ಶ್ರೀರಾಮನು ದಶರಥೇಶ್ವರ ಲಿಂಗವನ್ನು ಪ್ರತಿನಿತ್ಯವೂ ಪೂಜುತ್ತ ತನ್ನ ಪಿತೃಭಕ್ತಿಯನ್ನು ಮೆರೆಯುತ್ತ ಅಗಲಿಕೆಯ ದುಃಖವನ್ನು ಮರೆಯುತ್ತ ಬಂದನು.

ಹೀಗೆ ಬಹಳ ದಿನಗಳು ಕಳೆದವು. ಒಮ್ಮೆ ಲಕ್ಷ್ಮಣರು ಕಂದಮೂಲ ಫಲಗಳನ್ನು ತರಲು ಕುಟೀರದಿಂದ ಹೊರಹೊರಟನು. ಆ ಸಮಯದಲ್ಲಿ ಸೀತೆಯು ಸಮೀಪದಲ್ಲಿರುವ ಕೊಳದಲ್ಲಿ ಸ್ನಾನ ಮಾಡಲು ಹೋದಳು. ಸೀತಾಮಾತೆಯು

ಸುತ್ತಮುತ್ತ ಯಾರೂ ಇಲ್ಲವೆಂದು ನಿಸ್ಸಂಕೋಚವಾಗಿ ಸ್ನಾನ ಮಾಡುತ್ತಿರುವಾಗ ಕಂದಮೂಲಫಲಗಳನ್ನು ತರಲು ಹೋಗಿದ್ದ ಮೈದುನ ಲಕ್ಷ್ಮಣನು ಅದೇ ಮಾರ್ಗವಾಗಿ ಬರುತ್ತಿದ್ದನು. ಇದನ್ನು ಕಂಡ ಸೀತೆ ಹೌಹಾರಿದಳು. ಮೈದುನ ಮುಂದಕ್ಕೆ ಬರಬಾರದೆಂದು ಅವನಿಗೆ ತಾನು ಮರೆಯಾಗಬೇಕೆಂದು ಬಯಸಿ ಅಲ್ಲಿರುವ ಮರಗಿಡಗಳನ್ನು ನೋಡುತ್ತ ಆ ಮರಗಳ ಹೆಸರುಗಳು ಗೊತ್ತಿರಲಿಲ್ಲವಾದ್ದರಿಂದ

'ಹೆಸರಿಲ್ಲದ ಮರಗಳೇ ಮರೆಯಾಗಿ! ಮರೆಯಾಗಿ!' ಎಂದು ಕೂಗುತ್ತ ಕೊಳದಿಂದ ಹೊರಬಂದು ಬಂಡೆಯ ಮೇಲಿದ್ದ ತನ್ನ ಸೀರೆಯನ್ನು ಎಳೆದುಕೊಂಡಳು.

ಸೀತೆಯ ಮೊರೆಯನ್ನು ಕೇಳಿದ ಮರಗಳೆಲ್ಲ ಅವಳನ್ನು ಮರೆಮಾಚಿಕೊಂಡು ಅವಳ ಮಾನ ರಕ್ಷಣೆ ಮಾಡಿದವು. ಆ ಮರಗಳ ಹೆಸರು ಹೇಳಲು ನಮ್ಮ ಜನಪದರಿಗೆ ಗೊತ್ತಿಲ್ಲದಿರಬಹುದು. ಸಸ್ಯಶಾಸ್ತ್ರಜ್ಞರು ಬಲ್ಲರೆಂದು ಕಾಣುತ್ತದೆ. ಹೀಗೆ ಹೆಸರಿಲ್ಲದ ಮರಗಳ ಗುಂಪು ಮಾಕಲ್ಲಯ್ಯನ ಬೆಟ್ಟದಲ್ಲಿದೆ. ಅಲ್ಲದೆ ಬಂಡೆಯ ಮೇಲೆ ಸೀತೆಯ ಸೆರಗಿನ ಗುರುತೂ ಇದೆ. ಜೊತೆಗೆ ಎಂಥಾ ಬೇಸಿಗೆಯಲ್ಲೂ ಸೀತೆ ಕೊಳ ಬತ್ತಿಹೋಗಿಲ್ಲ ಎಂಬುದಾಗಿ ನಮ್ಮ ಜನಪದರು ಹೇಳುತ್ತಾರೆ.

ಸೀತೆಯ ಸೆರಗು

ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿರುವ ಕಣಗಾಲು ಗ್ರಾಮದ ಪೂರ್ವಕ್ಕೆ ಒಂದು ಕಿಲೋಮೀಟರ್ ದೂರದಲ್ಲಿ ಒಂದು ಬೃಹತ್ ಬಂಡೆಯಿದೆ. ರಾಮಲಕ್ಷ್ಮಣ ಸೀತೆಯರು ವನವಾಸಕ್ಕೆ ಬಂದಿದ್ದಾಗ ಈ ಸ್ಥಳಕ್ಕೆ ಬಂದಿದ್ದರೆಂದು ಹೇಳುವ ಜನಪದರು ಅದಕ್ಕಾಗಿ ಅನೇಕ ಸಾಕ್ಷ್ಯಗಳನ್ನು ಒದಗಿಸುತ್ತಾರೆ.

ಇಲ್ಲಿರುವ ಭಾರಿ ಬಂಡೆಯ ಮೇಲೆ ಸೀರೆ ಸೆರಗಿನ ಗುರುತು ಹಾಗೂ ಹೆಣ್ಣು ಮಗಳು ಓಡಾಡಿದ ಹೆಜ್ಜೆ ಗುರುತುಗಳಿವೆ.

ಸೀತೆಯು ಕಾವೇರಿ ನದಿಯಲ್ಲಿ ತನ್ನ ಸೀರೆಯನ್ನು ಒಗೆದು ಇಲ್ಲಿ ಒಣಹಾಕಿದ್ದಳೆಂದೂ. ಹಾಗೆ ಹರಡುವಾಗ ಅವಳು ಓಡಾಡಿದ ಹೆಜ್ಜೆ ಗುರುತುಗಳೆಂದೂ ಹೇಳುವ ಸಾಕ್ಷ್ಯಗಳು ಈ ಗುರುತುಗಳು.

ರಾಮನಾಥಪುರ

ಹಾಸನ ಜಿಲ್ಲೆಯ ಅರಕಲುಗೂಡು ತಾಲ್ಲೂಕಿನಲ್ಲಿರುವ ಯಾತ್ರಾಸ್ಥಳವಾದ ರಾಮನಾಥಪುರ ಕಾವೇರಿನದೀ ದಂಡೆಯಲ್ಲಿದೆ. ಇಲ್ಲಿಗೆ ಶ್ರೀರಾಮರು ತಮ್ಮ ವನವಾಸದ ಕಾಲದಲ್ಲಿ ಬಂದಿದ್ದರೆಂದು ಹೇಳುತ್ತಾರೆ. ಅಲ್ಲದೆ ಈ ಊರಿಗೆ

ರಾಮನಾಥಪುರ ಎಂದು ಹೆಸರು ಬರಲು ರಾಮಲಕ್ಷ್ಮಣರಿಗೆ ಬಂದಿದ್ದ ಚರ್ಮವ್ಯಾಧಿಯೇ ಕಾರಣವೆಂದು ಹೇಳುವ ಒಂದು ಪ್ರಸಂಗವನ್ನು ಹೇಳುತ್ತಾರೆ.

ತ್ರೇತಾಯುಗದಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಇಲ್ಲಿಗೆ ಬಂದಿದ್ದನು. ಆ ಸಮಯದಲ್ಲಿ ಹೊತ್ತುಹೊತ್ತಿಗೆ ಆಹಾರವಿಲ್ಲದೆ ಸ್ನಾನಮಡಿಗಳಿಲ್ಲದೆ ರಾಮಲಕ್ಷ್ಮಣರ ಮೈಯಾದ ಮೈಯೆಲ್ಲ ಕಜ್ಜಿಗಳಾಗಿ ಪರಪರನೆ ಕೆರೆದುಕೊಳ್ಳುತ್ತಿದ್ದರು. ಆ ಕಜ್ಜಿಗಳಿಂದ ಸುರಿಯುತ್ತಿದ್ದ ಕೀವು ದುರ್ನಾತ ಹೊಡೆಯುತ್ತಿತ್ತು. ರಾಮರನ್ನು ಕುತೂಹಲದಿಂದ ನೋಡಲು ಬರುತ್ತಿದ್ದ ಸುತ್ತಮುತ್ತಲ ಹಳ್ಳಿಯ ಜನರು ರಾಮರು 'ನಾತ' (=ವಾಸನೆ, ದುರ್ವಾಸನೆ) ಹೊಡೆಯುತ್ತಾರೆ ಎಂದು ಹೇಳುತ್ತಿದ್ದರಂತೆ.

ರಾಮಲಕ್ಷ್ಮಣರು ಪ್ರತಿನಿತ್ಯ ಪವಿತ್ರ ತೀರ್ಥ ಕಾವೇರಿಯಲ್ಲಿ ಮಿಂದು ಇಲ್ಲಿರುವ ಗೋಗಲ್ಲುಗಳ ಮೂಲಕ ನುಸಿದು ಬರುತ್ತಿದ್ದರಂತೆ. ಆ ಸಮಯದಲ್ಲಿ ಆ ನದಿಯಲ್ಲಿದ್ದ ಮೀನುಗಳು ಮುಳುಗಿ ಏಳುತ್ತಿದ್ದ ರಾಮಲಕ್ಷ್ಮಣರ ಮೈಯಲ್ಲಿರುವ ಗಾಯಗಳನ್ನು ಕುರುಕಿದ್ದರಿಂದ ಅವರ ಮೈ ಸ್ವಚ್ಛವಾಯಿತಂತೆ.

ರಾಮರ ಮೈಮೇಲಿದ್ದ ಕಜ್ಜಿಕುರುಗಳಿಂದ ಬರುತ್ತಿದ್ದ ನಾತದಿಂದ ಈ ಸ್ಥಳಕ್ಕೆ ರಾಮನಾತಪುರ ಎಂಬ ಹೆಸರು ಬಂದಿತಂತೆ. ನಮ್ಮ ಜನಪದರಿಗೆ 'ನಾತ' ಮತ್ತು 'ನಾಥ'ಗಳ ಅರ್ಥವ್ಯತ್ಯಾಸ ಗೊತ್ತಿಲ್ಲದ ಕಾರಣದಿಂದಲೋ, ಜನರಲ್ಲಿ ಪ್ರಚಲಿತವಾಗಿದ್ದ ಕಜ್ಜಿಗಳ ಕತೆಯ ಕಾರಣದಿಂದಲೋ, ಏನಾದರಿರಲಿ, ಈಗಂತೂ ಈ ತೀರ್ಥಕ್ಷೇತ್ರ 'ರಾಮನಾಥಪುರ' ಆಗಿದೆ.

ಆದರೆ ಇದಕ್ಕಿಂತಲೂ ಹಿಂದೆ ಇದಕ್ಕೆ ವಾಸವಾಪುರ ಎಂಬ ಹೆಸರಿತ್ತಂತೆ. ಅನಂತರದಲ್ಲಿ ರಾಮೇಶ್ವರಪುರವಾಗಿ ಈಗ ರಾಮನಾಥಪುರ ಎಂದು ಪ್ರಸಿದ್ಧವಾಗಿದೆ. ಈ ಕ್ಷೇತ್ರವನ್ನು ಎರಡನೆಯ 'ರಾಮೇಶ್ವರ' ಎಂದೂ ಕರೆಯುತ್ತಾರೆ. ಹನುಮಂತನು ಮೊದಲು ಶಿವಲಿಂಗವನ್ನು ತಂದು ಇಲ್ಲಿ ಪ್ರತಿಷ್ಠಾಪನೆ ಮಾಡಿದನಂತೆ. ಆದ್ದರಿಂದ ಈ ದೇವಾಲಯಕ್ಕೆ ಪ್ರಸನ್ನ ರಾಮೇಶ್ವರ ದೇವಾಲಯ ಎಂದು ಕರೆಯುತ್ತಾರೆ.

ಇಲ್ಲಿ ಹರಿಯುತ್ತಿರುವ ಕಾವೇರಿ ನದಿಯ ನಡುವೆ ಗಾಯತ್ರಿ ಶಿಲೆ ಎಂಬ ಹೆಸರಿನ ಬಂಡೆಯಿದೆ. ಈ ನದಿಯಲ್ಲಿರುವ ಗೋಗಲ್ಲುಗಳನ್ನು ರಾಮ ಲಕ್ಷ್ಮಣರ ಹೆಸರಿನಿಂದ ಕರೆದು ಅವುಗಳಲ್ಲಿ ತೂರಿ ಬಂದರೆ ದೆಯ್ಯ ಪೀಡೆ ಹಿಡಿದಿದ್ದರೆ ಬಿಡುತ್ತವೆ ಎಂಬ ನಂಬಿಕೆಯಿದೆ.

ಶ್ರೀರಾಮಚಂದ್ರನು ಮೊದಲು ಪಟ್ಟಾಭಿಷೇಕವಾದನಂತರ ಲೋಕಮಾತೆ ಸೀತಾದೇವಿಯನ್ನು ತೊಡೆಯ ಮೇಲೆ ಕೂರಿಸಿಕೊಂಡರಂತೆ. ಈ ಮೂರ್ತಿರೂಪವನ್ನು

ಇಲ್ಲಿ ಸಾಕ್ಷಾತ್ತಾಗಿ ನೋಡಬಹುದು. ರಾಮನವಮಿಯಲ್ಲಿ ಒಂಬತ್ತು ದಿನಗಳ ಕಾಲ ಧಾರ್ಮಿಕ ಕಾರ್ಯಕಲಾಪಗಳು ಅತ್ಯಂತ ವೈಭವದಿಂದ ನಡೆಯುತ್ತವೆ.

ಪ್ರತಿವರ್ಷ ಸುಬ್ರಹ್ಮಣ್ಯಷಷ್ಟಿಯಂದು ಇಲ್ಲಿ ರಥೋತ್ಸವ ನಡೆಯುತ್ತದೆ. ದನಗಳ ಜಾತ್ರೆಗೂ ಇದು ಪ್ರಸಿದ್ಧವಾಗಿದೆ. ಪ್ರಸನ್ನ ಸುಬ್ರಹ್ಮಣ್ಯದೇವರ ದೇವಾಲಯವು ಅತ್ಯಂತ ಪ್ರಾಚೀನವಾಗಿದ್ದು ನಯನ ಮನೋಹರವಾಗಿದೆ.

ಗೋಗಲ್ಲು (ಗೋಗರ್ಭ)

ಹಾಸನ ಜಿಲ್ಲೆಯ ರಾಮನಾಥಪುರದ ಮೂಲಕ ಕಾವೇರಿ ನದಿ ಹರಿದುಬರುತ್ತದೆ. ಅಲ್ಲಿನ ದೇವಾಲಯದ ನದಿಯೊಳಗೆ ಗೋಗಲ್ಲು ಅಥವಾ ಗೋಗರ್ಭ ಎಂದು ಕರೆಯುವ ಎರಡು ಗವೀಕಲ್ಲುಗಳಿವೆ. ಇವುಗಳಲ್ಲಿ ಒಂದು ದೊಡ್ಡದು ಮತ್ತೊಂದು ಚಿಕ್ಕದು. ದೊಡ್ಡಗೋಗಲ್ಲಿನ ಮುಖಾಂತರ ಶ್ರೀರಾಮ ಹಾದುಬಂದನೆಂದೂ ಚಿಕ್ಕ ಗೋಗಲ್ಲಿನ ಮುಖಾಂತರ ಲಕ್ಷ್ಮಣ ಹಾದು ಬಂದನೆಂದೂ ನಮ್ಮ ಜನಪದರು ನಂಬಿದ್ದಾರೆ.

ಈ ಗೋಗಲ್ಲುಗಳ ಮೂಲಕ ಹಾದು ಬಂದರೆ ಘೋರ ದುರಿತವೆಲ್ಲ ನಾಶವಾಗುತ್ತದೆ ಎಂಬ ನಂಬಿಕೆಯಿದೆ. ಗೋಹತ್ಯೆ ಮಾಡಿದವರೂ ಗೋಗಲ್ಲಿನ ಮುಖಾಂತರ ಹಾದು ಬಂದರೆ ಅವರ ಪಾಪ ಪರಿಹಾರವಾಗುತ್ತದೆಯಂತೆ. ಭೂತಪ್ರೇತಗಳ ಪೀಡನೆಯಿಂದ ನರಳುತ್ತಿರುವವರು ಹಾದು ಬಂದರೆ ಅವುಗಳು ಪತ್ತೆಯಿಲ್ಲದಂತೆ ಓಡಿಹೋಗುತ್ತವೆಯಂತೆ.

ಇಲ್ಲಿ ಹಿಂದೆ ರಾಕ್ಷಸರ ಗುರುವಾದ ಶುಕ್ರಾಚಾರ್ಯರು ಸಂಜೀವಿನಿ ವಿದ್ಯೆ ಸಿದ್ಧಿಗಾಗಿ ಗಾಯತ್ರಿ ಶಿಲೆಯ ಮೇಲೆ ನಿಂತು ಕಠಿಣ ತಪಸ್ಸು ಮಾಡಿದರು. ಇದರಿಂದ ಭಯವಿಹ್ವಲರಾದ ದೇವತೆಗಳು ಅಸುರಾಚಾರ್ಯನ ತಪೋಭಂಗಕ್ಕಾಗಿ ಊರ್ವಶಿಯನ್ನು ಕಳಿಸಿದರು. ಅವಳ ನೆರವಿಗಾಗಿ ಜೊತೆಯಲ್ಲಿ ಕಾಮಧೇನು ಮತ್ತು ಅವಳ ಮಗಳು ನಂದಿನಿಯನ್ನೂ ಕಳಿಸಿದರು.

ಊರ್ವಶಿ ಹಸುವಿನ ಹಾಲು ಕರೆಯುವವಳಂತೆ ನಟಿಸಿ ಶುಕ್ರಾಚಾರ್ಯರ ತಪೋಭಂಗ ಮಾಡಲು ಪ್ರಯತ್ನಿಸಿದಳು. ಶುಕ್ರಾಚಾರ್ಯರು ವಿಚಲಿತರಾಗದಿರುವುದನ್ನು ಕಂಡು ಇವಳು ಮತ್ತೊಂದು ನಾಟಕ ಹೂಡಿದಳು. ಹಸು ಇವಳನ್ನು ಹಾಯಲು ಅಟ್ಟಿಸಿಕೊಂಡು ಬರುತ್ತಿರುವಂತೆಯೂ ಇವಳು ಭಯದಿಂದ 'ರಕ್ಷಿಸಿ!' 'ರಕ್ಷಿಸಿ!' ಎಂದು ಮೊರೆಯಿಡುತ್ತಿರುವಂತೆಯೂ ಕಿರುಚಾಡಿದಳು. ಇವಳ ಅಬ್ಬರವನ್ನು ತಾಳಿಕೊಳ್ಳಲಾಗದ ಶುಕ್ರಾಚಾರ್ಯರು 'ನನ್ನ ತಪೋಭಂಗ ಮಾಡಲು

ಪ್ರಯತ್ನಿಸಿದ ದನಗಳೇ ಶಿಲೆಯಾಗಿರಿ' ಎಂದು ಶಪಿಸಿದರು. ಆ ಕೂಡಲೆ ಕಾಮಧೇನು ಮತ್ತು ನಂದಿನಿಯರು ಬಂದು–

'ಆಚಾರ್ಯ, ಕ್ಷಮಿಸಿ, ಇದು ನಮ್ಮ ತಪ್ಪಲ್ಲ ಊರ್ವಶಿಯು ನಮ್ಮನ್ನು ದುರುಪಯೋಗಪಡಿಸಿಕೊಂಡಳು. ಆದ್ದರಿಂದ ತಾವು ಕೃಪಾದೃಷ್ಟಿಯಿಂದ ನೋಡಿ ನಮ್ಮನ್ನು ಕ್ಷಮಿಸಿ ಶಾಪವನ್ನು ಹಿಂತೆಗೆದುಕೊಳ್ಳಿ' ಎಂದು ಗೋಗರೆದರು. ಅದಕ್ಕೆ ಶುಕ್ರಾಚಾರ್ಯರು–

'ಕೊಟ್ಟ ಶಾಪವನ್ನು, ಇಟ್ಟ ಭಿಕ್ಷೆಯನ್ನು, ಬಿಟ್ಟ ಬಾಣವನ್ನು ಹಿಂದೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ನೀವು ಗೋಗರ್ಭಗಳಾಗಿ ಈ ಕಾವೇರಿ ನದಿಯಲ್ಲಿ ಮುಳುಗಿರಿ. ಕಲಿಯುಗಾಂತ್ಯದಲ್ಲಿ ನಿಮಗೆ ಶಾಪವಿಮೋಚನೆಯಾಗುತ್ತದೆ. ಅಲ್ಲಿಯವರೆಗೂ ನದಿಯಲ್ಲಿ ಉಳಿಯಿರಿ. ನಿಮ್ಮ ಗರ್ಭದ ಮೂಲ ಹಾದುಹೋಗುವವರ ಪಾಪ ಪರಿಹಾರವಾಗಲಿ!' ಎಂದು ಹೇಳಿ ಊರ್ವಶಿಯನ್ನು ನೋಡಿದರು. ಅವಳು ಕೊಂಕುಬಿಂಕಗಳಿಂದ ಅಲಂಕಾರಭೂಷಿತೆಯಾಗಿ ನುಲಿಯುತ್ತ ನಿಂತಿದ್ದಳು. ಅವಳನ್ನು ಕಂಡು–

'ನೀನು ಮತ್ಸ್ಯಕನ್ಯೆಯಾಗು!' ಎಂದು ಶಪಿಸಿದರು. ಅವಳು ತನ್ನ ತಪ್ಪನ್ನು ಅರಿತು ಕ್ಷಮೆ ಕೇಳಿದಾಗ

ಈ ಸ್ಥಳದಲ್ಲಿ ನೀನು ಕಲಿಯುಗ ಮುಗಿಯುವವರೆಗೂ ಮತ್ಸ್ಯಗಳ ತಾಯಾಗಿರು. ಕಲಿಯುಗ ಮುಗಿದ ಕೂಡಲೆ ನೀನು ದೇವಲೋಕಕ್ಕೆ ಹೋಗುತ್ತೀಯೆ' ಎಂದರು.

ಅಂದಿನಿಂದಲೂ ಕಾಮಧೇನು ಮತ್ತು ನಂದಿನಿ ಗೋಗರ್ಭಗಳಾದರು. ಊರ್ವಶಿ ಮತ್ಸ್ಯಗಳ ಮಾತೆಯಾಗಿ ತನ್ನ ಮಕ್ಕಳೊಡನೆ ಈ ನದಿಯಲ್ಲಿ ಹಾಯಾಗಿದ್ದಾಳೆ.

ಗೋವುಗಲ್ಲುಗಳಲ್ಲಿ ದೊಡ್ಡದು ಶ್ರೀರಾಮರು ಹಾದು ಬಂದದ್ದು. ಈಗಲೂ ಜನರೆಲ್ಲರೂ ಇದರ ಮುಖಾಂತರ ಹಾದು ಬರುತ್ತಾರೆ. ದೆವ್ವ ಪೀಡೆ ಪಿಶಾಚಿಗಳ ತೊಂದರೆಗೆ ಒಳಗಾಗಿದ್ದವರನ್ನು ಈ ಗೋಗಲ್ಲಿನ ಮುಖಾಂತರ ಹಾಯಿಸುವಾಗ ಅವರು ಉಳಿದವರಂತೆ ಸರಾಗವಾಗಿ ಇತ್ತ ಕಡೆಗೆ ಹಾದುಬರುವುದಿಲ್ಲ. ಅವರನ್ನು ಗೋಗಲ್ಲು ಕ್ಷಣಕಾಲ ತಡೆದು ನಿಲ್ಲಿಸುತ್ತದೆಯಂತೆ. ಇದರಿಂದ ಅವರಿಗೆ ಹಿಡಿದ ಭೂತಪ್ರೇತಗಳು ಹೆದರಿ ಓಡುತ್ತವೆ ಎಂದು ಹೇಳುತ್ತಾರೆ.

ಇನ್ನೊಂದು ಗೋಗಲ್ಲು ಲಕ್ಷ್ಮಣ ಹಾಯ್ದು ಬಂದದ್ದು. ಇದರಲ್ಲಿ ಯಾರೂ ಹಾಯುವುದಿಲ್ಲ. ಕೆಲವು ಸಾಹಸಿಗಳು ಮಾತ್ರ ಪ್ರಯತ್ನಿಸುತ್ತಾರೆ. ಲಕ್ಷ್ಮಣನು ಉಗ್ರ ವ್ಯಕ್ತಿತ್ವದವನಾದ್ದರಿಂದ ಅವನು ಹಾದ ಈ ಗೋಗಲ್ಲಿನ ಮುಖಾಂತರ ಒಂದು

ಬಾಳೆದಿಂಡನ್ನು ಹೊಗಿಸಿದರೆ ಅದು ಇನ್ನೊಂದು ಕಡೆಗೆ ಹಾದು ಬರುವಾಗ ಎರಡು ಸೀಳಾಗಿರುತ್ತದೆ ಎಂದು ಹೇಳುತ್ತಾರೆ.

ಬಾಣಾವರ

ಬಾಣಾವರ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿರುವ ಒಂದು ಊರು. ಇದು ಅರಸೀಕೆರೆಯಿಂದ ೧೫ ಕಿ.ಮೀ. ದೂರದಲ್ಲಿದೆ. ಅಲ್ಲದೆ ಇದು ಬೆಂಗಳೂರು – ಪೂನಾ ರೈಲುಮಾರ್ಗದ ನಡುವಣ ಒಂದು ನಿಲ್ದಾಣವೂ ಆಗಿದೆ. ಇದು ಬಾಣ ಎಂಬ ರಾಜರ ಆಳ್ವಿಕೆಗೆ ಸೇರಿದ್ದ ಪಟ್ಟಣವಾಗಿದ್ದಿರಬಹುದೆಂದು ಹೇಳಲಾಗಿದೆ. ಬಾಣದ ಜೊತೆಗೆ ವರ ಸೇರಿ ಬಾಣಾವರ ಆಗಿದೆ. ವರವನ್ನು ಉತ್ತರ ಪದವಾಗುಳ್ಳ ಹೊನ್ನಾವರ, ಬೆಳ್ಳಾವರ, ಶಿರಗಾವರ, ಚಿಕ್ಕಶಾಲಾವರ, ಮಟ್ಟಾವರ, ಮೊಗಸಾವರ, ಉದೇವರ, ಅಟ್ಟಾವರ ಮುಂತಾದ ಊರುಗಳಿವೆ. ಈ ಹೆಸರುಗಳ ಉತ್ತರಭಾಗವಾದ 'ಆವಾರ'ವನ್ನು ಒಪ್ಪುವುದಾದರೆ ಅದಕ್ಕೆ ಅರ್ಥ ಹೊರಗಿನ ಪ್ರದೇಶ, ಆವರಣ, ಅಂಗಳ ಎಂಬುದಾಗಿ ನಿಘಂಟುಗಳು ಹೇಳುತ್ತವೆ. ಆದರೆ ಇದು ಅರವೊ ವರವೊ ಅವರವೊ ಅವಾರವೊ ಆವರಣವೊ ಎಂಬುದು ಸ್ಪಷ್ಟವಾಗುತ್ತಿಲ್ಲ. ಆದರೆ ಬಾಣಾವರ ಎಂಬ ಐತಿಹ್ಯದಲ್ಲಿ ಬಾಣಗಳನ್ನು + ಹೊರ – ಬಾಣಾವೊರವಾಗಿ – ಬಾಣಾವರ ಸಿದ್ಧಿಸಿದೆ ಎಂದು ಅರ್ಥ ಬರುವಂತೆ ಕಥೆ ಹೇಳಲಾಗಿದೆ. ಇದು ರಾಮಾಯಣಕ್ಕೆ ಸಂಬಂಧಿಸಿದ ಪ್ರಸಂಗ :

ಅರಣ್ಯವಾಸದ ಕಾಲದಲ್ಲಿ ಸೀತಾರಾಮರ ಜೊತೆಯಲ್ಲಿದ್ದ ಲಕ್ಷ್ಮಣ, ಅಣ್ಣ ನಡೆದ ಕಡೆಗಳಿಗೆಲ್ಲ ಬಾಣಗಳನ್ನು ಹೊತ್ತುಕೊಂಡು ಹಿಂಬಾಲಿಸುತ್ತಿದ್ದ. ಇಂಥ ವಿಧೇಯ ಸಹೋದರ ಲಕ್ಷ್ಮಣ ಅರಸೀಕೆರೆ ತಾಲ್ಲೂಕಿನ ಈ ಸ್ಥಳಕ್ಕೆ ಬಂದಾಗ ಇದ್ದಕ್ಕಿದ್ದಂತೆ ಹೊತ್ತಿದ್ದ ಬಾಣಗಳನ್ನು ತೂಯ್ದೆಸೆದು :

'ಅಣ್ಣ, ನಾನು ನಿನ್ನ ಸೇವಕನಲ್ಲ. ನಾನು ಈ ಬಾಣಗಳನ್ನು ನೀನು ಹೋದ ಕಡೆಗೆಲ್ಲ ಹೊತ್ತುಕೊಂಡು ಬರಲು ನನಗೇನು ತೀಟೆ? ಬೇಕಿದ್ದರೆ ನೀನೇ ಹೊತ್ತುಕೊ. ನಾನು ಮಾತ್ರ ಹೊರುವುದಿಲ್ಲ. ನಾನು ಅಯೋಧ್ಯೆಗೆ ಹಿಂದಿರುಗುತ್ತೇನೆ!' ಎಂದು ಒದರಾಡಿದನಂತೆ.

ಸಹೋದರ ಲಕ್ಷ್ಮಣನ ವರ್ತನೆಯನ್ನು ಕಂಡು ಶ್ರೀರಾಮನಿಗೆ ವಿಸ್ಮಯವಾಯಿತು. ಅವನು ತಮ್ಮನನ್ನು ಸಮಾಧಾನಪಡಿಸಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ರಾಮ ಆ ಬಾಣಗಳನ್ನು ತಾನೇ ಹೊತ್ತುಕೊಂಡು :

'ಸಹೋದರ, ನೀನು ಅಯೋಧ್ಯೆಗೆ ಹೋಗುವುದಾದರೆ ನಾವೂ ನಿನ್ನೊಡನೆ ಬರುತ್ತೇವೆ ನಡೆ ನಡೆ' ಎಂದು ಅವನ ಹಿಂದೆಯೇ ಸೀತೆಯೊಡನೆ ಹೊರಟನು.

ಹೋಗುವಾಗ ಆ ನೆಲದ ಹಿಡಿಮಣ್ಣನ್ನು ಸೆರಗಿಗೆ ಕಟ್ಟಿಕೊಂಡು ಜೊತೆಯಲ್ಲಿ ತೆಗೆದುಕೊಂಡು ಹೋದನು.

ಆ ಪ್ರದೇಶವನ್ನು ದಾಟಿದ ಕೂಡಲೆ ಲಕ್ಷ್ಮಣನು ಶ್ರೀರಾಮನನ್ನು ನೋಡಿ ಹೆದರಿ

'ಅಣ್ಣಾ, ಇದೇನಣ್ಣ? ನೀನು ಬಾಣಗಳನ್ನು ಹೊರುವುದೆ? ನಾನಿರುವುದಾದರೂ ಏತಕ್ಕೆ? ಎಂಥಾ ಕೆಲಸ ಮಾಡಿದೆಯಣ್ಣ' ಎಂದು ಹೇಳುತ್ತಾ ಅಣ್ಣ ಹೊತ್ತಿದ್ದ ಬಾಣಗಳನ್ನು ಕಸಿದುಕೊಂಡು ತಾನು ಹೊತ್ತುಕೊಂಡ.

ಅಷ್ಟು ಹೊತ್ತಿಗೆ ಸೂರ್ಯ ಪಡುವಣ ಕಡಲಲ್ಲಿ ಮರೆಯಾಗುತ್ತಿದ್ದ. ಆ ರಾತ್ರಿ ಶ್ರೀರಾಮರು ಅಲ್ಲಿನ ಒಂದು ಸ್ಥಳದಲ್ಲಿ ಸೀತಾಲಕ್ಷ್ಮಣರೊಡನೆ ಬಿಡಾರ ಹೂಡಿ ವಿಶ್ರಮಿಸಿದನು.

ಮಧ್ಯರಾತ್ರಿ. ಶ್ರೀರಾಮ ಎಚ್ಚೆತ್ತು ತನ್ನ ಸೆರಗಿನಲ್ಲಿದ್ದ ಮಣ್ಣನ್ನು ತಮ್ಮ ಲಕ್ಷ್ಮಣನಿಗೆ ಎಚ್ಚರವಾಗದಂತೆ ಅವನ ಮೇಲೆ ಚೆಲ್ಲಿದ. ಹಾಗೆ ಚೆಲ್ಲಿದ ಕೂಡಲೆ ಲಕ್ಷ್ಮಣನಿಗೆ ಎಚ್ಚರವಾಯಿತು. ಅವನು ದಢಕ್ಕನೆ ಮೇಲೆದ್ದು–

'ಅಣ್ಣ, ನಿನಗೂ ನಿನ್ನ ವನವಾಸಕ್ಕೂ ಕೋಟಿ ನಮಸ್ಕಾರ. ನಿನ್ನ ಬಾಣಗಳನ್ನು ಹೊತ್ತುಕೊಂಡು ನಿನ್ನ ಹಿಂದೆ ಹಿಂದೆಯೆ ಅಲೆಯಲು ನಾನು ನಿನ್ನ ಜೀತದಾಳಲ್ಲ. ನಾನು ಇದೋ ಅಯೋಧ್ಯೆಗೆ ಹೊರಟೆ!' ಎಂದು ಸೆಟೆದು ನಿಂತನು.

ಆ ಕೂಡಲೆ ರಾಮನು ಅವನ ಮೇಲೆ ಚಿಮುಕಿಸಿದ್ದ ಮಣ್ಣು ತೊಡೆದು ಹೋಗುವಂತೆ ಅವನ ತಲೆಯ ಮೇಲೆ ಒಂದು ಕೊಡ ನೀರು ಸುರಿದ. ಮಣ್ಣು ಲಕ್ಷ್ಮಣನ ಮೈಯಿಂದ ಬೇರಾದ ಕೂಡಲೆ ಲಕ್ಷ್ಮಣ ಮೊದಲಿನಂತೆ ವಿಧೇಯನಾಗಿ–

'ಅಣ್ಣ, ಇದೇನು ಈ ಹೊತ್ತಿನಲ್ಲಿ ನನ್ನ ಮೇಲೆ ನೀರು ಸುರಿದೆ!' ಎಂದು ಕೇಳಿದ. ಆಗ ರಾಮನು ಲಕ್ಷ್ಮಣನಿಗೆ ಆ ಪ್ರದೇಶದ ಮಣ್ಣಿನ ಗುಣವನ್ನು ಹೇಳಿ ಅದಕ್ಕೆ ಶಾಪ ಕೊಡಲು ಕೈಯೆತ್ತಿದನು. ಆಗ ಥಟ್ಟನೆ ಪರಮೇಶ್ವರನು ಪ್ರತ್ಯಕ್ಷನಾಗಿ–

'ಇದು ಆದಿಶಕ್ತಿ ನೆಲ. ಆದ್ದರಿಂದ ಇಲ್ಲಿ ಎಂಥವರೂ ಕೆರಳಿ ಜಗಳಕ್ಕೆ ನಿಲ್ಲುತ್ತಾರೆ. ಆದ್ದರಿಂದ ನಾನು ಇಲ್ಲಿ ನಿನ್ನ ತಮ್ಮ ಹೊರದಿದ್ದ ಬಾಣಗಳ ಕಾರಣದಿಂದ ಬಾಣೇಶ್ವರ ಎಂಬ ಹೆಸರಿನಿಂದ ನೆಲಸುತ್ತೇನೆ. ಇನ್ನೆಂದೂ ಇಲ್ಲಿನ ಮಣ್ಣಿನ ಮಕ್ಕಳು ಕೆರಳದಂತೆ ನೋಡಿಕೊಳ್ಳುತ್ತೇನೆ. ನೀನು ಈ ನೆಲಕ್ಕೆ ಶಾಪ ಕೊಡಬೇಡ' ಎಂದು ಹೇಳಿ ಸಮಾಧಾನಪಡಿಸಿದನು.

ಲಕ್ಷ್ಮಣನು ಬಾಣವನ್ನು ಹೊರದೆ ಹೋದುದರಿಂದ ಈ ಪ್ರದೇಶಕ್ಕೆ ಬಾಣಹೊರ – ಬಾಣಾವರ ಎಂದಾಯಿತಂತೆ. ಈಶ್ವರ ಇಲ್ಲಿ ನೆಲಸಿ ಬಾಣಗಳ ಕಾರಣದಿಂದ ಬಾಣೇಶ್ವರ ಎಂದು ಹೆಸರು ಪಡೆದನಂತೆ.

ಒಂದು ಜನಪದ ತ್ರಿಪದಿಯಲ್ಲಿ

ಗುಡುಗುಡುಗುಟ್ಟಿತು ಜಾವೂನೆಗಲ್ಲಾಗೆ
ಜಲವೆದ್ದು ಹರಿದ ನೀರಾನೆ – ಮೊಗೆಮೊಗೆದು
ಬಾಣಾವರದ ಬಾಲೆ ಬಳಸ್ಯಾಳೆ ।

ಎಂದಿದ್ದು ಬಾಣಾವರ ಜನಪದರ ಮನದಲ್ಲಿ ಸ್ಥಿರವಾಗಿ ನಿಂತ ಸ್ಥಳವಾಗಿದೆ. ಅದಕ್ಕೆ ಇಲ್ಲಿಯ ಗಣಪತಿಯೂ ಕಾರಣವೆಂದು ಹೇಳುತ್ತಾರೆ. ನಮ್ಮ ಜನಪದರು

ಬಾಣಾವರದ ಬಾಗಿಲಲ್ಲಿರುವೋನೆ ಬಾಲೆಯ ಮಗನೆ ಬೆನುವಣ್ಣ
ಬಾಲೆಯ ಮಗನೆ ಬೆನುವಣ್ಣ – ಬೆಳ್ಳಿದೇವ
ಬಾರದ ಪದವೋ ಬರಕೊಡೋ ।

ಎಂದು ಪ್ರಾರ್ಥಿಸಿದ್ದಾರೆ.

ಕಲ್ಯಾಣಿ ಚಾಲುಕ್ಯರ, ಹೊಯ್ಸಳ ಮುಂತಾದ ಪ್ರಸಿದ್ಧ ರಾಜಮನೆತನಗಳ ಆಳ್ವಿಕೆಗೆ ಸೇರಿದ್ದ ಬಾಣಾವರ ಐತಿಹಾಸಿಕ ಮಹತ್ವದ ಸ್ಥಳವಾಗಿದೆ. ಅಲ್ಲದೆ ಈ ಸ್ಥಳಕ್ಕೆ ಪೌರಾಣಿಕ ಮಹತ್ವವೂ ಇದೆ. ಈ ಊರಿನ ಹೆಸರಿನ ಬಗೆಗೆ ಖಚಿತವಾದ ಉತ್ತರ ಹೇಳಲಾಗದಿದ್ದರೂ ಜನಪದ ನಿರುಕ್ತಿ ಈ ರೀತಿ ಹೇಳುತ್ತದೆ –

ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಈ ಸ್ಥಳಕ್ಕೆ ಬರುವ ಹೊತ್ತಿಗೆ ಬಾಣಗಳನ್ನು ಹೊತ್ತಿದ್ದ ಲಕ್ಷ್ಮಣನಿಗೆ ಅದು ಹೆಣಭಾರವಾಗಿ ಪರಿಣಮಿಸಿ

'ನನ್ನಿಂದ ಬಾಣ ಹೊರಲಾಗುವುದಿಲ್ಲ!' ಎಂದು ಹೇಳಿ ಬಾಣಗಳನ್ನು ಧೊಪ್ಪನೆ ನೆಲಕ್ಕೆ ಒಗೆದನಂತೆ. ಹೀಗೆ ಬಾಣಗಳ ಹೊರೆ ಬಿದ್ದ ಸ್ಥಳವೇ 'ಬಾಣಾವರ' ಆಯಿತೆಂದೂ ಹೇಳುತ್ತಾರೆ. ಇದು ಬಾಣ+ಆವಾರವಾಗಿದ್ದು ಬಾಣಗಳನ್ನು ತಯಾರಿಸುತ್ತಿದ್ದ ಆವಾರ (=ಪ್ರದೇಶ, ಜಾಗ, ಅಂಗಳ) ಇದಾಗಿರಬಹುದು.

ರಾಮತೀರ್ಥ ಮತ್ತು ಲಕ್ಷ್ಮಣತೀರ್ಥ

ಕುಮಟಾದಿಂದ ಹೊನ್ನಾವರ ತಲುಪಲು ಎರಡು ಕಿ.ಮೀ. ಇದೆ ಎನ್ನುವಾಗ ರಾಮತೀರ್ಥ ಕ್ರಾಸ್ ಸಿಗುತ್ತದೆ. ಇಲ್ಲಿಂದ ಸಾಲ್ಕೊಡ ರಸ್ತೆಯಲ್ಲಿ ನಡೆದುಕೊಂಡು ಹೋದರೆ ರಾಮತೀರ್ಥ ತಲುಪುತ್ತೇವೆ.

ರಾಮೇಶ್ವರ ದೇವಸ್ಥಾನದ ಎದುರಿನ ೧೦೧ ಮೆಟ್ಟಿಲುಗಳನ್ನು ಇಳಿಯುತ್ತಾ ಹೋದರೆ ರಾಮತೀರ್ಥ–ಲಕ್ಷ್ಮಣತೀರ್ಥಗಳು ಕಾಣುತ್ತವೆ. ಸ್ನಾನಕ್ಕೆ ಹಾಗೂ ಪಾನಕ್ಕೆ ಯೋಗ್ಯವಾದ ಜಲಧಾರೆ ಸುಮಾರು ೧೦ ಅಡಿ ಎತ್ತರದಿಂದ

ಧುಮ್ಮಿಕ್ಕುತ್ತದೆ. ಈ ಜಲಧಾರೆ ಎಂಥಾ ಬಿರುಬೇಸಿಗೆಯಲ್ಲೂ ಬತ್ತಿಲ್ಲ ಎಂಬುದಾಗಿ ಹೇಳುತ್ತಾರೆ.

ವನವಾಸದ ಸಮಯದಲ್ಲಿ ಶ್ರೀರಾಮಲಕ್ಷ್ಮಣರು ಬಾಯಾರಿಕೆಯಿಂದ ಬಳಲಿ ನೀರಿಗಾಗಿ ಬಾಣಗಳನ್ನು ಪ್ರಯೋಗಿಸಿದಾಗ ಹೊಮ್ಮಿದ ಜಲಧಾರೆಯೇ ಈ ರಾಮತೀರ್ಥ ಮತ್ತು ಲಕ್ಷ್ಮಣತೀರ್ಥ ಎಂಬುದು ಸ್ಥಳಪುರಾಣ.

ಈ ನೀರಿಗೆ ಔಷಧೀಯ ಗುಣವಿದೆ ಎಂಬುದಾಗಿ ಹೇಳುತ್ತಾರೆ. ಈ ನೀರಿನಲ್ಲಿ ಸ್ನಾನ ಮಾಡಿದರೆ ಚರ್ಮರೋಗ ಹಾಗೂ ಮನೋರೋಗಗಳು ಪರಿಹಾರವಾಗುತ್ತವೆ ಎಂದು ಹೇಳುತ್ತಾರೆ. ಕೆಲವರು ಮನೋರೋಗಿಗಳನ್ನು ಕರೆದುಕೊಂಡು ಬಂದು ತಿಂಗಳಿಗಟ್ಟಲೆ ಅವರನ್ನು ಈ ಜಲಧಾರೆಯ ಅಡಿಯಲ್ಲಿ ಗಂಟೆಗಟ್ಟಲೆ ಕುಳ್ಳಿರಿಸಿ ತಲೆಮೇಲೆ ನೀರು ಬೀಳುವಂತೆ ಮಾಡುತ್ತಾರೆ. ಇದರಿಂದ ರೋಗ ನಿವಾರಣೆಯಾಗಿದೆ ಎಂದು ಹೇಳುತ್ತಾರೆ. ರೋಗಿಗಳಲ್ಲದವರೂ ಈ ಜಲಧಾರೆಗೆ ತಲೆಯೊಡ್ಡಿ ಶಾಂತಿ ಸಮಾಧಾನ ಸುಖಾನುಭವಗಳನ್ನು ಹೊಂದುತ್ತಾರೆ. ಹೀಗಾಗಿ ಇದು ಕೇವಲ ತೀರ್ಥವಲ್ಲ, ಕಷಾಯವೂ ಹೌದು. ಭಕ್ತರಿಗೆ ಪುಣ್ಯಗಳಿಕೆಯ ಕ್ಷೇತ್ರವೂ ಹೌದು!

ನಾಮದ ಚಿಲುಮೆ

ತುಮಕೂರಿನಿಂದ ೧೬ ಕಿ.ಮೀ. ದೂರದಲ್ಲಿರುವ ದೇವರಾಯನದುರ್ಗದ ಸುತ್ತಮುತ್ತ ದಟ್ಟವಾದ ಕಾಡು ಗೋಚರಿಸುತ್ತದೆ. ಈ ಕಾಡನ್ನು ದಾಟಿ ಮುಂದೆ ಹೋದರೆ 'ನಾಮದ ಚಿಲುಮೆ' ಸಿಗುತ್ತದೆ.

ಶ್ರೀರಾಮಚಂದ್ರನು ಸೋದರ ಲಕ್ಷ್ಮಣ ಮತ್ತು ಬಾಳಸಂಗಾತಿ ಸೀತೆಯೊಡನೆ ಅರಣ್ಯವಾಸ ಮಾಡುತ್ತಿರುವಾಗ ದೇವರಾಯನದುರ್ಗವಿರುವ ಈ ಪ್ರದೇಶಕ್ಕೆ ಬಂದಿದ್ದರಂತೆ. ಹಚ್ಚಹಸುರಿನ ಈ ಗಿರಿವನಗಳ ಸುಂದರವಾದ ಅರಣ್ಯದಲ್ಲಿ ವಾಸವಾಗಿರುವಾಗ ಒಮ್ಮೆ ಶ್ರೀರಾಮನು ಹಣೆಗೆ ತಿಲಕವಿಟ್ಟುಕೊಳ್ಳುವ ಸಲುವಾಗಿ ನೀರಿಗಾಗಿ ಸುತ್ತಮುತ್ತ ನೋಡಿದನಂತೆ. ನೀರು ಮಾತ್ರ ಸುತ್ತಲೆಲ್ಲೂ ಕಾಣಲಿಲ್ಲ. ಆಗ ನೀರು ಬೇಕೇ ಬೇಕೆನಿಸಿದ ಶ್ರೀರಾಮಚಂದ್ರನು ಬಂಡೆಯೊಂದಕ್ಕೆ ಬಾಣವನ್ನು ಹೂಡಿ ಹೊಡೆದಾಗ ಬಾಣ ಬಂಡೆಯ ಒಳಹೊಕ್ಕು ರಂಧ್ರವಾಗಿ ನೀರಿನ ಬುಗ್ಗೆ ಚಿಮ್ಮಿತು. ಆ ನೀರಿನ ಸಹಾಯದಿಂದ ಶ್ರೀರಾಮನು ಹಣೆಗೆ ತಿಲಕವಿಟ್ಟುಕೊಂಡ. ಆ ಕಾರಣದಿಂದ ಈ ಚಿಲುಮೆಗೆ ನಾಮಚಿಲುಮೆ ಎಂದು ಹೆಸರಾಯಿತು. ಕಡುಬೇಸಿಗೆಯಲ್ಲೂ ನೀರು ಚಿಮ್ಮುತ್ತಲೇ ಇರುವುದು ಇಲ್ಲಿನ ವಿಶೇಷ.

ಈ ಹಚ್ಚಹಸುರಿನ ಪರ್ವತಾರಣ್ಯದಲ್ಲಿ ಕಾಡುಹಂದಿ, ಮುಳ್ಳುಹಂದಿ ಜಿಂಕೆ ಮತ್ತು ಹುಲಿ ಮುಂತಾದ ಪ್ರಾಣಿಗಳಿವೆ. ಹೀಗೆ ದೇವರಾಯನದುರ್ಗ ಕೇವಲ ಕಾಡುಮೇಡು ಪ್ರಾಣಿಗಳ ವನಗಳಿಂದಷ್ಟೇ ಅಲ್ಲ, ಇಲ್ಲಿ ಯೋಗಾನರಸಿಂಹ ಮತ್ತು ಭೋಗಾನರಸಿಂಹ ದೇವಾಲಯಗಳಿದ್ದು ಪವಿತ್ರ ತೀರ್ಥ ಕ್ಷೇತ್ರವೆನಿಸಿದೆ.

ಅಂಬುತೀರ್ಥ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ತುಸುದೂರದಲ್ಲಿರುವ ಅಂಬುತೀರ್ಥವು ಶರಾವತಿ ನದಿಯ ಉಗಮಸ್ಥಳ.

ಹಿಂದೆ ಶ್ರೀರಾಮಚಂದ್ರನು ಸೀತೆ ಮತ್ತು ಲಕ್ಷ್ಮಣರೊಡನೆ ಅರಣ್ಯದಲ್ಲಿರುವಾಗ ಸೀತೆಯು ಸ್ವರ್ಣಮೃಗವನ್ನು ಕಂಡು ಅದು ತನ್ನ ಆಟಕ್ಕೆ ಬೇಕೆಂದು ಅಪೇಕ್ಷಿಸಿದಳು. ಅದು ಮಾಯಾಮೃಗವೆಂದೂ, ಅದು ರಾಕ್ಷಸರ ಕಪಟವೆಂದೂ ಎಷ್ಟು ಬಗೆಯಾಗಿ ಹೇಳಿದರೂ ಸೀತೆ 'ಅದು ನನಗೆ ಬೇಕೇ ಬೇಕು' ಎಂದು ಹಟ ಹಿಡಿದಳು. ಮುದ್ದು ಮಡದಿಯ ಮನಸ್ಸನ್ನು ನೋಯಿಸಬಾರದೆಂದು ಎಣಿಸಿದ ಶ್ರೀರಾಮನು ಆ ಮಾಯಾಮೃಗವನ್ನು ಹಿಡಿಯಲು ಪ್ರಯತ್ನಿಸಿದನು. ಅದು ವೇಗವಾಗಿ ಓಡತೊಡಗಿದಾಗ ಶ್ರೀರಾಮನೂ ಅಷ್ಟೇ ವೇಗವಾಗಿ ಅದರ ಬೆನ್ನಟ್ಟಿದನು. ಆ ಮೃಗ ಮುಂದೆ ಮುಂದೆ ಓಡುತ್ತಿದ್ದಂತೆ ರಾಮಚಂದ್ರನು ಬಾಯಾರಿಕೆಯಿಂದ ಬಳಲಿದನು.

ಶ್ರೀರಾಮಚಂದ್ರನು ತನ್ನ ದಾಹ ಪರಿಹಾರಕ್ಕಾಗಿ ಸುತ್ತಮುತ್ತೆಲ್ಲ ನೋಡಿದಾಗ ಎಲ್ಲೆಲ್ಲೂ ನೀರು ಕಾಣಿಸಲಿಲ್ಲ. ಆಗ ಆತ ತನ್ನ ಬತ್ತಳಿಕೆಯಿಂದ ಬಾಣವೊಂದನ್ನು ತೆಗೆದು ತಾನು ನಿಂತಿದ್ದ ಭೂಮಿಗೆ ಗುರಿಯಿಟ್ಟು ಹೊಡೆದನು.ಅವನ ಅಂಬು ನಾಟಿದ ಸ್ಥಳದಿಂದ ನೀರಿನ ಒರತೆ ಉಕ್ಕಿತು.ಹೀಗೆ ಅಂಬು ಪ್ರಯೋಗದಿಂದ ಉದ್ಭವವಾದ ತೀರ್ಥ ಅಂಬುತೀರ್ಥ ಎನಿಸಿತು.ಈ ಹೊಂಡದಿಂದ ಹೊರಟ ನೀರು ಶರ ಅಂದರೆ ಬಾಣದಿಂದ ಆವತಿ ಅಂದರೆ ಹೊರಟ ನೀರು ಮುನ್ನುಗ್ಗಿ ಶರಾವತಿ ನದಿಯಾಯಿತು.

ಶ್ರೀರಾಮನು ಇಲ್ಲಿಯೇ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಿದನಂತೆ. ಇದರ ಸಮೀಪದಲ್ಲಿ ತೀರ್ಥಹಳ್ಳಿ ಇದೆ.ಇಲ್ಲಿ ಪ್ರಾಚೀನಕಾಲದ ರಾಮೇಶ್ವರ ದೇವಾಲಯವಿದೆ.ಇಲ್ಲಿರುವ ಕೊಂಡವನ್ನು ರಾಮತೀರ್ಥ ಕೊಂಡ ಎಂದು ಕರೆಯುತ್ತಾರೆ.

ಶರಾವತಿ

ಶಿವಮೊಗ್ಗೆ ಜಿಲ್ಲೆಯಲ್ಲಿ ಹರಿಯುವ ಶರಾವತಿ ನದಿ ಮತ್ತು ಕೊಡಗಿನ ದೇವಾಸಿ ಬೆಟ್ಟದ ಇರ್ಪು ಎಂಬ ಸ್ಥಳದಲ್ಲಿ ಹುಟ್ಟಿ ಮೈಸೂರು ಜಿಲ್ಲೆಯಲ್ಲಿ ಹರಿದು ಕಾವೇರಿನದಿಯನ್ನು ಸೇರಿಕೊಳ್ಳುವ ಲಕ್ಷ್ಮಣತೀರ್ಥ ನದಿ – ಇವು ರಾಮಲಕ್ಷ್ಮಣರು ಬಾಣಬಿಟ್ಟು ಬರಿಸಿದ ಜಲಪ್ರವಾಹಗಳೆಂದು ಜನಪದ ಪುರಾಣಕಥೆಗಳು ತಿಳಿಸುತ್ತವೆ.

ಶರಾವತಿಯನ್ನು ಕುರಿತ ಪುರಾಣಕಥೆಯಲ್ಲಿ ಸೀತಾರಾಮಲಕ್ಷ್ಮಣರು ಅರಣ್ಯದಲ್ಲಿ ನಡೆದು ಬರುತ್ತಿರುವಾಗ ಸೀತೆಗೆ ಬಾಯಾರಿಕೆಯಾಯಿತು. ಆಗ ರಾಮನು ನೀರನ್ನು ತರಲು ಲಕ್ಷ್ಮಣನನ್ನು ಕಳಿಸಿದನು.ನೀರಿಗಾಗಿ ಹೋದ ಲಕ್ಷ್ಮಣ ಬಹಳ ಹೊತ್ತಾದರೂ ಬರಲಿಲ್ಲ. ಜಾನಕಿಯ ಬಾಯಾರಿಕೆಯು ಹೆಚ್ಚಿ ಪರಿತಪಿಸುತ್ತಿರುವುದನ್ನು ಕಂಡ ಶ್ರೀರಾಮನು ಬಂಡೆಯೊಂದನ್ನು ತನ್ನ ಶರದಿಂದ ಭೇದಿಸಿದನು.ರಾಘವನ ಶರಾಘಾತಕ್ಕೆ ಶಿಲೆಯ ಗರ್ಭದಿಂದ ಜಲ ಉಕ್ಕಿ ಬಂತು.ಹೀಗೆ ಶರದಿಂದ ಉದ್ಭವಿಸಿದ ಈ ನದಿಯನ್ನು ಶರಾವತಿಯೆಂದೂ ನದಿಯ ಉಗಮವಾದ ಸ್ಥಳವನ್ನು ಅಂಬುತೀರ್ಥವೆಂದೂ ಕರೆಯುತ್ತಾರೆ.

ಮೌಲ್ಯವಂತ ಪರ್ವತ

ಹಂಪಿಯ ಸುತ್ತಿನಲ್ಲಿರುವ ಒಟ್ಟು ಏಳು ಪರ್ವತಗಳಲ್ಲಿ ಮೌಲ್ಯವಂತ ಪರ್ವತವೂ ಒಂದು. ಇದು ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ದಾರಿಯಲ್ಲಿ ವೆಂಕಟಪುರ ಮತ್ತು ಕಮಲಾಪುರದ ನಡುವಣ ರಸ್ತೆಯ ಎಡಬದಿಯಲ್ಲಿದೆ.

ಈ ಪರ್ವತದಲ್ಲಿ ಎಲ್ಲೆಲ್ಲಿ ನೋಡಿದರೂ ದುಂಡನೆಯ ಕಲ್ಲುಗಳಿವೆ. ಈ ದುಂಡನೆಯ ಕಲ್ಲುಗಳನ್ನು ಕುರಿತ ನಮ್ಮ ಜನಪದರ ಕಲ್ಪನೆ ವಿಶಿಷ್ಟವಾಗಿದೆ.

ಶ್ರೀರಾಮನು ಮೌಲ್ಯವಂತ ಪರ್ವದಲ್ಲಿದ್ದಾಗ ದಶರಥನ ಶ್ರಾದ್ಧ ಮಾಡಬೇಕಾಯಿತಂತೆ. ಹಾಗೆ ಶ್ರಾದ್ಧವನ್ನು ಮಾಡಿ ಇರಿಸಿದ ಪಿಂಡದ ಉಂಡೆಗಳೇ ಈಗ ಕಲ್ಲಾಗಿವೆ ಎಂದು ಹೇಳುತ್ತಾರೆ.

ಇದಲ್ಲದೆ ಇಲ್ಲಿನ ರಾಮದೇವರ ಗುಡಿಯ ಹಿಂಭಾಗದಲ್ಲಿ ಎರಡು ಕಲ್ಲುಗಳ ದೋಣಿಗಳಿವೆ. ಇವುಗಳನ್ನು ರಾಮಲಕ್ಷ್ಮಣರ ದೋಣಿಗಳೆಂದು ಕರೆಯುತ್ತಾರೆ.

ಈ ಬೆಟ್ಟದಲ್ಲೆ ಶ್ರೀರಾಮನು ಹನುಮಂತನನ್ನು ಭೇಟಿಯಾದುದು ಎಂದು ಹೇಳುವುದಲ್ಲದೆ ಲಂಕೆಯಿಂದ ಸೀತಾಸಮೇತನಾಗಿ ಬಂದ ಶ್ರೀರಾಮ ತಮ್ಮ ಲಕ್ಷ್ಮಣನೊಡನೆ ಈ ಬೆಟ್ಟದಲ್ಲಿ ಕೆಲಕಾಲ ತಂಗಿದ್ದನಂತೆ.

ಈ ಬೆಟ್ಟದಲ್ಲಿ ಸುತ್ತಮುತ್ತಲ ಊರುಗಳ ಜನರೆಲ್ಲರೂ ಸೇರಿ ರಾಮನವಮಿಯನ್ನು ವಿಶೇಷವಾದ ರೀತಿಯಲ್ಲಿ ಆಚರಿಸುತ್ತಾರೆ.

ಇರ್ಪು ಶ್ರೀರಾಮಲಿಂಗೇಶ್ವರ

ಇರ್ಪು ಸ್ಥಳವು ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನಲ್ಲಿದೆ. ಶ್ರೀರಾಮನು ರಾವಣನೊಡನೆ ಯುದ್ಧಮಾಡಿ ರಾಕ್ಷಸರೆಲ್ಲರನ್ನೂ ಸಂಹರಿಸಿ ಸೀತಾ ಲಕ್ಷ್ಮಣರೊಡನೆ ಇರ್ಪು ಎಂಬ ಈ ಸ್ಥಳಕ್ಕೆ ಬಂದನು. ಇಲ್ಲಿನ ಸುರಮ್ಯ ಸುಂದರ ಪ್ರಶಾಂತ ವಾತಾವರಣವನ್ನು ಕಂಡು ಇಲ್ಲಿ ರಾಮೇಶ್ವರಲಿಂಗ ಪ್ರತಿಷ್ಠಾಪನೆ ಮಾಡಿ ಒಂದು ದೇವಾಲಯ ನಿರ್ಮಿಸಬೇಕು ಎಂದು ನಿರ್ಧರಿಸಿದನು. ದೇವಾಲಯದ ಕಟ್ಟಡ ಏಳುತ್ತಿರುವಾಗ ಮುನಿಶ್ರೇಷ್ಠರುಗಳನ್ನು ಆಹ್ವಾನಿಸಿ ಲಿಂಗಪ್ರತಿಷ್ಠಾಪನೆಗೆ ಮುಹೂರ್ತವನ್ನು ನಿರ್ಧರಿಸಿಕೊಡುವಂತೆ ಕೇಳಿಕೊಂಡನು. ಮುನಿಪುಂಗವರು ಮುಹೂರ್ತವನ್ನು ನಿರ್ಧರಿಸಿದ ಮೇಲೆ, ಆ ಮುಹೂರ್ತಕ್ಕೆ ಸರಿಯಾಗಿ ಲಿಂಗಪ್ರತಿಷ್ಠಾಪನೆ ಮಾಡಬೇಕೆಂದು ನಿರ್ಧರಿಸಿದ ಶ್ರೀರಾಮನು, ನಿಗದಿತ ದಿನಕ್ಕೆ ನಿಗದಿತ ಸಮಯಕ್ಕೆ ಚ್ಯುತಿ ಬಾರದಂತೆ, ಕಾಶಿಯಿಂದ ಲಿಂಗವನ್ನು ತರಲು ಹೇಳಿ ಆಂಜನೇಯನನ್ನು ಕಳಿಸಿದನು.

ಲಿಂಗವನ್ನು ತರಲೆಂದು ಆಂಜನೇಯನು ಕಾಶಿಗೆ ಹೋದನು. ಹೋದ ಆಂಜನೇಯ ನಿಗದಿತ ದಿನಕ್ಕೆ ನಿಗದಿತ ಸಮಯಕ್ಕೆ ಬರಬೇಕಿತ್ತು.ಆದರೆ ಏನಾಯಿತೋ ಏನೋ ನಿಗದಿತ ದಿನ ನಿಗದಿತ ಸಮಯ ಬಂದರೂ ಆಂಜನೇಯ ಬರಲೇ ಇಲ್ಲ. ದೇವಾಲಯದ ಕಟ್ಟಡ ಸಿದ್ಧವಾಗಿತ್ತು. ಲಿಂಗ ಪ್ರತಿಷ್ಠಾಪನಾ ಕಾರ್ಯವನ್ನು ಕಣ್ತುಂಬಿಕೊಳ್ಳಲು ಎಲ್ಲರೂ ಕಾತುರದಿಂದ ಕಾದಿದ್ದರು. ನಿಗದಿತ ಸಮಯಕ್ಕೆ ಆಂಜನೇಯ ಲಿಂಗವನ್ನು ತರಲಿಲ್ಲ. ಮುಹೂರ್ತ ಮೀರಿ ಹೋಗುವುದೆಂದು ಭಾವಿಸಿದ ಶ್ರೀರಾಮನು ತಾನೇ ಒಂದು ಲಿಂಗವನ್ನು ನಿರ್ಮಿಸಿ ಸರಿಯಾದ ಮುಹೂರ್ತದಲ್ಲಿ ಪ್ರತಿಷ್ಠಾಪಿಸಿದನು.

ಶ್ರೀರಾಮನು ಲಿಂಗಪ್ರತಿಷ್ಠಾಪನೆ ಮಾಡಿ ಮುಗಿದ ಸಮಯಕ್ಕೇ ಬಂದ ಆಂಜನೇಯನು ಕಾಶಿಯಿಂದ ಲಿಂಗವನ್ನು ತಂದೆನೆಂದು ಉಗ್ಗಡಿಸಿ ನಿಂತನು. ಆಂಜನೇಯನ ಮನಸ್ಸಮಾಧಾನಪಡಿಸಲು ಆಂಜನೇಯ ತಂದ ಲಿಂಗವನ್ನು ಇರ್ಪುಗೆ ಹತ್ತು ಕಿ.ಮೀ. ದೂರದಲ್ಲಿರುವ ಪೆರ್ಮಾಡಿನಲ್ಲಿ ಪ್ರತಿಷ್ಠಾಪಿಸಲಾಯಿತಂತೆ.

ಪಾಳ್ಯದ ಶ್ರೀಲಕ್ಷ್ಮೀ ಜನಾರ್ದನ

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಪಾಳ್ಯದಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿ, ರಾಮೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳಿವೆ.

ಹಿಂದೆ ಇಲ್ಲಿ ವಿತಕಂಟಕನೆಂಬ ರಾಕ್ಷಸನು ರಾಮನಾಥಪುರದ ಶ್ರೀರಾಮೇಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿದಾಗ ಅವನ ತಲೆಯಿಂದ ಹೊಗೆ ಬರಲಾರಂಭಿಸಿತಂತೆ. ಆಗ ಅವನ ಘೋರ ತಪಸ್ಸಿನಿಂದ ತೃಪ್ತನಾದ ಶ್ರೀರಾಮಚಂದ್ರನು ಪ್ರತ್ಯಕ್ಷನಾಗಿ

'ವಿತಕಂಟಕ, ನಿನ್ನ ಕೋರಿಕೆಯೇನು?'ಎಂದು ಕೇಳಿದನು. ಅದಕ್ಕೆ ವಿತಕಂಟಕನು

'ಸ್ವಾಮಿ, ನಾನು ದೇವಾಧಿದೇವತೆಗಳೆಲ್ಲರಿಗಿಂತಲೂ ಬಲಿಷ್ಠನಾಗಿರಬೇಕು ಎಂಬ ವರವನ್ನು ಕರುಣಿಸು ತಂದೆ' ಎಂದು ಬೇಡಿಕೊಂಡನು. ಅದಕ್ಕೆ ರಾಮಚಂದ್ರನು

'ತಥಾಸ್ತು!' ಎಂದು ಹೇಳಿ ಅದೃಶ್ಯನಾದನು.

ಶ್ರೀರಾಮಚಂದ್ರನು ಕೊಟ್ಟ ವರಬಲದಿಂದ ಗರ್ವಿಷ್ಠನಾದ ವಿತಕಂಟಕನು ಸೈನ್ಯ ಸಮೇತನಾಗಿ ಮಹಾವಿಷ್ಣುವಿನ ಮೇಲೆ ದಂಡೆತ್ತಿ ಹೋದನು. ಮಹಾವಿಷ್ಣುವು ತ್ರಿಮೂರ್ತಿಗಳ ಅವತಾರವೆತ್ತಿ ರಾಕ್ಷಸರುಗಳನ್ನೆಲ್ಲ ಸಂಹಾರ ಮಾಡಿದನು. ಅನಂತರ ಈಗಿನ ಪಾಳ್ಯಕ್ಕೆ ಅರ್ಚನಾರೂಪವನ್ನು ಸ್ವೀಕರಿಸಿ ಉದ್ಭವಮೂರ್ತಿಯಾಗಿ ನೆಲಸಿದನು.

ಶ್ರೀಲಕ್ಷ್ಮೀ ಜನಾರ್ದನ ಹೇಗೆ ತ್ರಿಮೂರ್ತಿ ಆದ ಎಂದರೆ ಇಲ್ಲಿರುವ ವಿಗ್ರಹವನ್ನು ಗಮನಿಸಬೇಕು.

ಬ್ರಹ್ಮ ಎನ್ನಲು – ಘಂಟೆ ಉಡಿದಾರ ಕೌಪೀನ

ವಿಷ್ಣು ಎನ್ನಲು – ಶಂಖ, ಚಕ್ರ

ಮಹೇಶ್ವರ ಎನ್ನಲು – ಜಟೆ

ಇವೆ. ಬಲಗಡೆ ಶಂಖತೀರ್ಥ ಎಡಗಡೆ ಚಕ್ರತೀರ್ಥ ಎಂಬ ಹಳ್ಳಗಳು ಹರಿಯುತ್ತವೆ. ಉತ್ಸವ ಶೈವ – ವೈಷ್ಣವ ಭಾವೈಕ್ಯದ ಜಾತ್ರೆಯಾಗಿದೆ.

ಜನಪದ ರಾಮಾಯಣದ ಕಥೆಗಳು

ಸೀತಾಪಹರಣ



ರಕ್ಷಿಸಲು ಬಂದವನ ರೆಕ್ಕೆ ಕತ್ತರಿಸುವ ರಕ್ಕಸನ ಸೊಕ್ಕು

ಅಮರಕಥಾಮೃತ ರಾಮಾಯಣ



ಶಿವಭಕ್ತ ರಾವಣ. ಕ್ಯಾತೇಗೌಡನ ದೊಡ್ಡಿಯ ರಾವಳೇಶ್ವರ
ದೇವಸ್ಥಾನ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ

ಮೃಗವಧೆ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಸಮೀಪದಲ್ಲಿ ಮೃಗವಧೆ ಎಂಬ ಊರಿದೆ.ಈ ಊರಿನ ಹೆಸರಿಗೆ ರಾಮಾಯಣದ ಕಥೆ ತಗಲು ಹಾಕಿಕೊಂಡಿದೆ.

ದಂಡಕಾರಣ್ಯದಲ್ಲಿ ಶ್ರೀರಾಮಾಸೀತಾಲಕ್ಷ್ಮಣರು ನೆಮ್ಮದಿಯಿಂದಿರುವಾಗ ಶೂರ್ಪಣಖಿಯ ದುರ್ಬೋಧೆಗೆ ಒಳಗಾದ ರಾವಣನು ಸೀತೆಯನ್ನು ಪಡೆಯ ಬಯಸಿದನು. ಸದಾಕಾಲ ರಾಮಲಕ್ಷ್ಮಣರ ಕಣ್ಗಾವಲಿನಲ್ಲಿರುವ ಸೀತೆಯನ್ನು ಪಡೆಯುವುದು ಅವನಿಗೆ ಸುಲಭವಾಗಿರಲಿಲ್ಲ. ಅದಕ್ಕಾಗಿ ಅವನ ಕುಬುದ್ಧಿಗೆ ಒಂದು ತಂತ್ರ ಹೊಳೆಯಿತು. ಅದೇನೆಂದರೆ ರಾಮಲಕ್ಷ್ಮಣರನ್ನು ಸೀತೆಯಿಂದ ದೂರ ಹೋಗುವಂತೆ ಮಾಡಿ ಅವರಿಲ್ಲದಿದ್ದಾಗ ಸೀತೆಯನ್ನು ಅಪಹರಿಸಬಹುದೆಂಬುದೇ ಅವನ ಕುತಂತ್ರ.

ರಾವಣನ ಕುತಂತ್ರಕ್ಕೆ ಅವನ ಮಾವ ಮಾರೀಚ ಸಹಾಯ ಮಾಡಲು ನಿಲ್ಲಬೇಕಾಯಿತು.ಮಾರೀಚನಿಗೆ ಇದು ಇಷ್ಟವಿಲ್ಲದಿದ್ದರೂ 'ನಾನು ಇದನ್ನು ಮಾಡಲಾರೆ' ಎಂದು ಹೇಳಿ ರಾವಣನಿಂದ ಸಾಯುವ ಬದಲು ರಾಮಬಾಣದಿಂದ ಸಾಯುವುದೇ ಸಾರ್ಥಕವೆನಿಸಿ ಕಾರ್ಯಭಾರಕ್ಕೆ ಸಿದ್ಧನಾದನು.

ಮಾಯಾವಿ ಮಾರೀಚನು ದಂಡಕಾರಣ್ಯವೇ ಮಿಂಚುವಂತೆ ಸ್ವರ್ಣಮೃಗದ ವೇಷದಲ್ಲಿ ರಾಮನೊಡನಿದ್ದ ಸೀತೆಯ ಮುಂದೆ ಚಂಗುಚಂಗುನೆ ನೆಗೆಯುತ್ತ ಸೀತೆಯ ಬೆರಗಿಗೆ ಕಾರಣನಾದನು. ಇದು ಮಾಯಾಮೃಗವೆಂದು ತಿಳಿಯದ ಸೀತೆ ಆ ಜಿಂಕೆ ತನಗೆ ಬೇಕೆಂದು ರಾಮನಿಗೆ ಹೇಳಿದಳು. ಸೀತೆಯ ಹುಲುಬಯಕೆಯನ್ನು ಈಡೇರಿಸಲು ರಾಮ ಅದನ್ನು ಹಿಡಿಯಲು ಪ್ರಯತ್ನಿಸಿದನು. ಕಪಟಮೃಗವು ಅವನ ಕೈಗೆ ಸಿಗದೆ ನೆಗೆನೆಗೆದು ಮುಂದೆ ಮುಂದೆ ಓಡತೊಡಗಿತು. ಈಗ ರಾಮ ಅನಿವಾರ್ಯವೆನಿಸಿ ಬಿಲ್ಲಬಾಣಗಳೊಡನೆ ಆ ಮಾಯಾಮೃಗವನ್ನು ಬೆನ್ನಟ್ಟಿದನು. ಅದು ಅತ್ಯಂತ ವೇಗವಾಗಿ ಓಡುತ್ತಾ, ಮಿಂಚಿ ಮಾಯವಾಗುತ್ತ ಮುನ್ನಡೆಯುತ್ತಿದ್ದಾಗ ರಾಮನು ಅಸಹನೆಯಿಂದ ಅದರ ಮೇಲೆ ಬಾಣವನ್ನು ಪ್ರಯೋಗಿಸಿ ಕೊಂದನು. ಹೀಗೆ ರಾಮನು ಮೃಗವನ್ನು ವಧೆ ಮಾಡಿದ ಸ್ಥಳ ಇದಾದ್ದರಿಂದ ಈ ಸ್ಥಳಕ್ಕೆ ಮೃಗವಧೆ ಎಂದು ಹೆಸರಾಯಿತು. ಅದೀಗ ಒಂದು ಊರಾಗಿ ಆ ಊರಿನ ಹೆಸರಾಗಿದೆ.

ಪ್ರೇತವನಗುಡ್ಡ

ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿರುವ ದ್ವೀಪವನ್ನು ಪ್ರೇತವನಗುಡ್ಡ ಎಂದು ಕರೆಯುತ್ತಾರೆ. ಈ ಹೆಸರು ಬರಲು ಕಾರಣವೇನು ಎಂದು ಕೇಳಿದರೆ ಅಲ್ಲಿನ ಸ್ಥಳೀಯರು ನಮ್ಮನ್ನು ರಾಮಾಯಣದ ಕಾಲಕ್ಕೆ ಕರೆದೊಯ್ಯುತ್ತಾರೆ.

ಶ್ರೀರಾಮನು ವನವಾಸದಲ್ಲಿದ್ದಾಗ ದಶರಥ ಮಹಾರಾಜನು ಪುತ್ರನ ಅಗಲಿಕೆಯನ್ನು ತಾಳಲಾರದೆ ಅಸುನೀಗಿದ್ದು ಸರಿಯಷ್ಟೆ. ಇದು ದಶರಥನ ಅಕಾಲಮೃತ್ಯುವಾಗಿತ್ತು. ಆದ್ದರಿಂದ ಅವನಿಗೆ ಸ್ವರ್ಗಪ್ರಾಪ್ತಿಯಾಗದೆ ಪ್ರೇತವಾಗಿ ಅಲೆಯುತ್ತ ಬಂದು ಶ್ರೀರಾಮನ ಕನಸಿನಲ್ಲಿ ಕಾಣಿಸಿಕೊಂಡು 'ನಾನು ಪ್ರೇತವಾಗಿ ಅಲೆಯುತ್ತಿದ್ದೇನೆ. ನನಗೆ ಪಿಂಡವನ್ನು ಕೊಟ್ಟು ಸ್ವರ್ಗಪ್ರಾಪ್ತಿಯಾಗುವಂತೆ ಮಾಡು ಕಂದ' ಎಂದು ಬೇಡಿಕೊಂಡಂತಾಯಿತು.

ಥಟ್ಟನೆ ನಿದ್ರೆಯಿಂದೆಚ್ಚೆತ್ತ ಶ್ರೀರಾಮ ಬೆಳಕಾಗುವವರೆಗೂ ನಿದ್ರೆಯಿಲ್ಲದೆ ಹೊರಳಾಡಿದ. ಸೀತಾಲಕ್ಷ್ಮಣರಿಗೆ ಈ ವಿಷಯ ತಿಳಿಸಿದ. ಅಲ್ಲಿಗೆ ಬಂದ ಅಗಸ್ತ್ಯರಿಗೆ ಶ್ರೀರಾಮ ತನ್ನ ಕನಸಿನ ಸಂಗತಿಯನ್ನು ತಿಳಿಸಿದಾಗ ಅವರು ಶಾಸ್ತ್ರೋಕ್ತವಾಗಿ ಪಿಂಡವನ್ನು ಅರ್ಪಿಸುವ ಕೆಲಸದಲ್ಲಿ ಮಾರ್ಗದರ್ಶನ ಮಾಡಿದರು. ಶ್ರೀರಾಮನು ಪಿಂಡವನ್ನು ಅರ್ಪಿಸಿ ತಂದೆ ದಶರಥನ ಆತ್ಮ ಸ್ವರ್ಗ ಸೇರುವಂತೆ ಮಾಡಿದನು.

ಮಾವ ಕಲ್ಲಯ್ಯ – ದಶರಥೇಶ್ವರ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಿಂದ ಪಶ್ಚಿಮಕ್ಕೆ ನಾಲ್ಕಾರು ಮೈಲಿ ದೂರದಲ್ಲಿರುವ ಕೋಗಿಲವಾಡಿಯನ್ನು ದಾಟಿ ಒಂದೆರಡು ಮೈಲಿ ಹೋದರೆ ಮಾಕಲ್ಲಯ್ಯನ ಬೆಟ್ಟ ಸಿಗುತ್ತದೆ.

ಈ ಬೆಟ್ಟದ ಮೇಲೆ ಒಂದು ದೇವಾಲಯವಿದೆ.ಈ ದೇವಾಲಯದಲ್ಲಿರುವ ಲಿಂಗವನ್ನು 'ದಶರಥೇಶ್ವರ' ಲಿಂಗ ಎಂದು ಕರೆಯುತ್ತಾರೆ. ಆದರೆ ನಮ್ಮ ಗ್ರಾಮೀಣರು 'ಮಾಕಲ್ಲ'ಯ್ಯ ಎಂದು ಕರೆಯುತ್ತಾರೆ. ಈ ದೇವಾಲಯದ ಗರ್ಭಗುಡಿಯ ಹೊರ ಆವರಣದಲ್ಲಿ ಒಂದು ಸ್ತ್ರೀ ವಿಗ್ರಹವಿದೆ. ಇದನ್ನು 'ಕೈಕಮ್ಮತಾಯಿ' ಎಂದು ಕರೆಯುತ್ತಾರೆ.

'ಮಾಕಲ್ಲಯ್ಯ' ಎಂಬ ಪದ ಮಾವಕಲ್ಲಾದಯ್ಯ ಎಂಬುದರ ಅಪಭ್ರಂಶ ಪದವೆಂದು ಕಾಣುತ್ತದೆ. ಮಾವಕಲ್ಲಾದಯ್ಯಕ್ಕೆ ನಮ್ಮ ಜನಪದರಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಒಂದು ಕಥೆಯೇ ಇದೆ.

ಶ್ರೀರಾಮನು ಸೀತಾಲಕ್ಷ್ಮಣರ ಸಮೇತ ವನವಾಸಕ್ಕೆ ಬಂದಿದ್ದಾಗ ಈಗಿನ ಮಾಕಲ್ಲಯ್ಯನ ಬೆಟ್ಟಕ್ಕು ಬಂದಿದ್ದನಂತೆ. ಈ ಬೆಟ್ಟದ ಮೇಲೆ ಅವರು ಬಹಳಷ್ಟು ದಿನಗಳ ಕಾಲ ಉಳಿದಿದ್ದರಂತೆ. ಅವರು ಈ ಸ್ಥಳದಲ್ಲಿದ್ದಾಗ ದಶರಥನು ತೀರಿಕೊಂಡ ಸುದ್ದಿ ಅವರಿಗೆ ತಿಳಿದುಬಂತು. ಶ್ರೀರಾಮನ ಅತೀವ ದುಃಖದಿಂದ ಪರಿತಪಿಸುತ್ತಿರುವಾಗ ಕೊಡಗಿನ ಪ್ರಮುಖರು ಅವನನ್ನು ಸಮಾಧಾನಪಡಿಸಿ ಸತ್ತವರ ಆತ್ಮಕ್ಕೆ ಶಾಂತಿ ಸಿಗಲು ತಿಥಿ ಮಾಡಿರೆಂದು ಹೇಳಿ ತಿಥಿ ಮಾಡುವ ಕ್ರಮವನ್ನು ವಿವರಿಸಿದರು.ಕೊಡಗರು ಸಮಾಧಾನಪಡಿಸಿದ ಮೇಲೆ ಚೇತರಿಸಿಕೊಂಡ ರಾಮಲಕ್ಷ್ಮಣಸೀತೆಯರು ದಶರಥ ಮಹಾರಾಜನ ಹೆಸರಿನಲ್ಲಿ ಬೆಟ್ಟದ ತುದಿಯಲ್ಲಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅದಕ್ಕೆ ಗುಡಿ ಕಟ್ಟಿದರು. ಪಕ್ಕದಲ್ಲೆ ಕೈಕೆಯ ವಿಗ್ರಹವನ್ನು ಕೆತ್ತಿ ನಿಲ್ಲಿಸಿದರು. ಶಾಸ್ತ್ರೀಯವಾಗಿ ತಿಥಿ ಕಾರ್ಯಗಳನ್ನು ನಡೆಸಿದ ಮೇಲೆ ಕೊಡವರು ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು.

ಶ್ರೀರಾಮನು ತಂದೆಯನ್ನು ಕಳೆದುಕೊಂಡೆನಲ್ಲ ಎಂದು ನೆನೆನೆನೆದಂತೆಲ್ಲ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದ. ಹೀಗೆ ಅಗಲಿದ ತಂದೆಯನ್ನು ಹಗಲಿರುಳು ನೆನೆನೆನೆದು ಗೋಳಿಡುತ್ತಿರುವಾಗ ಶ್ರೀರಾಮನನ್ನು ಕುರಿತು ಲಿಂಗದಿಂದ ವಾಣಿಯೊಂದು ಬಂದಿತು. ಅದು ಬೇರೆ ಯಾರ ಧ್ವನಿಯೂ ಆಗಿರದೆ ತಂದೆ ದಶರಥನ ಧ್ವನಿಯೇ ಆಗಿತ್ತು. ಇದರಿಂದ ಶ್ರೀರಾಮನು ಹಿರಿಹಿರಿ ಹಿಗ್ಗಿದನು. ದಶರಥೇಶ್ವರನು ಶ್ರೀರಾಮನನ್ನು ಸಮಾಧಾನಪಡಿಸಿದನು. ತಂದೆ ದೂರವಾದರೂ ತಂದೆಯ ಧ್ವನಿಯಾದರೂ ನಮಗೆ ಉಳಿದಿದೆಯೆಂಬ ನೆಮ್ಮದಿ ಶ್ರೀರಾಮನದು. ಈ ಧ್ವನಿ ರಾಮಲಕ್ಷ್ಮಣಸೀತೆಯರಿಗೆ ಅನೇಕ ಬಗೆಯ ಸಲಹೆ ಸೂಚನೆಗಳನ್ನು ಕೊಟ್ಟು ಅವರನ್ನು ರಕ್ಷಿಸುತ್ತಿತ್ತು. ಶ್ರೀರಾಮನು ತಂದೆಯೊಡನೆ ಮಾತಾಡಬೇಕೆನಿಸಿದಾಗಲೆಲ್ಲ ಈ ಲಿಂಗದೊಡನೆ ಮಾತಾಡಿ ತಂದೆಯನ್ನು ಕಂಡಷ್ಟೇ ಹರ್ಷಗೊಳ್ಳುತ್ತಿದ್ದನು. ಲಕ್ಷ್ಮಣ ಸೀತೆಯರೂ ಈ ಸಂತೋಷದಲ್ಲಿ ಪಾಲುಗೊಳ್ಳುತ್ತಿದ್ದರು.

ಇತ್ತ ರಾವಣನಿಂದ ಪ್ರೇರಿತನಾದ ಮಾರೀಚನು ಮಾಯಾಮೃಗವಾಗಿ ಬಂದು ಸೀತೆಯ ಹೃದಯವನ್ನು ಸೂರೆಗೊಂಡನು. ಸೀತೆಯು ಆ ಸ್ವರ್ಣಮೃಗವನ್ನು ಬಯಸಿದಳು. ಶ್ರೀರಾಮನು ಅದನ್ನು ಕೊಲ್ಲದೆ ಹಿಡಿಯುವುದಾಗಿ ಪ್ರಯತ್ನಿಸಿದನು. ಅದು ಅವನ ಕೈಗೆ ಸಿಕ್ಕದೆ ಅವನನ್ನು ದೂರಕ್ಕೆ ಇನ್ನೂ ದೂರಕ್ಕೆ ಮತ್ತೂ ದೂರಕ್ಕೆ ಸೆಳೆದುಕೊಂಡು ಹೋಯಿತು. ಆ ಜಿಂಕೆ ಕೈಗೆ ಸಿಗಲಾರದ ಮಾಯಾಮೃಗವೆಂದು ತಿಳಿದಾಗ ರಾಮನು ಅದನ್ನು ಬಾಣದಿಂದ ಹೊಡೆದನು. ಆಗ ಆ ಚಿನ್ನದ ಜಿಂಕೆಯು 'ಹಾ! ಸೀತಾ! ಹಾ! ಲಕ್ಷ್ಮಣಾ!' ಎಂಬುದಾಗಿ ರಾಮನ ಧ್ವನಿಯನ್ನು ಅನುಕರಿಸಿ ಕೂಗಿತು. ಈ ಧ್ವನಿಯನ್ನು ಕೇಳಿದ ಸೀತೆ ಭಯದಿಂದ ನಡುಗಿದಳು. ಪತಿಯು ಅಪಾಯದಲ್ಲಿರುವುದರಿಂದ ಸಹಾಯಕ್ಕಾಗಿ ಲಕ್ಷ್ಮಣನನ್ನು ಹೋಗೆಂದು ಒತ್ತಾಯ

ಮಾಡಿದಳು. ಅತ್ತಿಗೆಯ ಆಜ್ಞೆಯನ್ನು ಮೀರಲಾರದೆ ಲಕ್ಷ್ಮಣನು ಅಣ್ಣ ಶ್ರೀರಾಮನ ಧ್ವನಿ ಬಂದ ಕಡೆಗೆ ಹೊರಟನು.

ಇಂಥ ಸಮಯಕ್ಕಾಗಿ ಹೊಂಚುಹಾಕಿ ಕುಳಿತಿದ್ದ ರಾವಣನು ಸನ್ಯಾಸಿ ವೇಷದಲ್ಲಿ ಸೀತೆ ಇದ್ದ ದಶರಥೇಶ್ವರ ಗುಡಿಯ ಬಳಿಗೆ ಬಂದ. 'ಭವತಿ ಭಿಕ್ಷಾಂ ದೇಹಿ!' ಎಂದ. ಸನ್ಯಾಸಿಗಳ್ಯಾರೋ ಭಿಕ್ಷೆಗೆ ಬಂದಿದ್ದಾರೆಂದು ತಿಳಿದ ಸೀತೆಯು ಭಿಕ್ಷೆಯನ್ನು ಕೊಡಲು ಮೇಲೆದ್ದಳು. ಆ ಕೂಡಲೆ ದಶರಥೇಶ್ವರ ಲಿಂಗದಿಂದ

'ಆತ ಋಷಿಯಲ್ಲ, ನಾನು ಹುಸಿಯೊಲ್ಲ' ಎಂಬ ಧ್ವನಿ ಬಂತು. ಆದರೆ ಸನ್ಯಾಸಿ ಭಿಕ್ಷಕ್ಕಾಗಿ ಭೋರಿಡುತ್ತಿದ್ದ. ಅವನ ಆರ್ಭಟ ಹೆಚ್ಚಿತು.

'ಅವನು ಋಷಿಯಲ್ಲದಿದ್ದರೇನು? ಭಿಕ್ಷೆ ಕೊಟ್ಟರಾಯ್ತು!' ಎಂದುಕೊಂಡು ಸೀತೆಯು ಭಿಕ್ಷೆಯನ್ನು ಒಂದು ಮೊರದೊಳಗಿಟ್ಟುಕೊಂಡು ಗುಡಿಸಲಿನಿಂದ ಹೊರಬಂದಳು.

ಭಿಕ್ಷುಕ ವೇಷಧಾರಿ ರಾವಣ ಹಿಂದುಮುಂದು ನೋಡದೆ ಥಟ್ಟನೆ ಸೀತೆಯನ್ನೆಳೆದು ತನ್ನ ಪುಷ್ಪಕ ವಿಮಾನಕ್ಕೆ ಕುಳ್ಳಿರಿಸಿಕೊಳ್ಳಲು ನುಗ್ಗಿದ. ಅನಿರೀಕ್ಷಿತ ಆಘಾತದಿಂದ ಬೆದರಿದ ಸೀತೆ

'ಮಾವಾ! ಮಾವಾ! ಮಾವಾೀೀ!' ಎಂದು ಒಂದೇ ಸಮನೆ ಕೂಡಿಕೊಂಡಳು.

ಮಾವ ದಶರಥೇಶ್ವರ ಈಗಾಗಲೆ ಎಚ್ಚರಿಕೆ ಕೊಟ್ಟಾಗಿತ್ತು. ಶಿಲೆಯಾಗಿ ಗುಡಿಯೊಳಗಿದ್ದ ದಶರಥನು ಸೀತೆಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಸೀತೆ ಮತ್ತೆ ಮತ್ತೆ ಕೂಗಿದಳು. ಉತ್ತರ ಬರಲೇ ಇಲ್ಲ. ಅಸಹಾಯಕಳಾದ ಸೀತೆ ದುಃಖತಪ್ತಳಾಗಿ

'ಅಯ್ಯೋ ಮಾವಾ, ನನ್ನ ಪಾಲಿಗೆ ಕಲ್ಲಾಗಿ ಹೋದೆಯಾ? ಮಾವಾ ಕಲ್ಲಾದೆಯಾ? ಕಲ್ಲಾದೆಯಾ?' ಎಂದು ಮತ್ತೆ ಮತ್ತೆ ಕೂಗಿದಳು.

ಸೀತೆಯ ಪಾಲಿಗೆ ಮಾವ ಕಲ್ಲಾಗಿಯೇ ಹೋಗಿದ್ದ. ಸೀತಾಪಹರಣ ನಡೆದೇ ಹೋಯಿತು. ಅಂದಿನಿಂದ ದಶರಥೇಶ್ವರ ಲಿಂಗಕ್ಕೆ 'ಮಾವ ಕಲ್ಲಾದಯ್ಯ – ಮಾವುಕಲ್ಲಯ್ಯ – ಮಾಕಲ್ಲಯ್ಯ' ಎಂದು ಕರೆಯುವುದು ರೂಢಿಗೆ ಬಂತು. ಬೆಟ್ಟಕ್ಕೆ ಮಾಕಲ್ಲಯ್ಯನ ಬೆಟ್ಟ ಎಂಬ ಹೆಸರಾಯ್ತು.

ಸೀತೆಹೂವು

ಕೊಡಗು, ಮಲೆನಾಡು ಮತ್ತು ಕರಾವಳಿಗಳ ಅರಣ್ಯಗಳಲ್ಲಿ ಕೆಲವು ಮರಗಳ ಮೇಲೆ ಪರಾವಲಂಬಿಯಾಗಿರುವ ಒಂದು ಸಸ್ಯದಲ್ಲಿ ಬಿಡುವ ತುಸು ಊದಾಬಣ್ಣದ ಮಲ್ಲಿಗೆ ದಂಡೆಯಂತಿರುವ ಹೂಗೊಂಚಲನ್ನು ಸೀತೆಹೂ ಎನ್ನುತ್ತಾರೆ. ಜೂನ್ ತಿಂಗಳಿಂದ ಸೆಪ್ಟಂಬರ್‌ವರೆಗೆ ಹೇರಳವಾಗಿ ಕಾಣುವ ಈ ಪರಾವಲಂಬಿ ಹೂಗಿಡವನ್ನು ಬೇರೆ ಬೇರೆ ಮರಗಳ ಕೊಂಬೆಗಳ ಮೇಲೆ ಕಾಣಬಹುದಾಗಿದೆ. ಇದನ್ನು ಸೀತೆಹೂ, ಸೀತಾಳದಂಡೆ, ಸೀತೆಹೂದಂಡೆ, ಸೀತಾಳೆಪುಷ್ಪ ಎಂಬೆಲ್ಲ ಹೆಸರಿನಿಂದ ಕರೆಯುತ್ತಾರೆ. ಈ ಹೂವಿಗೆ ರಾಮಾಯಣದ ಸೀತೆಯ ಹೆಸರು ಬೆಸೆದುಕೊಂಡು ಬಂದಿರುವುದಕ್ಕೆ ಒಂದು ಪುರಾಣ ಕಥೆಯಿದೆ.

ಒಮ್ಮೆ ಸೀತಾದೇವಿ ತುಸು ಊದಾಬಣ್ಣದ ಮಲ್ಲಿಗೆಯಾಕಾರದ ಹೂಗಳನ್ನು ಕಿತ್ತು ಅದನ್ನು ದಂಡೆ ಕಟ್ಟಲು ನಾರಿಗಾಗಿ ಹುಡುಕಾಡುತ್ತಿದ್ದಳಂತೆ. ಎಲ್ಲೂ ನಾರು ಸಿಗದೆ ಹೂಕಟ್ಟಲು ಪರದಾಡುತ್ತಿರುವಾಗ ಒಂದು ಅಶರೀರವಾಣಿ ಮೊಳಗಿತಂತೆ.

'ಸೀತಾಮಾತೆ! ನೀನು ಹೂವುಗಳನ್ನು ದಂಡೆಯಾಗಿ ಮಾಡಲು ನಾರನ್ನು ಹುಡುಕುತ್ತಿರುವುದನ್ನು ನೋಡಿ ನಮಗೆ ನೋವಾಗಿದೆ. ಆದ್ದರಿಂದ ಇನ್ನು ಮುಂದೆ ಈ ಹೂವು ಬಿಡಿಬಿಡಿಯಾಗಿರದೆ ದಂಡೆಯಾಕಾರದಲ್ಲೆ ಅರಳಿ ನಿನ್ನ ತುರುಬಿನ ಅಲಂಕಾರಕ್ಕೆ ಸಿದ್ಧವಾಗುತ್ತದೆ!' ಎಂದಿತಂತೆ. ಅಂದಿನಿಂದ ಈ ಹೂವು ದಂಡೆಯಾಗಿಯೇ ಸೀತೆಯ ತುರುಬನ್ನು ಅಲಂಕರಿಸುತ್ತಿತ್ತು.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತಿರುವಾಗ ತಾನು ಯಾವ ಕಡೆಗೆ ಹೋಗಿರುತ್ತೇನೆಂದು ರಾಮನಿಗೆ ತಿಳಿಯಲಿ ಎಂದು ಸೀತೆ ಈ ಹೂದಂಡೆಯನ್ನು ತನ್ನ ತಲೆಯಿಂದ ತೆಗೆದು ಭೂಮಿ ಕಡೆಗೆ ಎಸೆದಳಂತೆ. ಆ ಹೂದಂಡೆ ಒಂದು ಮರದ ಕೊಂಬೆಯ ಮೇಲೆ ಬಿದ್ದತಂತೆ. ಆಗಿನಿಂದ ಅದು ಮರದ ಕೊಂಬೆಗಳ ಮೇಲೆ ಬೆಳೆಯುವ ಗಿಡವಾಗಿರುವುದಲ್ಲದೆ 'ಸೀತೆಹೂ' ಎಂಬ ಹೆಸರನ್ನೂ ಪಡೆದುಕೊಂಡಿದೆ.

ಮರದ ಮೇಲೆ ಬಂದಳಿಕೆಯ ಹಾಗೆ ಬೆಳೆಯುವ ಸೀತೆ ಹೂ ಗಿಡ ಆರ್ಕಿಡ್(Orchid) ಕುಟುಂಬಕ್ಕೆ ಸೇರಿದ ಸಸ್ಯ. ಆರ್ಕಿಡ್ ವಂಡಾ(Vanda) ಜಾತಿಯ ಈ ಸಸ್ಯ ಮರಕ್ಕೆ ಅಂಟಿಕೊಳ್ಳುವ ಹಾಗೂ ಗಾಳಿಯಲ್ಲಿ ತೇಲಾಡುವ ಬೇರುಗಳನ್ನು ಹೊಂದಿದೆ. ತೇಲಾಡುವ ಬೇರಿನಲ್ಲಿರುವ ವೆಲೆಮನ್(Valeman) ಅಂಗಾಂಶದಿಂದ ಹವೆಯಲ್ಲಿರುವ ತೇವಾಂಶವನ್ನು ಹೀರಿಕೊಂಡು ತಾನೆ ಆಹಾರ ತಯಾರಿಸಿಕೊಳ್ಳುತ್ತದೆ.

ಸೀತೆಯ ಸೆರಗು

ತುಮಕೂರು ಜಿಲ್ಲೆಯ ಸಿದ್ಧಗಂಗಾ ಕ್ಷೇತ್ರದ ಬಳಿಯಿರುವ ರಾಮದೇವರ ಬೆಟ್ಟದ ಬಂಡೆಯ ಮೇಲೆ ಸೀರೆಯ ಸೆರಗು ಬೀಸಿದಂತೆ ಗುರುತಿದೆ. ಇದನ್ನು ಸೀತೆಯ ಸೆರಗು ಎಂದು ಕರೆಯುತ್ತಾರೆ.

ರಾಮಲಕ್ಷ್ಮಣರನ್ನು ಚಿನ್ನದ ಜಿಂಕೆ ತಂತ್ರದಿಂದ ವಂಚಿಸಿದ ರಾವಣನು ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಅವಳ ನೀಳವಾದ ಸೆರಗು ಜಾರಿ ಆ ಬೆಟ್ಟದ ನೆತ್ತಿಯನ್ನು ಸವರಿಕೊಂಡು ಹೋಯಿತೆಂದು ಹೇಳುತ್ತಾರೆ.

ರಾವಣನ ವಿಮಾನದ ವೇಗಕ್ಕೆ ಹಾಗೆ ಸವರಿಕೊಂಡು ಹೋದ ಸೀರೆಯ ಗುರುತು ಹಾಗೆಯೇ ಉಳಿದಿದೆ. ಬೆಟ್ಟದ ನೆತ್ತಿಯ ಮೇಲಿನ ಪ್ರಾಕೃತಿಕ ವೈಚಿತ್ರ್ಯವನ್ನೂ ಶಿಲ್ಪಿಯೊಬ್ಬನ ಕೈಚಳಕವನ್ನೂ ಜನಪದರು ರಾಮಾಯಣದ ಘಟನೆಗೆ ಹೊಂದಿಸಿ ಈ ಪುರಾಣಕಥೆಯನ್ನು ಹೇಳಿದ್ದಾರೆ ಎನ್ನುವವರೂ ಇದ್ದಾರೆ.

ಲೇಪಾಕ್ಷಿ

ಲೇಪಾಕ್ಷಿಯು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿರುವ ಹಿಂದೂಪುರದಿಂದ ೧೫ ಕಿ.ಮೀ. ದೂರದಲ್ಲಿರುವ ಒಂದು ರಮಣೀಯ ತಾಣ. ರಾಮಾಯಣ ಕಥೆಯನ್ನು ತನ್ನೊಳಗೆ ಅಡಗಿಸಿಕೊಂಡಿರುವ ಲೇಪಾಕ್ಷಿ ಒಂದು ಪವಿತ್ರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ.

ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನವಾಸಕ್ಕೆ ಬಂದಿದ್ದಾಗ ಪಂಚವಟಿ ದಾರಿಯಲ್ಲಿ ಜಟಾಯು ಎಂಬ ಪಕ್ಷಿಯ ಸಖ್ಯ ಬೆಳೆಯಿತು. ಅಲ್ಲಿಂದ ಜಟಾಯು ಶ್ರೀರಾಮನನ್ನ ಭಕ್ತಿಯಿಂದ ಸೇವಿಸಿಕೊಂಡಿತ್ತು.

ಹೀಗಿರುವಾಗ ಆಕಸ್ಮಿಕವಾಗಿ ಘಟಿಸಿದ ಸನ್ನಿವೇಶಗಳಿಂದ ರಾವಣನು ಸೀತೆಯನ್ನು ಅಪಹರಿಸಲು ಮನಸ್ಸು ಮಾಡಿದ. ಅದಕ್ಕಾಗಿ ಮಾವ ಮಾರೀಚನ ಸಹಾಯವನ್ನು ಕೋರಿದ. ಒಲ್ಲದ ಮನಸ್ಸಿನಿಂದ ಒಪ್ಪಿದ ಮಾರೀಚ ಚಿನ್ನದ ಬಣ್ಣದ ಮಾಯಾಮೃಗವಾಗಿ ಸೀತೆಯ ಕಣ್ಣಿಗೆ ಬಿದ್ದ. ಆ ಚಂದದ ಸ್ವರ್ಣಮೃಗವನ್ನು ತಮ್ಮ ಆಶ್ರಮದಲ್ಲಿ ಇರಿಸಿಕೊಂಡು ಸಾಕುತ್ತ ಅದರೊಡನೆ ಆಡುತ್ತ ಕಾಲ ಕಳೆಯಬಹುದೆಂದು ನೆನೆಸಿದ ಸೀತೆ ಆ ಮೃಗ ತನಗೆ ಬೇಕೆಂದು ಆಗ್ರಹಪಡಿಸಿದಳು. ಅದು ಮಾಯಾಮೃಗವಿರಬಹುದೆಂದು ಶಂಕಿಸಿದ ಶ್ರೀರಾಮ ಬೇಡವೆಂದು ಎಷ್ಟೇ ಹೇಳಿದರೂ ಸೀತೆ ಅದು ತನಗೆ ಬೇಕೇಬೇಕೆಂದು ಹಟ ಹಿಡಿದಳು.

ಆಗ ಶ್ರೀರಾಮನು ಲಕ್ಷ್ಮಣನನ್ನ ಸೀತೆಗೆ ಕಾವಲಾಗಿರಿಸಿ ತಾನು ಜಿಂಕೆಯನ್ನು ಹಿಡಿಯಲು ಅದರ ಬೆನ್ನಟ್ಟಿದನು. ಆ ಮಾಯಾಮೃಗ ದೂರಾತಿದೂರ ಕ್ರಮಿಸಿ ರಾಮನ ಕಣ್ಣಿಗೆ ಕಂಡಂತೊಮ್ಮೆ ಕಾಣದಂತೊಮ್ಮೆ ಜಿಗಿದು ಓಡಲಾರಂಭಿಸಿತು. ಈಗ ರಾಮ ಅನಿವಾರ್ಯವೆನಿಸಿ ಅದರ ಮೇಲೆ ಬಾಣವನ್ನು ಪ್ರಯೋಗಿಸಿದನು. ಹುಸಿಯದ ರಾಮಬಾಣ ಮಾರೀಚನ ಮೈಗೆ ನಾಟಿದೊಡನೆಯೇ ಅವನು 'ಹಾ ಸೀತಾ! ಹಾ ಲಕ್ಷ್ಮಣಾ!' ಎಂದು ಚೀರುತ್ತಾ ಸತ್ತ.

'ಹಾ ಸೀತಾ! ಹಾ ಲಕ್ಷ್ಮಣಾ!' ದನಿ ರಾಮನ ದನಿಯನ್ನು ಅನುಕರಿಸಿದಂತಿತ್ತು. ಅದು ರಾಮನದೇ ಧ್ವನಿಯೆಂದು ಯೋಚಿಸಿದ ಸೀತೆ ಭಯಭೀತಳಾಗಿ ಆತಂಕಗೊಂಡು ರಾಮನ ಸಹಾಯಕ್ಕೆ ಹೋಗಲು ಲಕ್ಷ್ಮಣನಿಗೆ ಆಜ್ಞೆ ಮಾಡಿದಳು. ಈ ಎಲ್ಲವೂ ರಾಕ್ಷಸಮಾಯೆ ಎಂದು ತಿಳಿದಿದ್ದರೂ ಅತ್ತಿಗೆಯ ಮಾತನ್ನು ಮೀರಲಾರದೆ ಲಕ್ಷ್ಮಣ ರಾಮನನ್ನು ನೋಡಲು ಹೋಗಲೇಬೇಕಾಯ್ತು. ಆಗ ಲಕ್ಷ್ಮಣನು ಪಕ್ಕದಲ್ಲಿದ್ದ ಜಟಾಯುವನ್ನು ಕರೆದು 'ಸೀತಾಮಾತೆ ಸಂರಕ್ಷಣೆ ನಿನಗೆ ಸೇರಿದ್ದು!' ಎಂದು ಕಾವಲಿರಿಸಿ ಹೋದನು.

ಇತ್ತ ಸಂನ್ಯಾಸಿ ವೇಷದಲ್ಲಿ ಬಂದ ರಾವಣನು ಮೋಸದಿಂದ ಸೀತೆಯನ್ನು ಕದ್ದೊಯ್ಯುತ್ತಿರುವುದನ್ನು ಜಟಾಯು ನೋಡಿತು. ಆ ಕೂಡಲೆ ಜಟಾಯು ರಾವಣನನ್ನು ಬೆನ್ನಟ್ಟಿತು. ಆಕಾಶ ಮಾರ್ಗದಲ್ಲೆ ಬಹುದೂರ ಹೋರಾಡುತ್ತ ಮುನ್ನುಗ್ಗಿತು. ಆದರೆ ರಾವಣ ಕುತಂತ್ರವನ್ನು ಪ್ರಯೋಗಿಸಿ ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿ ಹಾಕಿದನು. ಆಗ ಜಟಾಯು ಆಕಾಶದೆತ್ತರದಿಂದ ಬೆಟ್ಟವೊಂದರ ಮೇಲೆ ಬಿದ್ದು ಸಾವು-ಬದುಕಿನೊಡನೆ ಹೋರಾಡುತ್ತ ನರಳುತ್ತಿತ್ತು.

ಮಾಯಾಮೃಗದ ಬೆನ್ನಟ್ಟಿ ಹೋಗಿದ್ದ ರಾಮಲಕ್ಷ್ಮಣರು ಕಪಟ ಕುತಂತ್ರ ಕ್ರೌರ್ಯಗಳನ್ನು ನೆನೆದು ಸೀತೆಯನ್ನು ನೋಡಲು ವೇಗವಾಗಿ ಧಾವಿಸಿ ಬಂದರು. ಅಲ್ಲಿ ಸೀತೆ ಇಲ್ಲದಿರುವುದನ್ನು ಕಂಡು ಕಂಗಾಲಾದರು. ಲಕ್ಷ್ಮಣನು ಕಾವಲಿರಿಸಿ ಹೋಗಿದ್ದ ಜಟಾಯು ಪಕ್ಷಿಯೂ ಕಾಣಲಿಲ್ಲ. ಆಗ ರಾಮಲಕ್ಷ್ಮಣರು-

'ಲೇ ಪಕ್ಷಿ!' 'ಲೇ ಪಕ್ಷಿ!' 'ಲೇ ಪಕ್ಷಿ!' ಎಂದು ಒಂದೇ ಸಮನೆ ಕೂಗಿ ಕೂಗಿ ಬಸವಳಿದರು.

ನಿರಾಶೆಯಿಂದ ನಿಟ್ಟುಸಿರು ಬಿಟ್ಟು ಬರುತ್ತಿದ್ದ ರಾಮರಿಗೆ ದೂರಾತಿದೂರದಿಂದ ಜಟಾಯು ಪಕ್ಷಿಯ ನರಳುವ ದನಿ ಕೇಳಿಬಂತು. ದನಿ ಬಂದ ದಿಕ್ಕನ್ನು ಅನುಸರಿಸಿ ಬಂದ ರಾಮಲಕ್ಷ್ಮಣರು ರೆಕ್ಕೆಗಳನ್ನು ಕಳೆದುಕೊಂಡು ಬಂಡೆಗೆ ಅಪ್ಪಳಿಸಿ ಬಿದ್ದಿದ್ದ ಪಕ್ಷಿಯನ್ನು ಕಂಡು ಬಹುವಾಗಿ ನೊಂದರು. ಅದರಿಂದ ನಡೆದ ವೃತ್ತಾಂತವನ್ನೆಲ್ಲ ತಿಳಿದುಕೊಂಡರು. ರಾವಣನ ದುಷ್ಕೃತ್ಯವನ್ನು ತಿಳಿಸಿದ ಜಟಾಯು ಆ ಕೂಡಲೆ ಪ್ರಾಣ

ಬಿಟ್ಟಿತು. ಶ್ರೀರಾಮನು ಜಟಾಯುವಿಗೆ ಯಥಾವಿಧಿಯಾಗಿ ಅಂತ್ಯಸಂಸ್ಕಾರವನ್ನು ಮಾಡಿದನು.

ಅಂದು ರಾಮಲಕ್ಷ್ಮಣರು 'ಲೇ ಪಕ್ಷಿ!' ಎಂದು ಕೂಗಿದ ದನಿಯಿಂದ ಆಂಧ್ರಪ್ರದೇಶದಲ್ಲಿರುವ ಈ ಕ್ಷೇತ್ರಕ್ಕೆ 'ಲೇಪಾಕ್ಷಿ' ಎಂದು ಹೆಸರಾಯಿತಂತೆ.

ಇಲ್ಲಿನ ಕೂರ್ಮಶಿಲೆ ಎಂಬ ಗುಡ್ಡದ ಮೇಲೆ ಶ್ರೀರಾಮ, ರಘುನಾಥ, ವೀರಭದ್ರ, ಪಾಪನಾಥೇಶ್ವರ ಹಾಗೂ ದುರ್ಗಾದೇವಿಯ ದೇವಾಲಯಗಳಿವೆ. ಇಲ್ಲಿನ ಬೃಹದ್ಗಾತ್ರದ ನಾಗಲಿಂಗೇಶ್ವರ ಶಿಲ್ಪವು ಅತ್ಯಂತ ಆಕರ್ಷಕವಾಗಿದೆ. ಈ ಗ್ರಾಮದ ರಾಜಬೀದಿಯಲ್ಲಿರುವ ಶ್ರೀರಾಮ ದೇವಾಲಯ ಮತ್ತು ದೊಡ್ಡಕೆರೆ ಸಮೀಪದಲ್ಲಿರುವ ತಿರುಮಲದೇವರಪ್ಪ, ಈಶ್ವರ ದೇವಾಲಯಗಳು ಪ್ರಸಿದ್ಧವಾಗಿವೆ. ಈ ದೇವಾಲಯಕ್ಕೆ ಅರ್ಧ ಕಿ.ಮೀ. ದೂರದಲ್ಲಿ ೧೦ ಅಡಿ ಎತ್ತರ ೩೦ ಅಡಿ ಸುತ್ತಳತೆಯ ಬೃಹದ್ಗಾತ್ರದ ನಂದಿವಿಗ್ರಹವು ನೋಡಲು ಬಹು ಸುಂದರವಾಗಿದೆ.

ಜಟ್ಟಂಗಿ ರಾಮೇಶ್ವರ ಬೆಟ್ಟ

ಜಟ್ಟಂಗಿ ಮತ್ತು ರಾಮಗಿರಿ ಎಂಬವು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಎರಡು ಕಡಿದಾದ ಬೆಟ್ಟಗಳು. ಇಲ್ಲಿರುವ ರಾಮೇಶ್ವರನ ಗುಡ್ಡ ಮತ್ತು ಸಣ್ಣರಾಮೇಶ್ವರಗುಡ್ಡಗಳೆರಡರ ತುದಿಯಲ್ಲೂ ಜಟ್ಟಂಗಿ ರಾಮೇಶ್ವರ ದೇವಾಲಯಗಳಿವೆ. ಇಲ್ಲಿ ಜಟಾಯು, ಶ್ರೀರಾಮ ಮತ್ತು ಈಶ್ವರ – ಈ ಮೂರು ಹೆಸರುಗಳೂ ಸೇರಿ ಜಟ್ಟಂಗಿ ರಾಮೇಶ್ವರ ಎಂದಾಗಿದೆ. ಈ ಶಿವಲಿಂಗವನ್ನು ಶ್ರೀರಾಮನು ತಮಗೆ ಸೀತೆಯ ಬಗೆಗೆ ಮಾಹಿತಿ ನೀಡಿ ಅಸುನೀಗಿದ ಜಟಾಯು ಪಕ್ಷಿಯ ಸ್ಮಾರಕವಾಗಿ ಪ್ರತಿಷ್ಠಾಪಿಸಿದ್ದೆಂದು ನಂಬಿಕೆಯಿದೆ. ಇದೇ ಬೆಟ್ಟದ ಮೇಲಿರುವ ಒಂದು ಬಂಡೆ ಭಾರಿಗಾತ್ರದ ಪಕ್ಷಿಯಾಕಾರದಲ್ಲಿದೆ. ಇದನ್ನು ಜನರು ಜಟಾಯು ಪಕ್ಷಿ ಎಂದು ಕರೆಯುತ್ತಾರೆ.

ಹಿರೇ ಜಟ್ಟಂಗಿ ರಾಮೇಶ್ವರ ಗುಡ್ಡದಲ್ಲಿ ಸ್ಫಟಿಕ ರಾಮಲಿಂಗೇಶ್ವರ ದೇವರ ಗುಡಿಯಿದೆ. ಈ ಗುಡ್ಡದ ತುದಿಯನ್ನು ಬಹಳ ಪ್ರಯಾಸದಿಂದ ಏರಬೇಕಾಗುತ್ತದೆ. ವಯೋವೃದ್ಧರಾಗಲಿ ಸ್ತ್ರೀಯರಾಗಲಿ ಬಾಲಕರಾಗಲಿ ಈ ಬೆಟ್ಟವನ್ನೇರುವ ಸಾಹಸವನ್ನು ಮಾಡುವುದಿಲ್ಲ.

ಸಣ್ಣ ಜಟ್ಟಂಗಿ ರಾಮಗಿರಿಗೆ ಹತ್ತಲು ಮೆಟ್ಟಿಲುಗಳಿರುವುದರಿಂದ ಎಲ್ಲರೂ ಈ ಗುಡ್ಡವನ್ನೇರಿ ದೇವರ ದರ್ಶನ ಪಡೆಯಬಹುದು. ಇಲ್ಲಿನ ಗುಡಿಯ ವಾಯುವ್ಯ ಮೂಲೆಯಲ್ಲಿ ಒಂದು ಕೊಳವಿದೆ. ಇದನ್ನು 'ಸೀತಮ್ಮನ ದೊಣೆ' ಎಂದು ಕರೆಯುತ್ತಾರೆ. ಇದೇ ಗುಡ್ಡದ ಉತ್ತರಕ್ಕೆ 'ತಣ್ಣೀರು ದೊಣೆ' ಎಂಬ ಹೆಸರಿನ

ಕೊಳವಿದೆ. ಇದನ್ನು 'ಏಕಾಂತ ತೀರ್ಥ' ಎಂದು ಕರೆಯುತ್ತಾರೆ. ಇಲ್ಲಿ ಶ್ರೀರಾಮನು ಕೆಲಕಾಲ ಏಕಾಂತವಾಸ ಮಾಡಿದ್ದರಿಂದ ಈ ಹೆಸರು ಬಂದಿತಂತೆ.

ಈ ಬೆಟ್ಟದ ಮೇಲಿರುವ ಶಾಸನವೊಂದರಲ್ಲಿ "ಸೀತೆಯಂ ರಾವಣನುಯೆ ಜಟಾಯು ಕಾದಿ ಸತ್ತಲ್ಲಿ ರಾಮ ಪ್ರತಿಷ್ಠೆಗೆಯ್ದಲ್ಲಿ ಉಣಂ ದೇಗುಲಮಂ ಮಾಡಿದಂದೆ ಇಟ್ಟಿಗೆಯ ದೇಗುಲಮ ಕಳೆದು ಕಳಶ ನಿರ್ಮಾಣಂ ಲಿಂಗಸಿವಿಜೀಯರು ಭಿಕ್ಷಾವೃತ್ತಿಯಿನ್ದ ಕಲ್ಲು ದೇಗುಲವುಂ ದೇಗುಲಂಗಳುಮಂ ಸಮಯಿಸಿ ಕೊಣ್ಡಂಗಳುಮಂ ಕಟ್ಟಿಸಿದರ್" ಎಂದು ಹೇಳಿದೆ.

ಶ್ರೀರಾಮಲಕ್ಷ್ಮಣ ಸೀತೆಯರು ವನವಾಸದಲ್ಲಿದ್ದಾಗ ರಾವಣನು ತನ್ನ ತಂಗಿ ಶೂರ್ಪಣಕಿಯ ಮಾತಿಗೆ ಮರುಳಾಗಿ ಮಾವ ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಿ ಪುಷ್ಪಕ ವಿಮಾನದಲ್ಲಿರಿಸಿಕೊಂಡು ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ರಾವಣನ ಕಪಟವನ್ನರಿಯದ ಸೀತೆ ಆತನನ್ನು ಸಂನ್ಯಾಸಿಯೆಂದು ಭಾವಿಸಿ ಭಿಕ್ಷೆ ನೀಡಲು ಹೋಗಿ ಮೋಸ ಹೋದೆನೆಂದು ತಿಳಿದು 'ಕಾಪಾಡಿ!' 'ಕಾಪಾಡಿ!' ಎಂಬ ಆರ್ತಧ್ವನಿಯಲ್ಲಿ ಚೀರತೊಡಗಿದಳು.

ರಾವಣನು ಸೀತಾಮಾತೆಯನ್ನು ಅಪಹರಿಸಿಕೊಂಡು ಹೋಗುವಾಗ ಸೀತೆಯು ಗೋಳುಗರೆಯುವ ಧ್ವನಿಯನ್ನು ಕೇಳಿದ ಜಟಾಯು ರಾವಣನ ದುಷ್ಕೃತ್ಯವನ್ನು ಕಂಡು ಪುಷ್ಪಕ ವಿಮಾನವನ್ನು ತಡೆದು ಅವನನ್ನು ಪ್ರತಿಭಟಿಸಿ ನಿಂತಿತು. ಜಟಾಯುವಿನ ಈ ಅನಿರೀಕ್ಷಿತ ಪ್ರತಿರೋಧದಿಂದ ಕುಪಿತನಾದ ರಾವಣನು ತನ್ನ ಚಂದ್ರಾಯುಧದಿಂದ ನಿರ್ದಯನಾಗಿ ಅದರ ರೆಕ್ಕೆಗಳನ್ನು ಕತ್ತರಿಸಿಹಾಕಿದನು. ನಿರ್ಭೀತಿಯಿಂದ ಹೋರಾಡುತ್ತಿದ್ದ ಜಟಾಯು ರೆಕ್ಕೆಗಳನ್ನು ಕಳೆದುಕೊಂಡು ಆಕಾಶದೆತ್ತರದಿಂದ ಧೊಪ್ಪನೆ ಈ ಬೆಟ್ಟದ ಬಂಡೆಗೆ ಅಪ್ಪಳಿಸಿ ಬಿತ್ತು.

ಸೀತೆಯನ್ನು ಅರಸುತ್ತ ಬಂದ ರಾಮಲಕ್ಷ್ಮಣರು ಬಂಡೆಯ ಮೇಲೆ ಅಪ್ಪಚ್ಚಿಯಾಗಿ ನರಳುತ್ತ ಕೊನೆಯುಸಿರೆಳೆಯುವ ಸ್ಥಿತಿಯಲ್ಲಿದ್ದ ಜಟಾಯು ಪಕ್ಷಿಯನ್ನು ಕಂಡರು. ಅರೆಜೀವಿಯಾಗಿ ನರಳುತ್ತಿದ್ದ ಈ ಪಕ್ಷಿಯಿಂದ ಶ್ರೀರಾಮನಿಗೆ ನೀಚ ರಾವಣನ ದುಷ್ಕೃತ್ಯ ತಿಳಿಯಿತು. ಆ ಕೂಡಲೆ ಜಟಾಯು ಅಸು ನೀಗಿತು.

ಸೀತೆಯಿರುವ ನೆಲೆಯನ್ನು ಹುಡುಕುತ್ತ ಬಂದ ರಾಮಲಕ್ಷ್ಮಣರು ಕಿಷ್ಕಿಂಧೆಯ ಸುಗ್ರೀವನ ಸಖ್ಯವನ್ನು ಬೆಳೆಸಿ ಆಂಜನೇಯನ ಸಹಾಯದಿಂದ ಸೀತೆಯು ಲಂಕೆಯಲ್ಲಿ ರಾವಣನ ಬಂಧಿಯಾಗಿರುವುದಾಗಿ ತಿಳಿದರು. ಸೀತೆಯನ್ನು ಪಾರುಮಾಡಲು ರಾವಣನೊಡನೆ ಸಮರ ಸಾರಿದ ಶ್ರೀರಾಮನು ರಾವಣನನ್ನು ಕೊಂದು ಅವನ ಸಹೋದರ ವಿಭೀಷಣನಿಗೆ ಪಟ್ಟವನ್ನು ಕಟ್ಟಿ ಅಯೋಧ್ಯಾಭಿಮುಖವಾಗಿ ಹೊರಟರು.

ಹೀಗೆ ಹಿಂದಿರುಗಿ ಬರುತ್ತಿರುವಾಗ ಇಲ್ಲಿನ ಬ್ರಹ್ಮಗಿರಿಯನ್ನು ಕಂಡು ಜಟಾಯು ಪಕ್ಷಿಯ ನೆನಪಾಗಿ, ಅದರ ಉಪಕಾರ ಬುದ್ಧಿಯನ್ನು ಕೃತಜ್ಞತೆಯಿಂದ ಸ್ಮರಿಸಿದರು. ಅಲ್ಲದೆ ಆ ಪಕ್ಷಿಯ ಸ್ಮರಣಾರ್ಥವಾಗಿ ಅದರ ಹೆಸರಿನಲ್ಲಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅದನ್ನು ಜಟಾಯು ರಾಮೇಶ್ವರ ಎಂದು ಕರೆದರು. ಜಟಾಯು ರಾಮೇಶ್ವರ ಜನವಾಣಿಯಲ್ಲಿ ಜಟ್ಟಂಗಿ ರಾಮೇಶ್ವರ ಆಗಿದೆ. ಜೊತೆಗೆ ಬ್ರಹ್ಮಗಿರಿಯ ಸನಿಹದಲ್ಲಿರುವ ಬೆಟ್ಟ ಜಟ್ಟಂಗಿ ರಾಮೇಶ್ವರ ಬೆಟ್ಟ ಎಂದೇ ಹೆಸರಾಗಿದೆ.

ಶಬರಿ ಕೊಳ್ಳ

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸುರೇಬಾನ ಗ್ರಾಮದ ಸಮೀಪದಲ್ಲಿರುವ ಜಲಧಾರೆಯನ್ನು ಶಬರಿಕೊಳ್ಳ ಎಂದು ಕರೆಯುತ್ತಾರೆ. ಸುರೇಬಾನ ಗ್ರಾಮ ಆಧ್ಯಾತ್ಮಿಕ ಮತ್ತು ಪೌರಾಣಿಕ ಮಾಹಿತಿಗಳನ್ನು ತನ್ನ ಉಡಿಯಲ್ಲಿ ತುಂಬಿಕೊಂಡಿದೆ. ಅಯ್ಯಪ್ಪನೆಂದೇ ಪ್ರಖ್ಯಾತನಾದ ಮಣಿಕಂಠ ದೇವರನ್ನು ಕೇರಳ ಸಂಸ್ಥಾನಕ್ಕೆ ಹೋಗುವ ಎಲ್ಲರೂ ಅಯ್ಯಪ್ಪ ನೆಲೆಸಿರುವ ಶಬರಿಮಲೆಯನ್ನು ಬಲ್ಲರು. ಆದರೆ ಅವರು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಸುರೇಬಾನ ಗ್ರಾಮದ ಹತ್ತಿರದಲ್ಲಿರುವ ಶಬರಿಕೊಳ್ಳವನ್ನು ಕೇಳಿ ಅರಿಯರು ಕಂಡು ತಿಳಿಯರು. ಹಾಗಾದರೆ ಶಬರಿ ಶ್ರೀರಾಮನಿಗಾಗಿ ಕಾಯುತ್ತಿದ್ದ ಸ್ಥಳ ಯಾವುದು? ಎಂದು ಕೇಳಿದರೆ ಮಲೆಯಾಳಿಗಳು ತಮ್ಮ ಸಂಸ್ಥಾನದಲ್ಲಿರುವ ಶಬರಿಗಿರಿಯೇ ಶಬರಿಯ ನೆಲೆ ಎಂದು ಹೇಳುತ್ತಾರೆ. ಆದರೆ ಕರ್ನಾಟಕದ ಬೆಳಗಾವಿಯ ರಾಮದುರ್ಗದ ಕಡೆಯ ಜನರು ತಮ್ಮ ಸುರೇಬಾನ ಗ್ರಾಮದ ಬಳಿಯೇ ಶಬರಿ ವಾಸವಾಗಿದ್ದಳು ಎನ್ನುತ್ತಾರೆ. ಇದಕ್ಕೆ ತರ್ಕ ಮಾಡಿ ಪ್ರಯೋಜನವಿಲ್ಲ. ಆದ್ದರಿಂದ ಸುರೇಬಾನ ಗ್ರಾಮದ ಸಮೀಪದಲ್ಲಿರುವ ಶಬರಿಕೊಳ್ಳದ ಬಗೆಗೆ ಜನಪದರು ಹೇಳುವ ಸಂಗತಿಯನ್ನು ತಿಳಿಯೋಣ.

ಶಬರಿಕೊಳ್ಳ ಸುರೇಬಾನ ಗ್ರಾಮದಿಂದ ಮೂರು ಕಿ.ಮೀ. ದೂರದಲ್ಲಿರುವ ಸುಮಾರು ೨೦೦ ಅಡಿ ಎತ್ತರದಿಂದ ಧುಮುಕುವ ರಮಣೀಯ ಜಲಪಾತ. ಈ ಕೊಳ್ಳದ ಸುತ್ತಮುತ್ತ ಬೆಟ್ಟಗುಡ್ಡಗಳಿದ್ದು, ನಡುವೆ ಧುಮ್ಮಿಕ್ಕುವ ಈ ಜಲಧಾರೆಯ ಸೌಂದರ್ಯ ಅನನ್ಯ.

ಶಬರಿ ಸುರೇಬಾನ ಗ್ರಾಮದ ಗ್ರಾಮದೇವತೆ. ಶ್ರೀರಾಮ ಲಕ್ಷ್ಮಣರು ಸೀತಾನ್ವೇಷಣಕ್ಕಾಗಿ ಬಂದ ಸಮಯದಲ್ಲಿ ಈ ಮಹನೀಯರಿಗಾಗಿ ಕಾಯುತ್ತಿದ್ದ ಶಬರಿ ಬಂದ ತನ್ನ ಇಷ್ಟದೈವವಾದ ಶ್ರೀರಾಮನಿಗೆ ಬೋರೆಹಣ್ಣುಗಳನ್ನು ತಿನ್ನಿಸಿದಳಂತೆ. ಅವಳ ಭಕ್ತಿಗೆ ಮೆಚ್ಚಿದ ಶ್ರೀರಾಮನು 'ನಿನಗೆ ಏನು ವರ ಬೇಕೆಂದು ಬೇಡಿಕೋ' ಎಂದಾಗ ಆಕೆ ರಾಮನ ತೊಡೆಯ ಮೇಲೆ ಪ್ರಾಣ ಬಿಡಲು ಬಯಸಿದಳಂತೆ. ಪ್ರಾಣ ಹೋಗುವ ವೇಳೆಯಲ್ಲಿ ಅವಳ ಬಾಯಿಗೆ ನೀರು ಬಿಡಲು ಸುತ್ತಮುತ್ತ ನೋಡಿದಾಗ

ಎಲ್ಲೂ ನೀರ ಸೆಲೆ ಕಾಣದಿದ್ದಾಗ ಶ್ರೀರಾಮನು ಬಾಣ ಪ್ರಯೋಗ ಮಾಡಿ ನೀರು ಚಿಮ್ಮಿಸಿದನಂತೆ. ಚಿಮ್ಮಿದ ಆ ನೀರನ್ನು ಶಬರಿಯ ಬಾಯಿಗೆ ಬಿಟ್ಟನಂತೆ. ಹೀಗೆ ನೀರು ಚಿಮ್ಮಿದ ಸ್ಥಳದಲ್ಲಿ ಎರಡು ಹೊಂಡಗಳಿವೆ.

ಇಲ್ಲಿ ಶಿಲ್ಪಿ ಜಕಣಾಚಾರಿ ಕೆತ್ತಿದ ಶಬರಿದೇವಿಯ ವಿಗ್ರಹವಿದೆ. ಮೂರ್ತಿಯು ಸುಮಾರು ಐದು ಅಡಿ ಎತ್ತರದ್ದಾಗಿದೆ. ಸುಂದರವಾದ ದೇಗುಲವಿದ್ದು ವಿಶಾಲ ಮುಖಮಂಟಪವನ್ನು ಹೊಂದಿದೆ. ನವರಂಗವೂ ಚೆನ್ನಾಗಿದೆ. ದೇವಾಲಯದ ಎದುರಿಗೆ ದೀಪಮಾಲಿಕಾ ಕಂಬವಿದೆ.

ಇಲ್ಲಿನ ಇನ್ನೊಂದು ವಿಶೇಷವೆಂದರೆ ಇಲ್ಲಿರುವ ಶಬರಿಕೊಳ್ಳದಲಿ ಎಂಥಾ ಭೀಕರ ಬೇಸಿಗೆಯ ಕಾಲದಲ್ಲೂ ಜಲ ಬತ್ತಿಹೋಗುವುದಿಲ್ಲವಂತೆ. ಇದು ಆಪತ್ಕಾಲದಲ್ಲಿ ಜನರ ಜಲದ ಅಗತ್ಯವನ್ನು ಪೂರೈಸುವ ಅಮೃತವಾಹಿನಿಯಾಗಿದೆಯಂತೆ.

ಶಬರಿಮಲೆ

ಪಾಂಡ್ಯವಂಶದ ಸಂತತಿಯವರು ವಳ್ಳಯಾರ್, ತೆಂಕಾಸಿ, ಅಚ್ಚನ್ ಕೋವಿಲ್, ಶಿವಗಿರಿ ಮುಂತಾದೆಡೆಗಳಲ್ಲಿ ವಾಸವಾಗಿದ್ದರು. ಅವರಲ್ಲಿ ರಾಜರಾಜಶೇಖರವೆಂಬುವವನು ಸತ್ಯಸಂಧನೂ ಶಿವಭಕ್ತನೂ ಕರ್ತವ್ಯನಿಷ್ಠನೂ ಪ್ರಜಾಪರಿಪಾಲಕನೂ ಆಗಿದ್ದನು. ಆದರೆ ಅವನಿಗೆ ಸಂತಾನವಿಲ್ಲ ಎಂಬ ಕೊರಗು ತೀವ್ರವಾಗಿ ಬಾಧಿಸುತ್ತಿತ್ತು.

ಒಮ್ಮೆ ರಾಜರಾಜಶೇಖರನು ಬೇಟೆಯಾಡಲು ದಟ್ಟಕಾಡಿಗೆ ಬಂದಿದ್ದ. ಬೇಟೆಯಾಡಿದ ಬಳಿಕ ವಿಶ್ರಾಂತಿಗಾಗಿ ಮರವೊಂದರ ಕೆಳಗೆ ಕುಳಿತಿರುವಾಗ ಹತ್ತಿರದಲ್ಲೆ ಮಗುವಿನ ಅಳುವ ದನಿ ಕೇಳಿಬಂತು. ಆಶ್ಚರ್ಯಚಕಿತನಾದ ರಾಜನು ಧ್ವನಿ ಬಂದ ದಿಕ್ಕನ್ನು ಅನುಸರಿಸಿಕೊಂಡು ಹೋದಾಗ ನದಿಯ ದಡದಲ್ಲಿ ಮುದ್ದಾದ ಮಗುವೊಂದು ಕಾಣಿಸಿತು. ಅಲ್ಲಿಗೆ ಬಂದ ಮುನಿಯೊಬ್ಬ ಕ್ಷತ್ರಿಯ ಕುಲದ ಈ ದಿವ್ಯಶಿಶುವನ್ನು ರಕ್ಷಿಸು. ಇದರಿಂದ ಲೋಕಕಲ್ಯಾಣವಾಗುತ್ತದೆ ಎಂದು ಹೇಳಿ ಹೋದನು.

ರಾಜನಿಗೆ ತುಂಬ ಸಂತೋಷವಾಯಿತು. ಮಗುವನ್ನು ತಂದು ರಾಣಿಯ ಕೈಗಿತ್ತನು. ಇಬ್ಬರೂ ಬಹಳ ಪ್ರೀತಿಯಿಂದ ಮಗುವನ್ನು ಸಾಕಿದರು. ಪವಾಡ ಪುರುಷನಾದ ಈ ಮಗುವನ್ನು ಮಣಿಕಂಠ ಎಂದು ಕರೆದರು. ಮಣಿಕಂಠನು ತನ್ನ ಅವತಾರದ ಉದ್ದೇಶವನ್ನೆಲ್ಲ ಪೂರೈಸಿ ತನ್ನ ೧೨ನೇ ವಯಸ್ಸಿನಲ್ಲಿ ದೇವಲೋಕಕ್ಕೆ ಹಿಂದಿರುಗುವುದಾಗಿ ಹೇಳಿದಾಗ ರಾಜನು–

"ನಿನ್ನ ಸ್ಮರಣಾರ್ಥವಾಗಿ ದೇವಾಲಯವೊಂದನ್ನು ನಿರ್ಮಿಸಲು ಒಳ್ಳೆಯ ಸ್ಥಳವನ್ನು ಸೂಚಿಸು" ಎಂದನು. ಅದಕ್ಕೆ ಮಣಿಕಂಠನು ಒಂದು ಬಾಣವನ್ನು ಬಿಟ್ಟ. ಆ ಬಾಣ ಶ್ರೀರಾಮನ ಭಕ್ತಳಾದ ಶಬರಿ ರಾಮನ ಬರುವಿಕೆಗಾಗಿ ಕಾಯುತ್ತ ತಪಸ್ಸು ಮಾಡಿದ ಪುಣ್ಯಸ್ಥಳಕ್ಕೆ ಬಂದು ಬಿತ್ತು. ಅದೇ ಮುಂದೆ ಮಣಿಕಂಠನ ತಪೋಭೂಮಿಯೂ ಆಯಿತು.


ಅಗಸ್ತ್ಯಮುನಿಗಳ ಆದೇಶದಂತೆ ರಾಜರಾಜಶೇಖರನು ಶಬರಿಮಲೆಯಲ್ಲಿ ಅಯ್ಯಪ್ಪನ ದೇವಸ್ಥಾನ ಕಟ್ಟಿಸಿದನು. ಪ್ರತಿವರ್ಷವೂ ಮಕರ ಸಂಕ್ರಾಂತಿಯಂದು ವಿಜೃಂಭಣೆಯ ಉತ್ಸವ ನಡೆಯುತ್ತದೆ. 'ಜ್ಯೋತಿದರ್ಶನ' ಇಲ್ಲಿನ ವಿಶೇಷ.

ಜನಪದ ರಾಮಾಯಣದ ಕಥೆಗಳು

ರಾವಣ : ರಾಮಾಯಣ ಕಥನಕಾರಣ



ಅಮರಕಥಾಮೃತ ರಾಮಾಯಣ



ಜಟಾಜೂಟ ಗಂಗಾಮುಕುಟ ಭಕ್ತ ಶಿರೋಮಣಿ ನೀಲಕಂಠ

ರಾವಳ : ಹತ್ತುತಲೆಯ ಹುಳ

ವಾಲಿ ಮಹಾದೈವ ಭಕ್ತ. ಅವನು ಬ್ರಹ್ಮನನ್ನು ಕುರಿತು ಉಗ್ರವಾದ ತಪಸ್ಸು ಮಾಡಿದ. ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಪ್ರತ್ಯಕ್ಷವಾಗಿ–

"ಭಕ್ತ ವಾಲಿ, ಇಷ್ಟು ಉಗ್ರವಾಗಿ ತಪಸ್ಸು ಮಾಡುತ್ತಿರುವೆಯಲ್ಲ. ನಿನ್ನ ಅಪೇಕ್ಷೆಯಾದರೂ ಏನು?' ಎಂದು ಕೇಳಿದನು. ಅದಕ್ಕೆ ವಾಲಿಯು

"ಪ್ರಭೂ, ನನ್ನನ್ನು ಗೆಲ್ಲುವ ಹಂಬಲದಿಂದ ಯಾರು ನನ್ನ ಮುಂದೆ ಬಂದರೂ ಅವರ ಅರ್ಧಬಲ ನನ್ನನ್ನು ಸೇರಲಿ. ಇದರಿಂದ ಅವರು ನನ್ನನ್ನು ಗೆಲ್ಲಲಾರದೆ ಸೋಲೊಪ್ಪಿಕೊಂಡು ಹಿಂದಿರುಗಲಿ!" ಎಂದು ಕೇಳಿಕೊಂಡನು. ಅದಕ್ಕೆ ಬ್ರಹ್ಮನು

"ತಥಾಸ್ತು!" ಎಂದು ಹೇಳಿ ಅಂತರ್ಧಾನನಾದನು.

ಈ ವರದ ಕಾರಣದಿಂದ ವಾಲಿಯನ್ನು ಗೆಲ್ಲಲು ಯಾರೂ ಸಮರ್ಥರಾಗಲಿಲ್ಲ. ರಾವಣನಂತಹವನಿಗೂ ವಾಲಿ ಭಯಭೀಕರೇಶ್ವರನಾಗಿ ಕಾಣುತ್ತಿದ್ದನು. "ಕೈಲಾಸ ಪರ್ವತವನ್ನೇ ಎತ್ತಿದ ನನ್ನನ್ನು ಈ ಹುಲುವಾನರ ಕೇವಲವಾಗಿ ಕಂಡು ಕಡೆಗಣಿಸುತ್ತಾನೆಂದರೆ ನನ್ನ ಘನತೆಗೆ ಗರಬಡಿದಂತಾಯಿತೆ? ಶಕ್ತಿ ಸವಕಲಾಯಿತೆ? ಸಾಮಥ್ಯ ಸೊರಗಿಹೋಯಿತೆ? ಸಾಹಸ ಸೊಪ್ಪಡಿಸಿ ಹೋಯಿತೆ? ಶೌರ್ಯದ ಸೊಕ್ಕಡಗಿ ಹೋಯಿತೆ? ಸೊಮ್ಮು ಸೂರೆಯಾಗಿ ಹೋಯಿತೆ? ಸೊಲ್ಲೆತ್ತಲು ಶಕ್ತಿಯಿಲ್ಲದ ಪೆಂಡಿರಂತಾದೆನಲ್ಲ!" ಎಂದು ಕೊಮ್ಮನೆ ಕೊರಗಿದನು. ಇಂಥ ಸಂದಿಗ್ಧದಲ್ಲೂ ಅವನಿಗೊಂದು ಉಪಾಯ ಹೊಳೆಯಿತು. ಅದೇನೆಂದರೆ –

"ವಾಲಿಯನ್ನು ಸಮಯ ಸಾಧಿಸಿ ಹಿಂದಿನಿಂದ ಹೋಗಿ ಹಿಡಿದು ಹಿಳಿದು ಹುಗಿದುಹಾಕಬೇಕು!" ಎಂಬುದು. ಹೀಗಿರುವಾಗ ಅಂಥ ಅವಕಾಶ ಕೊನೆಗೂ ಒಮ್ಮೆ ಕೂಡಿ ಬಂತು. ವಾಲಿಯು ನದಿಯಲ್ಲಿ ಈಜುತ್ತಿರುವಾಗ ಹಿಂದಿನಿಂದ ಹೋಗಿ ಹಿಂಗಟ್ಟು ಮುಂಗಟ್ಟುಗಳಿಂದ ಬಿಗಿದು ಹಿಡಿದುಕೊಂಡ.

ಈ ಅನಿರೀಕ್ಷಿತ ಅವಘಡದಿಂದ ಆಶ್ಚರ್ಯಚಕಿತನಾದ ವಾಲಿಯು ತನ್ನ ಬಾಲದಿಂದ ರಾವಣನನ್ನು ಬಳಬಳಸಿ ಬಂಧಿಸಿ ನದಿಯಲ್ಲಿ ಅದ್ದಿ – ತೆಗೆದು ಅದ್ದಿ – ತೆಗೆದು ಸುಸ್ತಾಗಿ ಬಿದ್ದ ಮೇಲೆ ದಡಕ್ಕೆ ತಂದು ಹಾಕಿದ. ಇವನನ್ನು ಹೀಗೆ ಬಿಡಬಾರದೆಂದು ಮನೆಗೆ ತಂದ. ಮನೆಯಲ್ಲಿ ಮಗು ಅಂಗದ ತೊಟ್ಟಿಲಿನಲ್ಲಿ

ಆಡುತ್ತಿತ್ತು. ಆ ತೊಟ್ಟಿಲಿಗೆ ರಾವಣನನ್ನು 'ಹತ್ತುತಲೆ ಹುಳ' ಎಂದು ಕರೆದು ಆಟಿಕೆಯಾಗಿ ನೇತುಹಾಕಿದ. ಮಗು ಅಂಗದನು ರಾವಳ ಆಟಿಕೆಯನ್ನು ಕಾಲಿನಲ್ಲಿ ಒದೆಯುತ್ತಿತ್ತು. ಆಗ ರಾವಣನು ಒದೆತವನ್ನು ತಾಳಿಕೊಳ್ಳಲಾಗದೆ ಕಿಟಾರನೆ ಕಿರುಚಿಕೊಳ್ಳುತ್ತಿದ್ದ.

ಅಂಗದನ ಒದೆತದಿಂದ ಸೊರಗಿದ ರಾವಣ ವಾಲಿಗೆ ವಿಧೇಯನಾಗಿ ತನ್ನನ್ನು ಬಿಡುಗಡೆ ಮಾಡಲು ಗೋಗರೆದನು. ಆಗ ವಾಲಿಯು ಉಗ್ರದೃಷ್ಟಿಯಿಂದ ನೋಡುತ್ತ–

"ಏಯ್ ಹತ್ತು ತಲೆ ಹುಳ ರಾವಳ! ಇನ್ನೆಂದಾದರೂ ಈ ಕಡೆ ತಲೆ ಹಾಕಿದ್ದೇ ಆದರೆ ಹತ್ತು ತಲೆಯಲ್ಲಿ ಒಂದು ತಲೆಯೂ ಉಳಿಯದಂತೆ ಮಾಡುತ್ತೇನೆ. ಹುಷಾರ್!" ಎಂದು ಹೇಳುತ್ತ "ಹೋಗು ಬದುಕಿಕೋ!" ಎಂದು ಹೇಳಿ ಬಿಡುಗಡೆ ಮಾಡಿದನು.

* * * *

"ಹೀಗಿರುವಾಗ ಸುಗ್ರೀವನಿಗಾಗಿ ರಾಮನು ಮರದ ಮರೆಯಲ್ಲಿ ನಿಂತು ವಾಲಿ ಎದೆಗೆ ಬಾಣ ಹೂಡಿ ಅವನನ್ನು ನೆಲಕ್ಕುರುಳಿಸಿದನು. ಈ ಬಾಣ ರಾಮ ಬಿಟ್ಟಿದ್ದೆಂದು ತಿಳಿದ ವಾಲಿಯು ರಾಮನನ್ನು ಹತ್ತಿರಕ್ಕೆ ಕರೆದು–

"ಜಗದೇಕ ವೀರನಾದ ನೀನು ಮರದ ಮರೆಯಲ್ಲಿ ನಿಂತು ಬಾಣ ಪ್ರಯೋಗ ಮಾಡಿದ್ದು ಸರಿಯೆ? ಇದು ಯಾವ ನೀತಿ?" ಎಂದು ಕೇಳಿದನು. ಅದಕ್ಕೆ ರಾಮನು "ಇದು ನೀತಿಯಲ್ಲ ಎನ್ನುವುದು ನನಗೆ ಗೊತ್ತಿತ್ತು. ಆದರೆ ನಿನಗೆ ಬ್ರಹ್ಮನ ವರವಿರುವುದರಿಂದ ನಾನು ನಿನ್ನ ಎದುರಿಗೆ ಬಂದಿದ್ದರೆ ನನ್ನ ಅರ್ಧ ಶಕ್ತಿ ನಿನಗೆ ಬರುತ್ತಿತ್ತು. ಆಗ ನಿನ್ನನ್ನು ಎದುರಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲವಲ್ಲ."

"ಅದಿರಲಿ, ನನ್ನನ್ಯಾಕೆ ಎದುರಿಸಬೇಕಿತ್ತು?"

"ನನಗೆ ಸಹಾಯಕನಾಗಿ ನಿಲ್ಲುವ ಸುಗ್ರೀವನಿಗಾಗಿ!"

"ಏನು ಸಹಾಯ?"

"ರಾವಣ ಕದ್ದೊಯ್ದಿರುವ ಸೀತೆಯನ್ನು ಲಂಕೆಯಿಂದ ಕರೆತರುವುದಕ್ಕಾಗಿ ರಾವಣನನ್ನು ವಧಿಸಬೇಕಿತ್ತು!"

"ಅಯ್ಯೋ ಅವಿವೇಕವೆ, ನನಗೆ ಈ ವಿಷಯವನ್ನು ನೀನು ಹೇಳಿದ್ದರೆ ನಾನು ಒಂದು ಸಲ ಘರ್ಜಿಸಿದ್ದರೆ ಸಾಕು ಆ ಹತ್ತುತಲೆಯ ಹುಳ ರಾವಳ ನನ್ನ ಮುಂದೆ ಗಡಗಡ ನಡುಗುತ್ತ ನಿಲ್ಲುತ್ತಿದ್ದ. ಆಗ ನಿನ್ನ ಹೆಂಡತಿಯನ್ನು ಸುಲಭವಾಗಿ ಕರೆಸಿ ನಿನಗೊಪ್ಪಿಸುತ್ತಿದ್ದೆ."

"ಅದಕ್ಕಿಂತಲೂ ಹೆಚ್ಚಾಗಿ ಪರಸತಿಯನ್ನು ಬಯಸುವವರನ್ನು ವಧಿಸುವುದು ನನ್ನ ಉದ್ದೇಶವಾಗಿತ್ತು!"

"ಹಾ! ಹಾ! ಸರಿ. ಆದಂತಾಗಲಿ ಎಲ್ಲಾ ದೈವೇಚ್ಛೆ!" ಎಂದು ಹೇಳುತ್ತ ವಾಲಿ ಪ್ರಾಣಬಿಟ್ಟನು.

ನೆಟ್ಟಣಿಗೆ

ನೆಟ್ಟಣಿಗೆ ಗ್ರಾಮ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿರುವ ಒಂದು ದಿವ್ಯಕ್ಷೇತ್ರ. ನೆಟ್ಟಣಿಗೆ ಎಂಬ ಹೆಸರು ಈ ಊರಿಗೆ ಬರಲು ಒಬ್ಬ ದಲಿತ ಬಾಲಕ ಕಾರಣವಾದನೆಂಬ ಜನಪದ ಪುರಾಣಕಥೆಯೊಂದು ಪ್ರಚಲಿತವಾಗಿದೆ. ಆ ಕಥೆಯೆಂದರೆ –

ರಾವಣನ ಬಲತಾಯಿಯ ಮಗನಾದ ಖರ ಪರಮಶಿವಭಕ್ತ. ಒಮ್ಮೆ ಖರನು ಕಾಶಿಗೆ ಹೋದನು. ಅಲ್ಲಿರುವ ಶಿವಲಿಂಗಗಳನ್ನು ಕಂಡು ಅವುಗಳಲ್ಲಿ ಕೆಲವನ್ನು ತನ್ನೂರಿಗೆ ಕೊಂಡೊಯ್ಯಲು ಬಯಸಿದನು. ಹಾಗೆ ಬಯಕೆ ಹುಟ್ಟಿದ ಕೂಡಲೆ ಬಲಗೈಲೊಂದು ಶಿವಲಿಂಗ ಎಡಗೈಲೊಂದು ಶಿವಲಿಂಗ ಮತ್ತು ಬಾಯಲ್ಲೊಂದು ಶಿವಲಿಂಗವನ್ನು ಕಚ್ಚಿಕೊಂಡು ಭೂಗತಮಾರ್ಗದಲ್ಲಿ ದಕ್ಷಿಣಾಭಿಮುಖವಾಗಿ ಹೊರಟನು. ಹೀಗೆ ಬರುತ್ತಿರುವಾಗ ಲಿಂಗಸ್ಥಾಪನೆಗೆ ಇಲ್ಲೆಲ್ಲಾದರೂ ಪ್ರಶಸ್ತವಾದ ಸ್ಥಳವಿರಬಹುದೆ ಎಂದು ನೋಡಲು ತಲೆಯೆತ್ತಿದ. ಹಾಗೆ ತಲೆ ಎತ್ತಿದಾಗ ಒಂದು ಗುಹೆ ಸೃಷ್ಟಿಯಾಯಿತು. ಆ ಸ್ಥಳದಲ್ಲಿ ಖರಾಸುರನು ತಾನು ಬಾಯಿಯಲ್ಲಿ ಕಚ್ಚಿ ತಂದಿದ್ದ ಶಿವಲಿಂಗವನ್ನು ಪ್ರತಿಷ್ಠಾಪಿಸಿದನು. ಖರನಿಂದ ಉಂಟಾದ ಗುಹೆಗೆ ಸ್ವಯಂಭೂ ಜಾಂಬ್ರಿ ಗುಹೆಯೆಂದು, ಪ್ರತಿಷ್ಠಾಪಿತವಾದ ಶಿವಲಿಂಗಕ್ಕೆ ಮಹಾ ಲಿಂಗೇಶ್ವರ ಎಂದೂ ಹೆಸರಾಯಿತು. ಅಲ್ಲದೆ ಖರಾಸುರನು ತನ್ನ ಬಲಗೈನಲ್ಲಿದ್ದ ಲಿಂಗವನ್ನು ಅಲಂಕೂಡ್ಲಿನಲ್ಲೂ ಎಡಗೈಲಿದ್ದ ಲಿಂಗವನ್ನು ಬೆಟ್ಟಂಪಾಡಿಯಲ್ಲೂ ಪ್ರತಿಷ್ಠಾಪಿಸಿದನು.

ಹೀಗಿರುವಾಗ ನಿಟ್ಟೋಣಿ ಎಂದ ದಲಿತ ಯುವಕನೊಬ್ಬ ಕಾಡಿನಲ್ಲಿರುವ ಗೆಡ್ಡೆ ಗೆಣಸನ್ನು ಕೊಂಡೊಯ್ಯಲು ಬಂದ. ಅವನು ಗೆಡ್ಡೆಗೆಣಸಿಗಾಗಿ ನೆಲವನ್ನು ಅಗೆಯುತ್ತಿರುವಾಗ ಖರನಿಂದ ಭೂಗತಮಾರ್ಗದಲ್ಲಿ ಸ್ಥಾಪಿತವಾಗಿರುವ ಮಹಾಲಿಂಗೇಶ್ವರ ಶಿವಲಿಂಗಕ್ಕೆ ಅವನ ಗುದ್ದಲಿಯ ಮೊನೆ ತಾಕಿತು. ತಾಕಿದ ಸ್ಥಳದಿಂದ ಕೂಡಲೆ ರಕ್ತ ಚಿಲ್ಲನೆ ಚಿಮ್ಮಿತು. ಇದನ್ನು ಕಂಡ ನಿಟ್ಟೋಣಿ ಭಯವಿಹ್ವಲನಾಗಿ ಊರ ಕಡೆಗೆ ಓಡೋಡಿ ಬಂದ. ಗಾಬರಿಯಿಂದ ಬಂದ ನಿಟ್ಟೋಣಿಯನ್ನು ಕಂಡ ಊರ ಜನ ದಿಗಿಲಿನಿಂದ 'ಏನೊ?' 'ಏನೊ?' ಎಂದು ಒಂದೇ ಸಮನೆ ಪ್ರಶ್ನಿಸತೊಡಗಿದರು.

ಆಗ ನಿಟ್ಟೋಣಿ ನಡೆದಿರುವ ಸಂಗತಿಯನ್ನೆಲ್ಲ ವಿವರಿಸಿ ಹೇಳಿದ. ಇದನ್ನು ಕೇಳಿದ ಊರ ಜನ ಭಯ-ಕುತೂಹಲಗಳಿಂದ ನಿಟ್ಟೋಣಿ ನೆಲ ಅಗೆದಿದ್ದ ಸ್ಥಳಕ್ಕೆ ಧಾವಿಸಿ ಬಂದು ದಿಗ್ಭ್ರಾಂತರಾಗಿ ನಿಂತರು. ಆಗ ಅಶರೀರವಾಣಿಯೊಂದು

'ಭಕ್ತ ಮಹಾಶಯರೇ ಹರಿಯುತ್ತಿರುವ ರಕ್ತವನ್ನು ಕಂಡು ಹೆದರಬೇಡಿ. ನಾನು ಪರಮಶಿವಭಕ್ತ ಖರನಿಂದ ಸ್ಥಾಪಿತವಾಗಿರುವ ಮಹಾಲಿಂಗೇಶ್ವರ. ಈ ಸ್ವಯಂಭೂ ಜಾಂಬ್ರಿ ಗುಹೆಯ ಮಣ್ಣನ್ನು ಪೆಟ್ಟಾಗಿರುವ ಭಾಗಕ್ಕೆ ಮೆತ್ತಿದರೆ ರಕ್ತ ನಿಲ್ಲುತ್ತದೆ. ಅನಂತರದಲ್ಲಿ ಈ ಶಿವಲಿಂಗಕ್ಕೆ ಒಂದು ದೇವಾಲಯವನ್ನು ಕಟ್ಟಿರಿ. ಅಲ್ಲದೆ ಈ ಸ್ವಯಂಭೂ - ಜಾಂಬ್ರಿ ಗುಹೆಯನ್ನು ಕೊನೇಪಕ್ಷ ಹನ್ನೆರಡು ವರ್ಷಕ್ಕೊಮ್ಮೆಯಾದರೂ ಪ್ರವೇಶಿಸಿ ಉತ್ಸವ ನಡೆಸಿರಿ. ಈ ಸ್ವಯಂಭೂ-ಜಾಂಬ್ರಿ ಗುಹೆಯನ್ನು ಪ್ರವೇಶಿಸುವ ಹಕ್ಕನ್ನು ನಿಟ್ಟೋಣಿ ವಂಶಸ್ಥರಿಗೆ ಮಾತ್ರ ಮೀಸಲಿರಿಸಿ!' ಎಂದು ಹೇಳಿತು.

ಅಶರೀರವಾಣಿಯ ಆದೇಶದಂತೆ ಮಹಾಲಿಂಗೇಶ್ವರ ಸ್ವಾಮಿಗೆ ದೇವಾಲಯವನ್ನು ಕಟ್ಟಿದರು. ಅಲ್ಲದೆ ೧೨ ವರ್ಷಕ್ಕೊಮ್ಮೆ ನಿಟ್ಟೋಣಿ ವಂಶಸ್ಥರು ನೆಟ್ಟಣಿಗೆ ಮಹಾಲಿಂಗೇಶ್ವರಸ್ವಾಮಿಯ ಮೂಲಸ್ಥಾನವೆಂದು ನಂಬಿರುವ ಸ್ವಯಂಭೂ-ಜಾಂಬ್ರಿ ಗುಹೆಯನ್ನು ಪ್ರವೇಶಿಸಿ ಸ್ವಯಂಭೂ-ಜಾಂಬ್ರಿ ಗುಹಾ ಪ್ರವೇಶೋತ್ಸವವನ್ನು ಆಚರಿಸುತ್ತಾರೆ. ಈ ಗುಹೆಯಲ್ಲಿ ಮೂಲಸ್ಥಾನ ಸುಮಾರು ಐದು ಕಿ.ಮೀ. ದೂರವಿದೆ ಎಂದು ಹೇಳುತ್ತಾರೆ. ಪ್ರವೇಶಿಸಿದವರು ಒಂದು ಗಂಟೆಯಷ್ಟು ಕಾಲದ ತರುವಾಯ ಒಂದು ಬಟ್ಟೆಯ ಗಂಟಿನಲ್ಲಿ ಕೆಂಪುಮೃತ್ತಿಕೆಯನ್ನು ಹೊತ್ತುತರುತ್ತಾರೆ. ಕೆಂಪುಬಣ್ಣದ ನಯವಾದ ಈ ಮಣ್ಣು ಪ್ರಸಾದ ರೂಪದಲ್ಲಿ ಭಕ್ತರ ಹಣೆಯ ತಿಲಕವಾಗುತ್ತದೆ.

ಈ ಶಿವಲಿಂಗವನ್ನು ನಿಟ್ಟೋಣಿ ಕಂಡಿದ್ದರಿಂದ ಅವನ ಹೆಸರಿನಲ್ಲೆ ಈ ಶಿವನನ್ನು ನಿಟ್ಟೋಣಿ ಮಹಾಲಿಂಗೇಶ್ವರನೆಂದೂ ನಿಟ್ಟೋಣಿ ಕಾರಣದಿಂದಲೆ ಈ ಸ್ಥಳಕ್ಕೆ ನಿಟ್ಟೋಣಿ ಎಂದೇ ಹೆಸರಾಯಿತೆಂದೂ ಹೇಳುತ್ತಾರೆ. ನಿಟ್ಟೋಣಿಯ ಇತ್ತೀಚಿನ ರೂಪ ನೆಟ್ಟಣಿಗೆ.

ಸೂಪ

ಸೂಪ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಒಂದು ಊರು ಮತ್ತು ತಾಲ್ಲೂಕು ಕೇಂದ್ರ. ಇಲ್ಲಿ ಬೌದ್ಧಧರ್ಮದ ಅವಶೇಷಗಳು ವಿಶೇಷವಾಗಿದ್ದು ಬೌದ್ಧಸ್ತೂಪಗಳಿದ್ದ ಕಾರಣದಿಂದ ಈ ಸ್ಥಳ ಸ್ತೂಪದಿಂದ ತಕಾರ ಲೋಪವಾಗಿ ಸೂಪ ಆಗಿರಬಹುದು. ಆದರೆ ನಮ್ಮ ಜನಪದರು ಈ ಊರಿನ ಪ್ರಾಚೀನತೆಯನ್ನು ರಾಮಾಯಣದ ಕಾಲಕ್ಕೆ ಕೊಂಡೊಯ್ಯುತ್ತಾರೆ. ರಾಮಾಯಣದ ಒಂದು ಪ್ರಸಂಗವಾಗಿ ಸೂಪ ರೂಪುಗೊಂಡಿರುವುದು ಹೀಗೆ :

ರಾವಣನ ತಂಗಿಯಾದ ಶೂರ್ಪನಖಿ ಅಣ್ಣನಿಗೆ ಅಚ್ಚುಮೆಚ್ಚಿನ ತಂಗಿ. ಆದರೆ ಈ ಮೆಚ್ಚಿನ ತಂಗಿಗೆ ಅಣ್ಣನ ಮಡದಿಯಾದ ಮಂಡೋದರಿಯ ನೆರಳು ಬಿದ್ದರೂ ಆಗುತ್ತಿರಲಿಲ್ಲ. ಅತ್ತಿಗೆ–ನಾದಿನಿಯರ ವಿರಸದಿಂದ ಬೇಸತ್ತಿದ್ದ ರಾವಣ ಅವರಿಬ್ಬರನ್ನು ರಾಜಿ ಮಾಡಲು ಪ್ರಯತ್ನಿಸಿ ವಿಫಲನಾಗಿದ್ದನು.

ಅತ್ತಿಗೆ–ನಾದಿನಿಯರ ವಿರಸವನ್ನು ಎಷ್ಟೇ ಪ್ರಯತ್ನಿಸಿದರೂ ತಪ್ಪಿಸಲು ಸಾಧ್ಯವಾಗದಿದ್ದಾಗ ರಾವಣ ಒಂದು ಉಪಾಯವನ್ನು ಕಂಡುಕೊಂಡ. ಅದೆಂದರೆ ಅತ್ತಿಗೆ–ನಾದಿನಿಯರು ಒಂದೇ ಕಡೆ ಇದ್ದರೆ ತಾನೆ ಜಗಳ ಬವರ? ಆದ್ದರಿಂದ ಅವರಿಬ್ಬರನ್ನು ಪ್ರತ್ಯೇಕಿಸಬೇಕೆಂದು ನಿರ್ಧರಿಸಿದ. ಅದಕ್ಕಾಗಿ ಸಂಪದ್ಯುಕ್ತವಾದ ಒಂದು ಪ್ರದೇಶದಲ್ಲಿ ತಂಗಿಗಾಗಿ ಅರಮನೆಯನ್ನು ಕಟ್ಟಿಸಿ ಅವಳಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟ. ಅಣ್ಣನ ಅಕ್ಕರೆಯ ಪ್ರತೀಕವಾಗಿ ತನ್ನ ಆಧಿಪತ್ಯಕ್ಕೆ ಬಂದ ಪ್ರದೇಶವನ್ನು ಶೂರ್ಪನಖಿ ಆನಂದವಾಗಿ ಆಳಿಕೊಂಡಿದ್ದಳು.

ರಾವಣನು ತನ್ನ ತಂಗಿಗೆ ಉಡುಗೊರೆಯಾಗಿ ಕೊಟ್ಟ ಈ ಪ್ರದೇಶ ಶೂರ್ಪನಖಿಯ ಆಧಿಪತ್ಯಕ್ಕೆ ಒಳಪಟ್ಟಿದ್ದ ಕಾರಣದಿಂದ ಇದಕ್ಕೆ ಶೂರ್ಪನಖಿಪುರ ಎಂದು ಹೆಸರಾಯಿತು. ಆದಿಕಾಲದ ಹೆಸರು ಆಧುನಿಕರ ಹತ್ತಿರಕ್ಕೆ ಬರುವಷ್ಟರಲ್ಲಿ ಅದು ಸೂಪ ಮಾತ್ರವಾಗಿ ಉಳಿಯಿತು. ಹಾಗಾದರೆ ಸ್ತೂಪ?

ಗೋಕರ್ಣದ ಭಕ್ತವರಪ್ರದಾಯಕ ಗಣಪತಿ

ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿರುವ ಗೋಕರ್ಣ ಅರಬ್ಬೀ ಸಮುದ್ರದ ದಡದಲ್ಲಿದೆ. ಗೋಕರ್ಣದ ಸುತ್ತಮುತ್ತ ಸೆಜ್ಜೇಶ್ವರ, ಧಾರೇಶ್ವರ, ಶಂಭುಲಿಂಗೇಶ್ವರ, ಮುರುಡೇಶ್ವರ ಮುಂತಾದ ಪವಿತ್ರ ಕ್ಷೇತ್ರಗಳಿವೆ. ಭೂಸ್ಪರ್ಶವಾದ ಶಿವನ ಆತ್ಮಲಿಂಗವನ್ನು ಮಹಾಬಲಶಾಲಿಯಾದ ರಾವಣ ಕೀಳಲು ಪ್ರಯತ್ನಿಸಿದ ಮಹಾಬಲೇಶ್ವರ ಲಿಂಗ ಗೋಕರ್ಣದಲ್ಲಿದೆ.

ಮಹಾಬಲೇಶ್ವರ ಲಿಂಗವಿರುವ ದೇಗುಲದ ಅನತಿ ದೂರದಲ್ಲಿ ರಾವಣನು ಶಿವನನ್ನು ಮೆಚ್ಚಿಸಿ ಆತ್ಮಲಿಂಗವನ್ನು ಪಡೆದು ಬರುತ್ತಿದ್ದ ದಾರಿಯಲ್ಲಿ ಲಿಂಗವನ್ನು ನೆಲಕ್ಕಿರಿಸಿದ ಗಣಪತಿಯ ಮೂರ್ತಿಯಿದೆ.

ಸಾಮಾನ್ಯವಾಗಿ ಗಣೇಶನು ಕುಳಿತಿರುವ ಭಂಗಿಯ ವಿಗ್ರಹಗಳು ಎಲ್ಲ ಕಡೆಯು ಕಾಣಸಿಗುತ್ತದೆ. ಆದರೆ ಗೋಕರ್ಣದ ಗಣಪನದು ನಿಂತ ನಿಲುವು. ಜತೆಗೆ ಎರಡೇ ಕೈಗಳು. ಸುಮಾರು ಮೂರೂವರೆ ಅಡಿ ಎತ್ತರದ ಕಡುಗಪ್ಪು ವರ್ಣದ ವಿಗ್ರಹ. ವಾಸ್ತವವಾಗಿ ಗೋಕರ್ಣ ಕ್ಷೇತ್ರದಲ್ಲಿ ಆತ್ಮಲಿಂಗ ಪ್ರತಿಷ್ಠಾಪನೆಗೆ ಕಾರಣಕರ್ತನೇ ಗಣಪತಿ. ಈ ಗಣಪತಿ ಭಕ್ತವರಪ್ರದಾಯಿ ಎಂಬ ಖ್ಯಾತಿಯನ್ನು ಪಡೆದಿದ್ದಾನೆ.

ರಾವಣನು ತನ್ನ ತಾಯಿ ಕೈಕಸಾದೇವಿಗಾಗಿ ಶಿವನ ಆತ್ಮಲಿಂಗವನ್ನು ಲಂಕೆಗೆ ತೆಗೆದುಕೊಂಡು ಹೊರಟನು. ಕೈಲಾಸದ ಆತ್ಮಲಿಂಗ ಲಂಕೆಯಲ್ಲಿ ಸ್ಥಿರವಾಗುವುದು ದೇವತೆಗಳಿಗೆ ಇಷ್ಟವಿರಲಿಲ್ಲ. ಆಗ ಅವರೆಲ್ಲರೂ ಸೇರಿ ಗಣಪತಿಗೆ ಸಲ್ಲಬೇಕಾದ ಪ್ರಥಮ ಪೂಜೆಯನ್ನು ಸಲ್ಲಿಸದೆ ರಾವಣ ಆತ್ಮಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದಾನೆ ಎಂಬುದಾಗಿ ಗಣಪತಿಯನ್ನು ಎತ್ತಿಕಟ್ಟಿ ರಾವಣ ಆತ್ಮಲಿಂಗವನ್ನು ಲಂಕೆಗೆ ತೆಗೆದುಕೊಂಡು ಹೋಗದಂತೆ ಕುತಂತ್ರ ಮಾಡಿ ತಡೆದರು. ದೇವತೆಗಳ ಕುತಂತ್ರದಂತೆ ಗೋಕರ್ಣದ ಹತ್ತಿರಕ್ಕೆ ರಾವಣ ಬಂದಾಗ ವಟುವಿನ ರೂಪದಲ್ಲಿದ್ದ ಗಣಪತಿ ಎದುರಾದ. ಅದು ಸಂಧ್ಯಾವಂದನೆ ಮಾಡಬೇಕಾಗಿದ್ದ ಸಮಯವಾದ್ದರಿಂದ ರಾವಣನು ವಟುವಿನ ಕೈಗೆ ಆತ್ಮಲಿಂಗವನ್ನು ಕೊಟ್ಟು 'ನಾನು ಸಂಧ್ಯಾವಂದನೆ ಮುಗಿಸಿ ಬರುವವರೆಗೂ ಈ ಲಿಂಗವನ್ನು ಎಲ್ಲೂ ಕೆಳಕ್ಕಿಡಬೇಡ!' ಎಂದು ಹೇಳಿ ಹೋದನು. ಇಂಥ ಸಮಯವನ್ನೇ ಕಾಯುತ್ತಿದ್ದ ಗಣಪತಿಯು ಶಿವಲಿಂಗವನ್ನು ನೆಲದ ಮೇಲೆ ಮಡಗಿಬಿಟ್ಟ. ಭೂಸ್ಪರ್ಶವಾದ ಕೂಡಲೆ ಲಿಂಗವನ್ನು ಮೇಲಕ್ಕೆ ಎತ್ತಿಕೊಳ್ಳಲು ಸಾಧ್ಯವಾಗಲೇ ಇಲ್ಲ.

ಹೀಗೆ ಗಣಪತಿಯ ಸಹಾಯದಿಂದ ದೇವತೆಗಳು ಶಿವನ ಆತ್ಮಲಿಂಗವು ಲಂಕೆಗೆ ಹೋಗದಂತೆ ತಡೆದರು. ದೇವತೆಗಳೆಲ್ಲರ ತಂತ್ರ ಗಣಪತಿಯಿಂದ ಕಾರ್ಯಗತವಾಯಿತು. ಹೀಗಾಗಿ ಗಣಪತಿಯೂ ಗೋಕರ್ಣದಲ್ಲಿ ನೆಲೆಗೊಂಡ.

ಗೋಕರ್ಣ ಭೂಕೈಲಾಸವಾಯಿತು

ಅರಬ್ಬೀ ಸಮುದ್ರದ ದಡದಲ್ಲಿರುವ ಗೋಕರ್ಣವು ದೇವಾಲಯಗಳ ಗೊಂಚಲಿನಂತಿದೆ. ಭೂಸ್ಪರ್ಶವಾದ ಆತ್ಮಲಿಂಗವನ್ನು ಮೇಲೆತ್ತಲು ಮಹಾ ಬಲಶಾಲಿ ರಾವಣನು ಪ್ರಯತ್ನಿಸಿದ ಮಹಾಬಲೇಶ್ವರಲಿಂಗವಲ್ಲದೆ ಅವನು ಕೀಳಲು ಯತ್ನಿಸಿದಾಗ ಕೆಲವು ಚೂರುಗಳು ಮಾತ್ರ ಕೈಗೆ ಬಂದವು. ಆ ಚೂರುಗಳನ್ನು ರಾವಣನು ಎಸೆದಾಗ ಉತ್ತರದಿಕ್ಕಿಗೆಸೆದ ಚೂರು ಸೆಜ್ಜೇಶ್ವರ, ದಕ್ಷಿಣ ದಿಕ್ಕಿಗೆಸೆದ ಚೂರುಗಳು ಧಾರೇಶ್ವರ, ಶಂಭುಲಿಂಗೇಶ್ವರ, ಮುರುಡೇಶ್ವರಗಳಾಗಿವೆ. ರಾವಣನು ಶಿವನಿಂದ ಪಡೆದ ಆತ್ಮಲಿಂಗವನ್ನು ನೆಲಕ್ಕೆ ಮಡಗಿದ ಗಣೇಶನ ಮೂರ್ತಿಯು ಆತ್ಮಲಿಂಗದ ಸ್ಥಾನದಿಂದ ಅನತಿ ದೂರದಲ್ಲಿದೆ. ಗಣಪತಿಯಿಂದ ಗೋಕರ್ಣ ಕ್ಷೇತ್ರ ಪವಿತ್ರ ಕ್ಷೇತ್ರವಾದ ಬಗೆಗೆ ರಾಮಾಯಣದ ಕಾಲಕ್ಕೆ ಸಂಬಂಧಿಸಿದ ಪುರಾಣ ಕಥೆಯೊಂದಿದೆ. ಅದರ ಪ್ರಕಾರ :

ಲಂಕಾಧೀಶ ರಾವಣನ ತಾಯಿ ಕೈಕಸಾದೇವಿಯು ಶಿವನ ಪರಮಭಕ್ತೆ. ಅವಳು ಒಮ್ಮೆ ಸಮುದ್ರ ತೀರದಲ್ಲಿ ಸೈಕತ (ಮರಳು) ಲಿಂಗವನ್ನು ಪೂಜಿಸುತ್ತಿರುವಾಗ ಕಡಲಿನ ಹೆದ್ದೆರೆಯೊಂದು ಬಂದು ಆ ಲಿಂಗವನ್ನು ಕೊಚ್ಚಿಕೊಂಡು ಹೋಯಿತು.

ಇದರಿಂದ ದುಃಖತಪ್ತಳಾದ ಕೈಕಸೆಯು ಕಡಲಿನ ಹೆದ್ದೆರೆಯಿಂದ ಶಿವಲಿಂಗ ಭಗ್ನವಾದುದನ್ನು ಪೂಜೆಗೆ ವಿಘ್ನವಾದುದನ್ನು ರಾವಣನಿಗೆ ವ್ಯಥಿತಳಾಗಿ ತಿಳಿಸಿದಳು. ನೊಂದ ತಾಯನ್ನು ಸಂತೈಸುತ್ತ

'ಅಮ್ಮಾ ಕೇವಲ ಆ ಸೈಕತಲಿಂಗ ಹೋದುದಕ್ಕಾಗಿ ಇಷ್ಟೊಂದು ದುಃಖಪಡುತ್ತಿರುವೆಯಲ್ಲ. ಆ ಸೈಕತಲಿಂಗವೇಕೆ ನಿನ್ನ ಪೂಜೆಗೆ ಕೈಲಾಸದಲ್ಲಿರುವ ಆ ಶಿವನ ಆತ್ಮಲಿಂಗವನ್ನೇ ತಂದುಕೊಡುತ್ತೇನೆ. ದುಃಖಿಸಬೇಡಮ್ಮ' ಎಂದು ಹೇಳಿ ಶಿವನನ್ನು ಕುರಿತು ತಪಸ್ಸು ಮಾಡಿ ಆತ್ಮಲಿಂಗವನ್ನು ಪಡೆಯಲು ಅರಣ್ಯಕ್ಕೆ ಹೊರಟೇಬಿಟ್ಟನು.

ರಾವಣನು ಕಡಲ ತಡಿಯ ಅರಣ್ಯದಲ್ಲಿ ಶಿವನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದನು. ಶಿವನು ಪ್ರತ್ಯಕ್ಷವಾಗದಿದ್ದಾಗ ದಶಶಿರನು ತನ್ನ ಹತ್ತು ತಲೆಗಳನ್ನು ಒಂದೊಂದಾಗಿ ಕತ್ತರಿಸಿ ಶಿವನಿಗೆ ಅರ್ಪಿಸತೊಡಗಿದನು. ಭಕ್ತವತ್ಸಲನಾದ ಶಿವನು ಪ್ರತ್ಯಕ್ಷನಾಗಿ ಅವನ ಕೋರಿಕೆಯಂತೆ ಆತ್ಮಲಿಂಗವನ್ನು ಅವನ ಕೈಗೆ ಕೊಟ್ಟು

'ವತ್ಸ ರಾವಣ, ಈ ಆತ್ಮಲಿಂಗವನ್ನು ಭೂಮಿಯ ಮೇಲೆ ಎಲ್ಲೂ ಇಡಬೇಡ. ಇಟ್ಟುದ್ದೇ ಆದರೆ ಭೂಸ್ಪರ್ಶವಾದ ಕೂಡಲೆ ಅದು ಭೂಮಿಯಿಂದ ಮೇಲಕ್ಕೆ ಎತ್ತಲು ಬರುವುದಿಲ್ಲ. ಈ ಮಾತು ನೆನಪಿರಲಿ. ಎಚ್ಚರಿಕೆಯಿಂದ ತೆಗೆದುಕೊಂಡು ಹೋಗು' ಎಂದು ಹೇಳಿ ಅದೃಶ್ಯನಾದನು.

ರಾವಣನು ಶಿವನ ಆತ್ಮಲಿಂಗವನ್ನು ಪಡೆದದ್ದು ದೇವತೆಗಳಿಗೆ ಸುತರಾಂ ಇಷ್ಟವಾಗಲಿಲ್ಲ. ರಾವಣ ಲಂಕೆಯನ್ನು ಮುಟ್ಟುವುದರೊಳಗಾಗಿ ಹೇಗಾದರೂ ಮಾಡಿ ಆ ಲಿಂಗ ರಾವಣನಿಗೆ ದಕ್ಕದಂತೆ ಮಾಡಲೇಬೇಕೆಂದು ದೇವತೆಗಳೆಲ್ಲ ಸೇರಿ ತಂತ್ರವನ್ನು ರೂಪಿಸಿದರು. ವಿಘ್ನರಾಜನಿಗೆ ಅಗ್ರಪೂಜೆ ಮಾಡದೆ ಆತ್ಮಲಿಂಗವನ್ನು ಪಡೆದಿರುವ ರಾವಣನ ಮೇಲೆ ಗಣಪತಿಯನ್ನು ಎತ್ತಿಕಟ್ಟಿದನು.

ಗಣಪತಿಯು ವಟುವಿನ ರೂಪದಲ್ಲಿ ಆತ್ಮಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದ ರಾವಣನೆದುರಿಗೆ ಬಂದನು. ಆ ಬಾಲಕನನ್ನು ಕಂಡ ರಾವಣ 'ಇದು ಸಂಧ್ಯಾವಂದನೆಯ ಸಮಯ. ನಾನು ಸಂಧ್ಯಾವಂದನೆ ಮುಗಿಸಿ ಬರುವವರೆಗೆ ಈ ಲಿಂಗವನ್ನು ನೆಲದ ಮೇಲೆ ಇಡದೆ ಹಿಡಿದುಕೊಂಡಿರು' ಎಂದು ಕೇಳಿಕೊಂಡನು. ಆ ವಟು ರಾವಣನಿಂದ ಆತ್ಮಲಿಂಗವನ್ನು ಪಡೆದುಕೊಂಡು 'ಇದು ಬಹಳ ಭಾರ. ಇದನ್ನು ನಾನು ಹಿಡಿದಕೊಳ್ಳಲಾರೆ!' ಎಂದು ಹೇಳಿ ನೆಲದ ಮೇಲೆ ಇಟ್ಟುಬಿಟ್ಟನು. ಈ ಕಾರ್ಯದಿಂದ ರಾವಣ ಕುಪಿತನಾದರೂ ದಾರಿ ಕಾಣದವನಾಗಿ ನೆಲದ ಮೇಲಿಟ್ಟಿರುವ ಲಿಂಗವನ್ನು ಕೀಳಲು ಪ್ರಯತ್ನಿಸಿದನು. ಭೂಸ್ಪರ್ಶದಿಂದ ಲಿಂಗವನ್ನು ಬಿಡಿಸಿಕೊಳ್ಳಲಾಗಲಿಲ್ಲ.

ಎಷ್ಟೆಲ್ಲ ಬಲಪ್ರಯೋಗ ಮಾಡಿದರೂ ನೆಲದಲ್ಲಿ ಹುದುಗಿಹೋಗಿದ್ದ ಲಿಂಗವನ್ನು ಕೀಳಲು ಆಗಲಿಲ್ಲ. ಆದರೆ ಆ ಲಿಂಗದ ಕೆಲವು ಚೂರುಗಳು ರಾವಣನ ಕೈಗೆ ಬಂದವು. ರಾವಣನು ಉಗ್ರಕೋಪದಿಂದ ಒಂದು ಚೂರನ್ನು ಉತ್ತರದಿಕ್ಕಿನ ಕಡೆಗೆ ಎಸೆದ. ಅದು ಸೆಜ್ಜೇಶ್ವರ ಆಯಿತು. ದಕ್ಷಿಣ ದಿಕ್ಕಿನ ಕಡೆಗೆ ಎಸೆದ ಚೂರುಗಳು ಧಾರೇಶ್ವರ, ಶಂಭುಲಿಂಗೇಶ್ವರ ಮತ್ತು ಮುರ್ಡೇಶ್ವರಗಳೆಂಬ ಶೈವ ಕ್ಷೇತ್ರಗಳಾದವು.

ಮಹಾಬಲಶಾಲಿಯಾದ ರಾವಣನಿಂದಲೂ ಕೀಳಲಾಗದೆ ಹೋದ ಗೋಕರ್ಣದ ಆ ಲಿಂಗ ಮಹಾಬಲೇಶ್ವರ ಲಿಂಗ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಶಿವನು ಹುಟ್ಟಿ ಬಂದ ಸ್ಥಳದಲ್ಲಿಯೇ ಅವನ ಆತ್ಮಲಿಂಗ ಸ್ಥಾಪಿತವಾದ್ದರಿಂದ ಗೋಕರ್ಣವು 'ಭೂಕೈಲಾಸ'ವಾಯಿತು.

ಗೋಕರ್ಣದ ಮಹಾಬಲೇಶ್ವರಲಿಂಗವು ಕಾರ್ತಿಕಮಾಸದಲ್ಲಿ ಸ್ಥಾಪನೆಗೊಂಡದ್ದರಿಂದ ಆ ಮಾಸದಲ್ಲಿ ಈಶ್ವರನು ಪಾರ್ವತೀಸಮೇತನಾಗಿ ಅಲ್ಲಿ ವಾಸ ಮಾಡುವುದಾಗಿ ದೇವತೆಗಳಿಗೆಲ್ಲ ವಚನ ನೀಡಿದನು.

ಮುರ್ಡೇಶ್ವರ

ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಒಂದು ಗ್ರಾಮ. ಇಲ್ಲಿನ ಕುಂದಗಿರಿ ಎಂಬ ಗುಡ್ಡದ ಮೇಲೆ ಮುರ್ಡೇಶ್ವರಸ್ವಾಮಿ ದೇವಾಲಯವಿದೆ. ಇಲ್ಲಿರುವ ಲಿಂಗವು ಗೋಕರ್ಣದ ಮಹಾಬಲೇಶ್ವರಲಿಂಗದ ಒಂದು ಭಾಗ ಎಂದು ಹೇಳುತ್ತಾರೆ.

ರಾವಣೇಶ್ವರನು ತನ್ನ ತಾಯಿ ಕೈಕಸಾದೇವಿಗೆ ಈಶ್ವರನ ಆತ್ಮಲಿಂಗವನ್ನು ತಂದುಕೊಡುತ್ತೇನೆಂದು ಹೇಳಿ ಕಾರ್ಯಪ್ರವೃತ್ತನಾಗುತ್ತಾನೆ. ಆತ್ಮಲಿಂಗ ಲಂಕೆಯನ್ನು ಸೇರುವುದಕ್ಕೆ ಒಪ್ಪದ ದೇವತೆಗಳೆಲ್ಲ ವಿನಾಯಕನನ್ನು ಎತ್ತಿಕಟ್ಟಿ ಅವನಿಂದ ಆತ್ಮಲಿಂಗ ಭೂಸ್ಪರ್ಶವಾಗುವಂತೆ ಮಾಡುತ್ತಾರೆ. ಇದರಿಂದ ಕುಪಿತನಾದ ರಾವಣನು ಆ ಲಿಂಗವನ್ನು ಮೇಲೆತ್ತಲು ಬಲಪ್ರಯೋಗ ಮಾಡಿದಾಗ ಆ ಲಿಂಗದ ಕೆಲವು ಭಾಗಗಳು ಕಿತ್ತುಬಂದವು. ಅದನ್ನು 'ಮುರುಟು' 'ಮುರುಡು' ಎಂದು ಹೇಳಿ ಬಿಸಾಡಿದನಂತೆ. ಅವನು ಉಚ್ಚರಿಸಿದ 'ಮುರುಡು' ಶಬ್ದವೇ ಮುರುಡೇಶ್ವರ ಎಂದಾಯಿತಂತೆ.

ಹೀಗೆ ರಾವಣ ಕಿತ್ತು ಕಿತ್ತು ಎಸೆದ ತುಂಡುಗಳಲ್ಲಿ ಒಂದು ತುಂಡು ಕಾರವಾರದ ಪೂರ್ವ ದಿಕ್ಕಿನಲ್ಲಿ ಬಿದ್ದು ಸೆಜ್ಜೇಶ್ವರ ಎಂದಾಯಿತಂತೆ. ದಕ್ಷಿಣದ ಕಡೆಗೆ ಎಸೆದ ಚೂರುಗಳು ಧಾರೇಶ್ವರ, ಶಂಭುಲಿಂಗೇಶ್ವರ, ಮುರುಡೇಶ್ವರ ಎನಿಸಿದವು. ಗಣಪತಿ ಗೋಕರ್ಣದಲ್ಲಿ ಪ್ರತಿಷ್ಠಾಪಿಸಿದ ಆತ್ಮಲಿಂಗ ಮಹಾಬಲೇಶ್ವರ ಎಂದಾಗಿ ಇವು ಪಂಚಶೈವ ಕ್ಷೇತ್ರಗಳೆಂದು ಹೆಸರಾಗಿವೆ.

ಮುರ್ಡೇಶ್ವರ ದೇವಾಲಯವನ್ನು ಪಾಂಡವರು ಕಟ್ಟಿದರು ಎಂದೂ ಹೇಳುತ್ತಾರೆ. ಈ ದೇವಾಲಯದ ಆವರಣದಲ್ಲಿ ಗಣಪತಿ, ಪಾರ್ವತಿ, ದತ್ತಾತ್ರೇಯ, ಹನುಮಂತ, ನವಗ್ರಹ, ಸುಬ್ರಹ್ಮಣ್ಯ ದೇವಾಲಯಗಳೂ ಇವೆ.

ಚಿತ್ರದುರ್ಗ ಚಿನ್ಮೂಲಾದ್ರಿ

ಬಿ.ಎಲ್.ವೇಣು ಅವರು ಹೇಳುವಂತೆ 'ಚಿತ್ರದುರ್ಗವು ನೂರಾರು ಚಾರಿತ್ರಿಕ ಅವಶೇಷಗಳನ್ನು ಹೊಂದಿರುವ ಒಂದು ಬಯಲು ಸಂಗ್ರಹಾಲಯ. ಪಾಳೇಗಾರರ ಇತಿಹಾಶ ಕೋಶ. ಭಕ್ತಿ-ಶಕ್ತಿಗಳ ಸಂಗಮ. ಮೈನವಿರೇಳಿಸುವ ಇಲ್ಲಿನ ಸ್ಮಾರಕಗಳನ್ನು ವೀಕ್ಷಿಸಲು ಬಹುಸಂಖ್ಯೆಯಲ್ಲಿ ವಿದೇಶಿ ಪ್ರವಾಸಿಗರು, ವಿದ್ವಾಂಸರು, ಇತಿಹಾಸ ತಜ್ಞರು ಧಾವಿಸಿ ಬರುತ್ತಿರುವುದು ಇದರ ಜನಪ್ರಿಯತೆಗೆ ಸಾಕ್ಷಿ. ಚಿತ್ರದುರ್ಗ ಕೇವಲ ಐತಿಹಾಸಿಕವಾಗಿ ಮಾತ್ರವೇ ಮುಖ್ಯವೆನಿಸುವುದಿಲ್ಲ. ಪೌರಾಣಿಕವಾಗಿಯೂ ಮಹತ್ವದ ಹಿನ್ನೆಲೆಯುಳ್ಳ ಸ್ಥಳ. (ಬಿ.ಎಲ್. ವೇಣು, ಐತಿಹಾಸಿಕ ಚಿತ್ರದುರ್ಗ ವೀಕ್ಷಕರ ಸ್ವರ್ಗ. 'ಪ್ರಜಾವಾಣಿ' ಸಾಪ್ತಾಹಿಕ ಪುರವಣಿ, ದಿನಾಂಕ ೨೮-೦೬-೯೯೮. ಪು.೦೫)

ತರಾಸು ಅವರ ಕಾದಂಬರಿಗಳು ಚಿತ್ರದುರ್ಗದ ಇತಿಹಾಸದ ವೈಭೋವೋಜ್ವಲ ದಿನಗಳನ್ನು ಹೇಳಿದರೆ ಇಲ್ಲಿಯ ಪೌರಾಣಿಕ ವಿಷಯಗಳೂ ಅಷ್ಟೇ ಸೋಜಿಗವೆನಿಸುತ್ತದೆ.

ತ್ರೇತಾಯುಗದಲ್ಲಿ ರಾವಣನು ಕೈಲಾಸಪರ್ವತವನ್ನು ಹೊತ್ತು ತರುವಾಗ ನಂದಿಯನ್ನು ಕಡೆಗಣಿಸಿದ್ದರಿಂದ ನಂದಿಗೆ ಕೋಪ ಬಂದು ತನ್ನ ಕೋಡುಗಳಿಂದ ಇರಿದನು. ಆಗ ರಾವಣನು ಈ ಬೆಟ್ಟದ ಮೇಲೆ ಬಿದ್ದನಂತೆ. ಆ ಸಮಯದಲ್ಲಿ ಅವನ ಚಿತ್ತವನ್ನೇ ಪರಿವರ್ತಿಸಲು ಮೂಲವಾದ ಈ ಪರ್ವತ ಪ್ರದೇಶವು ಅಂದಿನಿಂದ ಚಿನ್ಮೂಲಾದ್ರಿ ಎಂದು ಹೆಸರು ಪಡೆಯಿತು.

ಮತ್ತೆ ಕೆಲವರ ಪ್ರಕಾರ ಇಲ್ಲಿದ್ದ ರಸಸಿದ್ಧರು ಇಲ್ಲಿನ ಗಿಡಮೂಲಿಕೆಗಳಿಂದ ಚಿನ್ನವನ್ನು ತಯಾರಿಸುತ್ತಿದ್ದರಂತೆ. ಚಿನ್ಮೂಲಾದ್ರಿಗೆ ಹೆಸರು ಬರಲು ಈ ಚಿನ್ನದ ತಯಾರಿಕಾ ಕೇಂದ್ರವೂ ಒಂದು ಕಾರಣವಂತೆ.

ಇನ್ನು ದ್ವಾಪರಯುಗದ ಹಿಡಿಂಬಾಸುರನು ಈ ಪ್ರದೇಶದಲ್ಲಿ ಇದ್ದುದರಿಂದ ಇದನ್ನು ಹಿಡಂಬಪಟ್ಟಣ ಎನ್ನುತ್ತಿದ್ದರಂತೆ. ಅಲ್ಲದೆ ಚಂದ್ರವಳ್ಳಿ ಭೂಪ್ರದೇಶದಲ್ಲಿ ಅಂಕಳಿಗುಹೆಯ ಸಮೀಪದ ಭಾರಿ ಬಂಡೆಯ ಅಡಿಯ ಗುಹೆಗಳಲ್ಲಿರುವ ಪಂಚಲಿಂಗಗಳನ್ನು ಪಾಂಡವರು ಪ್ರತಿಷ್ಠಾಪಿಸಿದರೆಂದು ಶಾಸನವೊಂದರಲ್ಲಿ ಉಕ್ತವಾಗಿದೆ.

ಬೆಮ್ಮತ್ತನಕಲ್ಲು, ಬ್ರಹ್ಮಗಿರಿಪುರ, ಪೆರುಮಾಳೆಪುರ, ಛತ್ರಕಲ್‌ದುರ್ಗ ಮುಂತಾಗಿ ಕರೆಯುತ್ತಿದ್ದ ಈ ಗಂಡುಭೂಮಿಯನ್ನು ೧೭೭೯ರಲ್ಲಿ ಹೈದರಾಲಿಯು ಆಕ್ರಮಿಸಿಕೊಂಡು 'ಫರ್‍ರಕಾಬಾದ್' ಎಂದು ಕರೆದ. ಬ್ರಿಟಿಷರ ಆಳ್ವಿಕೆಯಲ್ಲಿ 'ಬಿಟಲ್ ಡುರ್ಸ್' ಎಂದು ಕರೆದರು. ವಾಸ್ತವವಾಗಿ ಚಿತ್ರದುರ್ಗದ ಪಾಳೇಗಾರರ ಮೂಲಪುರುಷ ಚಿತ್ರನಾಯಕನ ದುರ್ಗ – ಈ ಚಿತ್ರದುರ್ಗ.

ಅಹಿರಾವಣ – ಮಹಿರಾವಣ

ಲಂಕಾಧಿಪತಿಯಾಗಿದ್ದ ವಜ್ರೇಶ್ವರನಿಗೆ ಮೂವರು ಪತ್ನಿಯರು. ಮೊದಲನೆಯವಳು ಚಿತ್ರಾಂಗಿ, ಎರಡನೆಯವಳು ಸಿಂಹಾಂಗಿ, ಮೂರನೆಯವಳು ರತ್ನಾಂಗಿ. ಈ ಮೂವರು ಪತ್ನಿಯರೊಡನೆ ವಜ್ರೇಶ್ವರನು ಸಂಸಾರ ಸುಖ–ಭೋಗ ಸಂಕಥೆಗಳೊಡನೆ ನೆಮ್ಮದಿಯ ಜೀವನ ನಡೆಸುತ್ತಿದ್ದನು.

ಹೀಗಿರುವಾಗ ಮೊದಲನೆಯ ಪತ್ನಿ ಚಿತ್ರಾಂಗಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಅವರಲ್ಲಿ ಹಿರಿಯಮಗನನ್ನು ಅಹಿರಾವಣನೆಂದೂ ಕಿರಿಯ ಮಗನನ್ನು ಮಹಿರಾವಣನೆಂದೂ ಕರೆದು ಯಾವೊಂದು ಕೊರತೆಯೂ ಕಾಣದಂತೆ ಸಾಕಿದರು. ಬೆಳೆದ ಹಿರಿಯ ಮಗ ಅಹಿರಾವಣನನ್ನು ಪಾತಾಳ ಲೋಕದ ಅಧಿಪತಿಯನ್ನಾಗಿ ಪಟ್ಟ ಕಟ್ಟಿದರು. ಎರಡನೆಯ ಮಗ ಮಹಿರಾವಣನನ್ನು ಆಕಾಶಲೋಕದ ಚಕ್ರವರ್ತಿಯ ಪಟ್ಟವನ್ನು ಕಟ್ಟಿದರು.

ವಜ್ರೇಶ್ವರನ ಎರಡನೆಯ ಪತ್ನಿಯಾದ ಸಿಂಹಾಂಗಿಗೆ ಒಬ್ಬ ಗಂಡುಮಗ ಹುಟ್ಟಿದ. ಅವನು ಹುಟ್ಟಿದ ಕೂಡಲೆ ಸಿಂಹದಂತೆ ಘರ್ಜಿಸಿದನಂತೆ. ಅವನನ್ನು ರಾವಣ ಎಂದು ಕರೆದು ಲಂಕೆಯ ಅಧಿಪತಿ ಪಟ್ಟವನ್ನು ಕಟ್ಟಿದರು. ರಾವಣನಿಗೆ ಒಬ್ಬಳು ತಂಗಿಯೂ ಹುಟ್ಟಿದಳು. ಅವಳೇ ರಾವಣನಿಗೆ ಅತ್ಯಂತ ಪ್ರಿಯಳಾದ ತಂಗಿ ಶೂರ್ಪನಖಿ.

ಮೂರನೆಯ ಹೆಂಡತಿ ರತ್ನಾಂಗಿ. ಇವಳಿಗೂ ಇಬ್ಬರು ಗಂಡುಮಕ್ಕಳು. ಇವರಿಗೆ ವಿಭೀಷಣ ಮತ್ತು ಕುಂಭಕರ್ಣನೆಂದು ನಾಮಕರಣ ಮಾಡಿದರು. ಇವರಲ್ಲಿ ವಿಭೀಷಣ ಸತ್ಯಶೀಲ ಸಂವರ್ಧನ, ಧರ್ಮಕಾರ್ಯ ಧುರೀಣ, ನೀತಿಗುಣ ನಿಕ್ಷೇಪಣ ಮತ್ತು ನ್ಯಾಯಪರಿಪಾಲನನೆಂದು ಪ್ರಖ್ಯಾತನಾಗಿದ್ದನು.

ಮಕ್ಕಳೆಲ್ಲ ಪ್ರವರ್ಧಮಾನಕ್ಕೆ ಬಂದು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುವ ಕಾಲಕ್ಕೆ ವಜ್ರೇಶ್ವರನು ಕೈಲಾಸವಾಸಿಯಾದನು.

ಹೀಗಿರುವಾಗ ಆಕಸ್ಮಿಕವಾಗಿ ರಾವಣನ ತಂಗಿಯಾದ ಶೂರ್ಪನಖಿಯು ದಂಡಕಾರಣ್ಯದಲ್ಲಿ ವಿಹರಿಸುತ್ತಿರುವಾಗ ವನವಾಸಾರ್ಥವಾಗಿ ಅರಣ್ಯಕ್ಕೆ ಬಂದ

ರಾಮಲಕ್ಷ್ಮಣರನ್ನು ಕಂಡು ಮೋಹಗೊಂಡಳು. ಕಾಮಾತುರಳಾಗಿ ಬಂದ ಅವಳನ್ನು ಈ ಸೋದರರು ನಿರಾಕರಿಸಿದ್ದಲ್ಲದೆ ಲಕ್ಷ್ಮಣನು ಅವಳ ಮೂಗು ಮತ್ತು ಮೊಲೆತೊಟ್ಟುಗಳನ್ನು ಕತ್ತರಿಸಿ ಕಳಿಸಿದನು.

ತನ್ನ ಅಪೇಕ್ಷೆ ಈಡೇರದೇ ಇರುವುದರ ಜೊತೆಗೆ ತನ್ನನ್ನು ಅವಮಾನಿಸಿದ ಸೇಡನ್ನು ತೀರಿಸಿಕೊಳ್ಳಲು ಶೂರ್ಪನಖಿ ರಾವಣನಲ್ಲಿ ಮೊರೆ ಇಟ್ಟಳು. ಜೊತೆಗೆ ಸೀತೆಯ ಸೌಂದರ್ಯವನ್ನು ವರ್ಣಿಸಿ ಅವನ ಮನಸ್ಸನ್ನು ಕೆಡಿಸಿದಳು. ಸ್ವಯಂವರದಲ್ಲಿ ಮುಖಭಂಗವಾಗಿದ್ದ ರಾವಣ ಪ್ರತೀಕಾರಕ್ಕೆ ಇದೇ ತಕ್ಕ ಸಮಯವೆಂದು ಭಾವಿಸಿ ಸೋದರಮಾವ ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಒಯ್ದು ಅಶೋಕವನದಲ್ಲಿ ಬಂಧಿಯಾಗಿ ಇರಿಸಿದನು.

ವಾಯುಪುತ್ರ ಆಂಜನೇಯನಿಂದ ಸೀತೆಯು ಲಂಕೆಯಲ್ಲಿರುವುದನ್ನು ತಿಳಿದ ಶ್ರೀರಾಮನು ಸುಗ್ರೀವಾದಿಗಳ ನೆರವಿನಿಂದ ರಾವಣನ ಮೇಲೆ ಯುದ್ಧವನ್ನು ಸಾರಿದನು.

ಶ್ರೀರಾಮನಿಂದ ರಾವಣನ ಜೀವಕ್ಕೆ ಅಪಾಯವಿದೆಯೆಂದು ತಿಳಿದ ಸಿಂಹಾಂಗಿಯು ಪಾತಾಳಲೋಕವನ್ನು ಆಳುತ್ತಿದ್ದ ಚಿತ್ರಾಂಗಿಯ ಮಗ ಅಹಿರಾವಣನನ್ನು ಪಾತಾಳಕ್ಕೆ ಹೋಗಿ ಕಂಡಳು.

"ಅಹಿರಾವಣ ನೀನು ವಜ್ರೇಶ್ವರನ ಮಕ್ಕಳಲ್ಲೇ ಮಹಾಪರಾಕ್ರಮಿ. ನಿನ್ನಂಥ ವೀರನಿರುವಾಗ ನಿನ್ನ ತಮ್ಮ ರಾವಣನನ್ನು ರಕ್ಷಿಸಬೇಕಾದುದು ನಿನ್ನ ಕರ್ತವ್ಯ ತಾನೆ? ಹುಲುಮಾನವನಾದ ರಾಮನೆಂಬುವನು ನಿನ್ನ ತಮ್ಮ ರಾವಣನ ಮೇಲೆ ಯುದ್ಧಕ್ಕೆ ನಿಂತಿದ್ದಾನೆ. ನೀನು ಅವನನ್ನ ಬಲಿಹಾಕಿ ನಿನ್ನ ತಮ್ಮನನ್ನು ಉಳಿಸಿಕೋ!" ಎಂದಳು.

ಅಹಿರಾವಣನಿಗೆ ತನ್ನ ಚಿಕ್ಕಮ್ಮನ ಕೋರಿಕೆ ಹಾಗೂ ಸೋದರನ ರಕ್ಷಣೆ ಎರಡೂ ತನ್ನ ಕರ್ತವ್ಯವೆನಿಸಿತು. ಆ ಕೂಡಲೆ ಅವನು ಚಿಕ್ಕಮ್ಮನ ಮಾತನ್ನು ಈಡೇರಿಸುವುದಾಗಿ ಹೊರಟು ನಿಂತನು.

ಅಹಿರಾವಣನು ಬಲಮಾಂಕಾಳಿಯ ಪರಮಭಕ್ತ. ಅವನು ಆ ದೇವಿಯನ್ನು ವಶಪಡಿಸಿಕೊಳ್ಳಲು ಬೇಕಿದ್ದ ನೂರೊಂದು ಜನ ರಾಜಕುಮಾರರಲ್ಲಿ ನೂರು ಜನ ರಾಜಕುಮಾರರನ್ನು ಬಲಿಕೊಟ್ಟಾಗಿತ್ತು. ಆದರೆ ಇನ್ನು ಒಬ್ಬನ ಬಲಿಗಾಗಿ ರಾಜಕುಮಾರನನ್ನು ಹುಡುಕುತ್ತಿದ್ದನು. ಅವನಿಗೆ ಶ್ರೀರಾಮ ಕಂಡಿದ್ದು ಕಡುಸಂತೋಷಕ್ಕೆ ಕಾರಣವಾಯಿತು. ಶ್ರೀರಾಮನನ್ನು ಬಲಿಕೊಟ್ಟದ್ದೇ ಆದರೆ ದೇವಿ ಅವನ ವಶವಾಗುತ್ತಿದ್ದಳು. ಆದ್ದರಿಂದ ಚಿಕ್ಕಮ್ಮನ ಮಾತನ್ನು ನೆರವೇರಿಸಿದಂತೆಯೂ ಆಗುತ್ತದೆ; ದೇವಿಯನ್ನು ವಶಪಡಿಸಿಕೊಂಡಂತೆಯೂ ಆಗುತ್ತದೆ ಎಂದು ಹಿರಿಹಿರಿ ಹಿಗ್ಗಿದನು.

ಅಹಿರಾವಣನು ತನ್ನ ಸಹೋದರ ರಾವಣನ ಶತ್ರುಗಳಾದ ಶ್ರೀರಾಮಾದಿಗಳೊಬ್ಬರನ್ನು ಬಿಡದಂತೆ ನಾಶ ಮಾಡಬೇಕೆಂದು ನಿರ್ಧರಿಸಿದನು. ಸೀತೆ ಎಂಬ ಹೆಣ್ಣಿಗಾಗಿ ಈ ಯುದ್ಧ ನಡೆಯುತ್ತಿದೆಯೆಂದು ತಿಳಿದಾಗ ಕುತೂಹಲಕ್ಕಾಗಿ ಸೀತೆಯನ್ನು ನೋಡಬೇಕೆಂಬ ಬಯಕೆ ಅವನಲ್ಲುಂಟಾಯಿತು. ಆ ಕೂಡಲೆ ಅವನು ಮಾಯಾಗನ್ನಡಿಯಲ್ಲಿ ಸೀತೆಯನ್ನು ನೋಡಿದ. ತ್ರಿಲೋಕ ಸುಂದರಿಯಾದ ಸೀತೆಯನ್ನು ನೋಡಿ ದಿಗ್ಭ್ರಾಂತನಾದ.

"ಇಂಥ ಕನ್ಯಾಮಣಿಯನ್ನು ನನ್ನ ಸಹೋದರ ರಾವಣ ಬಯಸಿರುವುದರಲ್ಲಿ ಏನೇನೂ ಆಶ್ಚರ್ಯವೂ ಅಲ್ಲ ಅಪರಾಧವೂ ಅಲ್ಲ! ಇವಳನ್ನು ರಾವಣನಿಗೆ ಸಿಕ್ಕದಂತೆ ಮಾಡಿ ನಾನೇ ದಕ್ಕಿಸಿಕೊಳ್ಳಬೇಕು ಎನಿಸುತ್ತಿದೆ" ಎಂದು ಕಾಮನ ಕೋಟಲೆಗೆ ಸಿಕ್ಕಿ ಕೊರಗಿದ! ಆಗ ಅವನು–

"ನನ್ನಾಸೆ ಈಡೇರಿಸಿಕೊಳ್ಳಲು ರಾಮನೂ ಅಡ್ಡಿಯಾಗಿರುವನು ತಾನೆ? ಮೊದಲು ಅವನನ್ನು ಸಂಹರಿಸಿ ಅನಂತರ ರಾವಣನನ್ನು ನೋಡಿಕೊಳ್ಳುತ್ತೇನೆ" ಎಂದು ನೊರನೊರನೆ ಹಲ್ಲು ಕಡಿಯುತ್ತ ಸರಸರನೆ ಯುದ್ಧಭೂಮಿಗೆ ನಡೆದನು.

ವಿಶ್ರಾಂತಿಯಲ್ಲಿದ್ದ ರಾಮ ಲಕ್ಷ್ಮಣ ಆಂಜನೇಯ ಸುಗ್ರೀವಾದಿಗಳಿಗೆ ಮಾಯಾಜಾಲವನ್ನು ಬೀಸಿ ಎಲ್ಲರೂ ಪ್ರಜ್ಞಾಹೀನರಾಗುವಂತೆ ಮಾಡಿದನು. ಎಲ್ಲರೂ ಮೈಮರೆತಿರುವಾಗ ಅಹಿರಾವಣನು ತನ್ನ ಮಾಯಾಶಕ್ತಿಯನ್ನು ಬಳಸಿ ಅವರನ್ನೆಲ್ಲ ತನ್ನ ಲೋಕಕ್ಕೆ ಸಾಗಿಸಿದ. ಅವನು ರಾಮನನ್ನು ಬಲಮಾಂಕಾಳಿಗೆ ಬಲಿಕೊಡುವ ಸನ್ನಾಹ ನಡೆಸುತ್ತಿದ್ದನು. ಇದೊಂದರ ಅರಿವೂ ಇಲ್ಲದ ರಾಮಲಕ್ಷ್ಮಣಾದಿಗಳು ಜೊಂಪುಹತ್ತಿದವರಂತೆ ಬಿದ್ದಿರುವಾಗ ವಾಯುಪುತ್ರ ಆಂಜನೇಯನಿಗೆ ಎಚ್ಚರವಾಯಿತು. ಅವನಿಗೆ ತಾವೆಲ್ಲಿದ್ದೇವೆ ಎಂಬುದು ತಿಳಿಯಿತು. ಮುಂದಾಗಬಹುದಾದ ಅನಾಹುತವನ್ನು ನೆನೆದು ಲಕ್ಷ್ಮಣನನ್ನು ಎಚ್ಚರಿಸಿ ಅಹಿರಾವಣನ ತಂತ್ರವನ್ನು ಮೆಲುದನಿಯಲ್ಲಿ ಹೇಳಿದನು. ಅಲ್ಲದೆ ಕಾಳಿಯ ಪೂಜೆಯಲ್ಲಿ ತೊಡಗಿರುವ ಅಹಿರಾವಣನನ್ನು ಬಲಮಾಂಕಾಳಿಗೆ ಬಲಿಕೊಡಲು ತಿಳಿಸಿದನು. ಲಕ್ಷ್ಮಣನು ಥಟ್ಟನೆ ಮೇಲಕ್ಕೆದ್ದು ದೇವಿಗೆ ದೀರ್ಘದಂಡ ನಮಸ್ಕಾರ ಮಾಡುತ್ತಿದ್ದ ಅಹಿರಾವಣನ ಕುತ್ತಿಗೆಯನ್ನು ಕತ್ತರಿಸಿ ದೇವಿಗೆ ಅರ್ಪಿಸಿದನು. ನೂರೊಂದು ಜನ ರಾಜಕುಮಾರರ ಬಲಿಯಿಂದ ಸುಪ್ರೀತಳಾದ ದೇವಿ ಪ್ರತ್ಯಕ್ಷಳಾಗಿ ಲಕ್ಷ್ಮಣನಿಗೆ ಅನುಗ್ರಹಿಸಿದಳು. ಅವನು ಯಾವುದೇ ವ್ಯಕ್ತಿಯ ಜೊತೆಯಲ್ಲಿ ಯುದ್ಧಕ್ಕೆ ನಿಂತರೂ ವಿಜಯಿಯಾಗುವಂತೆ ಆಶೀರ್ವದಿಸಿದಳು.

ಆದರೆ ದೇವಿ ಹಾಗೆ ಆಶೀರ್ವದಿಸುತ್ತಿರುವಾಗಲೆ ಅಹಿರಾವಣ ಮೇಲೆದ್ದು ನಿಂತು ಅಟ್ಟಹಾಸದಿಂದ ಲಕ್ಷ್ಮಣನನ್ನು ನೋಡಿದ. ಲಕ್ಷ್ಮಣ ಈ ವಿಚಿತ್ರವನ್ನು ನೋಡಿ ಆಶ್ಚರ್ಯಚಕಿತನಾಗಿ ನಿಂತನು, ಆಗ ಬಲಮಾಂಕಾಳಿಯು–

"ವತ್ಸಾ, ಈತನು ಮತ್ತೆ ಎದ್ದುನಿಂತನೆಂದು ಹೆದರುವ ಅಗತ್ಯವೂ ಇಲ್ಲ. ಇದು ಆಶ್ಚರ್ಯವೂ ಅಲ್ಲ. ಏಕೆಂದರೆ ಇವನ ಶತಶಿರ. ನನಗೆ ಬಲಿಕೊಟ್ಟ ಶಿರಸ್ಸಿನ ರಕ್ತ ನೆಲಕ್ಕೆ ಬೀಳಲಿಲ್ಲ. ಆದರೆ ಉಳಿದ ಶಿರಗಳನ್ನು ಕತ್ತರಿಸಿದರೆ ಅವುಗಳ ಒಂದು ತೊಟ್ಟು ನೆಲಕ್ಕೆ ಬಿದ್ದದ್ದೇ ಆದರೆ ಅವನಷ್ಟೇ ಸಮರ್ಥರಾದ ಕೋಟಿ ರಾಕ್ಷಸರು ಉತ್ಪತ್ತಿಯಾಗುತ್ತಾರೆ. ಹಾಗೆ ರಕ್ತ ನೆಲಕ್ಕೆ ತಾಕದಂತೆ ತಡೆಯಲು ಇದೋ ನನ್ನ ತಂಗಿ ಭದ್ರಕಾಳಿ ಸಿದ್ಧವಾಗಿದ್ದಾಳೆ. ಅವನನ್ನು ಸಂಹರಿಸು!" ಎಂದಳು. ಬಲಮಾಂಕಾಳಿಯ ಆಶೀರ್ವಾದ ಬಲದಿಂದ ಹಾಗೂ ಭದ್ರಕಾಳಿಯು ಆ ರಾಕ್ಷಸನ ರಕ್ತ ನೆಲಕ್ಕೆ ತಾಕದಂತೆ ಹೀರಿಕೊಂಡಿದ್ದರಿಂದ ಅಹಿರಾವಣನ ಸಂಹಾರ ಸುಲಲಿತವಾಗಿ ನೆರವೇರಿತು.

ಅಹಿರಾವಣನ ಹತ್ಯೆಯ ವಿಷಯ ಆಕಾಶಲೋಕದ ಚಕ್ರವರ್ತಿಯಾದ ಮಹಿರಾವಣನಿಗೆ ತಿಳಿಯಿತು. ಆತ ದುಃಖ, ದ್ವೇಷ, ಕ್ರೌರ್ಯಗಳ ರೌದ್ರಾವೇಶದಲ್ಲಿ ಶ್ರೀರಾಮ ಲಕ್ಷ್ಮಣ ಆಂಜನೇಯರ ಸಂಹಾರ ಮಾಡಲು ಸೆಟೆದು ನಿಂತನು.

ಮಹಿರಾವಣನ ವೈಶಿಷ್ಟ್ಯವೆಂದರೆ ಇವನು ಸಹಸ್ರ ಶಿರರಾವಣ. ಇವನು ಅಹಿರಾವಣನಿಗಿಂತಲೂ ಮಹಾಪರಾಕ್ರಮಿ. ಇವನು ಯುದ್ಧಕ್ಕೆ ಬಂದಾಗ ರಾಮಲಕ್ಷ್ಮಣ ಸುಗ್ರೀವ ಆಂಜನೇಯರು ಸಮರಕ್ಕೆ ನಿಂತರು. ಲಕ್ಷ್ಮಣನು ಎದುರಾಗಿ ಇವನ ಸಾವಿರ ಶಿರಸ್ಸುಗಳನ್ನು ಕೊಚ್ಚಿ ಎಸೆದನು. ಆದರೆ ಆ ಕೂಡಲೆ ಕೊಚ್ಚಿ ಎಸೆದ ಕುತ್ತಿಗೆಯಲ್ಲಿ ಮತ್ತೆ ಮತ್ತೆ ತಲೆಗಳು ಮೂಡಿ ಗಹಗಹಿಸಿ ನಕ್ಕವು. ಮತ್ತೆ ಲಕ್ಷ್ಮಣನು ತೀಕ್ಷ್ಣವಾದ ಬಾಣವನ್ನು ಬಿಟ್ಟು ಆ ಎಲ್ಲ ತಲೆಗಳನ್ನು ಮತ್ತೆ ಕೊಚ್ಚಿ ಎಸೆದನು. ಯಥಾಪ್ರಕಾರ ಕೊಚ್ಚಿದ ಕುತ್ತಿಗೆಯ ಸ್ಥಳದಲ್ಲಿ ಮತ್ತೊಂದು ತಲೆ ಮೂಡುತ್ತಿತ್ತು. ಲಕ್ಷ್ಮಣನು ಮತ್ತೆ ಮತ್ತೆ ಶಿರಸ್ಸುಗಳನ್ನು ಕೊಚ್ಚಿ-ಕೊಚ್ಚಿ ಕೊಚ್ಚಿ ಕೊಚ್ಚಿ ಎಸೆದಂತೆಲ್ಲ ಮಹಿರಾವಣನ ಶಿರಸ್ಸುಗಳು ನಿರಂತರವಾಗಿ ಮೂಡುತ್ತಲೇ ಇದ್ದವು. ಇದರಿಂದ ಲಕ್ಷ್ಮಣನ ಕೈಸೋತು ಬೆರಗಾಗಿ ನಿಂತನು.

ಆಗ ಅಲ್ಲಿಗೆ ಬಂದ ವಿಭೀಷಣನು "ಲಕ್ಷ್ಮಣಾ, ಮಹಿರಾವಣನ ತಲೆಗಳನ್ನು ನೀನು ಕೊಚ್ಚುತ್ತಾ ಹೋದರೆ ಅವು ಮತ್ತೆ ಮತ್ತೆ ಮೂಡುತ್ತಲೇ ಇರುತ್ತವೆ. ಅದು ಮುಗಿಯದ ಕಥೆ" ಎಂದನು. ಆಗ ಲಕ್ಷ್ಮಣನು ವಿಕ್ಷಿಪ್ತನಾಗಿ ನಿಂತಿರುವಾಗ ವಿಭೀಷಣನು-

"ಲಕ್ಷ್ಮಣಾ, ಈ ತಲೆಗಳನ್ನು ಕೊಚ್ಚುವ ಕೆಲಸವನು ಬಿಡು. ಮಹಿರಾವಣನ ಪ್ರಾಣ ಅವನ ನಾಭಿಯಲ್ಲಿದೆ. ಆ ನಾಭಿಗೆ ಗುರಿಯಿಟ್ಟು ಬಾಣ ಬಿಡು. ಆಗ ಅವನನ್ನು ಗೆಲ್ಲಬಹುದು!" ಎಂದನು.

ವಿಭೀಷಣನ ಸಲಹೆಯಂತೆ ಲಕ್ಷ್ಮಣನು ಮಹಿರಾವಣನ ನಾಭಿಗೆ ಉಗ್ರವಾದ ಬಾಣವೊಂದನ್ನು ಬಿಟ್ಟನು. ಆಗ ಮಹಿರಾವಣನು ಚೀರುತ್ತ ಕೆಳಗುರುಳಿ ಸತ್ತನು.

ರಾವಣನ ನಾಭಿಯ ತಳದಲ್ಲಿದ್ದ ಅಮೃತಬಿಂದು

ರಾವಣನು ಮದೋನ್ಮತ್ತನಾಗಿ ನರಸುರ ಕಿನ್ನರಕಿಂಪುರುಷ ಯಕ್ಷಗಂಧರ್ವಾದಿ ದೇವತೆಗಳಿಗೆಲ್ಲ ಕೊಡಬಾರದ ಕಿರುಕುಳವನ್ನು ಕೊಟ್ಟು ಹಿಂಸಿಸತೊಡಗಿದನು. ಇದು ಒಂದಲ್ಲ ಒಂದು ದಿನ ಅವನ ಪ್ರಾಣಕ್ಕೆ ಕುತ್ತಾಗಬಹುದೆಂಬುದು ರಾವಣನ ಧರ್ಮಪತ್ನಿ ಮಂಡೋದರಿಯ ಚಿಂತೆ. ತನ್ನ ಪತಿ ವಿಚಾರದಲ್ಲಿ ಚಿಂತಿಸುತ್ತ ಕುಳಿತಿದ್ದ ಅತ್ತಿಗೆ ಮಂಡೋದರಿಯನ್ನು ಕಂಡ ವಿಭೀಷಣನು–

"ಅತ್ತಿಗೆ ಇದೇನು ಗಾಢವಾಗಿ ಚಿಂತಿಸುತ್ತ ಕುಳಿತಿರುವಿರಲ್ಲ?" ಎಂದು ಕೇಳಿದನು. ಅದಕ್ಕೆ ಮಂಡೋದರಿಯು–

"ಮೈದರಸು ವಿಭೀಷಣ, ನಿನ್ನ ಅಣ್ಣ ನರಸುರ ಕಿನ್ನರಕಿಂಪುರುಷ ಯಕ್ಷಗಂಧರ್ವ ಮೊದಲಾದ ದೇವಾದಿದೇವತೆಗಳಿಗೆಲ್ಲ ಕೊಡುತ್ತಿರುವ ಕಷ್ಟಕೋಟಲೆಗಳು ಅಷ್ಟಿಷ್ಟಲ್ಲ. ಇದರಿಂದ ಎಂದಾದರೂ ಅವರ ಪ್ರಾಣಕ್ಕೆ ಗಂಡಾಂತರ ಒದಗೀತೆಂಬ ಭಯದಿಂದ ಕೊರಗುತ್ತಿದ್ದೇನೆ. ಅವರು ಸಾತ್ವಿಕರಾಗಿ ಉಳಿಯಬೇಕು – ಅಲ್ಲದೆ – ನನ್ನ ಮುತ್ತೈದೆತನವೂ ಉಳಿಯಬೇಕು ಎಂಬುದೇ ನನ್ನ ಮಹದಾಸೆ" ಎಂದಳು.

ಮಂಡೋದರಿಯ ಮಾತನ್ನು ಕೇಳಿದ ವಿಭೀಷಣನು ಸ್ವಲ್ಪ ಕಾಲ ಚಿಂತಿಸಿ,

"ಅತ್ತಿಗೆಯವರೇ ಅಣ್ಣನ ಅಳಿವು ಉಳಿವು ನಿಮ್ಮ ಕೈಯಲ್ಲಿದೆ."

"ಅದು ಹೇಗೆ ವಿಭೀಷಣ?"

"ಅತ್ತಿಗೆಯವರೇ ನೀವು ಪರಮ ಸಾತ್ವಿಕರೂ ಪರಮ ಪತಿವ್ರತೆಯೂ ಹೌದು. ಆದ್ದರಿಂದ ನೀವು ಮಂಗಳಗೌರಿ ವ್ರತ ಮಾಡಿ ದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳಿ. ದೇವಿ ಪ್ರತ್ಯಕ್ಷಳಾದಾಗ ಪತಿದೇವರ ಪ್ರಾಣಹಾನಿಯಾಗದಂತಹ ವರವನ್ನು ಕೇಳಿಕೊಳ್ಳಿರಿ" ಎಂದನು.

ಮಂಡೋದರಿಯು ವಿಭೀಷಣನ ಸಲಹೆಯಂತೆ ಮಂಗಳಗೌರಿ ವ್ರತವನ್ನು ನಿಶ್ಚಲಭಕ್ತಿಯಿಂದ ಮಾಡಿ ದೇವಿಯನ್ನು ಸಾಕ್ಷಾತ್ಕರಿಸಿಕೊಂಡಳು. ಆಗ ಮಂಗಳಗೌರಿಯು–

"ಮಗಳೇ ನಿನ್ನ ಕೋರಿಕೆ ಏನು?" ಎಂದು ಕೇಳಿದಳು. ಅದಕ್ಕೆ ಮಂಡೋದರಿಯು–

"ತಾಯಿ, ನಿನ್ನ ಈ ಮಗಳ ಕೋರಿಕೆಯೇನೆಂದರೆ ನನ್ನ ಪತಿದೇವರಿಗೆ ಸಾವು ಸಂಭವಿಸದಂತೆ ವರ ನೀಡು ತಾಯಿ"

"ಮಗಳೇ ನಿನ್ನ ಅಪೇಕ್ಷೆಗೂ ಒಂದು ಮಿತಿಯಿರಲಿ. ನಿನ್ನ ಬಯಕೆಯಂತೆ ನಿನ್ನ ಪತಿದೇವರು ಉಳಿಯುವ ಸಾಧ್ಯತೆ ಉಂಟು. ಆದರೆ ನಾನು ಹೇಳಿದಂತೆ ನಡೆದುಕೊಳ್ಳದಿದ್ದರೆ ಅಳಿಯುವ ಸಾಧ್ಯತೆಯೂ ಉಂಟು. ಮಗಳೇ, ನಾನು ನಿನಗೆ ಒಂದು ಅಮೃತಬಿಂದುವನ್ನು ಕೊಡುತ್ತೇನೆ. ಇದನ್ನು ನಿನ್ನ ಪತಿಯ ದೇಹಕ್ಕೆ ಗೊತ್ತಾಗದ ರೀತಿಯಲ್ಲಿ ಸೇರಿಸು. ಇದರಿಂದ ನಿನ್ನ ಗಂಡನಿಗೆ ಯಾವುದೇ ಶಸ್ತ್ರಾಸ್ತ್ರದಿಂದ ಎಲ್ಲಿಗೆ ಹೊಡೆದರೂ ಸಾಯುವುದಿಲ್ಲ. ಆದರೆ ಈ ಅಮೃತಬಿಂದು ಇರುವ ಸ್ಥಳಕ್ಕೆ ಹೊಡೆದರೆ ಆಗ ಅವನಿಗೆ ಸಾವು ಸಂಭವಿಸುತ್ತದೆ" ಎಂದು ಹೇಳಿ ಅಮೃತಬಿಂದುವನ್ನು ಮಂಡೋದರಿಯ ಕೈಗಿತ್ತು ಅದೃಶ್ಯಳಾದಳು.

ಮಂಗಳಗೌರಿ ಕೊಟ್ಟ ಅಮೃತಬಿಂದುವನ್ನು ವಿಭೀಷಣನಿಗೆ ತೋರಿಸಿ ಇದನ್ನು ರಾವಣನ ದೇಹದ ಯಾವ ಭಾಗಕ್ಕೆ ಅಳವಡಿಸಬಹುದು ಎಂದೆಲ್ಲ ಚರ್ಚೆ ಮಾಡಿದರು. ಅದನ್ನು ತಲೆಗಾಗಲಿ ಕುತ್ತಿಗೆಗಾಗಲಿ ಹೃದಯಕ್ಕಾಗಲಿ ಅಳವಡಿಸುವಂತಿರಲಿಲ್ಲ. ಆಗ ವಿಭೀಷಣನ ಸಲಹೆಯಂತೆ ರಾವಣನ ಹೊಕ್ಕುಳುವಿನ ತಳಭಾಗಕ್ಕೆ ಅಳವಡಿಸಲು ತೀರ್ಮಾನಿಸಿದರು. ರಾವಣನು ಗಾಢ ನಿದ್ರೆಯಲ್ಲಿರುವಾಗ ಅವನ ಹೊಕ್ಕಳುವಿನ ತಳಭಾಗಕ್ಕೆ ಈ ಅಮೃತಬಿಂದುವನ್ನು ಅಳವಡಿಸಿದರು.

* * *

ರಾಮ–ರಾವಣರ ಯುದ್ಧದ ಸಂದರ್ಭದಲ್ಲಿ ಶ್ರೀರಾಮನಿಗೆ ರಾವಣನನ್ನು ಕೊಲ್ಲುವುದು ಅಸಾಧ್ಯ ಎನಿಸಿತು. ಏಕೆಂದರೆ ರಾವಣನ ದೇಹದ ಯಾವ ಭಾಗಕ್ಕೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದರೂ ಅವನ ಕೂದಲೂ ಸಹ ಕೊಂಕುತ್ತಿರಲಿಲ್ಲ.

ಇಂಥಾ ಸಮಯದಲ್ಲಿ ರಾವಣನಿಗೆ ಸಾವು ಸಂಭವಿಸುವ ಬಗೆಯನ್ನು ಬಲ್ಲವನಾಗಿದ್ದ ವಿಭೀಷಣನು ತನ್ನ ಸೋದರ ರಾವಣನ ನಾಭಿಯ ತಳಭಾಗದಲ್ಲಿ ಅಮೃತಬಿಂದು ಇರುವುದಾಗಿಯೂ ಆ ಸ್ಥಳಕ್ಕೆ ಶಸ್ತ್ರಾಸ್ತ್ರ ಪ್ರಯೋಗಿಸಿದರೆ ಅದರ ಘಾತಕ್ಕೆ ರಾವಣ ಸಾಯುವುದಾಗಿಯೂ ತಿಳಿಸಿದನು. ಈ ರಹಸ್ಯವನ್ನು ತಿಳಿದ ಶ್ರೀರಾಮನು ರಾವಣನನ್ನು ಸುಲಭವಾಗಿ ಸಂಹರಿಸಿದನು.

ರಾಮೇಶ್ವರ ವಜ್ರ

ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿಯ ಕೆಲುವತ್ತಿ–ನಿಟ್ಟೂರು ಮಾರ್ಗದಲ್ಲಿ ಹೋದರೆ ಯಲಗುಂದ ಸಿಗುತ್ತದೆ. ಇಲ್ಲಿಂದ ಮೂರು ಕಿ.ಮೀ. ದೂರ ಕ್ರಮಿಸಿದರೆ ರಾಮಲಿಂಗೇಶ್ವರ ನೆಲೆಸಿರುವ ಶ್ರೀ ಕ್ಷೇತ್ರ ವಜ್ರ ಸಿಗುತ್ತದೆ. ರಾಮಲಿಂಗೇಶ್ವರ ವಜ್ರ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಅಡಿ ಆಳದಲ್ಲಿದ್ದು ದಟ್ಟಾರಣ್ಯದ ನಡುವೆಯಿದೆ. ಇದನ್ನು ರಾಮದೇವರಹಳ್ಳ ಎಂದೂ ಕರೆಯುತ್ತಾರೆ.

ವಜ್ರಕ್ಕೆ ಒಂದು ಕಿ.ಮೀ. ದೂರದಲ್ಲಿ ಶಕ್ತಿದೇವತೆಪುರದಮ್ಮನ ದೇವಾಲಯವಿದೆ. ವಜ್ರಕ್ಕೆ ಬಂದವರು ಪುರದಮ್ಮನನ್ನೂ ಪೂಜಿಸುತ್ತಾರೆ.

ತ್ರೇತಾಯುಗದಲ್ಲಿ ರಾಮನಿಗೂ ರಾವಣನಿಗೂ ಯುದ್ಧ ನಡೆದದ್ದು ಸರಿಯಷ್ಟೆ. ರಾಮನು ರಾವಣನ ಮೇಲೆ ಎಷ್ಟೇ ನಿಶಿತಾಸ್ತ್ರಗಳನ್ನು ಪ್ರಯೋಗಿಸಿದರೂ ರಾವಣನನ್ನು ಕೊಲ್ಲಲು ಸಾಧ್ಯವಾಗಲೇ ಇಲ್ಲ. ರಾವಣನನ್ನು ಕೊಲ್ಲಲು ಪ್ರಯತ್ನಿಸಿದರೆ ಅವನಷ್ಟೇ ಪರಾಕ್ರಮಿಗಳಾದ ಶತಕೋಟಿ ರಾವಣರು ಹುಟ್ಟಿಕೊಳ್ಳುತ್ತಿದ್ದರು. ಇದರಿಂದಾಗಿ ರಾಮನು ರಾವಣನನ್ನು ಮರ್ದಿಸುವುದು ಕಷ್ಟವೆನಿಸಿತು.

ಹಿಂದೆ ರಾವಣನು ತಾಯಿ ಕೈಕಸಾದೇವಿಗೆ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತೇನೆ ಎಂದು ಮಾತು ಕೊಟ್ಟಿದ್ದನು. ಕೋಟಿ ಲಿಂಗಗಳಾಗಲು ಒಂದು ಮಾತ್ರ ಉಳಿದಿತ್ತು. ಈ ರಹಸ್ಯವನ್ನು ತಿಳಿದ ಶ್ರೀರಾಮನು 'ರಾವಣ ನೀನು ಸ್ಥಾಪಿಸಬೇಕಾಗಿದ್ದ ಕೊನೇ ಶಿವಲಿಂಗವನ್ನು ನಾನು ಸ್ಥಾಪಿಸುತ್ತಿದ್ದೇನೆಂದು ರಾವಣನ ಹೆಸರು ಹೇಳಿ ಲಿಂಗವನ್ನು ಪ್ರತಿಷ್ಠಾಪಿಸಿದನು. ಆ ಕೂಡಲೆ ರಾವಣನ ಪ್ರಾಣ ಪಟ್ಟನೆ ಹಾರಿಹೋಯಿತು.

ರಾಮಲಕ್ಷ್ಮಣರು ವಜ್ರದಲ್ಲಿ ಪ್ರತಿಷ್ಠಾಪಿಸಿದ ಕೋಟಿಲಿಂಗಗಳಲ್ಲಿ ಕೊನೆಯ ಲಿಂಗದ ಜೊತೆಗೆ ಆಂಜನೇಯ ತಂದಿದ್ದ ಕಾಶೀಲಿಂಗವನ್ನು ಪಕ್ಕದಲ್ಲಿ ಪ್ರತಿಷ್ಠಾಪಿಸಿದ್ದಾರೆ. ರಾವಣನ ಸಾವಿಗೆ ಈ ಲಿಂಗ ವಜ್ರಾಯುಧವಾಗಿ ಪರಿಣಮಿಸಿದ್ದರಿಂದ ಇದನ್ನು ರಾಮೇಶ್ವರ ವಜ್ರ ಎಂದು ಕರೆಯುತ್ತಾರೆ.

ವಜ್ರದ ಮತ್ತೊಂದು ವಿಶೇಷವೆಂದರೆ ವಜ್ರದ ಗರ್ಭಗುಡಿಯೊಳಕ್ಕೆ ಕಾಲಿಟ್ಟರೆ ಒಳಗೆ ಪಾದಗಳು ಮುಳುಗುವಷ್ಟು ನೀರು ಸದಾಕಾಲವಿರುತ್ತದೆ. ಇಲ್ಲಿನ ಅರ್ಚಕರು ನೀರನ್ನು ತೋಡಿ ಅನಂತರ ಪೂಜೆ ಮಾಡುತ್ತಾರೆ. ಬಲಭಾಗಕ್ಕೆ ಮಾರುತಿಯ ವಿಗ್ರಹವಿದೆ. ಪಕ್ಕದಲ್ಲಿ ಚಿಕ್ಕದೊಂದು ಕೊಳವಿದೆ. ಎದುರುಗಡೆ ಗಣಪತಿ ಮತ್ತು ನಂದಿ ವಿಗ್ರಹಗಳಿವೆ.

ಇಲ್ಲಿನ ಮತ್ತೊಂದು ವಿಶೇಷವೆಂದರೆ ಬೆಮ್ಮತ್ತಿಗೂಡು ಎಂಬ ಕಲ್ಲಿದೆ. ಮಕ್ಕಳಿಲ್ಲದವರು ಈ ಬೆಮ್ಮತ್ತಿ ಕಲ್ಲನ್ನು ತಲೆಯ ಮೇಲೆ ಹೊತ್ತುಕೊಂಡು ಮೂರು ಪ್ರದಕ್ಷಿಣಿಕೆ ಹಾಕಿದರೆ ಸಂತಾನಫಲ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ. ರಾಮಲಿಂಗೇಶ್ವರ ಗುಡಿಯ ಎದುರಿಗೆ ಆದಿಶಕ್ತಿ ಚೌಡೇಶ್ವರಿ ದೇವಾಲಯವಿದೆ. ಇದು ದೇವಾಂಗ ಮತ್ತಿತರ ಜನಾಂಗದವರಿಗೆ ಪುಣ್ಯ ಕ್ಷೇತ್ರವೆನಿಸಿದೆ.

ಈ ಕ್ಷೇತ್ರದಲ್ಲಿ ಮಕರ ಸಂಕ್ರಾಂತಿ ಮತ್ತು ಮಹಾಶಿವರಾತ್ರಿಗಳಲ್ಲಿ ವಿಶೇಷ ಪೂಜೆ ಅಭಿಷೇಕಗಳು ನಡೆಯುತ್ತವೆ. ಪ್ರತಿ ತಿಂಗಳು ಅಮವಾಸ್ಯೆ ಕಟ್ಟೆ ನಡೆಯುತ್ತದೆ. ಇಲ್ಲಿಗೆ ಬಂದ ಭಕ್ತರು ಕಾಶಿಗೆ ಹೋಗಬೇಕಾಗಿಲ್ಲ ; ಇದೇ ಕಾಶಿ ಎಂದು ಹೇಳುತ್ತಾರೆ.

ರಾವಳೇಶ್ವರ

ರಾಮಾಯಣದಲ್ಲಿ ರಾವಣ ಖಳನಾಯಕನಾಗಿ ಬಿಂಬಿತವಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯೇ ಸರಿ. ಆದರೆ ಖಳನಾಯಕನೆನಿಸಿದ ರಾವಣ ದೈವಿಕ ಸ್ಥಿತಿಯನ್ನು ಪಡೆದು ಆರಾಧನೆಗೊಳ್ಳುತ್ತಿರುವುದು ಆಶ್ಚರ್ಯಕರವಾಗಿದೆ. ಕರ್ನಾಟಕ, ತಮಿಳುನಾಡು ಮತ್ತು ಆಂಧ್ರದ ಬಹಳಷ್ಟು ಕಡೆ ರಾವಣಾರಾಧನೋತ್ಸವ ನಡೆಯುತ್ತಿದೆ. ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಮಳವಳ್ಳಿ, ಕೋಲಾರ ಜಿಲ್ಲೆಯ ಮುಳುಬಾಗಿಲು ಮುಂತಾದ ಗ್ರಾಮಗಳಲ್ಲಿ ರಾವಣನನ್ನು ಆರಾಧಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿಯಿಂದ ಹಲಗೂರಿಗೆ ಹೋಗುವ ರಸ್ತೆಯಲ್ಲಿ ಕ್ಯಾತೇಗೌಡನದೊಡ್ಡಿಯಿದೆ. ಈ ದೊಡ್ಡಿಯ ಹತ್ತಿರ ಎಡಭಾಗಕೆ ರಾವಳೇಶ್ವರ ದೇವಾಲಯಕ್ಕೆ ದಾರಿ ಎಂಬ ಕಮಾನ್ ಗೇಟ್ ಸಿಗುತ್ತದೆ. ಈ ಗೇಟಿನ ತುಸು ದೂರದಲ್ಲಿ ರಾವಳೇಶ್ವರ ದೇವಾಲಯವಿದೆ. ಇಲ್ಲಿ ವರ್ಷಕ್ಕೊಂದಾವರ್ತಿ ಜಾತ್ರೆಯೂ ನಡೆಯುತ್ತದೆ.

ಶ್ರೀರಾಮನಿಂದ ರಾವಣ ಹತನಾದ ಮೇಲೆ ಶೂರ್ಪನಖಿಯು ವಿಭೀಷಣನಿಗೆ ಕಾಣದಂತೆ ರಾವಣನ ದೇಹವನ್ನು ಅಗ್ನಿಸಂಸ್ಕಾರ ಮಾಡಿ ಆ ಬೂದಿಯನ್ನು ಒಂದು ಹೊಸಮಣ್ಣಿನ ಮಡಕೆಗೆ ತುಂಬಿ ಹೊತ್ತುಕೊಂಡು ಕಡಲು ದಾಟಿ ದ್ರಾವಿಡ ಸೀಮೆಗೆ ಬಂದಳು. ಹೀಗೆ ಬರುತ್ತಿರುವಾಗ ಈಗಿನ ಚಿದಂಬರಂ ಬಳಿಗೆ ಬರುವಷ್ಟರಲ್ಲಿ ಅಂಬರದಲ್ಲಿ ಈಶ್ವರನು ಕಾಣಿಸಿಕೊಂಡು ಶೂರ್ಪನಖಿಗೆ ಅಡ್ಡಬಂದು–

"ನಿಲ್ಲು ಶೂರ್ಪನಖಿ, ಇದು ನನ್ನ ಪರಮಭಕ್ತನಾದ ರಾವಣನ ದೇಹದ ಭಸ್ಮ!" ಎಂದು ಹೇಳುತ್ತ ತನ್ನ ಬಲಗೈನ ಮಧ್ಯದ ಮೂರು ಬೆರಳುಗಳನ್ನು ಬೂದಿಯ ಮಡಕೆಗೆ ಅದ್ದಿ ಅದನ್ನು ತನ್ನ ಹಣೆಗೆ ಹಚ್ಚಿಕೊಂಡು ಅಂಬರದಲ್ಲಿ ತೇಲುತ್ತ–

"ಶೂರ್ಪನಖಿ, ಹೋಗು. ಈ ಭಸ್ಮವನ್ನು ಅಮೃತಭೂಮಿಯಲ್ಲಿ ಸಂಸ್ಕಾರ ಮಾಡು" ಎಂದು ಹೇಳಿದನು. ಹೀಗೆ ಶಿವನು ಅಂಬರದಲ್ಲಿ ಮೂಡಿ ಅಂಬರದಲ್ಲೇ ಮರೆಯಾದ್ದರಿಂದ ಅವನಿಗೆ ಚಿದಂಬರೇಶ್ವರ ಎಂದು ಹೆಸರಾಯಿತು.

ಶೂರ್ಪನಖಿಯು ಅಲ್ಲಿಂದ ಮುಂದೆ ಮುಂದೆ ಬರುತ್ತಿರುವಾಗ ಅಶರೀರವಾಣಿಯೊಂದು–

"ಶೂರ್ಪನಖಿ, ನಿನ್ನ ಅಣ್ಣನ ಚಿತಾಭಸ್ಮವನ್ನು ನೀನು ನಿಂತಿರುವ ಸ್ಥಳದಲ್ಲೇ ಸಂಸ್ಕಾರ ಮಾಡು!" ಎಂದು ಆದೇಶ ನೀಡಿತು.

ಅಶರೀರವಾಣಿಯು ಸೂಚಿಸಿದ ಸ್ಥಳವೆಂದರೆ ಅದು ಇಂದಿನ ಮಳವಳ್ಳಿಯಿಂದ ಹಲುಗೂರಿಗೆ ಹೋಗುವ ರಸ್ತೆಯಲ್ಲಿ ಸಿಕ್ಕುವ ಕ್ಯಾತೇಗೌಡನ ದೊಡ್ಡಿಯ ಸಮೀಪದ ಸ್ಥಳ. ಶೂರ್ಪನಖಿಯು ಅಶರೀರವಾಣಿಯ ಆದೇಶದಂತೆ

ಅಣ್ಣ ರಾವಣನ ಚಿತಾಭಸ್ಮವನ್ನು ಸಂಸ್ಕರಿಸಿದಳು. ಈ ಸ್ಥಳದಲ್ಲೆ ರಾವಳೇಶ್ವರನ ದೇವಾಲಯವು ಮೇಲೆದ್ದಿತು. ಈಗ ಜನರು ಈ ದೇವಾಲಯವನ್ನು ರಾವಳೇಶ್ವರನ ಗುಡಿ ಎಂದು ಕರೆಯುತ್ತಾರೆ. ಇಲ್ಲಿ ಸೋಮವಾರ, ಶುಕ್ರವಾರ ಮತ್ತು ಅಮಾವಾಸ್ಯೆ ದಿನಗಳಲ್ಲಿ ತಪ್ಪದೆ ಪೂಜಾಕಾರ್ಯ ನೆರವೇರುತ್ತದೆ. ಗರ್ಭಗುಡಿಯಲ್ಲಿ ರಾವಣನ ವಿಗ್ರಹವಿದೆ. ಇಂಥ ದೇವಾಲಯಗಳು ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಮಳವಳ್ಳಿ, ಚೋಳನಹಳ್ಳಿಗಳಲ್ಲಲ್ಲದೆ ಕೋಲಾರ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಆಂಧ್ರ ಮತ್ತು ತಮಿಳುನಾಡಿನ ಕೆಲವು ಕಡೆಗಳಲ್ಲಿ ರಾವಣೇಶ್ವರನ ಗುಡಿಗಳಿದ್ದು ರಾವಳನನ್ನು ಪೂಜಿಸುತ್ತಾರೆಂದು ಹೇಳುತ್ತಾರೆ.

ಶೂರ್ಪನಖಿಯನ್ನು ರಾಕಾಸಮ್ಮ ಎಂಬ ಹೆಸರಿನಿಂದ ಮಳವಳ್ಳಿ ತಾಲ್ಲೂಕಿನ ಹೊನಗನಹಳ್ಳಿ ಮತ್ತು ಕಗ್ಗಲಿಪುರಗಳಲ್ಲಿ ಪೂಜಿಸುತ್ತಾರೆ. ಇಲ್ಲಿನ ಚೋಳನಹಳ್ಳಿಯ ರಾವಣದೇವರೂ ಅತ್ಯಂತ ಪ್ರಸಿದ್ಧವಾಗಿದೆ.

ರಾವಣತನ ಮರೆತು ರಾಮತನ ಉಂಟಾಗಿಬಿಡುತ್ತದೆ

ರಾವಣನು ಕುತಂತ್ರದಿಂದ ಸೀತೆಯನ್ನು ಅಪಹರಿಸಿ ಲಂಕೆಯ ಅಶೋಕವನದಲ್ಲಿ ಇರಿಸಿದನು. ರಾವಣನು ತನ್ನ ಸಾಧನೆಗೆ ತಾನೇ ಬೀಗುತ್ತಿರುವಾಗ ಅವನ ಮಂತ್ರಿಯು ಬಂದು

'ಪ್ರಭೂ, ನನಗೆ ನಿಮ್ಮ ಪ್ರಯತ್ನವನ್ನು ಕಂಡು ಏನು ಹೇಳಬೇಕೆಂಬುದೇ ಅರ್ಥವಾಗುತ್ತಿಲ್ಲ' ಎಂದನು. ಅದಕ್ಕೆ ರಾವಣನು,

'ಏಕೆ ಮಂತ್ರಿ?' ಎಂದು ಪ್ರಶ್ನಿಸಿದನು. ಅದಕ್ಕೆ ಮಂತ್ರಿಯು

'ಇಚ್ಛಾರೂಪಧಾರಿಯಾಗಬಲ್ಲ ವಿಕೂರ್ವಣ ವಿದ್ಯೆ ನಿಮಗಿರುವಾಗ ನೀವು ಶ್ರೀರಾಮನ ರೂಪ ಧರಿಸಿ ಹೋಗಿದ್ದರೆ ಸೀತೆ ತಂತಾನೆ ನಿಮ್ಮ ಹಿಂದೆ ಬರುತ್ತಿದ್ದಳು. ಅದನ್ನು ಬಿಟ್ಟು ಮಾರೀಚ, ಮಾಯಾಜಿಂಕೆ, ಭಿಕ್ಷಾಪಾತ್ರೆಯ ಮುನಿವೇಷ ಇದೆಲ್ಲ ಏಕೆ ಬೇಕಿತ್ತು?' ಎಂದು ಪ್ರಶ್ನಿಸಿದನು. ಅದಕ್ಕೆ ರಾವಣನು ನಿಷ್ಕಾಮಯೋಗಿಯಂತೆ

'ಮಂತ್ರಿವರ್ಯ, ನಿನ್ನ ಮಾತುಗಳೆಲ್ಲವೂ ಸರಿಯೇ. ಆದರೆ ವಸ್ತುಸ್ಥಿತಿ ನಿನಗರ್ಥವಾಗುವುದಿಲ್ಲ. ಅದೇನೆಂದರೆ, ನಾನು ರಾಮರೂಪಧಾರಿಯಾಗಲು ರಾಮನ ಚಿತ್ರವನ್ನು ನೆನೆಯುತ್ತಿದ್ದಂತೆಯೇ ನನ್ನ ರಾವಣತನ ಮರೆತುಹೋಗಿ ರಾಮತನ ಉಂಟಾಗಿ ಸೀತೆಯನ್ನು ಸೆಳೆದೊಯ್ಯುವ ಬಯಕೆಯೇ ಉಂಟಾಗುತ್ತಿರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ವಿಕೂರ್ವಣ ವಿದ್ಯೆಯನ್ನು ಮರೆತು ಮಾವ ಮಾರೀಚನ ಸಹಾಯ ಪಡೆಯಬೇಕಾಯ್ತು. ಸ್ವರ್ಣಮೃಗತಂತ್ರ ಸೀತೆಯ ಅಪಹರಣಕ್ಕೆ ಸುಗಮಪಥವಾಗಿ ಪರಿಣಮಿಸಿತು!' ಎಂದನು. ಮಂತ್ರಿಯು ರಾವಣನ ಮಾತುಗಳನ್ನು ಕೇಳುತ್ತ ಮೌನವಾಗಿ ನಿಂತಿದ್ದನು.

ಜನಪದ ರಾಮಾಯಣದ ಕಥೆಗಳು

ಆಂಜನೇಯನೆಂದರೆ ಅಸಾಧಾರಣ



ಅಮರಕಥಾಮೃತ ರಾಮಾಯಣ



ಲೋಕಮಾತೆಗಿದೋ ನಮನ. ರಾಮಧೂತ ಅಂಜನಾಸುತ ನಾ

ವಾಯುವಿನ ಅನುಗ್ರಹದಿಂದ ಜನಿಸಿದ ಆಂಜನೇಯ

ಅಂಜನಾದೇವಿಯ ಪತಿ ಕಪಿಶ್ರೇಷ್ಠನಾದ ಕೇಸರಿ. ಈ ದಂಪತಿಗಳಿಗೆ ಬಹುಕಾಲದವರೆಗೂ ಮಕ್ಕಳಾಗಲಿಲ್ಲ. ಆಗ ಅಂಜನಾದೇವಿಯು ಮತಂಗಮುನಿಗಳ ಬಳಿಗೆ ಹೋಗಿ ತನ್ನ ಹೃತ್ತಾಪವನ್ನು ತೋಡಿಕೊಂಡಳು. ಅದಕ್ಕೆ ಆ ಮುನಿಗಳು

"ಅಂಜನಾದೇವಿ, ನೀನು ಪಂಪಾಸರೋವರದ ಪೂರ್ವಕ್ಕಿರುವ ಆಕಾಶಗಂಗೆ ತೀರ್ಥದಲ್ಲಿ ಮಿಂದು ಮಡಿಯುಟ್ಟು ಭಕ್ತಿಯಿಂದ ಶ್ಯಾಮಲಾದೇವಿಯನ್ನು ಕುರಿತು ತಪಸ್ಸು ಮಾಡಿದರೆ ನಿನ್ನ ಇಷ್ಟ ಸಿದ್ಧಿಯಾಗುತ್ತದೆ" ಎಂದರು.

ಮತಂಗಮುನಿಗಳ ಸಲಹೆಯಂತೆ ಅಂಜನಾದೇವಿಯು ನಿರಂತರವಾಗಿ ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡಿದಳು. ಅಂಜನೆಯ ಭಕ್ತಿಯಿಂದ ಸುಪ್ರೀತನಾದ ಈಶ್ವರನು ಅವಳಿಗೆ ವಾಯುದೇವನ ಮೂಲಕ ಪ್ರತಿನಿತ್ಯವೂ ಒಂದೊಂದು ಹಣ್ಣನ್ನು ಕಳಿಸಿಕೊಡುತ್ತಿದ್ದನು. ವಾಯುದೇವನು ಪರಮೇಶ್ವರನ ಆದೇಶದಂತೆ ಆ ಹಣ್ಣನ್ನು ಗಾಳಿಯ ಮೂಲಕ ಅವಳಿಗೆ ಸೇರುವಂತೆ ಮಾಡುತ್ತಿದ್ದನು.

ವಾಯುದೇವನ ಈ ಅನುಗ್ರಹದಿಂದ ಹಾಗೂ ಶ್ರೀಚಕ್ರದೇವತೆಯ ವರಪ್ರಸಾದಿಂದ ಅಂಜನಾದೇವಿಯು ಗರ್ಭಿಣಿಯಾದಳು. ನವಮಾಸಗಳು ತುಂಬಿದ ಮೇಲೆ ಆಕೆಯ ಗರ್ಭದಲ್ಲಿ ಜನಿಸಿದ ವಾಯುಪುತ್ರನೇ ವೀರ ಆಂಜನೇಯ.

ವಾಯುವೇಗದಲ್ಲಿ ಗಮಿಸಬಲ್ಲ ಸಾಮರ್ಥ್ಯವಿದ್ದ ಆಂಜನೇಯನನ್ನು ಋಷಿಮುನಿಗಳು 'ಮನೋವೇಗಗಮನ' ಎಂದೇ ಕರೆಯುತ್ತಿದ್ದರು. ಪಂಚವಾಯುಗಳಿಂದ ಆಂಜನೇಯ ಪಂಚಮುಖಿಯಾಗಿಯೂ ಅಖಿಲಾಂಡ ಕೋಟಿ ಬ್ರಹ್ಮಾಂಡವನ್ನು ಆವರಿಸಿಕೊಂಡು ಭಕ್ತರ ಉದ್ಧಾರ ಮಾಡುವ ಮಹಾಶಕ್ತಿಯಾಗಿಯೂ ಪ್ರಖ್ಯಾತನಾದನು.

ಪಾರ್ವತೀ-ರುದ್ರ ಸಮುದ್ಭವ ಆಂಜನೇಯ

ಅಂಜನಾದೇವಿಯು ಅಂಜನಾಚಲದಲ್ಲಿ ಸಂತಾನಾಪೇಕ್ಷೆಯಿಂದ ಉಗ್ರವಾದ ತಪಸ್ಸು ಮಾಡತೊಡಗಿದಳು. ಇವಳ ತಪಃಪ್ರಭಾವವು ಮೂರು ಲೋಕಗಳನ್ನೂ ಆವರಿಸಿಕೊಂಡಿತು. ಆಗ ಶಿವನು ಅಂಜನಾದೇವಿಯ ತಪಸ್ಸಿನ ಅಂತರಾರ್ಥವನ್ನು

ತಿಳಿದು ಪಾರ್ವತೀದೇವಿಯ ಹೊಟ್ಟೆಯ ಭಾಗದ ಹೊಕ್ಕಳು ಬಳ್ಳಿಯನ್ನು ಅಂಜನೆಗೆ ಕಳಿಸಿಕೊಟ್ಟನು.

ಅಂಜನಾದೇವಿಯು ಆ ಹೊಕ್ಕಳುಬಳ್ಳಿಯನ್ನು ಭಕ್ತಿಪೂರ್ವಕವಾಗಿ ಸ್ವೀಕರಿಸಿ ತನ್ನ ಹೊಟ್ಟೆಯ ಭಾಗಕ್ಕೆ ಸುತ್ತಿಕೊಂಡಳು. ಆ ತರುವಾಯವೂ ಉಗ್ರವಾದ ತಪಸ್ಸಿಗೆ ತೊಡಗಿದಳು.

ಅಂಜನೆಯ ತಪಸ್ಸಿಗೆ ಮೆಚ್ಚಿದ ಶಿವನ ಕರುಣಾದೃಷ್ಟಿ ಆಕೆಯನ್ನು ತಾಕಿ ಶಿವಪಾರ್ವತಿಯರ ಅನುಗ್ರಹದಿಂದ ಅಂಜನೆಗೆ ಒಂದು ಗಂಡು ಮಗು ಆಯಿತು. ಹೀಗೆ ಪಾರ್ವತೀ ಗರ್ಭಸಂಭೂತನೂ ರುದ್ರವೀರ್ಯ ಸಮುದ್ಭವನೂ ಆದ ಆ ಮಗುವೇ ಆಂಜನೇಯ.

ವಾಲಿ ಸುಗ್ರೀವ ಆಂಜನೇಯರ ಜನನ ವೃತ್ತಾಂತ

ಆಂಧ್ರಭಾಷೆಯ 'ವಚನ ವಿಚಿತ್ರ ರಾಮಾಯಣ' ಎಂಬ ಗ್ರಂಥದಲ್ಲಿರುವ ವಾಲಿ ಸುಗ್ರೀವ ಮತ್ತು ಆಂಜನೇಯರ ಜನನ ವೃತ್ತಾಂತವನ್ನು 'ಪುರಾಣನಾಮ ಚೂಡಾಮಣಿ'ಯಿಂದ ಆಯ್ದುಕೊಂಡಿರುವ ಕಥಾಭಾಗ ಇದು :

ಅಂಜನೆಯು ಅಹಲ್ಯಾಗೌತಮರ ಮಗಳು. ಅಹಲ್ಯೆ ರಹಸ್ಯವಾಗಿ ಇಂದ್ರನಿಂದಲೂ ಸೂರ್ಯನಿಂದಲೂ ಒಬ್ಬೊಬ್ಬ ಪುತ್ರನನ್ನು ಪಡೆದಳು. ಒಮ್ಮೆ ಗೌತಮ ಮಹರ್ಷಿ ಈ ಮಕ್ಕಳಿಬ್ಬರನ್ನೂ ಎತ್ತಿಕೊಂಡು ಅಂಜನೆಯನ್ನು ನಡೆಸುತ್ತ ಸಮುದ್ರ ತೀರದಲ್ಲಿ ಸಂಚರಿಸುತ್ತಿರುವಾಗ ಅಂಜನೆ ಆ ಇಬ್ಬರು ಗಂಡುಮಕ್ಕಳ ಹುಟ್ಟಿನ ಗುಟ್ಟನ್ನು ಗೌತಮನಿಗೆ ಹೇಳಿದಳು. ಆ ಕೂಡಲೆ ಗೌತಮನು 'ಇವರು ನನ್ನ ಮಕ್ಕಳಲ್ಲವಾದರೆ ಕಪಿಮುಖರಾಗಲಿ!' ಎಂದು ಶಪಿಸಿದನು. ಆ ಕೂಡಲೆ ಅವರಿಬ್ಬರೂ ಕಪಿಮುಖರಾದರು. ಅವರೇ ವಾಲಿ ಮತ್ತು ಸುಗ್ರೀವರು.

ಬಳಿಕ ತನ್ನ ಗುಟ್ಟನ್ನು ರಟ್ಟು ಮಾಡಿದಳೆಂದು ಕೋಪದಿಂದ ಅಹಲ್ಯೆಯು ತನ್ನ ಮಗಳು ಕುರುಡಿಯಾಗಲೆಂದೂ ಅವಳ ಹೊಟ್ಟೆಯಲ್ಲಿ ಕಪಿ ಜನಿಸಲೆಂದೂ ಶಾಪವಿತ್ತಳು. ಆ ಕಾರಣದಿಂದ ಅಂಜನೆಯ ಮಗನಾಗಿ ಆಂಜನೇಯ ಹುಟ್ಟಿದನು. (ಪುರಾಣನಾಮ ಚೂಡಾಮಣಿಯಲ್ಲಿ ಗೌತಮನ ಬದಲಾಗಿ ಅತ್ರಿ ಬಂದಿರುವುದರ ಕಾರಣ ಗೊತ್ತಿಲ್ಲ).

ವಾಯುಪುತ್ರ ಅಂಜನಾತನಯ

ಮೌಲ್ಯವಂತ ಎಂಬ ಒಂದು ಪರ್ವತದಲ್ಲಿ ಕೇಸರಿ ಎಂಬ ವಾನರಶ್ರೇಷ್ಠರು ವಾಸವಾಗಿದ್ದನು. ಅವನು ಒಮ್ಮೆ ಗೋಕರ್ಣ ಪರ್ವತಕ್ಕೆ ಹೋದನು. ಆ ಪರ್ವತದ ಬಳಿಯ ಸಮುದ್ರ ತೀರದಲ್ಲಿ ಶಂಬಸಾದನನೆಂಬ ರಾಕ್ಷಸನಿದ್ದನು. ಕೇಸರಿಯು ಅಲ್ಲಿದ್ದ ದೇವರ್ಷಿಗಳ ಆದೇಶದಂತೆ ಆ ರಾಕ್ಷಸನನ್ನು ಸಂಹಾರ ಮಾಡಿದನು.

ಶಂಬಸಾದನ ಸಂಹಾರವಾದ ಮೇಲೆ ಕೇಸರಿಯನ್ನು ಋಷಿಮುನಿಗಳೆಲ್ಲರೂ-

'ವತ್ಸ, ನಮಗೆಲ್ಲ ಕಂಟಕಪ್ರಾಯನಾಗಿದ್ದ ರಾಕ್ಷಸನನ್ನು ಸಂಹರಿಸಿ ಉಪಕಾರ ಮಾಡಿದೆ. ಆದ್ದರಿಂದ ನಾವೆಲ್ಲರೂ ನಿನಗೆ ಹೃದಯ ತುಂಬಿ ಆಶೀರ್ವದಿಸುತ್ತಿದ್ದೇವೆ. ಸಕಲ ಶಾಸ್ತ್ರ ಸಂಪನ್ನನೂ ಕಾಮಚಾರಿಯೂ ಬಲಾಧಿಕನೂ ಬ್ರಹ್ಮನಿಷ್ಠನೂ ಆದ ಸುಪುತ್ರ ನಿನ್ನ ಮಗನಾಗುವನು!' ಎಂದು ವರವಿತ್ತರು.

ಗೋಕರ್ಣ ಕ್ಷೇತ್ರದಲ್ಲಿದ್ದ ಕೇಸರಿಯು ಕಿಷ್ಕಿಂಧೆ ಕಡೆಗೆ ಬಂದಾಗ ಅಲ್ಲಿದ್ದ ಅಂಜನಾದೇವಿಯನ್ನು ಕಂಡನು. ಅವಳಲ್ಲಿ ಅನುರಕ್ತನಾದ ಅವನು ಅವಳ ಕೈಹಿಡಿದನು.

ಹೀಗಿರುವಾಗ ಒಮ್ಮೆ ಅಂಜನಾದೇವಿಯು ವನದಲ್ಲಿ ವಿಹರಿಸುತ್ತಿರುವಾಗ ಇವಳನ್ನು ಕಂಡ ವಾಯುದೇವನು ಇವಳ ಸೌಂದರ್ಯಕ್ಕೆ ಮರುಳಾದನು. ಆಗ ಅಂಜನೆಯು ವಾಯುದೇವನ ಅನುಗ್ರಹದಿಂದ ವಾಯುಪುತ್ರ ಆಂಜನೇಯನನ್ನು ಪಡೆದಳು.

ಅಂಜನಾದ್ರಿ ಪರ್ವತ

ಹಂಪಿಯಲ್ಲಿರುವ ರಾಮಾಯಣಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಅಂಜನಾದ್ರಿಯೂ ಒಂದು. ಅಂಜನಾದೇವಿಯು ಆಂಜನೇಯನ ತಾಯಿ. ಅಂಜನಾದೇವಿಯು ಈ ಪರ್ವತದಲ್ಲಿ ವಾಸವಾಗಿದ್ದಳೆಂದು ಜನರು ಹೇಳುತ್ತಾರೆ. ಹನುಮನಹಳ್ಳಿಯ ಸಮೀಪದಲ್ಲಿರುವ ಈ ಪರ್ವತದಲ್ಲಿ ಇಂದಿಗೂ ಅನೇಕ ಸಾಧುಸಂತರುಗಳು ವಾಸವಾಗಿದ್ದಾರೆ.

ಹನುಮಂತನನ್ನು ಅಂಜನಾದೇವಿಯು ಹಡೆದ ಮೇಲೆ ಆಕೆಗೆ ನೀರು ಬೇಕಾಯಿತಂತೆ. ಆಗ ಹನುಮಂತನೇ ನೀರು ಒದಗಿಸಿಕೊಟ್ಟನಂತೆ. ಆ ಕುರಿತ ಒಂದು ಜನಪದ ತ್ರಿಪದಿ ಹೀಗಿದೆ.

ಅಡವ್ಯಾಗಂಜನದೇವಿ ಹನುಮಾನ ಹಡೆದಾಳೆ
ತೊಡೆಯ ತೊಳೆಯೋಕೆ ನೀರಿಲ್ಲ – ಹನುಮಣ್ಣ
ಸುತ್ತಲ ಹೊಳೆಯ ತಿರುವ್ಯಾನೆ.

ವೀರಪುತ್ರ ಆಂಜನೇಯನಿಗೆ ಯಾವುದು ತಾನೆ ಅಸಾಧ್ಯ!

ಹನುಮನ ಸೆಳೆವು

ರಾಮಾಯಣದ ಕಾಲದ ಕಿಷ್ಕಿಂಧೆಯೇ ಇಂದಿನ ಹಂಪಿ ಎಂದು ಹೇಳುತ್ತಾರೆ. ವಾಲಿ ಸುಗ್ರೀವ ಆಂಜನೇಯರ ನೆಲೆಯೇ ಈ ಕಿಷ್ಕಿಂಧೆಯಂತೆ. ಇಲ್ಲಿರುವ ಅಂಜನಾದ್ರಿಯಲ್ಲಿ ಆಂಜನೇಯನ ತಾಯಿ ಅಂಜನಾದೇವಿ ವಾಸವಾಗಿದ್ದಳಂತೆ. ಅಂಜನಾದೇವಿಯು ವಾಯುದೇವನ ಸಂಸರ್ಗ ಮಾಡಿದ ಫಲವಾಗಿ ಆಂಜನೇಯನಿಗೆ ಜನ್ಮವಿತ್ತಳು. ಹೀಗೆ ಆಂಜನೇಯನನ್ನು ಹಡೆದ ಸಂದರ್ಭದಲ್ಲಿ ಅವಳು ಸ್ನಾನ ಮಾಡಿ ಶುಚೀರ್ಭೂತೆಯಾಗಬೇಕಿತ್ತು. ಆದರೆ ಅವಳು ಅಂಜನಾದ್ರಿಯ ತುದಿಯಲ್ಲಿ ಇದ್ದುದರಿಂದ ಬೆಟ್ಟದಿಂದ ಕೆಳಗಿಳಿದು ಹಂಪಿ ಹೊಳೆಯಲ್ಲಿ ಸ್ನಾನ ಮಾಡುವುದು ಕಷ್ಟವಾಗಿತ್ತು. ಈ ಹಿಂದೆ ತಂದಿಟ್ಟುಕೊಂಡಿದ್ದ ನೀರು ಮುಗಿದುಹೋಗಿತ್ತು.

ಶಿಶು ಆಂಜನೇಯನು ತನ್ನ ತಾಯಿ ನೀರಿಗಾಗಿ ಪರಿತಪಿಸುತ್ತಿರುವುದನ್ನು ಗಮನಿಸಿ ಮೆಲ್ಲಗೆ ಅಂಜನಾದ್ರಿಯನ್ನಿಳಿದು ಹರಿಯುತ್ತಿದ್ದ ಹೊಳೆಗೆ ತನ್ನ ತೋಳನ್ನು ಒಡ್ಡಿ ಅಂಜನಾದ್ರಿ ಕಡೆಗೆ ಹೊಳೆ ಹರಿದುಹೋಗುವಂತೆ ಮಾಡಿದ. ಇದರಿಂದ ಅಂಜನಾದೇವಿಯ ಸಮಸ್ಯೆ ಪರಿಹಾರವಾಯಿತು.

ಆಂಜನೇಯನ ಈ ಸಾಹಸದಿಂದ ಅಂಜನಾದ್ರಿ ಕಡೆಗೆ ಹಂಪಿ ಹೊಳೆ ತಿರುಗಿದ್ದರಿಂದ ಋಷ್ಯಮೂಕ ಪರ್ವತವನ್ನು ಬಳಸಿಕೊಂಡು ಎರಡು ಕವಲಾಗಿ ಹರಿಯತೊಡಗಿತು. ಹಂಪಿ ಹೊಳೆ ಋಷ್ಯಮೂಕ ಪರ್ವತದ ಎಡಬಲಗಳೆರಡರಲ್ಲೂ ಒಡೆದು ಹರಿಯುವ ಭಾಗ ಆಂಜನೇಯನ ಉದ್ದೇಶದಿಂದಾದ್ದರಿಂದ ಈ ಸ್ಥಳವನ್ನು ಹನುಮನ ಸೆಳೆವು ಎಂದು ಕರೆಯುತ್ತಾರೆ.

ಆಂಜನೇಯನ ಮೂತಿ

ಹನುಮಂತನು ಬಾಲಕನಾಗಿದ್ದಾಗ ಒಂದು ದಿನ ಅವನಿಗೆ ಬಹಳವಾಗಿ ಹಸಿವಾಯಿತು. ಹಸಿವನ್ನು ತಾಳಲಾರದೆ ಸುತ್ತಮುತ್ತ ನೋಡಿದನು. ಮೂಡಲಲ್ಲಿ ಉದಿಸುತ್ತಿದ್ದ ಸೂರ್ಯ ಕಿತ್ತಲೆ ಹಣ್ಣಿನಂತೆ ಕಂಡನು. ಆ ಕೂಡಲೆ

ಹನುಮಂತನು ಆಕಾಶಕ್ಕೆ ಹಾರಿ ಸೂರ್ಯನನ್ನು ಹಣ್ಣೆಂದು ಭಾವಿಸಿ ಬಾಯೊಳಗೆ ಅಡಗಿಸಿಕೊಂಡನು.

ಹನುಮಂತನು ಸೂರ್ಯನನ್ನು ಬಾಯೊಳಗೆ ಅಡಗಿಸಿಕೊಂಡುದರಿಂದ ಜಗತ್ತಿಗೆ ಕತ್ತಲು ಕವಿಯಿತು. ಇದರಿಂದ ದೇವಾಧಿದೇವತೆಗಳೆಲ್ಲ ದಿಗ್ಭ್ರಾಂತರಾದರು. ಕಣ್ಣಿಗೆ ಏನೊಂದೂ ಕಾಣದೆ ತಡಕಾಡಿದರು. 'ಇದೇಕೆ ಕತ್ತಲಾಯಿತು? ಎಂದು ಇಂದ್ರ ಯೋಚಿಸುತ್ತಿರುವಾಗ ಹನುಮಂತನಿಂದ ಆಗಿರುವ ಅನಾಹುತ ತಿಳಿಯಿತು.

ಹನುಮಂತನ ಕೃತ್ಯದಿಂದ ಇಂದ್ರನಿಗೆ ರೌದ್ರಕೋಪ ಉಂಟಾಯಿತು. ಆಗ ಅವನು ರೋಷಾವೇಶದಿಂದ ತನ್ನ ವಜ್ರಾಯುಧವನ್ನು ಬಾಲಕ ಹನುಮನ ಮುಖಕ್ಕೆ ಬೀಸಿ ಎಸೆದನು. ಅದು ಹನುಮನ ದವಡೆಗೆ ತಾಕಿ ದವಡೆಯು ಬುರುಬುರನೆ ಊದಿಕೊಂಡಿತು. ಹೀಗೆ ದವಡೆಯಲ್ಲಿ ಬೋರೆ ಬಂದಾಗ ಹನುಮನು ಬಾಯಿಬಿಟ್ಟನು. ಆ ಕೂಡಲೆ ಸೂರ್ಯ ಹನುಮನ ಬಾಯಿಂದ ಹೊರಕ್ಕೆ ಬಂದನು.

ಆದರೆ ವಜ್ರಾಯುಧದ ಪೆಟ್ಟಿನಿಂದ ಬೋರೆ ಬಂದಿದ್ದ ದವಡೆ ಹಾಗೆಯೇ ಉಳಿಯಿತು. ಅಂದಿನಿಂದ ಹನುಮನಿಗೆ ದವಡೆಊದ್ಲ (=ಹನು) ಎಂಬ ಹೆಸರು ಶಾಶ್ವತವಾಯಿತು. ದವಡೆಊದ್ಲ ಎಂದರೆ ಹನುಮಂತ ಎಂದರ್ಥ. ಕಾಲು ಊದಿಕೊಂಡಿದ್ದ ಕಾರಣದಿಂದ ಗ್ರೀಕ್ ದೊರೆಗೆ ಈಡಿಪಸ್ (ಊದ್ಲುಗಾಲ) ಎಂಬ ಹೆಸರು ಬಂದಂತೆ.

ನಿನ್ನ ಬಲವೆಷ್ಟೆಂಬುದು ನಿನಗೆ ಮರೆತುಹೋಗಲಿ

ಮೇರುಪರ್ವತದಲ್ಲಿ ಕೇಸರಿ ಎಂಬ ಕಪಿಶ್ರೇಷ್ಠನ ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ಅಂಜನೆ ಎಂಬ ಹೆಸರಿನ ಪ್ರಿಯ ಮಡದಿ ಇದ್ದಳು. ಅವಳು ವಾಯುದೇವನಿಂದ ಆಂಜನೇಯನನ್ನು ಪಡೆದಳು.

ಅಂಜನೆಯು ಒಂದು ದಿನ ಹಣ್ಣುಗಳನ್ನು ತರಲೆಂದು ವನಕ್ಕೆ ಹೋಗಿದ್ದಳು. ಆ ಸಮಯದಲ್ಲಿ ಬಾಲಕ ಆಂಜನೇಯನು ಹಸಿವನ್ನು ತಾಳಲಾರದೆ ಅಳತೊಡಗಿದನು. ಆ ಸಮಯದಲ್ಲಿ ಕೆಂಪುವರ್ಣದ ಸೂರ್ಯನು ಪೂರ್ವದಿಕ್ಕಿನಲ್ಲಿ ಉದಿಸಿ ಮೇಲಕ್ಕೆ ಬರುತ್ತಿದ್ದನು. ಇದನ್ನು ಕಂಡ ಆಂಜನೇಯನು ಸೂರ್ಯನನ್ನು ಕೆಂಪುಬಣ್ಣದ ಹಣ್ಣೆಂದು ಭ್ರಮಿಸಿ ತೆಗೆದುಕೊಳ್ಳಲು ವಾಯುಪುತ್ರನಾದ ಮಾರುತಿ ವಾಯುವೇಗವನ್ನು ಮೀರಿಸಿ ಮುನ್ನುಗ್ಗುತ್ತಿದ್ದನು.

ಆಂಜನೇಯನು ಅತಿವೇಗದಲ್ಲಿ ಹೋಗುತ್ತಿರುವುದನ್ನು ಕಂಡ ವಾಯುದೇವನು ಸೂರ್ಯನ ಉಷ್ಣತೆಗೆ ಸಿಕ್ಕಿ ಮಗ ಸುಟ್ಟುಹೋದಾನೆಂದು

ಹೆದರಿ ತಾನೇ ಮಂಜಿನಂತೆ ತಣ್ಣಗಾಗುತ್ತ ಮಗನ ಮೇಲೆ ಬೀಸುತ್ತಾ ರಕ್ಷಿಸಿದನು. ಸಾವಿರಾರು ಯೋಜನಗಳನ್ನು ಕ್ರಮಿಸಿದ ಬಾಲಕನು ಸೂರ್ಯನನ್ನು ಸಮೀಪಿಸಿದಾಗ ಸೂರ್ಯನ "ಇವನು ಮಗು ಮಾತ್ರವಲ್ಲ ; ಇವನು ಮಹಾಬಲಶಾಲಿ ; ಇವನಿಂದ ಅನೇಕ ಮಹತ್ಕಾರ್ಯಗಳು ಆಗುತ್ತವೆ" ಎಂದು ಆಲೋಚಿಸಿ ಸೂರ್ಯದೇವನು ಅವನನ್ನು ಸುಡಲಿಲ್ಲ.

ಯಾವ ದಿನ ಹನುಮಂತನು ಸೂರ್ಯನನ್ನು ಹಿಡಿಯುವುದಕ್ಕಾಗಿ ಬಂದಿದ್ದನೋ ಅದೇ ದಿನ ರಾಹುವು ಸೂರ್ಯನನ್ನು ಹಿಡಿಯಲು ಉದ್ದೇಶಿಸಿ ಬಂದಿದ್ದನು. ಆದರೆ ಆಂಜನೇಯನು ಮುನ್ನುಗ್ಗಿದಾಗ ರಥದ ಮೇಲೆ ಬಂದಿದ್ದ ರಾಹುವು ಹೆದರಿ ಓಡಿಹೋದನು. ಅಲ್ಲಿಂದ ಅವನು ಇಂದ್ರಲೋಕಕ್ಕೆ ಬಂದು ಇಂದ್ರನನ್ನು ಕಂಡು ಕೋಪದಿಂದ–

"ದೇವೇಂದ್ರ, ನನ್ನ ಹಸಿವನ್ನು ನೀಗಿಸಿಕೊಳ್ಳಲು ಸೂರ್ಯಚಂದ್ರರನ್ನು ನನಗೆ ಕೊಟ್ಟಿದ್ದೀಯೇ. ಈಗ ಅವರನ್ನು ಬೇರೊಬ್ಬನಿಗೆ ಕೊಟ್ಟಿರುವುದೇಕೆ? ಇದರಿಂದ ನನ್ನ ಕಾರ್ಯಕ್ಕೆ ಆತಂಕವುಂಟಾಯಿತು" ಎಂದನು. ಈ ಮಾತನ್ನು ಕೇಳಿದ ದೇವೇಂದ್ರನು ಥಟ್ಟನೆ ಮೇಲೆದ್ದು ಐರಾವತವನ್ನೇರಿ ರಾಹುವನ್ನು ಮುಂದೆ ಮಾಡಿಕೊಂಡು ಈ ಹನುಮಂತನ ಹತ್ತಿರಕ್ಕೆ ಬಂದನು.

ಆ ಸಮಯದಲ್ಲಿ ಆಂಜನೇಯನು ರಾಹುವನ್ನು ನೋಡಿ "ಇದೇ ಹಣ್ಣು!" ಎನ್ನುತ್ತ ರಾಹುವಿನ ಕಡೆಗೆ ಧಾವಿಸಿದನು. ಆಗ ರಾಹುವು ಭಾರಿ ಭಯದಿಂದ "ಇಂದ್ರ!" "ಇಂದ್ರ!" ಎಂದು ಕೂಗಿಕೊಂಡು ಇಂದ್ರನ ಕಡೆಗೆ ಬಂದನು. ಇಂದ್ರನು "ರಾಹು ನಾನಿದ್ದೇನೆ ಹೆದರಬೇಡ! ಹೆದರಬೇಡ!" ಎಂದು ಹೇಳುತ್ತ ಬರುತ್ತಿದ್ದನು. ಮಾರುತಿಯು ಐರಾವತವನ್ನು ಕಂಡು "ಇದೇ ನಿಜವಾದ ಹಣ್ಣು!" ಎಂದು ಅದರತ್ತ ನೆಗೆದನು. ಆಗ ದೇವೇಂದ್ರನ ವಜ್ರಾಯುಧದಿಂದ ಹೊಡೆದನು. ಈ ಹೊಡೆತದಿಂದ ತತ್ತರಿಸಿದ ಆಂಜನೇಯನು ಒಂದು ಬೆಟ್ಟದ ಮೇಲೆ ಬಿದ್ದನು. ಆಗ ಅವನ ಎಡದವಡೆಯು ಭಗ್ನವಾಯಿತು.

ವಜ್ರಾಯುಧದ ಹೊಡೆತಕ್ಕೆ ತತ್ತರಿಸಿದ ಬಾಲಕನು ಕೆಳಗೆ ಬಿದ್ದುದನ್ನು ಕಂಡು ಕುಪಿತನಾದ ವಾಯುದೇವನು ಇಂದ್ರನ ಮೇಲೆ ಕೋಪಗೊಂಡು ತನ್ನ ಸಂಚಾರವನ್ನು ನಿಲ್ಲಿಸಿ ತನ್ನ ಪುತ್ರನಾದ ಆಂಜನೇಯನನ್ನು ಎತ್ತಿಕೊಂಡು ಒಂದು ಗುಹೆಯನ್ನು ಪ್ರವೇಶಿಸಿಬಿಟ್ಟನು.

ವಾಯುದೇವನು ಗುಹೆಯನ್ನು ಪ್ರವೇಶಿಸಿದ್ದರಿಂದ ಜಗತ್ತಿನ ಜೀವಜಾಲಗಳ ಉಸಿರಾಟ ನಿಂತಿತು. ಸಂದುಗಳು ಬಿಗಿದುಕೊಂಡವು. ಜನರು ಕಟ್ಟಿಗೆಗಳಂತಾದರು. ಜಗತ್ತು ನಿಷ್ಕ್ರಿಯವಾಯಿತು. ವಾಯುದೇವನ ಕೋಪದಿಂದ ಮೂರು ಲೋಕವೂ ನರಕದಲ್ಲಿ ಮುಳುಗಿದಂತೆ ತೋರಿತು.

ಆಗ ನರಸುರ ಕಿನ್ನರ ಕಿಂಪುರುಷ ಗಂಧರ್ವಾದಿಗಳೆಲ್ಲ ಬ್ರಹ್ಮದೇವನ ಬಳಿಗೆ ಧಾವಿಸಿದರು. ಅವರೆಲ್ಲರೂ ಬ್ರಹ್ಮನನ್ನು ಕುರಿತು–

"ಹೇ ಭಗವಾನ್, ನಾಲ್ಕು ಬಗೆಯ ಜೀವಿಗಳನ್ನು ನೀನು ಸೃಜಿಸಿದ್ದೀಯೆ. ನಮ್ಮೆಲ್ಲರ ಆಯಸ್ಸಿಗೆ ವಾಯುವೇ ಒಡೆಯನೆಂದು ಗೊತ್ತುಪಡಿಸಿದ್ದೀಯೇ. ನಮಗೆ ಪ್ರಾಣೇಶ್ವರನಾದ ವಾಯುವು ನಮ್ಮೆಲ್ಲರನ್ನೂ ತಡೆಹಿಡಿದಿರುವನು. ನಾವು ವಾಯುವಿನಿಂದ ಪೀಡಿತರಾಗಿ ನಿನಗೆ ಶರಣಾಗಿದ್ದೇವೆ. ಆತನ ಉಪದ್ರವಕ್ಕೆ ಸಿಕ್ಕಿದ ನಮ್ಮ ಕಷ್ಟವನ್ನು ಪರಿಹರಿಸು" ಎಂದು ಪ್ರಾರ್ಥಿಸಿದನು.

ಅವರ ಮಾತನ್ನು ಕೇಳಿದ ಬ್ರಹ್ಮದೇವನು 'ಎಲೈ ಅದಿತಿಪುತ್ರರೇ ವಾಯುದೇವನನ್ನು ಸಂತೈಸೋಣ. ಹಾಗೆ ಮಾಡದೆ ಎಲ್ಲರೂ ನಾಶವಾಗುವುದು ಬೇಡ' ಎಂದನು. ಬ್ರಹ್ಮನ ಸಲಹೆಗೆ ಒಪ್ಪಿದ ಎಲ್ಲರೂ ವಾಯುದೇವನಿದ್ದೆಡೆಗೆ ಬಂದರು. ವಾಯುದೇವನ ತೊಡೆಯ ಮೇಲೆ ಕೋಟಿಸೂರ್ಯ ಪ್ರಕಾಶದಿಂದ ಹೊಳೆಯುತ್ತಿದ್ದ ಆಂಜನೇಯನನ್ನು ನೋಡಿದರು. ಮಾರುತನು ಬ್ರಹ್ಮನನ್ನು ಕಂಡೊಡನೆ ಮಗುವನ್ನೆತ್ತಿಕೊಂಡು ಎದ್ದು ನಿಂತನು. ಆಗ ಬ್ರಹ್ಮನು ಪ್ರೀತಿಯಿಂದ ಮಗುವಿನ ಮೈಸವರಿದನು. ಆ ಕೂಡಲೆ ಮಗು ಮತ್ತೆ ಜೀವವನ್ನು ಪಡೆಯಿತು. ಮಗನಿಗೆ ಪ್ರಾಣ ಬಂದುದನ್ನು ಕಂಡು ಜಗತ್ಪ್ರಾಣನಾದ ವಾಯುವು ಮೊದಲಿನಂತೆ ಎಲ್ಲರ ದೇಹದಲ್ಲಿಯೂ ಸಂಚರಿಸತೊಡಗಿದನು. ವಾಯುರೋಧದಿಂದ ಬಿಡುಗಡೆ ಹೊಂದಿದ ಪ್ರಜೆಗಳೆಲ್ಲರೂ ಸಂತುಷ್ಟರಾದರು. ಆಗ ಬ್ರಹ್ಮದೇವನು ದೇವಾಧಿದೇವತೆಗಳೆಲ್ಲರನ್ನೂ ಕುರಿತು–

"ಎಲೈ ಮಹೇಂದ್ರ ಈಶಾನ–ಯಮ ವರುಣರೇ, ಈ ಮಗುವಿನಿಂದ ಒಂದು ಮಹತ್ತರ ಕಾರ್ಯ ಆಗಬೇಕಿದೆ. ಆದ್ದರಿಂದ ನೀವೆಲ್ಲರೂ ಈ ಮಗುವಿಗೆ ವರಗಳನ್ನು ಕೊಡಿರಿ. ವಾಯುದೇವನಿಗೂ ಸಂತೋಷವಾಗುತ್ತದೆ" ಎಂದನು. ಇದನ್ನು ಕೇಳಿದ ದೇವೇಂದ್ರನು–

"ನಾನು ಬೀಸಿದ ವಜ್ರಾಯುಧದಿಂದ ಈ ಶಿಶುವಿನ ಹನು(=ದವಡೆ) ಭಗ್ನವಾಯಿತು. ಆದ್ದರಿಂದ ಈತ ಹನುಮಂತನೆಂಬ ಹೆಸರಿನಿಂದ ವಿಖ್ಯಾತವಾಗಲಿ. ಇವನಿಗೆ ನಾನು ಕೊಡುವ ವರವೆಂದರೆ ವಜ್ರಾಯುಧದಿಂದ ಇವನು ಅವಧ್ಯನಾಗುವನು!" ಎಂದನು. ಭಗವಾನ್ ಸೂರ್ಯದೇವನು "ನನ್ನ ತೇಜಸ್ಸಿನಲ್ಲಿ ನೂರನೆಯ ಒಂದಂಶವನ್ನು ಈ ಶಿಶುವಿಗೆ ಧಾರೆಯೆರೆಯುವೆನು" ಎಂದನು. ಅಲ್ಲದೆ "ಇವನಿಗೆ ಶಾಸ್ತ್ರಾಧ್ಯಯನ ಮಾಡುವ ಸಾಮರ್ಥ್ಯ ಬಂದಾಗ ವ್ಯಾಕರಣಶಾಸ್ತ್ರವನ್ನು ಉಪದೇಶಿಸುವೆನು. ಇದರಿಂದ ಅವನು ಮಹಾವಾಗ್ಮಿಯಾಗುವನು. ಶಾಸ್ತ್ರಾರ್ಥ ಜ್ಞಾನದಲ್ಲಿ ಹನುಮಂತನಿಗೆ ಸಮನಾದ ಇನ್ನೊಬ್ಬನಿರುವುದಿಲ್ಲ" ಎಂದು ಹೇಳಿದನು.

ಯಮನು "ದಂಡಾಯುಧದಿಂದ ಆಂಜನೇಯನಿಗೆ ಸಾವು ಸಂಭವಿಸದಿರಲಿ" ಎಂದನು. ಕುಬೇರನು "ಇವನಿಗೆ ಯುದ್ಧದಲ್ಲಿ ಎಂದೂ ಪರಾಜಯವಾಗದಿರಲಿ!" ಎಂದನು. ಶಂಕರನು "ನನ್ನ ತ್ರಿಶೂಲದಿಂದ ಅವನಿಗೆ ಮೃತ್ಯು ಸಂಭವಿಸದಿರಲಿ" ಎಂದನು. ಬ್ರಹ್ಮನು "ಬ್ರಹ್ಮಾಸ್ತ್ರದಿಂದಲೂ ಅವಧ್ಯನಾದವನಾಗಿ ದೀರ್ಘಾಯುವಾಗಿ, ಮಹಾಜ್ಞಾನಿಯಾಗಿರಲಿ" ಎಂದನು.

ಎಲ್ಲ ದೇವತೆಗಳು ಇತ್ತ ವರದಿಂದ ಸಂತೃಪ್ತನಾದ ವಾಯುದೇವನು ಮಗುವನ್ನೆತ್ತಿಕೊಂಡು ಅಂಜನೆಗೆ ಒಪ್ಪಿಸಿ ದೇವತೆಗಳ ಅನುಗ್ರಹ ವಿಚಾರಗಳನ್ನು ಹೇಳಿ ಸಂತೋಷಪಡಿಸಿದನು.

ವಾನರ ಶ್ರೇಷ್ಠನಾದ ಆಂಜನೇಯನು ದೇವಾದಿದೇವತೆಗಳಿಂದೆಲ್ಲ ವರಗಳನ್ನು ಪಡೆದು ಪರಿಪೂರ್ಣ ಬಲಾಢ್ಯನಾದನು. ತನಗಿರುವ ಶಕ್ತಿಯ ಬಗೆಗೆ ಅವನಿಗೇ ಅಪಾರ ಹೆಮ್ಮೆ ಎನಿಸಿತು. ಬಾಲಕನಾದ ಅವನು ಲೀಲಾವಿಹಾರಾರ್ಥನಾಗಿ ಎಲ್ಲ ಆಶ್ರಮಗಳಿಗೂ ಹೋಗುವುದು ಅಲ್ಲಿರುವ ಆಶ್ರಮದ ಮಕ್ಕಳನ್ನೆಲ್ಲ ಪೀಡಿಸುವುದು, ಋಷಿಮುನಿಗಳಿಗೆಲ್ಲ ಬಗೆಬಗೆಯಾಗಿ ಕಿರುಕುಳ ಕೊಡುವುದು, ಯಜ್ಞೋಪಕರಣಗಳನ್ನೆಲ್ಲ ಒಡೆದುಹಾಕುವುದು ಮುಂತಾಗಿ ಕಾಡತೊಡಗಿದನು. ಮೊದಮೊದಲು "ಏನೋ ಬಾಲಕನ ಚೇಷ್ಟೆ" ಎಂದು ಸುಮ್ಮನಾಗುತ್ತಿದ್ದರು. ಆದರೆ ಅವನ ಚೇಷ್ಟೆಗಳು ಹೆಚ್ಚಾದಾಗ ಇನ್ನು ಸಹಿಸುವುದು ಸಾಧ್ಯವಿಲ್ಲವೆಂದುಕೊಂಡ ಋಷಿಮುನಿಗಳು ಆಂಜನೇಯನಿಗಿರುವ ಶಕ್ತಿಯನ್ನು ನೆನೆದರು. ಅವರೆಲ್ಲರೂ ಸೇರಿ

"ಎಲೋ ವಾನರ ವರಬಲವಿದೆಯೆಂದು ಕೊಬ್ಬಿ ಕುಚೇಷ್ಟೆಯಿಂದ ನಮ್ಮನ್ನು ಕಂಗೆಡಿಸುತ್ತಿರುವೆಯಲ್ಲವೆ? ಆದ್ದರಿಂದ ನಿನ್ನ ಬಲವೆಷ್ಟು ಎಂಬುದು ನಿನಗೆ ಮರೆತುಹೋಗಲಿ. ಆದರೆ ಯಾರಾದರೂ ನಿನ್ನ ಬಲವನ್ನು ನೆನಪು ಮಾಡಿಕೊಟ್ಟಾಗ ನಿನ್ನ ಬಲವು ವರ್ಧಿಸಲಿ!" ಎಂದು ವರಾನ್ವಿತ ಶಾಪವನ್ನು ಕೊಟ್ಟರು.

ಋಷಿಗಳ ಶಾಪದಿಂದಾಗಿ ಆಂಜನೇಯನ ತೇಜಸ್ಸು ಓಜಸ್ಸುಗಳು ಕುಂದಿದವು. ಅವನ ನಡೆನುಡಿಯೆಲ್ಲವು ಮೃದುವಾದವು. ಈಗ ಆಶ್ರಮಗಳಲ್ಲಿ ಶಾಂತವಾಗಿ ತಿರುಗಾಡಿಕೊಂಡಿದ್ದನು.

ಬ್ರಹ್ಮಚಾರಿ ಆಂಜನೇಯ

ಆಂಜನೇಯನ ವಿದ್ಯಾಗುರು ಸೂರ್ಯದೇವ. ಸೂರ್ಯದೇವನು ಆಂಜನೇಯನು ವಿದ್ಯೆಯನ್ನು ಕಲಿಯಲು ತೋರಿಸಿದ ಶ್ರದ್ಧಾಸಕ್ತಿಗಳನ್ನು ಕಂಡು ಸುಪ್ರೀತನಾದನು. ಇಂಥಾ ನಿಷ್ಠಾವಂತ ಶಿಷ್ಯನಿಗೆ ತನ್ನೆಲ್ಲ ವಿದ್ಯೆಯನ್ನು ಕಲಿಸಬೇಕೆಂದು ನಿರ್ಧರಿಸಿ ನಿರ್ವ್ಯಾಜ ಪ್ರೇಮದಿಂದ ತನ್ನೆಲ್ಲ ವಿದ್ಯೆಯನ್ನು ಧಾರೆಯೆರೆದನು.

ಅಸಾಧಾರಣ ವಿದ್ಯಾವಿಶಾರದನೆನಿಸಿದ ಆಂಜನೇಯನು ಭಕ್ತಿಯಿಂದ ತನ್ನ ಗುರುವಿನ ಚರಣಕಮಲಗಳಿಗೆ ನಮಿಸಿ–

“ಗುರುದೇವ, ತಾವು ಬೋಧಿಸಿರುವ ಈ ಎಲ್ಲ ವಿದ್ಯೆಗಳನ್ನು ಕಲಿತು ನಾನು ಸಕಲವಿದ್ಯಾ ಪಾರಂಗತನೆನಿಸಿದ್ದೇನೆ. ಈ ಎಲ್ಲ ವಿದ್ಯೆಗಳು ನನ್ನಲ್ಲೇ ಶಾಶ್ವತವಾಗಿ ಉಳಿಯಬೇಕಾದರೆ ನಾನು ಏನು ಮಾಡಬೇಕೆಂದು ಹೇಳಿ ಆಚಾರ್ಯ’ ಎಂದು ಕೇಳಿದನು. ಅದಕ್ಕೆ–

‘ವತ್ಸಾ ಆಂಜನೇಯ, ನಿನ್ನಂಥ ಮಹತ್ಸಾಧಕನಿಗೆ ಇಂಥ ಅಪೇಕ್ಷೆ ತಕ್ಕುದೇ ಸರಿ. ಈ ವಿದ್ಯೆಗಳೆಲ್ಲ ನಿನಗೆ ಹೃದ್ಗತವಾಗಿವೆ. ಕರತಲಾಮಲಕವಾಗಿವೆ. ಇಂಥ ಸುಸ್ಥಿತಿಯಲ್ಲಿರುವ ಈ ವಿದ್ಯೆಗಳು ನಿನ್ನಲ್ಲೆ ಶಾಶ್ವತವಾಗಿ ಉಳಿಯಬೇಕೆಂದರೆ ಅದಕ್ಕೆ ನೀನು ಕೆಲವು ಉಗ್ರ ನಿಯಮಗಳನ್ನು ಪಾಲಿಸಬೇಕಾಗುತ್ತದೆ ವತ್ಸ”

“ಗುರುದೇವ ಆ ಉಗ್ರ ನಿಯಮಗಳನ್ನು ಪಾಲಿಸಲು ನಾನು ಅಸಮರ್ಥನೆ?”

“ನಾನು ಹಾಗೆಂದೆನೆ?”

“ಹಾಗಾದರೆ ಆ ನಿಯಮಗಳನ್ನು ಪಾಲಿಸಲು ನಾನು ಬದ್ಧನಾಗಿದ್ದೇನೆ. ಹೇಳಿ ಗುರುದೇವ ಅವುಗಳನ್ನು ಅನುಸರಿಸಿ ನಡೆಯಲು ಸಿದ್ಧನಾಗಿದ್ದೇನೆ.”

“ಆಂಜನೇಯ, ಆ ವಿದ್ಯೆಗಳೆಲ್ಲ ನಿನ್ನಲ್ಲೇ ಉಳಿಯಬೇಕಾದರೆ ನೀನು ಸಂಸಾರ ಸುಖವನ್ನು ತ್ಯಜಿಸಬೇಕು. ಬ್ರಹ್ಮಚಾರಿಯಾಗಿ ಬಾಳಲು ದೃಢನಿರ್ಧಾರ ಮಾಡಬೇಕು. ಈ ನಿಯಮಗಳನ್ನು ನೀನು ಕಟ್ಟುಗ್ರವಾಗಿ ಪರಿಪಾಲಿಸಿದ್ದೇ ಆದರೆ ವಿದ್ಯೆಗಳು ನಿನ್ನಲ್ಲೆ ಉಳಿಯುತ್ತವೆ. ಅಲ್ಲದೆ ನೀನು ಜಗದ್ವಿಖ್ಯಾತ ವೀರನೆನಿಸಿ ಮಹಾಜ್ಞಾನಿಯೆನಿಸಿ ಲೋಕಲೋಕಗಳಲ್ಲೆಲ್ಲ ನಿನ್ನ ಕೀರ್ತಿ ಶಾಶ್ವತವಾಗಿ ನೆಲೆಸುವುದು.”

ಈ ಮಾತುಗಳನ್ನು ಕೇಳಿ ಆಂಜನೇಯನು ವಿನೀತಭಾವದಿಂದ ಗುರುವಿನ ಪಾದಗಳಿಗೆರಗಿ–

“ಗುರುದೇವ, ನಿಮ್ಮ ಕೃಪಾಶೀರ್ವಾದಗಳಿಗೆ ನಾನು ಆಭಾರಿಯಾಗಿದ್ದೇನೆ. ನಿಮ್ಮ ಆಜ್ಞೆಯಂತೆ ನಡೆದು ನಿಮಗೆ ಹೆಸರು ತರುವ ಶಿಷ್ಯನಾಗಿ ಉಳಿಯುತ್ತೇನೆ. ಗುರುವೆ ಶರಣು ಶರಣಾರ್ಥಿ” ಎಂದು ಹೇಳುತ್ತ ಭಕ್ತಿಯಿಂದ ನಮಸ್ಕರಿಸಿದನು.

ಸಂಗೀತ ತಜ್ಞ ಹನುಮಂತನ ಶಿವಪೂಜೆ

ಕನ್ನಡದಲ್ಲಿರುವ ೧೬ನೇ ಶತಮಾನದ ‘ಗುರುರಾಜ ಚಾರಿತ್ರ’ ಮತ್ತು ೧೭ನೇ ಶತಮಾನದ ‘ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ’ದಲ್ಲಿ ಆಂಜನೇಯನ ಸಂಗೀತ ತಜ್ಞತೆಯ ಬಗೆಗೆ ವರ್ಣಿಸಲಾಗಿದೆ.

ಒಮ್ಮೆ ಗೌತಮರ ಆಶ್ರಮದಲ್ಲಿ ಸಂಭ್ರಮದಿಂದ ಶಿವನ ಪೂಜೆ ನಡೆಯುತ್ತಿತ್ತು. ಅಲ್ಲಿಗೆ ಬಂದ ನಾರದರು ಆ ಸಮಯದೊಳಗೆ ಆಕಾಶಮಧ್ಯದಲ್ಲಿ ವೀಣೆಯನ್ನು ಬಾರಿಸುತ್ತ ಲಲಿತರಾಗವನ್ನು ಹಾಡುತ್ತಿದ್ದರು. ಅಲ್ಲಿಯೇ ಇದ್ದ ಕಂಬಳ ಮತ್ತು ಆಶ್ವಿಕರು ಇದಕ್ಕೆ ದನಿಗೂಡಿಸಿ ಹಾಡಲು ಪ್ರಾರಂಭಿಸಿದರು. ಅಲ್ಲಿ ಮರುತಾತ್ಮಜ ಅಥವಾ ಹನುಮಂತನು ಶಂಕರನ ಚಿತ್ತವನ್ನು ಸೂರೆಗೊಳ್ಳುವಂತೆ ತಾರ, ಮಂದ್ರ ಮತ್ತು ಮಧ್ಯಮ ಸ್ವರಗಳು ಹೊಂದುವ ರೀತಿಯಲ್ಲಿ ಹಾಡಿದಾಗ ಆ ವಾತಾವರಣವನ್ನು ಆ ಮಾಧುರ್ಯ ಆವರಿಸಿಕೊಂಡಿತು. ಅದನ್ನು ಕೇಳಿದ ಎಲ್ಲರೂ ಬೆರಗಾದರು. ಹನುಮಂತನು ಹೀಗೆ ಜೇನುಧಾರೆ ಸುರಿವಂತೆ ಹಾಡುತ್ತಿರುವಾಗ ಅಮೃತ ಸಮಾನವಾದ ಗಾನವನ್ನು ಕೇಳಿದ ಶಿವನು ಸಂತೋಷದಿಂದ ತಲೆದೂಗುತ್ತ ಹನುಮಂತನನ್ನು ಹತ್ತಿರಕ್ಕೆ ಕರೆದು ಮಾತನಾಡಬೇಕೆನ್ನುವಷ್ಟರಲ್ಲಿ ಗೌತಮರು ಪ್ರವೇಶಿಸಿ–

'ಪ್ರಭೂ, ಅಡಿಗೆ ಆಗಿದೆ ದಯಮಾಡಿಸಬೇಕು!" ಎಂದು ಪ್ರಾರ್ಥಿಸಿದನು. ಆದರೆ ಶಂಕರನಿಗೆ ಗಾನದ ಗುಂಗು ಹೋಗಿರಲಿಲ್ಲ. ಇನ್ನೂ ಕೇಳಬೇಕೆಂಬ ಆಸೆಯಿತ್ತು. ಅವನು ನಂದಿಯನ್ನು ಏರುತ್ತ–

"ಹನುಮ, ನಿನ್ನ ಗಾನವನ್ನು ಮತ್ತೂ ಕೇಳಬೇಕೆಂಬ ಆಸೆ. ಬಾ. ನೀನೂ ಈ ನಂದಿಯನ್ನೇರಿ ಕುಳಿತು ಹಾಡುತ್ತ ಆ ಸುಖವನ್ನು ನಮಗೆ ನೀಡುತ್ತ ಬಾ" ಎಂದನು.

ಆದರೆ ಆಂಜನೇಯನು ವಿನಮ್ರನಾಗಿ ಕರಜೋಡಿಸಿ ಕೈ ಮುಗಿಯುತ್ತ–

"ಪ್ರಭುವೇ ಎಲ್ಲಾದರೂ ಉಂಟೆ? ಅಕಳಂಕ ಪ್ರಣವ ವೇದಾಗಮ ಪುರಾಣಗಳ ನಿಕರವಿಗ್ರಹನಾಗಿ ನಿನ್ನ ಧರ್ಮವೇ ರೂಪಾದ ನಂದಿಕೇಶ್ವರನನ್ನೇರಿ ಬೆನ್ನ ಮೇಲೆ ಕುಳಿತುಕೊಳ್ಳುವುದು ನಮ್ಮಂತಹವರಿಗೆ ಸರಿಯೇ? ನನ್ನಿಂದ ಸಾಧ್ಯವಿಲ್ಲ. ಆದರೆ ನನ್ನದೊಂದು ವಿಜ್ಞಾಪನೆ. ತಾವೇ ನನ್ನ ಬೆನ್ನ ಮೇಲೆ ಕುಳಿತಲ್ಲಿ ನಾನು ಹಾಡುತ್ತ ತಮ್ಮನ್ನು ಕರೆದೊಯ್ಯುತ್ತೇನೆ" ಎಂದನು.

ಅದರಂತೆ ಶಿವನು ಆಂಜನೇಯನ ಬೆನ್ನ ಮೇಲೆ ಕುಳಿತನು. ಆಂಜನೇಯನು ಹಾಡಿ ಶಂಕರನಿಗೆ ಪರಮಾನಂದವನ್ನುಂಟುಮಾಡಿದನು. ಮುಂದೆ ಮುಂದೆ ಸಾಗಿ ಗೌತಮ ಮುನಿಯ ಮನೆಯ ಮುಂದೆ ಇಳಿಯುವಾಗ ಶಿವನ ಪಾದಗಳ ಸ್ಪರ್ಶವಾಗಲು ಆಂಜನೇಯ ರೋಮಾಂಚಿತನಾದನು.

ಅಲ್ಲಿ ಶಿವಪೂಜೆ ಪ್ರಾರಂಭವಾದಾಗ ಗೌತಮನು ಮಾಡಿದ ಉಪಚಾರವನ್ನೆಲ್ಲ ಶಿವನು ಸ್ವೀಕರಿಸಿದನು. ಆ ವೇಳೆಗೆ ಹನುಮಂತನು ಏನೋ ನೆನೆದುಕೊಂಡವನಂತೆ ಥಟ್ಟನೆದ್ದು–

“ಹಾಹಾ ಲಿಂಗಪೂಜೆಗೆ ವೇಳೆಯಾಯಿತು. ನಾನು ಹೋಗಿ ಬರಲು ಅಪ್ಪಣೆ ಕೊಡಿ” ಎಂದು ಪ್ರಾರ್ಥಿಸಿದನು. ಅದಕ್ಕೆ ಶಿವನು–

“ನಾನೇ ಇಲ್ಲಿರುವಾಗ ನಿನಗೆ ಲಿಂಗಪೂಜೆಯೇಕೆ?” ಎಂದನು. ಅದಕ್ಕೆ ಹನುಮಂತನು–

“ಪ್ರಭೂ, ನೀವೇ ನಿರಂತರವಾಗಿ ಪೂಜೆ ಮಾಡುತ್ತೀರಿ. ಆದರೆ ನನಗೇಕೆ ಬೇಡ ಎನ್ನುತ್ತೀರಿ. ನಾನಿನ್ನು ಹೋಗಿ ಬರುತ್ತೇನೆ” ಎಂದವನೆ ಅಲ್ಲಿಂದ ಹೊರಟು ಹೋದನು.

ಹನುಮನು ಆತುರಾತುರದಲ್ಲಿ ಹೋಗಿ ಲಿಂಗಾರ್ಚನೆ ಮಾಡಲು ಪೀಠವನ್ನು ನೋಡಿದರೆ ಪೀಠದಲ್ಲಿ ಲಿಂಗವೇ ಮಾಯವಾಗಿತ್ತು. ಇದರಿಂದ ಹನುಮನು ಹತಾಶನಾಗಿ ಸುತ್ತಮುತ್ತ ನೋಡಿದನು. ಎಲ್ಲೆಲ್ಲೂ ಶಿವಲಿಂಗದ ಸುಳಿವಿಲ್ಲ. ಇದರಿಂದ ದುಃಖಿತನಾದ ಹನುಮನು ತನ್ನ ಪ್ರಾಣವನ್ನು ಕಳೆದುಕೊಳ್ಳಲು ಸಿದ್ಧನಾದನು. ಇದನ್ನು ಗಮನಿಸಿದ ವೀರಭದ್ರನು ಹನುಮನ ಮುಂದೆ ಪ್ರತ್ಯಕ್ಷನಾಗಿ ಆಗುತ್ತಿದ್ದ ಅಚಾತುರ್ಯವನ್ನು ತಡೆದನು.

ಹನುಮನ ಭಕ್ತಿಗೆ ಮೆಚ್ಚಿದ ಶಿವನು ಪೀಠದ ಮೇಲೆ ಶಿವಲಿಂಗ ಕಾಣುವಂತೆ ಮಾಡಿದನು. ಹನುಮಂತನು ಸಂತೋಷದಿಂದ ಪೂಜೆ ಮಾಡುತ್ತ ಹಾಡಲಾರಂಭಿಸಿದನು. ತನ್ನ ಸುಶ್ರಾವ್ಯ ಸಂಗೀತದಿಂದ ಶಿವನನು ಸಂತೃಪ್ತಿಗೊಳಿಸಿದನು.

ಹೀಗೆ ಹನುಮಂತನು ಸಂಗೀತದಲ್ಲಿ ಮಹಾವಿದ್ವಾಂಸನಾಗಿದ್ದನೆಂದು ಹೇಳುತ್ತಾರೆ.

ಪರಮ ಶಿವಭಕ್ತ ಆಂಜನೇಯ

ಆಂಜನೇಯ ಪರಮಶಿವಭಕ್ತನೆಂಬ ಸುದ್ದಿ ವೀರಭದ್ರ ಮತ್ತು ನಂದೀಶ್ವರನ ಕಿವಿಗೆ ಬಿತ್ತು. ಆಗ ಅವರು ರಾಮಭಕ್ತನೆಂದು ಹೆಸರಾಗಿರುವ ಆಂಜನೇಯನ ಕುತ್ತಿಗೆಯಲ್ಲಿ ಶಿವಲಿಂಗವಿಲ್ಲದಿದ್ದರೆ ಅವನು ಶಿವಭಕ್ತ ಎಂದು ಹೇಳುವುದಾದರೂ ಹೇಗೆ? ಆದ್ದರಿಂದ ಆಂಜನೇಯನ ಕುತ್ತಿಗೆಗೆ ಶಿವಲಿಂಗವನ್ನು ಕಟ್ಟಬೇಕೆಂದು ವೀರಭದ್ರ ನಂದೀಶ್ವರರು ಬಂದರು. ತಾವು ಬಂದಿರುವ ಉದ್ದೇಶವನ್ನು ಆಂಜನೇಯನಿಗೆ ತಿಳಿಸಿದರು.

ಆಂಜನೇಯ ಸ್ವಲ್ಪ ಕಾಲ ವೀರಭದ್ರ ನಂದೀಶ್ವರರನ್ನು ದಿಟ್ಟಿಸುತ್ತ ಒಂದು ಸಲ ತನ್ನ ದೇಹವನ್ನು ಒದರಿದನು. ಆಗ ಅವನ ರೋಮರೋಮಗಳೆಲ್ಲ ಶಿವಲಿಂಗವಾಗಿ

ಉದುರತೊಡಗಿದವು. ಇದನ್ನು ಕಂಡ ವೀರಭದ್ರ ನಂದೀಶ್ವರರು ಬೆಪ್ಪಾಗಿ ನೋಡುತ್ತ ನಿಂತಿರುವಾಗ ಆಂಜನೇಯನು–

"ನಿಮಗೆ ಎಷ್ಟು ಶಿವಲಿಂಗಗಳು ಬೇಕೋ ಅಷ್ಟನ್ನು ತುಂಬಿಕೊಂಡು ಹೋಗಿ!" ಎಂದನು.

ಆಂಜನೇಯನ ಪರಮಶಕ್ತಿಗೆ ಅನುಪಮ ಶಿವಭಕ್ತಿಗೆ ವಿಸ್ಮಯಚಿತ್ತರಾದ ವೀರಭದ್ರ ನಂದೀಶ್ವರರು ಆಂಜನೇಯನನ್ನು ಭಕ್ತಿಯಿಂದ ನಮಿಸಿ ಅಲ್ಲಿಂದ ಕಾಲ್ತೆಗೆದರು.

ದುಂದುಭೀ ಗವಿ

ದುಂದುಭೀ ಎಂಬ ರಾಕ್ಷಸನು ಮಯಾಸುರನಿಂದ ಹೇಮೆ ಎಂಬ ಅಪ್ಸರೆಯಲ್ಲಿ ಜನಿಸಿದವನು. ಮಾಯಾವಿ ಎಂಬ ರಾಕ್ಷಸ ಇವನ ಅಣ್ಣ. ಮಂಡೋದರಿ ಈತನ ತಂಗಿ. ದುಂದುಭಿಯು ಶಿವನನ್ನು ಕುರಿತು ತಪಸ್ಸು ಮಾಡಿ 'ನಾನು ಯಾರೊಡನೆ ಯುದ್ಧ ಮಾಡಲು ಹೋದರೂ ವಿಜಯಶಾಲಿಯಾಗಬೇಕು' ಎಂಬ ವರವನ್ನು ಕೇಳಿದಾಗ 'ಹೆಣ್ಣಿನ ಕಾರಣಕ್ಕೆ ಹೊರತಾದ ಯಾವುದೇ ಯುದ್ಧದಲ್ಲೂ ನೀನು ವಿಜಯಶಾಲಿಯಾಗುತ್ತೀಯೆ' ಎಂಬ ವರವನ್ನು ಕೊಟ್ಟನು.

ವರದಿಂದ ಮದೋನ್ಮತ್ತನಾದ ದುಂದುಭಿಯು ಸಮುದ್ರರಾಜನಲ್ಲಿಗೆ ಹೋಗಿ 'ಬಾ ನನ್ನೊಡನೆ ಯುದ್ಧ ಮಾಡು!' ಎಂದು ಆಹ್ವಾನಿಸಿದ. ಅದಕ್ಕೆ ಸಮುದ್ರ ರಾಜನು–

'ಮಹಾವೀರ ದುಂದುಭೀ ಚಕ್ರವರ್ತಿ ನಿನ್ನಂಥ ಮಹಾಪರಾಕ್ರಮಿ ನನ್ನಂಥ ದುರ್ಬಲರ ಮೇಲೆ ಯುದ್ಧ ಮಾಡುವುದು ಸರಿಯೆ? ನಾನು ಯುದ್ಧ ಮಾಡದಿದ್ದರೂ ನಿನಗೆ ಎಂದೋ ಸೋತಿದ್ದೇನೆ. ನೀನು ಯುದ್ಧ ಮಾಡುವುದಾದರೆ ನಿನಗೆ ಹೊಯ್ ಕಯ್ಯಾದ ವೀರರೊಡನೆ ಯುದ್ಧ ಮಾಡಬೇಕಲ್ಲವೆ?'

'ಅಂಥ ವೀರರು ಯಾರು?'

'ಹಿಮವಂತ!'

ಸಮುದ್ರರಾಜನ ಮಾತಿಗೆ ತಲೆದೂಗಿದ ದುಂದುಭಿ ಆ ಕೂಡಲೆ ಹಿಮವಂತನ ಬಳಿಗೆ ಬಂದು ಯುದ್ಧಕ್ಕೆ ಆಹ್ವಾನಿಸಿದ. ಅದಕ್ಕೆ ಹಿಮವಂತನು

'ಅಯ್ಯಾ ದುಂದುಭೀ ಚಕ್ರವರ್ತಿ. ನಾನು ನಿನ್ನೊಡನೆ ಯುದ್ಧ ಮಾಡುವಷ್ಟು ಸಮರ್ಥನೆ? ನನ್ನಲ್ಲಿ ತಪಸ್ಸು ಮಾಡುತ್ತಿರುವ ಋಷಿಮುನಿಗಳನ್ನು ನೋಡಿ ನೋಡಿ

ನನಗೆ ಯುದ್ಧದ ಕಲ್ಪನೆಯೇ ಇಲ್ಲದಂತಾಗಿದೆ. ಆದ್ದರಿಂದ ನಿನ್ನ ಪೌರುಷಕ್ಕೆ ಸರಿಗಟ್ಟುವ ಕಿಷ್ಕಿಂಧಾಧಿಪತಿಯಾದ ವಾಲಿಯಂಥವರನ್ನು ಆರಿಸಿಕೊಳ್ಳಬಾರದೆ?'

'ಹಿಮವಂತ ನಿನ್ನ ಸಲಹೆಗೆ ಧನ್ಯವಾದಗಳು. ಇದೋ ಹೊರಟೆ' ಎಂದು ಹೇಳುತ್ತ ದುಂದುಭಿಯು ಕಿಷ್ಕಿಂಧೆಯ ಕಡೆಗೆ ವಾಯುವೇಗದಲ್ಲಿ ಬಂದ. ಆ ಸಮಯದಲ್ಲಿ ಸುಗ್ರೀವನು ಅವನ ಪತ್ನಿ ತಾರೆಯೊಡನೆ ವಸಂತವಿಹಾರದಲ್ಲಿ ತಲ್ಲೀನನಾಗಿರುವುದನ್ನು ಕಂಡು ಚಂಚಲಚಿತ್ತನಾದನು. ತಾರೆಯ ಸೌಂದರ್ಯಕ್ಕೆ ಬೆರಗಾದನು. ತಾರೆಯ ರೂಪಲಾವಣ್ಯಗಳಿಗೆ ಮರುಳಾಗಿ ದಿಗ್ಭ್ರಾಂತನಾಗಿ ನಿಂತುಬಿಟ್ಟನು.

ಥಟ್ಟನೆ ಎಚ್ಚೆತ್ತುಕೊಂಡು ಅವಳ ಜೊತೆಯಲ್ಲಿ ಅವಳ ಗಂಡ ಸುಗ್ರೀವನಿರುವೆನೆಂಬುದನ್ನೂ ಲೆಕ್ಕಿಸದೆ ತಾರೆಯ ಕೈಹಿಡಿದು ತನ್ನೆಡೆಗೆ ಎಳೆದುಕೊಳ್ಳತೊಡಗಿದನು. ಈ ದುಷ್ಟನ ದೌರ್ಜನ್ಯವನ್ನು ಕಂಡ ಸುಗ್ರೀವನು ಅವನೊಡನೆ ಸೆಣಸತೊಡಗಿದನು. ಅದೇ ವೇಳೆಗೆ ಆಕಸ್ಮಿಕವಾಗಿ ಆ ದಾರಿಯಲ್ಲಿ ಬಂದ ವಾಲಿಯು ದುಂದುಭಿಯ ದುಷ್ಕೃತ್ಯವನ್ನು ಕಂಡು ರೌದ್ರಾವೇಶದಿಂದ ಅಬ್ಬರಿಸುತ್ತ ನುಗ್ಗಿ ಬಂದನು. ವೀರಾವೇಶದಿಂದ ನುಗ್ಗಿಬರುತ್ತಿರುವ ವಾಲಿಯನ್ನು ನೋಡಿದ ದುಂದುಭೀ ಬೃಹದಾಕಾರದ ಕೋಣನ ರೂಪವನ್ನು ತಾಳಿ ವಿಕಾರ ಧ್ವನಿಯಲ್ಲಿ ಹೂಂಕರಿಸಿದ. ಆದರೆ ವಾಲಿಯು ಅವನ ಕೋಡುಗಳೆರಡನ್ನೂ ಹಿಡಿದು ಮೇಲಕ್ಕೆತ್ತಿ ಮೂರು ಸುತ್ತು ತಿರುಗಿಸಿ ರೊಯ್ಯನೆ ಬೀಸಿ ಎಸೆದ.

ಆ ಕೂಡಲೆ ಕೋಣನ ರೂಪ ಬಿಟ್ಟು ದುಂದುಭೀ ರೂಪಕ್ಕೆ ಬಂದ ರಾಕ್ಷಸನು ವಾಲಿಯನ್ನು ದಿಟ್ಟಿಸುತ್ತ ತೊಡೆ ತಟ್ಟಿದ. ಇದರಿಂದ ಕ್ರುದ್ಧನಾದ ವಾಲಿಯು ದುಂದುಭೀಯನ್ನು ಅಟ್ಟಿಸಿಕೊಂಡು ಹೋದನು. ಆಗ ದುಂದುಭಿಯು ಒಂದು ಗವಿಯೊಳಕ್ಕೆ ಹೋಗಿ ಅವಿತುಕೊಂಡನು. ಅಲ್ಲಿಗೂ ಹೋದ ವಾಲಿಯು ಅವನನ್ನು ಕೊಂದು ಗವಿಯಿಂದ ಹೊರಕ್ಕೆ ತಂದು ಅವನ ರುಂಡವನ್ನು ಎಡಗೈಲಿ ಹಿಡಿದುಕೊಂಡು ಬಲಗಾಲಿನಿಂದ ಚೆಂಡು ಒದೆಯುವಂತೆ ಒದೆದಾಗ ಆ ರುಂಡವು ಆಕಾಶದೆತ್ತರದಿಂದ ಮತಂಗಮುನಿಗಳ ಆಶ್ರಮದ ಹತ್ತಿರ ಬಿದ್ದಿತು.

ರುಂಡವು ಕೊಳೆತು ಆಶ್ರಮದ ಸುತ್ತೆಲ್ಲ ಹಡುಕುನಾತ ಹೊಡೆಯತೊಡಗಿತು. ಇದರಿಂದ ಕುಪಿತನಾದ ಮುನಿಯು 'ವಾಲಿ, ನಮ್ಮ ಆಶ್ರಮದ ಆವರಣಕ್ಕೆ ಬಂದರೆ ಆ ಕೂಡಲೆ ಸಾಯಲಿ!' ಎಂದು ಶಪಿಸಿದನು.

ಹೀಗಿರುವಾಗ ದುಂದುಭಿಯ ಸೋದರ ಮಾಯಾವಿಗೆ ತನ್ನ ಸೋದರನ ಹತ್ಯೆಯ ಸಮಾಚಾರ ತಿಳಿಯಿತು. ಕ್ರುದ್ಧನಾದ ಆತ ವಾಲಿಯನ್ನು ಸಂಹರಿಸಲೇಬೇಕೆಂದು ದೃಢನಿರ್ಧಾರದಿಂದ ವಾಲಿಯ ಮೇಲೆ ಯುದ್ಧಕ್ಕೆ ಬಂದ.

ವಾಲಿಯನ್ನು ಹಿಂಬಾಲಿಸಿ ಸುಗ್ರೀವನೂ ಮಾಯಾವಿಯ ಜೊತೆ ಯುದ್ಧ ಮಾಡಲು ಬಂದ.

ಹೀಗೆ ಅಣ್ಣ-ತಮ್ಮಂದಿರಿಬ್ಬರೂ ಯುದ್ಧಕ್ಕೆ ಬರುತ್ತಿರುವುದನ್ನು ಕಂಡ ಮಾಯಾವಿಯ ಜಂಘಾಬಲವು ಉಡುಗಿಹೋಯಿತು. ಅವನಿಗೆ ಏನು ಮಾಡಬೇಕೆಂಬುದೇ ತೋಚದೆ ದಿಕ್ಕೆಟ್ಟಂತಾಗಿ ಅಲ್ಲಿದ್ದ ಗವಿಯೊಂದರೊಳಕ್ಕೆ ಹೋಗಿ ಅಡಗಿಕೊಂಡನು. ಆಗ ವಾಲಿಯು ಮಾಯಾವಿಯನ್ನು ಮರ್ದಿಸಲು ಗವಿಯೊಳಕ್ಕೆ ಹೋಗುವಾಗ ಸುಗ್ರೀವನನ್ನು ಕುರಿತು 'ನಾನು ಬರುವವರೆಗೂ ನೀನು ಈ ಗವಿಯ ಬಾಗಿಲಲ್ಲೆ ಕಾದಿರು' ಎಂದು ಹೇಳಿ ಗವಿಯೊಳಕ್ಕೆ ಹೋದನು.

ಎಷ್ಟು ಹೊತ್ತಾದರೂ ವಾಲಿಯೂ ಬರಲಿಲ್ಲ ; ಮಾಯಾವಿಯ ಸುಳಿವೂ ತಿಳಿಯಲಿಲ್ಲ. ಆದರೆ ಸ್ವಲ್ಪ ಕಾಲದನಂತರ ಆ ಗವಿಯಿಂದ ರಕ್ತಪ್ರವಾಹವು ಬರತೊಡಗಿತು. ಇದನ್ನು ಕಂಡು ಸುಗ್ರೀವನು 'ಇಷ್ಟು ಹೊತ್ತಾದರೂ ಅಣ್ಣ ಬರಲಿಲ್ಲ. ಆ ರಕ್ಕಸನೂ ಕಾಣುತ್ತಿಲ್ಲ. ಬಹುಶಃ ಒಬ್ಬರನ್ನೊಬ್ಬರು ಇರಿದು ಸತ್ತಿರಬೇಕೆಂದುಕೊಂಡನು. ಆಗ ಬಾಗಿಲಿಗೆ ಒಂದು ಬಂಡೆಯನ್ನು ಎಳೆದು ಸುಗ್ರೀವನು ಕಿಷ್ಕಿಂದೆಗೆ ಹಿಂದಿರುಗಿದನು.

ಇತ್ತ ವಾಲಿಯು ಮಾಯಾವಿಯನ್ನು ಮರ್ದಿಸಿ ಗವಿಯ ಬಾಗಿಲ ಬಳಿಗೆ ಬಂದಾಗ ಬಂಡೆಯು ಗವಿಯ ಬಾಗಿಲನ್ನು ಮುಚ್ಚಿತ್ತು, ಕ್ರೋದೋತ್ಕರ್ಷನಾದ ವಾಲಿಯು ಬಂಡೆಯನ್ನು ಸರಿಸಿ ಸುಗ್ರೀವನನ್ನು ಗದರುತ್ತ ಕಿಷ್ಕಿಂಧೆಗೆ ಬಂದನು. ಅಣ್ಣನನ್ನು ಕಂಡ ಸುಗ್ರೀವನು ಋಷ್ಯಮೂಕ ಪರ್ವತದಲ್ಲಿದ್ದ ಮತಂಗಮುನಿಯ ಆಶ್ರಯವನ್ನು ಪಡೆದು ಪ್ರಾಣಾಪಾಯದಿಂದ ಪಾರಾದ.

ಅದಿರಲಿ. ದುಂದಭೀ ಅಡಗಿ ಕುಳಿತಿದ್ದ ಕಾರಣದಿಂದ ಹಂಪಿಯಲ್ಲಿರುವ ಈ ಗವಿಗೆ ದುಂದುಭೀಗವಿ ಎಂದು ಹೆಸರಾಯಿತು.

ಸುಗ್ರೀವನ ಗವಿ

ಸುಗ್ರೀವನು ವಾಸವಾಗಿದ್ದ ಗವಿಯು ಹಂಪಿಯಲ್ಲಿರುವ ಕೋದಂಡರಾಮನ ಗುಡಿಯಿಂದ ವಿಠಲದೇವರ ಗುಡಿಗೆ ಹೋಗುವ ದಾರಿಯಲ್ಲಿ ಎಡಭಾಗದಲ್ಲಿದೆ. ಈ ಗವಿಯಲ್ಲಿ ರಾಮಲಕ್ಷ್ಮಣಸೀತೆಯರ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ಸುಗ್ರೀವ ಮತ್ತು ವಾಲಿ – ಈ ಅಣ್ಣತಮ್ಮರು ಉಳಿದುಬೆಳೆದ ಗವಿ ಇದೆಂದು ಹೇಳುತ್ತಾರೆ.

ವಾಲಿಕಾಷ್ಠ

ಹಂಪಿಯ ಸಮೀಪದಲ್ಲಿರುವ ವೆಂಕಟಾಪುರ ಎಂಬ ಗ್ರಾಮದ ಗದ್ದೆಗಳ ನಡುವೆ ಸುಮಾರು ಐದು ಗುಂಟೆ ವಿಸ್ತೀರ್ಣವಾಗಿರುವ ಒಂದು ಸುಣ್ಣಕಲ್ಲು ಗುಡ್ಡವಿದೆ. ಇದನ್ನು ಕೆಲವರು ವಾಲಿಕಾಷ್ಠ ಎಂದೂ ಕರೆಯುತ್ತಾರೆ. ಈ ಗುಡ್ಡದ ಬಂಡೆಯ ಮೇಲೆ ನಿಂತುಕೊಂಡು ಶ್ರೀರಾಮನು ವಾಲಿಯನ್ನು ಕೊಂದನಂತೆ. ಹೀಗೆ ಕೊಂದ ವಾಲಿಯ ದೇಹವನ್ನು ಹೊಳೆ ದಾಟಿಸಿ ತಂದು ಈ ಸ್ಥಳದಲ್ಲಿ ಸುಟ್ಟರಂತೆ.

ಹೀಗೆ ಸುಟ್ಟ ವಾಲಿಯ ಅಸ್ಥಿಪಂಜರದ ಅವಶೇಷಗಳು ಈಗಲೂ ಹಾಗೆಯೇ ಉಳಿದಿವೆ ಎಂಬುದಾಗಿ ಇಲ್ಲಿನ ಜನರು ಹೇಳುತ್ತಾರೆ. ಈ ದಿಬ್ಬ ಅಸ್ಥಿಪಂಜರದ ಆಕಾರದಲ್ಲಿದೆ ಎಂಬುವ ಕಲ್ಪನೆ ಜನಪದರಲ್ಲಿದೆ.

ಸಾಮಾನ್ಯವಾಗಿ ಇಲ್ಲಿಗೆ ಬಂದ ಸಾಧುಸಂತರುಗಳು, ಭಕ್ತಜನರುಗಳು ವಾಲಿಯನ್ನು ನೆನೆದು ಒಂದು ಧೂಪ ಹಾಕಿ ಪೂಜಿಸುತ್ತಾರೆ.

ಬೈಂದೂರು

ಬೈಂದೂರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿರುವ ಒಂದು ಪವಿತ್ರ ಕ್ಷೇತ್ರ. ಇಲ್ಲಿ ಶ್ರೀರಾಮ ಕಟ್ಟಿಸಿದನೆಂದು ಹೇಳುವ ಸೇನೇಶ್ವರ ದೇವಾಲಯವಿದ್ದು ಇದರ ಖ್ಯಾತಿ ನಾಡಿನುದ್ದಗಲಕ್ಕೂ ಹಬ್ಬಿದೆ.

ಪುರಾಣ ಕಾಲದಲ್ಲಿ ಬಿಂದುಮಹರ್ಷಿ ಈ ಸ್ಥಳದಲ್ಲಿ ವಾಸವಿದ್ದು ಶಿವಲಿಂಗವೊಂದನ್ನು ಪ್ರತಿಷ್ಠಾಪಿಸಿ ತಪೋನಿರತನಾಗಿದ್ದನು. ಆ ಸಮಯದಲ್ಲಿ ಅರಣ್ಯ ವಾಸದಲ್ಲಿದ್ದ ಶ್ರೀರಾಮ ಆ ಸ್ಥಳಕ್ಕೆ ಬಂದ. ಶ್ರೀರಾಮನು ಸೀತೆಯನ್ನು ಕಳೆದುಕೊಂಡು ಪರಿತಪಿಸುತ್ತಿರುವ ವಿಷಯವನ್ನು ತಿಳಿದ ಬಿಂದುಮಹರ್ಷಿಗಳು ಅಲ್ಲಿರುವ ಶಿವಲಿಂಗವನ್ನು ಆರಾಧಿಸಿದರೆ ಇಷ್ಟಾರ್ಥ ಸಿದ್ಧಿಯಾಗುವುದೆಂದು ಹೇಳಿದರು.

ಬಿಂದು ಮಹರ್ಷಿಗಳ ಆದೇಶದಂತೆ ಶ್ರೀರಾಮನು ಶಿವನನ್ನು ಆರಾಧಿಸಿದಾಗ ಶಿವಲಿಂಗದಿಂದ ಒಂದು ದಿವ್ಯಧ್ವನಿ ಹೊರಟಿತು.

'ಪುರುಷೋತ್ತಮನಾದ ಶ್ರೀರಾಮ ಕೇಳು ಕೇಳು. ಜನ್ಮಜನ್ಮಾಂತರದ ಕರ್ಮಫಲವನ್ನು ಎಲ್ಲರೂ ಅನುಭವಿಸಲೇಬೇಕು. ಅದಕ್ಕೆ ಅವತಾರಪುರುಷನಾದ ನೀನು ಹೊರತಲ್ಲ. ಸೀತೆಯನ್ನು ಅಪಹರಿಸಿರುವ ಶತ್ರುವಿನ ನಾಶಕ್ಕಾಗಿ ನೀನು

ಸೇನಾಸಮೇತನಾಗಿ ಹೋರಾಡಬೇಕಾಗುತ್ತದೆ. ಅದಕ್ಕಾಗಿ ಈಗಿಂದೀಗಲೆ ಸೇನೆಯನ್ನು ಸೇರಿಸು. ನಿನಗೆ ಜಯವಾಗುತ್ತದೆ' ಎಂದು ಹೇಳಿತು.

ಶಿವಲಿಂಗದ ದಿವ್ಯಧ್ವನಿಯ ಆದೇಶದ ಮೇರೆಗೆ ಶ್ರೀರಾಮ ಸುಸಜ್ಜಿತ ಸೇನೆಯನ್ನು ಕಟ್ಟಿ ಯುದ್ಧ ಮಾಡಿ ರಾವಣನ್ನು ಸಂಹರಿಸಿ ಸೀತೆಯೊಡನೆ ಲಂಕೆಯಿಂದ ಹಿಂದಿರುಗುವಾಗ ಈ ಕ್ಷೇತ್ರಕ್ಕೆ ಬಂದು ಬಿಂದು ಮಹರ್ಷಿಗಳ ದರ್ಶನ ಹಾಗೂ ಆಶೀರ್ವಾದಗಳನ್ನು ಪಡೆದು ಆ ಶಿವಲಿಂಗಕ್ಕೆ ಮಯನಿಂದ ಒಂದು ದೇವಳವನ್ನು ನಿರ್ಮಿಸಿದ.

ಶ್ರೀರಾಮನಿಗೆ ಸೇನೆ ಕಟ್ಟಲು ಸೂಚಿಸಿದ ಶಿವಲಿಂಗಕ್ಕೆ ಸೇನೇಶ್ವರ ಎಂದು ಹೆಸರಾಯಿತು. ಬಿಂದು ಮಹರ್ಷಿಗಳು ಆ ಕ್ಷೇತ್ರದಲ್ಲಿ ನೆಲಸಿದ್ದರಿಂದ ಆ ಮಹರ್ಷಿಗಳ ಹೆಸರಿನಲ್ಲಿ ಆ ಊರು 'ಬಿಂದುಪುರ'ವಾಗಿದ್ದು ಕಾಲಕ್ರಮದಲ್ಲಿ 'ಬೈಂದೂರು' ಆಗಿದೆ.

ಹನುಮ ಕೊರವಂಜಿ

ನಮ್ಮ ಪೌರಾಣಿಕ ಪ್ರಸಂಗಗಳಲ್ಲಿ ಕೊರವಂಜಿ ಪಾತ್ರವನ್ನು ತರುವುದು ಒಂದು ವೈಶಿಷ್ಟ್ಯವಾಗಿದೆ. ಮಹಾಭಾರತದಲ್ಲಿಯ ಕೃಷ್ಣನು ಕೊರವಂಜಿ ವೇಷ ಧರಿಸಿ ರುಕ್ಮಿಣಿಗೆ ಕಣಿ ಹೇಳಿದ್ದು, ವೆಂಕಟೇಶ್ವರನು ಪದ್ಮಾವತಿಗೆ ಕೊರವಂಜಿಯಾಗಿ ಕಣಿ ಹೇಳಿದ್ದು, ಬೆಟ್ಟದ ಚಾಮುಂಡಿ ಕಾವ್ಯದಲ್ಲಿ ಕಪಟಪತಿ ನಂಜುಂಡನು ಸತ್ತವನಂತೆ ಮಲಗಿರುವಾಗ ಉತ್ತನಹಳ್ಳಿ ಉರಿಕಾತಿ ಕೊರವಂಜಿಯಾಗಿ ಬಂದು ಕಣಿ ಹೇಳಿದ್ದು – ಹೀಗೆ ಅನೇಕ ಪ್ರಸಂಗಗಳನ್ನು ಉದಾಹರಿಸಬಹುದು. ಪಾರ್ವತಿ ದೇವಿಯೇ ಒಮ್ಮೆ ಕೊರವಂಜಿ ವೇಷ ಹಾಕಿದ್ದಳೆಂದು ಹೇಳುವ ಕೊರವಂಜಿಗಳು ತಾವು ಪಾರ್ವತಿಯ ಮಕ್ಕಳೆಂದು ಹೇಳಿಕೊಳ್ಳುತ್ತಾರೆ. ಇವುಗಳ ಜೊತೆಗೆ ಜನಪದ ರಾಮಾಯಣದಲ್ಲೂ ಆಂಜನೇಯ ಕೊರವಂಜಿ ವೇಷಧಾರಿಯಾಗಿ ಕಾಣಿಸಿಕೊಳ್ಳುವ ಪ್ರಸಂಗವಿದೆ.

ಸೀತಾನ್ವೇಷಣಕ್ಕಾಗಿ ಬಂದ ಹನುಮನು ಲಂಕೆಯನ್ನೆಲ್ಲ ಸುತ್ತಾಡಿ ಸೀತೆಯನ್ನು ಕಾಣದೆ ಅಶೋಕವನಕ್ಕೆ ಹೋಗಲು ನಿರ್ಧರಿಸುತ್ತಾನೆ. ತಾನು ಯಾರೆಂಬುದು ಯಾರಿಗೂ ತಿಳಿಯದಿರಲೆಂದು ಕೊರವಂಜಿ ವೇಷ ಧರಿಸುತ್ತಾನೆ. ಅಶೋಕವನದಲ್ಲಿ ವಿರಹತಪ್ತಳಾಗಿ ಕುಳಿತಿರುವ ಸೀತೆಯನ್ನು ನೋಡುತ್ತಾನೆ.

> ಬಂದಳು ಕೊರಮೆ ವನಕೆ ಕೋಕಿಲೆಯ
> ಸ್ವರದಂತೆ ಕುಕಿಲುಗೈವ ಕೊರಮೇಯ
> ಪದ್ಮಲೋಚನೆ ಕೇಳಿದಳು
> 'ನಿಮ್ಮ ಸ್ಥಳವಾವುದೆ'ಂದು.

ಸೀತೆಯ ಪ್ರಶ್ನೆಗೆ ಹನುಮನ ದೇಶಪ್ರೇಮ ವ್ಯಕ್ತವಾಗುವ ಬಗೆ ಹೀಗೆ :

'ಕಡಕ ಕರ್ನಾಟಕ ದೇಶದ ಕೊರಮೆ ಕಾಣೆ'

ಎನ್ನುತ್ತಾಳೆ.

'ನಾಡು ನಾಡನು ತಿರುಗುವ ಕೊರಮೆ
ಯಾವ ದೇಶವೆಂದೆನುತ ಕೇಳಲು?'

'ಹೇಳುವೆನು ಕೇಳಮ್ಮ ನಿನ್ನಯ ಮನಸ್ಸಿನಾಳವ
ದೇವಿ ಕೇಳೆ ಹೊತ್ತು ಹೋಗಿಸಬೇಡವೆ'

ಎನ್ನುತ್ತ ರಾಮಲಕ್ಷ್ಮಣ ಸೀತೆಯರು ವನವಾಸಕ್ಕೆ ಬಂದಾಗಿನಿಂದ ಇಂದಿನವರೆಗಿನ ಎಲ್ಲವನ್ನೂ ವಿಸ್ತರಿಸಿ ಹೇಳುತ್ತಾಳೆ. ಏಕೆಂದರೆ ಅವನು ಭೂತ ವರ್ತಮಾನ ಭವಿಷ್ಯತ್ತಿನ ಎಲ್ಲ ವಿಷಯಗಳನ್ನೂ ಹೇಳಬಲ್ಲ ಕೊರವಂಜಿ ತಾನೆ? ರಾಮಲಕ್ಷ್ಮಣರು ಬಂದು ರಾವಣನನ್ನು ಸಂಹರಿಸಿ ವಿಭೀಷಣನಿಗೆ ಪಟ್ಟಕಟ್ಟಿ ನಿನ್ನನ್ನು ಕರೆದುಕೊಂಡು ಹೋಗುತ್ತಾರೆ' ಎಂದು ಸಾರುತ್ತ ಹೊರಟಳು ಕೊರವಂಜಿ.

ಹನುಮಂತನು ಕೊರವಂಜಿ ವೇಷದಲ್ಲಿ ಬಂದು ಸೀತೆಗೆ ಅಭಯವನ್ನು ನೀಡುವ ಪ್ರಸಂಗ ಇದಾಗಿದೆ.

ಶ್ರೀರಾಮನಾಮ ಮಹಿಮೆ

ಸೀತೆಯನ್ನು ತರಲು ಲಂಕೆಗೆ ಹೋಗಬೇಕು. ಲಂಕೆಗೆ ಹೋಗಬೇಕಾದರೆ ಕಡಲಿಗೆ ಸೇತುವೆ ಕಟ್ಟಬೇಕಾಗಿತ್ತು. ಸೇತುವೆ ಕಟ್ಟಲು ಎಲ್ಲ ಸಿದ್ಧತೆಯು ನಡೆದಿತ್ತು. ಭಾರಿ ಭಾರಿ ಬಂಡೆಗಳ ರಾಶಿಯೇ ಬಿದ್ದಿತ್ತು. ನೂರು ಯೋಜನಗಳ ವಿಸ್ತೃತ ಸಮುದ್ರಕ್ಕೆ ಸೇತು ನಿರ್ಮಾಣ ಕಾರ್ಯ ಆಗಬೇಕಿತ್ತು.

ಸೇತುವೆಯ ನಿರ್ಮಾಣ ಕಾರ್ಯದ ಜವಾಬ್ದಾರಿಯು ಆಂಜನೇಯನದಾಗಿತ್ತು. ಶ್ರೀರಾಮನ ಪರಮ ಭಕ್ತನೂ ನಿಷ್ಠಾವಂತನೂ ಆದ ಆಂಜನೇಯ ಬಹಳ ಶ್ರದ್ಧೆಯಿಂದ ಆ ಕಾರ್ಯವನ್ನು ನಿರ್ವಹಿಸುತ್ತಿದ್ದ. ಅವನೊಂದಿಗೆ ನೂರಾರು ಕಪಿಗಳು ಉತ್ಸಾಹದಿಂದ ಬಂಡೆಗಳನ್ನು ಎತ್ತಿ ಎತ್ತಿ ಕಡಲಿಗೆ ಎಸೆಯುತ್ತಿದ್ದವು. ಹಾಗೆ ಎಸದೆ ಬಂಡೆಗಳೆಲ್ಲವೂ ಕಡಲಿನಲ್ಲಿ ತೇಲಿ ಸೇತುವೆ ನಿರ್ಮಾಣವಾಗುತ್ತಿತ್ತು.

ಹೀಗೆ ಕ್ಷಿಪ್ರಗತಿಯಲ್ಲಿ ಸೇತುಬಂಧ ಕಾರ್ಯ ನಡೆಯುತ್ತಿರುವಾಗ ಒಂದು ದಿನ ಶ್ರೀರಾಮಚಂದ್ರನು ಸೇತು ನಿರ್ಮಾಣ ಕಾರ್ಯ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಲು ಬಂದನು. ರಾಶಿ ಬಂಡೆಗಳನ್ನು ದಾಟಿ ಕಡಲ ತಡಿಗೆ ಬಂದನು. ಕಡಲಿನಲ್ಲಿ ದೊಡ್ಡ ದೊಡ್ಡ ಬಂಡೆಗಳು ಮಜ್ಜಿಗೆಯೊಳಗೆ ಬೆಣ್ಣೆಯುಂಡೆ

ತೇಲುತ್ತಿರುವಂತೆ ತೇಲುತ್ತಿವೆ. ಎಲ್ಲ ಬಂಡೆಗಳ ಮೇಲೂ 'ಶ್ರೀರಾಮ' ಎಂಬ ಬರಹವಿದೆ!

ಶ್ರೀರಾಮನಿಗೆ ಆಶ್ಚರ್ಯವಾಯಿತು. 'ನನ್ನ ಹೆಸರನ್ನು ಬರೆದ ಮಾತ್ರದಿಂದಲೆ ಬಂಡೆಗಳು ನೀರಿನ ಮೇಲೆ ತೇಲುತ್ತಿವೆ ಎಂದ ಮೇಲೆ ನಾನೇ ಬಂಡೆಯನ್ನು ನೀರಿನ ಮೇಲೆ ಎಸೆದರೆ?' ಎಂದುಕೊಂಡು ಒಂದಷ್ಟು ಗಾತ್ರದ ಗುಂಡನ್ನು ಕಡಲಿಗೆ ಎಸೆದ. ಆಗ ಅದು ನೀರಿನ ಮೇಲೆ ತೇಲಲಿಲ್ಲ. ಮುಳುಗಿಹೋಯಿತು! ಆ ತತ್‌ಕ್ಷಣವೆ ಶ್ರೀರಾಮ ಸುತ್ತಮುತ್ತ ನೋಡಿದ. 'ಸಧ್ಯ ಯಾರೂ ಇಲ್ಲ. ಇದ್ದು ಇದನ್ನು ನೋಡಿದ್ದರೆ ನನ್ನ ಮರ್ಯಾದೆ ಮಾನವೆಲ್ಲ ಮೂರು ಕಾಸಿಗೂ ಇಲ್ಲದಂತಾಗುತ್ತಿತ್ತು!' ಎಂದುಕೊಳ್ಳುತ್ತಿರುವಾಗಲೆ ಆಂಜನೇಯ ಕುಣಿದು ಕುಪ್ಪಳಿಸುತ್ತ ಕೇಕೆ ಹಾಕಿ ಚಪ್ಪಾಳೆ ಹೊಡೆಯುತ್ತ ರಾಮನೆದುರಿಗೆ ಬಂದು ನಿಂತ. ಆಗ ರಾಮ–

'ಯಾಕೆ ಆಂಜನೇಯ, ಈ ಅತಿರೇಕದ ಕುಣಿತ?' ಎಂದ. ಅದಕ್ಕೆ ಆಂಜನೇಯ,

'ಪ್ರಭು, ನೀವು ಕಡಲಿಗೆ ಬಂಡೆ ಎಸೆದು ತೇಲಿಸಲು ನೋಡಿದರಲ್ಲ ಅದನ್ನು ಕಂಡು ನಗು ಬಂತು.'

'ಆಂಜನೇಯ ಈ ಚೇಷ್ಟೆ ಸಾಕು. ಇದನ್ನು ಯಾರಿಗೂ ಹೇಳಬೇಡ!'

'ಇಂಥ ಮಹತ್ಕಾರ್ಯವನ್ನು ಹೇಳದೆ ಇರಲು ಸಾಧ್ಯವೆ? ಎಲ್ಲರಿಗೂ ಸಾರಿ ಸಾರಿ ಹೇಳುತ್ತೇನೆ.'

'ಆಂಜನೇಯ ಬೇಡ ಎಂದ ಮೇಲೆ ಬೇಡ. ಹೇಳಕೂಡದು!'

'ಹೇಳಿಯೇ ಹೇಳುತ್ತೇನೆ. ಹೇಳದೆ ಇರಲಾರೆ!'

'ಆಂಜನೇಯ ನಿನ್ನದು ತಲೆಹರಟೆ!'

'ತಲೆಹರಟೆಯಲ್ಲ. ಬಾಯಿಹರಟೆ!'

'ತಲೆಹರಟೆಯಾದರೂ ಸರಿ ಬಾಯಿಹರಟೆಯಾದರೂ ಸರಿ ಹೇಳಿಕೋ. ಹೇಳಿದರೆ ಏನಂತ ಹೇಳುತ್ತೀಯೆ ಮಹಾ? ಹೇಳಿಕೋ!'

'ಹೇಳಲೇ ಪ್ರಭೂ?'

'ಹೇಳಿಕೋ ಏನಾದರೂ ಹೇಳಿಕೊ!'

'ಏನಾದರೂ ಹೇಳುವುದಿಲ್ಲ. ಹೀಗೆ ಹೇಳುತ್ತೇನೆ. ಶ್ರೀರಾಮ ಕೈಹಿಡಿದದ್ದು ಉದ್ಧಾರವಾಗುತ್ತದೆ ಕೈಬಿಟ್ಟಿದ್ದು ಮುಳುಗಿಹೋಗುತ್ತದೆ!'

ಹನುಮಂತನ ಮಾತನ್ನು ಕೇಳಿ ಶ್ರೀರಾಮನ ಮುಖದಲ್ಲಿ ಮಂದಹಾಸ ಮಿಂಚಿತು. ಆಂಜನೇಯ ಭಕ್ತಿಯಿಂದ ಶ್ರೀರಾಮನ ಪಾದಕ್ಕೆ ನಮಸ್ಕರಿಸಿದನು. ಇಂಥ ಘಟನೆಯಿಂದ ಪ್ರೇರಣೆಗೊಂಡೋ ಏನೋ ದಾಸರು

ನೀನ್ಯಾಕೋ ನಿನ್ನ ಹಂಗ್ಯಾಕೋ – ನಿನ್ನ
ನಾಮದ ಬಲವೊಂದಿದ್ದರೆ ಸಾಕೋ

ಎಂದು ನಾಮದ ಬಲವನ್ನು ಕೊಂಡಾಡಿದ್ದಾರೆ.

ಅಳಿಲು ಭಕ್ತಿ ಮಳಲ ಸೇವೆ

ಕೆಲವರನ್ನು ನಾವು ಯಾತ್ಯಾತಕ್ಕೂ ಆಗದ ನಾಲಾಯಕ್ಕಾದವರೆಂದು ಭಾವಿಸಿ ಅಲಕ್ಷಿಸಿರುತ್ತೇವೆ. ಆದರೆ ಅಂಥವರಲ್ಲಿ ಕೆಲವರು ಅಸಾಧಾರಣ ಹೃದಯವಂತಿಕೆಯಿಂದ ತಮ್ಮ ಪರಿಮಿತಿಯಲ್ಲೇ ಹಿರಿತನವನ್ನು ಮೆರೆದುಬಿಡುತ್ತಾರೆ! ಅಂಥ ಸಂದರ್ಭದಲ್ಲಿ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವ ಗಾದೆ ಜೊತೆಗೆ 'ಅಳಿಲು ಭಕ್ತಿ ಮಳಲ ಸೇವೆ' ಎಂದೂ ಉದ್ಗರಿಸುತ್ತಾರೆ. ಶ್ರೀರಾಮನು ಸಮುದ್ರಕ್ಕೆ ಸೇತುವೆ ನಿರ್ಮಿಸಲು ನಿಂತಾಗ ಪುಟ್ಟ ಅಳಿಲು ತನ್ನ ಮೈಗೆ ಮಳಲನ್ನು ಅಂಟಿಸಿಕೊಂಡು ಸಮುದ್ರದೆಡೆಗೆ ಹೋಗಿ ಕೊಡುವುತಿತ್ತಂತೆ. ಅದಕ್ಕೆ ಜನಪದ ರಾಮಾಯಣದಲ್ಲಿ ಪ್ರಚಲಿತವಿರುವ ಅಳಿಲಿನ ಕಥೆ 'ಅಳಿಲು ಭಕ್ತಿ ಮಳಲು ಸೇವೆ' ಗಾದೆಯ ಹುಟ್ಟಿಗೆ ಕಾರಣವಾಗಿದೆ.

ರಾಮಾಯಣದ ಒಂದು ಪ್ರಸಂಗ: ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗಿ ಲಂಕೆಯ ಅಶೋಕವನದಲ್ಲಿಟ್ಟಿರುವ ಸುದ್ದಿಯನ್ನು ಆಂಜನೇಯನು ತಂದನು. ಲಂಕೆಗೆ ಹೋಗಲು ಕಡಲಿಗೆ ಸೇತುವೆ ಕಟ್ಟಬೇಕಿತ್ತು. ಸೇತುಬಂಧ ಕಾರ್ಯದಲ್ಲಿ ಶ್ರೀರಾಮನಿಗೆ ಕಪಿಸೈನ್ಯವು ಸಹಾಯ ಮಾಡಲು ಸಿದ್ಧವಾಗಿ ನಿಂತಿತ್ತು.

ಕಪಿಗಳೆಲ್ಲವೂ ದೊಡ್ಡ ದೊಡ್ಡ ಬಂಡೆಗಳನ್ನು ಸಮುದ್ರದೊಳಕ್ಕೆ ಹಾಕಿ ಸೇತುವೆ ನಿರ್ಮಾಣ ಕಾರ್ಯದಲ್ಲಿ ನಿರತವಾಗಿದ್ದವು. ಇದನ್ನು ನೋಡಿದ ಪುಟ್ಟ ಅಳಿಲು ಕಪಿಗಳ ಶ್ರದ್ಧೆಗೆ ನಾನೇನು ಕಡಿಮೆಯಲ್ಲ ಎಂಬಂತೆ ಉತ್ಸಾಹದಿಂದ ಶ್ರೀರಾಮನ ಈ ಕಾರ್ಯದಲ್ಲಿ ತನ್ನ ಕೈಯಿಂದಾಗುವಷ್ಟಾದರೂ ಸಹಾಯ ಮಾಡಬೇಕೆಂದು ನಿರ್ಧರಿಸಿತು. ಹಾಗೆಂದು ಅದು ಸುಮ್ಮನಿರಲಿಲ್ಲ. ಅದು ತನ್ನ ದೇಹವನ್ನು ಮರಳಿನಲ್ಲಿ ಹೊರಳಾಡಿಸಿ ಅದರಿಂದ ತನ್ನ ದೇಹಕ್ಕೆ ಅಂಟಿಕೊಂಡ ಮಳಲಿನ ಕಣಗಳನ್ನು ಕಡಲಿಗೆ ಒದರುತ್ತಿತ್ತು.

ಅಳಿಲಿನ ಈ ಪ್ರೀತಿಯನ್ನೂ ಭಕ್ತಿಯನ್ನೂ ಸೇವಾ ಮನೋಭಾವವನ್ನು ಕಂಡ ಶ್ರೀರಾಮನು ಬಹುವಾಗಿ ಸಂತೋಷಗೊಂಡನು. ಆಗ ಅವನು ಆ ಅಳಿಲನ್ನು ಪ್ರೀತಿಯಿಂದ ತನ್ನ ಎಡ ಅಂಗೈ ಮೇಲೆ ಇಟ್ಟುಕೊಂಡು ಬಲಗೈನ ಮಧ್ಯದ ಮೂರು ಬೆರಳುಗಳಿಂದ ಅದರ ಬೆನ್ನಿನ ಮೇಲೆ ಸವರುತ್ತಾ ಹೋದನು. ಹಾಗೆ ಸವರುತ್ತ ಹೋದ ಆ ಮೂರು ಬೆರಳುಗಳ ಗುರುತು ಆ ಅಳಿಲಿನ ಬೆನ್ನಿನ ಮೇಲೆ ತಿರುನಾಮವಾಗಿ ಮೂಡಿತು. ಹೀಗೆ ಅಳಿಲಿನ ಬೆನ್ನಮೇಲೆ ಶ್ರೀರಾಮನ ನಾಮಾಲಂಕೃತವಾಯಿತು! ಇದು ಅಳಿಲಿನ ಮೈಮೇಲಿನ ಮೂರು ನಾಮದ ಗುರುತಿಗೆ ಸಾದೃಶ್ಯವನ್ನು ಕಲ್ಪಿಸುವ ಸೊಗಸು! ಹೀಗೆ ರಾಮಾಯಣ ಸಂಬಂಧಿ ಪುರಾಣಕಥೆಯನ್ನು ಸೃಷ್ಟಿಸಿರುವ ಜನಪದ ಪ್ರತಿಭೆ ಅಪೂರ್ವ ಎನಿಸುತ್ತದೆ.

ಸೇತುವೆ ಕಟ್ಟಲು ಹೊತ್ತೊಯ್ಯುತ್ತಿದ್ದ ಬಂಡೆಗಳು

ಹಂಪಿಯಲ್ಲಿ ರಾಶಿರಾಶಿ ಕಲ್ಲುಬಂಡೆಗಳಿವೆ. ಇಷ್ಟೊಂದು ಬಂಡೆಗಳು ಇಲ್ಲಿರಲು ಕಾರಣವೇನು ಎಂದು ಕೇಳಿದರೆ ಅದಕ್ಕೆ ನಮ್ಮ ಜನಪದರಲ್ಲಿ ಉತ್ತರ ಸಿದ್ಧವಾಗಿದೆ.

ಸೀತಾನ್ವೇಷಣಕ್ಕೆ ಹೋಗಿದ್ದ ಆಂಜನೇಯನಿಗೆ ಲಂಕೆಯ ಅಶೋಕವನದಲ್ಲಿ ಸೀತಾದೇವಿಯು ರಾಮನ ವಿರಹವನ್ನು ತಾಳಲಾರದೆ ದುಃಖತಪ್ತಳಾಗಿರುವಳೆಂದು ತಿಳಿಯುತ್ತದೆ.

ಲಂಕೆಯಲ್ಲಿರುವ ಸೀತೆಯನ್ನು ತರುವುದಾದರೆ ಲಂಕೆಗೆ ಹೋಗಿ ರಾವಣನೊಡನೆ ಹೋರಾಡಿ ಅವನನ್ನು ಕೊಂದು ಅನಂತರ ಸೀತೆಯನ್ನು ಕಿಷ್ಕಿಂಧೆ ಕಡೆಗೆ ಕರೆದುಕೊಂಡು ಬರಲು ಸಾಧ್ಯವೆಂದರಿತ ಶ್ರೀರಾಮನು ಕಡಲಿಗೆ ಸೇತುಬಂಧವೇರ್ಪಡಿಸಲು ನಿರ್ಧರಿಸಿದನು. ರಾಮನ ಈ ಮಹತ್ಕಾರ್ಯಕ್ಕೆ ಕಪಿಸೈನ್ಯವು ಉತ್ಸಾಹದಿಂದ ಸಿದ್ಧವಾಗಿ ನಿಂತಿತು. ರಾಮನ ಅನುಜ್ಞೆಯ ಪ್ರಕಾರ ದೊಡ್ಡ ದೊಡ್ಡ ಬಂಡೆಗಳನ್ನು ಎತ್ತಿ ಕಡಲಿಗೆ ಎಸೆಯತೊಡಗಿದವು. ಅಪಾರ ಬಂಡೆಗಳಿಂದ ಸೇತುಬಂಧವಾದ ಮೇಲೆ ಶ್ರೀರಾಮನು 'ಸೇತುವೆ ಕಾರ್ಯ ಮುಗಿಯಿತು. ಇನ್ನು ಬಂಡೆಗಳನ್ನು ಕಡಲಿಗೆ ಹಾಕುವುದು ಸಾಕು!' ಎಂದನು.

ರಾಮನ ಈ ಮಾತನ್ನು ಕೇಳಿದ ಕಪಿಗಳೆಲ್ಲವೂ ತಾವು ಹೊತ್ತು ತರುತ್ತಿದ್ದ ಬಂಡೆಗಳನ್ನು ಅಲ್ಲಲ್ಲೆ ಬಿಸಾಡಿದವು. ಆ ಕಾರಣದಿಂದ ಹಂಪಿಯಲ್ಲಿ ಎಲ್ಲೆಂದರಲ್ಲಿ ರಾಶಿರಾಶಿ ಬಂಡೆಗಳು ಬಿದ್ದಿವೆ ಎಂಬುದಾಗಿ ಹೇಳುತ್ತಾರೆ.

ಹನುಮಾನ್ ಗುಂಡಿ

ಚಿಕ್ಕಮಗಳೂರು ಜಿಲ್ಲೆಯ ಹೊರನಾಡು-ಕಳಸ ಮಾರ್ಗವಾಗಿ ಕುದುರೆಮುಖಕ್ಕೆ ಹೋದರೆ ಅಲ್ಲಿಂದ ಸುಮಾರು ಹದಿನೈದು ಕಿ.ಮೀ. ನೇರವಾಗಿ ಸಾಗಬೇಕು. ಅಲ್ಲಿ ರಸ್ತೆಯ ಬಲಭಾಗಕ್ಕೆ ಹನುಮಾನ್ ಗುಂಡಿ ಜಲಪಾತವಿದೆ.

ರಾಮನು ತನ್ನ ಕಪಿಸೈನ್ಯದೊಡನೆ ಈ ಸ್ಥಳಕ್ಕೆ ಬಂದಾಗ ವಾನರರೆಲ್ಲ ನೂರು ಅಡಿ ಎತ್ತರದ ಈ ಜಲಪಾತದಿಂದ ಧುಮುಕುವ ಸನ್ನಾಹದಲ್ಲಿದ್ದರು. ಇದನ್ನು ನೋಡಿದ ಹನುಮಂತನು ಯಾರೊಬ್ಬರೂ ಕಪಿಗಳಾಗಿ ಧುಮುಕದೆ ಜಲವಾಗಿ ಧುಮ್ಮಿಕ್ಕಲಿ! ಎಂದು ಹಾರೈಸಿದನಂತೆ. ಪ್ರಧಾನ ಪ್ರವಾಹ ಹನುಮಂತನಾಗಿ ಉಳಿದ ಕಪಿಗಳು ಉಪಪ್ರವಾಹಗಳಾಗಿ ಮೇಲಿಂದ ಧುಮ್ಮಿಕ್ಕಿದವಂತೆ. ಅಂದಿನಿಂದ ಈ ಜಲಪಾತಕ್ಕೆ ಹನುಮಾನ್ ಗುಂಡಿ ಎಂದು ಹೆಸರಾಯಿತಂತೆ. ಈ ಜಲಪಾತದ ನೂರಾರು ಕವಲುಗಳು ಕೆಳಕ್ಕೆ ಧುಮುಕುತ್ತಿದ್ದರೆ ಕಪಿಚೇಷ್ಟೆಯಂತೆಯೇ ಕಾಣುತ್ತದೆ.

ಶಕುನಿಗಿರಿ ರಂಗನಾಥಸ್ವಾಮಿ

ಚಿಕ್ಕಮಗಳೂರು ಜಿಲ್ಲೆಯ ಸಖರಾಯಪಟ್ಟಣ ಪುರಾಣ ಕಾಲದ ರುಕ್ಮಾಂಗದನ ರಾಜಧಾನಿಯಾಗಿತ್ತು. ರುಕ್ಮಾಂಗದನಿಗೆ ಇಬ್ಬರು ಹೆಣ್ಣುಮಕ್ಕಳು. ಅವರಲ್ಲಿ ಹಿರಿಯ ಮಗಳನ್ನು ಕೊಟ್ಟ ಊರು ಹಿರೇಮಗಳೂರೆಂದೂ ಚಿಕ್ಕ ಮಗಳನ್ನು ಕೊಟ್ಟ ಊರು ಚಿಕಮಗಳೂರಾಯಿತೆಂದು ಹೇಳುತ್ತಾರೆ. ಸಖರಾಯಪಟ್ಟಣವನ್ನು ಸಕ್ಕರೆ ಪಟ್ಟಣ ಎಂದೂ ಕರೆಯುತ್ತಾರೆ. ಈ ಪಟ್ಟಣದಲ್ಲಿರುವ ಸ್ಥಾನದೇವತೆ ಶಕುನಿರಂಗಸ್ವಾಮಿ ವಿಚಿತ್ರ ಹೆಸರಿನಿಂದ ಪ್ರಸಿದ್ಧವಾಗಿದೆ.

ಶಕುನಿ ರಂಗನಾಥಸ್ವಾಮಿ ಹೆಸರಿನಲ್ಲಿರುವ ಶಕುನಿಗೂ ಮಹಾಭಾರತದ ಶಕುನಿಗೂ ಏನೇನೂ ಸಂಬಂಧವಿಲ್ಲ. 'ಶಕುನ' ಎಂಬ ಪದವನ್ನು ಜನರು ತಪ್ಪಾಗಿ ಗ್ರಹಿಸಿದ ಕಾರಣದಿಂದ ಈ ಪ್ರಮಾದ ನಡೆದುಹೋಗಿದೆ. ಹೀಗೆ ಹೇಳಿದಾಗಲೂ ರಂಗನಾಥ ಸ್ವಾಮಿಗೆ 'ಶಕುನ' ಪದ ಹೇಗೆ ತಗುಲುಹಾಕಿಕೊಂಡಿತು ಎಂಬುದಕ್ಕೆ ರಾಮಾಯಣದ ಕಾಲಕ್ಕೆ ಕರೆದೊಯ್ಯುವ ಒಂದು ಪುರಾಣ ಕಥೆಯನ್ನು ಇಲ್ಲಿನ ಸ್ಥಳೀಯರಾದ ಶ್ರೀ ಕೆ.ವಿ. ಚಂದ್ರಮೌಳಿಯವರು ಹೀಗೆ ಹೇಳುತ್ತಾರೆ:

ರಾಮರಾವಣರ ಯುದ್ಧದಲ್ಲಿ ಇಂದ್ರಜಿತ್ತು ಆಕಾಶಕ್ಕೆ ಹಾರಿ ಮಾಯಾಯುದ್ಧದಲ್ಲಿ ತೊಡಗಿದನು. ಇಂದ್ರಜಿತ್ತು ಬಿಟ್ಟಬಾಣಗಳು ಬಂದು ರಾಮಲಕ್ಷ್ಮಣರಿಬ್ಬರಿಗೂ ತಾಕಿದವು. ಇಬ್ಬರು ಪರವಶರಾಗಿ ನೆಲಕ್ಕುರುಳಿದರು. ಹೀಗೆ ಮೂರ್ಛಿತರಾಗಿರುವ ಅವರನ್ನು ಎಚ್ಚರಿಸಬೇಕಾದರೆ ಕೈಲಾಸಪರ್ವತ ಮತ್ತು ಕಾಂಚನಪರ್ವತದ ಮಧ್ಯದಲ್ಲಿರುವ ಔಷಧಿ ಪರ್ವತದಲ್ಲಿ ಮೂಲಿಕೆಗಳನ್ನು

ತರಬೇಕಾಗಿತ್ತು. ಔಷಧಿಪರ್ವತಕ್ಕೆ ಹೋದ ಹನುಮಂತನಿಗೆ ಸಂಜೀವಿನಿ ಸಸ್ಯ ಯಾವುದು ಎಂದು ತಿಳಿಯದೆ ಎಲ್ಲ ಸಸ್ಯಗಳನ್ನು ಪರೀಕ್ಷಿಸುತ್ತ ಬಂದನು. ಆದರೆ ಯಾವುದು ಸಂಜೀವಿನಿ ಸಸ್ಯ ಎಂಬುದು ಅವನಿಗೆ ತಿಳಿಯಲೇ ಇಲ್ಲ. ಆಗ ಹನುಮಂತನು ಉಗ್ರ ಕೋಪದಿಂದ ಘರ್ಜಿಸುತ್ತ ಸಂಜೀವಿನಿ ಪರ್ವತವನ್ನೇ ಬುಡಸಹಿತವಾಗಿ ಕಿತ್ತುಕೊಂಡು ಅಂತರಿಕ್ಷದಲ್ಲಿ ತೇಲಿಕೊಂಡು ಬರುತ್ತಿರುವಾಗ ಶಕುನಿಗಿರಿಯ ಬಳಿಗೆ ಬರುವಷ್ಟರಲ್ಲಿ ಕಾಲನೇಮಿ ಎಂಬ ರಾಕ್ಷಸ ತನ್ನ ಮಾಯಾಬಂಧದಿಂದ ಹನುಮನು ಗಾಢನಿದ್ರೆಯಲ್ಲಿ ಮುಳುಗುವಂತೆ ಮಾಡಿದನು.

ಐದಾರು ದಿನಗಳಾದರೂ ಹನುಮಂತನಿಗೆ ಎಚ್ಚರವಾಗಲಿಲ್ಲ. ಇದನ್ನುಗಮನಿಸಿದ ಸಖರಾಯಪಟ್ಟಣದ ರಂಗನಾಥ ಸ್ವಾಮಿಯು ಹನುಮಂತನ ಕನಸಿಗೆ ಬಂದು–

'ಹನುಮ, ಇದೇನು ನಿನ್ನ ಹಾಳುನಿದ್ದೆ. ಸಂಜೀವಿನಿಯನ್ನು ತರಲು ಬಂದ ನೀನು ನಂಜೇರಿದವನಂತೆ ನಿದ್ದೆ ಮಾಡುತ್ತಿರುವೆಯಲ್ಲ? ಏಳು ಎದ್ದೇಳು! ಈ ನಿದ್ರೆ ಸಾಕು!' ಎಂದಂತಾಯಿತು. ಕಣ್ಣುಬಿಟ್ಟು ನೋಡಿದಾಗ ರಂಗನಾಥಸ್ವಾಮಿಯು–

'ಹನುಮ, ಮಲ್ಲಿಗೆ ಹೂವಿನ ಪರಿಮಳಪೂರಿತ ತಂಗಾಳಿ ತೀಡಿ ಬರುತ್ತಿದೆ. ಇದು ಶುಭಶಕುನ. ಈ ಕೂಡಲೆ ಕಾಲನೇಮಿಯನ್ನು ಹೇಳಹೆಸರಿಲ್ಲದಂತೆ ಹೋಳು ಮಾಡಿ ಎಸೆ!' ಎಂದು ಹೇಳುತ್ತ ಶಕುನಗಿರಿಯ ತಪ್ಪಲಲ್ಲಿ ಒಂದು ಹೆಜ್ಜೆ ಇಟ್ಟು, ಬಿಡದಿ ಮನೆಯ ಹತ್ತಿರ ಒಂದು ಹೆಜ್ಜೆ ಇಟ್ಟು ರಂಗನಾಥಸ್ವಾಮಿಯು ಸಖರಾಯಪಟ್ಟಣದ ದೇಗುಲವನ್ನು ಸೇರಿಕೊಂಡ.

ಆ ಸಮಯಕ್ಕೆ ಆಂಜನೇಯನ ಬಲಗಣ್ಣೂ ಅದುರಿತು. ಬಲಭುಜ ಹಾರಿತು. ಈ ಎಲ್ಲ ಶುಭಶಕುನಗಳಿಂದ ಉತ್ತೇಜಿತನಾದ ಹನುಮಂತ ಸುತ್ತಮುತ್ತ ಕಣ್ಣಾಡಿಸಿದ. ರಾಕ್ಷಸ ಕಾಲನೇಮಿಯು ಭಾರಿ ಮೊಸಳೆಯ ಆಕಾರವನ್ನು ತಾಳಿ ನುಗ್ಗಿ ಬರುತ್ತಿತ್ತು. ಆಗ ಹನುಮಂತನು ವಿರಾಡ್ರೂಪದಲ್ಲಿ ಎರಡು ಕೈಗಳನ್ನು ಚಾಚಿ ಆ ಮೊಸಳೆಯ ಬಾಯಿಯನ್ನು ಹಿಡಿದು ಪರಪರನೆ ಸೀಳಿ ಅತ್ತೊಂದು ಹೋಳನ್ನು ಇತ್ತೊಂದು ಹೋಳನ್ನು ಬೀಸಿ ಎಸೆದನು. ದೊಡ್ಡಭಾಗ ಬಿದ್ದ ಕಡೆ ದೊಡ್ಡ ಮದಗದ ಕೆರೆಯಾಯಿತು : ಚಿಕ್ಕಭಾಗ ಬಿದ್ದ ಕಡೆ ಚಿಕ್ಕಮದಗ ಅಥವಾ ಅಯ್ಯನಕೆರೆಯಾಯಿತು.

ಹೀಗೆ ರಂಗನಾಥಸ್ವಾಮಿಯು ಹನುಮಂತನಿಗೆ ಶುಭಶಕುನಗಳನ್ನು ಸೃಷ್ಟಿಸಿ ರಾಕ್ಷಸ ಕಾಲನೇಮಿಯನ್ನು ಸಂಹಾರ ಮಾಡಲು ಸಹಾಯ ಮಾಡಿದ್ದರಿಂದ ಸ್ವಾಮಿಗೆ ಶಕುನರಂಗನಾಥಸ್ವಾಮಿ ಎಂದು ಹೆಸರಾಯಿತು. ಅದು ಜನಶ್ರುತಿಯಲ್ಲಿ 'ಶಕುನಿ' ರಂಗನಾಥಸ್ವಾಮಿ ಆಗಿದೆ.

ರಂಗನಾಥಸ್ವಾಮಿಯು ಮಧ್ಯರಾತ್ರಿಯಲ್ಲಿ ಹನುಮಂತನ ಕನಸಿನಲ್ಲಿ ಕಾಣಿಸಿಕೊಂಡು ಜಾಗೃತಿ ಮೂಡಿಸಿದ್ದರಿಂದ ಶಕುನಿ ರಂಗನಾಥ ಸ್ವಾಮಿಯ ಜಾತ್ರೆಯೂ ಮಧ್ಯರಾತ್ರಿಯಲ್ಲಿಯೇ ನಡೆಯುತ್ತದೆ.

ಹನುಮಂತನು ಶಕುನಿಗಿರಿಯ ಪಕ್ಕದಲ್ಲಿರಿಸಿದ್ದ ಔಷಧಿ ಪರ್ವತವನ್ನು ಹಸ್ತದ ಮೇಲಿರಿಸಿಕೊಂಡು ವೇಗವಾಗಿ ತೆಗೆದುಕೊಂಡು ಬಂದನು. ಆ ಕೂಡಲೆ ಪರ್ವತದ ಔಷಧಿ ಮೂಲಿಕೆಗಳ ವಾಸನೆ ಮಾತ್ರದಿಂದಲೆ ರಾಮಲಕ್ಷ್ಮಣರಿಗೆ ಎಚ್ಚರವಾಯಿತು. ಅಲ್ಲದೆ ಯುದ್ಧದಲ್ಲಿ ಮಡಿದಿದ್ದ ವಾನರರೆಲ್ಲರೂ ಪುನಃ ಚೇತನಗೊಂಡರು.

ಸಿದ್ಧರ ಬೆಟ್ಟ

ಸಿದ್ಧರಬೆಟ್ಟವು ತುಮಕೂರು ಜಿಲ್ಲೆಯಲ್ಲಿ ಕೊರಟಗೆರೆ ತಾಲ್ಲೂಕು ಕೇಂದ್ರಕ್ಕೆ ಸುಮಾರು ೧೮ ಕಿ.ಮೀ. ದೂರದಲ್ಲಿದೆ. ತುಮಕೂರಿನಿಂದ ೪೮ ಕಿ.ಮೀ. ದೂರವಿದ್ದು ಡಾಬಸ್‌ಪೇಟೆಯ ಮಾರ್ಗದಲ್ಲೂ ಸುಮಾರು ಇಷ್ಟೇ ದೂರವಾಗುತ್ತದೆ.

ಸಿದ್ಧರಬೆಟ್ಟ ಯುಗಯುಗಾಂತರಗಳಿಂದ ಪ್ರಸಿದ್ಧವಾದ ವನಸ್ಪತೀ ಆಗರವೆನಿಸಿ ಸಿದ್ಧರ ತಪೋಭೂಮಿಯಾಗಿದೆ. ದಕ್ಷಿಣ ಕಾಶಿಯೆಂದೇ ಪ್ರಸಿದ್ಧಿ ಪಡೆದಿರುವ ಈ ಬೆಟ್ಟವನ್ನು ಸಿದ್ಧಗಿರಿ, ಸುವರ್ಣಗಿರಿಯೆಂತಲೂ ಕರೆಯುತ್ತಾರೆ. ಬೆಟ್ಟದ ಮೇಲೆ ಹಲವಾರು ಗುಹೆಗಳಿದ್ದು ಪ್ರಾಚೀನ ಕಾಲದಲ್ಲಿ ಋಷಿಮುನಿಗಳು ತಪಸ್ಸು ಮಾಡುತ್ತಿದ್ದ ಕುರುಹುಗಳು ಇಂದಿಗೂ ಕಾಣುತ್ತವೆ. ಇಲ್ಲಿನ ಸುವರ್ಣಗವಿ, ಬೂದುಗವಿ, ಬಂಗಾರದಗಿಂಡಿಗವಿ, ಯೋಗಸಾಧನೆಯ ಗದ್ದುಗೆ ಲಕ್ಷ್ಮೀದೇವಿಯಗದ್ದುಗೆ ಮುಂತಾದ ಪವಿತ್ರ ಸ್ಥಳಗಳ ಸಾಲೇ ಇಲ್ಲಿದೆ. ಸಿದ್ಧರಬೆಟ್ಟ ಸಮುದ್ರಮಟ್ಟದಿಂದ ೨೬೫೦ ಅಡಿ ಎತ್ತರದಲ್ಲಿದೆ.

ಸುವರ್ಣಗವಿಯಲ್ಲಿ ಹಲವಾರು ಹೆಬ್ಬಂಡೆಗಳಿದ್ದು ಇಲ್ಲಿ ಸಿದ್ದೇಶ್ವರಸ್ವಾಮಿಯ ಗದ್ದುಗೆಯಿದೆ. ಈ ಸಿದ್ದೇಶ್ವರಲಿಂಗದ ಚಚ್ಚೌಕದಲ್ಲೆಲ್ಲ ನೀರಿನ ಚಿಲುಮೆ ಇದೆ. ಇದೇ ತುಮಕೂರು ಜಿಲ್ಲೆಯಲ್ಲಿ ಹರಿಯುವ ಸುವರ್ಣಮುಖೀ ನದಿಯ ಉಗಮಸ್ಥಾನ. ಸಿದ್ಧರಬೆಟ್ಟಕ್ಕೆ ಸುವರ್ಣಗಿರಿ ಎಂದು ಹೆಸರು ಬರಲು ಇದೇ ಕಾರಣ. ಸುವರ್ಣ ಗವಿಯಲ್ಲೇ ಮತ್ತೊಂದು ಗವಿಯಿದ್ದು ಈ ದೊಡ್ಡಗವಿಯು ಕಗ್ಗತ್ತಲಾವರಿಸಿರುವುದರಿಂದ ಒಳಹೋಗುವುದು ಕಷ್ಟಸಾಧ್ಯವೆನಿಸುತ್ತದೆ. ಟಾರ್ಚ್ ಬೆಳಕಿನಲ್ಲಿ ಒಳಹೋದರೆ ಈ ಸ್ಥಳದಲ್ಲಿ ಹಿಂದೆ ತಪಸ್ಸು ಮಾಡಿದವರೋ ಧ್ಯಾನಕ್ಕೆ ಕುಳಿತವರೋ ಇಲ್ಲಿ ಕಣ್ಮುಚ್ಚಿದ ಕಾರಣದಿಂದ ಆ ಪುಣ್ಯಾತ್ಮರ ಅಸ್ಥಿಪಂಜರಗಳ ಅವಶೇಷಗಳು ಈ ಗವಿಯಲ್ಲಿವೆ.

ಔಷಧೀಯ ಗಿಡಮೂಲಿಕೆಗಳ ಆಕರವೆನಿಸಿರುವ ಈ ಸಿದ್ಧರಬೆಟ್ಟಕ್ಕೆ ಈ ಗಿಡಮೂಲಿಕೆಗಳು ಬಂದ ಬಗೆ ಹೇಗೆಂಬುದಕ್ಕೆ ಒಂದು ಪುರಾಣಕಥೆ ಪ್ರಚಲಿತವಿದೆ. ಹಿಂದೆ ರಾಮ-ರಾವಣರ ಯುದ್ಧಕಾಲದಲ್ಲಿ ಇಂದ್ರಜಿತುವಿನ ನಾಗಪಾಶಕ್ಕೆ ಸಿಕ್ಕಿ ಲಕ್ಷ್ಮಣನು ಮೂರ್ಛಿತನಾದಾಗ ಹನುಮಂತನು ಸಂಜೀವಿನಿ ಪರ್ವತವನ್ನು

ಹೊತ್ತು ತರುತ್ತಿರುವಾಗ ಅದರ ತುಣುಕೊಂದು ಈ ಸಿದ್ಧರಬೆಟ್ಟದ ಮೇಲೆ ಬಿತ್ತಂತೆ. ಹಾಗೆ ಬಿದ್ದಂದಿನಿಂದ ಇದು ಸಂಜೀವಿನೀ ಪರ್ವತವಾಗಿದ್ದರೂ ಈ ಪರ್ವತ ಸಂಜೀವಿನಿ ಪರ್ವತ ಎಂಬುದು ಯಾರಿಗೂ ತಿಳಿದಿರಲಿಲ್ಲವಂತೆ. ಮಧುಗಿರಿ ಮಹಾರಾಜ ಕುರಂಗನಾಯಕನು ಈ ಪ್ರದೇಶವನ್ನು ಆಳುತ್ತಿದ್ದ. ಆ ಸಮಯದಲ್ಲಿ ಆತನ ಪಟ್ಟದಾನೆಗೆ ಇದ್ದಕ್ಕಿದ್ದಂತೆ ಎರಡೂ ಕಣ್ಣುಗಳು ಕಾಣದಂತಾದವು. ಆಗ ಕುರಂಗನಾಯಕನು ಏನು ಮಾಡಬೇಕೆಂದು ತಿಳಿಯದೆ ಆ ಆನೆಯನ್ನು ಈ ಬೆಟ್ಟದ ಮೇಲೆ ಬಿಟ್ಟನು. ಆ ಆನೆ ಅಲ್ಲಿ ಐದಾರು ತಿಂಗಳು ಕಾಲ ಹುಲ್ಲು-ಸೊಪ್ಪುಗಳನ್ನು ತಿಂದ ಕಾರಣದಿಂದ ಆನೆಗೆ ಪುನಾ ದೃಷ್ಟಿ ಬಂತು. ಇದರಿಂದ ಇಲ ದಿನಗಳಪರ್ಯಂತ ಈ ಬೆಟ್ಟದ ಗಿಡಮರಗಳ ಎಲೆಗಳನ್ನು ತಿಂದರೆ ಎಂಥ ರೋಗವೂ ವಾಸಿಯಾಗುತ್ತದೆ ಎಂಬ ನಂಬಿಕೆ ಈ ಸುತ್ತಿನ ಜನರಲ್ಲಿದೆ.

ಕರೀಘಟ್ಟ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿರುವ ಒಂದು ಬೆಟ್ಟವನ್ನು ಕರೀಘಟ್ಟ ಎಂದು ಕರೆಯುತ್ತಾರೆ. ಇಲ್ಲಿ ಶ್ರೀನಿವಾಸದೇವರು ನೆಲಸಿರುವ ಕಾರಣ ಇದನ್ನು ಚಿಕ್ಕತಿರುಪತಿ ಎಂದೂ ಕರೆಯುತ್ತಾರೆ. ಶ್ರೀರಂಗಪಟ್ಟಣಕ್ಕೆ ೫ ಕಿ.ಮೀ. ದೂರದಲ್ಲಿರುವ ಈ ಬೆಟ್ಟ ಸಮುದ್ರ ಮಟ್ಟದಿಂದ ಸುಮಾರು ೨೬೭೭ ಅಡಿ ಎತ್ತರದಲ್ಲಿದೆ. ಈ ಬೆಟ್ಟಕ್ಕೆ ಕರೀಘಟ್ಟ ಎಂದು ಹೆಸರು ಬರಲು ಕಾರಣ ಹೇಳುವ ಕಥೆ ರಾಮಾಯಣದ ಕಾಲಕ್ಕೆ ಹೋಗುತ್ತದೆ. ಅದಕ್ಕೆ ಸಂಬಂಧಿಸಿದ ಒಂದು ಪುರಾಣಕಥೆ:

ಸೀತಾನ್ವೇಷಣೆಯಾದ ಮೇಲೆ ಲಂಕೆಯಲ್ಲಿರುವ ಸೀತೆಯನ್ನು ಕರೆತರಲು ರಾವಣನೊಡನೆ ಯುದ್ಧ ಅನಿವಾರ್ಯವಾಯಿತು. ಆಗ ರಾವಣನನ್ನು ಎದುರಿಸಲು ಲಂಕೆಗೆ ಹೋಗಬೇಕಾದಾಗ ಸಮುದ್ರಕ್ಕೆ ಸೇತುವೆಯನ್ನು ಕಟ್ಟಬೇಕಾಗಿತ್ತು. ಈ ಕಾರ್ಯದಲ್ಲಿ ನಿರತರಾದ ಕಪಿಸೈನ್ಯವು ದೊಡ್ಡ ದೊಡ್ಡ ಬಂಡೆಯನ್ನು ತಂದು ಸಮುದ್ರಕ್ಕೆ ನೂಕುತ್ತಿತ್ತು. ಇಂಥ ಕಾರ್ಯದಲ್ಲಿ ಅತ್ಯಾಸಕ್ತಿ ಹೊಂದಿದ್ದ ಸುಗ್ರೀವನು ದೊಡ್ಡಬೆಟ್ಟವನ್ನೇ ಸೇತುವೆ ಕಟ್ಟಲು ತರಬೇಕೆಂದು ಈಗಿನ ತಿರುಪತಿಯ ಅಥವಾ ತಿರುಮಲಾಚಲಕ್ಕೆ ಅಂಟಿಕೊಂಡಿದ್ದ ನೀಲಾಚಲವನ್ನು ಕಿತ್ತು ಹೊತ್ತು ತರುತ್ತಿದ್ದ. ಇದನ್ನು ನೋಡಿದ ಕಾವೇರಿ ಲೋಕಪಾವನೀ ಸಂಗಮಸ್ಥಳದಲ್ಲಿದ್ದ ವಿಷ್ಣುಭಕ್ತರು-

'ಈ ಬೆಟ್ಟವು ನೀಲಾಚಲ. ಇದನ್ನು ಸೇತುವೆ ನಿರ್ಮಾಣಕ್ಕೆ ಬಳಸಕೂಡದು' ಎಂದು ಹೇಳಿ ಕಟ್ಟುಗ್ರವಾಗಿ ತಡೆದರು. ಸುಗ್ರೀವ ಈ ಕುಪಿತ ಭಕ್ತರನ್ನು ಕಂಡು ಭಯಗ್ರಸ್ತನಾಗಿ ತಾನು ಹೊತ್ತುತಂದ ನೀಲಾಚಲ ಬೆಟ್ಟವನ್ನು ಮೆಲ್ಲಗೆ ಅಲ್ಲಿಯೇ ಇಳಿಸಿ ಹೊರಟುಹೋದನು. ಹೀಗೆ ಆನೆಯಂತಿದ್ದ(ಕರಿ) ಶೇಷಾಚಲ(ತಿರುಪತಿ)ದ ಒಂದು ಭಾಗವಾದ ನೀಲಾಚಲವನ್ನು ಭಕ್ತರು 'ಕರೀಘಟ್ಟ' ಎಂದು ಕರೆದರು.

ಶನಿದೇವ ಮತ್ತು ಆಂಜನೇಯ

ಒಮ್ಮೆ ಆಂಜನೇಯನು ರಾಮನಾಮ ಧ್ಯಾನದಲ್ಲಿ ತಲ್ಲೀನನಾಗಿರುವಾಗ ಶನಿದೇವನು ಆಂಜನೇಯನ ಹೆಗಲೇರಲು ಬಂದನು. ಆಂಜನೇಯನು ವಜ್ರಕಾಯನಾಗಿರುವುದರ ಜೊತೆಗೆ ಶ್ರೀರಾಮನಾಮದ ರಕ್ಷಾಕವಚದಲ್ಲಿರುವುದರಿಂದ ಶನಿಯು ಅವನನ್ನು ಸ್ಪರ್ಶಿಸಲು ಸಾಧ್ಯವಾಗಲಿಲ್ಲ.

ಆಗ ಶನಿದೇವನು "ಏಯ್ ಆಂಜನೇಯ, ನಾನು ನಿನ್ನ ಹೆಗಲೇರಲು ಬಂದಿದ್ದೇನೆ. ನನಗೆ ಅವಕಾಶ ಕಲ್ಪಿಸಿಕೊಡು" ಎಂದನು. ಅದಕ್ಕೆ ಆಂಜನೇಯನು–

"ನಾನು ರಾಮಧ್ಯಾನದಲ್ಲಿದ್ದೇನೆ. ಈಗ ಸಾಧ್ಯವಾಗುವುದಿಲ್ಲ. ಮತ್ತೊಮ್ಮೆ ಬಾ" ಎಂದನು. ಅದಕ್ಕೆ ಶನಿದೇವ "ಮತ್ತೊಮ್ಮೆ ಬಾ ಎಂದರಾಗದು. ಈಗಲೆ ನಾನು ನಿನ್ನ ಹೆಗಲೇರಬೇಕು. ನಿನ್ನ ರಾಮಧ್ಯಾನ ಎಷ್ಟು ಕಾಲವಿರುತ್ತದೆ ಹೇಳು. ಇಲ್ಲೇ ಕಾದಿರುತ್ತೇನೆ" ಎಂದನು. ಅದಕ್ಕೆ ಆಂಜನೇಯನು ತನ್ನ ಬಾಲವನ್ನು ಚಾಚಿ ಶನಿದೇವನನ್ನು ಬಿಗಿಯಾಗಿ ಸುತ್ತಿಕೊಂಡು–

"ನನ್ನ ಧ್ಯಾನ ಮುಗಿದ ಮೇಲೆ ಈ ಕಟ್ಟನ್ನು ಕಳಚುತ್ತೇನೆ. ಆಗ ನೀನು ನನ್ನ ಹೆಗಲೇರಬಹುದು!" ಎಂದ. ಶನಿದೇವನು "ಹಾಗೆಯೇ ಆಗಲಿ" ಎಂದು ಸುಮ್ಮನೆ ನಿಂತುಬಿಟ್ಟನು.

ವಿಚಿತ್ರವೆಂದರೆ ದಿನಗಳು ವಾರಗಳು ತಿಂಗಳುಗಳು ವರ್ಷಗಳು ಎಷ್ಟೇ ಉರುಳಿದರೂ ಆಂಜನೇಯನ ರಾಮಧ್ಯಾನ ಕಾರ್ಯ ಮುಗಿಯಲೇ ಇಲ್ಲ. ಇತ್ತ ಶನಿದೇವನು ಬಾಲದ ಕಟ್ಟನ್ನು ಕಳಚಿಕೊಂಡು ಹೊರಬರಲು ಸಾಧ್ಯವಾಗುತ್ತಿಲ್ಲ.

ನಿಂತು ನಿಂತೂ ಬೇಸತ್ತ ಶನಿದೇವನು ವಿಧಿಯಿಲ್ಲದೆ ಆಂಜನೇಯನಿಗೆ ಶರಣಾಗತನಾಗಿ–

"ಮಹರಾಯ ಆಂಜನೇಯ, ನಿನ್ನ ಬಾಲದ ಕಟ್ಟಿನಿಂದ ನನ್ನನ್ನು ಬಿಡುಗಡೆ ಮಾಡಯ್ಯ" ಎಂದು ಕೇಳಿದನು.

"ಬಿಡುಗಡೆಯೇ? ನನ್ನ ಧ್ಯಾನಕಾರ್ಯ ಮುಗಿಯಬೇಕಲ್ಲ!"

"ಮಹರಾಯ, ನಿನ್ನ ಧ್ಯಾನಕಾರ್ಯ ಮುಗಿಯಲಿ ಮುಗಿಯದಿರಲಿ ನನ್ನನ್ನು ಬಿಡುಗಡೆ ಮಾಡಯ್ಯ. ಇನ್ನೆಂದೂ ನಾನು ನಿನ್ನ ತಂಟೆಗೆ ಬರುವುದಿಲ್ಲ!" ಎಂದು ಗೋಗರೆದನು. ಆಗ ಆಂಜನೇಯನು–

"ನನ್ನೊಬ್ಬನ ತಂಟೆಗೆ ಮಾತ್ರವಲ್ಲ, ನಾನೂ ಸೇರಿದಂತೆ ರಾಮಧ್ಯಾನ ಮಾಡುವ ಯಾರ ತಂಟೆಗೂ ನೀನು ಬರುವುದಿಲ್ಲ ಎನ್ನುವುದಾದರೆ ಬಿಡುಗಡೆ ಮಾಡುತ್ತೇನೆ!" ಎಂದ. ಆಗ ಶನಿದೇವರು

"ಆಗಲಿ. ಆಂಜನೇಯ, ಈ ಕಟ್ಟುಗಳಿಂದ ನನ್ನನ್ನು ಬಿಡುಗಡೆ ಮಾಡು. ನಿನ್ನ ಮಾತಿನಂತೆಯೇ ನಡೆದುಕೊಳ್ಳುತ್ತೇನೆ!" ಎಂದ. ಆಗ ಆಂಜನೇಯ ತನ್ನ ಬಾಲದ ಕಟ್ಟನ್ನು ಬಿಚ್ಚಿ ಶನಿದೇವರನ್ನು ಮುಕ್ತಗೊಳಿಸಿದ. ಆ ಕಾರಣದಿಂದ ಆಂಜನೇಯನನ್ನು ನಂಬಿದವರ, ಶ್ರೀರಾಮನನ್ನು ಧ್ಯಾನಿಸುವವರ, ತಂಟೆಗೆ ಶನಿದೇವರು ಬರುವುದಿಲ್ಲವಂತೆ! ಆದ್ದರಿಂದ ಸಾಡೇಸಾಥೀ, ಪಂಚಮಶನಿ ಅಷ್ಟಮಶನಿ ಜಾತಕದಲ್ಲಿ ಶನಿದೋಷ ಇರುವವರು ಆಂಜನೇಯನನ್ನು ನಿರಂತರವಾಗಿ ಆರಾಧಿಸಿದರೆ ದೋಷದಿಂದ ಮುಕ್ತರಾಗುತ್ತಾರೆ ಎಂಬ ನಂಬಿಕೆ ನಮ್ಮ ಜನರಲ್ಲಿದೆ.

ಹನುಮಜ್ಜಯಂತಿ

ಮಾರ್ಗಶಿರ ಮಾಸದ ದ್ವಾದಶಿಯಂದು ಹನುಮಂತ ಜನಿಸಿದ ದಿನವೆಂದು ಹೇಳಿ ಹನುಮಂತನ ಹೆಸರಿನಲ್ಲಿ ಈ ಜಯಂತಿ ಆಚರಿಸುತ್ತಾರೆ.

ಮೂರು ಲೋಕಗಳಲ್ಲೂ ರಾಕ್ಷಸರ ದಾಂಧಲೆ ಅತಿಯಾಗಿ ನರಸುರ ಕಿನ್ನರ ಕಿಂಪುರುಷರಾದಿಯಾದ ದೇವಾಧಿದೇವತೆಗಳೂ ತತ್ತರಿಸಿಹೋಗಿದ್ದರು. ದೈತ್ಯರ ಸಂಹಾರ ಅನಿವಾರ್ಯ ಎನಿಸಿದಾಗ ವಿಷ್ಣು ಭೂಮಿಯಲ್ಲಿ ಅವತರಿಸುವ ನಿರ್ಧಾರವೂ ಆಗಿತ್ತು. ಆದರೆ ವಿಷ್ಣುವಿಗೆ ಒಬ್ಬ ಬಲಗೈ ಬಂಟನ ಅಗತ್ಯವಿತ್ತು. ಎಷ್ಟೇ ಯೋಚಿಸಿದರೂ ಆಯ್ಕೆ ಸರಿಯೆನಿಸಲಿಲ್ಲ. ಆಗ ವಿಷ್ಣುವು ಅಷ್ಟದಿಕ್ಪಾಲಕರನ್ನು ವೈಕುಂಠಕ್ಕೆ ಬರಮಾಡಿಕೊಂಡನು. ಎಲ್ಲರೂ ಶ್ರದ್ಧಾಭಕ್ತಿಗಳಿಂದ ವಿಷ್ಣುವಿನ ಮುಂದೆ ವಿನೀತರಾಗಿ ನಿಂತು

"ಸ್ವಾಮಿ, ನಮ್ಮನ್ನೆಲ್ಲ ಕರೆಸಿದ ಕಾರಣವೇನು?" ಎಂದು ಕೇಳಿದರು. ವಿಷ್ಣು ಅದಕ್ಕೆ

"ಅಷ್ಟದಿಕ್ಪಾಲಕರೇ, ನಾನು ರಾಕ್ಷಸರ ಸಂಹಾರಕ್ಕಾಗಿ ಭೂಮಿಯಲ್ಲಿ ಅವತರಿಸುತ್ತಿದ್ದೇನೆ. ಆದರೆ ಅದಕ್ಕೆ ಮುಂಚೆ ನನ್ನ ತಲೆನೋವು ಹೋಗಬೇಕಾಗಿದೆ."

"ಸ್ವಾಮಿ, ತಮಗೆ ತಲೆನೋವೆ?"

"ಹೌದು ದೇವೇಂದ್ರ, ಈ ರಾಕ್ಷಸರ ಕಿರುಕುಳದ ಸುದ್ದಿಯನ್ನು ಕೇಳಿ ಕೇಳಿ ಕೇಳಿ ನನಗೆ ತಲೆಬೇನೆ ಉಂಟಾಗಿದೆ. ಅದು ಹೋಗದ ಹೊರತು ನಾನು ಭೂಮಿಗೆ ಅವತರಿಸುವಂತಿಲ್ಲ."

"ಹಾಗಾದರೆ ಅದಕ್ಕೇನು ಮಾಡಬೇಕು ಸ್ವಾಮಿ?"

"ದೇವೇಂದ್ರ ಭೂಲೋಕದ ಹಿಮಾಲಯದ ಹತ್ತಿರ ಸಂಜೀವಿನಿ ಪರ್ವತವಿದೆ. ಆ ಪರ್ವತದಲ್ಲಿರುವ ಸಂಜೀವಿನಿ ಸಸ್ಯದ ಎಲೆಗಳನ್ನು ತಂದು ಅದರ ರಸವನ್ನು ನನ್ನ ಹಣೆಗೆ ಸವರಿದರೆ ಪರಿಹಾರವಾಗುತ್ತದೆ."

"ಹಾಗಾದರೆ ಅದನ್ನು ತರಬಲ್ಲವರು ಯಾರು?"

"ತರುವುದೆಂದರೆ ಶೀಘ್ರವಾಗಿ ಹೋಗಿ ತರಬೇಕು. ಕಾಲಹರಣವಾದರೆ ನಾನು ಭೂಮಿಯಲ್ಲಿ ಹುಟ್ಟಲು ಸಾಧ್ಯವೇ ಇಲ್ಲ. ಯಾರು ಅತ್ಯಂತ ವೇಗವಾಗಿ ಹೋಗಿ ಸಂಜೀವಿನಿಯನ್ನು ತರಬಲ್ಲಿರಿ?" ಎಂದು ಪ್ರಶ್ನಿಸಿದನು. ಆ ಕೂಡಲೆ ವಾಯುದೇವನು

"ಪ್ರಭೂ, ನಾನಿದ್ದೇನೆ. ಈ ಕೂಡಲೆ ಹೋಗಿ ತರುತ್ತೇನೆ" ಎಂದು ಹೇಳಿದವನೆ ಕ್ಷಣಾರ್ಧದಲ್ಲಿ ಮರೆಯಾಗಿ ಕಣ್‌ಮಿಟುಕಿಸುವಷ್ಟರಲ್ಲಿ ಸಂಜೀವಿನಿಯೊಡನೆ ಬಂದೇ ಬಿಟ್ಟನು.

ವಿಷ್ಣುವಿಗೆ ಔಷಧೋಪಚಾರ ನಡೆದು ಗುಣಹೊಂದಿ ಹರ್ಷಚಿತ್ತನಾದನು. ಆ ಕೂಡಲೆ ವಾಯುದೇವನನ್ನು ಹತ್ತಿರ ಕರೆದು ಅವನ ಕಿವಿಯಲ್ಲಿ

"ಈ ಕೂಡಲೆ ಭೂಮಿಯಲ್ಲಿರುವ ಅಂಜನಾಪರ್ವತದಲ್ಲಿ ಅಂಜನಾದೇವಿ ಇದ್ದಾಳೆ. ಅವಳ ಗರ್ಭದಲ್ಲಿ ನೀನು ಹುಟ್ಟಿ ಆಂಜನೇಯನೆಂಬ ಹೆಸರಿನಿಂದ ನನಗೆ ಬಂಟನಾಗಿ ನೆರವಾಗು" ಎಂದನು.

ವಿಷ್ಣುವಿನ ಆಜ್ಞೆಯಂತೆ ವಾಯುದೇವನ ಅಂಶ ಅಂಜನಾದೇವಿಯನ್ನು ಸೇರಿ ಮಾರ್ಗಶಿರ ಮಾಸದ ದ್ವಾದಶಿಯಂದು ಆಂಜನೇಯನಾಗಿ ಜನಿಸಿತು. ಆಂಜನೇಯ ಜನಿಸಿದ ದಿನದಂದು ಹನುಮ ಜಯಂತಿ ಎಂಬ ಹೆಸರಿನಲ್ಲಿ ಹುಟ್ಟು ಹಬ್ಬವನ್ನು ಆಚರಿಸುವುದು ರೂಢಿಗೆ ಬಂದಿತು.

ಆಂಜನೇಯನ ಕಲ್ಲು

ಹಾಸನ ಜಿಲ್ಲೆಯ ಸಾಲಿಗ್ರಾಮದ ಸಮೀಪದಲ್ಲಿ ಒಂದು ಬಂಡೆಯಿದೆ. ಇದನ್ನು ಆ ಸುತ್ತಿನ ಜನರು ಇದು ಆಂಜನೇಯನ ಬಂಡೆ ಅಥವಾ ಆಂಜನೇಯನ ಕಲ್ಲು ಎಂದು ಹೇಳುತ್ತಾರೆ.

ಸಮುದ್ರಕ್ಕೆ ಸೇತುವೆ ಕಟ್ಟುವ ಕಾರ್ಯದಲ್ಲಿ ನಿರತರಾಗಿದ್ದ ಕಪಿಗಳೊಡನೆ ಆಂಜನೇಯನು ದೊಡ್ಡಬಂಡೆಯನ್ನು ಆಕಾಶಮಾರ್ಗದಲ್ಲಿ ಕೊಂಡೊಯ್ಯುತ್ತಿರುವಾಗ

ಆಕಸ್ಮಿಕವಾಗಿ ಕೈಯಿಂದ ಜಾರಿ ಬಿದ್ದ ಕಲ್ಲು ಈ ಬಂಡೆಯಂತೆ. ಆದ್ದರಿಂದ ಜನರು ಈಗಲೂ ಅದನ್ನು ಆಂಜನೇಯನ ಕಲ್ಲು ಎಂದು ಕರೆಯುತ್ತಾರೆ.

ಹನುಮನ ಪಂಜು ಕೋಲಾಟ

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕೋಡಾಲ ಗ್ರಾಮದಲ್ಲಿ ಒಂದು ವಿಶಿಷ್ಟವಾದ ಕೋಲಾಟವಿದೆ. ಇದನ್ನು ಹನುಮನ ಪಂಜು ಕೋಲಾಟ ಎಂದು ಕರೆಯುತ್ತಾರೆ. ಈ ಆಟದಲ್ಲಿ ರಾಮನ ಮತ್ತು ಆಂಜನೇಯನ ಮೇಲಿನ ಪದಗಳನ್ನು ಹಾಡುತ್ತಾರೆ. ಲಂಕಾದಹನದ ಪ್ರತಿರೂಪವೆ ಈ ಕೋಲಾಟ ಎನ್ನುತ್ತಾರೆ. ಆಟಗಾರರಲ್ಲಿ ಒಬ್ಬ ಆಂಜನೇಯ ಪಾತ್ರಧಾರಿ ಇರುತ್ತಾನೆ.

ಮಾಮೂಲಿ ಕೋಲಾಟದ ಎಡಗೈ ಕೋಲಿನ ತುದಿಗೆ ಒಂದು ಎಜ್ಜ ಮಾಡಿ ಅದಕ್ಕೆ ಒಂದು ಗೇಣುದ್ದದ ತಂತಿಯನ್ನು ನೇರವಾಗಿ ಬಂಧಿಸಿರುತ್ತಾರೆ. ತಂತಿಯ ತುದಿಗೆ ಬಟ್ಟೆಯ ಸಿಂಬೆಯನ್ನು ಸುತ್ತಿ ಅದನ್ನು ಚನ್ನಾಗಿ ಉನಿಯುವಂತೆ ಹೊಂಗೆ ಅಥವಾ ಇಪ್ಪೆ ಅಥವಾ ಕಡಲೆಕಾಯೆಣ್ಣೆಯಲ್ಲಿ ಅದ್ದುತ್ತಾರೆ. ಈಗ ನೆನೆದ ಕೋಲುಗಳ ತುದಿಗೆ ಬೆಂಕಿ ತಾಕಿಸಿ ಉರಿಯುವ ಪಂಜನಕೋಲುಗಳನ್ನು ಹಿಡಿದು ಕೋಲಾಟವಾಡುತ್ತಾರೆ. ಕೋಲಾಟದ ಮೇಷ್ಟ್ರು ಕೃಷ್ಣೇಗೌಡ ಕೋಲುಪದ ಹಾಡುತ್ತಾರೆ.

ರಾಮ ಎನ್ನಿರೋ ರಘುರಾಮ ಎನ್ನಿರೋ
ರಾಮ ರಾಮ ರಾಮ ಸೀತ ರಾಮ ಎನ್ನಿರೋ । ಸೊಲ್ಲು ।

ಹೊತ್ತು ಹುಟ್ಟುವಾಗ ಪತ್ರೆ ಪಲ್ಲೈಸುವಾಗ
ಸತ್ಯಾದ ರಾಮರ ಸಿರುಪಾದರಾಮ ।
ಸತ್ಯಾದ ರಾಮರ ಸಿರುಪಾದ – ನೆನುಕೊಂಡು
ಸತ್ವಂತೆ ಸೀತಮ್ಮಗೆ ಸರಣಂದೋ ರಾಮ ।

ಹೆಸರ ಹೇಳಿದರೆ ದೆಸೆಕೋಟೆ ಬೆದುರ್ಯಾವು
ಹಸವಂಗದ ಕ್ವಾಟೆ ಮ್ಯಾಲವುನೆ ರಾಮ ।
ಹಸವಂಗದ ಕ್ವಾಟೆ ಮ್ಯಾಲೆ ನಿಂತುಕೊಂಡು
ಬಾಲಾದ ಬೆಂಕಿ ಕೆದುರೀದ ರಾಮ ।

ಅಂಕೆ ಇಲ್ಲದ ಕಪಿ ಲಂಕೇಯ ಕೆಡಿಸಿತಂತೆ
ಲಂಕಾಸುರ ದೊರೆ ರಾವುಳಾನು ರಾಮ ।
ಲಂಕಾಪುರಿ ದೊರೆ ರಾವುಳಾನು – ನಿಂತುಕೊಂಡು
ಚಿಂತೇಲಿ ಹಲ್ಲುಹಲ್ಲು ಕಡಿದಾನು ರಾಮ ।

ಹೀಗೆ ರಾಮಾಯಣಕ್ಕೆ ಸಂಬಂಧಿಸಿದ ತ್ರಿಪದಿಗಳನ್ನು ಹಾಡುತ್ತ ಕೋಲಾಟವಾಡುತ್ತಾರೆ. ಇದಕ್ಕೆ ಈ ಸುತ್ತಿನಲ್ಲಿರುವ ಭಾಗವಂತಿಕೆ ಸಂಪ್ರದಾಯದ ಪ್ರಭಾವವಿರುವಂತೆ ಕಾಣುತ್ತದೆ. ಏಕೆಂದರೆ ಇದು ಸಂಕ್ರಾಂತಿ ಮತ್ತು ದೀವಳಿಗೆ ಸಂದರ್ಭದಲ್ಲಿ ಈ ಆಟವನ್ನು ತಪ್ಪದೆ ಆಡುತ್ತಾರೆ. ಲಂಕೆಯನ್ನೇ ಸುಟ್ಟ ಆಂಜನೇಯನ ಪರಾಕ್ರಮವನ್ನು ಸಾರುವುದೇ ಈ ಆಟದ ಮುಖ್ಯ ಆಶಯವಾಗಿದೆ.

ಹನುಮಂತ

ನೋಡಬಂದೆವೋ ನಿಮ್ಮ – ಹನುಮಪ್ಪ ಸ್ವಾಮಿ
ಬೇಡ ಬಂದೆವೋ ನಿಮ್ಮ – ಸೊಲ್ಲು ।

ಹನುಮಪ್ಪೆಂಬೋನು ಜಟ್ಟಿ
ಹಿಂಗಟ್ ಮುಂಗಟ್ ಕಟ್ಟಿ
ಹೊಡೆದಾನು ಅಂತರ ಪಲ್ಟಿ
ರಾಮಾರ ಪಾದಾವ ಮುಟ್ಟಿ ।

ಹನುಮಪ್ಪೆಂಬೋನು ಬಿಂಗಿ
ಹೊಡೆದಾನ್ ಪಾವ್ಸೇರ್ ಭಂಗಿ
ಎಡಗಡೇಲಿ ರಾಮ್‌ಸಿಂಗಿ
ಬಲಗಡೇಲಿ ಲಕ್ಷ್ಮಣ್‌ಸಿಂಗಿ ।

ಹನುಮಪ್ಪೆಂಬೋನು ಸಿಟ್ಟು
ಹೊಡೆದಾನ್ ಲೆಂಕೆಗೆ ಪೆಟ್ಟು
ರಾಮಾರ ಬಾಣವ ಬಿಟ್ಟು
ಲೆಂಕಾಪುರಿಯನೆ ಸುಟ್ಟು ।

ಹನುಮಪ್ಪೆಂಬೋನು ಪುಂಡ
ಹೊಡೆದಾನ್ ಲೆಂಕೆಗೆ ದಂಡ
ಅಲ್ಲಿ ರಾಮನ ಕಂಡ
ಕಾಲಲ್ ಒದ್ದಂಥ ಪಿಂಡ ।

ಹನುಮಪ್ಪೆಂಬೋನು ಬಂದ
ಲೆಂಕೆ ಸುಟ್ಟಿದ್ದೆ ಚೆಂದ
ಸೀತಾರಾಮರ ಕಂದ
ಸಿರುಪಾದಕೆ ಅವ ಸರಣಂದ ।

ಹನುಮಂತ್ರಾಯನ ಕಣಿವೆ

ಮಲೆಯ ಮಾದೇಶ್ವರನ ಬೆಟ್ಟದಲ್ಲಿ ತಾಳುಬೆಟ್ಟದಿಂದ ಏಳುಬೆಟ್ಟಗಳನ್ನು ಹಾದುಹೋಗುವ ದಾರಿಯಲ್ಲಿ ಹನುಮಂತ್ರಾಯನ ಕಣಿವೆ ಎಂಬ ಹೆಸರಿನ ಪ್ರದೇಶ ಸಿಗುತ್ತದೆ. ರಂಗನೊಡ್ಡು ಎಂಬ ಸ್ಥಳ ಕಳೆದ ಮೇಲೆ ಈ ಕಣಿವೆ ಸಿಗುತ್ತದೆ.

ಮಾದೇಶ್ವರ ಏಳುಮಲೆಗೆ ಹೋಗುತ್ತಿರುವ ದಾರಿಯಲ್ಲಿ ಹನುಮಂತರಾಯ ಬಂದು ಮಾದೇಶ್ವರನನ್ನು ತಡೆದು

"ಯಾರಪ್ಪ ನೀನು? ಇದು ರಂಗಸ್ವಾಮಿ ಬೆಟ್ಟ! ನಿನ್ನನ್ನು ನಾನು ಮುಂದಕ್ಕೆ ಬಿಡುವುದಿಲ್ಲ" ಎಂದನು. ಎಷ್ಟೇ ಬಗೆಯಾಗಿ ಹೇಳಿದರೂ ಹನುಮಂತ ಮಾದಪ್ಪನನ್ನು ಮುಂದಕ್ಕೆ ಹೋಗಲು ಬಿಡಲಿಲ್ಲ. ಮಾದಪ್ಪನಿಗೆ ಕೋಪ ಬಂತು. ಅವರು ಝಾಡಿಸಿ ಹನುಮಂತನನ್ನು ಒದ್ದರಂತೆ. ಅವನು ಕೌದಳ್ಳಿ ಕಣಿವೆ ಹತ್ತಿರದಲ್ಲಿ ಬಿದ್ದನಂತೆ. ಆಗ ಮಾದಪ್ಪ

"ಮುಂದಲ ಪೂಜೆ ನಿನಗಾಗ್ಲಪ್ಪ!" ಎಂದರು. ಆದರೆ ಮಾದಪ್ಪಾಜಿ ಒದ್ದ ನೋವನ್ನು ತಡೆದುಕೊಳ್ಳಲಾರದೆ ಹನುಮಂತ

ಬಿಳಿಗಿರಿಗೆ ಹಾರಿ ಮೊಕ್ಕಡನಾಗಿ ಬಿದ್ದವನೆ
ನೋಡಿ ನಮ್ಮ ಶಿವನಾ ।

ಹೀಗಾಗಿ ಆಂಜನೇಯ ಬಿಳಿಗಿರಿಗೆ ಹೋಗಿ ರಂಗಸ್ವಾಮಿಯ ಸೇವೆಯಲ್ಲಿ ನಿರತನಾಗಿ ಬದುಕನ್ನು ಸಾರ್ಥಕಪಡಿಸಿಕೊಂಡ.

ಬಿದ್ದಾಂಜನೇಯ

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನಲ್ಲಿ ಬಿಳಿಗಿರಿರಂಗನ ಬೆಟ್ಟವಿದೆ. ಈ ಬೆಟ್ಟದ ತುದಿಯಲ್ಲಿ ರಂಗಸ್ವಾಮಿ ದೇವಾಲಯವಿದೆ. ಬ್ರಹ್ಮಾಂಡ ಪುರಾಣದಲ್ಲಿ ಬಿಳಿಗಿರಿಯನ್ನು ದಕ್ಷಿಣ ತಿರುಪತಿ ಎಂದು ಕರೆಯಲಾಗಿದೆ. ವೈಷ್ಣವ ದೇವಾಲಯಗಳಲ್ಲಿ ಇದು ಅತ್ಯಂತ ಪ್ರಾಚೀನವಾದುದೆಂದು ಹೇಳುತ್ತಾರೆ.

ಬಿಳಿಗಿರಿರಂಗನ ದೇವಾಲಯದಿಂದ ಸುಮಾರು ೧೫ ಕಿ.ಮೀ. ದೂರದಲ್ಲಿರುವ ವಡಗೆರೆ ಸಮೀಪದಲ್ಲಿ ಬಿದ್ದಾಂಜನೇಯನ ವಿಗ್ರಹವಿದೆ. ಇಲ್ಲಿ ಆಂಜನೇಯನು ಬಿದ್ದಂತೆ ಇರುವುದರಿಂದ ಬಿದ್ದಾಂಜನೇಯ ಎಂಬ ಹೆಸರು ಬಂದಿದೆ. ಆಂಜನೇಯ ಇಲ್ಲಿ ಯಾಕೆ ಹೀಗೆ ಬಿದ್ದಿದ್ದಾನೆ ಎಂಬುದಕ್ಕೆ ದೇವರಗುಡ್ಡರು ಮತ್ತು ನೀಲಗಾರರು ಹಾಡುವ ಒಂದು ಸುದೀರ್ಘ ಪುರಾಣಕಥೆಯೇ ಇದೆ.


ಬಿಳಿಗಿರಿರಂಗಸ್ವಾಮಿಗೆ ತೊಳುಸಮ್ಮ ಮತ್ತು ಲಕ್ಷುಮದೇವೀ (ಅಲುಮೇಲು ಮಂಗೈ) ಎಂಬ ಇಬ್ಬರು ಹೆಂಡಿರು. ಈ ಇಬ್ಬರು ಹೆಂಡಿರಿದ್ದರೂ ರಂಗಸ್ವಾಮಿಗೆ ಸೋಲಿಗರ ಕುಸುಮಾಲೆ ಎಂಬ ಚಾಲಕಿಯೆಂದರೆ ಪಂಚಪ್ರಾಣ. ರಂಗಸ್ವಾಮಿಯು ಕುಸುಮಾಲೆ (ಸೂಳೆರಂಗಿ) ಮನೆಗೆ ಹೋಗುವಾಗ ಆಂಜನೇಯನು ತೊಳುಸಮ್ಮನಿಗೆ ಹಾಗೂ ಲಕ್ಷುಮದೇವಿಗೆ ತಿಳಿಯಲು ಶಂಖವನ್ನು ಊದುತ್ತಿದ್ದನು. ಶಂಖದ

ಶಬ್ದವನ್ನು ಕೇಳಿದ ಕೂಡಲೆ ಹೆಂಡಿರು ಬೆನ್ನಲ್ಲೆ ಬಂದು ರಂಗಸ್ವಾಮಿಯನ್ನು ಮನೆಗೆ ಎಳೆದೊಯ್ಯುತ್ತಿದ್ದರು. ಹೀಗೆ ಆಂಜನೇಯನ ದೆಸೆಯಿಂದ ರಂಗಸ್ವಾಮಿಗೆ ಬಹಳಷ್ಟು ಸಲ ರಸಭಂಗವಾಗುತ್ತಿತ್ತು.

ಒಮ್ಮೆ ರಂಗಸ್ವಾಮಿಯು ಕುಸುಮಾಲೆಯ ಮನೆಗೆ ಹೋಗುತ್ತಿರುವಾಗ ಆಂಜನೇಯ ಶಂಖ ಊದಲು ಶಂಖವನ್ನು ತುಟಿಗೊತ್ತಿಕೊಂಡ. ಆ ಕೂಡಲೆ ರಂಗಸ್ವಾಮಿಯು ಕಡುಗೋಪದಿಂದ ಆಂಜನೇಯನನ್ನು ಝಾಡಿಸಿ ಒದ್ದ. ಒದ್ದ ಕೂಡಲೆ ಅವನು ದೇವಾಲಯದಿಂದ ಸುಮಾರು ೧೫ ಕಿಲೋಮೀಟರ್ ದೂರದಲ್ಲಿರುವ ವಡಗೆರೆಯಲ್ಲಿ ಬಿದ್ದ. ಅಲ್ಲಿ ಹಾಗೆ ಬಿದ್ದವನೇ ಬಿದ್ದಾಂಜನೇಯ. ಅವನ ಕೈಯಲ್ಲಿ ಒಂದು ಶಂಖವೂ ಇತ್ತಂತೆ ಅದನ್ನು ಯಾರೋ ಕಿತ್ತುಕೊಂಡು ಹೋದರಂತೆ.




ನಿನ್ನಂಥ ಭಕ್ತನಿಲ್ಲ – ನಿನ್ನಂಥ ಶಕ್ತನಿಲ್ಲ



ಚಿಂತಿಸದಿರು ಪ್ರಭು ಮಾತೆ ಸೀತೆಯ ಸುಳಿವ ನಾ ತಿಳಿದು ಬರುವೆ

ಜನಪದ ರಾಮಾಯಣದ ಕಥೆಗಳು

ಸಫಲ ಸಮಾಗಮ



ಅಮರಕಥಾಮೃತ ರಾಮಾಯಣ



ರಾಮನ ಉಸಿರೇ ಹನುಮ – ಹನುಮನ ಪ್ರಾಣವೇ ರಾಮ

ಅರಳಿ – ಬೇವಿನ ಮರಗಳು

ರಾವಣನ ಸಂಹಾರವಾದ ಮೇಲೆ ವಿಭೀಷಣನಿಗೆ ಪಟ್ಟಾಭಿಷೇಕವಾಯಿತು. ವಿಭೀಷಣನು ರಾಮಲಕ್ಷ್ಮಣ ಸೀತೆ ಆಂಜನೇಯರನ್ನು ಬೀಳ್ಕೊಡಲು ಬಂದನು. ಇಷ್ಟು ದಿನಗಳು ಶ್ರೀರಾಮನ ಹೃದಯವಂತಿಕೆ ಔದಾರ್ಯ ಶೌರ್ಯಾದಿಗಳನ್ನು ಮೆಚ್ಚಿಕೊಂಡಿದ್ದ ವಿಭೀಷಣ ಅವರೊಡನೆ ಬಹಳ ದೂರ ಬಂದರೂ ಹಿಂದಿರುಗಲು ಮನಸ್ಸೇ ಆಗಲಿಲ್ಲ. ವಿಭೀಷಣನ ಸಜ್ಜನಿಕೆಯನ್ನು ಕಂಡ ರಾಮನು

"ವಿಭೀಷಣ ನಾವು ಇಷ್ಟೊಂದು ಆತ್ಮೀಯರಾಗಿರುವ ಈ ಸದ್ಭಾವ ನಮ್ಮ ಜನರಿಗೆಲ್ಲರಿಗೂ ಮೂಡಿ ಬರಬಾರದೆ?" ಎಂದನು. ಅದಕ್ಕೆ ವಿಭೀಷಣನು–

"ಪ್ರಭೂ, ಇಂಥ ಸದಾಶಯವನ್ನು ಬೇಡ ಎನ್ನುವವರುಂಟೆ?" ಎಂದನು.

ಆಗ ಸ್ವಲ್ಪ ಹೊತ್ತು ಯೋಚಿಸಿದ ಶ್ರೀರಾಮನು–

"ವಿಭೀಷಣ 'ಯಥಾ ರಾಜಾ ತಥಾ ಪ್ರಜಾ' ಎಂಬ ಮಾತಿದೆಯಲ್ಲವೇ. ನಾವುಗಳು ಸರಿಯಾಗಿದ್ದರೆ ನಮ್ಮ ಪ್ರಜೆಗಳು ನಮ್ಮನ್ನೇ ಅನುಸರಿಸುತ್ತಾರಲ್ಲವೆ?"

"ಹೌದು ಪ್ರಭೂ. ನಮ್ಮ ಈ ಸನ್ನಡತೆಗೆ ಒಂದು ಸಾಕ್ಷಿಯನ್ನು ನೀಡಿ ಎಲ್ಲರೂ ಸೌಹಾರ್ದದಿಂದ ನಡೆಯುವಂತೆ ಮಾಡಬೇಕು. ಪ್ರಭೂ ರಾಮಚಂದ್ರ ನೀವೇ ಈ ಸಾಮರಸ್ಯಕ್ಕೆ ಒಂದು ಸಾಕ್ಷಿ ನೀಡಬೇಕು."

"ವಿಭೀಷಣ ಉತ್ತರದವರಾದ ನಮಗೆ ಅಶ್ವತ್ಥವೃಕ್ಷ ಶ್ರೇಷ್ಠವಾದುದು. ಅದೇ ರೀತಿ ನಿಮ್ಮ...."

"ಹೌದು ಪ್ರಭೂ ನಮ್ಮ ಪೂಜ್ಯವೃಕ್ಷ ಬೇವಿನಮರ"

"ಸರಿಯಾಗಿ ಹೇಳಿದೆ ವಿಭೀಷಣ. ನಾವಿಬ್ಬರೂ ಈಗ ಅಶ್ವತ್ಥ ಮತ್ತು ಬೇವಿನ ಗಿಡಗಳನ್ನು ಒಟ್ಟಾಗಿ ಇಲ್ಲಿ ನೆಡೋಣ. ಇದು ಉತ್ತರ ಮತ್ತು ದಕ್ಷಿಣದವರೆಂಬ ಭೇದವಿಲ್ಲದೆ ಹೊಂದಿಕೊಂಡು ಹೋಗಬೇಕೆಂಬುದಕ್ಕೆ ಸಾಕ್ಷಿಯಾಗಿರಲಿ. ಒಪ್ಪಿಗೆಯೇ?"

"ಪ್ರಭೂ ರಾಮಚಂದ್ರ, ಈ ಎರಡು ಗಿಡಗಳು ನಮ್ಮ ಎರಡು ಸಂಸ್ಕೃತಿಗಳ ಸಾಮರಸ್ಯಕ್ಕೆ ಸಾಕ್ಷಿಯಾಗಿರಲಿ" ಎಂದು ವಿಭೀಷಣ ಹೇಳಿದನು.

ಆಗ ಇಬ್ಬರೂ ತಮ್ಮ ತಮ್ಮ ಜನಾಂಗದ, ತಮ್ಮ ತಮ್ಮ ಸಂಸ್ಕೃತಿಯ ಪ್ರತೀಕವಾದ ಅಶ್ವತ್ಥ ಹಾಗೂ ಬೇವಿನ ಗಿಡಗಳನ್ನು ನೆಟ್ಟು ನೀರೆರೆದರು.

ಈ ಉತ್ತರ-ದಕ್ಷಿಣ ಜನರ ಸಮ್ಮಿಶ್ರದ ಸಂಕೇತವಾದ ಅರಳಿ-ಬೇವಿನ ಮರಗಳಿರುವ ಕಟ್ಟೆಗಳು ಎಲ್ಲ ಊರು ಬಾಗಿಲುಗಳ ಅಥವಾ ದೇವಾಲಯಗಳ ಮುಂದಿರುವುದನ್ನು ಇಂದಿಗೂ ಕಾಣಬಹುದು.

ಯಾವ ಊರುಗಳ ಹೆಬ್ಬಾಗಿಲಿನ ಬಳಿ ಅರಳಿ-ಬೇವಿನಕಟ್ಟೆ ಇರುತ್ತದೋ ಆ ಊರಿನಲ್ಲಿ ಜಾತಿ ಮತ ಧರ್ಮ ಎಂಬ ಯಾವ ಭೇದ-ಭಾವವೂ ಇಲ್ಲದ ಸಮಾನತಾ ಸಮಾಜವಿದೆ ಎಂದು ಅರ್ಥ.

ರಾಮ-ವಿಭೀಷಣರ ಈ ಸೌಹಾರ್ದ ನೀತಿ ಸಾರ್ವಕಾಲಿಕ ಆದರ್ಶದ ಸಂಕೇತವಾಗಿದೆ.

ಕಪಿಚೇಷ್ಟೆ

ಶ್ರೀರಾಮ ರಾವಣನನ್ನು ಸಂಹರಿಸಿ ಸೀತೆಯನ್ನು ಕರೆದುಕೊಂಡು ಲಕ್ಷ್ಮಣ ಆಂಜನೇಯರೊಡನೆ ಅಯೋಧ್ಯಾಭಿಮುಖನಾಗಿ ಹೊರಟನು. ಲಂಕೆಗೆ ಲಗ್ಗೆ ಹಾಕಿದ್ದ ಕಪಿಸೈನ್ಯವೂ ಇವರನ್ನು ಹಿಂಬಾಲಿಸುತ್ತಿತ್ತು. ಇದನ್ನು ಕಂಡ ಶ್ರೀರಾಮನು ಅವರಿಗೆಲ್ಲ ಒಂದು ಭೋಜನಕೂಟವನ್ನೇರ್ಪಡಿಸಿ ಹಿಂದಕ್ಕೆ ಕಳಿಸಲು ನಿರ್ಧರಿಸಿದನು.

ಶ್ರೀರಾಮನ ಇಚ್ಛೆಯಂತೆ ಭೋಜನಕೂಟಕ್ಕೆ ಎಲ್ಲ ಸಿದ್ಧತೆಯೂ ನಡೆಯಿತು. ಎಲ್ಲರೂ ಊಟಕ್ಕೆ ಕುಳಿತರು. ರಾಗಿಮುದ್ದೆಯನ್ನು ಇಡುವ ಮೊದಲು ಎಲ್ಲರ ಅಗಲಿಗೂ ಅವರೆಕಾಳು ಸ್ವಾಡಿಗೆಯನ್ನು ಬಡಿಸಿದರು. ಆವರೆಗೂ ಅವರೆಕಾಳನ್ನು ಕಾಣದಿದ್ದ ಕಪಿಯೊಂದು ಒಂದು ಕಾಳನ್ನು ತೆಗೆದುಕೊಂಡು ಎರಡು ಬೆರಳುಗಳ ಮಧ್ಯಕ್ಕಿಟ್ಟುಕೊಂಡು ಒತ್ತಿತು. ಆ ತಕ್ಷಣವೇ ಬೇಳೆ ಸಿಪ್ಪೆಯಿಂದ ಕಳಚಿಕೊಂಡು ಮೇಲಕ್ಕೆ ಚಿಮ್ಮಿತು. ಆ ಕಪಿ ಮತ್ತೆ ಅದೇ ರೀತಿಯಲ್ಲಿ ಕಾಳನ್ನು ಚಿವುಕಿತು. ಬೇಳೆ ಮೇಲಕ್ಕೆ ಹಾರಿ ನೆಲಕ್ಕೆ ಬೀಳುತ್ತಿತ್ತು. ಕಪಿ ಅದನ್ನು ಆತುಕೊಳ್ಳಲು ಹೋಯಿತು. ಅದು ಕೈಗೆ ಬರದೆ ನೆಲಕ್ಕೆ ಬಿದ್ದಿತು. ನಿರಾಶೆಯಿಂದ ಆ ಕಪಿ ಮತ್ತೆ ಒಂದು ಕಾಳನ್ನು ಚಿವುಕಿ ಮೇಲೆ ಹಾರಿದ ಕಾಳನ್ನು ಆತುಕೊಂಡು ಸಂಭ್ರಮದಿಂದ ನೆಗೆದಾಡಿತು. ಇದನ್ನು ಕಂಡ ಉಳಿದ ಕೋತಿಗಳೂ ಮುದ್ದೆ ಅಗಲಿಗೆ ಬರುವ ಮೊದಲೆ ಅವರೆಕಾಳುಗಳನ್ನು ಚಿವುಕುತ್ತ ಅದನ್ನು ಆತುಕೊಳ್ಳುತ್ತ ಕುಣಿಯಲಾರಂಭಿಸಿದವು. ಊಟದ ಪಂಕ್ತಿ ಆಟದ ಬಯಲಾಗಿ ಭೋಜನ ಕೂಟ ಎಕ್ಕುಟ್ಟೋಯಿತು. ಶ್ರೀರಾಮ ಇದನ್ನು ಕಂಡು 'ಇದು ತಾನೆ ಕಪಿ ಚೇಷ್ಟೆ!' ಎಂದು ಮೌನವಾಗಿ ನಿಂತುಬಿಟ್ಟನು!

ಸೀತಾಫಲ, ರಾಮಫಲ, ಲಕ್ಷ್ಮಣಫಲ ಮತ್ತು ಹನುಮಾನ್‌ಫಲ

ಲಂಕೆಯನ್ನು ಬಿಟ್ಟು ಶ್ರೀರಾಮ ಲಕ್ಷ್ಮಣ ಸೀತೆ ಮತ್ತು ಹನುಮಂತರು ಅಯೋಧ್ಯಾಭಿಮುಖವಾಗಿ ಹೊರಟರು. ಬಹಳ ದಿನಗಳ ಪ್ರಯಾಣದನಂತರ ಅವರು ಕಿಷ್ಕಿಂಧೆಗೆ ಬಂದರು.

ಅದು ಬೇಸಿಗೆ ಕಾಲ. ಬಿರುಬಿಸಿಲಿಗೆ ನೆಲ ಕಾದ ಕಾವಲಿಯಂತಾಗಿತ್ತು. ಎತ್ತ ತಿರುಗಿದರೂ ಎಲ್ಲೆಲ್ಲೂ ಹಸುರಿನ ಸುಳಿವೇ ಇಲ್ಲ. ಅಂತಾದ ಮೇಲೆ ಗೆಡ್ಡೆ-ಗೆಣಸುಗಳು ಬೇಕೆಂದಲ್ಲಿ ಸಿಗುತ್ತವೆ ಎಂಬ ಕಲ್ಪನೆಯೂ ಬರುವಂತಿರಲಿಲ್ಲ. ಅವರು ಕಿಷ್ಕಿಂಧೆಗೆ ಬಂದಾಗಿತ್ತು. ಸಂಜೆಯೂ ಆಗಿತ್ತು. ಆ ಹೊತ್ತಿನಲ್ಲಿ ಊಟ ಉಪಚಾರಕ್ಕೆ ಯಾವ ವ್ಯವಸ್ಥೆಯೂ ಇಲ್ಲದೆ ಬರಿಹೊಟ್ಟೆಯಲ್ಲಿ ಆ ರಾತ್ರಿ ಕಳೆಯಬೇಕಾಗಿತ್ತು.

ಶ್ರೀರಾಮ ತನಗೆ ಹಸಿವಾಗಿದೆ ಎಂದು ಹೇಳದಿದ್ದರೂ ಅದು ಸೀತೆಯ ಕರುಳನ್ನು ಚುರುಕ್ ಎನಿಸುತ್ತಿತ್ತು. ಚಿಂತಾಕ್ರಾಂತಳಾಗಿದ್ದ ಸೀತೆಗೆ ನಿದ್ರೆ ಬರಲಿಲ್ಲ. ಅವಳು ಸಮಸಮ ರಾತ್ರಿಯಲ್ಲಿ ಕಲ್ಲುನೀರೂ ಕರಗುವ ಹೊತ್ತಿನಲ್ಲಿ ಕುಳಿತು ಭಕ್ತಿಯಿಂದ ತನ್ನ ತಾಯಿ ಭೂದೇವಿಯನ್ನು ನೆನೆದುಕೊಂಡಳು. ಆ ಕೂಡಲೆ ಭೂದೇವಿ ಸೀತಾದೇವಿಯ ಕಿವಿಯಲ್ಲಿ ಪಿಸುಗುಟ್ಟಿದಳು.

'ಮಗಳೆ ಸೀತಾ, ನನ್ನಿಂದೇನಾಗಬೇಕಿತ್ತು ಕಂದಾ?'

'ಅಮ್ಮ, ಈ ಬೆಂಗಾಡಿನಲ್ಲಿ ಈ ರಾತ್ರಿ ಯಾರೂ ಊಟ ಉಪಚಾರವಿಲ್ಲದೆ ಮಲಗಬೇಕಾಯ್ತು. ಬೆಳಗಾದ ಕೂಡಲೆ ಅವರ ಉಪಾಹಾರಕ್ಕೆ ಏನು ಮಾಡಲಿ ಎಂದು ಚಿಂತಿಸುತ್ತಿದ್ದೇನೆ ತಾಯಿ'

'ಮಗಳೇ ಅದಕ್ಕಾಗಿ ನೀನು ಕೊರಗುವ ಅಗತ್ಯವಿಲ್ಲ. ಎಂಥಾ ಬೇಸಿಗೆಯಲ್ಲೂ ಒಣಗದ ಎಂಥಾ ಬಂಜರುಭೂಮಿಯಲ್ಲೂ ಬೆಳೆದು ಫಲ ಕೊಡುವ ಒಂದು ಗಿಡವನ್ನು ಇದೋ ನೋಡು. ಬೆಳಿಗ್ಗೆಯ ಹೊತ್ತಿಗೆ ಈ ಗಿಡದ ತುಂಬ ಹಣ್ಣುಗಳಿರುತ್ತವೆ. ಇವರೆಲ್ಲರ ಉಪಾಹಾರಕ್ಕೂ ಇದರ ಹಣ್ಣುಗಳು ಸಾಕು. ಈ ಹಣ್ಣು 'ಸೀತಾಫಲ' ಎಂಬ ಹೆಸರಿನಿಂದ ಪ್ರಸಿದ್ಧವಾಗಲಿ ಎಂದು ಹರಸಿದಳು.

ಬೆಳಗಾಯಿತು. ಎದ್ದು ಕಣ್ಣು ಬಿಟ್ಟರೆ ಎಲ್ಲರ ಕಣ್ಣಿಗೂ ಸೀತಾಫಲದ ವನ ಗೋಚರವಾಯಿತು. ಆ ವನದ ಹಣ್ಣುಗಳಿಂದ ಕಿಷ್ಕಿಂಧೆಯಲ್ಲಿ ನಿರಾತಂಕವಾಗಿ ಕೆಲವು ದಿನ ಕಳೆಯಲು ಸಾಧ್ಯವಾಯಿತು. ರಾಮ ಆ ಫಲದಲ್ಲಿರುವ ಸೀಳುಗಳನ್ನು ಕಂಡು 'ಇದು ಸೀತಾಫಲ' ಎಂದನು.

ಆಗ ರಾಮನಿಗೆ ಏನನ್ನಿಸಿತೋ ತನ್ನ ಹೆಸರಿನಲ್ಲಿ ಒಂದು ಹಣ್ಣಿನ ಗಿಡ ನೆಟ್ಟು ಅದನ್ನು 'ರಾಮಫಲ' ಎಂದು ಕರೆದ. ಇದರಿಂದ ಪ್ರೇರಿತರಾದ ಲಕ್ಷ್ಮಣ ಮತ್ತು ಹನುಮಾನರು ತಮ್ಮ ತಮ್ಮ ಹೆಸರುಗಳಲ್ಲಿ ಒಂದೊಂದು ಗಿಡ ನೆಟ್ಟರು.

ಮಾರುಕಟ್ಟೆಯಲ್ಲಿ ಆಗಾಗ ಈ ನಾಲ್ಕು ಫಲಗಳು ಕಾಣಿಸಿಕೊಳ್ಳುತ್ತವೆ. ಲಕ್ಷ್ಮಣ ಫಲ ಔಷಧಿ ಗುಣದಿಂದ ಕೂಡಿದ್ದೆಂದು ಹೇಳಿ ದುಬಾರಿ ಬೆಲೆಗೆ ಮಾರುತ್ತಾರೆ.

ನರೋಣ

'ನರೋಣ' ಎಂಬ ಹೆಸರಿನ ಊರು ಕಲಬುರುಗಿ ಜಿಲ್ಲೆಯ ಅಳಂದ ತಾಲ್ಲೂಕಿನಲ್ಲಿದೆ. ಈ ಊರಿಗೆ ನರೋಣ ಎಂಬ ಹೆಸರು ರಾಮಾಯಣ ನಡೆದ ಕಾಲದಲ್ಲೆ ಬಂದಿತಂತೆ.

ಪರಸತಿಯೆಂದು ತಿಳಿದೂ ಸೀತಾಪಹರಣ ಮಾಡಿದ ರಾವಣನನ್ನು ಶ್ರೀರಾಮನು ಸಂಹಾರ ಮಾಡಿದನು. ಆದರೆ ಬ್ರಾಹ್ಮಣನಾದ ರಾವಣನನ್ನು ಹತ್ಯೆ ಮಾಡಿದ ದೋಷ ರಾಮನ ಹೆಗಲೇರಿತು. ಈ ಬ್ರಹ್ಮಹತ್ಯಾದೋಷವನ್ನು ಕಳೆದುಕೊಳ್ಳುವ ಬಗೆ ಹೇಗೆ ಎಂದು ರಾಮನು ಚಿಂತಿಸುತ್ತಿರುವಾಗ ಋಷಿಮುನಿಗಳು ಬಂದು ಶ್ರೀರಾಮನನ್ನು ಕಂಡು

"ವತ್ಸಾ, ಶ್ರೀರಾಮ ನೀನು ಬ್ರಹ್ಮಹತ್ಯಾದೋಷ ಹೆಗಲಿಗೇರಿತೆಂದು ಕೊರಗುತ್ತ ಕುಳಿತರೆ ಪ್ರಯೋಜನವಿಲ್ಲ. ಆದ್ದರಿಂದ ಅದರ ಪರಿಹಾರೋಪಾಯವನ್ನು ಚಿಂತಿಸು" ಎಂದರು. ಅದಕ್ಕೆ ಶ್ರೀರಾಮನು

"ಋಷಿಪುಂಗವರೆ ತಾವೇ ನನಗೆ ಮಾರ್ಗದರ್ಶನ ಮಾಡಿ ಉದ್ಧಾರ ಮಾಡಬೇಕು" ಎಂದು ಕೇಳಿಕೊಂಡನು. ಅದಕ್ಕೆ ಆ ಋಷಿಗಳು

"ವತ್ಸಾ ಅದಕ್ಕೊಂದು ಉಪಾಯವಿದೆ. ನೀನು ಕೋಟಿ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿ ಆರಾಧಿಸು. ಪ್ರತಿಲಿಂಗ ಪ್ರತಿಷ್ಠಾಪಿಸಿ ಆರಾಧನೆ ಮಾಡಿದ ಮೇಲೆ 'ರಾವಣಾ!' ಎಂದು ಕೂಗಿ ಕರೆ. ಆಗ ರಾವಣನ ಪ್ರೇತಾತ್ಮದಿಂದ 'ಓ' ಎಂದು ಪ್ರತಿಕ್ರಿಯೆ ಬರುತ್ತದೆ. ಎಲ್ಲಿಯವರೆಗೆ ಈ ಪ್ರತಿಕ್ರಿಯೆ ಬರುತ್ತದೋ ಅಲ್ಲಿಯವರೆಗೂ ಶಿವಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಲೇ ಇರಬೇಕು. ಯಾವಾಗ ಪ್ರತಿಕ್ರಿಯೆ ಬರುವುದಿಲ್ಲವೋ ಆಗ ಆತನ ಆತ್ಮಕ್ಕೆ ಮುಕ್ತಿ ಸಿಕ್ಕಿತು ಎಂದರ್ಥ. ಆಗ ನೀನು ಆ ಪ್ರೇತಾತ್ಮ ಬಾಧೆಯಿಂದ ಮುಕ್ತನಾದೆನು ಎಂದು ತಿಳಿ. ಹೀಗೆ ಶಿವಲಿಂಗ ಪ್ರತಿಷ್ಠಾಪನೆಯಿಂದ ನಿನ್ನ ಬ್ರಹ್ಮಹತ್ಯಾದೋಷವನ್ನು ಕಳೆದುಕೊಳ್ಳಬಹುದು!" ಎಂದು ಸಲಹೆ ನೀಡಿದರು.

ಋಷಿಮುನಿಗಳ ಸಲಹೆಯಂತೆ ಶ್ರೀರಾಮನು ಹೋದಲ್ಲೆಲ್ಲ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತ 'ರಾವಣ' ಎಂದು ಕೂಗುತ್ತಿದ್ದ. ಕೂಗಿದಾಗಲೆಲ್ಲ 'ಓ' ಎಂದು ಪ್ರತಿಕ್ರಿಯೆ ಬರುತ್ತಿತ್ತು. ಆದರೆ ಈಗಿನ 'ನರೋಣ' ಇರುವ ಪ್ರದೇಶದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ 'ರಾವಣಾ!' ಎಂದು ಕೂಗಿ ಕರೆದಾಗ ಎಷ್ಟು ಸಲ ಕೂಗಿದರೂ ಪ್ರತಿಕ್ರಿಯೆ ಬರಲಿಲ್ಲ. ಅಲ್ಲಿಗೆ ರಾವಣ ಹತ್ಯಾದೋಷ ಪರಿಹಾರವಾಯಿತೆಂದು ಭಾವಿಸಿದ ಶ್ರೀರಾಮನು 'ನ ರಾವಣ' ಎಂದನಂತೆ. ಅಂದರೆ 'ರಾವಣ ಇನ್ನಿಲ್ಲ' ಎಂದು ಇದರರ್ಥ. ಹಾಗೆಂದ ಈ 'ನ ರಾವಣ'ವೇ ನರೋಣವಾಗಿ ಈ ಊರಿನ ಹೆಸರಾಯಿತಂತೆ.

ಕಾರುಮಾಡು ರಾಮಲಿಂಗೇಶ್ವರ

ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನ ಶ್ರೀಮಂಗಲ ನಾಡಿನ ಇರ್ಪು ಗ್ರಾಮದ ಉತ್ತರಕ್ಕೆ ಆರು ಮೈಲಿ ದೂರದಲ್ಲಿ ಕಾರುಮಾಡು ಎಂಬ ಸ್ಥಳವಿದೆ. ಇಲ್ಲಿರುವ ಲಿಂಗವೊಂದನ್ನು ಆಂಜನೇಯ ಕೋಪದಲ್ಲಿ ಇರ್ಪು ಸ್ಥಳದಿಂದ ತೂರಿ ಎಸೆದದ್ದು ಎಂದು ಹೇಳುತ್ತಾರೆ.

ರಾಮಲಕ್ಷ್ಮಣ ಸೀತೆಯರು ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗುತ್ತಿರುವಾಗ ಈ ಸ್ಥಳದಲ್ಲಿ ಸ್ವಲ್ಪ ಕಾಲ ತಂಗಿದ್ದರಂತೆ. ಶ್ರೀರಾಮನು ತಾನು ತಂಗಿದ್ದ ಸ್ಥಳಗಳ ನೆನಪಿಗಾಗಿ ಆ ಸ್ಥಳದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸುವುದು ಸಂಪ್ರದಾಯವಾಗಿತ್ತು. ಅದಕ್ಕಾಗಿ ಅವನು ತನ್ನ ಬಂಟ ಆಂಜನೇಯನನ್ನು ಕರೆದು

'ಆಂಜನೇಯ, ರಾಮೇಶ್ವರಕ್ಕೆ ಹೋಗಿ ಪೂಜಾ ಸಮಯದ ಹೊತ್ತಿಗೆ ಒಂದು ಶಿವಲಿಂಗವನ್ನು ತೆಗೆದುಕೊಂಡು ಬೇಗ ಬಾ' ಎಂದು ಹೇಳಿ ಕಳಿಸಿದನು. ಸ್ವಾಮಿಯಾಜ್ಞೆಯನ್ನು ಶಿರದಲ್ಲಿ ಹೊತ್ತ ಆಂಜನೇಯ ಶಿವಲಿಂಗವನ್ನು ತರಲು ತೀವ್ರ ವೇಗದಲ್ಲಿ ಹೋದ. ಆದರೂ ಅವನು ಹಿಂದಿರುಗುವುದು ಏನು ಕಾರಣವೋ ಏನೋ ಬಹಳ ಬಹಳ ತಡವಾಗಿ ಹೋಯಿತು.

ಪೂಜಾ ಸಮಯ ಮೀರಿ ಹೋಗುತ್ತಿರುವುದನ್ನು ಗಮನಿಸಿದ ಶ್ರೀರಾಮನು ಮರಳಿನಲ್ಲೇ ಒಂದು ಲಿಂಗವನ್ನು ಮಾಡಿ ಪೂಜೆಗೆ ಕುಳಿತ. ಅಷ್ಟು ಹೊತ್ತಿಗೆ ಬಂದ ಆಂಜನೇಯನು ತನ್ನ ಶ್ರಮವು ವ್ಯರ್ಥವಾದುದನ್ನು ಸಹಿಸಲಾರದೆ ತನ್ನನ್ನೂ ತಾನು ತಂದ ಶಿವಲಿಂಗವನ್ನು ಅಲಕ್ಷಿಸುತ್ತಿದ್ದೀರೆಂದು ಹೇಳಿ ವ್ಯಗ್ರವಾದನು.

ಆದರೆ ಶ್ರೀರಾಮನು ಇದಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ ತನ್ನಷ್ಟಕ್ಕೆ ತಾನು ಪೂಜಾನಿರತನಾಗಿದ್ದನು. ಆಗ ಕೋಪಗೊಂಡ ಆಂಜನೇಯನು ತಾನು ತಂದಿದ್ದ ಲಿಂಗವನ್ನು ಬಾಲಕ್ಕೆ ಸುತ್ತಿ ದೂರಕ್ಕೆ ಬೀಸಿ ಎಸೆದನು. ಅದು ಇರ್ಪುವಿನಿಂದ

ಆರು ಮೈಲಿ ದೂರಕ್ಕೆ ಹೋಗಿ ಬಿದ್ದಿತು. ಆಂಜನೇಯ ತಂದಿದ್ದ ಲಿಂಗಬಿದ್ದ ತಕರಾರಿನಿಂದ ತಕರಾರು ಮಾಡಿದ ಸ್ಥಳವಾಗಿತ್ತು. ಈಗ ಬಿದ್ದ ಸ್ಥಳ ಕಾರುಮಾಡು ಎಂಬ ಹೆಸರಿನ ಸ್ಥಳವಾಗಿದೆ.

ಆಗ ಶ್ರೀರಾಮನು ಕುಪಿತನಾದ ಆಂಜನೇಯನನ್ನು ಸಂತೈಸುತ್ತ ಇರ್ಪುವಿನಲ್ಲಿ ತಾನು ಪ್ರತಿಷ್ಠಾಪಿಸಿರುವ ಲಿಂಗಕ್ಕೆ ಪೂಜೆ ಸಲ್ಲುವ ಮುನ್ನ ಕಾರುಮಾಡುವಿನಲ್ಲಿರುವ ಲಿಂಗಕ್ಕೆ ಪೂಜೆ ಸಲ್ಲಲಿ ಎಂದು ಹೇಳಿದನು.

ಈಗಲೂ ಇರ್ಪುವಿನಲ್ಲಿ ನಡೆಯುವ ಜಾತ್ರೆಯ ಹಿಂದಿನ ದಿನ ಆಂಜನೇಯ ಎಸೆದ ಲಿಂಗಕ್ಕೆ ಕಾರುಮಾಡುವಿನಲ್ಲಿ ಪೂಜೆ ಸಲ್ಲುತ್ತದೆ.

ಚಕ್ರಸೋಣೆ

ರಾಮನಗರ ತಾಲ್ಲೂಕಿನ ಗ್ರಾಮವೊಂದರ ಹೆಸರು ಕೂಟಗಲ್ಲು ಎಂದು. ರಾವಣವಧೆಯನಂತರ ಶ್ರೀರಾಮಸೀತೆ ಲಕ್ಷ್ಮಣ ಮತ್ತು ಆಂಜನೇಯರು ಇಲ್ಲಿಗೆ ಬಂದು ಅಲ್ಲಿದ್ದ ಹಾಸುಗಲ್ಲಿನ ಮೇಲೆ ಕುಳಿತರು. ಆ ಸಮಯದಲ್ಲಿ ಸೀತೆಗೆ ಬಾಯಾರಿಕೆಯಾಗಿ ನೀರನ್ನು ಕೇಳಿದಳು.

ಶ್ರೀರಾಮನು ನೀರು ತರಲು ಆಂಜನೇಯನಿಗೆ ಹೇಳಿದನು. ಆದರೆ ಆ ಬಂಡೆಯ ಗುಣದ ಕಾರಣವಾಗಿ ಆಂಜನೇಯ ರಾಮನ ಮಾತನ್ನು ಲೆಕ್ಕಿಸದೆ ಹಾಗೇ ಕುಳಿತಿದ್ದನು. ಇದನ್ನು ಕಂಡು ವಿಸ್ಮಯಚಿತ್ತನಾದ ರಾಮನು ನೀರು ತರಲು ಲಕ್ಷ್ಮಣನಿಗೆ ಹೇಳಿದನು. ಲಕ್ಷ್ಮಣನೂ ಅಲಕ್ಷ್ಯ ಭಾವದಿಂದ ಅಲ್ಲಾಡದೆ ಕುಳಿತಿದ್ದನು.

ಶ್ರೀರಾಮನಿಗೆ ಆಂಜನೇಯ ಮತ್ತು ಲಕ್ಷ್ಮಣರ ಉದ್ಧಟತನದ ನಡತೆಯನ್ನು ಕಂಡು ಕೋಪದಿಂದ ಒಂದು ಬಾಣವನ್ನು ತೆಗೆದು ಅಲ್ಲಿದ್ದ ಬಂಡೆಗೆ ತಿವಿದನು. ಆ ಕೂಡಲೆ ಬಾಣದಿಂದ ತಿವಿದ ಭಾಗದಿಂದ ಸುತ್ತಿ ಸುತ್ತಿ ಸುತ್ತಿ ನೀರು ಚಿಮ್ಮಿತು. ಹೀಗೆ ಚಕ್ರದಂತೆ ಸುತ್ತಿಬರುವ ಇದನ್ನು 'ಚಕ್ರಸೋಣೆ' ಅಥವಾ 'ಚಕ್ರದೋಣೆ' ಎಂದು ಕರೆಯುತ್ತಾರೆ. ಇದನ್ನು ಯಾತ್ರಿಗಳು ಪವಿತ್ರತೀರ್ಥವೆಂದು ತಲೆಗೆ ಪ್ರೋಕ್ಷಿಸಿಕೊಳ್ಳುತ್ತಾರೆ.

ಮುತ್ತತ್ತಿರಾಯ – ೧

ಮುತ್ತತ್ತಿ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿರುವ ಪುರಾಣ–ಇತಿಹಾಸಗಳ ಸ್ಪರ್ಶದಿಂದ ಕೂಡಿದ ಒಂದು ಯಾತ್ರಾಸ್ಥಳ. ಇಲ್ಲಿ ಆಂಜನೇಯ ಮುತ್ತತ್ತಿರಾಯ (ಮುತ್ತರಾಯಸ್ವಾಮಿ) ಎಂಬ ಹೆಸರಿನಿಂದ ಆರಾಧನೆಗೊಳ್ಳುತ್ತಿದ್ದಾನೆ.

ಆಂಜನೇಯನಿಗೆ ಮುತ್ತತ್ತಿರಾಯ ಎಂದು ಹೆಸರು ಬರಲು ಕಾರಣವಾದ ಪ್ರಸಂಗವೇ ಈ ಸ್ಥಳದ ಹೆಸರಿಗೂ ಕಾರಣವಾಗಿದೆ.

ತ್ರೇತಾಯುಗದ ಕಥೆ. ಶ್ರೀರಾಮನು ಲಂಕಾಧಿಪತಿ ರಾವಣನನ್ನು ಸಂಹಾರ ಮಾಡಿ ಲಂಕೆಯಿಂದ ಸೀತೆಯನ್ನು ಕರೆದುಕೊಂಡು ಸೋದರ ಲಕ್ಷ್ಮಣನೊಡನೆ ಅಯೋಧ್ಯಾಭಿಮುಖನಾಗಿ ಬರುತ್ತಿದ್ದನು. ಹೀಗೆ ಬರುತ್ತಿರುವಾಗ ದಟ್ಟರಣ್ಯದ ನಡುವೆ ಹರಿಯುತ್ತಿದ್ದ ಅಮೃತವಾಹಿನಿ ಕಾವೇರಿ ನದಿಯನ್ನು ಕಂಡು ಆ ರಮಣೀಯ ಪ್ರದೇಶದಲ್ಲಿ ಸ್ವಲ್ಪ ಕಾಲ ತಂಗಿದ್ದು ವಿಶ್ರಾಂತಿ ಪಡೆಯಲು ಬಯಸಿದನು.

ಆ ಸುಂದರ ಅರಣ್ಯದ ನಡುವೆ ಮಂಜುಳರವ ಮಾಡುತ್ತ ಹರಿಯುತ್ತಿದ್ದ ಪವಿತ್ರತೀರ್ಥ ಕಾವೇರಿ ನದಿಯಲ್ಲಿ ನೀರಾಟವಾಡಬೇಕೆಂದು ಸೀತೆ ಬಯಸಿದಳು. ಅವಳು ಬಯಕೆಯಂತೆ ಆ ಅಮೃತತೀರ್ಥದಲ್ಲಿ ಮನಸಾರ ಮಿಂದು ಆನಂದಿಸಿದಳು. ಹೀಗೆ ಮಿಂದು ಮೇಲೆದ್ದು ಬಂದಾಗ ಅವಳ ಮೂಗಿನ ಮುತ್ತು ಕಾವೇರಿ ನದಿಯೊಳಗೆ ಬಿದ್ದುಹೋಗಿರುವುದು ಅವಳ ಅರಿವಿಗೆ ಬಂತು. ಆ ಕೂಡಲೆ ಶ್ರೀರಾಮನೆಡೆಗೆ ಬಂದ ಸೀತೆ :

'ಪ್ರಾಣಕಾಂತ, ನನ್ನ ಮೂಗಿನ ಮುತ್ತು ಮೀಯುವಾಗ ಕಳಚಿಕೊಂಡು ಮಡುವಿನೊಳಗೆ ಸೇರಿಹೋಗಿದೆ. ನಾಸಿಕ ಆಭರಣವು ಸುಮಂಗಲಿಯರಿಗೆ ಶುಭಪ್ರದ ಒಡವೆಯಲ್ಲವೆ? ಆ ಸತೀಸೌಭಾಗ್ಯ ಕೈಬಿಟ್ಟು ಹೋಯಿತಲ್ಲ. ನಾನು ಮೂಗುತಿ ಇಲ್ಲದೆ ಮುಖ ತೋರುವುದಾದರೂ ಹೇಗೆ? ಹಾ ನನ್ನ ನಾಸಿಕಾಭರಣ!' ಎಂದು ಕೈಕೈ ಹಿಸುಕಿಕೊಂಡಳು.

ಸೀತೆಯ ಸಂಕಟವನ್ನು ಕಂಡ ಶ್ರೀರಾಮನು ಚಿಂತಾಕ್ರಾಂತನಾದನು. ಏನು ಮಾಡಬೇಕೆಂದು ತೋಚದೆ ಆಕಾಶದ ಕಡೆಗೆ ಶೂನ್ಯದೃಷ್ಟಿಯಲ್ಲಿ ನೋಡುತ್ತಿರುವಾಗ ತನ್ನ ಸ್ವಾಮಿಯನ್ನು ನೋಡಿದ ಆಂಜನೇಯ ಚಿಂತೆಯ ಕಾರಣವನ್ನು ತಿಳಿದು

'ಪ್ರಭೂ, ಒಂದು ಮೂಗಿನ ನತ್ತಿಗಾಗಿ ಇಷ್ಟೊಂದು ಚಿಂತಿಸುತ್ತಿರುವಿರಾ? ಪಾದಸೇವಕನಾದ ನಾನು ಪಕ್ಕದಲ್ಲೆ ಇರುವಾಗ ಚಿಂತೆಯೇಕೆ ಪ್ರಭೂ, ನಾನೀಗಲೆ ಕಾವೇರಿ ನದಿಯಲ್ಲಿ ತಳ ಶೋಧಿಸಿ ಆ ಮುತ್ತು ಎಲ್ಲಿದ್ದರೂ ನಾನು ಎತ್ತಿಕೊಡುತ್ತೇನೆ' ಎಂದವನೆ ತನ್ನ ಬಾಲವನ್ನು ಕಾವೇರಿ ನದಿಯೊಳಕ್ಕೆ ಎಸೆದು ಮೂರು ಸುತ್ತು ತಿರುಗಿಸಿದ.

ಹರಿಯುತ್ತಿರುವ ಕಾವೇರಿನದಿಯ ತಳಕ್ಕೆ ಹೋಗಿ ಕುಳಿತಿದ್ದ ಮುತ್ತನ್ನು ಆ ಬಾಲ ಎತ್ತಿಕೊಂಡು ಕ್ಷಣಮಾತ್ರದಲ್ಲಿ ಮೇಲಕ್ಕೆ ಬಂತು. ಕಳೆದುಹೋಗಿದ್ದ ಮುತ್ತು ಮತ್ತೆ ಕೈಸೇರಿದಾಗ ಸೀತೆಗಾದ ಸಂತೊಷ ಅಷ್ಟಿಷ್ಟಲ್ಲ. ಇದರಿಂದ ಶ್ರೀರಾಮನೂ ಸುಪ್ರೀತನಾಗಿ,

'ಮಾರುತಿ, ಕಾವೇರಿನದಿಯ ತಿರುಗಣಿ ಮಡುವಿನಲ್ಲಿ ತಳಸೇರಿದ್ದ ಮುತ್ತನ್ನು ಎತ್ತಿಕೊಟ್ಟುದ್ದರಿಂದ ನಿನಗೆ ಮುತ್ತನ್ನು ಎತ್ತಿ ತಂದ ರಾಯ – ಮುತ್ತೆತ್ತಿರಾಯನೆಂದು ಹೆಸರಾಗಲಿ. ಈ ಸ್ಥಳ ಮುಂದೆ ಕಲಿಯುಗದಲ್ಲಿ ಪವಿತ್ರ ತೀರ್ಥಕ್ಷೇತ್ರವೆಂದು ಪ್ರಸಿದ್ಧಿ ಪಡೆದು ಮುತ್ತತ್ತಿ ಎಂಬ ಹೆಸರಿನಿಂದ ಭಕ್ತರನ್ನು ಆಕರ್ಷಿಸಲಿ. ಈ ಸ್ಥಳ ಒಂದು ಯಾತ್ರಾಸ್ಥಳವಾಗಿ ಪ್ರತಿನಿತ್ಯ ನಿನ್ನ ನಾಮ ಸಂಕೀರ್ತನೆ ಕೇಳಿಬರುತ್ತಿರಲಿ. ನಿನ್ನ ಆರಾಧಕರು ಹೆಚ್ಚಿ ನಿನ್ನ ಅಸಾಧಾರಣ ಮಹಿಮೆಯಿಂದ ಅವರ ಅಭೀಷ್ಟಗಳು ಸಿದ್ಧಿಸಿ ಅವರಿಗೆ ಸನ್ಮಂಗಳ ಉಂಟಾಗಲಿ' ಎಂದು ಹೃದಯ ತುಂಬಿ ಹರಸಿದನು.

ಆಂಜನೇಯ ಮೂಗುತಿಯನ್ನು ಎತ್ತಿತರಲು ತನ್ನ ಬಾಲವನ್ನು ನದಿಯೊಳಕ್ಕೆ ಬಿಟ್ಟು ಮೂರು ಸುತ್ತು ತಿರುಗಿಸಿದ ಸ್ಥಳ 'ತಿರುಗುಣಿ ಮಡು' ಎಂದು ಹೆಸರಾಗಿದೆ. ಈಗಲೂ ಆಂಜನೇಯ ಬಾಲ ಬಿಟ್ಟು ತಿರುಗಿಸಿದ ಸ್ಥಳದಲ್ಲಿ ನೀರು ಮೂರು ಸುತ್ತು ಸುತ್ತಿ ಮುಂದಕ್ಕೆ ಹರಿಯುತ್ತದೆ.

ತ್ರೇತಾಯುಗದಲ್ಲಿ ದಟ್ಟರಣ್ಯದ ನಡುವೆ ನಡೆದ ಈ ಘಟನೆ ಕಲಿಯುಗದ ಈವರೆಗೂ ಉಳಿಸಿ ಹೇಳಲು ಯಾರೊಬ್ಬರೂ ಇಲ್ಲದಂತಾದರು. ಹೀಗಾಗಿ ಇಲ್ಲಿನ ಕ್ಷೇತ್ರಮಹಿಮೆ ಅಮೂರ್ತವಾಗಿಯೇ ಉಳಿದುಹೋಗಿತ್ತು.

ಪುರಾಣಕಾಲದ ಈ ಘಟನೆಯ ಬಿತ್ತು ಇತಿಹಾಸದ ಕಾಲದಲ್ಲಿ ಮೊಳೆತು ಹೆಮ್ಮರವಾಗುವ ಕಾಲ ಒದಗಿಬಂತು. ಅದು ಗಂಗರಾಜರ ಆಳ್ವಿಕೆಯ ಕಾಲ.ಆ ಕಾಲದಲ್ಲಿ ಸಮೀಪದ ಏಳುಗಳ್ಳಿಯಲ್ಲಿಯ ಗಂಗಡಕಾರಗೌಡನ ಕುಟುಂಬವೊಂದಿತ್ತು. ಹಾಲುಸಾಗರವಾಗಿ ಬಾಳುತ್ತಿದ್ದ ಅವನ ಹಟ್ಟಿಯಲ್ಲಿ ಏಳುದೊಡ್ಡಿ ದನಗಳಿದ್ದವು. ಅವುಗಳನ್ನು ಮೇಯಿಸಿಕೊಂಡು ಬರಲು ಮಾದಾರ ಹುಡುಗನೊಬ್ಬ ಆ ಗೌಡನ ಮನೆಯಾಳಾಗಿ ಸೇರಿಕೊಂಡಿದ್ದ.ಆ ಹುಡುಗ ಗೌಡನ ಮನೆಯ ದನಗಳನ್ನು ಮೇಯಿಸಲು ಪ್ರತಿನಿತ್ಯ ಕಾವೇರಿ ತೀರದ ಕಾಡಿಗೆ ಬರುತ್ತಿದ್ದ.

ಹೀಗಿರುವಾಗ ಒಂದು ದಿನ ಆ ದನಗಳ ಹಿಂಡಿನಲ್ಲಿದ್ದ ಜೂಲುಗೊಂಬಿನ ಹಸುವೊಂದು ಹಿಂಡನ್ನು ಅಗಲಿ ಬೇರೆಯಾಯಿತು.ಅದು ಎಲ್ಲಿ ಹೋಯಿತು? ಏನಾಯಿತು? ಎಂದು ಯೋಚಿಸುತ್ತಿರುವ ಹೊತ್ತಿಗೆ ಆ ಹಸು ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಂದು ತನ್ನ ಹಿಂಡನ್ನು ಸೇರಿಕೊಂಡಿತು. ಪ್ರತಿನಿತ್ಯವೂ ಈ ಹಸು ಹಿಂಡನಗಲಿ ಸ್ವಲ್ಪ ಹೊತ್ತು ಎಲ್ಲಿಗೋ ಹೋಗಿ ಮತ್ತೆ ಬಂದು ತನ್ನ ಹಿಂಡನ್ನು ಸೇರಿಕೊಳ್ಳುತ್ತಿರುವುದನ್ನು ಆ ಹುಡುಗ ಗಮನಿಸಿದ. ಇದು ಹೀಗೆ ಎಲ್ಲಿಗೆ ಹೋಗಿ ಬರುತ್ತಿದೆ ಎಂಬುದನ್ನು ಕಂಡುಹಿಡಿಯಬೇಕೆಂದು ನಿರ್ಧರಿಸಿದ.

ಮಾರನೆಯ ದಿನ ಏಳುಗಳ್ಳಿ ಗೌಡರ ಹಟ್ಟಿಯಿಂದ ದನಗಳು ಕಾವೇರಿ ತೀರಕ್ಕೆ ಬಂದವು.ದನಗಾಹಿ ಮಾದಾರ ಹುಡುಗ ಜೂಲುಗೊಂಬಿನ ಹಸುವಿನ

ಚರ್ಯೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದ. ಜೂಲುಗೊಂಬಿನ ಹಸು ಮೆಲ್ಲನೆ ಹಿಂಡನ್ನು ಅಗಲಿ ಅಲಾಯದವಾಗಿ ಹೊರಟಿದ್ದನ್ನು ಕಂಡು ಈ ಹುಡುಗ ಆ ಹಸುವನ್ನೇ ಅನುಸರಿಸಿ ಅದರ ಹಿಂದೆಯೇ ನಡೆದ. ಹಿಂಡನಗಲಿ ಬಂದಿದ್ದ ಆ ಹಸು ನಾಲ್ಕು ಕಾಲುಗಳನ್ನು ಪೊತ್ತರಿಸಿಕೊಂಡು ಅಲ್ಲಿದ್ದ ಹುತ್ತದ ಮೇಲೆ ಹಾಲು ಕರೆದು ಹಿಂದಕ್ಕೆ ಹೊರಟು ಹಿಂಡನ್ನು ಸೇರಿಕೊಂಡಿತು. ಚಕಿತನಾದ ಆ ಮಾದಾರ ಹುಡುಗ ಆ ಹುತ್ತದಲ್ಲಿ ವಿಶೇಷ ಏನಿರಬಹುದೆಂದು ಪರೀಕ್ಷಿಸಲು ಹುತ್ತವನ್ನು ದಬಕದಿಂದ ಅಗೆಯತೊಡಗಿದ. ಅಗೆಯುತ್ತಿದ್ದಂತೆ ತಲೆಸುತ್ತಿ ಬಂದಂತಾಗಿ ಧೊಪ್ಪನೆ ನೆಲಕ್ಕುರುಳಿದ. ಅವನಿಗೆ ಎಚ್ಚರವಾದಾಗ ಹೊತ್ತು ಮುಳುಗುತ್ತಿತ್ತು. ದಡಬಡನೆ ಮೇಲೆದ್ದ ಆ ಹುಡುಗ ಆತುರಾತುರವಾಗಿ ದನಗಳನ್ನು ಅಟ್ಟಿಕೊಂಡು ಬಂದು ದನಗಳನ್ನು ಗೊಂತಿಗೆ ಕಟ್ಟಿ ತನ್ನ ಮನೆ ಸೇರಿಕೊಂಡ.

ಆ ರಾತ್ರಿ ಆ ಮಾದಾರ ಹುಡುಗ ಗಾಢನಿದ್ರೆಯಲ್ಲಿರುವಾಗ ಅವನಿಗೊಂದು ಕನಸು ಬಿತ್ತು. ಆ ಕನಸಿನಲ್ಲಿ ಆಂಜನೇಯಸ್ವಾಮಿ ಕಾಣಿಸಿಕೊಂಡು–

'ಎಲವೊ ಬಾಲಕ, ಹೆದರಬೇಡ.ನಾನು ನಿನ್ನ ಬಗೆಗೆ ಪ್ರಸನ್ನನಾಗಿದ್ದೇನೆ. ನಾನು ಮುತ್ತತ್ತಿರಾಯ ಎಂಬ ಹೆಸರಿನಲ್ಲಿ ಹುತ್ತವಿರುವ ಜಾಗದಲ್ಲಿ ಮೂಡಿದ್ದೇನೆ. ಆ ಜಾಗದಲ್ಲಿ ಗುಡಿಯೊಂದನ್ನು ಕಟ್ಟಿಸಿ ನನ್ನ ಪೂಜೆ ಮಾಡು. ನಿನಗೆ ಒಳ್ಳೆಯದಾಗುತ್ತದೆ. ಅಲ್ಲದೆ ಮುಂದೆ ಈ ಕ್ಷೇತ್ರ ಮುತ್ತತ್ತಿ ಕ್ಷೇತ್ರವೆಂದು ಪ್ರಸಿದ್ಧಿ ಪಡೆಯುತ್ತದೆ. ನನಗೆ ವರ್ಷದ ವಿಶೇಷ ಪೂಜೆಯನ್ನು ನಿನ್ನ ವಂಶದವರು ಮಾಡಲಿ' ಎಂದು ಹೇಳಿದಂತಾಯಿತು.

ಥಟ್ಟನೆ ಎಚ್ಚರವಾದ ಮಾದಾರ ಹುಡುಗ ಎದ್ದು ದೊಡ್ಡಿಯಿಂದ ಏಳುಗಳ್ಳಿಯ ಗೌಡರ ಹಟ್ಟಿಗೆ ಬಂದು ನಡೆದ ಸಂಗತಿಯನ್ನೆಲ್ಲ ವಿವರಿಸಿದ. ಕುತೂಹಲಗೊಂಡ ಗೌಡರು ಊರಿನ ಕೆಲವು ಪ್ರಮುಖರನ್ನು ಕರೆಸಿ, ಅವರಿಗೆಲ್ಲ ಆ ವಿಚಾರ ತಿಳಿಸಿ ಅದೇನಿರಬಹುದೆಂದು ಪರೀಕ್ಷಿಸಲು ಹುತ್ತದ ಬಳಿಗೆ ಬಂದರು. ಹುತ್ತವಿದ್ದ ಸ್ಥಳದಲ್ಲಿ ಮೂರ್ತಿಯೊಂದು ಮೂಡಿ ನಿಂತಿತ್ತು. ಬಂದಿದ್ದವರೆಲ್ಲ ಬೆರಗಿನಿಂದ ನೋಡುತ್ತಿರುವಾಗ ಅವರ ಜೊತೆಯಲ್ಲಿ ಬಂದಿದ್ದ ಬಾಲಕನ ಮೇಲೆ ಆಂಜನೇಯಸ್ವಾಮಿ ಆವಾಹನೆಯಾಗಿ :

'ಏಳುಗಳ್ಳಿ ಗೌಡರೇ ಕೇಳಿ, ಊರಿನ ಜನರೆ ನೀವೆಲ್ಲ ಕೇಳಿ. ನಾನು ಮುತ್ತೆತ್ತಿರಾಯ ಎಂಬ ಹೆಸರಿನಿಂದ ಇಲ್ಲಿ ನೆಲೆಗೊಂಡಿರುವ ಆಂಜನೇಯ. ತ್ರೇತಾಯುಗದಲ್ಲಿ ಶ್ರೀರಾಮರು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗುತ್ತಿರುವಾಗ ಸ್ವಲ್ಪ ಸಮಯ ಇಲ್ಲಿ ತಂಗಿದ್ದರು. ಅವರ ಜೊತೆ ಸತಿ ಸೀತಾಮಾತೆ, ಲಕ್ಷ್ಮಣಸ್ವಾಮಿ ಹಾಗೂ ನಾವುಗಳೆಲ್ಲ ಇದ್ದೆವು.ಈ ಮನೋಹರವಾದ ಸ್ಥಳದಲ್ಲಿ ಅಮೃತವಾಹಿನಿಯಂತೆ ಹರಿಯುತ್ತಿದ್ದ ಕಾವೇರಿ ನದಿಯನ್ನು ಕಂಡು

ಸೀತಾಮಾತೆ ಮೀಯಲು ಬಯಸಿದರು. ಅವರು ಆನಂದವಾಗಿ ಮಿಂದು ಮೇಲಕ್ಕೆ ಬಂದು ವಸ್ತ್ರಾಭರಣಗಳನ್ನು ಧರಿಸಿಕೊಳ್ಳುವಾಗ ಅವರ ಮೂಗಿನ ಮುತ್ತು ಕಾವೇರಿ ನದಿಯಲ್ಲಿ ಬಿದ್ದುಹೋಗಿರುವುದು ಅರಿವಿಗೆ ಬಂತು.ಮುತ್ತನ್ನು ಕಳೆದುಕೊಂಡು ಕಳವಳಪಡುತ್ತಿದ್ದ ಸೀತಮ್ಮನವರನ್ನು ಕಂಡು ಶ್ರೀರಾಮರು ಚಿಂತೆಗೀಡಾದರು. ಆಗ ನಾನು ಕಾವೇರಿಯಲ್ಲಿ ಮುಳುಗಿ ತಿರುಗಣಿ ಮಡುವಿನಲ್ಲಿದ್ದ ಮುತ್ತನ್ನು ಎತ್ತಿ ತಂದುಕೊಟ್ಟುದ್ದರಿಂದ ಆನಂದಪರವಶರಾದ ಪ್ರಭೂ ಶ್ರೀರಾಮನು ಮುತ್ತನ್ನು ಎತ್ತಿ ತಂದ ನನ್ನನ್ನು ಮುತ್ತೆತ್ತಿರಾಯ ಎಂದು ಕರೆದು, ಇನ್ನು ಮುಂದೆ ಇದು ನಿನ್ನ ಹೆಸರಿನ ತೀರ್ಥಕ್ಷೇತ್ರವಾಗಲಿ ಎಂದು ಹರಸಿದರು.ಅಂದಿನಿಂದಲೂ ನಾನು ಇಲ್ಲಿ ನೆಲೆಗೊಂಡಿದ್ದೇನೆ. ಗೌಡ, ನೀನು ನನಗೊಂದು ಗುಡಿಯನ್ನು ಕಟ್ಟಿಸು. ನಿನ್ನ ಮನೆಯ ದನಕಾಯುವ ಮಾದಾರ ಹುಡುಗ ನನ್ನನ್ನು ಕಂಡದ್ದರಿಂದ ಜಾತ್ರೆಯ ದಿನದ ವಿಶೇಷ ಪೂಜೆಯು ಒಪ್ಪೊತ್ತು ಅವನದಾಗಲಿ ಅನಂತರದ ಪೂಜೆ ಬ್ರಾಹ್ಮಣರಿಂದಾಗಲಿ. ವರ್ಷವಿಡೀ ನಿನ್ನ ವಂಶಿಕರು ನನ್ನನ್ನು ಪೂಜಿಸಲಿ!' ಎಂದು ತಾಕೀತು ಮಾಡಿದನು.

ಏಳುಗಳ್ಳಿಯ ಗೌಡರು ಗಂಗರಾಜರಿಗೆ ಈ ವಿಷಯವನ್ನು ತಿಳಿಸಿ ಮುತ್ತತ್ತಿರಾಯಸ್ವಾಮಿಗೆ ಒಂದು ಗುಡಿಯನ್ನು ಕಟ್ಟಿಸಿದರು. ಮುತ್ತತ್ತಿರಾಯ ಸ್ವಾಮಿಯ ಆದೇಶದಂತೆ ವರ್ಷವಿಡೀ ಗೌಡರ ವಂಶದವರು ಪೂಜೆ ಮಾಡಿದರೂ ಜಾತ್ರೆಯ ದಿನದ ಒಪ್ಪೊತ್ತು ಪೂಜೆಯನ್ನು ಮಾದಾರ ಹುಡುಗನ ವಂಶಿಕರು, ಒಪ್ಪೊತ್ತು ಪೂಜೆಯನ್ನು ಬ್ರಾಹ್ಮಣ ಪೂಜಾರಿ ಮಾಡುವ ವ್ಯವಸ್ಥೆ ಮಾಡಿದರು. ಪರಂಪರಾನುಗತವಾಗಿ ಪೂಜೆಯು ಇದೇ ಕ್ರಮದಲ್ಲಿ ನಡೆದುಬರುತ್ತಿದ್ದು ಈಗ ಏಳುಗಳ್ಳಿಯ ಮುದ್ದೇಗೌಡರ ಮನೆಯವರು ಅರ್ಚಕರಾಗಿದ್ದಾರೆ.

ಆಂಜನೇಯ ಮುತ್ತನ್ನು ಎತ್ತಿತಂದ ತಿರುಗಣಿ ಮಡು ಮುತ್ತತ್ತಿ ದೇವಸ್ಥಾನದಿಂದ ಒಂದೂವರೆ ಮೈಲಿ ದೂರದಲ್ಲಿದೆ. ಜಾತ್ರೆಗೆ ಬರುವ ಭಕ್ತರು ತೆಂಗಿನಕಾಯಿ, ಕರಟಗಳಲ್ಲಿ ಕರ್ಪೂರವನ್ನು ಹಚ್ಚಿ ಈ ತಿರುಗಣಿಯಲ್ಲಿ ತೇಲಿಬಿಡುತ್ತಾರೆ. ಆಗ ಜ್ಯೋತಿಯಿರುವ ಕರಟ ತಿರುಗಣಿ ಮಡುವಿನಲ್ಲಿ ಚಕ್ರಾಕಾರವಾಗಿ ಸುತ್ತುವುದನ್ನು ನೋಡುವುದೇ ಒಂದು ದಿವ್ಯಾನುಭವ. ಇದನ್ನು ನೋಡುವ ಭಕ್ತರು ಭಾವಪರವಶರಾಗಿ ಪುಲಕಿತರಾಗುತ್ತಾರೆ.

ಮುತ್ತತ್ತಿ ಕ್ಷೇತ್ರದಲ್ಲೆ ಶ್ರೀರಾಮದೇವರ 'ಪಾದದರೆ' ಇದೆ. ಇಲ್ಲಿ ಶ್ರೀರಾಮದೇವರ ಪಾದದ ಗುರುತಿದೆ. ಇದು ಮುತ್ತತ್ತಿಯಿಂದ ಎರಡೂವರೆ ಮೈಲಿ ದೂರದಲ್ಲಿದೆ. ಇಲ್ಲಿ ಪ್ರತಿವರ್ಷವೂ ಜಾತ್ರೆ ನಡೆಯುತ್ತದೆ.

ಇಷ್ಟೆಲ್ಲ ಪುರಾಣ – ಇತಿಹಾಸಗಳನ್ನು ಹೊಂದಿರುವ ಸ್ಥಳ ಮುತ್ತತ್ತಿಯಾಗಿದೆ. ಆಂಜನೇಯನು ಕಳೆದುಹೋಗಿದ್ದ ಸೀತೆಯ ಮೂಗಿನ ಮುತ್ತನ್ನು ಎತ್ತಿ ತಂದುಕೊಟ್ಟು

ಮುತ್ತತ್ತಿರಾಯನೆಂದು ನಾಮಾಂಕಿತನಾದರೆ ಆ ಸ್ಥಳ ಮುತ್ತತ್ತಿ ಎಂಬ ಹೆಸರಿನಿಂದ ವಿಖ್ಯಾತವಾಗಿ ರಮಣೀಯ ಪ್ರಕೃತಿ ಸೌಂದರ್ಯದಿಂದ ನೋಡುಗರ ಕಣ್ಣಿಗೆ ಹಬ್ಬ, ಮನಕ್ಕೆ ಮುದ, ಚಿತ್ತಕ್ಕೆ ಶಾಂತಿ, ಹೃದಯಕ್ಕೆ ಆಹ್ಲಾದವನ್ನುಂಟುಮಾಡುವ ಪವಿತ್ರ ಕ್ಷೇತ್ರವಾಗಿದೆ.

ಪುರಾಣಪ್ರಸಿದ್ಧವಾದ ಶ್ರೀ ಆಂಜನೇಯಸ್ವಾಮಿ ಜಾತ್ರೆಯು ಪ್ರತಿವರ್ಷವೂ ಆಗಸ್ಟ್ ತಿಂಗಳಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ.

ಮುತ್ತತ್ತಿರಾಯ - ೨

ಮುತ್ತತ್ತಿಯು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ಪುರಾಣ-ಇತಿಹಾಸಗಳ ಸ್ಪರ್ಶದಿಂದ ಕೂಡಿದ ಒಂದು ಯಾತ್ರಾಸ್ಥಳ. ಕಾವೇರಿ ನದಿಯ ದಡದಲ್ಲಿರುವ ಮುತ್ತತ್ತಿಯಲ್ಲಿ ಆಂಜನೇಯಸ್ವಾಮಿಯು ಮುತ್ತತ್ತಿರಾಯ ಎಂಬ ಹೆಸರಿನಿಂದ ಆರಾಧನೆಗೊಳ್ಳುತ್ತಿದ್ದಾನೆ. ಆಂಜನೇಯನಿಗೆ ಮುತ್ತತ್ತಿರಾಯ ಎಂದು ಹೆಸರು ಬರಲು ಕಾರಣವಾದ ಪ್ರಸಂಗವೇ ಈ ಕ್ಷೇತ್ರದ ಹೆಸರಿಗೂ ಕಾರಣವಾಗಿದೆ.

ತ್ರೇತಾಯುಗದ ಕಥೆ ಎಲ್ಲರಿಗೂ ತಿಳಿದದ್ದೆ. ಆದರೆ ಕಲಿಯುಗದ ೧೫ನೇ ಶತಮಾನದ ಧರೆಗೆ ದೊಡ್ಡೋರು ಮಂಟೇಸ್ವಾಮಿಯವರ ಶಿಷ್ಯ ಸಿದ್ದಪ್ಪಾಜಿ ಜೊತೆಯಲ್ಲಿ ಆಂಜನೇಯ ಸ್ವಾಮಿಯು ದಾಸಯ್ಯ (ಮುತ್ತೆತ್ತಿರಾಯ)ನಾಗಿ ಕಾಣಿಸಿಕೊಳ್ಳುತ್ತಾನೆ.

ರಾಮಾವತಾರದ ಉದ್ದೇಶ ಮುಗಿದ ಕೂಡಲೆ ರಾಮ-ಸೀತೆಯರು ವಿಷ್ಣು-ಲಕ್ಷ್ಮಿಯರಾಗಿ ವೈಕುಂಠವನ್ನು ಸೇರಿದರು. ಹನುಮಂತನು ಅವರೊಡನೆ ಹೋಗಿ ಅವರ ಸೇವೆ ಮಾಡಿಕೊಂಡು ಹಾಯಾಗಿದ್ದನು. ಎಷ್ಟೋ ವರ್ಷಗಳು ಕಳೆದ ಮೇಲೆ ಕಲಿಯುಗದ ಹೊತ್ತಿನಲ್ಲಿ ಹನುಮಂತನಿಗೆ ಭೂಲೋಕಕ್ಕೆ ಹೋಗಿ ರಾಮಸೀತೆಯರು ಸಂಚರಿಸಿದ ಸ್ಥಳಗಳನ್ನೆಲ್ಲ ಒಮ್ಮೆ ನೋಡಿ ಬರಬೇಕು ಎಂಬ ಬಯಕೆ ಉಂಟಾಯಿತು. ತನ್ನ ಈ ಬಯಕೆಯನ್ನು ಹನುಮಂತ ವಿಷ್ಣುವಿಗೆ ತಿಳಿಸಿದ. ಅದಕ್ಕೆ ವಿಷ್ಣು

'ಆಂಜನೇಯ, ಭೂಲೋಕಕ್ಕೆ ನೀನು ಹೋಗುವುದಾದರೆ ನನ್ನದೇನೂ ಅಡ್ಡಿಯಿಲ್ಲ, ಆದರೆ ನೀನು ಈ ರೂಪದಲ್ಲಿ ಹೋಗದೆ ಮನುಷ್ಯನ ರೂಪಿನಲ್ಲಿ ಹೋಗು' ಎಂದನು.

ವಿಷ್ಣು ಹೇಳಿದಂತೆ ಹನುಮಂತನು ಆಕಾಶದಲ್ಲಿ ಬರುತ್ತಿರುವಾಗ ಒಂದು ಕಡೆ ಆಕಾಶಕ್ಕೂ ಭೂಮಿಗೂ ಕೀಲು ಕೊಟ್ಟಂತೆ ಭುಗುಭುಗುಭುಗು ಎಂದು ಹೊಗೆಯೇಳುತ್ತಿತ್ತು. ಅದೇನಿರಬಹುದೆಂದು ನೋಡಲು ಬಂದಾಗ ಅದು ಕಬ್ಬಿಣದ

ಕುಲುಮೆಕಟ್ಟೆಯಿಂದ ಏಳುತ್ತಿರುವ ಹೊಗೆಯೆಂದು ತಿಳಿಯಿತು. ಅಲ್ಲದೆ ಅದು ಪಾಂಚಾಳರ ಹಲುಗೂರು ಮತ್ತು ಚಿಲ್ಲಾಪುರಗಳ ಕುಲುಮೆಕಟ್ಟೆಗಳು ಎಂದೂ ತಿಳಿಯಿತು. ಅಲ್ಲಿನ ಏಳುಜನ ಪಾಂಚಾಳರ ವೈಭವದ ಮನೆಗಳನ್ನು ಕಂಡು ಇಡೀ ಊರನ್ನೇ ನೋಡಬೇಕೆನಿಸಿ ಹನುಮಂತ ದಾಸಯ್ಯನ ವೇಷವನ್ನು ಧರಿಸಿದ. ಈತ ಊರ ದಿಡ್ಡಿಬಾಗಲಲ್ಲಿ ಬರದೆ ಆಕಾಶದಿಂದ ಊರಿನ ಕೇರಿಯೊಳಕ್ಕೆ ಇಳಿದ. ದಾಸಯ್ಯನ ಹೆಗಲಿನಲ್ಲಿ ಬೋನಾಸಿ, ಕೈಗಳಲ್ಲಿ ಶಂಖ ಜಾಗಟೆ, ಕಂಕುಳಲ್ಲಿ ಬಾನಕಿ ವಾದ್ಯವಿದ್ದು ಜಾಗಟೆ ಬಾರಿಸುತ್ತ ಶಂಖ ಊದುತ್ತ ಕೇರಿಕೇರಿಗಳಲ್ಲಿ ಭಿಕ್ಷ ಸಾರುತ್ತ ಅಲೆದಾಡಿದ.

ಆ ಕೂಡಲೆ ಏಳುಜನ ಪಾಂಚಾಳರೂ 'ನಮ್ಮ ಊರಿಗೆ ಯಾರೂ ಬರುವಂತಿಲ್ಲ; ಅಂತಹುದರಲ್ಲಿ ಈ ದಾಸಯ್ಯ ಹೇಗೆ ಬಂದ?' ಎಂದು ಆಶ್ಚರ್ಯದಿಂದ ಅವನನ್ನು ಹಿಡಿದು ಬಂಧಿಸಲು ಬಂದರು. ದಾಸಯ್ಯ ಅವರಿಂದ ತಪ್ಪಿಸಿಕೊಂಡು ದಿಡ್ಡಿಬಾಗಿಲು ಕಡೆಗೆ ಓಡೋಡಿ ಬಂದ. ಬಾಗಿಲ ಕಾವಲುಗಾರ್ತಿ ಅಂಕದ ಮಾರಿ ಓಡಿಬರುತ್ತಿರುವ ದಾಸಯ್ಯನನ್ನು ಕಂಡು ಬೆರಗಾದಳು. ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಪಾಂಚಾಳರು ಅವಳಿಗೆ ಛೀಮಾರಿ ಹಾಕಿದರು. ಇದರಿಂದ ರುದ್ರಕೋಪತಾಳಿದ ಅಂಕದಮಾರಿ ದಾಸಯ್ಯನನ್ನು ನುಂಗಿಬಿಡುವುದಾಗಿ ಅಟ್ಟಿಸಿಕೊಂಡು ಬಂದಳು. ತಪ್ಪಿಸಿಕೊಳ್ಳುವ ಭರದಲ್ಲಿ ದಾಸಯ್ಯನ ಶಂಖ, ಜಾಗಟೆ, ಬಾನಕಿ ಮತ್ತು ಬೋನಾಸಿಗಳು ಎಲ್ಲೆಲ್ಲೆ ಬಿದ್ದುಹೋದವೋ ಏನೋ.

ಆ ಸಮಯಕ್ಕೆ ಕಬ್ಬಿಣದ ಭಿಕ್ಷೆಗಾಗಿ ಬರುತ್ತಿದ್ದ ಮಂಟೇಸ್ವಾಮಿಯವರ ಶಿಷ್ಯ ಸಿದ್ದಪ್ಪಾಜಿ ಹೆದರಿ ಓಡುತ್ತಿದ್ದ ಹನುಮಂತ(ದಾಸಯ್ಯ)ನನ್ನು ತಡೆದ. ತನ್ನ ಜೊತೆಯಲ್ಲಿ ಹಲುಗೂರು ಚಿಲ್ಲಾಪುರಕ್ಕೆ ಕರೆದ. ಅದಕ್ಕೆ ಆಂಜನೇಯ ನನಗೆ ಹೆದರಿಕೆ ಎಂದ. ಹೆದರಿಕೆಗೆ ನನ್ನಲ್ಲೊಂದು ಔಷಧವುಂಟೆಂದು ಬಲವಂತವಾಗಿ ಭಂಗಿ ಸೇದಿಸಿದ. ತಲೆಸುತ್ತು ಬಂದ ಹನುಮಂತ 'ನಿನ್ನ ಸಾವಾಸ ನನಗೆ ಬೇಡಪ್ಪ' ಎಂದಾಗ ಸಿದ್ದಪ್ಪಾಜಿ 'ಮುತ್ತತ್ತಿರಾಯನಿಗೆ ತನ್ನ ಭಕ್ತರಿಂದ ಗುಡಿ ಕಟ್ಟಿಸಿಕೊಡುವುದಾಗಿಯೂ

'ಮಣೆಸ್ಯಾಮೆ ನಿನ್ನದಪ್ಪ
ನಮ್ಮ – ನೀಲಗಾರರೆಲ್ಲ
ದಾಸಯ್ನ ಯಾಸುದಲ್ಲಿ
ನಿನ್ಗೆ ಸ್ಯಾಮೆ ಸಲ್ಸುತಾರೆ
ಅದೂ ಅಲ್ಲದೆ ಅನುಮಣ್ಣ
ಚಿಕ್ಕಲ್ಲೂರಿನ ಒಳಗೆ
ನನ್ನ ಗುಡಿಯ ಹಿಂಭಾಗಕೆ

ನಿನ್ಗೆ – ಗುಡಿಯ ಕಟ್ಸಿ ಕೊಡುತೀನಿ
ಮುತ್ತೈದೆ ಸ್ಯಾಮೆ ಮಾಡ್ಸುತೀನಿ । ಸಿದ್ದಯ್ಯ ।
ಹರಿಸ್ಯಾಮೆ ಮಾಡ್ಸುದ್ರೆ ನಿನ್ಗೆ
ಒಪ್ಗೆ ಆದ್ದ ಅನುಮಣ್ಣ । ಸಿದ್ದಯ್ಯ ।

ನನ್ನ ಲಿಂಗಮಣಿ ಕಟ್ಟಿದ ನೀಲಗಾರರುಗಳಿಗೆ
ಮೂರ್ನಾಮ ಇಕ್ಕಿ
ಹಳ್ಳದ ಕರೆಯಿಂದಲೂ –

ಬ್ಯಾಟಮಣೆಯ ಸ್ಯೇಮೆ ನಿನಗೆ
ಮಾಡುಸ್ತೀನಿ ಮುತ್ತುರಾಯ । ಸಿದ್ದಯ್ಯ ।

ನೀಲಿ ಸಿದ್ದಪ್ಪಾಜಿ ಸ್ಯಾಮೆ ಅಂತ್ವೇಳಿ
ಮರಿ ಕುರಿ ಕೋಳಿಗಳ ತಂದು
ಬಲಿಕೊಟ್ಟು ನನಗಡುಗೆ ಮಾಡ್ತಾರಪ್ಪ
ಅಡುಗೆ ಮಾಡಿ ಎಡೆ ಪಡುಸ್ತಾರಪ್ಪ –

ಆ ಜಿನುಕೆ ಹರಿಸ್ಯಾಮೆ ಅಂತ ಕರ್ದು
ಈ ಸ್ಯಾಮೆ ನಿನಗೆ ಸಲ್ಲಲಪ್ಪ । ಸಿದ್ದಯ್ಯ ।

ಅವುರ್ಮಾಡಿದ ಮಾವ್ಸ ಮಡ್ಡಿಯೂಟ
ನಿನಗಾಗ್ಲಿ ಮುತ್ತುರಾಯ । ಸಿದ್ದಯ್ಯ ।

ಆ ಆನಂದದ ಭಂಗಿ ಊಳುಗೆ
ನನಗಾಗ್ಲಿ ಅಂದರಂತೆ । ಸಿದ್ದಯ್ಯ ।

ಇಷ್ಟೆಲ್ಲ ಆಮಿಷ ಒಡ್ಡಿದರೂ ಮುತ್ತುರಾಯಸ್ವಾಮಿ ಹಲುಗೂರು – ಚಿಲ್ಲಾಪುರಕ್ಕೆ ಬರಲು ಒಪ್ಪಲಿಲ್ಲ. ಆಗ ಅವನ ಬೋನಾಸಿ ಶಂಖ ಜಾಗಟೆ ಮತ್ತು ಗಂಟೆಗಳನ್ನೆಲ್ಲ ಅಂಕದ ಮಾರಿಯಿಂದ ಕೊಡಿಸಿದ. ಎಲ್ಲವನ್ನೂ ತೆಗೆದುಕೊಂಡ ಮುತ್ತರಾಯಸ್ವಾಮಿ ಮುತ್ತತ್ತಿಗೆ ಹೊರಟ.

ವಾಸ್ತವ ಸಂಗತಿಯೆಂದರೆ ಸೂಫಿ ಮೂಲದ ಮಂಟೇಸ್ವಾಮಿಯವರ ನೀಲಗಾರ ಧರ್ಮದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳು ಮೇಳೈಸಿವೆ. ರಾಚಪ್ಪಾಜಿಯವರ (ಕಲ್+ಪಡಿ)ಕಪ್ಪಡಿ ಸಿದ್ದಪ್ಪಾಜಿಯ ಚಿಕ್ಕಲುಗೂರು, ಮುತ್ತರಾಯಸ್ವಾಮಿಯ ಮುತ್ತತ್ತಿ ಜಾತ್ರೆಗಳಲ್ಲಿ ಮಾಂಸಾಹಾರ, ಮದ್ಯಸೇವನೆ, ಭಂಗಿಪಳಾರಗಳು ಕಡ್ಡಾಯವಾಗುತ್ತವೆ. ಈಗಲೂ ಮುತ್ತತ್ತಿರಾಯನ ಜಾತ್ರೆಯೆಂದರೆ ಅದು ಸಂಪೂರ್ಣ ನಾನ್‌ವೆಜ್ ಜಾತ್ರೆ. ಅಲ್ಲಿ ನೀಲಗಾರರು ದಾಸಯ್ಯನ ವೇಷದಲ್ಲಿ ಮುತ್ತುರಾಯನನ್ನು ಸಿದ್ದಪ್ಪಾಜಿ ಪರವಾಗಿ ಸಂತೃಪ್ತಿಪಡಿಸುತ್ತಾರೆ.

ಹನುಮಂತೇಶ್ವರ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ (ಟಿ. ನರಸೀಪುರ) ದಲ್ಲಿರುವ ಅಗಸ್ತ್ಯೇಶ್ವರ ದೇವಾಲಯದ ಮುಂದೆ ಪ್ರತಿಷ್ಠಾಪಿತವಾಗಿರುವ ಲಿಂಗವನ್ನು ಹನುಮಂತೇಶ್ವರಲಿಂಗ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಲಿಂಗವನ್ನು ಹನುಮಂತನು ಕಾಶಿಯಿಂದ ತಂದನೆಂದು ಪ್ರತೀತಿ.

ಹಿಂದೆ ತಿರುಮಕೂಡಲು ನರಸೀಪುರದ ಕಾವೇರಿ ತೀರದಲ್ಲಿ ಅಗಸ್ತ್ಯರು ಕೆಲಕಾಲ ತಂಗಿದ್ದರು. ಆ ಸಮಯದಲ್ಲಿ ಅವರು ಶಿವನನ್ನು ಆರಾಧಿಸಲು ಬಯಸಿದರು. ಅದಕ್ಕಾಗಿ ಸುಂದರವಾದ ಈ ಪವಿತ್ರ ಕ್ಷೇತ್ರದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಬೇಕೆಂದು ನಿರ್ಧರಿಸಿ ಇದಕ್ಕೆ ಬೇಕಿರುವ ಶಿವಲಿಂಗ ಕಾಶೀಕ್ಷೇತ್ರದಲ್ಲಿ ಮಾತ್ರ ಸಿಗುತ್ತದೆ' ಎಂದರು. ಆಗ ಅಲ್ಲಿದ್ದ ಹನುಮಂತನನ್ನು ನೋಡಿ,

'ಅಂಜನಾಸುತ, ನಾಳೆ ಬೆಳಿಗ್ಗೆ ಅಭಿಜಿನ್ ಮುಹೂರ್ತ ಮೀರಿ ಹೋಗುವುದರೊಳಗಾಗಿ ಲಿಂಗ ಪ್ರತಿಷ್ಠಾಪನೆ ಆಗಬೇಕಿದೆ. ಆದ್ದರಿಂದ ನೀನು ಈ ಕೂಡಲೆ ಕಾಶಿಗೆ ಹೋಗಿ ಶಿವಸಾಲಂಕೃತ ಘನಮಹಿಮೆಯ ಶಿವಲಿಂಗವನ್ನು ಶೀಘ್ರದಲ್ಲಿ ತರಬೇಕು. ಮುಹೂರ್ತ ಮೀರಿಹೋದರೆ ಶಿವಲಿಂಗದ ಮಹಿಮೆ ಕ್ಷಯಿಸಿಹೋಗುತ್ತದೆ. ಆದ್ದರಿಂದ ಬೇಗನೆ ಬಂದುಬಿಡು' ಎಂದು ಹೇಳಿ ಕಳಿಸಿಕೊಟ್ಟರು.

ವಾಯುಪುತ್ರ ಹನುಮಂತನು ಆಕಾಶಮಾರ್ಗದಲ್ಲಿ ವೇಗವಾಗಿ ಕ್ರಮಿಸಿ ಕಾಶಿಯನ್ನು ತಲುಪಿದನು. ಅವನು ಅಲ್ಲಿದ್ದ ಲಕ್ಷೋಪಲಕ್ಷ ಲಿಂಗಗಳಲ್ಲಿ ಶಿವಸಾಲಂಕೃತ ಘನಮಹಿಮೆಯ ಲಿಂಗ ಯಾವುದೆಂದು ತಿಳಿಯದೆ ಕಡೆಗೆ ವಿಶ್ವೇಶ್ವರ ಲಿಂಗವನ್ನು ಎತ್ತಿಕೊಂಡು ಹೋಗಲು ಭೂಮಿಯನ್ನು ಬಗೆಯತೊಡಗಿದನು.

ವಾಯುಪುತ್ರನ ವಿಪರೀತ ಬುದ್ಧಿಗೆ ಬೆದರಿದ ವಿಶ್ವನಾಥನು ಪ್ರತ್ಯಕ್ಷನಾಗಿ ಹನುಮಂತನಿಗೆ ಶಿವಸಾಲಂಕೃತ ಘನಮಹಿಮೆಯ ದಿವ್ಯಲಿಂಗವನ್ನು ಕರುಣಿಸಿದನು. ಇದರಿಂದ ಹರ್ಷಪುಲಕಿತನಾದ ಹನುಮಂತನು ವಿಶ್ವನಾಥ ಕೊಟ್ಟ ದಿವ್ಯಲಿಂಗವನ್ನು ಹೆಗಲಿಗೇರಿಸಿಕೊಂಡು ವಾಯುಮಾರ್ಗದಲ್ಲಿ ಹೊರಟನು.

ಇತ್ತ ಕಡೆ ಅಗಸ್ತ್ಯರು ಹನುಮಂತನ ದಾರಿಯನ್ನು ಕಾದು ಕಾದು ಬೇಸತ್ತು ಅಭಿಜಿನ್ ಮುಹೂರ್ತ ಮೀರಿಹೋಗುವುದೆಂದು ತವಕದಿಂದ ಮರಳಿನಲ್ಲಿ ಒಂದು ಲಿಂಗವನ್ನು ಮಾಡಿ ಮುಹೂರ್ತ ಮೀರುವ ಮುನ್ನವೇ ಪ್ರತಿಷ್ಠಾಪನೆ ಮಾಡಿಬಿಟ್ಟರು. ಅವರು ಪ್ರತಿಷ್ಠಾಪಿಸುವ ಹೊತ್ತಿಗೆ ಸರಿಯಾಗಿ ಆಂಜನೇಯನು ಆಕಾಶದಿಂದ ಕೆಳಕ್ಕಿಳಿದು 'ತಂದೆ ತಂದೆ ತಂದೆ' ಎಂದು ಕೂಗುತ್ತ ಓಡೋಡಿ ಬಂದನು. ಆದರೆ ಆ ವೇಳೆಗಾಗಲೆ ಅಗಸ್ತ್ಯರು ಸೈಕತಲಿಂಗವನ್ನು ಪ್ರತಿಷ್ಠಾಪಿಸಿಬಿಟ್ಟಿದ್ದರು. ಇದರಿಂದ ಹನುಮಂತನಿಗೆ ಮುಖಭಂಗವಾದಂತಾಯಿತು. ಅವನು ಕಡುಗೋಪದಿಂದ

ಅಗಸ್ತ್ಯರು ಪ್ರತಿಷ್ಠಾಪಿಸಿದ್ದ ಶಿವಲಿಂಗದ ತಲೆಯ ಮೇಲೆ ಬಲವಾಗಿ ಗುದ್ದಿದ. ಲಿಂಗದ ತಲೆಯ ಮೇಲೆ ಒಂದು ಹಳ್ಳವಾಯಿತು ! ಹನುಮಂತನ ರುದ್ರಭೀಕರ ಕೋಪವನ್ನು ಕಂಡ ಅಗಸ್ತ್ಯರಾದಿಯಾಗಿ ಎಲ್ಲರೂ ಅವನನ್ನು ಸಮಾಧಾನಪಡಿಸುತ್ತ ಹನುಮಂತ ತಂದಿದ್ದ ಘನಮಹಿಮೆಯ ಶಿವಲಿಂಗವನ್ನು ದೇವಾಲಯದ ಮುಂಭಾಗದಲ್ಲಿ ಪ್ರತಿಷ್ಠಾಪಿಸಿ ಅದನ್ನು ಹನುಮಂತೇಶ್ವರ ಎಂದು ಕರೆದರು.

ಅಷ್ಟು ಮಾತ್ರವಲ್ಲ "ಅಗಸ್ತ್ಯೇಶ್ವರ ಲಿಂಗವನ್ನು ದರ್ಶನ ಮಾಡಲು ಬಂದವರು ಮೊದಲು ಹನುಮಂತೇಶ್ವರ ಲಿಂಗವನ್ನು ದರ್ಶನ ಮಾಡಿ ಅನಂತರ ಅಗಸ್ತ್ಯೇಶ್ವರ ಲಿಂಗ ದರ್ಶನ ಪಡೆಯಲಿ. ಇಲ್ಲದಿದ್ದಲ್ಲಿ ಅವರ ಪೂಜೆಯ ಫಲ ನಿಷ್ಫಲವಾಗಲಿ" ಎಂದು ಹರಸಿದರು.

ಅಂದಿನಿಂದ ಇಂದಿನವರೆಗೂ ಮೊದಲ ಪೂಜೆ ಹನುಮಂತೇಶ್ವರನಿಗೆ ಸಲ್ಲುತ್ತಿದೆ. ಮತ್ತೊಂದು ವಿಶೇಷವೆಂದರೆ ಆಂಜನೇಯ ಗುದ್ದಿದ ಅಗಸ್ತ್ಯೇಶ್ವರ ಲಿಂಗದಲ್ಲಿ ಉಂಟಾದ ಹಳ್ಳದಲ್ಲಿ ಯಾವಾಗಲೂ ತೀರ್ಥ ತುಂಬಿಕೊಂಡಿರುತ್ತದೆ. ಆದರೆ ಅದು ಲಿಂಗದ ಮೇಲೆ ಸುರಿಯುವುದಿಲ್ಲ. ಬಂದ ಭಕ್ತಾದಿಗಳಿಗೆಲ್ಲ ಈ ಜಲವನ್ನೇ ತೀರ್ಥವನ್ನಾಗಿ ನೀಡುತ್ತಾರೆ.

ಲಿಂಗದ ತಲೆಯ ಮೇಲಿರುವ ಹಳ್ಳ ಯಾವಾಗಲೂ ತೀರ್ಥದಿಂದ ತುಂಬಿರುತ್ತದೆ. ಎಷ್ಟೇ ತೀರ್ಥವನ್ನು ತೆಗೆದುಕೊಂಡರೂ ಅದು ಮೊದಲಿನಂತೆ ತುಂಬಿಕೊಂಡಿರುತ್ತದೆ. ಇದೊಂದು ಪವಾಡ ಸದೃಶ ಚಮತ್ಕಾರ !

ತಾಳ್ಯ

ತಾಳ್ಯ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಮತ್ತಿತಿಮ್ಮಣ್ಣನಾಯಕನಿಂದ ಹಿಡಿದು ಕೊನೆಯ ಪಾಳೇಗಾರ ಮದಕರಿನಾಯಕನವರೆಗೆ ಈ ಪ್ರಾಂತ್ಯವನ್ನು ಜರ್ಬಿನಿಂದ ಆಳಿದರು ಎಂಬುದು ಇತಿಹಾಸ. ಆದರೆ ತಾಳ್ಯಕ್ಕೆ ಖ್ಯಾತಿ ಬಂದಿರುವುದು ಅಲ್ಲಿನ ಸತ್ಯದ ದೇವರೆಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಆಂಜನೇಯಸ್ವಾಮಿ ಗುಡಿಯಿಂದ. ವೈಷ್ಣವ ಸಂಪ್ರದಾಯದ ಆಂಜನೇಯಸ್ವಾಮಿಯನ್ನು ಈ ದೇವಾಲಯದಲ್ಲಿ ಪೂಜಿಸುವ ಅರ್ಚಕರು ಲಿಂಗಾಯಿತ ಸಮುದಾಯದವರೆಂಬುದೂ ಒಂದು ವಿಶೇಷ.

ಇಲ್ಲಿನ ವೀರಾಂಜನೇಯಸ್ವಾಮಿ ಸುಮಾರು ೧೦ ಅಡಿ ಎತ್ತರವಿದ್ದು ಅಭಯ ಮುದ್ರೆಯಲ್ಲಿ ಬಲಗೈಯನ್ನು ಎತ್ತಿಹಿಡಿದಿದ್ದಾನೆ. ಎಡಗೈ ಸೊಂಟದ ಮೇಲೆ ಹಗುರವಾಗಿ ಕೂತಿದೆ. ಮುಖ ಪೂರ್ವದಿಕ್ಕಿನ ಕಡೆಗಿದೆ. ಮುಖದಲ್ಲಿ ಗಾಂಭೀರ್ಯ, ಶಕ್ತಿ ಒಂದಕ್ಕೊಂದು ಹೆಣೆದುಕೊಂಡು ಪ್ರತಿಮೆಗೆ ಒಂದು ಅಪೂರ್ವ ಸೊಬಗನ್ನು ಕೊಟ್ಟಿದೆ. ಬಾಲವು ತಲೆಯ ಮೇಲೆ ಸುತ್ತುವರೆದು ಪೂರ್ವಾಭಿಮುಖವಾಗಿದೆ.

ಶ್ರೀ ವೀರಾಂಜನೇಯಸ್ವಾಮಿಯ ಮಹಿಮಾತಿಶಯಗಳನ್ನು ಹಾಡಿ ಹೊಗಳುವ ಸುತ್ತಮುತ್ತಣ ಗ್ರಾಮದವರೆಲ್ಲ ಸೇರಿ ಭಯಭಕ್ತಿಗಳಿಂದ ವರ್ಷಂಪ್ರತಿ ಜಾತ್ರೆ, ಉತ್ಸವಗಳನ್ನು ನಡೆಸುತ್ತಾರೆ.

ತಾಳ್ಯದ ಶ್ರಿ ವೀರಾಂಜನೇಯಸ್ವಾಮಿಯೆಂದೇ ಪ್ರಖ್ಯಾತವಾಗಿರುವ ಈ ಹೆಸರಿನ ಹಿಂದಿನ 'ತಾಳ್ಯ' ಎಂದರೇನೆಂಬುದಕ್ಕೆ ತಾಳ್ಯದ ಎಂ. ಅಹಲ್ಯ ಅವರು ಒಂದು ಪ್ರಸಂಗವನ್ನು ಹೇಳುತ್ತಾರೆ. ಅದೆಂದರೆ –

ಬಹಳ ಹಿಂದೆ ಮಳೆ ಇಲ್ಲದೆ ಕೆರೆ ಬತ್ತಿಹೋಯ್ತಂತೆ. ಕುಡಿಯುವುದಕ್ಕೂ ಸಹ ನೀರು ಇಲ್ಲದಂತಾಯಿತು. ಬೆಳೆಗಳು ಒಣಗಿಹೋದವು. ದನಕರುಗಳು ಸತ್ತವು. ಇಂಥ ಬರದ ಬೇಗೆಯನ್ನು ತಾಳಲಾರದೆ ಊರವರೆಲ್ಲ ಶ್ರೀ ವೀರಾಂಜನೇಯಸ್ವಾಮಿಗೆ ಅರ್ಚನೆ ಮಾಡಿ

'ಏನಪ್ಪ ಸ್ವಾಮಿ, ನಮ್ಮನ್ನು ಕೈಬಿಟ್ಟೆಯ? ಹೀಗೆ ನಿರ್ದಯನಾಗುವುದು ತರವೆ? ಈ ಕೋಪ ಬೇಡ ಸ್ವಾಮಿ. ದಯೆತೋರು' ಎಂದು ಬೇಡಿಕೊಂಡರು.

ಆ ರಾತ್ರಿ ಪಟೇಲರ ಕನಸಿನಲ್ಲಿ ಒಬ್ಬ ವೃದ್ಧ ಕಾಣಿಸಿಕೊಂಡು 'ನಿಮ್ಮ ಕಷ್ಟವನ್ನು ನೀವು ತೋಡಿಕೊಂಡಿದ್ದೀರಿ. ಆ ವೇದನೆ ನಮಗೆ ಮುಟ್ಟಿದೆ. ಇರಲಿ. ತಾಳ್ಯಾನು ಬಾಳ್ಯಾನು' ಎಂದು ಹೇಳಿ ಮರೆಯಾದ.

ಕನಸನ್ನು ಕಂಡ ಪಟೇಲರು ಥಟ್ಟನೆ ಮೇಲೆದ್ದು ಶ್ರೀ ವೀರಾಂಜನೇಯ ಸ್ವಾಮಿಯನ್ನು ಸ್ಮರಿಸುತ್ತ ತಾವು ಕಂಡ ಕನಸಿನ ವಿಷಯವನ್ನು ಊರವರಿಗೆಲ್ಲ ತಿಳಿಸಿದರು. ಸ್ವಾಮಿಯ ಕೃಪೆಯೆಂಬಂತೆ ಮಾರನೇ ದಿನವೇ ಆಕಾಶದ ತುಂಬ ಕಾರ್ಮೋಡಗಳು ಕವಿದು ಭಾರಿ ಮಳೆ ಸುರಿದು ಕೆರೆ ತುಂಬಿ ಹರಿಯಿತು. ಅಂದಿನಿಂದ ಕನಸಿನಲ್ಲಿ ವೃದ್ಧ ಹೇಳಿದ ತಾಳ್ಯಾನು ಎಂಬ ಪದದ ಮೊದಲ ಎರಡಕ್ಷರಗಳಿಂದ ಊರಿಗೆ ತಾಳ್ಯ ಎಂದು ಹೆಸರಾಯಿತು. ತಾಳ್ಯ ಚಿತ್ರದುರ್ಗದಿಂದ ಜಾನಕಲ್ ಮೂಲಕ ಹೊಸದುರ್ಗಕ್ಕೆ ಹೋಗುವ ಮಾರ್ಗದಲ್ಲಿದೆ.

ದಸರೀಘಟ್ಟದ ತೋಪಿನ ಆಂಜನೇಯ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ದಸರೀಘಟ್ಟದ ತೋಪಿನಲ್ಲಿ ಒಂದು ಆಂಜನೇಯಸ್ವಾಮಿ ವಿಗ್ರಹವಿದೆ. ಈ ಆಂಜನೇಯ ಸ್ವಾಮಿ ಇಲ್ಲಿಗೆ ಹೇಗೆ ಬಂದಿತು ಎಂಬುದಕ್ಕೆ ಒಂದು ಪುರಾಣ ಕಥೆ ನಮ್ಮ ಜನಪದರಲ್ಲಿದೆ.

ಉತ್ತರ ದೇಶಕ್ಕೆ ವ್ಯಾಪಾರಕ್ಕೆಂದು ಹೋಗಿದ್ದವರು ಬರುವ ದಾರಿಯಲ್ಲಿ ಒಂದೆಡೆ ತಂಗಿದ್ದರು. ಅಲ್ಲಿ ಒಂದು ಮೆಳೆಯ ಮರೆಯಲ್ಲಿದ್ದ ಆಂಜನೇಯಸ್ವಾಮಿ 'ನಾನು ಬರ್ತೀನಿ' 'ನಾನು ಬರ್ತೀನಿ' ಎಂದನಂತೆ. ಈ ಶಬ್ದವನ್ನು ಕೇಳಿದ

ವ್ಯಾಪಾರಿಗಳು 'ಇದೇನಿರಬಹುದು?' ಎಂದು ಭಯ ಆಶ್ಚರ್ಯ ಕುತೂಹಲಗಳಿಂದ ಮೆಳೆಯ ಪಕ್ಕದಲ್ಲಿ ನೋಡಿದಾಗ ಅಲ್ಲಿ ಆಂಜನೇಯಸ್ವಾಮಿಯ ವಿಗ್ರಹವಿರುವುದು ಕಂಡಿತು. ಆಗ ವ್ಯಾಪಾರಿಗಳೆಲ್ಲ ಮಾತಾಡಿಕೊಂಡು ಅ ವಿಗ್ರಹವನ್ನು ತಮ್ಮ ಹೇರಿನ ಜೊತೆಯಲ್ಲಿ ಹೊತ್ತು ತಂದರು.

ವ್ಯಾಪಾರಿಗಳು ತಮ್ಮ ಹೇರಿನೊಡನೆ ಆಂಜನೇಯಸ್ವಾಮಿ ವಿಗ್ರಹವನ್ನು ತೆಗೆದುಕೊಂಡು ದಸರೀಘಟ್ಟದ ತೋಪಿಗೆ ಬಂದಾಗ ವಿಗ್ರಹದ ತೂಕ ಹೆಚ್ಚಿತು. ಇದು ಅತ್ಯಂತ ಭಾರವಾಗಿದೆಯೆಂದು ಭಾವಿಸಿದ ವ್ಯಾಪಾರಿಗಳು ಅದನ್ನು ಕೆಳಕ್ಕಿಳಿಸಿದರು. ಇಳಿಸಿದ ವಿಗ್ರಹವನ್ನು ಮೇಲೆತ್ತಲು ಎಷ್ಟೆ ಹರಸಾಹಸ ಮಾಡಿದರೂ ಅದನ್ನು ಮೇಲೆತ್ತಲು ಸಾಧ್ಯವಾಗಲೇ ಇಲ್ಲ. ಹೀಗಾಗಿ ಆಂಜನೇಯ ದಸರೀಘಟ್ಟದ ತೋಪಿನಲ್ಲೆ ಉಳಿದ. ದಸರೀಘಟ್ಟದ ಈ ತೋಪಿನ ಆಂಜನೇಯ ಸುತ್ತಮುತ್ತಲ ಗ್ರಾಮದ ಜನರ ಅಭೀಷ್ಟಗಳನ್ನು ಈಡೇರಿಸುತ್ತ ಪ್ರಖ್ಯಾತನಾದನು. ಈ ತೋಪಿನಾಂಜನೇಯನ ಪೂಜೆಗೆ ಪ್ರತಿ ಸೋಮವಾರವೂ ಜನರು ಕಿಕ್ಕಿರಿಯುತ್ತಾರೆ.

ಹೊಸಹೊಳಲಿನ ಆಂಜನೇಯಸ್ವಾಮಿ

ಹೊಯ್ಸಳರ ಕಾಲದ ಕಲಾವೈಭವವನ್ನು ಹೊತ್ತು ನಿಂತಿರುವ ಹೊಸ ಹೊಳಲು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿದೆ.

ಹಿಂದೆ ಈ ಭಾಗದ ಪಾಳೆಯಗಾರನಾಗಿದ್ದ ನರಸನಾಯಕನೆಂಬವನು ಹೊಸಹೊಳಲಿನ ನಿರ್ಮಾತೃವಂತೆ. ಅವನು ಆಂಜನೇಯಸ್ವಾಮಿಯ ಪರಮಭಕ್ತ. ಆ ಕಾರಣದಿಂದ ಇಲ್ಲಿ ಆಂಜನೇಯಸ್ವಾಮಿಯ ದೇವಾಲಯವನ್ನು ಕಟ್ಟಿಸಿ ಸಂತೃಪ್ತಗೊಂಡನು. ಆದರೆ ಕಾರಣಾಂತರಗಳಿಂದ ಗರುಡಗಂಬ ಸ್ಥಾಪನೆಯೂ ಆಗಿರಲಿಲ್ಲ. ದೇವಾಲಯದ ಲೋಕಾರ್ಪಣೆಯೂ ಆಗಿರಲಿಲ್ಲ. ದೇವಾಲಯದ ಕಾರ್ಯ ಪೂರ್ಣಗೊಳ್ಳಬೇಕೆಂದರೆ ಗರುಡಗಂಬ ಸಿದ್ಧವಾಗಬೇಕು. ಗರುಡಗಂಬವಿಲ್ಲದೆ ದೇವಾಲಯದ ಲೋಕಾರ್ಪಣೆ ಕಾರ್ಯ ನಡೆಯುವಂತಿರಲಿಲ್ಲ. ಶಿಲ್ಪಿಗಳು ಸುಲಭವಾಗಿ ಸಿಗದೆ ಕೆಲಸ ಅಪೂರ್ಣವಾದಂತಾಗಿತ್ತು. ಏಕೆ ಹೀಗೆ ಮುಂದೂಡಲ್ಪಡುತ್ತಿದೆ ಎಂದು ಯೋಚಿಸುತ್ತ ಮಲಗಿರುವಾಗ ನರಸನಾಯಕನಿಗೊಂದು ಕನಸು ಬಿತ್ತು. ಆ ಕನಸಿನಲ್ಲಿ ಸಾಧುವೊಬ್ಬ ಕಾಣಿಸಿಕೊಂಡು

'ನಾಯಕ, ಆಂಜನೇಯ ದೇವಸ್ಥಾನವೇನೋ ಸಿದ್ಧವಾಗಿದೆ. ದೇವಾಲಯದ ಮುಂದೆ ಗರುಡಗಂಬವಿಲ್ಲದೆ ಕೆಲಸ ಅಪೂರ್ಣವಾಗಿದೆ. ಅದಕ್ಕಾಗಿ ನೀನು ಚಿಂತಿಸಬೇಡ. ನಾಳೆ ಬೆಳಿಗ್ಗೆಯ ಹೊತ್ತಿಗೆ ಶಿಲ್ಪಿಗಳು ನಿನ್ನ ಮನೆ ಮುಂದಿರುತ್ತಾರೆ. ಆದಷ್ಟು ಬೇಗ ಗರುಡಗಂಬ ಸ್ಥಾಪಿಸಲು ಪ್ರಯತ್ನಿಸು. ನಿನಗೆ ಇದರಿಂದ ಒಳ್ಳೆಯದಾಗುತ್ತದೆ ಧನಲಾಭವಾಗುತ್ತದೆ. ಶಾಶ್ವತವಾಗಿ

ನಿನ್ನ ಹೆಸರು ನಿಲ್ಲುತ್ತದೆ. ನೀನು ಕೀರ್ತಿಶಾಲಿಯಾಗುತ್ತೀಯೆ!' ಎಂದು ಹರಸಿ ಅದೃಶ್ಯನಾದಂತಾಯಿತು.

ಥಟ್ಟನೆ ಎಚ್ಚರಗೊಂಡ ನರಸನಾಯಕನು ಕಂಡ ಕನಸನ್ನು ನೆನೆಯುತ್ತ ನೆನೆಯುತ್ತ ಮನೆಯ ಮುಂದೆ ಬಂದು ನೋಡಿದರೆ ತಮ್ಮ ತಮ್ಮ ಊರುಗಳಿಗೆ ಹೋಗಿದ್ದ ಶಿಲ್ಪಿಗಳು ಬಂದು ನಿಂತಿದ್ದರು. ಆ ದಿನವೇ ದೇವಾಲಯದ ಮುಂದೆ ಗರುಡಗಂಬ ಸ್ಥಾಪನೆಗೆ ನೆಲವನ್ನು ಅಗೆಯುತ್ತಿರುವಾಗ ಆ ಸ್ಥಳದಲ್ಲಿ ಥಳಥಳಿಸುವ ಹೊಳಪಿನ ಹರಳುಗಳಿರುವ ಕುಂಭವೊಂದು ಕಾಣಿಸಿತು. ಈ ಬೆಲೆಬಾಳುವ ಹರಳುಗಳಿಂದ ಗರುಡಗಂಬದ ಸ್ಥಾಪನೆಗೆ ಬೇಕಾದ ಹಣ ದೊರೆತಂತಾಯಿತು. ಹೀಗೆ ಆಂಜನೇಯಸ್ವಾಮಿಯ ಕೃಪೆಗೆ ಪಾತ್ರನಾದ ನರಸನಾಯಕನು ಗರುಡಗಂಬವನ್ನು ಸ್ಥಾಪನೆ ಮಾಡಿ ಹರ್ಷಚಿತ್ತದಿಂದ ದೇವಾಲಯವನ್ನು ಲೋಕಾರ್ಪಣೆ ಮಾಡಿದನು.

ನರಸನಾಯಕನಿಗೆ ಹೊಳಪಿನ ಹರಳುಗಳು ಸಿಕ್ಕಿದ್ದರಿಂದ ಆ ಊರಿಗೆ ಹೊಸನಗರವೆಂತಲೋ ಹೊಸಪಟ್ಟಣವೆಂತಲೋ ನಾಮಾಂಕಿತವಾಗುವುದಕ್ಕೆ ಬದಲಾಗಿ 'ಹೊಸಹರಳು' ಎಂದು ಕರೆದರಂತೆ. ಹೊಸಹರಳು ಗ್ರಾಮ ಜನರ ಬಾಯಲ್ಲಿ 'ಹೊಸೂರಳು' ಆಯಿತು. ಅನಂತರದಲ್ಲಿ ಹೊಸಹೊಳಲಾಗಿದೆ. ಆದರೆ ಶಾಸನಗಳಲ್ಲಿ ಈ ಊರನ್ನು 'ಅನಾದಿ ಅಗ್ರಹಾರ ರಾಯಪುರ' ಎಂದು ಕರೆಯಲಾಗಿದೆ.

ಋಷ್ಯಶೃಂಗ ಪರ್ವತ (ಸೀಗೆಗುಡ್ಡ)

ಹಾಸನ ತಾಲ್ಲೂಕಿನ ಸಾಲಗಾಮೆ ಗ್ರಾಮದ ಒತ್ತಿಯಲ್ಲಿ ಒಂದು ಗುಡ್ಡವಿದೆ. ಇದನ್ನು ಆ ಗ್ರಾಮದವರು ಸೀಗೆಗುಡ್ಡ ಎಂದು ಕರೆಯುವುದಲ್ಲದೆ ಶಿಷ್ಟವರ್ಗದವರು ಋಷ್ಯಶೃಂಗಪರ್ವತ ಎಂದು ಕರೆಯುತ್ತಾರೆ. ಈ ಗುಡ್ಡದಲ್ಲಿ ಮಳೇಮಲ್ಲೇಶ್ವರ, ದೇವೀರಮ್ಮ ಮತ್ತು ವೆಂಕಟರಮಣಸ್ವಾಮಿ ದೇಗುಲಗಳಿವೆ. ಸಾಲಗಾಮೆ ಸುತ್ತಮುತ್ತಲ ೧೩೩ ಹಳ್ಳಿಗಳ ಜನರುಗಳು ಸೇರಿ ೧೨ ವರ್ಷಕ್ಕೊಂದು ಸಲ ಇಲ್ಲಿ ಜಾತ್ರಾ ಮಹೋತ್ಸವವನ್ನು ನಡೆಸುತ್ತಾರೆ.

ಸಾಮಾನ್ಯವಾಗಿ ಬರಗಾಲ ಬಂದಾಗ ಮಳೆಯನ್ನು ಕರೆಯಲು ಸುತ್ತಮುತ್ತಲ ಹಳ್ಳಿಗಳ ಜನರು ಸೇರಿ ಮಳೆ ಬಿದ್ದು ಸಮೃದ್ಧ ಬೆಳೆ ಬೆಳೆಯುವಂತಾಗಲೆಂದು ಪ್ರಾರ್ಥಿಸಲು ಇಲ್ಲಿಗೆ ಬರುತ್ತಾರೆ. ಭಕ್ತಕೋಟಿ ಸೋಮವಾರದಂದು ಬರಿಗಾಲಿನಲ್ಲಿ ಬೆಟ್ಟವೇರಿ ಬೆಟ್ಟದ ತುದಿಯಲ್ಲಿರುವ ವೆಂಕಟರಮಣಸ್ವಾಮಿ ದೇವರಿಗೆ ೧೦೧ ಎಡೆಯಿಟ್ಟು ಪೂಜೆ ಸಲ್ಲಿಸುತ್ತಾರೆ. ಅಲ್ಲದೆ ಋಷ್ಯಶೃಂಗ ಮಹಾಮುನಿಗೆ ರುದ್ರಾಭಿಷೇಕ, ಸಹಸ್ರನಾಮಾರ್ಚನೆ ನಡೆಯುತ್ತದೆ.

ಈ ಋಷ್ಯಶೃಂಗ ಮುನಿಯು ರಾಮಾಯಣದ ಕಾಲದವನು. ಇವನು ಹೋದಲ್ಲೆಲ್ಲ ಮಳೆಯಾಗಿ ಸಮೃದ್ಧ ಬೆಳೆ ಉಂಟಾಗುತ್ತಿತ್ತಂತೆ. ಅವನು ಈ ಸೀಗೆ ಗುಡ್ಡಕ್ಕೆ ಭೇಟಿ ನೀಡಿದಾಗ ಸುವೃಷ್ಟಿಯಾಗಿ ಜನರ ಸಂತುಷ್ಟಿಗೆ ಕಾರಣವಾಯಿತಂತೆ. ಈಗಲೂ ಜನರು ಈ ಋಷಿಯನ್ನು ಅರ್ಚಿಸುವುದರಿಂದ ಮಳೆ ಬಂದು ಬರ ಮರೆಯಾಗುತ್ತದೆ ಎಂದು ನಂಬುತ್ತಾರೆ.

೧೯೩೮ರಲ್ಲಿ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಸಹಸ್ರನಾಮ, ಜಪ, ರುದ್ರಾಭಿಷೇಕ ೧೦೧ ಎಡೆ ಸೇವೆ ನಡೆಸಿದರಂತೆ. ಇದರಿಂದಾಗಿ ನಾಡಿಗೆ ಒದಗಿದ್ದ ಸಂಕಷ್ಟ ನಿವಾರಣೆಯಾಗಿ ಜನರು ಸಂತೃಪ್ತರಾದರಂತೆ. ಆದ್ದರಿಂದ ೧೯೩೮ರಲ್ಲಿ ಪ್ರಾರಂಭವಾದ ಈ ಪೂಜೆ ೧೯೫೦, ೫೧-೫೨, ೫೬, ೭೫, ೯೨, ೯೮, ೨೦೦೩ ಮತ್ತು ೨೦೧೫ರ ಅನಂತರವೂ ನಡೆದುಕೊಂಡು ಬರುತ್ತಿದೆ.

ಸೂಳೇಕೋಟೆ ಆಂಜನೇಯ

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಸೂಳೇಕೋಟೆಯ ಜನರು ಎಂದೋ ಒಮ್ಮೆ ಬೇಟೆಗೆ ಹೋಗಿದ್ದರು. ಆ ಸಮಯದಲ್ಲಿ ತಾವು ತೆಗೆದುಕೊಂಡು ಹೋಗಿದ್ದ ಬಲೆ ಕಡಿಕತ್ತಿ ಕೋವಿಗಳನ್ನೆಲ್ಲ ಒಂದು ಕಲ್ಲಿನ ಮೇಲೆ ಇಟ್ಟು ಸ್ವಲ್ಪ ಹೊತ್ತು ಕುಳಿತು ವಿಶ್ರಾಂತಿ ತೆಗೆದುಕೊಂಡರು. ಅನಂತರ ತಮ್ಮ ಆಯುಧಗಳನ್ನು ತೆಗೆದುಕೊಳ್ಳುವಾಗ ಆ ಕಲ್ಲನ್ನು ಮುಟ್ಟಿ ಬೇಟೆಗೆ ಹೋದರು. ಆ ದಿನ ಅದ್ಭುತವಾದ ರೀತಿಯಲ್ಲಿ ಬೇಟೆಯಾಯಿತು.

ಮತ್ತೊಂದು ದಿನ ಬೇಟೆಗೆ ಹೋಗಿದ್ದಾಗಲೂ ಆ ಕಲ್ಲಿನ ಮೇಲೆ ತಮ್ಮ ಆಯುಧಗಳನ್ನು ಇಟ್ಟು ದೇವರಿಗೆ ಪ್ರಾರ್ಥನೆ ಸಲ್ಲಿಸಿ ಬೇಟೆಗೆ ಹೋದರು. ಈ ದಿನವೂ ಬೇಟೆ ತೃಪ್ತಿಕರವಾಗಿತ್ತು. ಆಗ ಅವರಿಗೆ ಆಶ್ಚರ್ಯವಾಗಿ ಈ ಕಲ್ಲಿನಲ್ಲಿ ಏನೋ ಹಿರಿಮೆ ಇದೆ ಎಂದು ಆ ಕಲ್ಲನ್ನು ಮೇಲೆತ್ತಿ ತಿರುಗಿಸಿದಾಗ ಅದು ಆಂಜನೇಯನ ವಿಗ್ರಹವಾಗಿತ್ತು.

ಸೂಳೇಕೋಟೆಯ ಆ ಬೇಟೆಗಾರರು ಆಂಜನೇಯನ ವಿಗ್ರಹವನ್ನು ತಮ್ಮ ಊರಿಗೆ ತಂದು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿ ಭಕ್ತಿಯಿಂದ ಅರ್ಚಿಸಿದರು. ಅಂದಿನಿಂದ ಸೂಳೇಕೋಟೆ ಆಂಜನೇಯನಿಗೆ ಪ್ರತಿನಿತ್ಯ ಪೂಜೆ ನಡೆಯುತ್ತಿದೆ. ಹಬ್ಬಹರಿದಿನಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ವರ್ಷಕ್ಕೊಂದಾವರ್ತಿ ಜಾತ್ರೆಯೂ ನಡೆಯುತ್ತದೆ.

ಮುತ್ತುರಾಯಸ್ವಾಮಿ ಹೋತ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಮುತ್ತುರಾಯನ ಹೊಸಳ್ಳಿ ಗ್ರಾಮದ ಪೂರ್ವಕ್ಕೆ ಒಂದು ಮೈಲಿ ದೂರದಲ್ಲಿ ಮುತ್ತುರಾಯಸ್ವಾಮಿ ಬೆಟ್ಟವಿದೆ.

ಮುತ್ತುರಾಯಸ್ವಾಮಿಗಾಗಿ, ಮುತ್ತುರಾಯನ ಹೊಸಳ್ಳಿಯ ಭಕ್ತರೆಲ್ಲ ಸೇರಿ ಹರಕೆಯಾಗಿ ಒಂದು ಹೋತವನ್ನು ಬಿಟ್ಟಿದ್ದರು. ಇದು ದೇವರಿಗಾಗಿ ಬಿಟ್ಟಿದ್ದ ಹೋತವಾದ್ದರಿಂದ ಎಲ್ಲರ ಹೊಲಗದ್ದೆಗಳಲ್ಲೆಲ್ಲ ಓಡಾಡಿಕೊಂಡು ಇಷ್ಟ ಬಂದುದನ್ನು ತಿಂದು ಚೆನ್ನಾಗಿ ಕೊಬ್ಬಿತ್ತು.

ಕಳ್ಳರ ಗುಂಪೊಂದು ಆ ರಾತ್ರಿ ಮುತ್ತುರಾಯನ ಹೊಸಳ್ಳಿ ದಾರಿಯಲ್ಲಿ ಬರುತ್ತಿತ್ತು. ಎಲ್ಲರೂ ಬಹುವಾಗಿ ಹಸಿದಿದ್ದರು. ಎಲ್ಲಾದರೂ ಅಡಿಗೆ ಮಾಡಿಕೊಳ್ಳೋಣವೆಂದು ಅಕ್ಕಿ ಉಪ್ಪು ಖಾರ ಹುಳಿಯನ್ನೆಲ್ಲ ಒಬ್ಬನ ಕೈಯಲ್ಲಿ ಹೊರಿಸಿಕೊಂಡು ತರುತ್ತಿದ್ದರು. ಹೀಗೆ ಬರುತ್ತಿರುವಾಗ ಊರ ಹೊರಗಿದ್ದ ಗ್ರಾಮದೇವತೆಯ ಗುಡಿ ಜಗಲಿಯ ಮೇಲೆ ಈ ದೇವರ ಹೋತ ಮಲಗಿತ್ತು. ಇದನ್ನು ನೋಡಿದ ಕಳ್ಳರಲ್ಲೊಬ್ಬನಿಗೆ ಈ ಹೋತವನ್ನು ತೆಗೆದುಕೊಂಡು ಹೋಗಿ ಎಲ್ಲಾದರೂ ಕತ್ತರಿಸಿ ಅಡಿಗೆ ಮಾಡಿಕೊಳ್ಳಬಹುದೆಂದು ಸೂಚಿಸಿದ. ಅದು ಎಲ್ಲರಿಗೂ ಸರಿ ಎನಿಸಿತು. ಸರಿ ಎಲ್ಲರೂ ಸೇರಿ ಆ ಹೋತವನ್ನು ಹೊತ್ತುಕೊಂಡು ಹೊರಟರು.

ಬೆಳಕಾದಾಗ ತಾವು ಯಾರ ಕಣ್ಣಿಗೂ ಬೀಳಬಾರದೆಂದು ಎಲ್ಲರೂ ಹತ್ತಿರದಲ್ಲಿದ್ದ ಮುತ್ತುರಾಯನ ಬೆಟ್ಟವನ್ನು ಹತ್ತಿದರು. ಮೊದಲು ಹೋತವನ್ನು ಕಡಿಯಿರಿ ಎಂದು ಹೇಳಿ ಕತ್ತಿಯಿಂದ ಕುತ್ತಿಗೆಗೆ ಹೊಡೆದರು. ಕಡಿದ ಅವರುಗಳೆಲ್ಲ ಅಲ್ಲಲ್ಲೆ ಬಂಡೆಗಳಾಗಿ ಹೋದರು. ಹೋತನ ರಕ್ತ ಚಿಮ್ಮಿದ ಕಡೆಯಲ್ಲೆಲ್ಲ ಕಲ್ಲುಗಳು ಕೆಂಪಾದವು. ಕತ್ತರಿಸಿದ ಹೋತ ಹಾಯಲು ಯತ್ನಿಸಿದಾಗ ಅದರ ಕೊಂಬುಗಳು ನೆಲಕ್ಕೆ ನಾಟಿದಂತೆಯೇ ಕಲ್ಲಾದವು. ಹೋತನ ದೇಹ ತುಸು ದೂರದಲ್ಲೇ ಕಲ್ಲಾಗಿ ಬಿದ್ದಿದೆ. ಮುತ್ತುರಾಯಸ್ವಾಮಿ ಜಾತ್ರೆಯ ಕಾಲದಲ್ಲಿ ಈ ಹೋತದ ಕಲ್ಲಿಗೂ ಪೂಜೆ ಸಲ್ಲುತ್ತದೆ.

ಹಕ್ಕಿಬಿಕ್ಕಿಯವರು

ಹಕ್ಕಿಬಿಕ್ಕಿಯವರು ಭಾರತದ ಅನೇಕ ಭಾಗಗಳಲ್ಲಿ ಕಂಡುಬರುತ್ತಾರೆ. ಕರ್ನಾಟಕದ ಮೈಸೂರು, ಬೆಂಗಳೂರು, ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಬಳ್ಳಾರಿ, ಬಿಜಾಪುರ, ಬೀದರ್ ಹಾಗೂ ಧಾರವಾಡ ಜಿಲ್ಲೆಗಳಲ್ಲೆಲ್ಲ ಕಾಣಸಿಗುತ್ತಾರೆ. ಹಕ್ಕಿಯ ಮಾಂಸವೇ ಇವರ ಪ್ರಧಾನ ಆಹಾರವಾಗಿದ್ದರಿಂದ ಇವರನ್ನು

ಹಕ್ಕಿಬಿಕ್ಕಿ(ಬಿಕ್ಕು=ಮಾಂಸ)ಯವರು ಎಂದು ಕರೆಯುತ್ತಾರೆ. ಹಕ್ಕಿಬಿಕ್ಕಿಯವರು ತಮ್ಮ ಬೇಟೆಯ ವೃತ್ತಿಗೆ ಸಂಬಂಧಿಸಿದಂತೆ ರಾಮಾಯಣ ಸಂದರ್ಭದ ಕಥೆಯೊಂದನ್ನು ಹೇಳಿಕೊಳ್ಳುತ್ತಾರೆ.

"ರಾಮಾಯಣದ ವಾಲಿಮಹಾರಾಜನೊಮ್ಮೆ ಬೇಟೆಗಾಗಿ ಕಾಡಿಗೆ ಹೋಗುತ್ತಾನೆ. ಬೇಟೆಯಾಡಿದನಂತರ ಭೋಜನದ ಸಿದ್ಧತೆ ನಡೆಯುತ್ತದೆ. ವಾಲಿಮಹಾರಾಜನು ಒಂದು ವ್ರತದಲ್ಲಿರುತ್ತಾನೆ. ಅದು "ಹೆಣ್ಣು ತನ್ನ ಕೈಯಾರೆ ಬಡಿಸಿದ ಊಟದ ಹೊರತಾಗಿ ಬೇರೆ ಊಟ ಮಾಡುವುದಿಲ್ಲ" ಎಂಬುದು. ಹೀಗಾಗಿ ವಾಲಿ ಮಹಾರಾಜನು ಊಟ ಮಾಡುವುದಿಲ್ಲ ಎಂಬ ಸುದ್ದಿ ತಿಳಿದು ಎಲ್ಲರೂ ಚಿಂತಾಮಗ್ನರಾಗುತ್ತಾರೆ. ಬೇಟೆಗಾರರ ಗುಂಪಿನಲ್ಲಿದ್ದ ಕುಂಬಾರನಿಗೆ ಈ ವಿಷಯ ಗೊತ್ತಾಗುತ್ತದೆ. ಆಗ ಅವನು ಮಣ್ಣಿನಲ್ಲಿ ಹೆಣ್ಣುಗೊಂಬೆಯನ್ನು ತಯಾರಿಸಿ ಅದಕ್ಕೆ ತಂತ್ರಗಾರಿಕೆ ನೀಡುವುದಾಗಿ ತಿಳಿಸುತ್ತಾನೆ. ಮಹಾರಾಜನ ಸೈನಿಕರು ಅದಕ್ಕೆ ಒಪ್ಪಿಕೊಂಡು ಕುಂಬಾರನನ್ನು ಕರೆದು ಮಣ್ಣಿನ ಗೊಂಬೆ ತಯಾರಿಸಲು ತಿಳಿಸುತ್ತಾರೆ. ಕುಂಬಾರನು ಹಾಗೆಯೇ ಮಾಡುತ್ತಾನೆ. ಕೊನೆಗೆ ಮಣ್ಣಿನ ಗೊಂಬೆಯಿಂದ ಮಹಾರಾಜನಿಗೆ ಊಟ ಬಡಿಸಲಾಗುತ್ತದೆ.

'ಊಟದನಂತರ ವಿಶ್ರಾಂತಿ ಪಡೆದು ವಾಲಿಯು ಅಲ್ಲಿಂದ ತನ್ನ ದಂಡಿನೊಂದಿಗೆ ಹೊರಟುಹೋಗುತ್ತಾನೆ. ಮಣ್ಣಿನ ಗೊಂಬೆ ಅನಾಥವಾಗಿ ಅಲ್ಲಿಯೇ ಬಿದ್ದಿರುತ್ತದೆ.

ಕೈಲಾಸದಿಂದ ವಿಹಾರಾರ್ಥವಾಗಿ ಶಿವಪಾರ್ವತಿಯರು ಅಲ್ಲಿಗೆ ಬಂದಾಗ ಸುಂದರವಾದ ಮಣ್ಣಿನ ಗೊಂಬೆಯನ್ನು ಕಾಣುತ್ತಾರೆ. ಪಾರ್ವತಿಯು ಆ ಸುಂದರವಾದ ಮೂರ್ತಿಗೆ ಜೀವಕಳೆ ನೀಡುವಂತೆ ಶಿವನನ್ನು ಪ್ರಾರ್ಥಿಸುತ್ತಾಳೆ. ಶಿವನು ಹಾಗೆಯೇ ಮಾಡುತ್ತಾನೆ. ಅಲ್ಲಿಗೆ ಬೇಟೆಯಾಡಲು ಬಂದ ಬೇಡನೊಬ್ಬನು ಆ ಸುಂದರ ಕನ್ಯೆಯನ್ನು ಮೋಹಿಸಿ ಮದುವೆಯಾಗುತ್ತಾನೆ. ಆ ಸುಂದರ ಕನ್ಯೆ ಹಾಗೂ ಬೇಟೆಗಾರನ ಸಂತಾನವೇ ತಾವು, ತಮ್ಮನ್ನು ಮುಂದೆ ವಾಗ್ರಿಹರಣ ಶಿಕಾರಿಗಳೆಂದು ಕರೆಯತೊಡಗಿದರು."

(ಕೃಪೆ : 'ಹಕ್ಕಿಪಕ್ಕಿಯವರು' ಡಾ.ಡಿ.ಬಿ. ನಾಯಕ್. 'ಕರ್ನಾಟಕ ಬುಡಕಟ್ಟುಗಳು', ಸಂಪುಟ–ಎರಡು. ೨೦೦೦. ಪು.೧೮೩)

ಕೊಂಡಮಾಮಾಗಳು

'ಕೊಂಡ' ಎಂದರೆ ಕಾಡು. ಕೊಂಡಮಾಮಾಗಳು ತಮ್ಮ ಜೀವಿತ ಕಾಲವನ್ನೆಲ್ಲ ಕಾಡಿನಲ್ಲೇ ಕಳೆಯುತ್ತಿದ್ದುದರಿಂದ ಇವರಿಗೆ ಈ ಹೆಸರು ಬಂದಿದೆ.

ಕೊಂಡಮಾಮಗಳೆಂದು ಕರೆಯುತ್ತಾರೆ. 'ಕುರ್ರ್‌ಮಾಮ' ಎಂಬುದು ಇವರಿಗಿರುವ ಪರ್ಯಾಯ ನಾಮ. ಇವರು ಆಂಧ್ರಪ್ರದೇಶದ ಶ್ರೀಶೈಲ ಭಾಗದಲ್ಲಿ ವಿಶೇಷವಾಗಿ ವಾಸವಿದ್ದುದರಿಂದ ಇವರು ಮಲ್ಲಿಕಾರ್ಜುನನ ಭಕ್ತರಾಗಿದ್ದರೆಂದೂ ಇವರ ಭಾಷೆ ತೆಲುಗೆಂದು ಹೇಳಲಾಗಿದೆ.

ಆದರೆ ಇವರು ಶಾಸ್ತ್ರ ಹೇಳುವಾಗ ವಿಶೇಷವಾಗಿ ರಾಮನಾಮವನ್ನು ಹೇಳುತ್ತಾರಾದ್ದರಿಂದ ಇವರು ಶ್ರೀ ರಾಮನ ಭಕ್ತರಿರಬಹುದೆಂದು ಶಂಕಿಸಲಾಗಿದೆ. ವಿದ್ವಾಂಸ ಶ್ರೀಕಂಠ ಕೂಡಿಗೆಯವರ ಪ್ರಕಾರ "ಈ ವಂಶದ ಮೂಲಗುರು ಶ್ರೀಶೈಲದವರು. ಶ್ರೀಮಲ್ಲಿಕಾರ್ಜುನನ ಪರಮಭಕ್ತರಾದ ಇವರು ತಮ್ಮವರೊಂದಿಗೆ ಒಮ್ಮೆ ಭದ್ರಾಚಲಕ್ಕೆ ಭೇಟಿ ನೀಡಿದರೆಂದೂ ಆಗ ಶ್ರೀರಾಮಚಂದ್ರನ ದರ್ಶನವಾಯಿತೆಂದೂ ಹೇಳುತ್ತಾರೆ. ಅವನಿಂದ ಆಶೀರ್ವಾದ ಪಡೆದದ್ದರ ಫಲವಾಗಿ ಶ್ರೀರಾಮನ ಭಕ್ತರಾದರೆಂತಲೂ ನಂಬುತ್ತಾರೆ. ಅಂದಿನಿಂದಲೂ ಕ್ಷೌರ ಮಾಡಿಸದೆ ಶ್ರೀರಾಮನ ಹೆಸರಿನಲ್ಲಿ ಮುಡಿಕಟ್ಟಿ, ಆತನ ಧ್ಯಾನ ಮಾಡುತ್ತ ಭವಿಷ್ಯ ಹೇಳುವ ವೃತ್ತಿಯನ್ನು ಹಿಡಿದರೆಂದೂ, ತಮ್ಮ ಕುಲದವರಿಗೆ 'ರಾಮಕ್ಷತ್ರಿಯ'ರೆಂಬ ಹೆಸರು ಬಂದಿತೆಂದೂ ಕೊಂಡಮಾಮ ಜನಾಂಗದ ಹಿರಿಯರು ಹೇಳುತ್ತಾರೆ. (ಕೊಂಡಮಾಮ–ಶ್ರೀಕಂಠ ಕೂಡಿಗೆ, ಐಬಿಎಚ್ ಪ್ರಕಾಶನ, ೧೯೮೨. ಪು.೪–೫)

ಆದರೆ Caste and Tribes Southern India ಗ್ರಂಥ ಸಂಪುಟಗಳ ಎಡ್ಗರ್ ಥರ್ಸ್ಟನ್ ಅವರು ಇವರನ್ನು ಪಾಂಡವರ ಭಕ್ತರು ಎಂದಿದ್ದಾರೆ.

ವಾಸ್ತವವಾಗಿ ಇವರು ಭವಿಷ್ಯ ಹೇಳುವಾಗ ಬಳಸುವ ಹೆಸರು 'ಶ್ರೀರಾಮುಡು' 'ಕೊಂಡರಾಮುಡು' ಎಂಬುವು. ಇವರು ಇಟ್ಟುಕೊಂಡಿರುವ ಭವಿಷ್ಯ ಹೇಳಲು ಬಳಸುವ ತಾಳೆಗರಿ ಕಟ್ಟುಗಳಲ್ಲಿ ಶ್ರೀರಾಮ ಲಕ್ಷ್ಮಣ ಸೀತಾದೇವಿ ಹನುಮಂತ ರಾವಣರ ಚಿತ್ರಗಳಿವೆ. ಇವರು ಏಕತಾರಿಯನ್ನು ನುಡಿಸುತ್ತ ರಾಮಧ್ಯಾನ ಮಾಡುತ್ತ ಭವಿಷ್ಯ ಹೇಳತೊಡಗುತ್ತಾರೆ. ಬಹುಶಃ ಪಾಂಡವರ ಭಕ್ತರಾದ ಇವರಲ್ಲಿ ಕೆಲವು ಕೊಂಡಮಾಮಗಳು ಭವಿಷ್ಯ ಹೇಳುವ ಕಾಯಕಕ್ಕೆ ಬದಲಾಗಿ ಬೇಟೆ ಮತ್ತು ಕೃಷಿ ಸಂಬಂಧಿ ಕೆಲಸಗಳಲ್ಲಿ ನಿರತರಾಗಿ ಜೀವನ ನಡೆಸುತ್ತಿದ್ದಾರೆಂದು ತಿಳಿಯುತ್ತದೆ.

ಕೊಂಡಮಾಮಗಳನ್ನು ಕುರಿತ ಮತ್ತೊಂದು ಪುರಾಣ ಕಥೆಯ ಪ್ರಕಾರ ಕೈಲಾಸದಲ್ಲಿ ಒಮ್ಮೆ ಹೆಂಗಸರನ್ನು ಅಲಕ್ಷಿಸಿ ಗಂಡಸರೇ ಅಡಿಗೆ ಮಾಡಿದರಂತೆ. ಇದು ಹೆಂಗಸರಿಗೆ ಮಾಡಿದ ಅವಮಾನವೆಂದು ಭಾವಿಸಿದ ಪಾರ್ವತೀದೇವಿಯು

'ನೀವು ಇನ್ನು ಮುಂದೆ ಭೂಲೋಕದಲ್ಲಿ ಕೊಂಡರಾಜರಾಗಿ ಹುಟ್ಟಿ. ಎಲ್ಲಿಯೂ ನಿಲ್ಲದೆ ಊರಾಡಿಕೊಂಡು, ನೀವು ಹೋದ ಊರಿನಲ್ಲಿ ಮೂರು ಕಲ್ಲುಗಳನ್ನು ಒಲೆಯಾಗಿ ಹೂಡಿಕೊಂಡು ಅಡಿಗೆ ಮಾಡಿಕೊಂಡು ಉಣ್ಣಿರಿ. ಆ

ಊರಿನಲ್ಲಿ ಒಂದು ನಿದ್ರೆ ಕಳೆದು ಮುಂದೆ ಸಾಗಿರಿ' ಎಂದು ಶಾಪ ಕೊಟ್ಟಳು. ಪಾರ್ವತೀದೇವಿಯ ಶಾಪದಿಂದ ಭೂಮಿಯಲ್ಲಿ ಕೊಂಡಮಾಮಗಳು ಹುಟ್ಟಿದರು.

ಹಂದಿಯ ಹಲ್ಲನ್ನು ಪೋಣಿಸಿ ಕೊರಳಲ್ಲಿ ಕಟ್ಟಿಕೊಳ್ಳುವುದರಿಂದ ಯಾವುದೇ ರೀತಿಯ ಎಡರುತೊಡರುಗಳು ಸಂಭವಿಸುವುದಿಲ್ಲ ಎಂಬ ನಂಬಿಕೆ ಇವರದು. ಇವರ ಗುರುಗಳು ಎಂದೂ ಊರೊಳಕ್ಕೆ ಬರುವುದಿಲ್ಲ. ಬಂದರೂ ಊರಿನ ಸಮೀಪದ ಕಾಡಿನಲ್ಲಿರುತ್ತಾರೆ. ಕೊಂಡಮಾಮಗಳು ಭವಿಷ್ಯ ಹೇಳುವವರು ಮಾತ್ರವಾಗಿರದೆ ಜನಪದ ವೈದ್ಯರೂ ಹೌದು.

ಜಾಂಬವಂತ ವೇಷಧಾರಿ

ವಾಲಿಯು ಕಪಿಗಳ ರಾಜನಾದಾಗ ಜಾಂಬವಂತನು ಅವನ ಸೇನಾಧಿಪತಿಗಳ ನಾಯಕನಾಗಿದ್ದನು. ರಾಮಾಯಣದ ಯುದ್ಧದಲ್ಲಿ ಬಹಳವಾಗಿ ಹೋರಾಡಿದ ಮಹಾವೀರ ಇವನು. ರಾಮಾಯಣದ ವೀರಪಾತ್ರಗಳಲ್ಲಿ ಒಂದಾದ ಜಾಂಬವಂತನ ಸ್ಮರಣಾರ್ಥವಾಗಿ ಹಂಪಿಯ ಜಾತ್ರೆಗಳಲ್ಲಿ ಇವನ ವೇಷಧಾರಿಗಳು ಕಾಣಸಿಗುತ್ತಾರೆ.

ಜಾಂಬವನ ವೇಷಧಾರಿಗಳು ಸೊಂಟದವರೆಗೆ ಬಿಳಿಪಂಚೆಯನ್ನು ಉಟ್ಟಿರುತ್ತಾರೆ. ಮುಖಕ್ಕೆ ಮೈಕೈಗಳಿಗೆಲ್ಲ ಕೆಂಪುಬಣ್ಣವನ್ನು ಲೇಪಿಸಿಕೊಂಡಿರುತ್ತಾರೆ. ಕೊರಳಿಗೆ ರುದ್ರಾಕ್ಷಿಮಾಲೆ, ಸೊಂಟಕ್ಕೆ ಚರ್ಮದಪಟ್ಟಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾನೆ. ದವಡೆಯ ಎಡಬದಿಯಿಂದ ಬಲಬದಿಯವರೆಗೆ ಒಂದು ದಬ್ಬಳವನ್ನು ಚುಚ್ಚಿಕೊಂಡಿರುತ್ತಾನೆ. ಕೈಯಲ್ಲಿ ಒಂದು ಭಿಕ್ಷಾಪಾತ್ರೆ ಇರುತ್ತದೆ. ಜನರು ಇದನ್ನು 'ಪೋತವೇಷ' ಎಂದು ಕರೆಯುತ್ತಾರೆ. ಹಂಪಿ ಜಾತ್ರೆ ಮುಗಿಯುತ್ತಿದ್ದಂತೆ ಇವರು ಇದ್ದಕ್ಕಿದ್ದಂತೆ ಮರೆಯಾಗಿ ಹೋಗುತ್ತಾರೆ. ಅವರು ಮತ್ತೆ ಕಾಣಿಸಿಕೊಳ್ಳುವುದು ಮುಂದಿನ ವರ್ಷದ ಜಾತ್ರೆಯಲ್ಲಿಯೇ!

ಹನುಮಂತನ ವೇಷ

ನಮ್ಮ ಜನಪದ ಕಲಾವಿದರಲ್ಲಿ ಹಗಲುವೇಷದವರು ಪ್ರಸಿದ್ಧರು. ಇವರು ಪೌರಾಣಿಕ ಪಾತ್ರಧಾರಿಗಳಾಗಿ ರಂಜಿಸಿ ಕಾಣಿಕೆ ವಸೂಲಿ ಮಾಡಿ ಜೀವನ ಸಾಗಿಸುತ್ತಾರೆ.

ಆದರೆ ಹಂಪಿಯು ಒಂದು ಕಾಲದಲ್ಲಿ ಕಿಷ್ಕಿಂಧೆ ಎಂದೇ ಹೆಸರುವಾಸಿಯಾಗಿತ್ತು. ಇದು ವಾಲಿ ಸುಗ್ರೀವ ಆಂಜನೇಯರ ವಾಸಸ್ಥಾನವಾಗಿತ್ತು. ಮೂಲತಃ ಇದು ಕಪಿಗಳ ಊರು ಎನ್ನುವವರೂ ಇದ್ದಾರೆ.

ಕನ್ನಡ ಕುಲ ಪುಂಗವನೆನಿಸಿದ ಆಂಜನೇಯನು ಇಲ್ಲಿದ್ದ. ಇಲ್ಲಿರುವ ಅಂಜನಾದ್ರಿ ಪರ್ವತವು ಆಂಜನೇಯನ ತಾಯಿ ಅಂಜನಾದೇವಿಯ ವಾಸಸ್ಥಾನವಾಗಿತ್ತು. ಅಂಜನಾದೇವಿಯ ಪುತ್ರನೇ ಆಂಜನೇಯ. ಹಂಪಿಯ ಹೊಳೆಯಲ್ಲಿ ಆಂಜನೇಯನ ಸೆಳವು ಎಂಬ ಸ್ಥಳವನ್ನು ಗುರುತಿಸುತ್ತಾರೆ.

ಇಲ್ಲಿನ ಭಕ್ತಜನರಲ್ಲಿ ಕೆಲವರು ಹರಕೆಯ ರೂಪದಲ್ಲಿ ಹನುಮಂತನ ವೇಷ ಹಾಕುತ್ತಾರೆ. ಹಂಪಿಯ ಜಾತ್ರೆಯಲ್ಲಿ ಈ ಹನುಮನ ವೇಷಧಾರಿಗಳು ಎಲ್ಲೆಂದರಲ್ಲಿ ಕಾಣಸಿಗುತ್ತಾರೆ. ಹೀಗೆ ಹನುಮಂತನ ವೇಷ ಹಾಕಿಕೊಂಡು ಕುಣಿಯುವುದರಿಂದ ಹರಕೆ ಸಲ್ಲಿಸಿದಂತಾಗುವುದಲ್ಲದೆ ಕಾಯಿಲೆ ಕಸಾಲೆಗಳೆಲ್ಲ ಹೇಳಹೆಸರಿಲ್ಲದಂತಾಗುತ್ತವೆ ಎಂದು ನಂಬಿದ್ದಾರೆ.

ಶಹಾಪುರದ ಸಗರಾದ್ರಿ

ಗುಲ್ಬರ್ಗದಿಂದ ಸುಮಾರು ೭೭ ಕಿ.ಮೀ. ದೂರದಲ್ಲಿರುವ ಶಹಾಪುರದ ಕೋಟೆಗೆ ಐತಿಹಾಸಿಕ ಮಹತ್ವಕ್ಕಿಂತಲೂ ಪೌರಾಣಿಕ ಹಿನ್ನೆಲೆಯೇ ರೋಚಕವಾಗಿದೆ.

ಈ ಪ್ರದೇಶವನ್ನು ಸಗರ ಚಕ್ರವರ್ತಿ ಆಳಿದನೆಂದೂ ಶಹಾಪುರದ ಕೋಟೆಯನ್ನು ಸಗರ ಚಕ್ರವರ್ತಿ ನಿರ್ಮಿಸಿದನೆಂದು ಕೆಲವು ಇತಿಹಾಸಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಈ ಕೋಟೆ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಕೆಲವರು ಹೇಳುತ್ತಾರೆ.

ಸಗರಾದ್ರಿಯ ಪೌರಾಣಿಕ ಹಿನ್ನೆಲೆಯನ್ನು 'ಮಂದಾಕಿನಿ ಮಹಾತ್ಮೆ' ಎಂಬ ಕೃತಿಯಲ್ಲಿ ವಿವರಿಸಲಾಗಿದೆ. ಶಹಾಪುರದ ದಕ್ಷಿಣಕ್ಕಿರುವ ಪರ್ವತವೇ ಸಗರಾದ್ರಿ. ಈ ಬೆಟ್ಟದಲ್ಲಿ ಚರಬಸವೇಶ್ವರ ಗದ್ದುಗೆ, ಮೌನೇಶ್ವರ ಅನುಷ್ಠಾನ ಸ್ಥಳ, ಪಾಂಡವರ ಕಲ್ಲು, ಭೀಮನಗವಿ, ಗವಿರಂಗನಾಥ, ಸಿದ್ಧಲಿಂಗೇಶ್ವರ, ಗೊಗ್ಗಮಾಂಬೆ, ತುಳಜಾ ಭವಾನಿ, ಅಮರಕಲ್ಯಾಣ, ತ್ರಯಂಬಕೇಶ್ವರ, ನಿರಹಂಕಾರಿ, ದಿಗ್ಗಿ ಸಂಗಮನಾಥ, ಚಂದ ಸಾಹೇಬ, ತಾವರೆಕೆರೆ ಮಂದಾಕಿನಿ ತೀರ್ಥ ಹಾಗೂ ನೀಲಮ್ಮನ ಬಾವಿ ಮುಂತಾದ ಅನೇಕ ಪವಿತ್ರ ಸ್ಥಳಗಳಿವೆ.

ವಿಶೇಷವೆಂದರೆ ಚಾಲುಕ್ಯರ ಕಾಲದ್ದೆಂದು ಹೇಳುವ ೧೮ ಕೈಗಳಿರುವ ಚಾಮುಂಡಿಯ ಉಗಮಮೂರ್ತಿ ಇಲ್ಲಿದೆ. ಅಲ್ಲದೆ ವಿಶ್ವಕರ್ಮ ಸಮಾಜದವರ ಏಕದಂಡಿಗಿ ಮಠವೂ ಇಲ್ಲಿದೆ. ಶಹಾಪುರದಿಂದ ಭೀಮರಾಯನ ಗುಡಿಗೆ ಹೋಗುವ ರಸ್ತೆಯಲ್ಲಿ ಸಗರಾದ್ರಿ ಪರ್ವತಶ್ರೇಣಿ ಮುಗಿಲಿನತ್ತ ಮುಖ ಮಾಡಿ ಅಂಗಾತವಾಗಿ ಬುದ್ಧ ಮಲಗಿರುವಂತಿದೆ ಎಂಬುದಾಗಿ ಜಿ.ಕೆ. ಪ್ರಮೋದ ಅವರು ಅಭಿಪ್ರಾಯಪಡುತ್ತಾರೆ. (ಪ್ರಜಾವಾಣಿ : ೦೪ ಫೆಬ್ರವರಿ ೨೦೧೦. ಪುಟ ii)

ರಾಮರಸ

ದೇವತೆಗಳ ಮತ್ತು ರಾಜಮಹಾರಾಜರುಗಳ ಪಾನೀಯಗಳಲ್ಲಿ ಅಮೃತ, ಸುರೆ, ಮಧು, ಮದ್ಯ ಮುಂತಾದ ಹೆಸರುಗಳು ಎಲ್ಲರಿಗೂ ತಿಳಿದಿದೆ. ಮತ್ತೆ ಕೆಲವರಿಗೆ ಅದರಲ್ಲೂ ಗರಡಿಗಳ ಜಟ್ಟಿಗಳಿಗೆ ಬಹುಪರಿಚಿತವಾದ ಪಾನೀಯ ರಾಮರಸ.

ರಾಮರಸ ಶ್ರೀರಾಮನ ಕಾಲದಿಂದಲೂ ಇರುವುದಾಗಿ ಗರಡಿಯ ಜಟ್ಟಿಗಳು ಹೇಳುತ್ತಾರೆ. ಆ ಕಾರಣದಿಂದಲೆ ಶ್ರೀರಾಮನ ಹೆಸರಿನಲ್ಲೇ ಈ ಪಾನೀಯವಿದೆ ಎಂಬುದಾಗಿ ಸ್ಪಷ್ಟಪಡಿಸುತ್ತಾರೆ. ಆದ್ದರಿಂದಲೆ ಶ್ರೀರಾಮನವಮಿಯಂದು ಎಲ್ಲ ಗರಡಿಗಳಲ್ಲೂ ಆಂಜನೇಯ ಸಮೇತ ರಾಮಲಕ್ಷ್ಮಣ ಸೀತೆಯರನ್ನು ಪೂಜಿಸಿ ಬಗೆಬಗೆಯ ಫಲತಾಂಬೂಲಗಳೊಡನೆ ರಾಮರಸವನ್ನೂ ನೈವೇದ್ಯ ಮಾಡುತ್ತಾರೆ. ಎಲ್ಲ ಜಟ್ಟಿಗಳೂ ರಾಮನ ಹೆಸರಿನಲ್ಲಿ ಅಂದು ಈ ಪಾನೀಯವನ್ನು ಭಕ್ತಿಯಿಂದ ಸ್ವೀಕರಿಸುತ್ತಾರೆ.

ಹಿಂದೆ ಅನೇಕ ಸಾಧುಸಂತರುಗಳು ಈ ರಾಮರಸವನ್ನು ಕುಡಿದು ಬ್ರಹ್ಮಾನಂದವನ್ನು ಪಡೆಯುತ್ತಿದ್ದರಂತೆ. ಇಂಥ ಸಾಧು-ಸಂತರುಗಳು ಪ್ರತಿದಿನ ರಾಮರಸ ತಯಾರಿಸಲು ಕಷ್ಟವಾಗುತ್ತಿದ್ದುದರಿಂದ ಕಂಚಿನ ಅಥವಾ ಮಣ್ಣಿನ ಚಿಲುಮೆಗೆ ಭಂಗಿಸೊಪ್ಪಿನ ಪುಡಿ ಹಾಕಿ ಅದಕ್ಕೆ ಬೆಂಕಿ ಕಿಡಿ ತಾಗಿಸಿ ಅದರ ಹೊಗೆಯನ್ನು ಸೇದುವುದರ ಮೂಲಕ ಸುಖಾನುಭ ಪಡೆಯುತ್ತಿದ್ದರಂತೆ.

ಆದರೆ ನಮ್ಮ ಗರಡಿ ಮನೆಗಳಲ್ಲಿ ಪ್ರತಿನಿತ್ಯ ಈ ಪಾನೀಯವನ್ನು ತಯ್ಯಾರಿಸುತ್ತಿರಲಿಲ್ಲವಾದರೂ ಶ್ರೀರಾಮನವಮಿಯಂಥ ವಿಶೇಷ ದಿನಗಳಲ್ಲಿ ತಯ್ಯಾರಿಸಿ ಭಕ್ತಿಪರವಶರಾಗಿ ಪಾನಕೂಟ ನಡೆಸುತ್ತಿದ್ದರು.

ರಾಮರಸವನ್ನು ತಯಾರಿಸುವ ಬಗೆ ಹೇಗೆಂದರೆ : ನಮಗೆ ಬೇಕೆನಿಸಿದಷ್ಟು ರಾಮರಸವನ್ನು ತಯಾರಿಸುವಾಗ ಅಳತೆ ತಕ್ಕಂತೆ ಬೆಲ್ಲ, ಗಸಗಸೆ, ಮೆಣಸು ಮತ್ತು ಭಂಗಿಸೊಪ್ಪುಗಳನ್ನು ಮಿಶ್ರಣ ಮಾಡಿ ನುಣ್ಣಗಾಗುವವರೆಗೆ ಅರೆದು ಅದಕ್ಕೆ ಎಳನೀರನ್ನು ಸೇರಿಸಿದರೆ ರಾಮರಸ ತಯಾರಾದಂತೆ. ಎಳನೀರನ್ನು ಇಷ್ಟು ಪ್ರಮಾಣದಲ್ಲಿ ಸೇರಿಸಲಾಗದಿದ್ದರೆ ಹಾಲನ್ನು ಬೆರಸಿದರೂ ಆಗುತ್ತದೆ. ಇದು ರಾಮರಸ ತಯಾರಿಸುವ ಒಂದು ರೀತಿ. ಮತ್ತೊಂದು ರೀತಿಯೆಂದರೆ -

ಬೆಲ್ಲ, ಗಸಗಸೆ, ಮೆಣಸು, ಭಂಗಿಸೊಪ್ಪಿನ ಜೊತೆಗೆ ಒಣದ್ರಾಕ್ಷಿ, ಗೋಡಂಬಿ, ಬಾದಾಮಿ ಮುಂತಾದವುಗಳನ್ನು ಸೇರಿಸಿಯೂ ತಯಾರಿಸುತ್ತಾರೆ.

ಗರಡಿಮನೆಗಳಲ್ಲಿ ಹಿರಿಯ ಪೈಲ್ವಾನರು ಆಂಜನೇಯ ಹಾಗೂ ರಾಮ ಲಕ್ಷ್ಮಣ ಸೀತೆಯರನ್ನು ಭಕ್ತಿಯಿಂದ ಪೂಜಿಸಿ ಮಡಿಯಿಂದ ರಾಮರಸವನ್ನು ತಯಾರಿಸುತ್ತಾರೆ.

ರಾಮರಸಕ್ಕೆ ಭಂಗಿಸೊಪ್ಪು ಹಾಕಿರುವುದರಿಂದ ಮತ್ತು ಬರುವುದು ಸರಿಯಷ್ಟೆ. ಆದ್ದರಿಂದ ಮೊದಲ ಸಲ ಕುಡಿಯುವವರು ಮಿತವಾಗಿ ಕುಡಿಯಬೇಕು. ಇದು ಶ್ರೀರಾಮನ ಹೆಸರಿನಲ್ಲಿರುವುದರಿಂದ ಉಳಿದೆಲ್ಲ ಪಾನೀಯಗಳಿಗಿಂತ ಇದಕ್ಕೊಂದು ಗೌರವದ ಸ್ಥಾನ ಕಲ್ಪಿತವಾಗಿದೆ.

ರಾ(ನಾ)ಮದಲಗೆ

ರಾಮದಲಗೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಮಾಡುತ್ತಿರುವ ಒಂದು ಸಿಹಿತಿಂಡಿ. 'ರಾಗಿ' ಎಂಬ ಹೆಸರು ಈ ಧಾನ್ಯಕ್ಕೆ ರಾಘವನಿಂದ ಬಂದದ್ದು ಎಂಬ ಕಥೆ ಜನಪದರಿಗೆ ಗೊತ್ತಿಲ್ಲ. ಆದರೆ ಶ್ರೀರಾಮ ವಿಜಯಿಯಾಗಿ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗುವಾಗ ತನಗೆ ಉಪಕಾರ ಮಾಡಿದ ವಾನರಸೈನ್ಯಕ್ಕೆ ಒಂದು ಭೋಜನಕೂಟ ಏರ್ಪಡಿಸಿದನಂತೆ. ಆ ಭೋಜನ ಎಂದರೆ ಕರ್ನಾಟಕದ ಪ್ರಸಿದ್ಧವಾದ ಧಾನ್ಯ ರಾಗಿಯ ಮುದ್ದೆ ಮತ್ತು ಪ್ರಸಿದ್ಧವಾದ ದವಸ ಅವರೇಕಾಳಿನ ಸ್ವಾಡಿಗೆ.

ಅದೇ ರೀತಿ ನಮ್ಮ "ಜನಪದರು ರಾಗಿಯ ಸಣ್ಣಪುಡಿಯನ್ನು ಬಳಸಿ ಒಂದು ಸಿಹಿತಿಂಡಿಯನ್ನು ಮಾಡುತ್ತಾರೆ. ಅದರ ಹೆಸರು 'ರಾಮದಲಗೆ'. ಇದನ್ನು ಕೆಲವರು ತಪ್ಪಾಗಿ 'ನಾಮದಲಗೆ' ಎನ್ನುವುದೂ ಉಂಟು. ಆದರೆ ಹಳಬರು ಇದನ್ನು ರಾಮದಲಗೆ ಎನ್ನುತ್ತಿದ್ದರು. ಇತ್ತೀಚೆಗೆ ಹಳ್ಳಿಗಳಲ್ಲೂ ಈ ಸಿಹಿತಿಂಡಿ ವಿರಳವಾಗುತ್ತಿದೆ.

ರಾಮನ ಹೆಸರಿನಲ್ಲಿರುವ ಈ ತಿಂಡಿಯನ್ನು ಮಾಡುವ ಬಗೆ ಹೀಗಿದೆ : ಒಂದು ಪಾವಿನಷ್ಟು ರಾಗಿಯನ್ನು ನೀರಿನಲ್ಲಿ ನೆನೆಸಿ ಚನ್ನಾಗಿ ತೊಳೆದು ಒಣಗಿಸಬೇಕು. ಅನಂತರ ಅದನ್ನು ಕಾದ ಹೆಂಚಿನ ಮೇಲೆ ಬಿಸಿಯಾಗುವಂತೆ ಹುರಿಯಬೇಕು. ಈಗ ಇದನ್ನು ಬೀಸಿ ಪುಡಿಯನ್ನು ತೆಳುಬಟ್ಟೆಯಲ್ಲಿ ಶೋಧಿಸಿ ಕುಂಕುಮದಷ್ಟು ನಯವಾಗಿರುವ ಪುಡಿಯನ್ನು ಸಿದ್ಧಪಡಿಸಿಕೊಳ್ಳಬೇಕು.

ಈಗ ಅಳತೆಗೆ ತಕ್ಕಷ್ಟು ಬೆಲ್ಲವನ್ನು ನೆನೆಸಿ ಅದರಲ್ಲಿರಬಹುದಾದ ಕಲ್ಲುಪುಡಿಯನ್ನು ಶೋಧಿಸಿ ತೆಗೆಯಬೇಕು. ಈಗ ಆ ಬೆಲ್ಲದ ನೀರನ್ನು ಕುದಿಸಬೇಕು. ಇದಕ್ಕೆ ಕೊಬ್ಬರಿ ತುರಿ, ಏಲಕ್ಕಿಪುಡಿ, ಇತ್ತೀಚೆಗೆ ದ್ರಾಕ್ಷಿ, ಗೋಡಂಬಿ, ಬಾದಾಮಿಗಳನ್ನು ಹಸುವಿನ ತುಪ್ಪದಲ್ಲಿ ಹುರಿದು ತುಪ್ಪವನ್ನು ಸೇರಿಸಿ ಪಾಕಕ್ಕೆ ಸುರಿಯಬೇಕು.

ಕಡುಪಾಕ ಬರುತ್ತಿದೆ ಎನಿಸಿದಾಗ ಸಿದ್ಧಪಡಿಸಿಕೊಂಡಿರುವ ರಾಗಿಪುಡಿಯನ್ನು ಪಾಕಕ್ಕೆ ಸುರಿದು ಗಂಟಾಗದಂತೆ ಚನ್ನಾಗಿ ತಿರುವುತ್ತಿರಬೇಕು. ರಾಗಿ ಹಿಟ್ಟು ಹದವಾಗಿ ಬೆಂದಿದೆ ಎನಿಸಿದಾಗ ಕೆಳಕ್ಕೆ ಇಳಿಸಿಕೊಳ್ಳಬೇಕು.

ಈಗ ಒಂದು ತಣಿಗೆಗೆ ತುಪ್ಪವನ್ನು ಸವರಿ ಈ ಪಾಕವನ್ನು ಅದಕ್ಕೆ ಸುರಿದು ಮಟ್ಟಮಾಡಿ ಸ್ವಲ್ಪ ಆರಿದ ಮೇಲೆ ತರಕಾರಿ ಹೆಚ್ಚುವ ಕತ್ತಿಯಿಂದ ಚಚ್ಚೌಕದ ಚೂರುಗಳನ್ನು ಮಾಡುತ್ತಾರೆ. ಆರಿದ ಈ ಚೂರುಗಳನ್ನು ಸಿಹಿತಿಂಡಿಯಾಗಿ ರಾಮನವಮಿ ಮತ್ತು ಹನುಮಜ್ಜಯಂತಿಗಳಲ್ಲಿ ಎಲ್ಲರಿಗೂ ಹಂಚಿ ಹರ್ಷಿಸುತ್ತಾರೆ. ಹೀಗೆ ರಾಗಿಯ ಪುಡಿಯಿಂದ ಮಾಡುವ ಈ ಸಿಹಿತಿಂಡಿ ರಾಮರ ಹೆಸರಿನಲ್ಲಿ ಉಳಿದುಬಂದಿದೆ.

ಬನ್ನಿಮರ (ಶಮೀವೃಕ್ಷ)

ತಾರೆಮರದಲ್ಲಿ ಶನಿದೇವರು ನೆಲೆಸಿರುವನೆಂದೂ ಅಶ್ವತ್ಥವೃಕ್ಷದಲ್ಲಿ ವಿಷ್ಣು ನೆಲೆಸಿರುವನೆಂದೂ ಬಿಲ್ವವೃಕ್ಷದ ಪತ್ರೆ ಶಿವನಿಗೆ ಪ್ರಿಯವೆಂದೂ ಬನ್ನಿಮರ ಪುರಾಣ ಕಾಲದಿಂದ ಪೂಜ್ಯವೃಕ್ಷವೆನಿಸಿದೆಯೆಂದೂ ನಮ್ಮ ನಾಡವರು ನಂಬಿಕೊಂಡು ಬಂದಿದ್ದಾರೆ.

ಸಂಸ್ಕೃತದಲ್ಲಿ ಶಮೀವೃಕ್ಷವೆಂದು ಕರೆಯುವ ನೋಡಲು ಅಂದವಾಗಿರುವ ಈ ವೃಕ್ಷ ಸಣ್ಣ ಸಣ್ಣ ಎಲೆಯಿರುವ ಸುಮಾರು ಮೂರರಿಂದ ಐದು ಮೀಟರ್ ಎತ್ತರಕ್ಕೆ ಬೆಳೆಯುವ ಮಧ್ಯಮಗಾತ್ರದ ಮುಳ್ಳುಮರ. ಇದು ಪುರಾಣೇತಿಹಾಸಗಳಲ್ಲಿ ಪವಿತ್ರ ವೃಕ್ಷ ಪೂಜ್ಯ ವೃಕ್ಷ ಎನಿಸಿಕೊಂಡು ಪೂಜಾರ್ಹತೆಯನ್ನು ಪಡೆದುಕೊಂಡಿದೆ. ಇದು ಪೂಜನೀಯ ವೃಕ್ಷವೆಂದು ಕೊಂಡಾಡುವ ಹಿನ್ನೆಲೆಗೆ ಒಂದು ಪುರಾಣ ಕಥೆ ಪ್ರಚಲಿತವಾಗಿದೆ.

ಶ್ರೀರಾಮಚಂದ್ರನ ಪೂರ್ವಜನಾದ ರಘು ವಿಶ್ವವನ್ನೇ ಜಯಿಸಿ ವಿಶ್ವವಿಜೇತ ಯಜ್ಞವನ್ನು ಮಾಡಿದ. ಹೀಗೆ ಯಜ್ಞ ಮಾಡಿದ ರಾಜನು ತಾನು ಜಯಿಸಿದ ಪ್ರದೇಶದೊಂದಿಗೆ ತನ್ನಲ್ಲಿರುವ ಸಕಲ ಸಂಪತ್ತನ್ನೂ ದಾನ ಮಾಡಬೇಕಾಗಿತ್ತು. ಅದರಂತೆ ರಘುಮಹಾರಾಜನು ತನ್ನಲ್ಲಿರುವ ಸಕಲಸಂಪತ್ತನ್ನೂ ದಾನ ಮಾಡಿದ.

ದಾನಕಾರ್ಯ ಮುಗಿಸಿ ಬರಿಗೈಯವನಾದ ರಘುವಿನ ಹತ್ತಿರಕ್ಕೆ ಕೌತ್ಸ ಎಂಬ ವಟು ಬಂದನು. ಅವನು ವರತಂತು ಎಂಬ ಋಷಿಯ ಶಿಷ್ಯ. ಇವನಲ್ಲಿ ಗುರುವಿನ ಬಗೆಗೆ ಭಯ ಭಕ್ತಿ ಗೌರವ ಅಧಿಕವಾಗಿತ್ತು. ಅವನು ಗುರುಗಳ ಮೆಚ್ಚಿನ ಶಿಷ್ಯನಾಗಿದ್ದ. ಅವನ ವಿದ್ಯಾಭ್ಯಾಸ ಮುಗಿದಿತ್ತು. ಈಗ ಗುರುದಕ್ಷಿಣೆ ನೀಡುವ ಸಮಯ ಒದಗಿಬಂದಿತ್ತು. ಗುರುವಿನ ಬಗೆಗೆ ಅತಿಯಾದ ಶ್ರದ್ಧಾಭಕ್ತಿಗಳನ್ನಿಟ್ಟುಕೊಂಡಿದ್ದ ಕೌತ್ಸನು ತನ್ನ ಗುರುವಿಗೆ ಹದಿನಾಲ್ಕು ಕೋಟಿ ಸ್ವರ್ಣಮುದ್ರೆಗಳನ್ನು ನೀಡಬೇಕೆಂದು ಸಂಕಲ್ಪ ಮಾಡಿಕೊಂಡಿದ್ದನು. ಆದರೆ ಬ್ರಾಹ್ಮಣ ಕುಮಾರನಾದ ಅವನಿಗೆ ಹದಿನಾಲ್ಕು ಕೋಟಿ ಸ್ವರ್ಣಮುದ್ರೆಗಳು ಎಲ್ಲಿಂದ ಬರಬೇಕು?

ಆರು ಕಾಸು ಕೈಯಲ್ಲಿಲ್ಲದಿದ್ದರೂ ಆಕಾಶದೆತ್ತರದ ಆಸೆ ಕೌತ್ಸನದಾಗಿತ್ತು. ಅವನು ವಿಶ್ವವಿಜೇತ ಯಜ್ಞವನ್ನು ಮಾಡಿ ದಾನಕಾರ್ಯದಲ್ಲಿ ನಿರತನಾಗಿರುವ ರಘು ಮಹಾರಾಜನಲ್ಲಿ ಇಷ್ಟು ಹಣವನ್ನು ಯಾಚಿಸಬೇಕೆಂದು ನಿರ್ಧರಿಸಿ ಅಯೋಧ್ಯೆಗೆ ಬಂದನು. ಅವನು ಬರುವಷ್ಟರ ಹೊತ್ತಿಗೆ ರಘು ಮಹಾರಾಜನು ತನ್ನ ಸಂಪತ್ತನೆಲ್ಲ ದಾನ ಮಾಡಿಬಿಟ್ಟಿದ್ದ. ಬರಿಗೈಯವನಾಗಿರುವ ರಾಜನ ಪರಿಸ್ಥಿತಿ ಕೌತ್ಸನಿಗೆ ತಿಳಿಯಿತು. ಇಂಥ ಸಮಯದಲ್ಲಿ ಮಹಾರಾಜನಲ್ಲಿ ತನ್ನ ಕೋರಿಕೆಯನ್ನಿಟ್ಟು ಅವನನ್ನು ಇಕ್ಕಟ್ಟಿಗೆ ಸಿಕ್ಕಿಸಬಾರದೆಂದು ಭಾವಿಸಿ ಹಿಂದಕ್ಕೆ ಹೆಜ್ಜೆಯಿಟ್ಟ. ಇದನ್ನು ನೋಡಿದ ರಘು ಮಹಾರಾಜನಿಗೆ 'ಈ ಬ್ರಾಹ್ಮಣಪುತ್ರ ಯಾವ ಉದ್ದೇಶದಿಂದ ಇಲ್ಲಿಗೆ ಬಂದಿದ್ದ' ಎಂಬುದನ್ನು ತಿಳಿಯುವ ಕುತೂಹಲದಿಂದ ದೂತರನ್ನು ಅಟ್ಟಿ ಕೌತ್ಸನನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು 'ಬಂದವನು ಬಂದಂತೆಯೇ ಹಿಂದಿರುಗಲು ಕಾರಣವೇನು?' ಎಂದು ವಿಚಾರಿಸಿದನು. ಅದಕ್ಕೆ ಕೌತ್ಸನು

'ಮಹಾರಾಜ, ನಾನು ವರತಂತು ಮಹರ್ಷಿಗಳ ಶಿಷ್ಯ. ನನ್ನ ಹೆಸರು ಕೌತ್ಸ ಎಂದು. ನನ್ನ ಗುರುಗಳ ಅನುಗ್ರಹದಿಂದ ನನ್ನ ವಿದ್ಯಾಭ್ಯಾಸ ಮುಗಿಯಿತು. ನನಗೆ ಅತ್ಯಂತ ಪ್ರೀತಿಯಿಂದ ತಮ್ಮ ವಿದ್ಯೆಯನ್ನೆಲ್ಲ ಧಾರೆಯೆರೆದುಕೊಟ್ಟ ಆ ನನ್ನ ಪೂಜ್ಯ ಗುರುವಿಗೆ ಗುರುಕಾಣಿಕೆಯಾಗಿ ಹದಿನಾಲ್ಕು ಕೋಟಿ ಸ್ವರ್ಣಮುದ್ರಿಕೆಗಳನ್ನು ಕೊಡಬೇಕೆಂದು ನಿರ್ಧರಿಸಿಕೊಂಡು ವಿಶ್ವವಿಜೇತ ಯಜ್ಞ ಮಾಡಿದ ನಿಮ್ಮಲ್ಲಿ ಇಷ್ಟೊಂದು ಹಣವನ್ನು ಪಡೆಯಬಹುದೆಂಬ ಹಂಬಲದಿಂದ ಬಂದೆ. ಆದರೆ ತಡವಾಗಿ ಬಂದೆ. ಬರಿಗೈಯಲ್ಲಿರುವ ಈ ವಿಷಯ ನಿಮಗೆ ತಿಳಿದರೆ ನೀವು ನೊಂದುಕೊಳ್ಳಬಹುದೆಂದು ಭಾವಿಸಿ ಹಾಗೆಯೇ ಹಿಂದಿರುಗಿ ಹೋಗುತ್ತಿದ್ದೆ. ನಿನ್ನ ಬಂಟರು ಕರೆದುದರಿಂದ ಹಿಂದಕ್ಕೆ ಬಂದೆ' ಎಂಬುದಾಗಿ ಕೌತ್ಸನು ಸಂಕೋಚದಿಂದ ಎಲ್ಲವನ್ನೂ ವಿವರಿಸಿ ಹೇಳಿದ.

'ಅಯ್ಯಾ ವಟು, ಶುಭಕಾರ್ಯಕ್ಕಾಗಿ ನೀನು ಹಣ ಕೇಳುತ್ತಿರುವುದರಿಂದ ನಿನಗೆ ಬೇಕಿರುವಷ್ಟು ಸ್ವರ್ಣಮುದ್ರಿಕೆಗಳನ್ನು ನಾನು ಕೊಡುತ್ತೇನೆ" ಎಂದು ವಾಗ್ದಾನ ಮಾಡಿದ.

ಮಾರನೆಯ ದಿನ ಅಶ್ವಿನಿ ಶುದ್ಧದಶಮಿಯ ದಿನ. ಅಂದು ರಘು ಮಹಾರಾಜನು ಕೌತ್ಸನನ್ನು ಕರೆದುಕೊಂಡು ದೇವಲೋಕಕ್ಕೆ ಹೋದನು. ಆತ ಹದಿನಾಲ್ಕು ಕೋಟಿ ಸ್ವರ್ಣಮುದ್ರೆಗಳನ್ನು ಕೊಡುವಂತೆ ಕುಬೇರನಿಗೆ ಹೇಳಿದ. ಹಾಗೇನಾದರೂ ಕೊಡದಿದ್ದರೆ ದೇವಲೋಕವನ್ನೇ ಜಾಲಾಡುವುದಾಗಿ ಹೇಳಿದ. ರಘುಮಹಾರಾಜನ ಪರಾಕ್ರಮವನ್ನು ಅರಿತಿದ್ದ ದೇವೇಂದ್ರ ಹೆದರಿದ. ಅವನು ಆ ಕೂಡಲೆ ಸಭೆ ಕರೆದು ವಿಚಾರ ವಿನಿಮಯ ಮಾಡಿಕೊಂಡಾಗ ರಘುಮಹಾರಾಜನಿಗೆ ೧೪ ಕೋಟಿ ಸ್ವರ್ಣಮುದ್ರೆಗಳನ್ನು ಕೊಡಲು ಎಲ್ಲರೂ ಒಪ್ಪಿದರು.

ಅಂದು ರಘು ಮಹಾರಾಜ ಒಂದು ಶಮೀವೃಕ್ಷದ ಕೆಳಗೆ ಬೀಡುಬಿಟ್ಟಿದ್ದ. ರಘು ಮಹಾರಾಜನಿಗೆ ನಿದ್ರಾಭಂಗವಾಗಬಾರದೆಂದು ಎಣಿಸಿದ ದೇವತೆಗಳು ಆ ಶಮೀವೃಕ್ಷದ ಮೇಲೆ ಸ್ವರ್ಣವೃಷ್ಟಿಯನ್ನು ಕರೆದು ಹೊರಟುಹೋದರು. ಶಮೀವೃಕ್ಷದ ಕೆಳಗೆ ಸ್ವರ್ಣಮುದ್ರೆಗಳ ರಾಶಿಯೇ ಇತ್ತು. ಇದನ್ನು ಕಂಡ ರಘು ಮಹಾರಾಜನು ಕೌತ್ಸನಿಗೆ ಆ ಸ್ವರ್ಣ ಮುದ್ರೆಗಳನ್ನು ದಾನ ಮಾಡಿದನು.

ಆದರೆ ಇಲ್ಲೊಂದು ಸಮಸ್ಯೆ ಉದ್ಭವವಾಯಿತು. ಅದೇನೆಂದರೆ ಕೌತ್ಸನು ಕೇಳಿಕೊಂಡದ್ದು ಕೇವಲ ಹದಿನಾಲ್ಕು ಕೋಟಿ ಸ್ವರ್ಣಮುದ್ರೆಗಳು ಮಾತ್ರ. ಶಮೀವೃಕ್ಷದ ಕೆಳಗೆ ಅಪಾರವಾದ ಸ್ವರ್ಣಮುದ್ರಿಕೆಗಳಿದ್ದವು. ಕೌತ್ಸನು ತನಗೆ ಬೇಕಿರುವಷ್ಟನ್ನು ಮಾತ್ರ ಸ್ವೀಕರಿಸಿ ಉಳಿದದ್ದನ್ನು ತೆಗೆದುಕೊಳ್ಳಲು ಇಷ್ಟಪಡಲಿಲ್ಲ. ದಾನವಾಗಿ ಕೊಟ್ಟಿದ್ದನ್ನು ರಾಜನೂ ಹಿಂಪಡೆಯುವಂತಿರಲಿಲ್ಲ. ಆದ್ದರಿಂದ ಉಳಿದುದನ್ನೆಲ್ಲ ರಘುಮಹಾರಾಜನು ತನ್ನ ಪ್ರಜೆಗಳಿಗೆಲ್ಲ ದಾನ ಮಾಡಿದನು.

ರಘುಮಹಾರಾಜನು ಕುಬೇರನ ಮೇಲೆ ದಂಡೆತ್ತಿ ಹೋಗಿದ್ದ ಆ ದಿನ ದಶಮಿಯಾಗಿತ್ತು. ಅಂದು ಅವನು ದೇವತೆಗಳ ಮೇಲೆ ದಂಡೆತ್ತಿ ಹೋಗಿ ವಿಜಯಿಯಾಗಿದ್ದ. ಆದ್ದರಿಂದ ಅದು ವಿಜಯದಶಮಿ ಎನಿಸಿಕೊಂಡಿತು. ಅಲ್ಲದೆ ರಘುವಿನಿಂದಲೆ ರಘುವಂಶ ಪ್ರಾರಂಭವಾಯಿತು. ರಘುವಂಶದ ಅನೇಕ ತಲೆಮಾರುಗಳನಂತರ ಹುಟ್ಟಿದ ಶ್ರೀರಾಮನು ಅದೇ ವಿಜಯದಶಮಿಯಂದು ರಾವಣನನ್ನು ಸಂಹರಿಸಿದ. ಶ್ರೀರಾಮನು ಅಂದು ರಾವಣನ ದಶಶಿರಗಳನ್ನು ಹರಣ ಮಾಡಿದ್ದರಿಂದ ಆ ದಿವಸವು 'ದಶಹರಾ' ಎಂದು ಕರೆಯಲ್ಪಟ್ಟಿತು. 'ದಶಹರಾ' ಎಂಬ ಪದವೇ ಅಪಭ್ರಂಶಗೊಂಡು ಮುಂದೆ 'ದಸರಾ' ಆಯಿತು ಎಂಬುದಾಗಿ ಮುರಳೀಧರ ಕುಲಕರ್ಣಿಯವರು ಅಭಿಪ್ರಾಯಪಡುತ್ತಾರೆ. (ವಿಜಯ ಕರ್ನಾಟಕ : ೧೧, ಅಕ್ಟೋಬರ್ ೨೦೦೨, ಪು.೦೩)

ಬನ್ನಿಮರದ ಎಲೆಯನ್ನು ಚಿನ್ನ ಎಂಬು ಭಾವಿಸುತ್ತಾರೆ. ಅಲ್ಲದೆ ವಿಜಯ ದಶಮಿಯನ್ನು ಬನ್ನಿಹಬ್ಬ ಎಂದೂ ಕರೆಯುತ್ತಾರೆ. ಪಾಂಡವರು ಅಜ್ಞಾತವಾಸವನ್ನು ಪ್ರಾರಂಭಿಸಿದ್ದು ಬನ್ನಿಯ ಹಬ್ಬದಂದೇ.

ಕಲ್ಲುಕಡುಬ ಮಾಡಿ ಮುಳ್ಳು ಸಾವಿಗೆ ಮಾಡಿ
ಬನ್ನಿಯ ಎಲೆಯಾಗೆ ಎಡೆಮಾಡಿ – ಪಾಂಡವರು
ಉಂಡು ಹೋಗ್ಯಾರೋ ವನವಾಸ.

ಎಂದಿದ್ದಾರೆ ನಮ್ಮ ಜನಪದರು. ಪಾಂಡವರು ಅಜ್ಞಾತವಾಸಕ್ಕೆ ಹೋಗುವಾಗ ತಮ್ಮ ಶಸ್ತ್ರಾಸ್ತ್ರಗಳನ್ನು ಬನ್ನಿಯ ಮರದ ಕೊಂಬೆಯಲ್ಲಿ ಅಡಗಿಸಿಟ್ಟು ಹೋದರಂತೆ.

ಶಾಕ್ತಾಯರಿಂದ 'ಅಪರಾಜಿತಾ' ಎಂದು ಪೂಜೆಗೊಳ್ಳುವ ಬನ್ನಿಮರವು ರಾಮಾಯಣ ಮಹಾಭಾರತದ ವೇಳೆಯಲ್ಲಿ ಮಾನ್ಯತೆ ಪಡೆದಿತ್ತಲ್ಲದೆ ಚಂಡಮುಂಡರನ್ನು ಸಂಹರಿಸಿದ ಚಾಮುಂಡೇಶ್ವರಿಯು ವಿಜಯಿಯಾದುದೂ ಈ ದಶಮಿಯಂದೇ ಎಂಬುದಾಗಿ ಹೇಳುತ್ತಾರೆ. ಹಿಂದೆ ಅರಸರು ಬನ್ನಿಹಬ್ಬದ ದಿನವನ್ನು ದಿಗ್ವಿಜಯ ಕೈಗೊಳ್ಳಲು ಸಜ್ಜು ಮಾಡುವ ಮೊದಲ ದಿನವೆಂದು ಕರೆದು ಯುದ್ಧ ಸಾಮಗ್ರಿಗಳನ್ನೆಲ್ಲ ಪೂಜಿಸಿ ಸೈನ್ಯದೊಡನೆ ಊರ ಮುಂದಿನ ಬನ್ನಿಯ ದಿಬ್ಬದಲ್ಲಿ ಸೇರುತ್ತಿದ್ದರಂತೆ. ವಿಜಯನಗರದಲ್ಲಿ ಬನ್ನಿಯ ದಿಬ್ಬ ಎಂದು ಹೇಳುವ ಸ್ಥಳ ಇಂದಿಗೂ ಇದೆ. ಹೀಗೆ ಬಂದ ಸೈನ್ಯ ಬನ್ನಿ ಮುಡಿದು ಹಿಂದಿರುಗಿ ಬರುತ್ತಿತ್ತಂತೆ. ವಿಜಯನಗರದ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದ ಮೈಸೂರು ಅರಸರು ವಿಜಯದಶಮಿಯಂದು ಮೈಸೂರಿನಲ್ಲಿರುವ ಬನ್ನಿಮಂಟಪಕ್ಕೆ ಹೋಗಿ ಬನ್ನಿಮರಕ್ಕೆ ಪೂಜೆ ಸಲ್ಲಿಸಿ ಬನ್ನಿ ಮುಡಿದು ಅರಮನೆಗೆ ಹಿಂದಿರುಗುತ್ತಾರೆ. ಇದು ಇಂದು ನಾಡಹಬ್ಬ ಎಂದ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ. ಮೈಸೂರು ನಗರವಲ್ಲದೆ ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಬನ್ನಿಕಟ್ಟೆಗಳಿವೆ. ಉತ್ತರ ಕರ್ನಾಟಕದ ಒಂದು ಜನಪದ ಗೀತೆಯಲ್ಲಿ

ಬನ್ನಿ ಮುಡಿಯೋಣ ಬಾರ – ಕೋಲುಕೋಲ
ಬನ್ನಿ ತರುವೋಣ ಬಾರ – ಕೋಲುಕೋಲ
ಊರ ಸೀಮಿಯ ದಾಟಿ ಕಾಡಗುಡಿಯನು ಸೇರಿ
ಕಾಡಸಂಪತ್ತ ತರಬನ್ನಿ – ಕೋಲುಕೋಲ

ಕಣ್ಣ ಮೂಗಿಗೆ ನನ್ನ ಹೆಣ್ಣು ಮಗಳು ಚೆಲುವಿ
ಬಣ್ಣಕೆ ನನ್ನ ಸೊಸಿ ಚೆಲುವಿ – ಧರುಸೋಕ
ಬನ್ನಿ ಮುಡಿವಾಗ ಮಗಚೆಲುವ ।

ಐತಿಹಾಸಿಕವಾಗಿ ವಿಜಯನಗರದ ಪ್ರತಿಷ್ಠಾಪನೆ ಮಾಡಿದ ದಿನವೂ ವಿಜಯದಶಮಿಯಾಗಿದ್ದು ಹಂಪಿಯ ಬಳಿ ಕಟ್ಟಿದ ಹೊಸನಗರವನ್ನು 'ವಿಜಯನಗರ' ಎಂದು ಕರೆದುದಲ್ಲದೆ ಮಹಾನವಮಿ ದಿಬ್ಬವೇ ಬನ್ನಿಕಟ್ಟೆ ಎಂಬುದಾಗಿ ಹೇಳುತ್ತಾರೆ. ಹೀಗೆ ಬನ್ನಿಯ ಮರ ಪೌರಾಣಿಕ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದ ವೃಕ್ಷವಾಗಿದೆ.

ಮುತ್ತುರಾಯಸ್ವಾಮಿ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ದಕ್ಷಿಣದ ತುದಿಯ ಹಳ್ಳಿಗಳ ಜನರು ಪಿರಿಯಾಪಟ್ಟಣದಿಂದ ಗೋಣಿಕೊಪ್ಪಲಿಗೆ ಹೋಗುವ ರಸ್ತೆಯಲ್ಲಿ ಬೂದಿತಿಟ್ಟು ಎಂಬ ಪ್ರದೇಶವಿದೆ. ಈ ಬೂದಿತಿಟ್ಟಿನ ಹತ್ತಿರದಲ್ಲಿ ಮುತ್ತುರಾಯಸ್ವಾಮಿ ಗುಡಿ ಇದೆ.

ಇಲ್ಲಿರುವ ಮುತ್ತುರಾಯಸ್ವಾಮಿಯನ್ನು ಈ ಸುತ್ತಿನ ಜನರೆಲ್ಲರೂ ಬೇಟೆದೇವರೆಂದು ಕರೆದು ಆರಾಧಿಸುತ್ತಾರೆ. ಮುತ್ತುರಾಯಸ್ವಾಮಿ ಈ ಸ್ಥಳಕ್ಕೆ ಬಂದು ನೆಲಸಿದುದರ ಬಗೆಗೆ ಪಿರಿಯಾಪಟ್ಟಣದ ಸಣ್ಣಯ್ಯನ ಬೀದಿಯಲ್ಲಿರುವ ಸಿದ್ದೇಗೌಡರ ಮಗ ಕೆಂಪೇಗೌಡ ಅವರು ಈ ಕಥೆ ಹೇಳುತ್ತಾರೆ –

ಬಹಳ ಹಿಂದೆ ಪಿರಿಯಾಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಯ ಜನರು ಸಂಕ್ರಾಂತಿ ಹಬ್ಬದಂದು ಬೇಟೆಗಾಗಿ ಗೋಣಿಕೊಪ್ಪಲು ಕಡೆಯ ಕಾಡಿಗೆ ಹೋದರು. ಎಲ್ಲರೂ ಉತ್ಸಾಹದಿಂದ ಬೇಟೆ ಆಡುತ್ತಿದ್ದರು. ಕೆಲವರು ಉದ್ದೇಶಿತ ಪ್ರಮಾಣಕ್ಕಿಂತಲೂ ಹೆಚ್ಚು ಪ್ರಾಣಿಗಳನ್ನು ಹೊಡೆದು ಹೆಗಲಿಗೇರಿಸಿಕೊಂಡರು. ದೊಡ್ಡದೊಡ್ಡ ಪ್ರಾಣಿಗಳ ಬೇಟೆಯಾಡಿದವರು ಬೊಂಬಿನ ಅಡ್ಡೆಯ ಮೇಲೆ ಹಾಕಿಕೊಂಡು ಹೊತ್ತು ತರುತ್ತಿದ್ದರು. ಬೇಟೆ ಸ್ಪರ್ಧಾತ್ಮಕವಾಗಿ ನಡೆಯುತ್ತಿದ್ದುದರಿಂದ ಎಲ್ಲರೂ ಕಂಡಕಂಡ ಕಡೆಗೆ ಧಾವಿಸಿ ಹೋಗುತ್ತಿದ್ದರು. ಅಂಥವರಲ್ಲಿ ದೇವೇಗೌಡ ಎಂಬುವವನು ಹಿಂದಿರುವವರು, ಮುಂದಿರುವವರು, ತನ್ನ ಎಡಬದಿಯಲ್ಲಿರುವವರು ಅಥವಾ ಬಲಬದಿಯಲ್ಲಿರುವವರು ಯಾರನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಮುಂದೆ-ಮುಂದೆ-ಮುಂದೆ – ನುಗ್ಗಿ ಹೋಗುತ್ತಲೇ ಇದ್ದನು. ಹುಚ್ಚು ಹುಮ್ಮಸ್ಸಿನಲ್ಲಿ ದಿಕ್ಕೇ ತೋಚದೆ ದಟ್ಟಾರಣ್ಯದಲ್ಲಿ ಸಿಕ್ಕಿಕೊಂಡನು.

ದೇವೇಗೌಡನ ಜೊತೆಯಲ್ಲಿ ಬಂದಿದ್ದವರೆಲ್ಲ 'ಅವನು ನಮ್ಮೆಲ್ಲರನ್ನೂ ಬಿಟ್ಟು ತಾನೊಬ್ಬನೇ ಊರಿಗೆ ಮುಂದಾಗಿ ಹೊರಟುಹೋಗಿದ್ದಾನೆ!' ಎಂದುಕೊಳ್ಳುತ್ತ ಬೇಟೆಯಾಡಿದ ಪ್ರಾಣಿಗಳನ್ನು ಹೊತ್ತುಕೊಂಡು ಊರ ಕಡೆಗೆ ನಡೆದರು. ದೇವೇಗೌಡ ಕಾಡಿನಲ್ಲಿ ದಾರಿತಪ್ಪಿ ಪರದಾಡುತ್ತಿದ್ದಾನೆಂದು ಯಾರೂ ಯೋಚಿಸಲಿಲ್ಲ. ಊರಿಗೆ ಹಿಂದಿರುಗಿದ ಅವರೆಲ್ಲ 'ದೇವೇಗೌಡ, ನಮ್ಮೆಲ್ಲರಿಗಿಂತ್ಲೂ ಮುಂಚಿತವಾಗಿ ಬಂದವ್ನೆ ಅಂದ್ಕೊಂಡ್ರೆ ಅವುನೇ ಹಿಂದುಕ್ಕಾದ್ನ! ಬತ್ತನೆ ಬುಡಿ' ಎಂದು ಹಬ್ಬದ ಸಂಭ್ರಮದಲ್ಲಿ ತಲ್ಲೀನರಾಗಿ ಹೋದರು.

ಇತ್ತ ಕಡೆ ದಟ್ಟಾರಣ್ಯದಲ್ಲಿ ದಾರಿ ತಪ್ಪಿಸಿಕೊಂಡು ದಿಕ್ಕೇ ತೋಚದಂತಾಗಿದ್ದ ದೇವೇಗೌಡನಿಗೆ ಕಾಲುದಾರಿಯಾಗಲಿ ಜನವಸತಿಯಾಗಲಿ ಎಲ್ಲೂ ಕಂಡುಬರಲಿಲ್ಲ. ಅಲೆದು ಅಲೆದು ಸುಸ್ತಾಗಿದ್ದ ದೇವೇಗೌಡನಿಗೆ ಸಂಜೆ ಹೊತ್ತಾಗಿ ಕತ್ತಲು ಕವಿಯುತ್ತಿರುವುದು ಅರಿವಿಗೆ ಬಂತು. 'ಈ ಕಗ್ಗತ್ತಲ ಕಾಡಿನಲ್ಲಿ ನಾನು ಸತ್ತಂತೆಯೇ ಸರಿ!' ಎಂದು ನಿರ್ಧರಿಸಿದ ದೇವೇಗೌಡ ಕತ್ತಲ ದಾರಿಯಲ್ಲೇ ಮೆಲ್ಲಮೆಲ್ಲಗೆ ಹೆಜ್ಜೆಯಿಡುತ್ತ ಮುನ್ನಡೆದ. ಹೆಗಲಿನಲ್ಲಿ ತುಪಾಕಿ ತುಂಬಿದ ಕೋವಿ ಇದೆ ಎಂಬುದಲ್ಲದೆ ಅವನಿಗೆ ಬೇರೆ ಯಾವ ಆಧಾರವೂ ಇರಲಿಲ್ಲ.

ನಡೆದು ಹೋಗುವುದಾದರೂ ಎಲ್ಲಿಗೆ? ಎಲ್ಲಾದರೂ ಕುಳಿತರೆ ಹೇಗೆ? ಕಾಡುಪ್ರಾಣಿಗಳ ಪಾಲಾದರೆ ಗತಿಯೇನು? ಕಗ್ಗತ್ತಲಲ್ಲೇ ಹೆಜ್ಜೆ ಇಡುತ್ತಿದ್ದರೂ

ಹೆಜ್ಜೆ ಇಟ್ಟ ಸ್ಥಳದಲ್ಲಿ ಕಲ್ಲೋ ಮುಳ್ಳೋ ಹುಳುಹುಪ್ಪಡಿಗಳೋ ಏನಿದೆಯೋ ಏನಾಗುವುದೋ ಒಂದನ್ನೂ ತಿಳಿಯದೆ ದೇವೇಗೌಡ ಹೆಜ್ಜೆ ಹಾಕುತ್ತ ತನ್ನ ಇಷ್ಟದೈವ ಆಂಜನೇಯಸ್ವಾಮಿಯನ್ನು ನೆನೆದು ತನ್ನ ಕುತ್ತಿಗೆಯಲ್ಲಿದ್ದ ಹನುಮಾನ್ ತಾಯಿತವನ್ನು ಮುಟ್ಟಿ ಕಣ್ಣಿಗೊತ್ತಿಕೊಂಡ. ಅತ್ತ ಇತ್ತ ಸುತ್ತಮುತ್ತ ಎತ್ತೆತ್ತಲಿಂದಲೋ ಹಲಬಗೆಯ ಶಬ್ದಗಳು ಕಿವಿಯನ್ನು ಅಪ್ಪಳಿಸುತ್ತಿದ್ದವು. ಆದರೂ ಅಂಜದೆ ಅಳುಕದೆ ನಿರ್ಭಯಸ್ಥಿತಿಯ ಮನಸ್ಸಿನಿಂದ 'ಜೈ ಹನುಮಾನ್!' 'ಜೈ ಮಾರುತಿ!' ಎಂದು ಹೇಳುತ್ತ ಮುನ್ನಡೆಯುತ್ತಿರುವಾಗ ಅವನಿಗೊಂದು ಆಶಾಕಿರಣ ಗೋಚರವಾಯಿತು! ದೂರದಲ್ಲಿ ಯಾರೋ ಪಂಜೊಂದರ ಬೆಳಕಿನಲ್ಲಿ ಹೋಗುತ್ತಿದ್ದರು!

ದೇವೇಗೌಡನಿಗೆ ಹೊಸ ಉತ್ಸಾಹ ಉಂಟಾದಂತಾಗಿ ಜೋರುಧ್ವನಿಯಲ್ಲಿ ಕೂಗಿದನು. ಆಗ ಮುಂದೆ ಮುಂದೆ ಹೋಗುತ್ತಿದ್ದ ಪಂಜು ಥಟ್ಟನೆ ನಿಂತು ಕ್ಷಣಕಾಲ ಚಲಿಸದೆ ಇದ್ದು ಮತ್ತೆ ಮುನ್ನಡೆಯಿತು. ಆಗ ದೇವೇಗೌಡ–

'ನನ್ನ ಮಾರುತಿ ನನ್ನ ಕೈ ಬಿಡಲಿಲ್ಲ!' ಎಂದುಕೊಂಡು 'ಅದ್ಯಾರು ನಿಲ್ರಪ್ಪ! ನಾನು ಬತ್ತೀನಿ!' ಎಂದು ಬೇಗಬೇಗನೆ ಹೆಜ್ಜೆ ಇಡತೊಡಗಿದ. ಎಷ್ಟೇ ವೇಗವಾಗಿ ಹೋದರೂ ಆ ದೀವಟಿಗನಿಗೂ ೬೦–೮೦ ಅಡಿ ಅಂತರ ಇದ್ದೇ ಇರುತ್ತಿತ್ತು. ಎಷ್ಟೇ ಪ್ರಯತ್ನಪಟ್ಟರೂ ಗೌಡ ಆ ದೀವಟಿಗನ ಹತ್ತಿರಕ್ಕೆ ಹೋಗಲಾಗುತ್ತಿರಲೇ ಇಲ್ಲ. ಕೂಗಿ ಮಾತನಾಡಿಸಲು ಪ್ರಯತ್ನಿಸಿದರೂ ಏನೊಂದೂ ಉತ್ತರ ಬರುತ್ತಿರಲಿಲ್ಲ!

ದೇವೇಗೌಡ ರಾತ್ರಿಯೆಲ್ಲ ಆ ದೀವಟಿಗನನ್ನು ಹಿಂಬಾಲಿಸಿಕೊಂಡು ಬಂದ. ಅವನು ಕಾಡನ್ನು ಕಳೆದು ಊರು ಸೇರುವ ದಾರಿಗೆ ಬಂದುದಾಗಿತ್ತು. ಊರು ಇನ್ನೇನು ನಾಲ್ಕೈದು ಮೈಲಿ ದೂರವಿದೆ ಎನ್ನುವಾಗ ಅವನು ದೀವಟಿಗನನ್ನು ಸಮೀಪಿಸಿದ್ದ. ಹತ್ತಿರಕ್ಕೆ ಬಂದ ದೇವೇಗೌಡ ದೀವಟಿಗನನ್ನು ದಿಟ್ಟಿಸಿ ನೋಡಿದ! ಅವನ ಮೈ ರೋಮರೋಮವೆಲ್ಲ ಸೆಟೆದು ನಿಂತಿತು. ದೇವೇಗೌಡ ಆಶ್ಚರ್ಯಚಕಿತನಾಗಿ, ಆನಂದಭರಿತನಾಗಿ ಮತ್ತೆ ಮತ್ತೆ ದಿಟ್ಟಿಸಿದ. ಅವನ ಕೈಗಳೆರಡೂ ತಾವರೆ ಮೊಗ್ಗಿನಂತಾದವು. ಮೂಕವಿಸ್ಮಿತನಾಗಿದ್ದ ದೇವೇಗೌಡ–

'ನನ್ನ ದೇವರೇ ಮಾರುತಿ ಮಾರುತಿ, ಆಂಜನೇಯಸ್ವಾಮಿ ಜೈ ಹನುಮಾನ್ ಜೈ ಹನುಮಾನ್!' ಎನ್ನುತ್ತಿರುವಾಗ ಆ ದಿವ್ಯಮೂರ್ತಿಯ ಕೈಯಲ್ಲಿದ್ದ ಹೆಜ್ಜೊಡರು ಮರದೆತ್ತರಕ್ಕೆ ಜಿಗಿದು ಮರೆಯಾಯಿತು. ಆಗ ಒಂದು ಧ್ವನಿ ಕೇಳಿತು.

'ನಾನು, ಮುತ್ತುರಾಯ, ಇಲ್ಲೇ ನೆಲೆಸುತ್ತೇನೆ!' ಎಂದಂತಾಯಿತು. ಅಷ್ಟು ಹೊತ್ತಿಗೆ ಮೂಡಲು ಕಣ್ತೆರೆಯುತ್ತಿತ್ತು. ಕಾಡಿನಲ್ಲಿ ತಪ್ಪಿಸಿಕೊಂಡಿರುವ ದೇವೇಗೌಡನನ್ನು ಹುಡುಕುವುದಕ್ಕಾಗಿ ಒಂದು ಗುಂಪು ಬರುತ್ತಿತ್ತು. ಅವರೆಲ್ಲ ದೇವೇಗೌಡನನ್ನು ಕಂಡು ಹೋದ ಜೀವ ಬಂದಂತಾಗಿ ನಿಟ್ಟುಸಿರುಬಿಟ್ಟರು.

ದೇವೇಗೌಡ ನಡೆದುದನೆಲ್ಲ ವಿವರವಾಗಿ ಹೇಳಿ ಮರದ ಕೆಳಗೆ ಮೂಡಿರುವ ಮುತ್ತುರಾಯಸ್ವಾಮಿ ಮೂರ್ತಿಯನ್ನು ಎಲ್ಲರಿಗೂ ತೋರಿಸಿದ. ಎಲ್ಲರೂ ಭಕ್ತಿಯಿಂದ ಮುತ್ತುರಾಯ ಸ್ವಾಮಿ ಮೂರ್ತಿಗೆ ನಮಿಸಿದರು. ಅಂದಿನಿಂದ ಮುತ್ತುರಾಯ ಸ್ವಾಮಿ ಪಿರಿಯಾಪಟ್ಟಣದ ಸುತ್ತಮುತ್ತಲ ಹಳ್ಳಿಯ ಜನರಿಗೆ ಬೇಟೆ ದೇವರಾದನು.

ಮಹಾವೀರ ದೇವೇಗೌಡನ ಅನುಭವಗಳನ್ನು ಕೇಳಿದ ಊರ ಜನರೆಲ್ಲ ಅವನ ಬಗೆಗೆ ಗೌರವ ತೋರಿಸತೊಡಗಿದರು. ಅವನು ಮುತ್ತುರಾಯ ಸ್ವಾಮಿಯ ಪೂಜೆಯನ್ನು ಪ್ರತಿ ಸಂಕ್ರಾಂತಿಯಲ್ಲೂ ವಿಜೃಂಭಣೆಯಿಂದ ಮಾಡತೊಡಗಿದ. ಇದರಿಂದಾಗಿ ಅವನು ಕೇವಲ ದೇವೇಗೌಡನಾಗಿರದೆ ಪಟೇಲ್ ದೇವೇಗೌಡರು ಆದ. ಅವರ ವಂಶಿಕರಾಗಿ ಪಟೇಲ್ ಕಾಳೇಗೌಡರ, ಸಣ್ಣಯ್ಯನ ಬೀದಿ ಸಿದ್ದೇಗೌಡರ ಮತ್ತು ಕೆಂಪೇಗೌಡರ ಮಕ್ಕಳು ಇಂದಿಗೂ ಇದ್ದಾರೆ.

ಈಗಲೂ ಬೇಟೆಗೆ ಹೋಗುವ ಸಮಯಗಳಲ್ಲೆಲ್ಲ ಬೇಟೆಗಾರರು ಮುತ್ತುರಾಯ ಸ್ವಾಮಿಗೆ ಪೂಜೆ ಮಾಡುವುದರಿಂದಲೋ, ಒಂದು ಈಡುಗಾಯಿ ಹಾಕುವುದರಿಂದಲೋ, ಕೊನೇ ಪಕ್ಷ ಕೈಮುಗಿದು ಹೋಗುವುದರಿಂದಲೋ ಬೇಟೆ ಸಫಲವಾಗುವುದು ಕುರ್ತೇಟು ಎಂದು ನಂಬುತ್ತಾರೆ.

ಸಂಕ್ರಾಂತಿಯೆಂದರೆ ದಕ್ಷಿಣ ಕರ್ನಾಟಕದ ಬಹಳಷ್ಟು ಕಡೆಗಳಲ್ಲಿ ಅದು ಬೇಟೆಯ ಹಬ್ಬ (ನಮ್ಮ ಹಳ್ಳಿಗಾಡುಗಳಲ್ಲಿ 'ಎಳ್ಳು ಬೀರುವುದು' ಮತ್ತು 'ಪೊಂಗಲ್' ಮಾಡುವುದು ಇತ್ತೀಚೆಗೆ ಚಾಲೂ ಆಗುತ್ತಿರುವ ಪದ್ಧತಿ) ಪಿರಿಯಾಪಟ್ಟಣದ ಸುತ್ತಮುತ್ತಲ ಹಳ್ಳಿಯ ಜನರೆಲ್ಲ ಕೋಳಿ ಕೂಗುವ ಹೊತ್ತಿಗೆ ಎದ್ದು ಸ್ನಾನ ಮಡಿಗಳಿಂದ ಬೇಟೆ ಹತಾರಗಳನ್ನು ಹೊತ್ತುಕೊಂಡು ಬೇಟೆ ನಾಯಿಗಳ ಜೊತೆಯಲ್ಲಿ ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರಕ್ಕೆ ಬರುತ್ತಾರೆ.

ಬೇಟೆಗಾರರು ಬರುವ ಹೊತ್ತಿಗೆ ಪೂಜಾರಿಯ ದೇವಾಲಯವನ್ನು ಶುಚಿಗೊಳಿಸಿ ಪೂಜೆಗೆ ಅಣಿಮಾಡಿಕೊಂಡಿರುತ್ತಾನೆ. ಎಲ್ಲರೂ ತಮ್ಮ ತಮ್ಮ ಬೇಟೆ ಹತಾರಗಳನ್ನೆಲ್ಲ ದೇವರ ಮುಂದೆ ಇಡುತ್ತಾರೆ. ಪೂಜಾರಿಯು ದೇವರಿಗಲ್ಲದೆ ಈ ಹತಾರಗಳಿಗೆಲ್ಲ ಪೂಜೆ ಮಾಡಿ ತೀರ್ಥ ಪ್ರೋಕ್ಷಣೆ ಮಾಡುತ್ತಾನೆ. ಎಲ್ಲರಿಗೂ ಪ್ರಸಾದವನ್ನು ಕೊಡುತ್ತಾನೆ. ಈಗ ಎಲ್ಲರೂ ಮುತ್ತುರಾಯಸ್ವಾಮಿಗೆ ಕೈಮುಗಿದು ಅಡ್ಡಬಿದ್ದು–

'ಮುತ್ತುರಾಯಸ್ವಾಮಿ, ನಮಗೆಲ್ಲ ಒಳ್ಳೆ ಬೇಟೆ ಸಿಗುವಂತೆ ಮಾಡಪ್ಪ!' ಎಂದು ಪ್ರಾರ್ಥಿಸಿಕೊಂಡು, ಬೇಟೆಗೆ ಹೊರಟಿದ್ದವರಲ್ಲೊಬ್ಬ–

'ಮುತ್ತುರಾಯಸ್ವಾಮಿಗೆ ಒಂದು ಸಲ ಉಘೇ ಅನ್ರಪ್ಪ!' ಎನ್ನುತ್ತಾನೆ. ಅವನ ದನಿಗೆ ಮತ್ತೆಲ್ಲರೂ 'ಉಘೇ!' ಎಂದು ದನಿ ಸೇರಿಸುತ್ತಾರೆ. ಶಂಖ ಜಾಗಟೆ ಗಂಟೆಗಳ

ನಾದ ಇಡೀ ವಾತಾವರಣವನ್ನೇ ತುಂಬುತ್ತದೆ. ಈಗ ಎಲ್ಲರೂ ಆತುರಾತುರವಾಗಿ ದೇವರಿಗೆ ಅಡ್ಡಬಿದ್ದು ಕೈಮುಗಿದು ತಮ್ಮ ತಮ್ಮ ಹತಾರಗಳನ್ನು ತೆಗೆದುಕೊಂಡು ಆತುರಾತುರವಾಗಿ ಬೇಟೆಗೆ ಹೊರಡುತ್ತಾರೆ. (ಅರಣ್ಯಕ್ಕೆ ನುಗ್ಗಿ ಈಗ ಬೇಟೆ ಆಡಲು ಸರ್ಕಾರ ಅನುಮತಿಸುವುದಿಲ್ಲ. ಆದ್ದರಿಂದ ಬೇಟೆ ಕಾರ್ಯ ನಿಂತಿದೆ) ಆ ಸಂದರ್ಭದಲ್ಲಿ ಅವರು ಬೇಟೆ ಹಾಡುಗಳನ್ನು ಹಾಡುತ್ತಾರೆ.

ಹುಯ್ಯಿರೋ ಹುಯ್ಯಿರೋ
ಹುಯ್ಯಾರೆ ಹುಯ್ಯಿರೋ ।

ನಗಾರಿ ಹುಯ್ಯಿರೋ
ನರಿಯನ್ನು ಹುಯ್ಯಿರೋ ।

ತಮಟೆಯ ಹುಯ್ಯಿರೋ
ತಂಟೆ ಹುಲಿ ಹುಯ್ಯಿರೋ ।

ಕಡಕತ್ತಿ ಹುಯ್ಯಿರೋ
ಕರಡೀಯ ಹುಯ್ಯಿರೋ ।

ಕಠಾರಿ ಹುಯ್ಯಿರೋ
ಕಾಡುಕೊತ್ತಿ ಹುಯ್ಯಿರೋ ।

ಕೊಡಲಿಯ ಹುಯ್ಯಿರೋ
ಕಡವೆಯ ಹುಯ್ಯಿರೋ ।

ಈಟೀಯ ಹುಯ್ಯಿರೋ
ಕಾಟೀಯ ಹುಯ್ಯಿರೋ ।

ಮಚ್ಚುಗಳ ಹುಯ್ಯಿರೋ
ಪಚ್ಚೋತಿ ಹುಯ್ಯಿರೋ ।

ಬಾಣಗಳ ಹುಯ್ಯಿರೋ
ಬಳ್ಳುಗಳ ಹುಯ್ಯಿರೋ ।

ಕಂದಲನ್ನು ಹುಯ್ಯಿರೋ
ಹಂದಿಯನ್ನು ಹುಯ್ಯಿರೋ ।


ಬಾಕುವನ್ನು ಹುಯ್ಯಿರೋ
ಬರ್ಕಗಳ ಹುಯ್ಯಿರೋ ।

ಬಲ್ಲೆಯ ಹುಯ್ಯಿರೋ
ಹುಲ್ಲೆಗಳ ಹುಯ್ಯಿರೋ ।

ಹೆಬ್ಬಾರೆ ಹುಯ್ಯಿರೋ
ಹೆಬ್ಬಾವ ಹುಯ್ಯಿರೋ ।

ಹೀಗೆ ಹಾಡುತ್ತಲೋ ಕೂಗುತ್ತಲೋ ಕಿರುಚುತ್ತಲೋ ಕಾಡಿಗೆ ಹೋಗಿ ಕಂಡ ಕಂಡ ಮೃಗಗಳನ್ನು ಕೊಂದು ಊರ ಕಡೆಗೆ ಮುಖ ಮಾಡುತ್ತಾರೆ. ಎಲ್ಲರೂ ತಾವು ತಾವು ಹೊಡೆದಿರುವ ಮೃಗಗಳನ್ನೆಲ್ಲ ತಂದು, ಚರ್ಮ ಸುಲಿದು, ಶುದ್ಧಮಾಡಿ, ಪಾಲು ಹಾಕುತ್ತಾರೆ. ಪಾಲು ಹಾಕಿದ ಮೇಲೆ ತಮ್ಮ ತಮ್ಮ ಪಾಲುಗಳನ್ನು ತೆಗೆದುಕೊಂಡು ಕೆಲವರು ಮನೆ ಕಡೆಗೆ ಹೊರಟರೆ ಮತ್ತೆ ಕೆಲವರು ಮುತ್ತರಾಯಸ್ವಾಮಿಯ ಗುಡಿಯ ಹತ್ತಿರ ಅಡಿಗೆ ಮಾಡಿ ಮುತ್ತರಾಯಸ್ವಾಮಿಗೆ ಎಡೆಮಾಡಿ ಅನಂತರ ಅಲ್ಲಿ ಸೇರಿರುವ ಭಕ್ತರಿಗೆಲ್ಲ ಊಟ ಬಡಿಸುತ್ತಾರೆ. ಸೇರಿದ್ದವರು ಸಂತೃಪ್ತಿಯಿಂದ ತಿಂದು ಉಂಡು ಸಂಕ್ರಾಂತಿ ಹಬ್ಬವನ್ನು ಆಚರಿಸಿ ಉಳಿಕೆ ಪಳಕೆಗಾಗಿ ಮನೆ ಕಡೆಗೆ ಹೊರಡುತ್ತಾರೆ.






ಲವಕುಶರೊಡನೆ ಲವಲವಿಕೆಯ ಸೀತಾಮಾತೆ

ಜನಪದ ರಾಮಾಯಣದ ಕಥೆಗಳು

ಎಂದೂ ಮುಗಿಯದ ರಾಮಾಯಣ



ಅಮರಕಥಾಮೃತ ರಾಮಾಯಣ



ಸಂತೃಪ್ತ ಸುಖೀ ಸಾಮ್ರಾಜ್ಯ

ಕನಕದಾಸರ ರಾಘವಧಾನ್ಯ : ರಾಗಿ

ದಾಸಶ್ರೇಷ್ಠ ಕನಕದಾಸರು 'ರಾಮಧಾನ್ಯ ಚರಿತ್ರೆ' ಎಂಬ ಅರ್ಥಪೂರ್ಣ ಧ್ವನಿರಮ್ಯ ಭಾವದೀಪ್ತವಾದ ಒಂದು ಕಥನಕಾವ್ಯವನ್ನು ಬರೆದಿದ್ದಾರೆ. ರಾಗಿಯನ್ನು ಕುರಿತ ಈ ಕಾವ್ಯದ ವಸ್ತು ಅವರಿಗೆ ಜಾನಪದ ಮೂಲದಿಂದ ಬಂದಿರಬಹುದು. ಅಲ್ಲದೆ ರಾಗಿಯ ಪ್ರಸ್ತಾಪ ಪುರಂದರದಾಸರ ಕೀರ್ತನೆಯಲ್ಲಿಯೂ

ರಾಗಿ ತಂದಿರ್‍ಯಾ – ಭಿಕ್ಷಕೆ
ರಾಗಿ ತಂದೀರ್‍ಯಾ । ಪಲ್ಲವಿ ।

ಯೋಗ್ಯರಾಗಿ ಭೋಗ್ಯರಾಗಿ
ಭಾಗ್ಯವಂತರಾಗಿ ನೀವು । ಅ.ಪ. ।

ರಾಗಿಯ ಹಿರಿಮೆಯನ್ನು ಈ ಕಾವ್ಯದಲ್ಲಿ ಕೊಂಡಾಡಲಾಗಿದೆ. ಈಗಲೂ ನಮ್ಮ ಹಳ್ಳಿಗಳಲ್ಲಿ ರಾಗಿಯಂಥ ಧಾನ್ಯವಿಲ್ಲ ಹುರುಳಿಯಂಥ ದವಸವಿಲ್ಲ ಎನ್ನುತ್ತಾರೆ. ಆರೋಗ್ಯವೇ ಭಾಗ್ಯ ಎನ್ನುವವರಿಗೆ ಈ ದವಸಧಾನ್ಯಗಳ ರಹಸ್ಯ ಮನನೀಯವಾಗಿದೆ. 'ನರೆದಲಗ' ಎಂಬ ಹೆಸರಿನ ಧಾನ್ಯಕ್ಕೆ ಶ್ರೀರಾಘವನಿಂದ 'ರಾಘವಧಾನ್ಯ' ಎಂಬ ಹೆಸರು ಬಂದು ಅದು ಈಗ ರಾಗಿ ಆಗಿರುವುದರ ಬಗೆಗಿನ ಸುಮನೋಹರ ಕಥೆ ಈ 'ರಾಮಧಾನ್ಯ ಚರಿತ್ರೆ'.

ಶ್ರೀರಾಮನು ರಾವಣನ ಸಂಹಾರ ಮಾಡಿ ವಿಭೀಷಣನಿಗೆ ಲಂಕೆಯ ಪಟ್ಟವನ್ನು ಕಟ್ಟಿ ತಾನು ಅಯೋಧ್ಯಾಭಿಮುಖನಾಗಿ ಹೊರಡಲು ಸಿದ್ಧನಾದನು. ಆಗ ವಿಭೀಷಣನು ಸುಗ್ರೀವ ಹನುಮಂತ ಜಾಂಬವಂತ ಮೊದಲಾದವರನ್ನೆಲ್ಲ ಕೂಡಿಕೊಂಡು ಅಂಗದ ನಳ ನೀಲ ಮೊದಲಾದ ವಾನರವೀರರನ್ನೆಲ್ಲ ಸೇರಿಸಿಕೊಂಡು ಶ್ರೀರಾಮ ಸೀತಾ ಲಕ್ಷ್ಮಣರನ್ನು ಅಯೋಧ್ಯೆಗೆ ಬೀಳ್ಕೊಡಲು ಹೊರಟು ನಿಂತನು.

ಸಂಭ್ರಮದಿಂದ ಹೊರಟ ಈ ಮಹನೀಯರೆಲ್ಲ ವಾಲ್ಮೀಕ ಆಶ್ರಮಕ್ಕೆ ಬಂದರು. ಅಲ್ಲಿಂದ ಶ್ರೀರಾಮನು ಮುಚುಕುಂದ ಮುನಿಯ ಆಶ್ರಮಕ್ಕೆ ಬಂದನು. ಅಲ್ಲಿಗೆ ಕೌಶಿಕ ಜಮದಗ್ನಿ ಪರಾಶರ ಜಾಬಾಲಿ ಜಹ್ನು ಭೃಗು ದುರ್ವಾಸ ಗೌತಮ ಮೊದಲಾದ ಋಷಿಪುಂಗವರು ಬಂದು ಶ್ರೀರಾಮನಿಗೆ ಅಕ್ಷತೆಗಳನ್ನು ಹಾಕಿ ಆಶೀರ್ವದಿಸಿದರು.

ಶ್ರೀರಾಮಚಂದ್ರನು ಓಲಗಗೊಟ್ಟಿರುವಾಗ ಋಷಿವರ್ಯರು ಅಲ್ಲಿಗೆ ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನ ಮುಂತಾದ ರುಚಿಕರವಾದ ಭಕ್ಷ್ಯಗಳನ್ನು ಸಂಭ್ರಮದಿಂದ

ಹೆಡಿಗೆಗಳಲ್ಲಿ ಹೊರೆಸಿಕೊಂಡು ತಂದರು. ಶ್ರೀರಾಮನು ಶ್ರೀ ರುಚಿಕರ ಭಕ್ಷ್ಯಗಳನ್ನು ತನ್ನೆಲ್ಲ ಸೇನೆಗಳಿಗೂ ಕೊಡಿಸಿದನು. ವಾನರಸೇನೆಯು ಆನಂದದಿಂದ ತಿಂದು ಮುನಿವರರನ್ನು ಹಾಡಿ ಹರಸುತ್ತ ಆನಂದದಿಂದ ಕುಣಿದಾಡಿತು.

ಆ ಸಮಯದಲ್ಲಿ ಶ್ರೀರಾಮನು ಹನುಮಂತನನ್ನು ಕರೆದು "ಆಂಜನೇಯ, ಈ ಎಲ್ಲ ಭಕ್ಷ್ಯಭೋಜ್ಯಗಳ ರುಚಿ ಹೇಗೆಂದು ತಿಳಿಸು" ಎಂದನು. ಅದಕ್ಕೆ ಆಂಜನೇಯನು–

"ಪ್ರಭೂ ಈ ಎಲ್ಲ ಆಹಾರ ಪದಾರ್ಥಗಳಲ್ಲೂ ರುಚಿ ಇರುವುದು ಸ್ವಾಭಾವಿಕವೆ. ಆದರೆ ಇವುಗಳನ್ನು ತಯಾರಿಸುವ ಎಲ್ಲ ಧಾನ್ಯಗಳ ಮಹತ್ವ ತಿಳಿಯಬೇಕಾಗುತ್ತದೆ. ಆದ್ದರಿಂದ ನೀವು ಆ ಎಲ್ಲ ದವಸಧಾನ್ಯಗಳನ್ನು ತರಿಸಿ' ಎಂದನು.

ಆ ಕೂಡಲೆ ರಾಮನು ಗೌತಮಮುನಿಗಳ ಕಡೆಗೆ ನೋಡಿ "ಮಹರ್ಷಿ ಆ ಎಲ್ಲ ಧಾನ್ಯಗಳನ್ನು ತರಿಸಿರಿ" ಎಂದು ಹೇಳಿದನು. ಹೇಳಿದ ಕೂಡಲೆ ಅವಸರವಸರವಾಗಿ ತಮ್ಮ ಶಿಷ್ಯರನ್ನೆಲ್ಲ ಕರೆಸಿ "ತಡ ಮಾಡದೆ ಎಲ್ಲ ಧಾನ್ಯಗಳನ್ನು ತಂದು ಇಳುಹಿರಿ" ಎಂದನು.

ಶಿಷ್ಯಕೋಟಿಯು ಋಷಿವರ್ಯರ ಆಜ್ಞೆ ಆದ ಕೂಡಲೆ "ಇದು ನರೆದಲಗ" "ಇದು ನೆಲ್ಲು" "ಇದು ಹಾರಕ" "ಇದು ಜೋಳ" "ಇದು ಕಂಬು" "ಇದು ಭರಗು" "ಇದು ಸಾಮೆ" "ಇದು ನವಣೆ" ಎಂದು ಹೇಳುತ್ತಾ ನವವಿಧ ಧಾನ್ಯಗಳನ್ನು ತಂದು ಬೇರೆಯಾಗಿ ರಾಶಿ ಹಾಕಿದರು.

ಶ್ರೀರಾಮನ ಆ ರಾಶಿಗಳನ್ನು ಕಂಡು ಸಂತೋಷಗೊಂಡು "ಇವುಗಳಲ್ಲಿ ಮಹಾಸತ್ವಶಾಲಿಯಾದ ಧಾನ್ಯ ಯಾವುದು?" ಎಂದು ಅಲ್ಲಿದ್ದ ಮಹಾಮುನಿವರರನ್ನು ಕೇಳಿದ. ಅವರಲ್ಲಿ ಕೆಲವರು ತಮ್ಮ ತಮ್ಮ ಇಚ್ಛಾನುಸಾರ ಬೇರೆ ಬೇರೆ ಧಾನ್ಯಗಳನ್ನು ಹೇಳಿದರು. ಕೆಲವರು "ನೆಲ್ಲು ಅತಿಶಯದ ಧಾನ್ಯ" ಎಂದರು. ಹಾಗೆನ್ನುತ್ತಿರುವಾಗಲೆ ಮತ್ತೆ ಕೆಲವರು "ನರೆದಲಗನೇ ಶ್ರೇಷ್ಠ" ಎಂದರು.

ಈ ಎಲ್ಲರ ಅಭಿಪ್ರಾಯಗಳನ್ನು ಕೇಳಿದ ಶ್ರೀರಾಮನಿಗೆ ಯಾರಲ್ಲೂ ಒಮ್ಮತದ ಅಭಿಪ್ರಾಯ ಬರಲಿಲ್ಲವೆಂದು ಯೋಚಿಸಿ–

"ಹಲವು ಅಭಿಪ್ರಾಯಗಳೇಕೆ? ಯಾವುದಾದರೂ ಒಂದರ ಅಗ್ಗಳಿಕೆಯನ್ನು ಹೇಳಿರಿ!" ಎಂದ. ಆಗ ಗೌತಮಮುನಿಯು–

"ದಾಶರಥ ಚಿತ್ತೈಸು ನಮ್ಮ ದೇಶಕ್ಕೆ ನರೆದಲಗನೇ ಅತಿಶಯವಾದ ಸತ್ವಶಾಲಿ ಧಾನ್ಯ. ಅದು ಹೊರತಾಗಿ ಮಿಕ್ಕ ಧಾನ್ಯಗಳ ಮಾತೇಕೆ? ಅವುಗಳನ್ನೆಲ್ಲ ಪರಿಗಣಿಸುವ ಅಗತ್ಯವೇ ಇಲ್ಲ" ಎಂದರು. ಗೌತಮ ಮುನಿಯ ಮಾತನ್ನು ಕೇಳಿದ ನೆಲ್ಲು

"ಅಬ್ಬಬ್ಬಾ, ಒಳ್ಳೆಯ ಮಾತನ್ನೇ ಹೇಳಿದಿರಿ. ಶಿವಶಿವಾ ನಿಮ್ಮಂಥವರೇ ಈ ರೀತಿ ಪಕ್ಷಪಾತ ಮಾಡಬಹುದೆ? ಎಲ್ಲ ಧರ್ಮಗಳ ಅರ್ಥವನ್ನು ತಿಳಿದಿರುವ ಶ್ರೇಷ್ಠರಾದ ಋಷಿಮುನಿಗಳು ಇಲ್ಲಿರುವಾಗ, ಎಲ್ಲರನ್ನೂ ಉಪೇಕ್ಷಿಸಿ ಮಾತನಾಡುವುದೆ? ಸಾಕು ಈ ಮಾತು. ನಾನು ನೆಲ್ಲು. ನಾನು ಇಲ್ಲಿರುವಾಗ ನಮ್ಮೆಲ್ಲರೆದುರಿನಲ್ಲಿ ನರದಲಗನೇ ಶ್ರೇಷ್ಠನೆಂದು ಹೇಳುವುದು ಇದಾವ ಮತ?" ಎಂದು ಉಗ್ಗಡಿಸಿ ಈಗ ನೆಲ್ಲು ನರೆದಲಗನ ಕಡೆ ತಿರುಗಿ–

"ಎಲವೋ ನರೆದಲಗ ನೀನು ನನಗೆ ಸಮಾನನೇ? ನಮ್ಮಿಬ್ಬರ ಹೆಚ್ಚು-ಕುಂದುಗಳನ್ನು ರಘುರಾಮ ಬಲ್ಲ. ಕುಲಹೀನನಾದ ನೀನು ವಿವೇಕವಿಲ್ಲದ ಬುದ್ಧಿಹೀನನಲ್ಲವೆ? ನೀನು ಶೂದ್ರರ ಆಹಾರ. ನಿನ್ನನ್ನು ಬುದ್ಧಿವಂತರು ಮೆಚ್ಚುವುದಿಲ್ಲ. ಇದಕ್ಕೆ ಸ್ವರ್ಗದ ಸುರರೇ ಸಾಕ್ಷಿ. ನಿನಗೇತರ ಮರ್ಯಾದೆ, ಸಾಕು ತೊಲಗೋ ಆ ಕಡೆ!" ಎಂದಿತು. ಆಗ ನರೆದಲಗ ಸಿಟ್ಟಿಗೆದ್ದು–

"ಏಯ್ ವ್ರೀಹಿ, ಕೆಟ್ಟ ಮಾತುಗಳನ್ನು ಆಡಲು ಹೇಸದ ಭಂಡ ನೀನು. ನಿನ್ನಂಥವನೊಡನೆ ಮಾತನಾಡಲೂ ನನಗಿಷ್ಟವಿಲ್ಲ. ನೀನೊಬ್ಬ ಜಡ. ಸತ್ಯದ ಅರಿವಿಲ್ಲದವನು. ಬಡವರನ್ನು ಕಣ್ಣೆತ್ತಿಯೂ ನೋಡದವನು. ನೀನು ಶ್ರೀಮಂತರ ಪರ ಇರುವವನು. ನೀನು ಬಾಣಂತಿ, ರೋಗಿ ಹೆಣದ ಬಾಯಿಗೆ ಬೇಕಾದವನು. ನಿನ್ನ ಜನ್ಮ ನಿರರ್ಥಕ. ಸತ್ತವರಿಗೆ ಹಾಕುವ ಕಾಗೆ ಪಿಂಡ ನೀನು. ಮಳೆ ಇಲ್ಲದೆ ಬೆಳೆ ಇಲ್ಲದೆ ಬರಗಾಲ ಬಂದಾಗ, ಅನ್ನವಿಲ್ಲದೆ ವಿಲಿವಿಲಿ ಒದ್ದಾಡುವವರನ್ನು ಆದರಿಸಿ ಸಲಹುವವನು ನಾನು. ಇದು ಈ ಜಗತ್ತಿಗೇ ಗೊತ್ತು! ಕಷ್ಟಕಾಲಕ್ಕಾಗದ ನೀನು ಹುಲುಧಾನ್ಯ. ನೀನು ನನಗೆ ಸರಿಸಮಾನನೆ? ಬಡವರು–ಶ್ರೀಮಂತರು ಎಂಬ ಭಿನ್ನ ಭಾವ ನಿನ್ನಲ್ಲುಂಟು. ಆದರೆ ನನ್ನಲ್ಲಿ ಆ ಪಕ್ಷಪಾತವಿಲ್ಲ. ಎಲ್ಲರನ್ನೂ ಸಮಾನವಾಗಿ ಕಂಡು ಸಲಹುತ್ತೇನೆ. ನಿನ್ನಂತೆ ದಯಾಹೀನ ನಾನಲ್ಲ. ನಯವಂಚಕ ತೊಲಗು ಇಲ್ಲಿಂದ" ಎಂದಿತು ನರೆದಲಗ–

ಹೀಗೆ ನರೆದಲೆಗ ವ್ರೀಹಿಗಳು ಪರಸ್ಪರ ನಿಷ್ಠುರವಾದ ಮಾತುಗಳಿಂದ ಮಸೆದಾಡುತ್ತಿರುವುದನ್ನು ಕಂಡು ಗೌತಮರು "ಇಲ್ಲಿ ನೆರೆದಿರುವವರು ಅರಸರು, ಮುನಿಗಳು, ರಾಕ್ಷಸರು, ಕಪಿಗಳು ಮಾತ್ರ ನಮಗಷ್ಟೇ ಈ ನ್ಯಾಯವನ್ನು ಸರಿಯಾಗಿ ಪರಿಹರಿಸಲಿಕ್ಕೆ ಬರುವುದಿಲ್ಲ. ಹರಿಹರ ಬ್ರಹ್ಮಾದಿಗಳನ್ನೆಲ್ಲ ಅಯೋಧ್ಯಾ ನಗರಕ್ಕೆ ಕರೆಸುವೆವು. ಆಗ ಅವರು ಇವರ ಗುಣಾವಗುಣಗಳನ್ನು ನಿರ್ಣಯಿಸಿ ಹೇಳುವರು" ಎಂದರು. ಗೌತಮಮುನಿಗಳ ವಿನಯಶೀಲವಾದ ಮಾತನ್ನು ಕೇಳಿ ಶ್ರೀರಾಮನು ನಸುನಗುತ್ತಾ–

"ಗೌತಮರೇ, ಶ್ರೇಷ್ಠ ಧಾನ್ಯಗಳಾದ ಈ ಈರ್ವರು ಆರು ತಿಂಗಳು ಸೆರೆಯಲ್ಲಿ ಇರಲಿ. ಆಗ ಇವರಲ್ಲಿ ಶ್ರೇಷ್ಠರು ಯಾರು ಎಂದು ತಿಳಿಯಲು ಶಕ್ಯವಾಗುತ್ತದೆ.

ಅಯೋಧ್ಯಾನಗರಕ್ಕೆ ನಾವು ಹೋದ ಅನಂತರ ಇವುಗಳನ್ನು ಕರೆಸುತ್ತೇನೆ" ಎಂದು ಹೇಳುತ್ತಾ ವಿಭೀಷಣನೊಡನೆ ಅಯೋಧ್ಯಾ ಪುರದೆಡೆಗೆ ಎಲ್ಲರೂ ಹೊರಟು ನಿಂತರು. ಆಗ ನರೆದಲಗನು–

"ದೇವರೇ, ನಮ್ಮನ್ನು ಸೆರೆಗೆ ಹಾಕಿ ತಾವು ಸಂಪತ್ತಿನಲ್ಲಿ ರಾಜ್ಯಭಾರ ಮಾಡುತ್ತ ನಮ್ಮನ್ನು ಮರೆತರೆ ನಮ್ಮ ಗತಿಯೇನು? ನಮ್ಮನ್ನು ರಕ್ಷಣೆ ಮಾಡುವವರು ಯಾರು? ತಾವೇ ರಕ್ಷಿಸಬೇಕು" ಎಂದು ತಲೆತಗ್ಗಿಸಿ ಕೈಮುಗಿಯಿತು. ಅದಕ್ಕೆ ಶ್ರೀರಾಮಚಂದ್ರನು–

"ಆಗಲಿ. ಅದಕ್ಕೇಕೆ ಚಿಂತಿಸುವಿರಿ. ಸಾಧ್ಯವಾದಷ್ಟು ಬೇಗ ನಿಮಗೆ ನ್ಯಾಯ ದೊರಕುವಂತೆ ಮಾಡುತ್ತೇನೆ" ಎಂದು ಹೇಳಿ ಆ ಧಾನ್ಯಗಳನ್ನು ಗೌತಮರ ವಶಕ್ಕೊಪ್ಪಿಸಿ ಎಲ್ಲ ಮುನಿಗಳನ್ನು ಯೋಗ್ಯ ರೀತಿಯಲ್ಲಿ ಬೀಳ್ಕೊಟ್ಟನು.

ಅಯೋಧ್ಯೆಗೆ ಹಿಂದಿರುಗಿದ ಶ್ರೀರಾಮನು ಭರತನ ಅಭೀಪ್ಸೆಯಂತೆ ರಾಜ್ಯಭಾರವನ್ನು ವಹಿಸಿಕೊಂಡು ಓಲಗಕ್ಕೆ ಸಹೋದರರೊಡನೆ ಬಂದನು. ಅಂದಿನ ಓಲಗಕ್ಕೆ ಅರಸರು, ಮಂತ್ರಿಗಳು, ಬಾಂಧವರು, ಜಾಂಬವ ಸುಗ್ರೀವ ವಿಭೀಷಣರು ಬಂದು ಕೈಮುಗಿದು ಉಚಿತಾಸನಗಳಲ್ಲಿ ಕುಳಿತರು. ಆಗ ಶ್ರೀರಾಮನು ನಸುನಗುತ್ತ–

"ಕೇಳು ಲಕ್ಷ್ಮಣ, ಜಾಂಬವಂತ, ನಳ, ನೀಲ, ಸುಭಟರೆ ನೀವೆಲ್ಲ ಕೇಳಿರಿ. ವ್ರೀಹಿ ನರೆದಲಗಗಳನ್ನು ಸೆರೆಯೊಳಗಿಟ್ಟು ಬಹಳ ಕಾಲವಾಯಿತು. ಇದೀಗ ಏಳು ತಿಂಗಳ ಕಾಲವೇ ಮುಗಿದಿದೆ. ಅವರನ್ನು ಈ ಕೂಡಲೆ ಹೋಗಿ ವಾಯುಪುತ್ರ ಹನುಮಂತನೇ ಕರೆತರಲಿ" ಎಂದನು. ಅದಕ್ಕೆ ಆಂಜನೇಯನು "ಅಪ್ಪಣೆ ಪ್ರಭು" ಎನ್ನುತ್ತ ವಾಯುವೇಗದಲ್ಲಿ ಗೌತಮರ ಆಶ್ರಮಕ್ಕೆ ಬಂದು–

"ಸ್ವಾಮಿ, ಅವಧಿ ಮುಗಿದುಹೋಗಿದೆ. ತಾವು ಸೆರೆಯೊಳಗಿರುವ ಇಬ್ಬರು ಧಾನ್ಯಗಳನ್ನು ಕರೆದುಕೊಂಡು ಈ ಕ್ಷಣವೇ ಅರಸನ ಭೇಟಿಗೆ ಬರಬೇಕು" ಎಂದು ನುಡಿದು ಕೈಮುಗಿದನು.

ಶ್ರೀರಾಮನ ಆಜ್ಞೆಯಂತೆ ಗೌತಮರು ವ್ರೀಹಿ ನರೆದಲಗಗಳೊಡನೆ ಅಯೋಧ್ಯೆಗೆ ಹೊರಟರು. ಆ ವೇಳೆಗೆ ದೇವಾಧಿದೇವರುಗಳು ಇಂದ್ರಾದಿಗಳು ಶ್ರೀರಾಮರ ಒಡ್ಡೋಲಗಕ್ಕೆ ಬಂದಿದ್ದರು. ಆಗ ಶ್ರೀರಾಮನು–

"ಧಾನ್ಯವರ್ಗದ ಸಂತತಿಯನ್ನೆಲ್ಲ ಬರಹೇಳಿರಿ" ಎಂದಾಗ ನರೆದಲಗನು "ಸ್ವಾಮಿ, ನಮಗೆ ಒಳ್ಳೆಯ ಬುದ್ಧಿಯನ್ನು ದಯಪಾಲಿಸಿ. ಇದೇ ನನ್ನ ವಿನಂತಿ" ಎಂದಿತು. ಅದಕ್ಕೆ ಶ್ರೀರಾಮನು ದೇವಾಧಿದೇವರುಗಳನ್ನು ಮುನಿಗಳನ್ನು ನೋಡುತ್ತ ವ್ರೀಹಿ ಮತ್ತು ನರೆದಲಗವನ್ನು ತೋರಿಸುತ್ತಾ

"ಇವರಲ್ಲಿ ಯಾರು ಹೆಚ್ಚಿನ ಶ್ರೇಷ್ಠ ಗುಣಗಳನ್ನು ಹೊಂದಿರುವರು ಹೇಳಿರಿ" ಎನಲು ದೇವೇಂದ್ರನು ವ್ರೀಹಿ ಮತ್ತು ನರೆದಲಗಗಳನ್ನು ನೋಡಿ ಸೂಕ್ಷ್ಮವಾಗಿ ಪರೀಕ್ಷಿಸುತ್ತ–

"ನರೆದಲಗನೇ ಶ್ರೇಷ್ಠನು. ಈ ಭತ್ತ ನಿಸ್ಸಾರನಾದವನು!" ಎಂದನು.

ಆ ಮಾತಿಗೆ ನಾರದರು ನಸುನಗುತ್ತ "ಹೌದು. ದೇವೇಂದ್ರನ ಮಾತು ಸತ್ಯ. ನರೆದಲಗನೇ ಶ್ರೇಷ್ಠ ಮತ್ತು ಸಮರ್ಥ. ಕಾರಣವೇನೆಂದರೆ ಅವನನ್ನು ಸೆರೆಮನೆಯಲ್ಲಿಟ್ಟಿದ್ದರೂ ಕುಂದಲಿಲ್ಲ ಕಳೆಗುಂದಲಿಲ್ಲ ; ಆದರೆ ಈ ವ್ರೀಹಿ (ಭತ್ತ) ಸೆರೆಮನೆಯಲ್ಲಿದ್ದು ಕಾಂತಿಹೀನವಾಯಿತು" ಎಂದರು. ಆ ಮಾತನ್ನು ಕಪಿಲಮುನಿಗಳು ಸಮರ್ಥಿಸುವಂತೆ–

"ನವಧಾನ್ಯಗಳಲ್ಲಿ ನರೆದಲಗನೇ ಶ್ರೇಷ್ಠ. ಇದು ಸುಳ್ಳಲ್ಲ. ಬಡವರನ್ನು–ಬಲ್ಲಿದರನ್ನು ಕೂಡಿಯೇ ಸಲಹುವ ಸಾಮರ್ಥ್ಯ ನರೆದಲಗನಿಗೆ ಮಾತ್ರ ಇದೆ. ನೆಲ್ಲು ಇವನಿಗೆ ಸರಿಸಮಾನವಾಗಿ ನಿಲ್ಲಲಾರನು. ವ್ರೀಹಿ ಕೇವಲ ಶ್ರೀಮಂತರಿಗೆ ಉಪಕರಿಸುವನು. ಅವನಲ್ಲಿ ಸಾರವೆಂಬುದು ಲವಲೇಶವೂ ಇಲ್ಲ" ಎನ್ನಲು ಎಲ್ಲರೂ ಕಪಿಲರ ಮಾತಿಗೆ ಸಮ್ಮತಿ ಸೂಸುತ್ತಾ ನರೆದಲಗನನ್ನು ಮೆಚ್ಚಿ ನುಡಿದರು. ಆಗ ಶ್ರೀರಾಮನು–

"ನರೆದಲಗ ಬಾ ಇಲ್ಲಿ" ಎಂದು ಪ್ರೀತಿಯಿಂದ ಕರೆದು "ಇನ್ನು ಮುಂದೆ ನೀನು ನರೆದಲಗ ಅಲ್ಲ. ನೀನೂ ನನಗೆ ಮೆಚ್ಚಿನ ಧಾನ್ಯವಾದ್ದರಿಂದ ಇಂದಿನಿಂದ ನಾನು ನಿನ್ನನ್ನು ನನ್ನ ಹೆಸರಿನಲ್ಲಿ 'ರಾಘವಧಾನ್ಯ' ಎಂದು ಕರೆಯುತ್ತೇನೆ" ಎಂದು ತನ್ನ ಹೆಸರನ್ನು ಕೊಡಲು ಆ ಹೆಸರೇ ಪ್ರಸಿದ್ಧವಾಗಿ ರಾಘವಧಾನ್ಯ ಜನಸಾಮಾನ್ಯರ ಉಚ್ಚಾರಣೆಯಲ್ಲಿ 'ರಾಗಿ' ಆಯಿತು.

ಇದರಿಂದ ಆನಂದಪುಲಕಿತವಾದ ರಾಘವಧಾನ್ಯವು ನಲಿಯುತ್ತ ಶ್ರೀರಾಮನ ಚರಣಕಮಲಗಳಿಗೆ ನಮಸ್ಕರಿಸಿತು. ದೇವಾಧಿದೇವತೆಗಳು, ಋಷಿಮುನಿಗಳು, ರಕ್ಕಸರು ಎಲ್ಲರೂ ರಾಘವ ಧಾನ್ಯವನ್ನು ಕೊಂಡಾಡುತ್ತಿರುವಾಗ ಬ್ರಾಹ್ಮಣರು ರಾಘವ ಧಾನ್ಯಕ್ಕೆ ಮುತ್ತಿನ ಸೇಸೆಯನಿಕ್ಕಿ ಹರಸಿ ಉಪಚರಿಸಿದರು. ಮುನಿವರರು ರಾಘವಧಾನ್ಯವನ್ನು ಕೊಂಡಾಡಿದರು.

ಆದರೆ ಶ್ರೀರಾಮನು ವಿಭೀಷಣನ ಇಚ್ಛೆಯಂತೆ ಆ ಎರಡೂ ಧಾನ್ಯಗಳನ್ನು ಒಂದುಗೂಡಿಸಿ ಈ ಎರಡೂ ಧಾನ್ಯಗಳೂ ಒಂಬತ್ತು ಧಾನ್ಯಗಳಲ್ಲಿ ಪ್ರಸಿದ್ಧಿ ಪಡೆಯಲಿ ಎಂದು ಹರಸಿದನು.

ಶ್ರೀರಾಮನ ಮಂಡಿ ಗುರುತು

ತಮಿಳುನಾಡಿಗೆ ಸೇರಿ ಹೋಗಿರುವ ತಾಳವಾಡಿ ಪಿರ್ಕಾದಲ್ಲಿ ಶ್ರೀರಾಮನು ಬಾಣವನ್ನು ಪ್ರಯೋಗಿಸಲು ಮಂಡಿಯೂರಿ ಕುಳಿತ ಗುರುತು ಬಂಡೆಯೊಂದರ ಮೇಲೆ ಅಚ್ಚಳಿಯದೆ ಉಳಿದಿದೆ.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದ ಮೇಲೆ ರಾಮನು ಕಪಿಸೇನೆಯನ್ನು ಲಂಕೆಗೆ ಕರೆದೊಯ್ಯುತ್ತಿರುವಾಗ ಬೆಳೆದು ಮುಗಿಲಿನೆತ್ತರಕ್ಕೆ ನಿಂತಿರುವ ನೀಲಗಿರಿಯು ಸೈನ್ಯವನ್ನೆಲ್ಲ ತಡೆಯಿತಂತೆ. ಆಗ ಕೋಪಗೊಂಡ ಶ್ರೀರಾಮನು ಬಾಣವನ್ನು ಪ್ರಯೋಗಿಸಿ ನೀಲಗಿರಿಯ ಗರ್ವವನ್ನು ಮುರಿದ. ಆ ಸಮಯದಲ್ಲಿ ಬಾಣವನ್ನು ಪ್ರಯೋಗಿಸಲು ಶ್ರೀರಾಮನು ಮಂಡಿಯೂರಿ ಕುಳಿತಿದ್ದ ಗುರುತು ಈಗಲೂ ಹಾಗೆಯೇ ಉಳಿದಿದೆ.

ಲಂಕೆಯಿಂದ ಹಿಂದಿರುಗುವಾಗ ಈ ಸ್ಥಳದಲ್ಲಿ ಶ್ರೀರಾಮ ಸೀತೆ ಲಕ್ಷ್ಮಣರು ಬಂದು ತಂಗಿದ್ದರಂತೆ. ಆ ಸೀತೆಯು ಒಣಗಲು ಹರಡಿದ್ದ ಸೀರೆಯ ಗುರುತೂ ಆ ಬಂಡೆಯ ಮೇಲಿದೆ.

ಒಕ್ಕಲಿಗರನ್ನು ವಂಚಿಸಿದ ಬೂದುಗುಂಬಳ

ನಮ್ಮ ಗ್ರಾಮೀಣ ಜನರಿಗೆ ಗೊತ್ತಿರುವಂತೆ ಒಕ್ಕಲಿಗರು ಬೂದುಗುಂಬಳ ಕಾಯನ್ನು ಬೆಳೆದರೂ ಅದನ್ನು ತಿನ್ನುವುದಿಲ್ಲ. ಏಕೆಂದು ಕೇಳಿದರೆ ಶ್ರೀರಾಮನ ಕಾಲಕ್ಕೆ ಸಂಬಂಧಿಸಿದಂತೆ ಒಂದು ಕಥೆಯನ್ನು ಹೇಳಿ ಸಮರ್ಥಿಸಿಕೊಳ್ಳುತ್ತಾರೆ. ಅರ್ಚಕ ರಂಗಸ್ವಾಮಿಯವರು ತಮ್ಮ "ಹುಟ್ಟಿದ ಹಳ್ಳಿ" ಕೃತಿಯಲ್ಲಿ ಒಕ್ಕಲಿಗರು ಬೂದುಗುಂಬಳಕಾಯನ್ನು ತಿನ್ನದೆ ಇರುವುದಕ್ಕೆ ಕಾರಣನ್ನು ಹೇಳುವ ಕಥೆಯನ್ನು ಬರೆದಿದ್ದಾರೆ. ಈ ಕಥೆಯ ಮತ್ತೂ ಒಳ್ಳೆಯ ಪಾಠಗಳು ನಮ್ಮ ಜನಪದರಲ್ಲಿವೆ. ಅವುಗಳಲ್ಲಿ ಹೆಬ್ಬಾಳಿನ ವಿಷಕಂಠೇಗೌಡರು ಹೇಳಿರುವ ಕಥೆಯನ್ನು ಇಲ್ಲಿ ಉಳಿಸಿಕೊಂಡಿದ್ದೇನೆ.

ಒಕ್ಕಲಿಗರು ಬೂದುಗುಂಬಳಕಾಯನ್ನು ತಿನ್ನುವುದಿಲ್ಲ. ಆದರೆ ಬೆಳೆಯುತ್ತಾರೆ. ತಾವು ಬೆಳಸಿದ ಗಿಡದಲ್ಲಿ ಬಿಟ್ಟ ಮೊದಲ ಫಲವನ್ನು ತಮ್ಮ ಗ್ರಾಮದಲ್ಲಿರುವ ದೇವರಿಗೆ ಎಡೆಮಾಡಿ ಪೂಜೆ ಆದನಂತರ ಆ ಬೂದುಗುಂಬಳಕಾಯನ್ನು ದೇವರಿಗೆ ಮೂರು ಸಲ ನೀವಳಿಸಿ ದೇವಾಲಯದ ಬಾಗಿಲಲ್ಲಿ ಈಡುಗಾಯಿ ಹಾಕಿ ಅದನ್ನು ಅಲ್ಲೇ ಬಿಟ್ಟು ಬರುತ್ತಾರೆ. ಅದನ್ನು ಅರ್ಚಕರು ತೆಗೆದುಕೊಳ್ಳುತ್ತಾರೆ.

ತಮ್ಮ ಜಮೀನಿನಲ್ಲಿರುವ ಉಳಿದ ಬೂದುಗುಂಬಳ ಫಲಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡುವ ಪದ್ಧತಿ ಇದೆ. "ಇಷ್ಟೊಂದು ಬೆಳೆದ ಫಲಗಳನ್ನು ತಾವು ತಿನ್ನದೆ ಎಲ್ಲವನ್ನೂ ಬ್ರಾಹ್ಮಣರಿಗೆ ಯಾಕೆ ಕೊಟ್ಟುಬಿಡುತ್ತೀರಿ?" ಎಂದು ಕೇಳಿದರೆ ಅವರು ಗ್ರಾಮರಾಮಾಯಣದ ಪ್ರಸಂಗವೊಂದನ್ನು ಹೇಳುತ್ತಾರೆ. ಅದೇಂದರೆ ಬೂದುಗುಂಬಳವು ಬ್ರಾಹ್ಮಣರಿಗೆ ಒಲಿಯಿತಂತೆ. ಒಕ್ಕಲಿಗರನ್ನು ವಂಚಿಸಿತಂತೆ. ಆ ಪ್ರಸಂಗ ಹೀಗೆ –

ಶ್ರೀರಾಮನು ವನವಾಸಕ್ಕೆ ಹೋದ ಮೇಲೆ ಭರತ ರಾಜನಾಗಿದ್ದರೂ ಪ್ರಜೆಗಳು – ಅದರಲ್ಲೂ ವಿಶೇಷವಾಗಿ – ಒಕ್ಕಲಿಗರು ಗೌರವದಿಂದ ನಡೆಸಿಕೊಳ್ಳುತ್ತಿರಲಿಲ್ಲ. ರಾಜ ಭರತನು ಬರುತ್ತಿದ್ದರೂ ಎದ್ದು ನಿಂತು ಗೌರವಿಸದೆ ಉದಾಸೀನ ಭಾವದಿಂದ ಕುಳಿತಲ್ಲೇ ಕುಳಿತು ಏನೂ ತಿಳಿಯದವರಂತೆ ಇದ್ದು ಬಿಡುತ್ತಿದ್ದರು. ಆಗ ಭರತನ ಪರಿವಾರದವರು ದುರಹಂಕಾರಿಗಳಾದ ಒಕ್ಕಲಿಗರು ರಾಜ ಬಂದರೂ ಎದ್ದುನಿಂತು ಗೌರವ ಕೊಡದಿರುವುದನ್ನು ಗಮನಿಸಿ ಆಕ್ಷೇಪಿಸಿದರು. ಅದಕ್ಕೆ ಈ ಒಕ್ಕಲಿಗರು–

"ಸ್ವಾಮಿ, ನೀವು ಬರ್ತಾ ಇದ್ದೀರಿ ಅನ್ನೋದು ನಮಗೆ ಹೇಗೆ ಗೊತ್ತಾಗುತ್ತೆ? ಗೊತ್ತಾದರೆ ನಾವು ಎದ್ದು ನಿಂತು ಗೌರವ ಕೊಡುತ್ತೇವೆ. ಗೊತ್ತಾಗಲು ಒಂದು ಕೆಲಸ ಮಾಡಿ. ನಿಮ್ಮ ಸೊಂಟಕ್ಕೆ ಗಂಟೆಯನ್ನು ಕಟ್ಟಿಕೊಂಡು ಶಬ್ದ ಮಾಡುತ್ತಾ ಬನ್ನಿರಿ! ಇದರಿಂದ ನೀವು ಬರುತ್ತಿರುವುದು ನಮಗೆ ತಿಳಿಯುತ್ತದೆ. ಆಗ ಎದ್ದುನಿಲ್ಲುತ್ತೇವೆ" ಎಂದು ಒರಟಾಗಿ ಉತ್ತರಿಸಿದರು. ಇದರಿಂದ ಭರತನು ಬಹುವಾಗಿ ನೊಂದುಕೊಂಡರೂ ವಿಧಿಯಿಲ್ಲದೆ ಸುಮ್ಮನಾದನು.

ಒಕ್ಕಲಿಗರು ಹೇಳಿ ಕೇಳಿ ವ್ಯವಸಾಯಗಾರರು, ಅವರು ತಾವು ಬೆಳೆದ ಬೆಳೆಯಲ್ಲಿ ಆರನೇ ಒಂದು ಭಾಗವನ್ನು ಕಂದಾಯ ರೂಪದಲ್ಲಿ ಕೊಡಬೇಕಾಗಿತ್ತು. ಅದಕ್ಕಾಗಿ ಒಕ್ಕಲಿಗರು ಭರತನ ಬಳಿಗೆ ಬಂದು "ಸ್ವಾಮಿ ಈ ಸಲದ ಬೆಳೆಯಲ್ಲಿ ನಿಮಗೆ ಮೇಲ್ಬೆಳೆ ಬೇಕೋ ಕೀಳ್ಬೆಳೆ ಬೇಕೋ?" ಎಂದು ಕೇಳಿದರು. ಅಪ್ರತಿಭನಾದ ಭರತನು ಯಾವ ಬೆಳೆ ಬೇಕೆಂದು ಥಟ್ಟನೆ ಹೇಳಲಾಗದೆ ಕೀಳ್ಬೆಳೆಗಿಂತ ಮೇಲ್ಬೆಳೆ ಶ್ರೇಷ್ಠವೆಂದು ಭಾವಿಸಿ "ನನಗೆ ಮೇಲ್ಬೆಳೆ ಕೊಡಿ" ಎಂದನು.

ಭರತನ ಮಾತಿನಂತೆ ಮೇಲ್ಬೆಳೆ ಕೊಡಲು ಒಕ್ಕಲಿಗರು ಒಂದು ತಂತ್ರವನ್ನು ಯೋಚಿಸಿದರು. ಪೈರಿನ ಮೇಲೆ ಬೆಳೆಯುವ ರಾಗಿ, ಭತ್ತ, ನವಣೆ, ಜೋಳ ಮುಂತಾದ ಧಾನ್ಯಗಳನ್ನಾಗಲಿ, ಅವರೆ, ತೊಗರಿ, ತಡಗುಣಿ, ಹುರುಳಿ, ಹೆಸರು, ಉದ್ದು ಮುಂತಾದ ದವಸಗಳನ್ನಾಗಲಿ ಬೆಳೆಯದೆ ಕೀಳ್ಬೆಳೆಗಳು – ಅಂದರೆ – ನೆಲದ ಒಳಗೆ ಬೆಳೆಯುವ ಗೆಡ್ಡೆ–ಗೆಣಸು, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಅರಿಸಿನ, ಮೂಲಂಗಿ, ಕಡಲೆಕಾಯಿ, ಆಲೂಗೆಡ್ಡೆ, ಸುವರ್ಣಗೆಡ್ಡೆ ಮುಂತಾದವುಗಳನ್ನು ಬೆಳೆದು

ಕೀಳ್ಬೆಳೆಗಳನ್ನೆಲ್ಲ ತಾವು ತೆಗೆದುಕೊಂಡು ಮೇಲ್ಬೆಳೆಯಾದ ಸೊಪ್ಪುಸದೆಯನ್ನೆಲ್ಲ ತಂದು "ಸ್ವಾಮಿ, ತಕ್ಕೊಳ್ಳಿ ನಿಮ್ಮ ಮೇಲ್ಬೆಳೆ!" ಎಂದು ಹೇಳಿ ಅರಮನೆ ಮುಂದೆ ರಾಶಿ ಒಟ್ಟಿ ಹೋದರು!

ಈಗ ಭರತನಿಗೆ ನಾನು ಮೇಲ್ಬೆಳೆ ಕೇಳದೆ ಕೀಳ್ಬೆಳೆಯನ್ನೇ ಕೇಳಬೇಕಿತ್ತು ಎನಿಸಿತು. "ಮುಂದಿನ ಸಲ ನಾನು ಕೀಳ್ಬೆಳೆಯನ್ನೇ ಕೇಳಬೇಕು!" ಎಂದುಕೊಂಡನು. ಮುಂದಿನ ಸಲ ಎಂದಿನಂತೆ ಒಕ್ಕಲಿಗರು ಭರತನ ಬಳಿಗೆ ಬಂದು "ಸ್ವಾಮಿ, ಈ ಸಲ ಮೇಲ್ಬೆಳೆ ಬೇಕೋ ಕೀಳ್ಬೆಳೆ ಬೇಕೋ?" ಎಂದು ಕೇಳಿದರು. ಭರತ ಈಗಾಗಲೆ ನಿರ್ಧರಿಸಿಕೊಂಡಿದ್ದಂತೆ "ಈ ಸಲ ನನಗೆ ಕೀಳ್ಬೆಳೆಯನ್ನು ಕೊಡಿ!" ಎಂದನು.

ಈ ಸಲ ಒಕ್ಕಲಿಗರು ಕೀಳ್ಬೆಳೆಗಳನ್ನು ಬಿಟ್ಟು ಮೇಲ್ಬೆಳೆಗಳಾದ ರಾಗಿ ಭತ್ತ ಜೋಳ ನವಣೆ ಅವರೆ ತೊಗರಿ ತಡಗುಣಿ ಹೆಸರು ಉದ್ದು ಎಳ್ಳು ಹುರುಳಿ ಮುಂತಾದ ದವಸಧಾನ್ಯಗಳನ್ನು ಬೆಳೆದರು. ಮೇಲಿನ ಫಸಲನ್ನೆಲ್ಲ ತೆಗೆದುಕೊಂಡು ನಾರುಬೇರನ್ನೆಲ್ಲ ಅರಮನೆ ಮುಂದೆ ಒಟ್ಟಿ "ಸ್ವಾಮಿ ತಕ್ಕೊಳ್ಳಿ ನೀವು ಕೇಳಿದ್ದ ಕೀಳ್ಬೆಳೆ" ಎಂದು ಹೇಳಿ ಹೊರಟುಹೋದರು.

ಹೀಗೆ ಶ್ರೀರಾಮನು ವನವಾಸವನ್ನು ಮುಗಿಸಿಕೊಂಡು ಅಯೋಧ್ಯೆಗೆ ಬರುವವರೆಗೆ ಬಗೆಬಗೆಯಾಗಿ ಕಿರುಕುಳ ಕೊಟ್ಟರು. ಭರತ ಎಲ್ಲವನ್ನೂ ಹಲ್ಲು ಕಚ್ಚಿಕೊಂಡು ಸಹಿಸಿಕೊಂಡಿದ್ದನು. ಅಷ್ಟರಲ್ಲಿ ಶ್ರೀರಾಮಚಂದ್ರನು ವನವಾಸ ಮುಗಿಸಿ ಅಯೋಧ್ಯೆಗೆ ಹಿಂದಿರುಗಿದನು. ರಾಮ ಬಂದ ಕೂಡಲೆ ಭರತ ತಾನು ಒಕ್ಕಲಿಗರಿಂದ ಅನುಭವಿಸಿದ ಗೋಳುಗೋಳನ್ನೆಲ್ಲ ತೋಡಿಕೊಂಡನು. ಅದಕ್ಕೆ ಪರಿಹಾರವನ್ನು ಸೂಚಿಸಲು ಶ್ರೀರಾಮನು ಮಂತ್ರಿ ಸುಮಂತ್ರನ ಕಡೆಗೆ ನೋಡುತ್ತ :

"ಸಚಿವೋತ್ತಮ, ಇದಕ್ಕೆ ನೀನೇ ಸೂಕ್ತವಾದ ಪರಿಹಾರವನ್ನು ಹೇಳಿ ನ್ಯಾಯವನ್ನು ದೊರಕಿಸಿಕೊಡು" ಎಂದನು. ಶ್ರೀರಾಮನ ಆಜ್ಞೆಗೆ ತಲೆಬಾಗಿದ ಬ್ರಾಹ್ಮಣ ಸುಮಂತ್ರ ಒಕ್ಕಲಿಗರ ತಂತ್ರಕ್ಕೆ ಪ್ರತಿತಂತ್ರ ರೂಪಿಸಲು ಸನ್ನದ್ಧನಾದನು.

ಒಂದು ದಿನ ಸುಮಂತ್ರನು ಒಕ್ಕಲಿಗರನ್ನೆಲ್ಲ ಅರಮನೆ ಮುಂದಕ್ಕೆ ಬರಹೇಳಿದನು. ಎಲ್ಲರೂ ಬಂದರು. ಅಲ್ಲಿ ಶ್ರೀರಾಮ ಲಕ್ಷ್ಮಣ ಭರತ ಜೊತೆಗೆ ಬ್ರಾಹ್ಮಣ ಸುಮಂತ್ರ ಇದ್ದರು. ಸುಮಂತ್ರನು ಶ್ರೀರಾಮನ ಸಮ್ಮುಖದಲ್ಲಿ ಮಾತಿಗೆ ಪ್ರಾರಂಭಿಸಿದನು.

"ಒಕ್ಕಲಿಗರೇ, ಈ ವರ್ಷದಿಂದ ನೀವು ಕಟ್ಟಬೇಕಾಗಿರುವ ಕಂದಾಯದ ನಿಯಮವನ್ನು ಸರಳಗೊಳಿಸುತ್ತಿದ್ದೇವೆ. ಇದೋ ನೋಡಿ ಪ್ರಭುಗಳ ಸಮ್ಮುಖದಲ್ಲಿ ನಾನು ಇಲ್ಲಿ ಒಂದು ಬೂದುಗುಂಬಳದ ಬೀಜವನ್ನು ನೆಡುತ್ತಿದ್ದೇನೆ. ಇದೇ ಫಲದ ಬೀಜಗಳನ್ನು ನಿಮಗೂ ಕೊಡುತ್ತಿದ್ದೇನೆ. ನೀವು ಈ ಬೀಜಗಳನ್ನು ಬಿತ್ತಿ ಬೆಳೆದು

ಎಷ್ಟು ಬೇಕಾದರೂ ಫಲವನ್ನು ಪಡೆಯಬಹುದು. ಆದರೆ ಈ ಅರಮನೆಯ ಎದುರಿನಲ್ಲಿ ನೆಟ್ಟಿರುವ ಕುಂಬಳದ ಗಿಡದಲ್ಲಿ ಬಿಡುವ ಒಂದು ಕಾಯಿನ ತೂಕದಷ್ಟು ಕಂದಾಯವೆಂದು ನೀವು ಯಾವ ಫಲವನ್ನಾಗಲಿ ದವಸಧಾನ್ಯವನ್ನಾಗಲಿ ಕೊಟ್ಟರೆ ಸಾಕು; ಕೊನೆಗೆ ಚಿನ್ನ ಬೆಳ್ಳಿ ವಜ್ರ ವೈಢೂರ್ಯ ಮುತ್ತು ರತ್ನವಾದರೂ ಆದೀತು. ಈ ನಿಯಮ ನಿಮಗೆ ಒಪ್ಪಿಗೆಯೆ?" ಎಂದು ಕೇಳಿದನು. ಅದಕ್ಕೆ ಒಕ್ಕಲಿಗರೆಲ್ಲ ಸಂತೋಷದಿಂದ 'ಇದು ಕಂದಾಯದ ಕುಲವ?' ಎಂದು ಗರ್ವದಿಂದ ಒಪ್ಪಿಗೆ ಸೂಚಿಸಿದರು. ಅಲ್ಲದೆ ತಾವು ತಾವೇ–

"ಒಂದು ಕುಂಬಳಕಾಯಿ ಕೊಡಿ ಅನ್ನದೆ ಚಿನ್ನ ಬೆಳ್ಳಿ ವಜ್ರ ವೈಢೂರ್ಯವಾದರೂ ಆದೀತಂತೆ. ಈ ಸುಮಂತ್ರ ಅವುನಲ್ಲ ಅವನು ಕಿತಾಪತಿ ಮಂತ್ರಿ" ಎಂದು ಮಾತಾಡಿಕೊಂಡರು.

ಅರಮನೆಯ ಮುಂದೆ ಸಚಿವ ಸುಮಂತ್ರ ನೆಟ್ಟ ಬೂದುಗುಂಬಳದ ಬೀಜ ಮೊಳೆತು ಬೆಳೆದು ಹಬ್ಬಿ ಹರಡಿಕೊಂಡು ಮೈತುಂಬ ಫಲಗಳನ್ನು ಬಿಟ್ಟಿತು. ಆದರೆ ಒಕ್ಕಲಿಗರು ನೆಟ್ಟ ಬೀಜಗಳು ಹುಟ್ಟಲೇ ಇಲ್ಲ. "ಈ ಸಲ ಬೆಳೆ ಹೋದರೂ ಚಿಂತೆಯಿಲ್ಲ. ಹಿಂದಿನ ವರ್ಷಗಳ ದವಸಧಾನ್ಯಗಳು ಕಣಜದ ತುಂಬ ಇದ್ದಾವಲ್ಲ" ಎಂದು ತಾವು ತಾವೇ ಸಮಾಧಾನ ಮಾಡಿಕೊಂಡರು. ಈಗ ಒಕ್ಕಲಿಗರು ಕಂದಾಯ ಸಂದಾಯ ಮಾಡುವ ದಿನ ಬಂತು. ಅವರು ಹಿಂದಿನ ವರ್ಷಗಳಲ್ಲಿ ಬೆಳೆದು ಉಳಿದಿದ್ದ ದವಸಧಾನ್ಯಗಳನ್ನು ಕೊಡಲು ತಂದರು.

ತಕ್ಕಡಿಯ ಒಂದು ತಟ್ಟೆಯಲ್ಲಿ ಅರಮನೆ ಮುಂದೆ ಬೆಳೆದಿದ್ದ ಬೂದುಗುಂಬಳ ಕಾಯಿಗಳಲ್ಲಿ ಒಂದು ಕುಂಬಳಕಾಯಿ ತೆಪ್ಪಗೆ ಕುಳಿತಿತ್ತು. ಮತ್ತೊಂದು ತಟ್ಟೆಗೆ ಒಕ್ಕಲಿಗರು ತಂದಿದ್ದ ದವಸ ಧಾನ್ಯಗಳನ್ನು ಹಾಕಿದರು. ತಕ್ಕಡಿಯ ತಟ್ಟೆ ಮಿಸುಕಾಡಲಿಲ್ಲ. ತಕ್ಕಡಿ ತಟ್ಟೆ ಮೇಲೇಳದಂತೆ ಆಂಜನೇಯ ಅದೃಶ್ಯರೂಪದಲ್ಲಿ ತಕ್ಕಡಿ ತಟ್ಟೆಯನ್ನು ಅದುಮಿ ಹಿಡಿದಿದ್ದ. ಈಗ ಒಕ್ಕಲಿಗರು ಮನೆಯಲ್ಲಿದ್ದ ಉಳಿಕೆ ಪಳಕೆ ದವಸಧಾನ್ಯವನ್ನೆಲ್ಲ ತಂದು ಹಾಕಿದರು. ಪ್ರಯೋಜನವಾಗಲಿಲ್ಲ. ದಿಕ್ಕೆಟ್ಟ ಒಕ್ಕಲಿಗರು ತಮ್ಮ ಮನೆಗಳಲ್ಲಿದ್ದ ದುಡ್ಡು ಕಾಸು ಒಡವೆ ವಸ್ತುಗಳನ್ನೆಲ್ಲ ತಂದು ತಕ್ಕಡಿ ತಟ್ಟೆಗೆ ಹಾಕಿದರು. ಆದರೂ ತಕ್ಕಡಿ ಅಲುಗಾಡಲಿಲ್ಲ. ಎಕ್ಕಸೊಕ್ಕಿನ ಒಕ್ಕಲಿಗರು ತಮ್ಮ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ದಿಕ್ಕೆಟ್ಟರೂ ದಿಕ್ಕೆಟ್ಟವರಂತೆ ಕಾಣಿಸಿಕೊಳ್ಳದೆ ಮೈಮೇಲಿದ್ದ ಒಡವೆಗಳನ್ನೆಲ್ಲ ತಕ್ಕಡಿಗೆ ಹಾಕಿದರು. ಆದರೂ ತಕ್ಕಡಿ ಅಲ್ಲಾಡಲಿಲ್ಲ. ಕೊನೆಗೆ ತಮ್ಮ ಹೆಂಡತಿಯರ ಕುತ್ತಿಗೆಯಲ್ಲಿದ್ದ ತಾಳಿಗಳನ್ನು ತಕ್ಕಡಿಗೆ ಹಾಕಲು ತಂದರು.

ಆಗ "ಸಾಕು ಒಕ್ಕಲಿಗರೇ ಸಾಕು. ನೀವು ಕೊಟ್ಟ ಮಾತಿನಂತೆ ಕಂದಾಯ ಕಟ್ಟಲಾಗದಿದ್ದರೂ ಚಿಂತೆಯಿಲ್ಲ. ನಿಮ್ಮ ಹೆಂಡತಿಯರ ತಾಳಿಗಳನ್ನು ತಕ್ಕಡಿಗೆ

ಹಾಕಬೇಡಿ. ಈ ವರ್ಷ ನಿಮ್ಮ ಕಂದಾಯವನ್ನು ರದ್ದು ಮಾಡಿದ್ದೇನೆ. ಮುಂದಿನ ವರ್ಷದಿಂದ ನಮ್ಮ ತಂದೆಯವರ ಕಾಲದಲ್ಲಿ ಕೊಡುತ್ತಿದ್ದಂತೆ ಬೆಳೆದ ಬೆಳೆಯಲ್ಲಿ ಆರನೇ ಒಂದು ಭಾಗ ಕೊಟ್ಟರೆ ಸಾಕು!" ಎಂದನು. ಒಕ್ಕಲಿಗರು ತಲೆತಗ್ಗಿಸಿಕೊಂಡು ನಿಂತಿದ್ದರು. ಶ್ರೀರಾಮನ ಒಕ್ಕಲಿಗರನ್ನು ನೋಡಿ ನಸುನಗುತ್ತ–

ಒಕ್ಕಲಿಗರ ಪರದಾಟವನ್ನು ಗಮನಿಸುತ್ತಿದ್ದ ಶ್ರೀರಾಮಚಂದ್ರನು 'ಆಂಜನೇಯನಿಗೆ ತೂಕ ಬಿಡು!' ಎಂದು ಸನ್ನೆ \ಮಾಡಿದನು. ಆಂಜನೇಯ ತಕ್ಕಡಿಯಿಂದ ಕೆಳಕ್ಕಿಳಿದನು.

ಆಗ ಶ್ರೀರಾಮನು "ಒಕ್ಕಲಿಗರೇ, ಹರಹರಹರ ಎನ್ನುತ್ತ ತಕ್ಕಡಿಯನ್ನು ಮುಟ್ಟಿ" ಎಂದನು. ರಾಮ ಹೇಳಿದಂತೆ ಒಕ್ಕಲಿಗರು "ಹರ ಹರ ಹರ" ಎನ್ನುತ್ತ ತಕ್ಕಡಿಯನ್ನು ಮುಟ್ಟಿದಾಗ ತಕ್ಕಡಿ ಸರಿದೂಗಿತು. ಆಗ ರಾಮನು ಅವರವರ ದವಸಧಾನ್ಯ ಒಡವೆ ವಸ್ತುಗಳನ್ನು ತೆಗೆದುಕೊಂಡು ಹೋಗಲು ಹೇಳಿದನು. ಅನಂತರ ಶ್ರೀರಾಮ ಲಕ್ಷ್ಮಣ ಸುಮಂತ್ರರು ಅಲ್ಲಿಂದ ಹೊರಟು ಹೋದರು. ಅವರು ಹೋದ ಮೇಲೆ ಭರತ ಮಾತ್ರ ಒಕ್ಕಲಿಗರನ್ನು ನೋಡುತ್ತ ಕುಹಕದ ನಗೆ ನಗುತ್ತ

"ಒಕ್ಕಲಿಗರೇ ನಿಮ್ಮ ಸೊಕ್ಕು ಅಡಗಿತಲ್ಲವೆ?" ಎಂದು ಕೇಳಿದನು. ಭರತನ ಮಾತನ್ನು ಜೀರ್ಣಿಸಿಕೊಳ್ಳಲಾರದ ಒಕ್ಕಲಿಗರು ಕಪಟ ವಿನಯದಿಂದ–

"ಹಾಗೆಂದರೇನು ಸ್ವಾಮಿ?" ಎಂದು ಕೇಳಿದರು. ಅದಕ್ಕೆ ಭರತನು

"ಆ ಬ್ರಾಹ್ಮಣ ಸುಮಂತ್ರ ನೆಟ್ಟ ಗಿಡದಲ್ಲಿ ಸಾಕಷ್ಟು ಕುಂಬಳಕಾಯಿ ಬಿಟ್ಟವು. ನೀವು ನೆಟ್ಟ ಬೀಜಗಳು ಮೊಳೆಯಲೇ ಇಲ್ಲ!"

"ಹೌದು ಸ್ವಾಮಿ, ಆ ಬೂದುಗುಂಬಳದ ಬೀಜಗಳು ಮೊಳೆಯದೆ ನಮ್ಮ ಮಾನ ಮರ್ಯಾದೆಯನ್ನೆಲ್ಲ ಗಾಳಿಗೆ ತೂರಿಬಿಟ್ಟವು. ನಮಗೆ ಆದ ಅವಮಾನ ಎಷ್ಟು! ನಾವು ತಲೆ ಎತ್ತದಂತೆ ಮಾಡಿದ ಆ ಬೂದುಗುಂಬಳ ಆ ಬ್ರಾಹ್ಮಣನಿಗೆ ಒಲಿದಂತೆ ನಮಗೆ ಒಲಿಯಲಿಲ್ಲ. ಇನ್ನು ಮುಂದೆ ಆ ದರಿದ್ರ ಬೂದುಗುಂಬಳವನ್ನು ನಾವು ಬೆಳೆಯುವುದೂ ಇಲ್ಲ ; ಆಕಸ್ಮಿಕವಾಗಿ ಬೆಳೆದರೂ ಅದನ್ನು ನಾವು ಖಂಡಿತ ತಿನ್ನುವುದಿಲ್ಲ. ಈ ಮಾತಿಗೆ ಶ್ರೀರಾಮನ ಪಾದದ ಮೇಲಾಣೆ!" ಎಂದುಬಿಟ್ಟರು. ಆಗ ಭರತನು ನಗುತ್ತ–

"ಅಯ್ಯಾ ಮೂರ್ಖ ಒಕ್ಕಲಿಗರೇ, ರಾಮನ ಪಾದದ ಮೇಲಾಣೆ ಮಾಡಿಬಿಟ್ಟಿರಲ್ಲ. ನಾನು ಏನೆಂದು ಹೇಳಲಿ. ಕೇಳಿ. ಕಂದಾಯದ ವಿಚಾರದಲ್ಲಿ ನೀವು ಮಾಡಿದ ತಂತ್ರಕ್ಕೆ ಆ ಬ್ರಾಹ್ಮಣ ಸುಮಂತ್ರ ಹೂಡಿದ ಪ್ರತಿತಂತ್ರ ಇದು!"

"ಹಾಗೆಂದರೇನು ಸ್ವಾಮಿ?"

"ಕೇಳಿ ದಡ್ಡ ಒಕ್ಕಲಿಗರೇ, ನಿಮ್ಮ ಸೊಕ್ಕು ಮುರಿಯಲೆಂದೇ ಆ ಬ್ರಾಹ್ಮಣ ಸುಮಂತ್ರ ಅರಮನೆಯ ಮುಂದೆ ಒಳ್ಳೆಯ ಬೀಜಗಳನ್ನು ನೆಟ್ಟು, ನಿಮಗೆಲ್ಲ ರೊಟ್ಟಿ ಸುಡುವ ಹರಲೆ ಮೇಲೆ ತುಸು ಹುರಿದ ಕಾಳುಗಳನ್ನು ಕೊಟ್ಟ. ಆ ಕಾರಣದಿಂದ ನೀವು ನೆಟ್ಟ ಬೀಜಗಳೊಂದೂ ಮೊಳೆಯಲೇ ಇಲ್ಲ!"

ಒಕ್ಕಲಿಗರಿಗೆ ಸಿಟ್ಟು ಬಂದರೂ ಆ ಬ್ರಾಹ್ಮಣನ ವಿರೋಧ ಕಟ್ಟಿಕೊಂಡರೆ ಇನ್ನೇನು ಅಪಾಯ ಸೃಷ್ಟಿಸಿ ಅನಾಹುತ ಮಾಡುತ್ತಾನೋ ಎಂದೂ ಯೋಚಿಸಿ–

"ಪ್ರಭೂ, ಹಾಗಾದರೆ ಆ ಬ್ರಾಹ್ಮಣ ಹುರಿದ ಬೀಜಗಳನ್ನು ನಮಗೆ ಕೊಟ್ಟು ವಂಚನೆ ಮಾಡಿದನೆ?"

"ಹೌದೂ ಹೌದು!"

ಒಕ್ಕಲಿಗರಿಗೆ ಏನು ಮಾಡಲೂ ತೋಚದೆ ಕಟಕಟನೆ ಹಲ್ಲು ಕಡಿಯುತ್ತ 'ಬಡವನ ಕೋಪ ದವಡೆಗೆ ಮೂಲ' ಎಂದುಕೊಳ್ಳುತ್ತ,

"ಹುರಿದ ಕಾಳನ್ನು ಕೊಟ್ಟಿದ್ದರೂ ನಾವು ತಿಳಿಯದೆ ಅದನ್ನು ನೆಟ್ಟಿದ್ದು ನಮ್ಮ ತಪ್ಪು. ಬಡ್ಡೀದು ಈ ಬೂದುಗುಂಬಳಕಾಯಲ್ವ ನಮ್ಮುನ್ನ ತೀರಿಸಿದ್ದು. ನಾವು ದಡ್ಡ ಮುಂಡೇವು! ಇನ್ನು ಮೇಲೆ ಈ ಬಡ್ಡೆತ್ತುದ್ದ ಮುಟ್ಟಲೇಬಾರದು" ಎಂದು ತಮ್ಮ ಅವಿವೇಕಕ್ಕೆ ತಾವೇ ತಮ್ಮನ್ನು ಬೈದುಕೊಳ್ಳುತ್ತ ಮನೆಗೆ ಬಂದರು. ಅಂದಿನಿಂದಲೂ ಒಕ್ಕಲಿಗರು ಬೂದುಗುಂಬಳ ಕಾಯನ್ನು ತಿನ್ನುವುದಿಲ್ಲ. ಈ ಕಥೆ ಈಗಲೂ ನಮ್ಮ ಹಳ್ಳಿಗಳಲ್ಲಿ ಹಿರೀತಲೆಗಳು ಹೇಳುತ್ತಿರುತ್ತಾರೆ.

ಆದರೆ ಈ ಕಥೆ ಇಲ್ಲಿಗೆ ಮುಗಿದಿಲ್ಲ. ಇದರ ಪರಿಸಮಾಪ್ತಿ ನುಡಿಗಳನ್ನು ಹೆಬ್ಬಾಳಿನ ವಿಷಕಂಠೇಗೌಡರು ಹೀಗೆ ಹೇಳಿದ್ದಾರೆ.

"ಒಕ್ಕಲಿಗರಿಗೆ ಶ್ರೀರಾಮನು ತಕ್ಕಡಿಯನ್ನು ಮುಟ್ಟುವಾಗ 'ಹರ ಹರ ಹರ' ಎಂದು ಹೇಳುತ್ತ ಮುಟ್ಟಿರಿ ಎಂದ. ಹಾಗೇ ಹೇಳುತ್ತ ಒಕ್ಕಲಿಗರು ತಕ್ಕಡಿ ಮುಟ್ಟಿದಾಗ ಆ ಕೂಡಲೆ ತಕ್ಕಡಿ ಸರಿದೂಗಿತು. ಇದು 'ಹರ'ನ ಹೆಸರಿನ ಮಹಿಮೆ. ಈ ಕಾರಣದಿಂದ ಒಕ್ಕಲಿಗರು ಈಗಲೂ ಹೊಲಗದ್ದೆಗಳನ್ನು ಉಳುವಾಗ 'ಹರ ಹರ ಹರ' ಎಂದು ಹರನನ್ನು ಸ್ಮರಿಸುತ್ತಾರೆ. 'ಹರ'ನ ನಾಮಸ್ಮರಣೆ ವಿಚಾರ ಒಂದಾದರೆ ಇನ್ನೊಂದು ಮುಖ್ಯವಾದ ವಿಚಾರವಿದೆ. ಅದೇನೆಂದರೆ ಒಕ್ಕಲಿಗರು ಈ ಹೊತ್ತಿಗೂ ಹೊಲಗದ್ದೆಗಳಿಗೆ ಮೊದಲು ಬೀಜ ಬಿತ್ತುವ ದಿನಗಳಲ್ಲಿ ಏನೇ ಕಾರಣಕ್ಕೂ ಅವರ ಮನೆಗಳಲ್ಲಿ ಹರಲೆಗಳನ್ನು ಒಲೆಯ ಮೇಲಿಟ್ಟು ಯಾವುದೇ ಕಾಳುಗಳನ್ನೂ ಹುರಿಯುವುದಿಲ್ಲ; ರೊಟ್ಟಿ ಸುಡುವುದಿಲ್ಲ ; ದೋಸೆ ಹುಯ್ಯುವುದಿಲ್ಲ. ಏಕೆಂದರೆ ಆ ಬ್ರಾಹ್ಮಣ ಸುಮಂತ್ರ ಹುರಿದುಕೊಟ್ಟಿದ್ದ ಬೂದುಗುಂಬಳದ ಬೀಜಗಳು ಮೊಳೆಯದೆ ಒಲವರವಾದ ಸತ್ಯ ಅವರ ಮನದಾಳದಲ್ಲಿ ಇಂದಿಗೂ ಸ್ಥಿರವಾಗಿ ನಿಂತುಬಿಟ್ಟಿದೆ.

ಅದೇನೇ ಇರಲಿ ನಮ್ಮ ಜನಪದರು ಇದೊಂದು ಐತಿಹಾಸಿಕ ಘಟನೆ ಎನ್ನುವಂತೆ ಹೇಳುತ್ತಾರೆ. ಇದರ ಐತಿಹಾಸಿಕ ಸತ್ಯ ಬೂದುಗುಂಬಳಕಾಯನ್ನು ತಿನ್ನದ ಒಕ್ಕಲಿಗರಿಗೂ ಗೊತ್ತಿಲ್ಲ ; ಬೂದುಗುಂಬಳಕಾಯಿ ಹುಳಿಯನ್ನು ಚಪ್ಪರಿಸುತ್ತಿರುವ ಬ್ರಾಹ್ಮಣರಿಗೂ ಗೊತ್ತಿಲ್ಲ !

ಇದರ ಜೊತೆಗೆ ಪಿರಿಯಾಪಟ್ಟಣದ ಪಿ.ಕೆ. ವಾಸುದೇವ ಅವರು ಮತ್ತೊಂದು ಸಂಗತಿಯನ್ನು ಸೇರಿಸಿದ್ದಾರೆ. ಒಕ್ಕಲಿಗರು ಬೂದುಕುಂಬಳಕಾಯಿಗಳನ್ನು ಮಾತ್ರವಲ್ಲ ಸೀಗುಂಬಳ ಕಾಯನ್ನು ಮನೆಯೊಳಗೆ ಒಡೆಯುವುದಿಲ್ಲ ಮತ್ತು ಒಡೆಯುವ ಬದಲು ಕತ್ತರಿಸಿ ಪಾಲು ಮಾಡುವುದಿಲ್ಲ. ಕುಂಬಳಕಾಯನ್ನು ದೇವಾಲಯದ ಮುಂದೆ ಒಡೆದು ಮನೆಗೆ ತರುತ್ತಾರಂತೆ. ಅನಂತರ ಅದನ್ನು ಅಡುಗೆಗೆ ಬಳಸುತ್ತಾರಂತೆ !

ಶ್ರೀರಾಮಹೃದಯಿ ಆಂಜನೇಯ

ಲಂಕೆಯಿಂದ ಸೀತಾಲಕ್ಷ್ಮಣರ ಸಮೇತನಾಗಿ ಅಯೋಧ್ಯೆಗೆ ಬಂದ ರಾಮನು ಅಯೋಧ್ಯೆಯ ಅರಸನಾಗಿ ಪಟ್ಟಾಭಿಷಿಕ್ತನಾದನು. ಈ ಶುಭಸಂದರ್ಭದಲ್ಲಿ ಪ್ರಜಾನುರಾಗಿಯಾಗಿದ್ದ ಶ್ರೀರಾಮನು ಪ್ರಿಯರಾದವರಿಗೆಲ್ಲ ಅನೇಕ ಕೊಡುಗೆಗಳನ್ನು ಕೊಟ್ಟನು.

ಆ ಸಮಯದಲ್ಲಿ ಸೀತಾಮಾತೆಯು ಅತ್ಯಂತ ಪ್ರೀತಿಯಿಂದ ಒಂದು ರತ್ನಾಹಾರವನ್ನು ಆಂಜನೇಯನಿಗೆ ಕೊಟ್ಟಳು. ಅದನ್ನು ತೆಗೆದುಕೊಂಡ ಆಂಜನೇಯನು ಆ ರತ್ನಾಹಾರದ ಪ್ರತಿಯೊಂದು ರತ್ನವನ್ನೂ ಕಚ್ಚಿ ಕಚ್ಚಿ ಎಸೆಯುತ್ತಿದ್ದನು. ಇದನ್ನು ಕಂಡ ಸೀತೆಯು

"ಆಂಜನೇಯ ಹೀಗೇಕೆ ಮಾಡುತ್ತಿದ್ದೀಯೆ?" ಎಂದು ಕೇಳಿದಳು. ಅದಕ್ಕೆ ಆಂಜನೇಯನು,

"ರತ್ನದೊಳಗೆ ರಾಮನಿದ್ದಾನೋ ಇಲ್ಲವೋ ಎಂದು ಹುಡುಕುತ್ತಿದ್ದೇನೆ"

"ಇರುವನೆ?"

"ಕಾಣುತ್ತಿಲ್ಲ"

"ಮತ್ತೆಲ್ಲಿರುವನು?"

"ಕಣ್ತೆರೆದು ನೋಡಿದರೆ ಎದುರಿಗಿದ್ದಾನೆ; ಕಣ್ ಮುಗಿದು ನೋಡಿದರೆ ಹೃದಯದೊಳಗಿದ್ದಾನೆ."

"ಹಾಗಾದರೆಲ್ಲಿ ತೋರಿಸು ನಿನ್ನ ಹೃದಯಗೊಳಗಿರುವ ರಾಮನನ್ನು. ಅವನು ಎದುರಿಗೇ ಇರುವಾಗ ಅದು ಹೇಗೆ ಹೃದಯದೊಳಕ್ಕೆ ಬಂದುಬಿಡುತ್ತಾನೆಂದು ನಾನೂ ನೋಡಿಬಿಡುತ್ತೇನೆ" ಎಂದು ಒರಟಾಗಿಯೇ ಹೇಳಿದಳು. ಆಂಜನೇಯನು ಆ ಕೂಡಲೆ ತನ್ನ ಎದೆಯನ್ನು ಬಗೆದನು. ಅಲ್ಲಿ ಶ್ರೀರಾಮನಿರುವುದನ್ನು ನೋಡಿದ ಸೀತಾಮಾತೆಯು–

"ಆಂಜನೇಯ, ನೀನು ನಿಜವಾಗಿಯೂ ಎಲ್ಲಾ ಅರ್ಥದಲ್ಲೂ ರಾಮಭಕ್ತ. ನಿನ್ನನ್ನು ಪೂಜಿಸಿದವರಿಗೆ ಶ್ರೀರಾಮನನ್ನು ಪೂಜಿಸಿದ ಫಲ ಪ್ರಾಪ್ತವಾಗಲಿ!" ಎಂದು ಆಶೀರ್ವದಿಸಿದಳು.

ಆಂಜನೇಯ ಚಿರಂಜೀವಿ

ರಾವಣನ ದೆಸೆಯಿಂದ ಸೀತೆ ಪಟ್ಟ ಪಾಡು ಅಷ್ಟಿಷ್ಟಲ್ಲ. ಲಂಕೆಯಲ್ಲಿದ್ದ ಸೀತಾಮಾತೆಯನ್ನು ಕಂಡುಕೊಂಡು ಬಂದವನು ಹನುಮಂತ. ಸೀತಾಮಾತೆಯನ್ನು ಲಂಕೆಯಿಂದ ಬಿಡಿಸಿಕೊಂಡು ಬರಲು ಬೇಕಾದ ಕಪಿಸೇನೆಯನ್ನು ಸಂಘಟಿಸಿದವನು ಆಂಜನೇಯ; ಸುಗ್ರೀವಾದಿಗಳು ಶ್ರೀರಾಮನ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ಕಾರಣನಾದವನು ಈ ವಾಯುಪುತ್ರ. ಲಂಕೆಯಿಂದ ಶ್ರೀರಾಮಲಕ್ಷ್ಮಣ ಸೀತೆಯರು ಸುಕ್ಷೇಮದಿಂದ ಅಯೋಧ್ಯೆಯನ್ನು ಸೇರಲು ಕಾರಣನಾದವನು ಈ ಮುಖ್ಯ ಪ್ರಾಣ.

ಶ್ರೀರಾಮನು ಅಯೋಧ್ಯೆಗೆ ಬಂದು ಪ್ರಜೆಗಳ ಪ್ರೀತ್ಯಾದರಕ್ಕೆ ತಲೆಬಾಗುತ್ತ ಬಂಧುಬಳಗದವರಿಗೆ ಹಿತಾವಹನಾಗಿ ಭರತನ ಇಚ್ಛಾನುಸಾರವಾಗಿ ಪಟ್ಟಾಭಿಷಿಕ್ತನಾದನು. ಆಗ ಸೀತಾಮಾತೆಯು–

"ಆಂಜನೇಯ ನಾನೂ ನನ್ನ ಪತಿದೇವ ಶ್ರೀರಾಮಚಂದ್ರನು ಬಹಳ ಕಾಲ ದೂರವಿದ್ದು ವಿರಹತಪ್ತರಾಗಿ ನರಳಿದೆವು. ಅಂಥಾ ನಾವು ಒಂದುಗೂಡಲು ಕಾರಣಕರ್ತ ನೀನು ; ಶ್ರಮಿಸಿದವನು ನೀನು. ಇದರ ಫಲವಾಗಿ ವತ್ಸ ಆಂಜನೇಯ ಶ್ರೀರಾಮನ ಕೀರ್ತಿ ಎಲ್ಲಿಯವರೆಗೆ ಇರುತ್ತದೆಯೋ, ಸೂರ್ಯಚಂದ್ರ ತಾರೆಗಳು ಎಲ್ಲಿಯವರೆಗೆ ಇರುತ್ತವೆಯೋ ಈ ಬ್ರಹ್ಮಸೃಷ್ಟಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ನೀನು ಚಿರಂಜೀವಿಯಾಗಿರು!" ಎಂದು ಆಶೀರ್ವದಿಸಿದಳು.

ಸೀತಾಮಾತೆಯ ಆಶೀರ್ವಾದದ ಫಲವಾಗಿ ಶ್ರೀರಾಮಚಂದ್ರನ ಬಂಟ ಆಂಜನೇಯ ಅಮರತ್ವವನ್ನು ಪಡೆದು ಚಿರಂಜೀವಿಯಾದನು.

ಶ್ರೀರಾಮನ ನೆಗಡಿ ಶೀತಕ್ಕೆ ಹನುಮಂತನ ಔಷಧೋಪಚಾರ

ಶ್ರೀರಾಮನು ಅರಣ್ಯ ವಾಸದಲ್ಲಿದ್ದಾಗ ಆತನ ಶರೀರದೊಳಕ್ಕೆ ಯಾರನ್ನೂ ಹೇಳದೆ ಕೇಳದೆ ಶೀತ ಸೇರಿಕೊಂಡುಬಿಟ್ಟಿತು. ಆತ ಅರಣ್ಯವಾಸ ಮುಗಿಸಿಕೊಂಡು ಅಯೋಧ್ಯೆಗೆ ಮರಳಿದನು. ಆದರೆ ಆತನನ್ನು ಹಿಂಬಾಲಿಸಿದ್ದ ಶೀತ ಮಾತ್ರ ಹೋಗಲಿಲ್ಲ.

ರಾಮನಿಗೆ ನೆಗಡಿಯಾಯಿತು. ಅಯೋಧ್ಯೆಯ ಖ್ಯಾತ ವೈದ್ಯರೆಲ್ಲರೂ ಬಂದು ನಾನಾ ತರಹದ ಪರೀಕ್ಷೆಗಳನ್ನು ಮಾಡಿದರು. ಔಷಧಗಳನ್ನು ಪ್ರಯೋಗಿಸಿದರು. ಊಹ್ಞುಂ ಜಪ್ಪಯ್ಯ ಎಂದರೂ ನೆಗಡಿ ಜಗ್ಗಲೇ ಇಲ್ಲ. ಅರಮನೆಯವರು ಮಾತ್ರವಲ್ಲ ಅಯೋಧ್ಯೆಯ ಪ್ರಜೆಗಳೆಲ್ಲರೂ ಕಂಗಾಲಾದರು.

ಈ ಘಟನೆಯಿಂದ ಹೆಚ್ಚು ನೊಂದುಕೊಂಡವನೆಂದರೆ ಹನುಮಂತ. ಪಾಪ, ಆತ ಕಣ್ಣೀರು ಸುರಿಸುತ್ತ ರಾಮನ ಬಳಿಯೇ ಕೂತಿದ್ದ. ಅವನಿಗೆ ಥಟ್ಟನೆ ಏನೋ ಹೊಳೆದಂತಾಗಿ ಚಂಗನೆ ಹಾರಿ ಹೋಗಿ ಬೆಟ್ಟಗುಡ್ಡಗಳನ್ನೆಲ್ಲ ಅಲೆದಾಡಿ ಅಲ್ಲಿ ಎಂಥದೋ ಒಂದು ಗಿಡವನ್ನು ಕಂಡನು. ತಾನು ಹುಡುಕುತ್ತಿದ್ದ ಗಿಡ ಕಂಡುದ್ದೇ ತಡ ಸಂತೋಷಚಿತ್ತನಾಗಿ ಆ ಗಿಡದ ಬೀಜಗಳನ್ನು ಕಿತ್ತುಕೊಂಡ. ಆ ಕೂಡಲೆ ಹಾರಿ ಅಯೋಧ್ಯೆಯನ್ನು ತಲುಪಿದ.

ಅರಮನೆಗೆ ಆತುರಾತುರವಾಗಿ ಧಾವಿಸಿ ಬಂದ. ತಾನು ತಂದಿರುವ ಬೀಜಗಳನ್ನು ಹುರಿದು ನುಣ್ಣಗೆ ಅರೆದು ಕಷಾಯ ಮಾಡಿ ದಿನಕ್ಕೆ ಎರಡು ಮೂರು ಬಾರಿಯಂತೆ ರಾಮನಿಗೆ ಕುಡಿಸಿದ. ಹಾಗೆಯೇ ರಾಮನು ಒಂದೆರಡು ದಿನ ಕಷಾಯ ಕುಡಿಯುತ್ತ ಕುಡಿಯುತ್ತ ಮೂರನೆಯ ದಿನಕ್ಕೆ ನೆಗಡಿ ಮಂಗಮಾಯ!

ಹಾಗಾದರೆ ಹನುಮಂತ ತಂದು ಔಷಧ ಮಾಡಿದ ಆ ಬೀಜ ಯಾವುದು ಎಂದುಕೊಳ್ಳುತ್ತಿದ್ದರೆ ಅದಕ್ಕೆ ರಾಮನೇ ಒಂದು ಹೆಸರನ್ನು ಕೊಟ್ಟನಂತೆ. "ಇದು ಯಾವ ಗಿಡದ ಬೀಜ ಎಂದು ಯಾರಿಗೂ ನಿಖರವಾಗಿ ತಿಳಿದಿಲ್ಲ. ಆದ್ದರಿಂದ ವಿನಾಕಾರಣ ಚರ್ಚೆ ಬೇಡ. ಇದನ್ನು ತಂದು ನೆಗಡಿ ವಾಸಿ ಮಾಡಿದವನು ಹನುಮಂತ. ಆದ್ದರಿಂದ ಈ ಬೀಜವನ್ನು ಇನ್ನು ಮುಂದೆ 'ಕಪಿಬೀಜ' ಎಂದು ಕರೆಯೋಣ!' ಎಂದು ಸಲಹೆಯಿತ್ತನಂತೆ. ಆಗಿನಿಂದ ಈ ಕಪಿಬೀಜವು ತಲೆನೋವು, ನೆಗಡಿಗೆ ಸಿದ್ಧ ಶುದ್ಧ ಔಷಧಿಯಾಗಿ ಬಳಕೆಯಾಗುತ್ತಿದೆ. ಕಪಿಬೀಜ > ಕಫಿಬೀಜವಾಗಿ ಕಾಫಿಬೀಜ ಆಯಿತು ಎಂದು ಹೇಳುವ ಅವರ ವಾದ ನಿಜವೆ? (ನವಪುಲಕ : 'ಕಪಿ ತಂದ ಬೀಜ ಕಾಫಿ ಆಯ್ತು!' ಆಂದೋಲನ 'ಹಾಡುಪಾಡು' ಭಾನುವಾರದ ಸಂಚಿಕೆ. ದಿನಾಂಕ ೦೪.೧೦.೨೦೦೯. ಪಿ.೦೩)

ಹಾಗಾದರೆ ಕಾಫಿ ಬೀಜ ೧೬-೧೭ನೇ ಶತಮಾನದ ಅಂತರದಲ್ಲಿ ಬಾಬಾ ಬುಡನ್ ಸಾಹೇಬರು ಮೆಕ್ಕಾದಿಂದ ಚಿಕ್ಕಮಗಳೂರು ಜಿಲ್ಲೆಗೆ ತಂದರು ಎಂಬ ಇತಿಹಾಸಕ್ಕೂ ಪೂರ್ವದಲ್ಲೇ ಅಂದರೆ ಶ್ರೀರಾಮನ ಕಾಲದಲ್ಲೆ ಕಾಫಿ ಭಾರತದಲ್ಲಿ ಇತ್ತೆ? ಇದು ನಿಜಕ್ಕೂ ಒಂದು ನವಪುಲಕ!

ಈ ಕಥೆ ಯಾರೋ ಇತ್ತೀಚೆಗೆ ಕಲ್ಪಿಸಿ ಕಟ್ಟಿರುವ ಕಥೆ ಎನ್ನುವುದಾದರೆ ಆಧುನಿಕರ ಅಂತರಾಳದಲ್ಲಿ ಈಗಲೂ ಆದಿಕಾಲದ ಕಲ್ಪನೆಗಳು ಹುದುಗಿದ್ದು ಸಂದರ್ಭ ಬಂದಾಗ ಸೃಷ್ಟಿಗೊಳ್ಳುತ್ತಿವೆ ಎಂದು ಹೇಳಬೇಕಾಗುತ್ತದೆ. ಅಲ್ಲದೆ ರಾಮಾಯಣದ ಕಥೆ ಆಧುನಿಕತೆಯನ್ನೂ ಒಳಗೊಂಡು ಬೆಳೆಯುತ್ತಿರುವುದು ಒಂದು ನವಪುಲಕವೇ ಸರಿ.

ಕುಂಕುಮ ಸೀತೆಯ ಹಣೆಬೊಟ್ಟು

ಸೀತಾಮಾತೆಯು ಕೈಯಲ್ಲಿ ಕನ್ನಡಿ ಹಿಡಿದುಕೊಂಡು ಹಣೆಗೆ ಅರಿಸಿನ-ಕುಂಕುಮಗಳನ್ನು ಧರಿಸಿಕೊಳ್ಳುವ ಸಿದ್ಧತೆಯಲ್ಲಿದ್ದಳು. ಮೊದಲು ಎರಡು ಕಣ್ಣುಬ್ಬುಗಳ ನಡುವೆ ಅರಿಸಿನದ ಬೊಟ್ಟನ್ನು ಧರಿಸಿಕೊಂಡು ಆ ಬೊಟ್ಟಿನ ತುಸು ಮೇಲುಭಾಗಕ್ಕೆ ಕುಂಕುಮದ ಬೊಟ್ಟನ್ನು ಇಟ್ಟುಕೊಂಡಳು. ಆ ಸಮಯಕ್ಕೆ ಸರಿಯಾಗಿ ಬಂದ ಆಂಜನೇಯನು

'ಅಮ್ಮಾ ಇದೇನು ಹಣೆಗೆ ಎರಡು ಬೊಟ್ಟುಗಳು?' ಎಂದು ಕೇಳಿದನು. ಅದಕ್ಕೆ ಸೀತಾಮಾತೆಯು

'ಆಂಜನೇಯ, ಈ ಕಣ್ಣುಬ್ಬುಗಳ ನಡುವೆ ಧರಿಸಿಕೊಂಡಿರುವ ಬೊಟ್ಟು ನನ್ನದು. ಅದರ ತುಸು ಮೇಲಕ್ಕೆ ಧರಿಸಿರುವ ಕುಂಕುಮದ ಬೊಟ್ಟು ನನ್ನ ಪತಿದೇವ ಶ್ರೀರಾಮರದು!' ಎಂದಳು.

'ಅಮ್ಮಾ ಹಾಗಾದರೆ ಆ ಕುಂಕುಮದ ಬೊಟ್ಟು ರಾಮರದೆ?'

'ಹೌದು. ಆ ಬೊಟ್ಟಿನಿಂದಲೆ ನನ್ನ ಮುತ್ತೈದೆತನ. ಅದೇ ನನ್ನ ದೇವರು ; ಅದೇ ನನ್ನ ಪತಿ ದೇವರು; ಅದೇ ನನ್ನ ರಾಮದೇವರು!'

'ಹಾಗಾದರೆ ಆ ಕುಂಕುಮದ ಬೊಟ್ಟೆ ಶ್ರೀರಾಮರೆ?'

'ಹೌದು ಹೌದು, ಹೌದು!'

ಸೀತಾಮಾತೆಯ ಈ ಮಾತನ್ನು ಕೇಳಿದ ಆಂಜನೇಯನು ಅಲ್ಲಿಂದ ಹೊರಟು ಹೋದನು.

ಅಂದು ಅಯೋಧ್ಯೆಯಲ್ಲಿ ಸಂತೆ. ಆ ಸಂತೆಯಲ್ಲಿ ಕುಂಕುಮ ಮಾರುತ್ತಿದ್ದರು. ಆಂಜನೇಯನು ಸೇರುಗಟ್ಟಲೆ ಕುಂಕುಮವನ್ನು ತಂದು ಮೈತುಂಬ ಬಳಿದುಕೊಂಡು ಸೀತಾಮಾತೆಯ ಮುಂದೆ ಕುಣಿಯತೊಡಗಿದನು. ಇದನ್ನು ಕಂಡ ಸೀತಾಮಾತೆಯು

'ಆಂಜನೇಯ ಇದೇನಿದು ನಿನ್ನಾಟ?'

'ಆಟ ಅಲ್ಲಮ್ಮ, ಕುಂಕುಮವೇ ಶ್ರೀರಾಮ ಅಂದಿರಲ್ಲ. ಅದಕ್ಕೆ ಕುಂಕುಮವನ್ನು ಮೈಗೆಲ್ಲ ಬಳಿದುಕೊಂಡು ಕುಣಿದು ರಾಮನನ್ನು ಕಾಣಲು ಪ್ರಯತ್ನಿಸುತ್ತಿದ್ದೇನೆ.'

'ಅಯ್ಯೋ ದಡ್ಡ, ಕುಂಕುಮದಲ್ಲಿ ರಾಮರು ಕಂಡರೆ?'

'ಕಾಣುತ್ತಿಲ್ಲ!'

'ಕುಂಕುಮದಲ್ಲಿ ಇಲ್ಲವಾದರೆ ಅವರು ಇನ್ನೆಲ್ಲಿರುತ್ತಾರೆ?' ಸೀತೆ ಕೇಳಿದಳು. ಆಗ ಆಂಜನೇಯನು ತನ್ನ ಎದೆಯನ್ನು ಬಗೆದು ರಾಮಲಕ್ಷ್ಮಣ ಸೀತೆಯರ ಜೊತೆಯಲ್ಲಿ ತಾನೂ ಅಲ್ಲಿರುವುದನ್ನು ತೋರಿಸಿ ಸೀತಾಮಾತೆಗೆ ಬೆರಗುಂಟುಮಾಡಿದನು.

ಅಗ್ನಿಪರೀಕ್ಷೆಯ ಅಣಕ

ರಾವಣನನ್ನು ಸಂಹರಿಸಿ ಲಂಕೆಯಿಂದ ಸೀತೆಯನ್ನು ಕರೆದುಕೊಂಡು ಬರುವಾಗ ಅವಳು ಸತ್‌ಶೀಲೆಯೆಂದು ಸಾಬೀತುಪಡಿಸಲು ಅಗ್ನಿಪರೀಕ್ಷೆ ಮಾಡಬೇಕಾಗಿರುತ್ತದೆ. ಈ ಪರೀಕ್ಷೆಯನ್ನು ಅರಣ್ಯದ ಯಾವುದೋ ಮೂಲೆಯಲ್ಲಿ ಮಾಡುವ ಬದಲು ಅಯೋಧ್ಯಾ ನಗರದಲ್ಲಿ ಪ್ರಜೆಗಳೆಲ್ಲರ ಎದುರಿಗೂ ಮಾಡುವುದೇ ಸೂಕ್ತ ಎಂದು ತೀರ್ಮಾನವಾಗುತ್ತದೆ.

ಅಯೋಧ್ಯೆಯನ್ನು ಪ್ರವೇಶಿಸಿದಾಗ ಮಾಡಿದ ಮೊದಲ ಕಾರ್ಯವೇ ಸೀತೆಗೆ ಅಗ್ನಿಪರೀಕ್ಷೆ. ಕಿಕ್ಕಿರಿದ ಪ್ರಜೆಗಳ ನಡುವೆ ಅಗ್ನಿಕುಂಡ ಧಗಧಗ ಉರಿಯುತ್ತಿತ್ತು. ಸೀತಾಮಾತೆಯು ಶ್ರೀರಾಮನ ಪಾದಗಳಿಗೆ ನಮಿಸಿ ದೇವಾಧಿದೇವತೆಗಳನ್ನೆಲ್ಲ ಮನಸ್ಸಿನಲ್ಲೆ ಸ್ಮರಿಸಿ ಭಕ್ತಿಯಿಂದ ತಲೆಬಾಗುತ್ತ ಧಗಧಗಿಸುತ್ತಿರುವ ಅಗ್ನಿಕುಂಡಕ್ಕೆ ಧುಮ್ಮಿಕ್ಕಿದಳು. ಆ ಕೂಡಲೆ ಇಡೀ ಅಯೋಧ್ಯೆಯೇ ಧಗ್ ಎಂದು ಹೊತ್ತಿಕೊಂಡಿತು. ಆಗ ಶ್ರೀರಾಮನು ತತ್‌ಕ್ಷಣವೇ ಕುಂಡಕ್ಕೆ ಜಿಗಿದು ಸೀತಾಮಾತೆಯನ್ನು ಮೇಲೆತ್ತಿ ತಂದನು. ಹಾಗೆ ಸೀತೆಯನ್ನು ರಕ್ಷಿಸಿದ ಕ್ಷಣದಲ್ಲೇ ಅಯೋಧ್ಯೆಯೂ ತಣ್ಣಗಾಯಿತು.

ಸೀತಾಮಾತೆ ಅಗ್ನಿಕುಂಡಕ್ಕೆ ಧುಮುಕಿದ್ದು ಅಯೋಧ್ಯೆಯೇ ಹೊತ್ತಿಕೊಂಡದ್ದು ರಾಮನು ಸೀತೆಯನ್ನೂ ಅಯೋಧ್ಯೆಯನ್ನೂ ಉಳಿಸಿದ್ದು – ಈ ಎಲ್ಲವನ್ನು ಕಂಡ ಅಯೋಧ್ಯೆಯ ಪ್ರಜೆಗಳು ಸೀತೆಯ ಸತ್‌ಶೀಲವನ್ನು ಶ್ರೀರಾಮನ ಸದ್ಗುಣವನ್ನು ಬಾಯಿತುಂಬ ಕೊಂಡಾಡಿದರು.

ಹೀಗಿರುವಾಗ ಅಗಸನೊಬ್ಬನು ಮುನಿಸಿಕೊಂಡು ತವರಿಗೆ ಹೋಗಿದ್ದ ತನ್ನ ಹೆಂಡತಿಯನ್ನು ಮತ್ತೆ ಮನೆಗೆ ಸೇರಿಸುವುದಿಲ್ಲ ಎನ್ನುವಾಗ ಶ್ರೀರಾಮನನ್ನೂ ಸೀತೆಮಾತೆಯನ್ನೂ ಅಣಕಿಸಿ ಮಾತಾಡುತ್ತಾನೆ. ಅದೆಂದರೆ

ಅಬ್ಬಬ್ಬ ಈ ದೊಡ್ಡ್‌ಮನುಸ್ರು ಅನ್ನುಸ್ಕೊಂಡಿರೋರು
ತಮ್ಮುನ್ನ ತಾವ್ ಬಚಾವ್ ಮಾಡ್ಕಳಕೆ
ಏನೇನೆಲ್ಲ ಆಟ್ಗಳ್ ಆಡ್ತಾರಪ್ಪ
ಏನೇನೆಲ್ಲ ಕತೆಗಳ್ ಕಟ್ತಾರಪ್ಪ!
ಆ ರಾಮ ಅವ್ನಲ್ಲ ಅವುನೆಂಡ್ರು ಸೀತೆ
        ಬೆಂಕಿ ಕೊಂಡುಕ್ಕೆ ಹಾರುದ್ಲಂತೆ
ಅವ್ಳು ಹಾರಿದ ತಕ್ಷನವೇ ಇಡೀ ಐವಾದ್ಯವೇ
        ದಗ್ಗ್ ಅಂತ ಹತ್ಕೊಂಡ್ಬುಡ್ತಂತೆ
ಆಗ ಈ ರಾಮ ಸುಮ್ನೆ ನಿಂತ್ಕೊಂಡು ನೋಡ್ತಿದ್ನಲ್ಲ
ಅವ್ನು ಸಡಾರ್ನೆ ಬೆಂಕಿಕೊಂಡುಕ್ಕೆ ಹಾರಿ
ಸೀತೆಯ ಎತ್ಕೊಂಡು ಬಂದ್ನಂತೆ
ಆ ತಕ್ಷಣವೆ ಐವಾದ್ಯವೆಲ್ಲ ತಣ್ಣಗಾಯ್ತಂತೆ!
ಆಹಹಹಾ ಎಂಥಾ ಕತೆಯಪ್ಪ!
ಯಾರಾರ ನಂಬುವಂತಾದ್ದ?
ಬುದ್ಧಿಲ್ಲದ ಬೆಳ್ಳೇಕಾರ್ ಬಡ್ಡೆತ್ತವು
ಕುರಿಯಂಗೆ ತಲೆಹಾಕಿದ್ದೇ ಹಾಕಿದ್ದು!
ಆ ಮಾತು ಹಂಗಿರ್ಲಿ –
ಐವಾದ್ಯವೇ ಧಗ್ಗಂತ ಹತ್ಕೊಂಡು ಉರೀತಿತ್ತು
        ಅಂತಾರಲ್ಲ
ಹತ್ಕೊಂಡಿದ್ರೆ ಅದು ನನ್ನೂ ಸುಡಬೇಕಿತ್ತಲ್ಲವ?
ನಾನು ಬಟ್ಟೆ ಒಗೀತಾ ಐವಾದ್ಯದಲ್ಲಿದ್ನೇ ಹೊರ್ತು
        ಇನ್ನೇನು ಲೆಂಕೆನಲ್ಲಿದ್ನ?
(ಸಡಾರ್ನೆ = Sudden ಆಗಿ, ಥಟ್ಟನೆ)

ಇಂಥ ಕ್ರೂರ ಲೋಕಾಪವಾದದ ಮಾತುಗಳನ್ನು ಗೂಢಚಾರರಿಂದ ತಿಳಿದ ಶ್ರೀರಾಮನು ಅಸಹನೀಯ ಹಿಂಸೆಯಿಂದ ನರಳುತ್ತಾನೆ. ಲೋಕಾಪವಾದಕ್ಕೆ ಅಂಜಿ ಸೀತಾಮಾತೆಯನ್ನು ಪರಿತ್ಯಜಿಸುವುದು ಅನಿವಾರ್ಯ ಎನಿಸಿ ಮಮ್ಮಲ ಮರುಗುತ್ತಾನೆ. ಲಕ್ಷ್ಮಣನಲ್ಲಿ ವಿಚಾರವನ್ನು ಹೇಳುತ್ತಾನೆ. ಲಕ್ಷ್ಮಣ "ನಾಯಿ ಬೊಗಳಿದರೆ ಭೂಲೋಕ ಹಾಳಾಗುತ್ತದೆಯೆ? ಯಾವನೋ ಹೇಳಿದ ಅಪನಿಂದೆಗೆ ನೀವು ಬೆಲೆ ಕೊಡಬಾರದು" ಎಂದು ಬಗೆಬಗೆಯಾಗಿ ಹೇಳಿದರೂ ಒಪ್ಪದೆ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರಲು ಲಕ್ಷ್ಮಣನನ್ನೇ ಕಳಿಸುತ್ತಾನೆ.

ಬಸುರಿಮರ

ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾಮಾತೆಯು ಅರಣ್ಯದಲ್ಲಿ ಹರಿಯುತ್ತಿದ್ದ ನದಿಗೆ ಬಿದ್ದು ಪ್ರಾಣ ಕಳೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಕುಚ್ಚಲು ಮತ್ತು ಅವುಲು ಎಂಬ ಎರಡು ಮೀನುಗಳು ನದಿಗೆ ಬಿದ್ದ ಸೀತೆಯು ಕೈಹಿಡಿದು ಈಚೆ ದಡದಿಂದ ಆಚೆ ದಡಕ್ಕೆ ಸಾಗಿಸಿ ರಕ್ಷಿಸಿದವು.

ಈ ಸಮಯದಲ್ಲಿ ವಾಲ್ಮೀಕಿ ಮಹರ್ಷಿಗಳು ಆಕಸ್ಮಿಕವಾಗಿ ಅಲ್ಲಿಗೆ ಬಂದರು. ಆಗ ಸೀತೆಯು ಮೈಮೇಲೆ ಸರಿಯಾದ ವಸ್ತ್ರಗಳಿಲ್ಲದ್ದರಿಂದ ಮರದ ಮರೆಯಲ್ಲಿ ನಿಂತಳು. ಅವಳಿಗೆ ಮಹರ್ಷಿಗಳು ವಸ್ತ್ರವನ್ನು ಕೊಟ್ಟುದಲ್ಲದೆ ಅವಳು ಸೀತೆಯೆಂದು ತಿಳಿದಾಗ ಅವಳಿಂದ ನಡೆದ ವಿಷಯವನ್ನೆಲ್ಲ ಕೇಳಿ ನೊಂದುಕೊಂಡು ಅವಳಿಗೆ ತಮ್ಮ ಆಶ್ರಮದಲ್ಲಿ ಆಶ್ರಯ ಕೊಟ್ಟರು.

ಆದರೆ ಸೀತೆಯು ಬೆತ್ತಲಾಗಿರುವಾಗ ಅವಳು ಮರವೊಂದರ ಮರೆಯಲ್ಲಿ ನಿಂತುಕೊಂಡಿದ್ದು ಸರಿಯಷ್ಟೆ. ಬಸುರಿ ಹೆಂಗಸು ಹೀಗೆ ಮಾನರಕ್ಷಣೆಗಾಗಿ ಆಶ್ರಯ ಪಡೆದ ಮರಕ್ಕೆ ಬಸುರಿಮರ ಎಂದು ಹೆಸರಾಯಿತಂತೆ.

ಕುಚ್ಚಲು ಅವುಲು – ಕುಶಲವರು

೧. ಕುಚ್ಚಲು – ಅವುಲು

ಶ್ರೀರಾಮನು ಅಗಸನೊಬ್ಬನ ಮಾತಿಗೆ ಬೆಲೆ ಕೊಟ್ಟು ಸೀತೆಯನ್ನು ಕಾಡಿನಲ್ಲಿ ವಧಿಸಿ ಬರಲು ಲಕ್ಷ್ಮಣನಿಗೆ ಆಜ್ಞೆ ಮಾಡಿದನು. ಅಣ್ಣನ ಮಾತನ್ನು ಮೀರಲಾರದ ಲಕ್ಷ್ಮಣ ಸೀತಮ್ಮನವರನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ಘೋರಾರಣ್ಯಕೆ ಬಂದು ರಥವನ್ನು ನಿಲ್ಲಿಸಿ 'ಅತುಗಮ್ಮ ಇಳೀರಿ' ಎಂದನು. ಸೀತೆಗೆ ರಾಮನು ವಿಧಿಸಿರುವ ಶಿಕ್ಷೆಯು ಲಕ್ಷ್ಮಣನಿಂದ ತಿಳಿಯಿತು. ಅತ್ತಿಗೆಯನ್ನು ಬಿಟ್ಟು ಹೋಗಲು ಆಗದ ಲಕ್ಷ್ಮಣ ದುಃಖಿಸುತ್ತಿರುವುದನ್ನು ನೋಡಿ,

'ಅಪ್ಪಾ ಲಕ್ಷ್ಮಣ ನೀನ್ಯಾಕಪ್ಪ ದುಃಖವನ್ನು ಮಾಡ್ತಿ? ನಾನು ಹೆಣ್ಣಾಗಿ ಹುಟ್ಟಿದ ಪುಣ್ಯ ಸಾಕಪ್ಪ, ನೀನೂ ಈ ಪಾಪಿಯ ಸಿರುಸಾವ ಕುಯ್ಯಪ್ಪ' ಎಂದಳು. ಆದರೆ ಲಕ್ಷ್ಮಣ–

'ಅತುಗಮ್ಮ, ನಾನು ನಿಮ್ಮ ಸಿರುಸಾವ ಕುಯ್ಯನಾರೆ' ಎಂದು ಹೇಳಿ ಅಡವೀ ಆರಣ್ಯ ಗಿಡುವೀ ಚೌಮಧ್ಯದಲ್ಲಿ ಸೀತಮ್ಮನನ್ನು ಬಿಟ್ಟು ರಥವನ್ನೇರಿಕೊಂಡು ಅಯೋಧ್ಯಾಭಿಮುಖನಾಗಿ ಹೊರಟನು. ಹೋಗುವಾಗ ಬನ್ನಿಮರಕ್ಕೆ ತನ್ನ ಕತ್ತಿಯನ್ನು ಹೊಯ್ದು–

'ಸೀತಮ್ಮ ಸರಣೆಯಾದರೆ ಬನ್ನಿಮರದಲ್ಲಿ ರಕ್ತ ಬರಲಿ' ಎಂದು ಹೇಳಿದನು. ಚಂದ್ರಾಯುಧ ಬನ್ನಿಮರಕ್ಕೆ ಸೋಂಕಿದ್ದೇ ತಡ ರಕ್ತ ಚಿಲ್ಲನೆ ಹಾರಿ ಚಂದ್ರಾಯುಧವನ್ನು ರಕ್ತದ ಕಲೆಗಳಲ್ಲಿ ಮುಳುಗಿಸಿತು.

ಲಕ್ಷ್ಮಣ ಅಯೋಧ್ಯೆಗೆ ಬಂದು ಸೀತೆಯ ಶಿರಸ್ಸನ್ನು ಕತ್ತರಿಸಿದ್ದಕ್ಕೆ ಚಂದ್ರಾಯುಧದಲ್ಲಿ ಅಂಟಿರುವ ರಕ್ತದ ಕಲೆಗಳನ್ನು ತೋರಿಸಿದನು. ಅದನ್ನು ನೋಡಿದ ಶ್ರೀರಾಮನಿಗೆ ಅತೀವ ದುಃಖವಾಗಿ ಗೋಳಾಡತೊಡಗಿದನು. ದುಃಖತಪ್ತನಾದ ಶ್ರೀರಾಮನ ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರು ಹರಿಯತೊಡಗಿತು. ಕಣ್ಣೀರು ಹೊಳೆಯಾಗಿ ಹರಿಯುತ್ತಿರುವಾಗ ರಾಮರು ತುಂಬು ನೋವಿನಿಂದ ಕಣ್ಣೀರ ಜೊತೆಗೂಡಿದ ಮೂಗನ್ನು ಸರಿಪಡಿಸಲು ಗೊಣ್ಣೆ ತೆಗೆಯಲು ಹೋದಾಗ ಎರಡು ಹೊಳ್ಳೆಗಳಿಂದಲೂ ಜಾರಿ ಬಿದ್ದ ಗೊಣ್ಣೆ ಎರಡು ಮೀನುಗಳಾಗಿ ಹೊಳೆಯಲ್ಲಿ ಮುಂದೆ ಸಾಗಿದವು.

ಇತ್ತ ಕಡೆ ಅರಣ್ಯದಲ್ಲಿ ಗೋಳಿಡುತ್ತಿದ್ದ ಸೀತಮ್ಮ "ಛೇ ಈ ಹಾಳು ಪಾಪಿ ಪ್ರಾಣವನ್ನು ಮಡಗಿಕೊಂಡು ಈ ಕಾಡಿನಲ್ಲಿ ಯಾಕೆ ಬದುಕಿರಬೇಕು! ಎಷ್ಟು ದುಃಖ ಮಾಡಿದರೂ ಕಷ್ಟವನ್ನು ಕೇಳುವವರು ಯಾರೂ ಇಲ್ಲ" ಎಂದು ಸೀತಮ್ಮ ಬೆಟ್ಟವನ್ನು ಹತ್ತಿ ಬೆಟ್ಟವನ್ನು ಇಳಿದು ಬಂದಾಗ ಅಲ್ಲೊಂದು ತುಂಬಿ ಹರಿಯುವ ಹೊಳೆಯನ್ನು ನೋಡಿದಳು. ಆ ಹೊಳೆ ಶ್ರೀರಾಮರ ಕಣ್ಣೀರಿನಿಂದ ಉಂಟಾದ ಹೊಳೆ. ಆ ಹೊಳೆಯೊಳಕ್ಕೆ ಬಿದ್ದು ತನ್ನ ಪ್ರಾಣವನ್ನು ಕಳೆದುಕೊಳ್ಳಲು ನಿರ್ಧರಿಸಿ ನೀರಿಗೆ ಬಿದ್ದಳು.

ಶ್ರೀರಾಮ ಶೋಕ ಮಾಡುವಾಗ ಅವರ ಮೂಗಿನ ಹೊಳ್ಳೆಯಿಂದ ಬಿದ್ದ ಗೊಣ್ಣೆ ಎರಡು ಮೀನುಗಳಾಗಿದ್ದವು. ಆ ಮೀನುಗಳು ಸೀತಮ್ಮನ ಕೈಯನ್ನು ಹಿಡಿದುಕೊಂಡು ಈ ಕಡೆಯಿಂದ ಆಚೆ ದಡ ಮುಟ್ಟಿಸಿದವು.

ಸೀತಮ್ಮನವರು ಕಣ್ಣು ಬಿಟ್ಟು ನೋಡಿದಾಗ ಆ ಎರಡೂ ಮೀನುಗಳು ಅವಳ ಎರಡು ಕೈಗಳನ್ನು ಹಿಡಿದು ಕರತಂದು ದಡ ಮುಟ್ಟಿಸಿದ್ದವು. ಇದರಿಂದ ಸೀತಮ್ಮನಿಗೆ ಕಸಿವಿಸಿಯಾಗಿ–

'ಅಪ್ಪಾ ಮೀನುಗಳೇ, ಈ ಪಾಪಿ ಜಲ್ಮವನ್ಯಾಕೆ ಕರೆಗೆ ತಂದ್ರಪ್ಪ. ನಾನು ಸಾಯಬೇಕು ಕನ್ರಪ್ಪ' ಎಂದಳು. ಅದಕ್ಕೆ ಮೀನುಗಳು–

'ಅಮ್ಮಾ ತಾಯಿ, ನೀನು ತುಂಬುದ ಗರ್ಭಿಣಿ ಹೀಗಿರುವಾಗ ಯಾಕಮ್ಮ ಪ್ರಾಣವನ್ನು ಬುಡಬೇಕು. ಮುಂದೆ ವಾಲ್ಮೀಕಿ ಅನ್ನುವಂತ ರುಸಿಗಳ ಆಶ್ರಮ ಅದೆ. ಅಲ್ಲೋಗಿ ಬದುಕ್ಕೊಂಡು ಮಗೀನ ಹೆತ್ತಿ ಸಂತೋಷದಿಂದ ಬಾಳು ಹೋಗಮ್ಮ'

'ಅಪ್ಪಾ ಮೀನುಗಳೇ ನನಗ್ಯಾಕ್ರಪ್ಪ ಬಾಳು ಬದುಕು. ನಾನು ಸಾಯಬೇಕು ಕನ್ರಪ್ಪ. ನಾನು ಪಾಪಿ ಬದುಕಬಾರದ್ರಪ್ಪ.'

'ಅಮ್ಮಾ ತಾಯಿ, ನೀನು ಒಂಜಿವ್ನುದಲ್ಲಿ ಕಷ್ಟಪಡಬಹುದು. ಒಂದು ಜಿವ್ನದಲ್ಲಿ ಸುಕಾ ಪಡೀಬಹುದು. ಈವತ್ತಿನ ಜಿವ್ನ ಇದ್ದ ಕಷ್ಟ ನಾಳೆ ಇರೋದಿಲ್ಲ. ನಾಳೆ ಇದ್ದ ಕಷ್ಟ ನಾಳಿದ್ದು ಇರೋದಿಲ್ಲ. ಪ್ರಾಣವನ್ನು ಬುಡೋದು ತರುವಲ್ಲಮ್ಮ. ಇಂದು ಬದುಕಿದ್ರೆ ಮುಂದೊಂದು ದಿನ ಸುಖಾ ಕಾಣಬಹುದಮ್ಮ. ನಮ್ಮ ಮಾತನ್ನು ಕೇಳ್ಕೊಂಡು ತುಂಬುದ ಬಿಮ್ಮನ್ಸೆ ನೀನು ಹೋಗಿ ಆಶ್ರಮ ಸೇರು ತಾಯಿ. ಸುಕುವಾಗಿ ಬಾಳೋಗು ಮಾತಾಯಿ' ಎಂದವು.

'ಅಪ್ಪಾ ಮೀನುಗಳ್ಯಾ, ನೀವು ಇಂಥ ಅತಿಮುದ್ದಿನಿಂದ ಮಾತಾಡ್ತೀರಲ್ಲ ನೀವು ಯಾರ್ರಪ್ಪ? ನಿಮ್ಮ ಹೆಸರೇನ್ರಪ್ಪ?' ಎಂದಾಗ ಒಂದು ಮೀನು ಹೇಳ್ತಾ ಇದೆ

'ಅಮ್ಮ ನನ್ನ ಹೆಸರು ಕುಶ್ಚಲು'

'ನಿನ್ನ ಹೆಸ್ರೇನಪ್ಪ?'

'ಅಮ್ಮ ನನ್ನ ಹೆಸರು ಅವುಲು'

ಮೀನುಗಳಾಡಿದ ಮಾತುಗಳನ್ನು ಕೇಳಿದ ಸೀತಮ್ಮ ಮೀನುಗಳಿಗೆ ಶರಣು ಮಾಡಿ ಹೇಳ್ತಿದ್ದಾಳೆ –

'ಅಪ್ಪಾ ಮೀನುಗಳ್ಯಾ, ನನ್ನ ಘಟಾ ಗಂಗೆ ಒಳಗೆ ಹೋಯ್ತಿತ್ತು. ನನ್ನನ್ನು ಸಲುಗಿದ್ದೀರಿ. ನಿಮಗೆ ನಾನು ಏನು ಬೋಮಾವನ್ನು ಕೊಡುಲ್ರಪ್ಪ?'

'ತಾಯೆ ನಮಗೇನೂ ಬೇಡ' ಅಂದಿದ್ದಾವೆ. ಅದಕ್ಕೆ ಸೀತಮ್ಮನವರು ತಮ್ಮ ಕುತ್ತಿಗೆಯಲ್ಲಿದ್ದ ಕಂಠೀಹಾರವನ್ನು ತೆಗೆದು ಆ ಮೀನುಗಳಿಗೆ ಕೊಡಲು ಹೋಗಿದ್ದಾಳೆ. ಅದಕ್ಕೆ ಆ ಮೀನುಗಳು–

'ಅಮ್ಮ ತಾಯಿ, ನಮಗೆ ನಿನ್ನಂಥ ಸತ್ಯುವಂತೆಯನ್ನು ಬದುಕಿಸಿದ ಪುಣ್ಯವೇ ಸಾಕು!' ಎಂದವು. ಸೀತಮ್ಮನಿಗೆ ಸಂತೋಷವಾಗಿ–

'ಅಪ್ಪಾ ಮೀನುಗಳ್ಯಾ, ನೀವು ಕಂಠೀಹಾರವನ್ನು ಬ್ಯಾಡ ಅಂತಿದ್ದೀರಿ, ಇರಲಿ. ನಾನು ಗರ್ಭಿಣಿ. ನನಗೆ ಮಗು ಹುಟ್ತದೆ. ನನ್ನ ಹೊಟ್ಟೇಲಿ ಹುಟ್ಟಿದಂಥ ಮಗೂಗೆ ಕುಶ್ಚಲವುಲು ಅಂತ ನಿಮ್ಮ ಹೆಸರು ನಾಮಕರಣ ಮಾಡ್ತಿದ್ದೀನಿ. ಕುಚ್ಚಲು ಅವುಲು ಮೀನುಗಳೆ ನಿಮಗೆ ಶರಣು ಶರಣು?' ಎಂದು ಹೇಳಿ ಮೇಲಕ್ಕೆದ್ದು ಮುಂದಕ್ಕೆ ಹೊರಟಳು.

೨. ಸೀತೆಗೆ ಕೋತಿಯ ಪ್ರಶ್ನೆ

ಸೀತಮ್ಮನವರು ವಾಲ್ಮೀಕಿ ಋಷಿಗಳ ಆಶ್ರಮವನ್ನು ಸೇರಿ ಕಾಲ ಕಳಿಯುತ್ತಿರುವಾಗ ಒಂಬತ್ತು ತಿಂಗಳು ತುಂಬಿದ ತಾಯಿಗೆ ಒಂದು ಗಂಡು ಮಗು ಹುಟ್ಟಿತು. ಮಗುವಿನ ಮೊಕವನ್ನು ನೋಡಿ ಸೀತಮ್ಮ ಸಂತೋಷಪಟ್ಟರು.

'ಅಯ್ಯೋ ಭಗವಂತ ಐವಾಥ್ಯೆ ನಗರ್ದಲ್ಲಿ ಇಂತೇ ಮಗ ಹುಟ್ಟಿದ್ರೆ ನನ್ನ ಪತಿಯಾದಂತ ಶ್ರೀರಾಮ್ರು ಇನ್ನೆಷ್ಟು ಹೆಚ್ಚಾಳ ಪಡ್ತಿದ್ರೊ ಏನೋ! ಅವರ ವಂಶದ ಕುಡಿ ಇಲ್ಲಿದೆ ಅನ್ನೋದು ಅವರಿಗೇ ಗೊತ್ತಿಲ್ಲ' ಎಂದು ಕಣ್ಣೀರು ತಂದುಕೊಂಡಳು.

ಮಗು ಜನನವಾಗಿ ಮೂರು ದಿನವಾಯಿತು. ಮೂರನೇ ದಿನದಲ್ಲಿ ಗುಳ್ಳಮ್ಮನ ಪೂಜೆ ಮಾಡಬೇಕಾದದ್ದು ಕ್ರಮ. ಅದಕ್ಕಾಗಿ ಗುಳ್ಳು ತೆಗೆಯಲು ಸೀತಮ್ಮನವರು ನೆನ್ನಕ್ಕಿ ನೆನೆಗಳ್ಳೆ ಗೊನೆಮುರುದ ಬಾಳೆಹಣ್ಣು ಮಡ್ಡಿಧೂಪ ಬೆಜ್ಜಲ್ಕೆಕೆಂಡ ಗಂಧಾಕ್ಷತೆ ಚವುಳೀ ಎಲೆ, ಬಟ್ಲಡ್ಕೆ, ಜಾಜಿ ಜವುನ ಪತ್ರೆ ಪುಷ್ಪಗಳನ್ನು ತಟ್ಟೆಯಲ್ಲಿ ಮಡಗಿಕೊಂಡು ಹೊಳೇಕರೆಗೆ ಹೊರಟಳು. ಹಾಗೆ ಹೋಗುವಾಗ–

'ಅಪ್ಪಾಜಿ, ನಾನು ಗಂಗೆ ಪೂಜೆ ಮಾಡಿ ಬರಲು ಹೋಗುತ್ತಿದ್ದೇನೆ. ಮಗು ತೊಟ್ಟಿಲಲ್ಲಿ ಮಲಗಿದೆ. ಅದು ಎಚ್ಚರವಾಗಿ ಅತ್ತರೆ ಹಾಗೇ ತೊಟ್ಟಿಲನ್ನು ತೂಗಿ ಮಲಗಿಸಿ' ಎಂದು ಹೇಳಿದಳು. ಮಹರ್ಷಿಗಳೂ ಹಾಗೆಯೇ ಆಗಲೆಂದು ಒಪ್ಪಿದರು.

ಸೀತೆ ಗಂಗಾಪೂಜೆಗೆ ಹೊರಟಾಗ ಇತ್ತ ಮಹರ್ಷಿಗಳು ಧ್ಯಾನಕ್ಕೆ ಕುಳಿತರು. ಸೀತೆಯು ನದೀತೀರಕ್ಕೆ ಹೋಗುತ್ತಿರುವಾಗ ಮರದಿಂದ ಮರಕ್ಕೆ ಹಾರುತ್ತಿರುವ ಕೋತಿಗಳನ್ನು ನೋಡಿದಳು. ಮರಿಕೋತಿಗಳು ತಾಯಿಯ ಹೊಟ್ಟೆಯನ್ನು ಅವುಚಿ ಹಿಡಿದುಕೊಂಡಿದ್ದವು. ತಾಯಿಕೋತಿ ಮರದಿಂದ ಮರಕ್ಕೆ ಹಾರಿದರೂ ಆ ಮರಿಗಳು ಬೀಳುತ್ತಿರಲಿಲ್ಲ. ಇದನ್ನು ಕಂಡ ಸೀತೆಯು–

'ಕೋತಿಗಳೇ ನಿಮ್ಮ ಮರಿಗಳು ನಿಮ್ಮ ಹೊಟ್ಟೆಯನ್ನು ತಬ್ಬಿ ಹಿಡಿದುಕೊಂಡಿವೆ. ನೀವು ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ ಹಾರುವಾಗ ಅವು ಕೈಬಿಟ್ರೆ ಕೆಳೀಕೆ ಬಿದ್ದು ಸತ್ತೋಗದಿಲ್ವ?'

'ಸೀತಮ್ಮ, ನಮ್ಮ ಜೀವುಮಾನದಲ್ಲೇ ನಾವು ಅಂತೆ ಘಟನೆ ಕಂಡಿಲ್ಲ. ನಮ್ಮ ಮರಿಗಳು ಕೈ ಬಿಡೂದೂ ಇಲ್ಲ ಸಾಯದೂ ಇಲ್ಲ. ಅಕಸ್ಮತ್ತಾಗಿ ಬಿದ್ದು ಸತ್ರೆ ಅದು ಅವುಗಳ ಹಣೇಬರಾ! ನಿಮ್ಮ ಮಕ್ಳು ಹಿಂಗೆ ಹೊಟ್ಟೆ ತಬ್ಕೋತಾವಾ ಸೀತೆ?'

'ಇಲ್ಲ. ನಾವೇ ಅವುಗಳ್ನ ಎದೆಗೆ ಅವುಚ್ಕೋಬೇಕು!'

'ಮತ್ತೆ ಒಬ್ಳೇ ಬಂದಿದ್ದಿ. ನಿನ್ನ ಮಗನ ಎದೆಗೆ ಅವುಚ್ಕೋಬೇಕು ತಾನೆ? ನೀನು ಇಲ್ಲಿರುವಾಗ ಅಲ್ಲಿರೋ ಮಗೀಗೆ ಏನಾಯ್ತದೋ ಏನ್ಕತೆಯೋ ಯಾರಿಗೆ ಗೊತ್ತು?'

'ಹೌದಲ್ವ, ನಿನ್ ಮಾತ್ ಕೇಳ್ತಿದ್ರೆ ನನಗೆ ಭಯವಾಗ್ತಿದೆ. ಈಗ್ಲೇ ಹೋಗಿ ಎತ್ಕೊಂಡ್ಬರ್ತೀನಿ' ಎಂದು ಹೇಳಿದ ಸೀತೆ, ಗಂಗಾಪೂಜೆಗೆ ಮೊದಲೆ ಮನೆಗೆ ಹಿಂದಿರುಗಿದಳು. ಮಹರ್ಷಿ ವಾಲ್ಮೀಕಿ ಧ್ಯಾನಲೀನರಾಗಿದ್ದರು. ಮಗು ತೊಟ್ಟಿಲಿನಲ್ಲಿತ್ತು. ಸೀತೆಯು ತನ್ನ ಮಗುವನ್ನು ಎತ್ತಿಕೊಂಡು ಗಂಗಾಪೂಜೆಗೆ ಹೊರಟಳು.

೩. ಕುಶಲವರು

ಇತ್ತ ಕಡೆ ಧ್ಯಾನಲೀನರಾಗಿದ್ದ ವಾಲ್ಮೀಕಿ ಮಹರ್ಷಿಗಳು ಎಚ್ಚರವಾದರು. ಆಗ ಅವರಿಗೆ ಸೀತೆ ಮಗುವಿನ ಬಗೆಗೆ ಹೇಳಿದ್ದ ಮಾತು ನೆನಪಾಯಿತು. ಅವರು ಥಟ್ಟನೆ ಮೇಲೆದ್ದು ತೊಟ್ಟಿಲ ಬಳಿಗೆ ಹೋದರು. ನೋಡಿದರೆ ತೊಟ್ಟಿಲಿನಲ್ಲಿ ಮಗುವಿಲ್ಲ! ಮಹರ್ಷಿಗಳ ಎದೆ ಒಡೆದಂತಾಯಿತು. ಬೆದರುಗಣ್ಣುಗಳಿಂದ ಆಶ್ರಮದ ಸುತ್ತಮುತ್ತೆಲ್ಲ ನೋಡಿದರು. ಎಲ್ಲಿ ನೋಡಿದರೂ ಮಗುವಿಲ್ಲ.

ಮಹರ್ಷಿಗಳು ದಿಕ್ಕೆಟ್ಟಂತಾಗಿ 'ನನ್ನ ಅವಜ್ಞೆಯಿಂದ ಎಂಥಾ ಅಚಾತುರ್ಯ ನಡೆದುಹೋಯಿತು!' ಎಂದು ಕಳವಳಿಸುತ್ತ ಬೆದಬೆದ ಬೆವತು ಚಿಂತಾಕ್ರಾಂತರಾದರು. ತನ್ನ ಆಲಸ್ಯಕ್ಕೆ ತಾವೇ ಧಿಕ್ ಎಂದುಕೊಂಡರು.

ಯೋಚಿಸುತ್ತ ಕುಳಿತುಕೊಳ್ಳುವಷ್ಟು ಸಮಯವಿರಲಿಲ್ಲ. ಸೀತೆ ಗಂಗಾಪೂಜೆ ಮುಗಿಸಿಬರುವುದರೊಳಗಾಗಿ ಏನಾದರೂ ಪರಿಹಾರ ಕಾಣಲೇಬೇಕಿತ್ತು. ಅವರ ತಪಃಶಕ್ತಿಗೆ ಅಸಾಧ್ಯವಾದುದಾದರೂ ಯಾವುದು? ನಿಜ. ಅವರು ತಮ್ಮ ತಪಃಶಕ್ತಿಯಿಂದ ಸೀತೆಯ ಮಗುವನ್ನೇ ಅನಾಮತ್ತಾಗಿ ಹೋಲುವ ಮತ್ತೊಂದು ಮಗವನ್ನು ಹೋಮಕ್ಕಾಗಿ ತಂದಿದ್ದ ಕುಶದ ಎಸಳನ್ನು ಮಂತ್ರಿಸಿ ಸೃಷ್ಟಿ ಮಾಡಿದರು.

ಆ ವೇಳೆಗೆ ಸೀತೆ ಗಂಗಾಪೂಜೆಯನ್ನು ಮುಗಿಸಿ ಕಂಕುಳಲ್ಲಿ ತನ್ನ ಕಂದನನ್ನು ಎತ್ತಿಕೊಂಡು ಆಶ್ರಮವನ್ನು ಪ್ರವೇಶಿಸಿದಳು. ಮಹರ್ಷಿ ವಾಲ್ಮೀಕಿಗಳು ಆಡಿಸುತ್ತಿದ್ದ ಮಗುವನ್ನು ಆಶ್ಚರ್ಯದಿಂದ ನೋಡಿದಳು. ಆ ವಾಲ್ಮೀಕಿಗಳ ದಿವ್ಯದೃಷ್ಟಿಗೆ ಎಲ್ಲವೂ ಗೋಚರಿಸಿ ಸೀತಾಮಾತೆಗೆ ಎರಡು ಮಕ್ಕಳು ಹುಟ್ಟಿದ್ದವು ಎಂದು ನಂಬಿಸಿದರು. ಸೀತೆಯ ಆನಂದಕ್ಕೆ ಪಾರವೇ ಇಲ್ಲದಂತಾಗಿತ್ತು.

ಅಲ್ಲದೆ ಸೀತಾಮಾತೆಯು ಆ ಮೀನುಗಳಿಗೆ ಕೊಟ್ಟಿದ್ದ ಮಾತನ್ನು ನೆನೆದಳು. ಕೊಟ್ಟಿದ್ದ ಮಾತಿನಂತೆ ಆ ಎರಡು ಮಕ್ಕಳಲ್ಲಿ ಒಂದನ್ನು 'ಕುಶ್ಚಲು' ಎಂದೂ ಮತ್ತೊಂದನ್ನು 'ಅವುಲು' ಎಂದು ನಾಮಕರಣ ಮಾಡಿಸಿ ಹರ್ಷಿಸಿದಳು.

ಜನಪದ ನಿರುಕ್ತಿಯ ಸ್ವಾರಸ್ಯವೆಂದರೆ 'ಕುಶ್ಚಲು' 'ಅವುಲು' ಮೀನುಗಳ ಹೆಸರೇ ಕುಶಲವರು ಎಂದು ಒಪ್ಪುವಂತೆ ಕಲ್ಪಿಸಿರುವುದು.

ಕಿಳ್ಳೇಕ್ಯಾತರು

ಕಿಳ್ಳೇಕ್ಯಾತರು ಭಾರತದ ಬಹಳಷ್ಟು ಕಡೆಯ ಕಂಡುಬರುವ ತೊಗಲು ಗೊಂಬೆಯಾಟದ ಕಲಾವಿದರು. ರಾಮಾಯಣದ ಗುಹ ಎಂಬ ನಾವಿಕ ಈ ಜನಾಂಗದ ಮೂಲದವನೆಂದು ಹೇಳುವುದರಿಂದ ರಾಮಾಯಣದ ಕಾಲದಲ್ಲೇ ಈ

ಜನಾಂಗದ ಇರುವಿಕೆಯನ್ನು ಗುರುತಿಸಬಹುದಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಇವರು ಉಳಿಸಿಕೊಂಡು ಬಂದಿರುವ ತೊಗಲುಗೊಂಬೆಯಾಟವನ್ನು ವಿಶೇಷವಾಗಿ ಹೇಳಬೇಕಾಗಿದೆ. ಏಕೆಂದರೆ ಅದಕ್ಕೆ ಸೀತಾರಾಮರ ಹಿನ್ನೆಲೆ ಇದೆ.

ಶ್ರೀರಾಮ ಸೀತೆ ಲಕ್ಷ್ಮಣರು ಗಂಗಾನದಿಯನ್ನು ದಾಟಬೇಕಾದಾಗ ಈ ಜನಸಮುದಾಯದ ಗುಹನು ತನ್ನ ದೋಣಿಯಲ್ಲಿ ಅವರನ್ನು ಆಚೆ ದಡಕ್ಕೆ ಕರೆದೊಯ್ದು ಬಿಟ್ಟನಂತೆ. ಈ ಒಂದು ನೆರವಿನ ಸಂಬಂಧ ಗುಹನ ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿತ್ತು. ಆ ಕಾರಣದಿಂದ ಶ್ರೀರಾಮ ಸ್ವರ್ಗಾರೋಹಣ ಮಾಡುವ ಕಾಲಕ್ಕೆ ಗುಹನು ಬಂದು ಶ್ರೀರಾಮರಿಗೆ ವಂದಿಸಿ,

"ಸ್ವಾಮಿ, ನಮ್ಮ ಜನರ ಜೀವನೋಪಾಯಕ್ಕೆ ಏನಾದರೊಂದು ಕಾಯಕವನ್ನು ಸೂಚಿಸಿ" ಎಂದು ಕೇಳಿಕೊಂಡ.

ಅದೇ ಸಮಯಕ್ಕೆ ಸೀತೆ ತನ್ನಲ್ಲಿ ಗುಪ್ತವಾಗಿ ಇಟ್ಟುಕೊಂಡಿದ್ದ ಚೂರು ಚರ್ಮದ ಮೇಲೆ ಬರೆದಿದ್ದ ಚಿತ್ರವನ್ನು ಶ್ರೀರಾಮನ ಕೈಗಿತ್ತಳು. ಶ್ರೀರಾಮ ಅದನ್ನು ದಿಟ್ಟಿಸಿದ. ಅದು ಅವನ ಪರಾಭವದ ಚಿತ್ರ. ಅವನು ತನ್ನ ಮಕ್ಕಳಾದ ಲವಕುಶರಿಗೆ ಯುದ್ಧದಲ್ಲಿ ಸೋತು ಸೆರೆಯಾಳಾಗಿರುವಾಗ ಅವನನ್ನು ಅವನ ಮಕ್ಕಳೇ ಸೀತೆಯ ಬಳಿಗೆ ಎಳೆದುಕೊಂಡು ಬಂದಿದ್ದ ಚಿತ್ರ.

ರಾಮನಿಗೆ ಆ ಚಿತ್ರ ಯಾಕೋ ಪ್ರಿಯವೆನಿಸಲಿಲ್ಲ. ಅವನು ಆ ಕೂಡಲೆ ಆ ಚರ್ಮದ ಚಿತ್ರಪಟವನ್ನು ಸೀಳಿ ಹಾಕಿದ. ಅದು ಹರಿದು ಎರಡಾಗಿದ್ದ ಸಮಯಕ್ಕೆ ಸರಿಯಾಗಿ ಗುಹ ಬಂದು ತಮಗೊಂದು ಕಾಯಕ ಸೂಚಿಸಿ ಎಂದು ಪ್ರಾರ್ಥಿಸಿದ್ದ. ಅದಕ್ಕೆ ರಾಮನು–

"ಈ ಹರಿದುಹೋದ ಗೊಂಬೆಯನ್ನು ಸರಿಮಾಡಿಕೊಂಡು ಗೊಂಬೆಗಳ ಮೂಲಕ ರಾಮಕಥಾಮೃತ ಸಾರವನ್ನು ಜನರಿಗೆ ತಿಳಿಸು" ಎಂದು ಹೇಳಿದನು.

"ಸ್ವಾಮಿ, ಹರಿದುಹೋದ ಗೊಂಬೆಯಿಂದ ಹೇಗೆ ಗೊಂಬೆಯಾಟ ಸಾಧ್ಯ?" ಎಂದು ಗುಹ ಪ್ರಶ್ನಿಸಿದನು. ಅದಕ್ಕೆ ಶ್ರೀರಾಮನು–

"ನಿನ್ನ ದೇಹದ ಮೇಲೆ ಧಾರಣೆಯಾಗಿರುವ ಉಪವೀತ (ಜನಿವಾರ) ವನ್ನು ಹರಿದು ಈ ಚರ್ಮದ ಗೊಂಬೆಗೆ ಬಿಗಿದು ಸರಿಪಡಿಸಿಕೊಂಡು ತೊಗಲುಗಳ ಗೊಂಬೆಗಳಿಂದ ರಾಮಕಥೆಯನ್ನು ಹೇಳು" ಎಂದ. ಇದರಿಂದಾಗಿ ಗುಹನ ಕುಲದವರು ಜನಿವಾರವನ್ನು ಕಳೆದುಕೊಂಡರೂ, ಜುಟ್ಟು ಮಾತ್ರ ಉಳಿಯಿತು.

ಗುಹನ ಸಂಬಂಧಿಗಳಾದ ಈ ಗೊಂಬೆರಾಮರನ್ನು ಕಿಳ್ಳೇಕ್ಯಾತರೆಂದು ಕರೆಯುತ್ತಾರೆ. ಇವರು ಹಳ್ಳಿಹಳ್ಳಿಗಳ ಮೇಲೆಲ್ಲ ಹೋಗಿ ತೊಗಲುಗೊಂಬೆಯಾಟದಲ್ಲಿ

ರಾಮಕಥೆಯನ್ನು ಪ್ರದರ್ಶಿಸುತ್ತ ಗ್ರಾಮದವರಿಂದ ದವಸ ಧಾನ್ಯ ದುಡ್ಡುಕಾಸು ಬಟ್ಟೆಬರೆಗಳನ್ನು ಸಂಗ್ರಹಿಸಿಕೊಂಡು ಜೀವನ ನಡೆಸಲು ಈ ಕಲಾಮಾರ್ಗವನ್ನು ಕಂಡುಕೊಂಡಿದ್ದಾರೆ.

ನವಿಲುಗರಿ

ಲಂಕಾಧಿಪತಿ ರಾವಣನು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು. ರಾವಣನ ತಪಸ್ಸನ್ನು ಮೆಚ್ಚಿದ ಬ್ರಹ್ಮನು ಪ್ರತ್ಯಕ್ಷನಾಗಿ,

'ವತ್ಸಾ, ನಿನ್ನ ಕೋರಿಕೆಯೇನು?' ಎಂದು ಕೇಳಿದನು. ಅದಕ್ಕೆ ರಾವಣನು 'ನಾನು ದೇವಾದಿದೇವತೆಗಳನ್ನು ನನ್ನ ಅಧೀನದಲ್ಲಿ ಇಟ್ಟುಕೊಳ್ಳುವಂತೆ ಅನುಗ್ರಹಿಸು' ಎಂದನು. ಅದಕ್ಕೆ ಬ್ರಹ್ಮನು 'ತಥಾಸ್ತು!' ಎಂದು ಹೇಳಿ ಅದೃಶ್ಯನಾದನು.

ಬ್ರಹ್ಮನ ಕೃಪೆಗೆ ಪಾತ್ರನಾದ ರಾವಣನು ಮದೋನ್ಮತ್ತನಾಗಿ ದೇವಾಧಿದೇವತೆಗಳನ್ನೆಲ್ಲ ಹಿಂಸಿಸತೊಡಗಿದನು. ಆಗ ದೇವತೆಗಳೆಲ್ಲ ವಿಷ್ಣುವಿನ ಮೊರೆ ಹೊಕ್ಕರು. ವಿಷ್ಣು ದೊಡ್ಡ ನವಿಲಿನ ರೂಪವನ್ನು ತಳೆದನು. ದೇವತೆಗಳೆಲ್ಲರೂ ಅದರ ರೆಕ್ಕೆಯೊಳಗೆ ಅಡಗಿಕೊಂಡು ರಕ್ಷಣೆ ಪಡೆದರು.

ಕಾಲಾನಂತರದಲ್ಲಿ ರಾವಣನು ರಾಮನಿಂದ ಹತನಾದನು. ಆಗ ನವಿಲಿನ ರೆಕ್ಕೆಯೊಳಗೆ ಅಡಗಿದ್ದ ದೇವತೆಗಳೆಲ್ಲರೂ ಹೊರಬಂದರು. ನವಿಲಿನಿಂದ ತಮಗಾದ ಉಪಕಾರವನ್ನೂ ನವಿಲಿನ ಚೆಂದದ ಗರಿಗಳನ್ನೂ ಮನಸಾರೆ ಹೊಗಳಿದರು.

ವಿಷ್ಣು ದೇವತೆಗಳಿಗಾಗಿ ನವಿಲು ರೂಪವನ್ನು ತಳೆದದ್ದರಿಂದ ಆ ನವಿಲಿನ ಗರಿಯನ್ನು ಅಲಂಕರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ವಿಷ್ಣು –

'ಈಗ ಬೇಡ. ಮುಂದೆ ಕೃಷ್ಣಾವತಾರ ತಾಳುತ್ತೇನೆ. ಆಗ ನನ್ನ ಕಿರೀಟಕ್ಕೆ ನವಿಲು ಗರಿ ಅನಿವಾರ್ಯ ಎನ್ನುವಂತೆ ಧರಿಸಿಕೊಳ್ಳುತ್ತೇನೆ!' ಎಂದು ಆಶ್ವಾಸನೆ ಕೊಟ್ಟು ಅದರಂತೆ ನಡೆದುಕೊಂಡನು.

ಅರಿಸಿನ ಮತ್ತು ದರ್ಬೆ

ಹರಿದ್ರಾ–ಕುಂಕುಮಗಳು ಹಿಂದೂಗಳು ಬಳಸುವ ಪವಿತ್ರ ವಸ್ತುಗಳು. ಹರಿದ್ರಾ ಎಂದರೆ ಅರಿಸಿನ. ಅರಿಸಿನವು ಹಿಂದೂಗಳ ಧಾರ್ಮಿಕ ಕಾರ್ಯಗಳಲ್ಲಿ ಕಡ್ಡಾಯವೇನೋ ಎಂಬಂತೆ ಉಪಯೋಗಿಸಲ್ಪಡುತ್ತದೆ. ಮದುವೆ ಮುಂತಾದ ಮಂಗಳ ಕಾರ್ಯಗಳಲ್ಲೂ ಅರಿಸಿನಕ್ಕೆ ಮಹತ್ವದ ಸ್ಥಾನವಿದೆ. ಪವಿತ್ರ ಪೂಜಾದ್ರವ್ಯವಾದ ಇದು ದೇವಾಲಯಗಳಲ್ಲಿ ಪೂಜಾವಿಧಿಗಳಿಗೆ ಅಗತ್ಯವಾದುದಾಗಿದೆ. ಮುತ್ತೈದೆಯರು ಹಣೆಗೆ ಧರಿಸುವ ಕುಂಕುಮದ ಬೊಟ್ಟಿನೊಡನೆ ಅರಿಸಿನದ ಬೊಟ್ಟನ್ನು ಧರಿಸುತ್ತಾರೆ. ಅಲ್ಲದೆ ಕೆನ್ನೆಗಳಿಗೂ ಪೂಸಿಕೊಳ್ಳುತ್ತಾರೆ.

ಗ್ರಾಮಗಳಲ್ಲಿ ಮಾರಿಕಾದಿ ರೋಗಗಳು ಕಾಣಿಸಿಕೊಂಡಾಗ ಅರಿಸಿನದ ಪುಡಿಯನ್ನು ಕೀಟಾಣುಗಳ ನಾಶಕ್ಕಾಗಿ ಊರಿನ ಕೇರಿಕೇರಿಗಳಲ್ಲೆಲ್ಲ ಚೆಲ್ಲುತ್ತಾರೆ. ಆಹಾರ ಪದಾರ್ಥಗಳ ತಯಾರಿಕೆಯಲ್ಲೂ ಅರಿಸಿನ ಇದ್ದೇ ಇರುತ್ತದೆ. ಅಲ್ಲದೆ ಆಯುರ್ವೇದದ ಅನೇಕ ಔಷಧಿಗಳಲ್ಲಿ ಅರಿಸಿನ ಸೇರಿರುತ್ತದೆ. ಹೀಗೆ ಅರಿಸಿನವು ಭಾರತೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಎಲ್ಲ ಕಡೆಯೂ ಪ್ರಮುಖ ಪಾತ್ರವನ್ನು ವಹಿಸಿದೆ.

ಇದೇ ರೀತಿ ಧಾರ್ಮಿಕ ವಿಧಿಗಳಲ್ಲಿ ಪವಿತ್ರವೆಂದು ಭಾವಿಸುವ ದರ್ಭೆಯು ವಿಶೇಷವಾಗಿ ಬಳಕೆಯಾಗುತ್ತದೆ. ದರ್ಭೆಗೆ 'ಕುಶ' ಎಂಬುದು ಪರ್ಯಾಯ ನಾಮ. ಕುಶದ ಮೂಲ ಬ್ರಹ್ಮನಿಗೂ ಮಧ್ಯಭಾಗ ವಿಷ್ಣುವಿಗೂ ಅಗ್ರಭಾಗ ಶಿವನಿಗೂ ವಾಸಸ್ಥಾನಗಳೆಂದು ಭಾವಿಸಲಾಗಿದೆ. ಕರ್ಮಾದಿಗಳ ಆಚರಣೆಯ ಸಂದರ್ಭದಲ್ಲಿ ದರ್ಭೆಯನ್ನು ಉಂಗುರದ ಆಕಾರದಲ್ಲಿ ಮಾಡಿಕೊಂಡು ಅದನ್ನು ಬಲಗೈ ಮಧ್ಯದ ಬೆರಳಿಗೆ ಧರಿಸಿಕೊಂಡು ತೀರ್ಥದೊಳಕ್ಕೆ ಅದ್ದಿ ಅದರಿಂದ ಇಚ್ಛಿತ ಪೂಜಾ ಪರಿಕರದ ಮೇಲೆ ಸಿಂಪಡಿಸುತ್ತಾರೆ.

ಅರಿಸಿನ ಮತ್ತು ದರ್ಭೆಯ ಬಗೆಗೆ ಇಷ್ಟೆಲ್ಲ ವಿಚಾರಗಳನ್ನು ಹೇಳಿದರೂ ಆ ಪವಿತ್ರ ವಸ್ತುಗಳ ಉತ್ಪತ್ತಿಯ ಬಗೆಗೂ ರಾಮಾಯಣ ಸಂಬಂಧಿ ಜನಪದ ಪುರಾಣ ಕಥೆಗಳು ನಮ್ಮ ನಾಡವರಲ್ಲಿವೆ.

ರಾಮಾಯಣದ ಕಥೆಯ ಅಂತ್ಯದಲ್ಲಿ–ಅಂದರೆ–ಲವಕುಶರ ಕಾಳಗದಲ್ಲಿ ಲವಕುಶರಿಗೆ ಸೋತ ಶ್ರೀರಾಮನು ಸೋಲೊಪ್ಪಿಕೊಂಡು ಲವಕುಶರ ಪಹರೆಯಲ್ಲಿ ವಾಲ್ಮೀಕಿಗಳ ಆಶ್ರಮಕ್ಕೆ ಬರುತ್ತಾನೆ. ಅಲ್ಲಿ ಸೀತೆಯನ್ನೂ ಅವಳು ಹಡೆದ ವೀರಪುತ್ರರಾದ ಲವಕುಶರನ್ನೂ ನೋಡುತ್ತಾನೆ. ಆಗ ಸೀತೆಯು, ವಾಲ್ಮೀಕಿ ಮಹರ್ಷಿಗಳ ಆದೇಶದಂತೆ ಶ್ರೀರಾಮನ ಚರಣಾರವಿಂದಗಳಿಗೆ ನಮಸ್ಕರಿಸಲು ಹೋಗುತ್ತಾಳೆ. ಆದರೆ ಪರಿತ್ಯಕ್ತಳಾಗಿರುವ ಸೀತೆಯು ತನ್ನ ಪಾದಗಳನ್ನು ಮುಟ್ಟಬಾರದೆಂದು ರಾಮನು ತನ್ನ ಪಾದಗಳನ್ನು ಸೀತೆಯು ಮುಟ್ಟದಂತೆ ಹಿಂದಕ್ಕೆ ಸರಿದು ನಿಲ್ಲುತ್ತಾನೆ.

ಇದರಿಂದ ಅವಮಾನಿತಳಾದ ಸೀತಾದೇವಿಯು ದುಃಖಭರಿತ ಹೃದಯಳಾಗಿ ತನ್ನ ತಾಯಿ ಭೂದೇವಿಯನ್ನು ಕುರಿತು ಆರ್ತಳಾಗಿ–

"ಅಮ್ಮಾ, ಪತಿಯಿಂದ ಪರಿತ್ಯಕ್ತಳಾಗಿ ಇನ್ನೂ ಈ ಧರೆಯ ಮೇಲೆ ನಾನು ಮಾನ–ಮರ್ಯಾದೆ ಇಲ್ಲದೆ ಬದುಕಬೇಕೆ ತಾಯಿ? ಬೇಡ. ಬೇಡ. ಬೇಡ. ನಾನಿನ್ನು ಬದುಕಿರುವುದು ಬೇಡ ತಾಯಿ. ಅಮ್ಮಾ ನಿನ್ನ ಮಗಳ ಮಾನ ಉಳಿಯಬೇಕೆಂದರೆ ಬೇಗ ನನ್ನನ್ನು ನಿನ್ನ ಒಡಲಿಗೆ ಸೇರಿಸಿಕೋ ತಾಯಿ! ನಿನ್ನ ಮಗಳನ್ನು ಕೂಡಲೆ ಕರೆದುಕೋ ತಾಯಿ. ನಾನೀ ಅವಮಾನವನ್ನು ಸಹಿಸಲಾರೆ. ನಾನಿನ್ನು ಬದುಕಿರಲಾರೆ ತಾಯಿ!" ಎಂದು ಹೃದಯವಿದ್ರಾವಕವಾಗಿ ಒರಲಿದಳು.

ಸೀತೆಯ ಆರ್ತಧ್ವನಿಯನ್ನು ಕೇಳಿದ ಭೂದೇವಿಯು ಬಿರುಕು ಬಿಟ್ಟು ಬಾಯ್ತೆರೆದಳು. ಅಂದು ಭೂಮಿ ಉಳುವಾಗ ನೇಗಿಲಿನ ಸೀಳಿನಲ್ಲಿ ಸಿಕ್ಕಿದ್ದ ಶಿಶು ಸೀತೆಯು ಇಂದು ಲೋಕಪಾವನೆ ಸೀತಾಮಾತೆಯಾಗಿ ಶೋಕಾತಿಶೋಕ ತಪ್ತಳಾಗಿ ಭೂದೇವಿಯ ಮಡಿಲನ್ನು ಸೇರಿಕೊಳ್ಳುತ್ತಿರುವಾಗ ಶ್ರೀರಾಮನಿಗೆ ಅಮೂಲ್ಯವಾದುದನ್ನು ಕಳೆದುಕೊಳ್ಳುತ್ತಿದ್ದೇನೆ ಎಂಬ ವಿವೇಕೋದಯವಾಗಿ

"ಭೂದೇವಿ, ಬೇಡ ಬೇಡ. ಸೀತೆ ನನ್ನ ಧರ್ಮಪತ್ನಿ. ನನ್ನ ಬಾಳಸಂಗಾತಿ. ನನ್ನ ಮೆಚ್ಚಿನ ಮಡದಿ. ಅವಳನ್ನು ನಿನ್ನ ಒಡಲಲ್ಲಿ ಐಕ್ಯ ಮಾಡಿಕೊಳ್ಳಬೇಡ. ನನ್ನ ಸೀತೆಯನ್ನು ನನಗೇ ಉಳಿಸು! ಉಳಿಸು!" ಎಂದು ಭೂಮಿಗಿಳಿಯುತ್ತಿದ್ದ ಸೀತೆಯ ಕೈಬೆರಳುಗಳನ್ನೂ ಅವಳ ಮುಡಿಯನ್ನೂ ಹಿಡಿದೆತ್ತಿಕೊಳ್ಳಲು ಪ್ರಯತ್ನಿಸಿದನು. ಆದರೆ ಸೀತೆಯ ಹಸ್ತವನ್ನು ಹಿಡಿದು ಮೇಲಕ್ಕೆತ್ತಿಕೊಳ್ಳಲು ಎಳೆದಾಗ ಸೀತೆಯ ಬೆರಳುಗಳು ಅರಿಸಿನದ ಕೊನೆಗಳಾಗಿ ರಾಮನ ಕೈಗೆ ಬಂದವು. ಹಿಡಿದೆಳೆದ ತಲೆಗೂದಲು ದರ್ಭೆಯಾಗಿ ರಾಮನ ಕೈಯಲ್ಲಿ ಉಳಿಯಿತು.

ಈ ಕಾರಣದಿಂದ ಅರಿಸಿನ ಮತ್ತು ದರ್ಭೆಗಳು ಮಂಗಳಕಾರ್ಯಕ್ಕೆ ಬೇಕಾಗುವ ಪವಿತ್ರ ಪೂಜಾ ದ್ರವ್ಯಗಳಾದವು.

* * * *




'ಜಯ ಜಯ ರಾಮ ಜಯ ಘನಶ್ಯಾಮ ; ಜಯ ಜಯ ಶ್ರೀರಾಮ'

ಜನಪದ ರಾಮಾಯಣದ ಕಥೆಗಳು

ಅನುಬಂಧಗಳು



ಎಂದೂ ಮುಗಿಯದ ಅಮರಕಥಾಮೃತ



ವಕ್ತೃಗಳು

ಅಣ್ಣಯ್ಯ ಎಸ್.ಕೆ., ತೋಳೂರು ಶೆಟ್ಟಳ್ಳಿ, ಕೊಡಗು
ಅಹಲ್ಯ ಎಂ. ತಾಳ್ಯ
ಎಲ್ಲಯ್ಯ ಬಜಗೂರು, ತಿಪಟೂರು
ಕಲ್ಲಿಹುಚ್ಚಯ್ಯ, ಪಾಳ್ಯ, ಕೊಳ್ಳೇಗಾಲ
ಕಾಳಮ್ಮ, ದೊಡ್ಡಾಘಟ್ಟ, ತುರುವೇಕೆರೆ
ಕೆಂಪೇಗೌಡ ಪಿ.ಡಿ., ಪಿರಿಯಾಪಟ್ಟಣ
ಕೆಂಪೇಗೌಡ ಪಿ.ಎಸ್., ಪಿರಿಯಾಪಟ್ಟಣ
ಕೋಟೆ ತಿಮ್ಮಯ್ಯ, ಪಿರಿಯಾಪಟ್ಟಣ
ಗಾಯಿತ್ರಿ ಪಿ. ಕಾಳೇಗೌಡ, ಚಿಕ್ಕನಾಯಕನಹಳ್ಳಿ
ಗೋಪಾಲ ಕೆ. ರಾಯನ ಸೊರಬ, ಶಿವಮೊಗ್ಗ
ಚನ್ನಯ್ಯ ಆಲ್ಗೂಡು ಟಿ. ನರಸೀಪುರ
ಚಂದ್ರಯ್ಯ ಕೆ.ಎಂ., ಕರಡಾಳು, ತಿಪಟೂರು
ಚಂದ್ರಮೌಳಿ ಬಿ.ವಿ., ಸಖರಾಯಪಟ್ಟಣ
ಜಯಣ್ಣ, ಹೊಸಪೇಟೆ, ಚಿತ್ರದುರ್ಗ
ಜಯಮ್ಮ, ಅಗರ ಎಳಂದೂರು
ಜವರಾಯ ಪೂಜಾರಿ, ಕಿತ್ತೂರು, ಪಿ.ಪಟ್ಟಣ
ತಮ್ಮಯ್ಯ ಜಿ.ಎಸ್. ಗರಕಹಳ್ಳಿ, ಚನ್ನಪಟ್ಟಣ
ತಿಮ್ಮಪ್ಪಯ್ಯ ಪಿ.ಜಿ., ಪಿರಿಯಾಪಟ್ಟಣ
ತಿಮ್ಮಾರೆಡ್ಡಿ ಕೆ.ಜಿ., ಕುಂದಲಗುರ, ಚಿತ್ರದುರ್ಗ
ದೇವಪ್ಪ ಟಿ.ಕೆ., ತಮ್ಮಡಿಹಳ್ಳಿ, ಪಿರಿಯಾಪಟ್ಟಣ
ದೇವರಾಜಅರಸು, ದೊಡ್ಡಬೇಲಾಳು, ಪಿ.ಪಟ್ಟಣ
ನಾಗರಾಜು ಕೆ. ಕೂಟಗಲ್ಲು, ಬೆಂಗಳೂರು
ನಾಗರಾಜು ಬಿ.ಕೆ.ದೊಡ್ಡ ಬಾಣಸವಾಣಿ, ಮಂಡ್ಯ
ನಾಗರಾಜು ಎಂ.ಗುಡೇಮಾರನಹಳ್ಳಿ, ಮೈಸೂರು
ನಂ.ನಾರಾಯಣಗೌಡ,ಮಾಕನಹಳ್ಳಿ, ತಿಪಟೂರು
ನಂಜಪ್ಪ ಕರಡಿ, ತಿಪಟೂರು
ನಂಜಮ್ಮ ಪಾದರಾಯಸ್ವಾಮಿ ಗುಡ್ಡೆ, ಬೆಂಗಳೂರು
ನಿಂಗಮ್ಮ ಕಥೆಗಾರ್ತಿ, ಪಿರಿಯಾಪಟ್ಟಣ
ಪುಟ್ಟಮ್ಮ, ಪಿ.ಡಿ., ಕೆಂಪೇಗೌಡರ ಪತ್ನಿ, ಪಿರಿಯಾಪಟ್ಟಣ
ಪುಟ್ಟಮ್ಮಣ್ಣಿ, ಚಿಕ್ಕವೀರೇಗೌಡನ ಹೆಂಡತಿ, ಪಿರಿಯಾಪಟ್ಟಣ
ಪುಟ್ಟಮಾದಯ್ಯ, ಕಾರಾಪುರ, ಟಿ. ನರಸೀಪುರ
ಜಿ.ಕೆ. ಪ್ರಮೋದ್
ಜಿ.ಕೆ. ಪುಟ್ಟೇಗೌಡ, ಗುಡ್ಡೇನಹಳ್ಳಿ, ತುರುವೇಕೆರೆ ತಾಲ್ಲೂಕು
ಪ್ರಭಾ ಶ್ರೀನಿವಾಸ್, ಹಾತೂರು, ಕೊಡಗು
ಬಾಲಕೃಷ್ಣ ವಿ.ಎಲ್. ಹೆಬ್ಬಾಲೆ, ಕೊಡಗು
ಬೆಟ್ಟದಬೀಡು ಸಿದ್ದಶೆಟ್ಟಿ, ಹೆಚ್.ಡಿ. ಕೋಟೆ
ಭೋಜಣ್ಣಶೆಟ್ಟಿ, ಗಂಟಾಪುರ, ತುರುವೇಕೆರೆ
ಮರೀಸ್ವಾಮಿ, ಅತ್ತಹಳ್ಳಿ, ಟಿ. ನರಸೀಪುರ
ಮುರಳೀಧರ ಕುಲಕರ್ಣಿ
ಆರ್. ರಮೇಶ್ ಪೂರಿಗಾಲಿ
ರಾಜಣ್ಣ ಪೂರಿಗಾಲಿ
ರಾಜು ಟಿ. ತಲಕಾಡು
ರಾಜಣ್ಣಾಚಾರ್ ಕಿತ್ತೂರು
ರುದ್ರೇಗೌಡ, ಗುಡ್ಡೇನಹಳ್ಳಿ, ತುರುವೇಕೆರೆ
ಲವಕುಮಾರ್ ಬಿ.ಎಂ.
ವಾಸುದೇವ ಪಿ.ಕೆ., ಪಿರಿಯಾಪಟ್ಟಣ
ವಿಷಕಂಠೇಗೌಡರು, ಹೆಬ್ಬಾಳು
ವಿಶ್ವನಾಥ್, ಕಣಗಾಲು, ಪಿರಿಯಾಪಟ್ಟಣ
ವೀರಭದ್ರಸ್ವಾಮಿ ಪಿ., ಬಿಳಿಗಿರಿ ರಂಗನಬೆಟ್ಟ
ಷಣ್ಮುಖಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಟಿ. ನರಸೀಪುರ
ಬಿ.ಎಲ್. ವೇಣು, ಚಿತ್ರದುರ್ಗ
ಸಾವಿತ್ರಮ್ಮ ಕೊಡ್ಲಿಪೇಟೆ, ಕೊಡಗು
ಸಿದ್ದಯ್ಯ (ಜಿಲ್ಪ) ಗೋಣೀಬೀಡು, ಮೂಡಿಗೆರೆ
ಶ್ರೀನಿವಾಸಯ್ಯ (ಹರಿಕಥೆ ರಾಮಣ್ಣ), ಪಿ.ಪಟ್ಟಣ
ಮಹದೇವಯ್ಯ, ಕ್ಯಾತಮಾರನಹಳ್ಳಿ
ಜೋಪ್ಡಿ ಮಾದಯ್ಯ, ಮೈಸೂರು
ಮುರಳೀಧರ ಕುಲಕರ್ಣಿ

ಇವರುಗಳಲ್ಲದೆ ಮಾಹಿತಿ ಮೂಲಗಳಾಗಿ ಉಪಕರಿಸಿದ ಪುಸ್ತಕಗಳ ಲೇಖಕರಿಗೆ, ಪತ್ರಿಕೆಗಳ ಸಂಪಾದಕರಿಗೆ ಋಣಿಯಾಗಿದ್ದೇನೆ.

ಜನಪದ ಮಹಾಕಾವ್ಯ

ಮಲೆಯ ಮಾದೇಶ್ವರ

ಕುರಿತು

ಕನ್ನಡ ಜಾನಪದದಲ್ಲಿ ಇಷ್ಟು ಗಾತ್ರದ ಪುಸ್ತಕವೊಂದು ಹೊರಬರುತ್ತಿರುವುದು ಇದೇ ಮೊದಲು. ಭಾರತದ ಯಾವುದೇ ಭಾಷೆಯಲ್ಲಿ ಈ ಬಗೆಯ ಕೃತಿ ಪ್ರಕಟವಾದಂತಿಲ್ಲ. ಸಮರ್ಪಕ ರೀತಿಯಲ್ಲಿ ಅತ್ಯಂತ ಸಮರ್ಥವಾಗಿ ಸಂಪಾದಿತವಾಗಿರುವ ಇದು ಜಾನಪದದ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ.

– ಡಾ. ಹಾ.ಮಾ. ನಾಯಕ

ಶ್ರೀ ಪಿ.ಕೆ. ರಾಜಶೇಖರ ಅವರು ಶ್ರಮಪೂರ್ವಕವಾಗಿ ಸಂಗ್ರಹಿಸಿ ಶಾಸ್ತ್ರೀಯವಾಗಿ ಸಂಪಾದಿಸಿರುವ ಈ ಜನಪದ ಮಹಾಕಾವ್ಯ ನಿಜಕ್ಕೂ ಒಂದು ವಿಸ್ಮಯವಾಗಿದೆ. ಅವರು ಅಪೂರ್ವ ದಾಖಲೆಯನ್ನು ಸ್ಥಾಪಿಸಿ ಮುಂಚೂಣಿಯ ಸ್ಥಾನವೊಂದನ್ನು ಗಳಿಸಿಕೊಳ್ಳುತ್ತಿದ್ದಾರೆ.

– ಡಾ. ಸಿ.ಪಿ. ಕೃಷ್ಣಕುಮಾರ್

ಶ್ರೀ ಪಿ.ಕೆ. ರಾಜಶೇಖರ ಅವರ ಶ್ರದ್ಧೆ. ಆಸಕ್ತಿ, ತಲ್ಲೀನತ್ವ, ಸತ್ಯದೃಷ್ಟಿ ಔದಾರ್ಯಗಳನ್ನು ಎಷ್ಟು ಹೊಗಳಿದರೂ ಸಾಲದು. ಅವರ ಸಾತ್ವಿಕ ಶ್ರಮದ ಫಲವಾಗಿ ಈ ದೊಡ್ಡ ಕೃತಿ 'ಮಲೆಯ ಮಾದೇಶ್ವರ' ಕನ್ನಡಿಗರಿಗೆ ದತ್ತಿಯಾಗಿದೆ. ಕನ್ನಡಿಗರ ಕೃತಜ್ಞತೆಗೆ ಕಾರಣವಾಗಿದೆ.

– ಡಾ. ಎಸ್.ವಿ. ರಂಗಣ್ಣ

ಕನ್ನಡ ಜಾನಪದದ ಇತಿಹಾಸದಲ್ಲಿ 'ಮಲೆಯ ಮಾದೇಶ್ವರ'ದ ಪ್ರಕಟಣೆ ಒಂದು ಮಹಾ ಸಾಧನೆಯಾಗಿದೆ. ಜನಪದ ಮಹಾಕಾವ್ಯದ ಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಮೂಡಿಸಿದ ಇದು ಕನ್ನಡ ಜಾನಪದದ ಕೀರ್ತಿ, ಪ್ರತಿಷ್ಠೆಗಳನ್ನು ಹೆಚ್ಚಿಸಿದೆ. ಇದರ ಸಂಗ್ರಹ, ಸಂಪಾದನೆ, ವಿಶ್ಲೇಷಣೆಗಳಲ್ಲಿ ರಾಜಶೇಖರ ಅವರು ತೋರಿದ ಉತ್ಸಾಹ, ವಹಿಸಿದ ಆಸಕ್ತಿ, ಪಟ್ಟ ಕಷ್ಟ ಪರಂಪರೆ, ಖರ್ಚು ಮಾಡಿದ ಹಣ – ಇವು ಒಂದೊಂದೂ ಕನ್ನಡ ಜಾನಪದ ಕ್ಷೇತ್ರಕಾರ್ಯದ ರೋಮಾಂಚಕ ಇತಿಹಾಸವನ್ನೇ ಹೇಳುತ್ತವೆ. ಇಂಥದೊಂದು ಕೃತಿ ಭಾರತದ ಬೇರಾವ ಭಾಷೆಗಳಲ್ಲಿಯೂ ಪ್ರಕಟವಾದಂತೆ ತೋರುವುದಿಲ್ಲ. ಇದುವರೆಗಿನ ಪ್ರಕಟಿತ ಜಾನಪದ ಕೃತಿಗಳಲ್ಲಿ ಅದು ಆಚಾರ್ಯಕೃತಿಯಾಗಿದೆ. ಇದರ ಸಂಪಾದಕರಾದ ರಾಜಶೇಖರ ಅವರು ತಮ್ಮ ಪಾಂಡಿತ್ಯ, ಪರಿಶ್ರಮಗಳಿಂದ ತಮ್ಮ ವಯಸ್ಸಿಗೂ ಮೀರಿದ ಯಶಸ್ಸಿಗೆ ಭಾಜನರಾಗಿರುವರಲ್ಲದೆ ಕನ್ನಡ ಜಾನಪದದಲ್ಲಿ ಕೆಲಸ ಮಾಡುತ್ತಿರುವವರ ಅಗ್ರಪಂಕ್ತಿಗೆ ಸೇರಿದವರಾಗುತ್ತಾರೆ.

– ಪ್ರೊ. ರಾಗೌ

ಜಾನಪದ ಭೂಮಿಯಲ್ಲಿ ಕೃಷಿ ಮಾಡುತ್ತಿರುವ ಉತ್ಸಾಹಿಗಳಲ್ಲಿ ಶ್ರೀ ರಾಜಶೇಖರ ಅವರು ಒಬ್ಬ ದಘೂತಿ 'ಕುಳ' ಎಂಬುವುದನ್ನು ಅವರ ಕೃತಿಗಳು ತೋರಿಸಿಕೊಟ್ಟಿವೆ. ಪ್ರಕೃತ ಅವರ 'ಮಲೆಯ ಮಾದೇಶ್ವರ' ನಮ್ಮ ಜನಪದ ಸಾಹಿತ್ಯ ಸೌಧದ ಒಂದು ಹೆಗ್ಗಂಬ.

– ಡಾ. ಎಂ.ಸಿ. ವಸಂತಕುಮಾರ್

ಜನಪದ ಮಹಾಕಾವ್ಯ

ಜನಪದ ಮಹಾಭಾರತ

ಕುರಿತು

ಜಗತ್ತಿನ ಜನಪದ ಮಹಾಕಾವ್ಯಗಳ ಸಾಲಿನಲ್ಲಿ ಅಗ್ರಮಾನ್ಯತೆಗೆ ಪಾತ್ರವಾಗಿರುವ ಈ ಮಹಾಕೃತಿಯನ್ನು ಸಂಗ್ರಹಿಸಿ, ಸಂಪಾದಿಸಿ, ಸಮೀಕ್ಷಿಸಿ, ಪ್ರಕಟಿಸುವ ಮೂಲಕ ಡಾ.ರಾಜಶೇಖರ್ ಕನ್ನಡ ಭಾಷೆಗೆ ಹಾಗೂ ಕನ್ನಡ ಜನಪದ ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ.

– ದೇಜಗೌ

ಈಗಾಗಲೇ ತಮ್ಮ ಹತ್ತಾರು ಜನಪದ ಕೃತಿಗಳಿಂದ ಈ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿರುವ ಮಿತ್ರ ರಾಜಶೇಖರ್ ಅವರು ಹತ್ತಾರು ವರ್ಷಗಳ ಪರಿಶ್ರಮದಿಂದ, ವಿದ್ವತ್ತಿನಿಂದ, ದಟ್ಟವೂ, ವ್ಯಾಪಕವೂ ಆದ ಕ್ಷೇತ್ರಕಾರ್ಯದಿಂದ, ಸಂಪಾದನಾ ನೈಪುಣ್ಯದಿಂದ ಈ ಕೃತಿಯನ್ನು ಕನ್ನಡ ಲೋಕಕ್ಕೆ ಅರ್ಪಿಸುವ ಮೂಲಕ ಮಹಾವಿದ್ವತ್ಸಾಹಸವನ್ನು ಮೆರೆದಿದ್ದಾರೆ. ಇದು ನಿಜಕ್ಕೂ ಜಾನಪದ ಲೋಕದ ಒಂದು ಅರ್ಥಪೂರ್ಣ ಮಹಾಕೃತಿ.

– ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ.ಪಿ.ಕೆ. ರಾಜಶೇಖರ ಅವರು ಸಂಪಾದಿಸಿರುವ ಜನಪದ ಮಹಾಭಾರತ ಜಗತ್ತಿನ ಜನಪದ ಮಹಾಕಾವ್ಯಗಳಲ್ಲೇ ಅತ್ಯಂತ ಬೃಹತ್ತಾದ ಕೃತಿ. ಇದರ ಕಥನ ಪ್ರಪಂಚ ತುಂಬ ವಿಸ್ತಾರವಾದುದು. ಪುರಾಣ, ಐತಿಹ್ಯ, ದಂತಕಥೆ, ಸಮಕಾಲೀನತೆಗಳು ಮಿಶ್ರಣಗೊಂಡಿರುವ ಇದೊಂದು ಬಹುರೂಪಿ ಕಾವ್ಯ. ಮಹಾಭಾರತದ ವಿವಿಧ ಕಥಾಂತರಗಳನ್ನು, ಹೊಸ ಅರಿವನ್ನು ಉಂಟುಮಾಡುವ ಈ ಕೃತಿಯನ್ನು ಅವರು ಸಂಗ್ರಹಿಸದಿದ್ದಲ್ಲಿ ಆಗುತ್ತಿದ್ದ ನಷ್ಟ ಅಪಾರ. ಅವರಿಗೆ ಕಾವ್ಯಾಸಕ್ತರು ಚಿರಋಣಿಗಳಾಗಿರಬೇಕು. ಅವರು ನಮ್ಮ ಜಾನಪದ ಕ್ಷೇತ್ರದ ಒಂಟಿಸಲಗ. ಅವರ ಪ್ರಸ್ತುತ ಜನಪದ ಮಹಾಭಾರತ ಅವರ ಕ್ಷೇತ್ರಕಾರ್ಯದ ಮಹಾಘನ.

– ಡಾ. ಎನ್.ಎಸ್. ತಾರಾನಾಥ್

'ಬೆಟ್ಟದಬೀಡು ಸಿದ್ದಶೆಟ್ಟಿಯೆ ಕವಿ, ರಾಜಶೇಖರನೆ ಲಿಪಿಕಾರ'. ಇವರಿಬ್ಬರ ಅನುಸಂಧಾನದಲ್ಲಿ 'ಜನಪದ ಮಹಾಭಾರತ' ಮೈತಳೆದಿದೆ. ಕಾಲದ ಘಾತದಲ್ಲಿ ಅಜ್ಞಾತವಾಗಿಯೇ ಉಳಿಯಬಹುದಾಗಿದ್ದ ಒಂದು ವಿಶಿಷ್ಟ, ಅತಿ ಉತ್ಕೃಷ್ಟ ಜನಪದ ಮಹಾಭಾರತದ ಪಠ್ಯವನ್ನು ಸಂಪಾದಿಸಿ, ಪ್ರಕಟಿಸಿ ಕನ್ನಡ ಸಾರಸ್ವತ ಲೋಕಕ್ಕೆ ಡಾ.ಪಿ.ಕೆ. ರಾಜಶೇಖರ ಮಹದುಪಕಾರ ಮಾಡಿದ್ದಾರೆ.

– ಪ್ರೊ. ಲಿಂಗದೇವರು ಹಳೇಮನೆ

ಘನ ಪಾಂಡಿತ್ಯಕ್ಕೆ ಹೆಸರಾದ ರಾಜಶೇಖರರು ಮಲೆ ಮಹದೇಶ್ವರ ಮಹಾಕಾವ್ಯವನ್ನು ದಕ್ಕಿಸಿದ ರೀತಿಯಲ್ಲೇ ಮತ್ತೊಮ್ಮೆ ಸಾಹಸವನ್ನು ಕೈಕೊಂಡು ಈ ಅಮೋಘವಾದ ಕೃತಿರತ್ನವನ್ನು ಕನ್ನಡಮ್ಮನ ಕಿರೀಟಕ್ಕೆ ತೊಡಿಸಿದ್ದಾರೆ.

– ಪ್ರೊ. ಸಿ. ನಾಗಣ್ಣ

ಜನಪದ ಮಹಾಕಾವ್ಯ

ಧರೆಗೆ ದೊಡ್ಡೋರು ಮಂಟೇಸ್ವಾಮಿ

ಕುರಿತು

ಮಂಟೇಸ್ವಾಮಿ ಧರೆಗೆ ದೊಡ್ಡವರು ; ಮಂಟೇಸ್ವಾಮಿ ಕಾವ್ಯ ಮಂದರ ಶೈಲ; ಈ ಕಾವ್ಯ ಹಾಡಿದ ಸಿದ್ದಶೆಟ್ಟಿ ವಾಣೀವಲ್ಲಭ ; ಇದನ್ನು ಸಂಗ್ರಹಿಸಿದ ಪಿ.ಕೆ.ರಾಜಶೇಖರ ಜನಪದ ವಿಬುಧ ಜನೈಕ ವತ್ಸಲ. ಅವರ ಈ ಸಂಪಾದಿತ ಕಾವ್ಯ ಜಾನಪದ ಲೋಕದ ಬೆಳ್ಳಿ ಚುಕ್ಕಿಯಾಗಲಿ.

– ಡಾ. ಎಸ್.ಎಸ್. ತಾರಾನಾಥ್

ಪಿ.ಕೆ.ರಾಜಶೇಖರರು ಜನಪದ ಸಂಗ್ರಹ, ಅಧ್ಯಯನಗಳ ಧ್ಯಾನ ಮಾರ್ಗದಲ್ಲೇ ಬದುಕಿದವರು. ಕರ್ನಾಟಕ ಮತ್ತು ಭಾರತದಲ್ಲಿ ಯಾರಾದರೂ ವಿದ್ವಾಂಸರು ದಶಕಗಳ ಕಾಲ ಹೀಗೆ ಶ್ರಮವಹಿಸಿ ಈ ಮಾದರಿಯ ಜನಪದ ಮಹಾಕಾವ್ಯಗಳನ್ನು ಪ್ರಕಟಿಸಿದ ದಾಖಲೆ ಇದ್ದಂತೆ ತೋರುವುದಿಲ್ಲ.

– ಪ್ರೊ. ಕೃಷ್ಣಮೂರ್ತಿ ಹನೂರು

ಪಿ.ಕೆ.ರಾಜಶೇಖರ ಅವರು ಇದೀಗ ಮಂಟೇಸ್ವಾಮಿ ಮಹಾಕಾವ್ಯವನ್ನು ಪ್ರಕಟಿಸುತ್ತಿದ್ದಾರೆ. ಇದು ಜಾನಪದ ಗೌರೀಶಂಕರ ಶಿಖರಾರೋಹಣದ ಅದ್ಭುತ ಸಾಹಸ ! ಭುವನದ ಭಾಗ್ಯ !! ಇದಕ್ಕಾಗಿ ಪ್ರೊ.ಪಿ.ಕೆ. ರಾಜಶೇಖರ ಅವರನ್ನು ಎಷ್ಟು ಅಭಿನಂದಿಸಿದರೂ ಸಾಲದು ಈ ಸಾಂಸ್ಕೃತಿಕ ಮಹಾಸಾಹಸಕ್ಕೆ ನಮ್ಮ ಅನಂತಾನಂತ ನಮನಗಳು.

– ಪ್ರೊ. ನೀಲಗಿರಿ ತಳವಾರ

ಸ್ಪರ್ಧೆ "ಪೈಪೋಟಿಗಳಿಂದ ದೂರವಾಗಿ Here is God's Plenty!" ಅನ್ನುವಂತೆ ದೊಡ್ಡ ದೊಡ್ಡ ಕೃತಿಗಳನ್ನೇ ನೀಡುತ್ತಿರುವ ಸಂತನಂಥ ಗುರುವಿಗೆ ಸರಸ್ವತಿಯ ಆಶೀರ್ವಾದ ಸತತವೂ ಇರಲಿ ಎಂದು ಮನಸಾ ಪ್ರಾರ್ಥಿಸುತ್ತೇನೆ.

– ಡಾ.ಸಿ. ನಾಗಣ್ಣ

ಭಾರತದ ಬಹುತ್ವವನ್ನು ಜನಪದ ರಾಮಾಯಣ ಮಹಾಭಾರತಗಳು ಒಂದು ಬಗೆಯಲ್ಲಿ ಮನಗಾಣಿಸಿದರೆ ಇಂತಹ ಸಂಕರರೂಪಿ ದಾರ್ಶನಿಕ ಕಥನಕಾವ್ಯಗಳು ಇನ್ನೊಂದು ಬಗೆಯಲ್ಲಿ ಮನಗಾಣಿಸುತ್ತವೆ. ಇಂತಹ ವಿಶಿಷ್ಟವೂ ಬೃಹತ್ತೂ ಆದ ಕಥನವನ್ನು ಮುಂದಿಡುತ್ತಿರುವ ಪ್ರೊ.ಪಿ.ಕೆ. ರಾಜಶೇಖರ ಅವರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು.

– ಪ್ರೊ. ರಹಮತ್ ತರೀಕೆರೆ

ತಮಗೆ ಜಾನಪದ ದೀಕ್ಷೆಯನ್ನು ನೀಡಿದ ಪೂಜ್ಯ ಗುರುವರ್ಯ ಡಾ.ರಾಗೌ ಅವರಿಂದ ಮೆಚ್ಚಿನ ಮಾನಸಪುತ್ರ ಎಂದು ಹೃದಯಸಾಕ್ಷಿಯಾಗಿ ಕರೆಸಿಕೊಂಡು ಪಿ.ಕೆ. ರಾಜಶೇಖರ ಅವರು ನೀಡಿರುವ ಈ ಮಹಾಕಾವ್ಯ ಕನ್ನಡಿಗರಿಗೆ ದಕ್ಕಿದ ದಿವ್ಯ ಕೊಡುಗೆಯಾಗಿದೆ. 'ಜಾನಪದ ಕರ್ಣ'ನನ್ನು ಕನ್ನಡಿಗರು ಎಷ್ಟು ಅಭಿನಂದಿಸಿದರೂ ಸಾಲದು. ಕಾಲದ ನಿತ್ಯ–ನಿರಂತರ ನಮನವೇ ಅವರಿಗೆ ನಿಜದಲ್ಲಿ ಸಲ್ಲಬೇಕಾಗಿರುವ ಕೃತಜ್ಞತೆಯಾಗಿದೆ.

– ಪ್ರೊ. ಮೈಸೂರು ಕೃಷ್ಣಮೂರ್ತಿ

ಡಾ.ಪಿ.ಕೆ. ರಾಜಶೇಖರ ಅವರ ಪ್ರಕಟಿತ ಜಾನಪದ ಕೃತಿಗಳು

ಬೆಟ್ಟದ ಚಾಮುಂಡಿ (೧೯೭೨)
ಜನಪದ ರಾಮಾಯಣ (೧೯೭೩)
ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ
ಭಾಗ : ಒಂದು (೧೯೭೩)
ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ
ಭಾಗ : ಎರಡು (೧೯೭೩)
ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ
(ಸಂಯುಕ್ತ ಸಂಪುಟ : ೧೯೭೩)
ಮಾಗಡಿ ಕೆಂಪೇಗೌಡ (೧೯೭೩)
ಜನಪದ ಚಮತ್ಕಾರ ಗಣಿತ (೧೯೭೫)
ಆಯ್ದ ಜನಪದ ಲೆಕ್ಕಗಳು (೧೯೭೬)
ಹಾಡೋ ಮುತ್ತಿರಗಿಣಿ (೧೯೭೬)
ಅವ್ವ ನಿನದನಿ ಅಪರಂಜಿ (೧೯೮೧)
ನಮ್ಮ ಜನಪದ ವಾದ್ಯಗಳು (೧೯೮೦)
ಜನಪದ ಬಸವ ಪುರಾಣ (೧೯೮೧)
ಊರ ಹೆಸರಿನ ಕಥೆಗಳು (೧೯೮೦)
ಮುದ್ದು ಮಾದೇವನ ನೆನೆದೇವು (೧೯೭೪)
ಚುಂಚನಗಿರಿ ಭೈರವೇಶ್ವರ (೧೯೮೩)
ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ (೧೯೯೦)
ಭೂಮಿ ತೂಕದ ಮಾತು (೧೯೯೧)
ಆಲಂಬಾಡಿಯ ಘನಶರಣ
ಮೂರು ಪ್ರಾಣಿಯ ಕಥೆಗಳು (೧೯೭೬)
ಹೆಸರಿಗೊಂದು ಕಥೆ (೧೯೯೪) – ಮಕ್ಕಳಿಗಾಗಿ ಐತಿಹ್ಯಗಳು
ಒಳ್ಳೆಯ ಮಾತಿಗೆ ಕಣ್ಣೀರೆ ಬಹುಮಾನ (೨೦೦೬)
ಜನಪದ ಜೋಕುಗಳು (೨೦೦೭)
ಪುರಾಣಗಳು (೧೯೮೧)
ಪುರುಷನ ಪುಣ್ಯ ನಾರೀಭಾಗ್ಯ (೨೦೦೬)
ಬಾರಯ್ಯ ಬೆಳದಿಂಗಳೆ (೨೦೦೮)
ಸೋಜುಗಾದ ಸೂಜುಮಲ್ಲಿಗೆ
ಬುದ್ಧಿಪರೀಕ್ಷೆ (೧೯೯೨) – ಮಕ್ಕಳಿಗಾಗಿ ಜನಪದ ಕಥೆಗಳು
ಬಂತು ಬಂತು ಬಿಳಿಯಾನೆ (೨೦೦೧) – ಮಕ್ಕಳಿಗಾಗಿ ಜನಪದ ಕಥೆಗಳು
ಕದ್ದವರೆಲ್ಲ ಕಳ್ಳರಲ್ಲ (೨೦೦೧) – ಮಕ್ಕಳಿಗಾಗಿ ಜನಪದ ಕಥೆಗಳು
ಮಾನವನ ಬುದ್ಧಿ (೨೦೦೧) – ಮಕ್ಕಳಿಗಾಗಿ ಜನಪದ ಕಥೆಗಳು
ನಾನು ಸುಳ್ಳು ಹೇಳುವುದಿಲ್ಲ (೨೦೦೫) – ಮಕ್ಕಳಿಗಾಗಿ ಜನಪದ ಕಥೆಗಳು

ಸಿಕ್ಕಿಕೊಳ್ಳದವರು (೨೦೦೫) – ಮಕ್ಕಳಿಗಾಗಿ ಜನಪದ ಕಥೆಗಳು
ಮರ ನೀಡಿದ ವರ (೨೦೦೫) – ಮಕ್ಕಳಿಗಾಗಿ ಜನಪದ ಕಥೆಗಳು
ತಿಳಿದು ಮಾಡಿದ್ದು ತಿಳಿಯದೆ ಮಾಡಿದ್ದು (೨೦೦೫)–ಮಕ್ಕಳಿಗಾಗಿ ಜನಪದ ಕಥೆಗಳು
ಅಪೂರ್ವ ರತ್ನ (೨೦೦೫) – ಮಕ್ಕಳಿಗಾಗಿ ಜನಪದ ಕಥೆಗಳು
ದುಡಿದವನ ದುಡ್ಡಿನ ಬೆಲೆ (೨೦೦೫) – ಮಕ್ಕಳಿಗಾಗಿ ಜನಪದ ಕಥೆಗಳು
ದೊಡ್ಡವರ ಮಾತಿಗೆ ದುಡ್ಡು ಯಾವ ಲೆಕ್ಕ (೨೦೦೧)–ಮಕ್ಕಳಿಗಾಗಿ ಜನಪದ ಕಥೆಗಳು
ಚಾಮುಂಡಿ ಸಿರಿ ಚಾಮುಂಡಿ (೧೯೯೪)
ಸಿರಿಚುಂಚನಗಿರಿ (೧೯೯೫)
ಕರಪಾಲ ಬಸವ ಪುರಾಣ (೧೯೯೫)
ನಂಜುಂಡ – ಚಾಮುಂಡಿ (೧೯೯೫) – ನವಸಾಕ್ಷರರ ಓದಿಗಾಗಿ
ಮುತ್ತಿನ ಕಣಜ (೨೦೦೦)
ಮಾತಿನರಗಿಣಿ (೧೯೯೮)
ಜನಪದ ಗಣಿತ ಪ್ರಪಂಚ (೧೯೯೯)
ಜಾನಪದ ಸಂಭ್ರಮ (೨೦೦೩)
ಜನಪದ ಮಹಾಭಾರತ (೨೦೦೪) (ಜನಪದ ಮಹಾಕಾವ್ಯ)
ಪಾರ್ಥನ ಜೋಗೀಹಾಡು (೨೦೦೪)
ಕೋಗಿಲಾಗಿ ಕೂಗುತೀಯಲ್ಲೊ (೨೦೦೪)
ಗಂಧಾದ ಗವುಲೆದ್ದವೋ (೨೦೦೭)
ಹೊನ್ನಾರು ಜನಪದ ಗೀತೆಗಳು (೨೦೧೦)
ಜನಪದ ಶರಣ ಕಾವ್ಯಗಳು (೨೦೧೦)
ಕಗ್ಗುಂಡಿ ಪರಂಜ್ಯೋತಿ ಹರಳಯ್ಯಸ್ವಾಮಿ (೨೦೧೧)
ಜನಪದ ಆರಾಧನಾ ಕಲೆಗಳು (೨೦೧೦)
ಕರ್ನಾಟಕ ಜನಪದ ವೃತ್ತಿಗಾಯಕರು (೨೦೧೧)
ಜನಪದ ಸಿಂಗಾರ ಸಾಧನಗಳು (೨೦೧೨)
ಪಿ.ಸಿ. ವೀರಯ್ಯನವರ ಕೃತಿಗಳು (೨೦೧೨)
ಪಿರಿಯಾಪಟ್ಟಣದ ಶ್ರೀ ಮಸಣಿಕಮ್ಮ (೨೦೧೩)
ಪಿರಿಯಾಪಟ್ಟಣದ ಕಾಳಗ ಕಥಾಧಾರೆ (೨೦೧೨)
ಮುತ್ತು ಕೇರಾಕೆ ಮೊರವಾದೆ (೨೦೧೨)
ಮೊಗ್ಗಾಗಿ ಬಾರೊ ತುರುಬೀಗೆ (೨೦೧೨)
ಜಾನಪದ ವೀರಭದ್ರ (೨೦೧೩)
ದೇವರಗುಡ್ಡರ ಕಾವ್ಯಗಳು (೨೦೧೪)
ಮಲೆಯ ಮಾದೇಶ್ವರ ಕಥಾಧಾರೆ (೨೦೧೫)
ಉಪ್ಪಲಿಗ ಶರಣ ಶೆಟ್ಟಿ ಸರಗೂರಯ್ಯ (೨೦೧೬)
ಮಲೆಯ ಮಾದೇಶ್ವರ ಕಥಾಮಂಜರಿ (೨೦೧೭)
ಧರೆಗೆ ದೊಡ್ಡೋರು ಮಂಟೇಸ್ವಾಮಿ (೨೦೧೯) (ಜನಪದ ಮಹಾಕಾವ್ಯ)

* * *



‘ಮಲೆಯ ಮಾದೇಶ್ವರ’ ಜನಪದ ಮಹಾಕಾವ್ಯದಿಂದ ಹಿಡಿದು ‘ಜನಪದ ಮಹಾಭಾರತ’, ‘ಧರೆಗೆ ದೊಡ್ಡವರು ಮಂಟೇಸ್ವಾಮಿ’ ವರೆಗೆ ಅನೇಕ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿ, ಸಂಪಾದಿಸಿ ವಿಸ್ತೃತವಾದ ಪ್ರಸ್ತಾವನೆಗಳೊಂದಿಗೆ ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿ–ಪರಂಪರೆಗೆ ಮಹತ್ವಪೂರ್ಣವಾದ ಕೊಡುಗೆಗಳನ್ನು ನೀಡಿದವರು.

‘ಜನಪದ ರಾಮಾಯಣದ ಕಥೆಗಳು’ ಎಂಬ ಈ ಕೃತಿಯು ಜಾನಪದ ಅಧ್ಯಯನದ ಚರಿತ್ರೆಗೆ ಅವರು ಜೋಡಿಸುತ್ತಿರುವ ಮತ್ತೊಂದು ಹೊಸ ಅಧ್ಯಾಯವಾಗಿದೆ. ರಾಷ್ಟ್ರೀಯ ವಸ್ತುವನ್ನು ಒಳಗೊಂಡಿರುವ ಭಾರತದ ಮಹಾಕಾವ್ಯ ರಾಮಾಯಣದ ಕತೆಯು ಸ್ಥಳೀಯ ವಸ್ತುವಾಗಿ ಮೈದಾಳಿ ನಿಂತಿರುವ, ಸ್ಥಳೀಯವನ್ನು ರಾಷ್ಟ್ರೀಯವಾಗಿಸುವ, ರಾಷ್ಟ್ರೀಯವನ್ನು ಸ್ಥಳೀಯವಾಗಿಸುವ ಆ ಮೂಲಕ ಸಾಂಸ್ಕೃತಿಕ ಬೆಸುಗೆಯನ್ನು ನಮ್ಮ ಜನಪದರು ಸಾಹಿತ್ಯದ ಮೂಲಕ ಸಾಧಿಸಿರುವ ಬೆರಗನ್ನು ಈ ಕೃತಿಯು ಉಂಟುಮಾಡುತ್ತದೆ. ನಮ್ಮ ಜನಪದರ ಬೆರಗು ಹುಟ್ಟಿಸುವ ಸೃಜನಶೀಲ ಪ್ರತಿಭೆ ಇಲ್ಲಿ ಹತ್ತುಹಲವು ನೆಲೆಯಲ್ಲಿ ಕವಲೊಡೆದು ಒಂದು ಭಾರತೀಯ ಸಂಸ್ಕೃತಿಯ ಅಶ್ವತ್ಥ ವೃಕ್ಷವಾಗಿ, ಆಲದ ಮರವಾಗಿ, ಬೇವಿನ ಮರವಾಗಿ ಊರ ಮುಂದಿನ ಅರಳಿಕಟ್ಟೆಯಾಗಿ ರೂಪುಗೊಂಡು ಕೂರಿಸಿಕೊಂಡು ಕಥೆ ಹೇಳುತ್ತದೆ.

ಆ ಕಥೆಗಳಲ್ಲಿ ಪುರಾಣ, ಐತಿಹ್ಯ, ಭಾಷಾ ವಿಜ್ಞಾನಕ್ಕೆ ಪೂರಕವಾದ ಭಾಷಾ ಪದಗಳ ವಿವೇಚನೆ, ಸ್ಥಳನಾಮ, ಪ್ರಕೃತಿ ವರ್ಣನೆ, ಜೀವನ ಮೌಲ್ಯಗಳು, ತಾತ್ತ್ವಿಕ ಮಾರ್ಗದರ್ಶನ, ಸಾಹಿತ್ಯದ ರಸಾನುಭೂತಿ ಹೀಗೆ ಹತ್ತಾರು ಅಂಶಗಳಿವೆ. ಆದ್ದರಿಂದ ಈ ಕತೆಗಳು ಸಾಂಸ್ಕೃತಿಕ ದಾಖಲೆಗಳು ಅವುಗಳನ್ನು ನಮಗೆ ಕಟ್ಟಿಕೊಟ್ಟಿರುವ ಜನಪದರು ಹಾಗೂ ಪಿ.ಕೆ.ಆರ್. ಅಭಿನಂದನೀಯರು. ಪ್ರತಿ ವಿಭಾಗದ ಅಡಿಯಲ್ಲಿ ‘ಅಮರ ಕಥಾಮೃತ ರಾಮಾಯಣ’ ‘ಎಂದೂ ಮುಗಿಯದ ರಾಮಾಯಣ’ ಎಂದಿರುವುದು ಅರ್ಥಪೂರ್ಣವೂ ಧ್ವನಿಪೂರ್ಣವೂ ಆಗಿದೆ.

ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ